ಪ್ರಭಾತ

Re.1/8

PRABHAT ANNUAL 1952

ಅನುಕ್ರಮಣಿಕೆ

ಸಿಮೆಂಟು

ನಮ್ಮ ಜಿಲ್ಲೆಯಲ್ಲಿ

೧೯೨೨ರಲ್ಲಿ ೧೦೦ ಟನ್ ಅಥವಾ ೨೦೦೦ ಗೋಣಿ

೧೯೩೨ರಲ್ಲಿ ೧೦೦೦೦ ಟನ್ ಅಥವಾ ೨೦೦,೦೦೦ ಗೋಣಿ

೧೯೪೨ರಲ್ಲಿ ೨೦೦೦೦ ಟನ್ ಅಥವಾ ೪೦೦,೦೦೦ ಗೋಣಿ

೧೯೫೨ರಲ್ಲಿ ೩೦೦೦೦ ಟನ್ ಅಥವಾ ೬೦೦,೦೦೦ ಗೋಣಿ

ಅಥವಾ

ಅದಕ್ಕಿಂತಲೂ ಮಿಕ್ಕಿಯೇ ಉಪಯೋಗಿಸಲ್ಪಡುತ್ತಿದೆ.

ಆವಾಗಲೂ

ಈವಾಗಲೂ

ಯಾವಾಗಲೂ

ಸಿಮೆಂಟ್ ವ್ಯಾಪಾರಿಗಳು—

ಎಮ್. ಪಿ. ಕೃಷ್ಣ ನಾಯ್ಕ ಎಂಡ್ ಸನ್ಸ್,

ಬಂದರ, ಮಂಗಳೂರು.

“ಕನ್ನಡ ಕಸ್ತೂರಿ”—ಎಂದಿದ್ದನು ಮುದ್ದಣ ಕವಿ!

— ಇಂದು —

ಕನ್ನಡ ನಾಡಿನ ವಸ್ತುಗಳೂ ‘‘ಕಸ್ತೂರಿ’’ ಎನಿಸಿ ಮೆರೆಯುತ್ತಿವೆ!

ಕನ್ನಡ ನಾಡಿನ ಜನರೆಲ್ಲರ ಮನೆಗಳಲ್ಲಿ ‘‘ಕಸ್ತೂರಿ’’

ಕಸ್ತೂರಿ ಸಾಬೂನುಗಳಿಂದೊಗೆದ ಬಟ್ಟೆಗಳು ಕಸ್ತೂರಿ.
ಕಸ್ತೂರಿ “ನಿರ್ಮಲ” ಸಾಬೂನಿನಿಂದ ತೊಳೆದ ಮೈ ಕಸ್ತೂರಿ.
ಕಸ್ತೂರಿ ವಸ್ತುಗಳಿಂದು ಮನೆ ಮನೆ ಕಸ್ತೂರಿಯಾಗಿವೆ.



ನಿಮ್ಮ ಆವಶ್ಯಕತೆಗೆ ಬೇಕಾದಷ್ಟೆ--ಈ ಮೂರು:

- ಕಸ್ತೂರಿ ಬಾರ್ ಸೋಪು
- ಕಸ್ತೂರಿ ವಾಶಿಂಗ್ ಸೋಪು
- ನಿರ್ಮಲ ವಿಂಡ್ಸರ್

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಕಡೆಗಳಲ್ಲೂ ಜಿಲ್ಲೆಯ ಹೊರಗೆ ಕೇಂದ್ರಗಳಲ್ಲೂ ಸ್ಟಾಕಿಸ್ಟರು ಇರುವರು. **ಎಲ್ಲ ಕಡೆಗಳಲ್ಲಿ ದೊರೆವುವು.**

ತಯಾರಿಸುವವರು:

ಶ್ರೀ ರಾಮಕೃಷ್ಣ ಓಯಿಲ್ ಮಿಲ್ಸ್,

ಬೋಳೂರು — ಮಂಗಳೂರು.

Kasturi Bar Soap! *Kasturi Washing Soap!*
Nirmala Windsor!!

Manufacturers:

Sri Ramakrishna Oil Mills, Boloor, Mangalore

Props: **Kastoori Sheshagiri Pai & Co., Bunder, Mangalore.**

1952-53  ಕ್ಷಯ ಮೊಹರು

ಕ್ಷಯರೋಗಕ್ಕೆದುರಾದ ಹೋರಾಟದಲ್ಲಿ ಸೇರಿರಿ !

ಅಧಿಕಾಧಿಕ ಕ್ಷಯರೋಗ
ಮೊಹರುಗಳನ್ನು ಕೊಂಡು
ಕೊಂಡು, ಕ್ಷಯರೋಗದ
ಉಚ್ಚಾಟನೆಗೆ ನೆರವು ನೀಡಿರಿ.

"ಕ್ಷಯರೋಗದ ಮೊಹರು ಸಾರ್ವಜನಿಕ ಸೇವೆಗಾಗಿ ಒತ್ತಾಸೆಯ ಕರೆಯ ಸಾಂಕೇತಿಕವಾಗಿದೆ. ರಾಷ್ಟ್ರದ ಹಿತವನ್ನು ಮನಸ್ಸಿನಲ್ಲಿಟ್ಟುಕೊಂಡ ಯಾವನೂ ಅದನ್ನು ಅಲಕ್ಷಿಸಲಾರನು.''

—ರಾಜಕುಮಾರಿ ಅಮೃತ ಕುವರ.

ದಯವಿಟ್ಟು, ನಿಮ್ಮ ಟಪ್ಪಾಲು ಕಳಿಸುವಾಗ ಯಾವ ಪತ್ರವಾದರೂ ಕ್ಷಯರೋಗದ ಮೊಹರು ಅಂಟಿಸಲ್ಪಡದೆ ಹೊರಹೋಗದಂತೆ ನೋಡಿರಿ.

★ ಒಂದು ಮೊಹರಿನ ಕ್ರಯ ಒಂದಾಣೆ ಮಾತ್ರ. ★

ಅವುಗಳು ಇಲ್ಲೆಲ್ಲ ದೊರೆವುವು: ಗೌರವ ಕಾರ್ಯದರ್ಶಿ, ಮದರಾಸು ಸಂಸ್ಥಾನದ ಕ್ಷಯರೋಗ ಸಂಸ್ಥೆ, ಹೆಲ್ತಾಫೀಸರರ ಆಫೀಸು, ರಿಪನ್ ಬಿಲ್ಡಿಂಗ್ಸ್, ಮದರಾಸು - 3; ಶ್ರೀ। ಡಿ. ಮೋಹನರಾವ್, ಬಿ. ಎ., ಬಿ. ಎಲ್., ಕಾರ್ಯದರ್ಶಿ, ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಮೊಹರು ಮಾರಾಟದ ಸಮಿತಿ, ಗೋಪಾಲ ಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು – 1 ಮತ್ತು ಸಂಸ್ಥಾನದಲ್ಲಿನ ಇತರ ಏಜನ್ಸಿಗಳಿಂದ.

ತೃತೀಯ ಕ್ಷಯರೋಗ ಮೊಹರು ಮಾರಾಟದ ಚಳವಳ (ಭಾರತ ಕ್ಷಯರೋಗ ಸಂಸ್ಥೆ, ನ್ಯೂಡಿಲ್ಲಿ, ಅವರ ಹೊಣೆಗಾರಿಕೆಗೊಳಪಟ್ಟುದು.)

ಈ ಸ್ಥಳ:

ಸ್ಟೆಂಡಾರ್ಡ್ ವೆಕೂಮ್ ಒಯಿಲ್ ಕಂಪೆನಿ

ಇವರ ಸೇವಾದಾನ.



ಬೇಲೂರಿನ ಮಂಗ

[ಬೇಲೂರಿನ ಶ್ರೀ ಚೆನ್ನಕೇಶವ ಸ್ವಾಮಿಯ ದೇವಾಲಯದ ಗೋಪುರದೊಂದು ಮದನಕೆಯ್ಯಲ್ಲಿಯ ಶಿಲ್ಪ.]

Courtesy: Department of Archaeology, Mysore.

ಜನಕೆ ಜಾಗೃತಿಯುದಯ
ವಿದುವೆ ತಾಮಸ ಜಡತೆ
ಗೆಳೆವ ವಿಜಯದ ಸಾರ್ವ
ಮೊದಲ ತೂರ್ಯರ್ಗಂ

ಪ್ರಭಾತ

ಬಗೆಗೆ ಬಾಹ್ಯಜ್ಞಾನೆ-
ವೀವಾದ್ಯ ಶಕ್ತಿಯಿದು,
ಸದಮಲಾಂತಃಕರಣ
ತರುಣ ಪ್ರಭಾತಂ

ವಿಶೇಷಾಂಕ ೧೯೫೨. PRABHAT ANNUAL 1952.

ಬೇಲೂರಿನ ಮಂಗ

(೧೩—೫—೧೯೫೦)

ಮಂಗ, ಇಂತೇಕೊ ನೀನವಳ ಸೀರೆಯ [1]ಸುಗಿವಿ?
ಎನಿತು ಸಾಸವೊ! ದಿಟ್ಟತನವೆ [2]ಸಯ್ಯಲ್ಲ?
ನೀರನಲ್ಲವಳ ಕೂಸಲ್ಲ, ನೀನೇಂ ಬಗೆವಿ?
ನಮಗಿಲ್ಲಿ ಬಟ್ಟೆ, ಎರಡನೆಯ ಮೆಯ್ಯಲ್ಲ?
ಕಾಡುವೇನಾಕೆ ನಿನಗಲ್ಲೆಂದ ಹಣ್ಗಳಿಗೆ?
ಯಾವ ಮೊಸಲನಾವಗೆಂತೀವಳಂತೆ?
ಇತ್ತು ಬಿಡೆ, ನೋಡುವೆನಿಬರ ಹಸಿದ ಕಣ್ಗಳಿಗೆ
ಎಂತು [3]ನಂಜಿಸಲೆಂದವಂ ಕಾವಳಿಂತೆ .
ನೋಡಿದೆಯ ನಿನಗೆತ್ತಿದವಳ ಮುನಿಸಿನ ಸೆಳೆಯ
ನಿನ್ನ ಜಾರೆಯ? ಜೋಕೆ, [5]ಜುಣುಗೆ ನೀ ಸೋತೆ!
ಧಾವಿಸಥವಾ ತಾಳು, [6]ಸಾಳಿಗೆಯ ಕೆಯ್ತೊಳೆಯ[7]-
ಅಲ್ಲೆ ಇರು, ಅಂತೆ ಇರು, ಅಂಜದಿರು ಕೋತಿ!
ನೀ ಸೆಳೆಯಲಾರೆ [8]ಇನ್ನಣಮುರುವೆಯನ್ನ,
[8]ಮುಟ್ಟದಿನ್ನಣಮವಳ [4]ಸೆಳೆ ನಿನ್ನಬೆನ್ನ!

ಗೋವಿಂದ ಪೈ.

[ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಗೋಪುರದೊಂದು ಮದನ ಕೆಯ್ಯಲ್ಲಿ ಒಬ್ಬ ಯುವತಿಯ ಸೀರೆಯನ್ನು ಸೆಳೆವ ಮಂಗದ ಕೆತ್ತನೆಯನ್ನು ಕಂಡು (೧೩—೫—೧೯೫೦) ಬರೆದುದು.]

---

೧. ಸುಗಿ=ಸೆಳೆಯು. ೨. ಸಯರ್ (ಸೈ)=ನಿಜವಾಗಿ. ೩. ನಂಜಿಸು=ನಕ್ಕಿಸು. ೪. ಸೆಳೆ=ಚಾಟಿ. ೫. ಜುಣುಗು=ಹಿಂದುಮುಂದು ನೋಡು, ಅನುಮಾನಿಸು. ೬. ಸಾಳಿಗೆ=ಸೀರೆ. ೭. ಕೆಯ್ತೊಳೆಯು=ಕೆಯ್ಯನ್ನು ಇದ್ದಲ್ಲಿಯೇ ಇರಗೊಡು. ೮. ಅಣಂ=ಲೇಶಮಾತ್ರವೂ.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರನ ಪ್ರತಿಷ್ಠಾ ಕಾಲ?

[ಲೇಖಕರು: ಶ್ರೀ। ಟಿ. ಶೀನಪ್ಪ ಹೆಗ್ಗಡೆ, M. A., L. T.]

ದಕ್ಷಿಣ ಹಿಂದೂದೇಶದಲ್ಲಿ ಧರ್ಮಕ್ಕೆ ಹೆಸರಾದ ಧರ್ಮಸ್ಥಳದಲ್ಲಿ ಮಂಜುನಾಥೇಶ್ವರ ಲಿಂಗವು ಉಡುಪಿಯ ವಾದಿರಾಜ ಸ್ವಾಮಿಯವರಿಂದ ಸ್ಥಾಪಿಸಲಾಯಿತೆಂದು ಅನೇಕರು ಈ ಸ್ಥಳದ ಪುರಾಣವನ್ನು ಬರೆಯುವಲ್ಲಿ ಹೇಳಿರುವರು. ಆದರೆ ಯಾವುದಾದರೊಂದು ಚಾರಿತ್ರಿಕ ಸತ್ಯವನ್ನು ಸಿದ್ಧಾಂತಿಸುವಲ್ಲಿ ಇದಕ್ಕೆ ಬೇಕಾದ ಹೊರಗಣ ಮತ್ತು ಒಳಗಣ ರುಜುವಾತುಗಳನ್ನು ಕೊಟ್ಟು ವಿಮರ್ಶಿಸಿಯೇ ದೃಢಪಡಿಸಬೇಕೆಂಬುದು ವೈಜ್ಞಾನಿಕ ಇತಿಹಾಸಪ್ರಜ್ಞರ ನಿಯಮ.

ಮಂಜುನಾಥೇಶ್ವರ ಲಿಂಗವನ್ನು ಉಡುಪಿಯ ಶ್ರೀ ವಾದಿರಾಜ ಸ್ವಾಮಿಯವರು ಕೇಳಿಕೊಂಡಂತೆ ಆಗಿನ ಹೆಗ್ಗಡೆಯವರು ಇಲ್ಲಿನ ಧರ್ಮದೈವದ ಸಹಾಯದಿಂದ ಕದಿರೆಯಿಂದ ತರಿಸಿ ಪ್ರತಿಷ್ಠಿಸಿದರೆಂಬುದು ಚಾರಿತ್ರಿಕ ದೃಷ್ಟಿಯಿಂದ ನಂಬಲು ಸಾಕಷ್ಟು ಎಡೆ ಇಲ್ಲ. ಯಾಕಂದರೆ ಮಧ್ವಾಚಾರ್ಯರು ದ್ವೈತಮತಪ್ರಚಾರಕರಾಗಿದ್ದು ಅದಕ್ಕಾಗಿಯೇ ಇಲ್ಲಿಗೆ ಬಂದಿದ್ದ ಆ ಸ್ವಾಮಿಯವರು ಹೊಸತಾಗಿ ಲಿಂಗಪ್ರತಿಷ್ಠೆಗೆ ಪ್ರೋತ್ಸಾಹ ಕೊಟ್ಟಿರಲಿಕ್ಕಿಲ್ಲ. ಅಲ್ಲದೆ ಅವರು ಹೀಗೆ ಎಲ್ಲೂ ಲಿಂಗ ಪ್ರತಿಷ್ಠಿಸಲು ಪ್ರಯತ್ನಿಸಿದುದೂ ತಿಳಿಯುವುದಿಲ್ಲ; ಇವರು ಶಿವಲಿಂಗದ ಬದಲು ಎಲ್ಲೂರಿನಲ್ಲಿ ಮಾಡಿದಂತೆ ವಿಷ್ಣು ಸಂಕೇತವಾದ ಸಾಲಿಗ್ರಾಮವನ್ನು ಆದರೂ ಪ್ರತಿಷ್ಠಿಸುತ್ತಿದ್ದರು.

ಉಡುಪಿಯಲ್ಲಿ ಶ್ರೀಕೃಷ್ಣ ದೇವಸ್ಥಾನದ ಪಕ್ಕದಲ್ಲಿರುವ ಅನಂತೇಶ್ವರ ಚಂದ್ರೇಶ್ವರ ದೇವಸ್ಥಾನಗಳು ಮಧ್ವಾಚಾರ್ಯರ ಕಾಲದ ಹಿಂದೆಯೇ ಇದ್ದುವೆಂದೂ ಅವು ಅನಂತನಾಥ ಚಂದ್ರನಾಥ ಬಸದಿಗಳಾಗಿದ್ದು ಆ ಮೇಲೆ ಶಂಕರಾಚಾರ್ಯರ ಅದ್ವೈತ ಮತಪ್ರಚಾರ ಕಾಲದಲ್ಲಿ ಈಗಣ ಶಿವ ದೇವಾಲಯಗಳಾದುವೆಂದೂ ಶ್ರೀ। ಮ. ಗೋವಿಂದ ಪೈಗಳು ಸಿದ್ಧಾಂತಿಸಿರುವರು. ಹಾಗೆಯೇ ಧರ್ಮಸ್ಥಳದ ಶ್ರೀ ಮಂಜುನಾಥ ಲಿಂಗವೂ ಹಿಂದೆಯೇ ಇದ್ದಿರಬೇಕೆಂದು ಊಹಿಸಲು ಬಲವಾದ ಕಾರಣವಿದೆ.

ಮಂಜುನಾಥ ಎಂಬ ಪದವು ಶಿವಸೂಚಕ ಪದವಲ್ಲ. ನಾಥಪಂತದ ಜೋಗಿಗಳಿಂದ 'ಜೋಗಿಪಂಥ'ಕ್ಕೆ ಸರಿಯಾಗಿ ಕದ್ರಿ ಮಂಜುನಾಥ ಲಿಂಗಸ್ಥಾಪನೆಯಾಯಿತೆಂದು ಅಲ್ಲಿನ ಸ್ಥಳ ಪುರಾಣದಲ್ಲಿ ಸಮರ್ಥಿಸಿರುವರು. ನಾಮಸಾದೃಶದಿಂದ ಧರ್ಮಸ್ಥಳದ ಲಿಂಗಕ್ಕೂ ಕದ್ರಿಯ ಲಿಂಗಕ್ಕೂ ಮೇಲೆ ಹೇಳಿದ ಸಂಬಂಧವನ್ನು ಕಲ್ಪಿಸಿ ಮೇಲೆ ಹೇಳಿದ ಕತೆ ಹುಟ್ಟಿರಬಹುದೆಂದೂ ನಂಬಲು ಎಡೆ ಇದೆ. ಆದರೆ 'ಮಂಜು','ಮಂಜುಳ' ಎಂಬ ಸಂಸ್ಕೃತ ಪದದೊಂದಿಗೆ 'ನಾಥ' ಪದವೇಕೆ ಸಮಾಸವಾಗಬಾರದೆಂದು ನಾವು ತರ್ಕಿಸಿಕೊಳ್ಳಬಹುದು; ಅಲ್ಲದೆ ಉಡುಪಿಯ ಚಂದ್ರನಾಥ, ಅನಂತನಾಥರು ಚಂದ್ರಮೌಳೇಶ್ವರ, ಅನಂತೇಶ್ವರರಾಗಿ ಪರಿವರ್ತನೆಗೊಂಡರೂ ಇಲ್ಲಿನ ಜೈನ ಹೆಗ್ಗಡೆಯವರು 'ಧರ್ಮಸಮದೃಷ್ಟಿ' ಇಟ್ಟುಕೊಂಡು 'ಮಂಜುನಾಥ' ಎಂಬ ಹೆಸರನ್ನು ಈ ಲಿಂಗಕ್ಕೆ ಇಟ್ಟುಕೊಂಡು ಹಿಂದುಗಳಿಗೆಂತೋ ಹಾಗೆಯೇ ಜೈನರಿಗೂ ಪೂಜಾರ್ಹವಾಗಿ ಏಕೆ ಮಾಡಿರಬಾರದೆಂದೂ ಊಹಿಸಲು ಎಡೆ ಇದೆ. ಜೈನರಲ್ಲಿ ತೀರ್ಥಂಕರರಿಗೆ ನಾಥ ಎಂಬ ಪದವು ಅವರ ಹೆಸರಿನ ಅಂತ್ಯದಲ್ಲಿ ಬರುವುದು ನಮಗೆಲ್ಲಾ ತಿಳಿದ ವಿಷಯ.

ಮೆ। ಸ್ಟೆರೊಕರು ಹೇಳುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಹಿಂದೂ ದೇವಾಲಯಗಳು ಹಿಂದೆ ಜೈನ ದೇವಾಲಯಗಳಾಗಿದ್ದು, ಜೈನ ಧರ್ಮದಿಂದ ಹಿಂದೂ ಧರ್ಮಕ್ಕೆ ಇಲ್ಲಿನ ಜನರು ಮತಾಂತರ ಹೊಂದಿದ ಕಾಲದಲ್ಲಿ ಅವು ಹಿಂದೂ ದೇವಾಲಯಗಳಾಗಿವೆ ಎಂದಂತೆ ಇಲ್ಲಿನ ದೇವಸ್ಥಾನವೂ ಹಾಗಾಗಿರಬಹುದೆಂದು ನಂಬಲೂ ಎಡೆ ಇದೆ. ಕ್ರಿಸ್ತಶಕದ ಆದಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಜೈನ ಧರ್ಮವು ಉಚ್ಛ್ರಾಯ ಸ್ಥಿತಿಯಲ್ಲಿದ್ದು ಮುಂದೆ ಏಳು ಎಂಟನೇ ಶತಮಾನದಲ್ಲಿ ಅದು ಖಿಲವಾಗುತ್ತಾ ಬಂದು, ಹಿಂದೂ ಧರ್ಮವು ತಿರುಗಿ ತಲೆ ಎತ್ತಿತೆಂದು ಇತಿಹಾಸ ಬಲ್ಲವರೆಲ್ಲಾ ಒಪ್ಪತಕ್ಕ ಮಾತಾಗಿದೆ. ಹಾಗೆಯೇ ಈ ಶಿವಲಿಂಗವೂ ಅದೇ ರೀತಿಯಲ್ಲಿ ಈ ಧರ್ಮ ಪರಿವರ್ತನಕಾಲದಲ್ಲಿ 'ಶ್ರೀ ಮಂಜುನಾಥ' ಎಂಬ ಹೆಸರನ್ನು ಪಡೆದಿರಬೇಕೆಂದೂ ನಂಬಬಹುದು.

'ಹೆಗ್ಗಡೆ' ಎಂಬ ಪದವು ಲಷ್ಕರಿ ಇಲಾಖೆ(Military term)ಯ ಪದವಾಗಿದೆ. ಹೆಗ್ಗಡೆ ಎಂಬ ಬಿರುದು ಕೋಟೆಯ ಯಜಮಾನನಿಗೆ ಹಿಂದೆ ಇತ್ತೆಂದು ಎಲ್ಲರೂ ಒಪ್ಪುವರು. ಇಲ್ಲಿಯೂ ಒಂದು ಕೋಟೆ ಇದ್ದು ಅದರ ಒಡೆಯ 'ಹೆಗ್ಗಡೆ'ಯು ಬಹುಕಾಲದಿಂದ ಇಲ್ಲಿ ಅಧಿಕಾರ ನಡೆಸಿಕೊಂಡು ಬಂದಿರಬೇಕು. ಇಲ್ಲಿನ 'ಹೆಗ್ಗಡೆಯರ' ಒಬ್ಬರು ಹಿಂದುಗಳಿಗೂ

ಜೈನರಿಗೂ ಪೂಜಾರ್ಹವಾಗುವಂತೆ ಇಲ್ಲಿ ಮೊದಲೇ ಇದ್ದ ಪೂಜಾರ್ಹ ಮೂರ್ತಿಯನ್ನು 'ಮಂಜುನಾಥ' ಎಂಬ ಹೆಸರಿನಿಂದ ಕ್ರಿ. ಶ. ಏಳು–ಎಂಟನೇ ಶತಮಾನದಿಂದಲೇ ಕರೆದಿರಬಹುದು ಎಂದೂ ಊಹಿಸಬಹುದಾಗಿದೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೈವಗಳ ಪೂಜೆಯು ಅನಾದಿಯಿಂದ ನಡೆದುಬಂದುದು; ಹಾಗೆಯೇ ಶಿವ, ಶಕ್ತಿ ಇವರ ಪೂಜೆಯು ಕ್ರಿ. ಪೂ. ೪೦೦೦ ವರ್ಷಗಳಲ್ಲಿಯೂ ಇತ್ತೆಂದು 'ಮೊಹಂಜದಾರೊ' 'ಹರಪ್ಪ'ಗಳಲ್ಲಿ ನಡೆದ ಭೂಶೋಧನೆಗಳಿಂದ ತಿಳಿದುಬಂದಿದೆ. ಮನುಷ್ಯನು ನಾಗರಿಕನಾಗಿ ಗುಂಪಾಗಿ ಬಾಳಲಾರಂಭಿಸಿದಂದಿನಿಂದ ದೇವರ ಉಪಾಸನೆ ಮಾಡಲಾರಂಭಿಸಿರಬೇಕು. ಕ್ರಮ-ರೂಪ ಹೇಗೂ ಇದ್ದಿರಲಿ. ಹಾಗೆಯೇ ಇಲ್ಲಿ ದೈವಗಳೂ ಶಿವ ಪಾರ್ವತಿಯರೂ ಇರುವುದರಿಂದ ಈ ದೇವಾಲಯವು ಬಹುಕಾಲದಿಂದ ಇದ್ದಿರಬೇಕೆಂದು ನಂಬುವುದಕ್ಕೂ ತುಂಬಾ ಎಡೆ ಇದೆ. ಆದುದರಿಂದ ಶ್ರೀ ವಾದಿರಾಜ ಸ್ವಾಮಿಯರ ಕಾಲದಲ್ಲೆಂದೂ ಇದು ಸ್ಥಾಪಿತವಾದುದಲ್ಲ. ಅದಕ್ಕಿಂತಲೂ ಬಹುಕಾಲದ ಹಿಂದೆಯೇ ಇತ್ತೆಂಬುದು ನಿರ್ವಿವಾದ.

ಈ ಸ್ಥಳಕ್ಕೆ ಹಿಂದೆ 'ಕುಡುಮ' ಎಂಬ ಹೆಸರಿದ್ದು ಶ್ರೀ ವಾದಿರಾಜ ಸ್ವಾಮಿಯರ ಕಾಲದಲ್ಲಿ ಇದಕ್ಕೆ ಧರ್ಮಸ್ಥಳವೆಂಬ ಸಂಸ್ಕೃತ ಹೆಸರು ಬಂತೆಂದು ಹೇಳುವುದೂ ಸರಿಯಲ್ಲ. 'ಕುಡುಮ' ಎಂಬ ಕೊಡುವಿಕೆ('ಧರ್ಮ')ಯನ್ನು ಸೂಚಿಸುವ ಪದವು ಅಚ್ಚ ದ್ರಾವಿಡ ಪದವಾಗಿದ್ದು ಬಹುಕಾಲದ ಹಿಂದೆಯೇ ಧರ್ಮಸ್ಥಳವಾಗಿ ರೂಪಾಂತರ ಹೊಂದಿ ಇತ್ತೆಂದು ನಂಬಬೇಕಾಗುತ್ತದೆ. ಯಾಕಂದರೆ ನಮ್ಮ ಜಿಲ್ಲೆಯಲ್ಲಿ ಸಂಸ್ಕೃತ ಭಾಷೆ, ಸಂಸ್ಕೃತ ಪಂಡಿತರು ಕ್ರಿಸ್ತಪೂರ್ವದಲ್ಲೇ ಇದ್ದರೆಂದು ನಂಬಲಿಕ್ಕೂ ಸಾಕಷ್ಟು ಸಾಕ್ಷ್ಯಗಳಿವೆ. ಇಲ್ಲಿನ ತುಳುಜನರು ಅನ್ವರ್ಥವಾಗಿ ಈ ಸ್ಥಳವನ್ನು 'ಕುಡುಮ' ಎಂದು ಕರೆಯುತ್ತಿದ್ದಂತೆ ವಿದ್ಯಾವಂತ ಪಂಡಿತರು 'ಧರ್ಮಸ್ಥಳ'ವೆಂದೂ ಬಹುಕಾಲದಿಂದ ಕರೆದಿರಬೇಕು.

ವಾದಿರಾಜರು ಈ ಲಿಂಗ ಸ್ಥಾಪನೆಗೆ ಕಾರಣರಾದರೆಂಬ ದಂತಕಥೆಗೆ ಕಾರಣವೇನೆಂದು ಯೋಚಿಸುವುದು ಅಗತ್ಯ. ಶ್ರೀ ಸ್ವಾಮಿಯವರು ಮತಪ್ರಚಾರಕ್ಕಾಗಿ ಆಗಲೇ ಪ್ರಖ್ಯಾತವಾಗಿದ್ದ ಈ ಸ್ಥಳಕ್ಕೆ ಬಂದು ಇಲ್ಲಿನ ಪೂಜೆ ವಿನಿಯೋಗಗಳು ಮಾಧ್ವಸಂಪ್ರದಾಯಕ್ಕೆ ಸರಿಯಾಗಿ ಮಾಧ್ವಬ್ರಾಹ್ಮಣರಿಂದ (ಶಿವಳ್ಳಿ ಬ್ರಾಹ್ಮಣ) ನಡಿಸುವಂತೆ ಆಗಣ ಹೆಗ್ಗಡೆಯವರಿಂದ ಮಾಡಿಸಿದುದರಿಂದ ಅವರೇ ಈ ಲಿಂಗ ಪ್ರತಿಷ್ಠೆಗೆ ಕಾರಣರಾದರೆಂಬ ದಂತಕಥೆಗೆ ಕಾರಣವಾಯಿತೆನ್ನಬೇಕು; ಉಡುಪಿಯ ಶಿವ ದೇವಸ್ಥಾನಗಳಾಗಿರುವ ಚಂದ್ರೇಶ್ವರ, ಅನಂತೇಶ್ವರಗಳಲ್ಲೂ ಇದೇ ರೀತಿಯ ಬದಲಾವಣೆಯನ್ನು ಮಾಡಲಾಗಿದೆ ಎಂಬುದನ್ನು ಗಮನಿಸಿದರೆ ಮತ್ತಷ್ಟು ಆಧಾರವು ಈ ಮಾತಿಗೆ ಸಿಗುವುದು.

ಕಡೆಯದಾಗಿ ಈ ಲಿಂಗ ಸ್ಥಾಪನೆಯು ವಾದಿರಾಜರ ಪ್ರೋತ್ಸಾಹದಿಂದಲ್ಲ, ಅವರ ಕಾಲದ ಹಿಂದೆಯೇ ಇತ್ತೆಂಬುದಕ್ಕೆ ಆಂತರಿಕ ಸಾಕ್ಷ್ಯವನ್ನು ಕೊಡಬಹುದು. ಇಲ್ಲಿನ ದೇವರ ಆಭರಣಗಳಲ್ಲಿ ಒಂದಾದ ನಾಗಾಭರಣದಲ್ಲಿ ಹೀಗೆ ಬರೆದಿದೆ: "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೪೦೨ನೇ ವರ್ತಮಾನಕ್ಕೆ ಸಲುವ ಶರ್ವರಿ ಸಂವಸರದ ಮೇಷ ಮಾಸ ೧ ಚೈತ್ರ ಶುದ್ಧ ೬ ಯು ಚಂದ್ರವಾರ ದಿವಸದಲ್ಲು **ಶ್ರೀ ಮಂಜುನಾಥ ಸ್ವಾಮಿಯವರಿಗೆ** ಪದುಮಯ್ಯ ಹೆಗ್ಗಡೆಯವರ ಅನುಜೆ ಗುಮ್ಮಕ್ಕನ ಪುತ್ರನದು–ಚಂದಯ್ಯ ಹೆಗ್ಗಡೆಯು ತಮ್ಮ ಭಕ್ತಿಯಿಂದ ಮಾಡಿ ಒಪ್ಪಿಸಿದ ನಾಗಾಭರಣ ಶುಭಮಸ್ತು"—ಆ ಮೇಲೆ ಏನೋ ಅಭರಣದ ಭಾರವನ್ನು ಸೂಚಿಸಿದಂತೆ ಇದೆ. (ಈ ಆಭರಣವನ್ನು ನನಗೆ ಶ್ರೀಮಾನ್ ಹೆಗ್ಗಡೆಯವರು ತೋರಿಸಿ ಉಪಕರಿಸಿರುವರು.) ಈ ಮೇಲೆ ಹೇಳಿದ ಕಾಲವು ಶ್ರೀ ವಾದಿರಾಜರ ಜನ್ಮವತ್ಸರವನ್ನು ಸೂಚಿಸುವುದರಿಂದ ಮಂಜುನಾಥ ದೇವರ ಲಿಂಗವು ಅವರಿಲ್ಲಿಗೆ ಸನ್ಯಾಸಿಯಾಗಿ ಪ್ರಾಯಪ್ರಬುದ್ಧನಾಗಿ ಬರುವ ಮೊದಲೇ ಇತ್ತೆಂದು ದೃಢವಾಗಿ ನಂಬಬಹುದು.

ಸನಾತನ ಧರ್ಮದ ಆದಿಯು ಎಷ್ಟು ಹಿಂದೆ ಇತ್ತೋ ಅಷ್ಟೇ ಹಿಂದೆ ಈ ಧರ್ಮದ ಪ್ರತೀಕಗಳೂ ಇದ್ದುವೆಂದು ತರ್ಕಬದ್ಧವಾಗಿ ನಾವು ನಂಬಬಹುದು. ಮನುಷ್ಯನು ಹಿಂದೆಯೂ ಬರೇ ಅನ್ನಕ್ಕಾಗಿ ಬದುಕಲಿಲ್ಲ. ಅವನಿಗೆ ಆತ್ಮನ ಅರಿವಿತ್ತು. ದೇವರಲ್ಲಿ ನಂಬಿಕೆ ಇತ್ತು. ದೇವರನ್ನು ಪೂಜಿಸುವುದರಲ್ಲಿ ಕ್ರಮ ವ್ಯತ್ಯಾಸ ಮಾತ್ರ ಇದ್ದಿರಬೇಕು. ನಮ್ಮ ಜಿಲ್ಲೆಯಲ್ಲಿ ದೈವಾರಾಧನೆಯು ಕ್ರಿಸ್ತ ಪೂರ್ವದ ಎಷ್ಟೋ ಶತಮಾನಗಳ ಹಿಂದೆಯೇ ಇತ್ತೆಂದೂ, ಲಿಂಗ ಅಥವಾ 'ಸಂಸ್ಕೃತ ಭಾಷೆಯ' ಹೆಸರ ದೇವರುಗಳ ಪೂಜೆಯೂ ಬಹುಕಾಲದಿಂದ ಇತ್ತೆಂದೂ ನಂಬಲು ಸಾಧ್ಯವಿದೆ. ಹಾಗೆಯೇ ಈ ಮಂಜುನಾಥ ಲಿಂಗವೂ ಪೂಜಾಕ್ರಮದಲ್ಲಿ ಬದಲಾವಣೆಹೊಂದಿದರೂ ಜನರಿಗೆಲ್ಲಾ ಆತ್ಮಬಲ, ತೃಪ್ತಿಗಳನ್ನು ಕೊಡುವುದಕ್ಕಾಗಿ ಕ್ರಿಸ್ತಶಕದ ಆದಿಯಿಂದಲೇ ಇತ್ತೆಂದು ನಂಬಬೇಕಾಗುತ್ತದೆ.

ವಾರದೂಟ

[ಕತೆಗಾರರು:
ಶ್ರೀ ಕೆ. ಶೇಷಣ್ಣ, ಬೆಂಗಳೂರು]

ರಾಯರಿದ್ದಾರೇನಮ್ಮಾ ?............

....

ಮಗೂ, ನಿಮ್ಮ ತಂದೆ ಮನೆಯಲ್ಲಿದ್ದಾರೆಯೆ.........?

ಅಪರಿಚಿತನಾದ ರಾಜುವಿನ, ಬಹು ದೂರದಿಂದ ನಡೆದು ಬಂದ ಬಳಲಿ ಬಾಡಿದ ಮುಖ ಈ ಪ್ರಶ್ನೆ ಕೇಳಿದ್ದನ್ನು ನೋಡಿ ಹುಡುಗಿ ಸ್ವಲ್ಪ ಅಂಜಿತಾದರೂ ಧೈರ್ಯಗೆಡದೆ "ಇರಿ, ಕರೆಯುತ್ತೇನೆ" ಎಂದಿತು. ರಾಜು ಒಳಗೆ ಹೋಗಲು ಹಿಂಜರಿದು ಗೇಟಿನ ಹತ್ತಿರವೇ ನಿಂತಿದ್ದ. ಸ್ವಲ್ಪ ಹೊತ್ತಾದ ಮೇಲೆ ಒಳಗಿನಿಂದ ಒಂದು ದೊಡ್ಡ ವ್ಯಕ್ತಿ ಹೊರ ಬಂದು ಬಾಗಿಲಲ್ಲಿ ಕಾಣಿಸಿಕೊಂಡಿತು. ಅವರೇ ರಾಯರು. ರಾಜುವನ್ನು ಹತ್ತಿರ ಕರೆದು "ಯಾರಯ್ಯಾ ನೀನು?" ಎಂದು ಪ್ರಶ್ನಿಸಿದರು. ರಾಜು, "ನಾ....ನು ವಿ....ದ್ಯಾ....ರ್ಥಿ. ಇಲ್ಲೇ B. Sc. ಓದುತ್ತಿದ್ದೇನೆ. ನಮ್ಮ ಊರು ಹೊನ್ನಾಳಿ, ಅಲ್ಲಿಂದ ಬಂದಿರುತ್ತೇನೆ. ನಮ್ಮ ತಂದೆ ತುಂಬಾ ಬಡವರು. ನನ್ನನ್ನು ಸರಿಯಾದ ಸ್ಥಿತಿಯಲ್ಲಿರಿಸಿ ಓದಿಸಲು ಸಮರ್ಥರಾಗಿಲ್ಲದ್ದರಿಂದ ನಾನೇ ಇಲ್ಲಿ ಬಂದು ಹೊಂದಿಕೊಳ್ಳಬೇಕಾಗಿದೆ. ಆದ್ದರಿಂದ ತಮ್ಮ ಮನೆಯಲ್ಲಿ ನನಗೆ ಒಂದು ವಾ....ರ ಕೊ....ಡು....ವಿರೆ....ಂದು....ನಂಬಿರುತ್ತೇನೆ." ಎಂದು ಒಂದೇ ಉಸಿರಿನಲ್ಲಿ ಎಲ್ಲವನ್ನು ತಿಳಿಸಿ ಮುಂದಿನ ಉತ್ತರಕ್ಕಾಗಿ ಚಾತಕ ಪಕ್ಷಿಯಂತೆ ರಾಯರ ಮುಖವನ್ನು ನೋಡುತ್ತಿದ್ದ. ರಾಯರು ಸ್ವಲ್ಪ ಕೆಮ್ಮಿ ಒಂದು ಚಿಟಿಕೆ ನಶ್ಯ ಮೂಗಿಗೇರಿಸುತ್ತಾ, "ನಿಜ, ನೀವು ಬಡವರಿರಬಹುದು. ನಿನ್ನ ಮುಖನೋಡಿದರೇ ತಿಳಿಯುತ್ತೆ. ನನಗೂ ನಿನ್ನನ್ನು ಕಂಡರೆ ತುಂಬ ಕನಿಕರ, ಆದರೆ ನಾನೇನು ಮಾಡಲಪ್ಪ? ಈಗಿನ ಕಾಲ ಕಷ್ಟದ ಕಾಲ. ದುಡ್ಡು ಕೊಟ್ಟರೂ ಅಕ್ಕಿ ಸಿಕ್ಕುವ ಹಾಗಿಲ್ಲ, ಅಂಥವುದರಲ್ಲಿ ನಿನಗೆ ನಾನು ಯಾವ ರೀತಿ ಸಹಾಯಮಾಡಬಲ್ಲೆ? ಬೇಕಾದರೆ ಎಂಟಾಣೆ ಕೊಡುತ್ತೇನೆ. ಎಲ್ಲಿಯಾದರೂ ಹೋಗಿ ತಿಂಡಿ ತಿನ್ನಪ್ಪ. ಆದರೆ ವಾರಕೊಡಲು ಸಾಧ್ಯವಿಲ್ಲ" ಎಂದು ನಿರ್ಧಾರವಾಗಿ ತಿಳಿಸಿ ರಾಜು ಕೈಲಿ ಎಂಟಾಣೆ ಇಟ್ಟು, ಒಳಗೆ ನಡೆದೇ ಬಿಟ್ಟರು. ರಾಜು ನಿರಾಶನಾಗಿ ಗೇಟಿನಿಂದ ಹೊರಗೆ ಬಂದ. ನಾಯಿಯೊಂದು ಇವನನ್ನು ಕಂಡು ಬಗುಳಿತು. ಅದಕ್ಕೂ ನಿರ್ಲಕ್ಷ್ಯ ಏನೋ ಇವನನ್ನು ಕಂಡರೆ! ಎಂಟಾಣೆ! ಆ ಎಂಟಾಣೆ ಇವನಿಗೆ ಎಷ್ಟು ದಿನ ಉತ್ಸಾಹಕೊಟ್ಟೀತು? ಎಷ್ಟು ದಿನ ಇವನನ್ನು ಉಳಿಸೀತು? ಅದೇ ಎಂಟಾಣೆ ಆ ರಾಯರ ಕೈಲೇ ಯಾರಾದರೂ ಇಕ್ಕಿದ್ದರೆ ರಾಯರು ಮುಖ ಒಡೆಯುವ ರೀತಿ ಎಸೆಯುತ್ತಿದ್ದರು. ಆದರೆ ರಾಜು? ರಾಜು ಬಡವ. ಅದನ್ನೆ ತೆಗೆದುಕೊಂಡು, ಪಾಲಿಗೆ ಬಂದದ್ದು ಪರಮಾನ್ನ ಎಂದು ಹಿಂದಿರುಗಿದ. ರಾಜು, ದಿನವೂ ಅಲೆದಲೆದು ಸಾಕಾಗಿದ್ದ. ಎಲ್ಲಿ ನೋಡಿದರೂ ಹೀಗೆ, ಯಾರ ಕೇಳಿದರೂ ಇದೇ ಉತ್ತರ. ಹಾಗಾದರೆ ಏನು ಮಾಡುವುದು?

o o o o

ನರಸಿಂಹ ಶಾಸ್ತ್ರಿಗಳು ಪ್ರೈಮರಿ ಶಾಲೆಯ ಉಪಾಧ್ಯಾಯರು. ಬರುವ ಮೂವತ್ತೇಳು ರೂ.ಗಳಲ್ಲಿ, ದೇವರು ಧಾರಾಳವಾಗಿ ಕೊಟ್ಟ ಆರು ಜನ ಮಕ್ಕಳನ್ನು ಸಾಕುವುದರಲ್ಲಿ ಸುಸ್ತಾಗಿಬಿಡುತ್ತಿದ್ದರು. ಹೀಗಿರುವಾಗ ಬೆಂಗಳೂರಿಗೆ ಹೋಗಿ ಓದುವೆನೆನ್ನುವ ರಾಜುವಿಗೆ ಎಲ್ಲಿಂದ ದುಡ್ಡು ಕಳಿಸುತ್ತಾರೆ? ಮಗನಿಗೆ, ವಿದ್ಯೆ ಸಾಕೆಂದೂ ಕೆಲಸಕ್ಕೆ ಸೇರೆಂದೂ ಶಾಸ್ತ್ರಿಗಳೇನೋ ಒತ್ತಾಯಮಾಡಿದರು. ಆದರೆ ರಾಜು ತನ್ನ ತಂದೆ ಪಡುತ್ತಿರುವ ಕಷ್ಟ ಕಂಡೂ ಕಂಡೂ ಹೇಗೆ ಒಪ್ಪಿಯಾನು? ಅವನು ಏನಾದರೂ ಆಗಲಿ, ಇನ್ನೂ ಸ್ವಲ್ಪ ಓದಿ ತಂದೆಗಿಂತ ಸ್ವಲ್ಪ ಉತ್ತಮ ಸ್ಥಿತಿ ಪಡೆಯುವ ಹಾಗಾಗಬೇಕೆಂದು ಹೇಳದೆ ಕೇಳದೆ ಬೆಂಗಳೂರಿಗೆ ಬಂದು ಕಾಡಿ, ಬೇಡಿ ಸಂಪಾದಿಸಿಟ್ಟಿದ್ದ ಮೂವತ್ತು ರೂ.ಗಳನ್ನು ಕಾಲೇಜಿಗೆ ಕೊಟ್ಟು ಸೇರಿ ಬಿಟ್ಟ. ಆದರೆ? ದೇಹಾಧಾರಕ್ಕೆ ಕೂಳು ಮುಖ್ಯವೇ ಹೊರತು ವಿದ್ಯೆಯಲ್ಲ. ಅದೇ ಇಲ್ಲದಿರುವಾಗ ಇವನು ಕಾಲೇಜಿಗೆ ಸೇರಿದರೆ ಏನು ಪ್ರಯೋಜನ? ಆದ್ದರಿಂದ ರಾಜು ಮನೆಮನೆಗೆ ಅಲೆದೂ ಅಲೆದೂ ಅಂತೂ ಏಳು ದಿನಗಳಲ್ಲಿ ೫ ದಿನ ಕೂಳು ಸಿಗುವ ಹಾಗೆ ಮಾಡಿಕೊಂಡಿದ್ದ. ತಂದೆಯವರಿಗೆ ತನ್ನ ಸಾಹಸವನ್ನೂ ತಿಳಿಸಿದ್ದ. ಸಂಸಾರಸಾಗರದಲ್ಲಿ ಈಜು ಬಿದ್ದು ಪಡೆದ ಒಂದೇ ಒಂದು ಪುತ್ರರತ್ನವನ್ನು ಚೆನ್ನಾಗಿ ಬೆಳಗಲು! ಅವಕಾಶ ಕೊಡದ ತಮ್ಮ ಸ್ಥಿತಿಗೆ ಶಾಸ್ತ್ರಿಗಳು ಮಮ್ಮಲ ಮರುಗಿದರೂ ಮಗನ ಸಾಹಸವನ್ನು ಓದಿ ಆಶ್ಚರ್ಯಚಕಿತರಾದುದಲ್ಲದೆ ಪತ್ನಿ ಎದುರಿಗೂ ತಿಳಿಸಿ ಮನಸ್ಸಿನಲ್ಲಿ ಕಡೆಯ ಪಕ್ಷ ಐದು ರೂ.ಗಳನ್ನಾದರೂ ಕಳಿಸುವೆನೆಂದು ದೃಢಪ್ರತಿಜ್ಞೆ ಮಾಡಿದರು.

o o o o

ರಾಜು ವಾಸಿಸುತ್ತಿದ್ದುದು ಯಾವುದೋ ಒಂದು ಸಣ್ಣ ಓಣಿಯಲ್ಲಿದ್ದ ಮುರುಕು ಮನೆಯಲ್ಲಿ. ಆ ಮನೆ ಎದುರಿಗೆ ದೊಡ್ಡ ದೊಡ್ಡ ಸೌಧಗಳು; ಸುತ್ತಲೂ ಕಾಂಪೌಂಡು; ಹೂವಿನ ತೋಟಗಳು; ಮನೆ ಮುಂದೆ ಅಲಂಕಾರಕ್ಕಾಗಿ ಹಸುರು ದೀಪ. ರಾಜು ರೂಮಿನ ಹತ್ತಿರ ಅವರ ಮನೆಯಿಂದ ಹರಿದು

ಬರುವ ಸ್ನಾನಗೃಹದ ಕೊಳಚೆ ನೀರು. ರೂಮಿನ ತುಂಬಾ ಆದರ ಕೆಟ್ಟ ನಾತ. ಆದರೆ ರಾಜು ಮಾತನಾಡುವ ಹಾಗಿಲ್ಲ. ಅನುಭವಿಸುತ್ತಿದ್ದ. ಕೋಣೆ ಒಳಗೆ ಎರಡು ಕಲ್ಲು ಬೆಂಚುಗಳು, ಎರಡು ಕಿಟಕಿ. ಪಕ್ಕದಲ್ಲೇ ಇನ್ನೊಂದು ಭವ್ಯವಾದ ಭವನ. ಅಲ್ಲಿಂದ ದೀಪದ ವ್ಯವಸ್ಥೆ ಮಾಡಬಹುದಾಗಿದ್ದರೂ ಮಾಡಿರಲಿಲ್ಲ. ರಾಜು ಇದಕ್ಕಾಗಿ ಬಹಳ ಒದ್ದಾಡಿದ. ಮನೆಯವರನ್ನು ಕಾಡಿ, ಬೇಡಿ ಗೋಳಾಡಿದ. ಆದರೂ ಅವರು ಇವನ ಮಾತಿಗೆ ಮರುಳಾಗಲಿಲ್ಲ. ಕರುಣೆಯ ಹನಿ ಕಣ್ಣು ಒಳಗೂ ಕಾಣಿಸಲಿಲ್ಲ. "ಈ ಬಡವನಿಗೇಕೆ ವಿದ್ಯುದ್ದೀಪ? ತಿರಿದು ತಿನ್ನುವ ತಿಪ್ಪೇ ನಾಯಿಗೆ ಸುಪ್ಪತ್ತಿಗೆ ಹಾಸಿಗೆ ಏಕೆ?" ಎನ್ನುವುದು ಅವರ ಭಾವ. ನಿಜ, ರಾಜು ತಿರಿದು ತಿನ್ನುವ ತಿಪ್ಪೇನಾಯಿ. ಆದರೆ, ಆ ದೊಡ್ಡ ನಗರದಲ್ಲಿ ಮನೆಗೂ ಅನವಶ್ಯಕವಾದ ಕಡೆಗಳಲ್ಲಿ ದೀಪ, ಪೇಟೆಗಳಲ್ಲಿ ಬೋರ್ಡುಗಳಿಗೆ ದೀಪ, ವಿಹಾರ ಸ್ಥಳಗಳಲ್ಲಿ ನೀರಿನ ಬುಗ್ಗೆಗೆ ದೀಪ, ಈ ಬಡವನಿಗೆ ಕೇವಲ, ರಾತ್ರಿ ಮೂರು ಘಂಟೆಗಳ ಕಾಲ ಓದಿಕೊಳ್ಳಲು ದೀಪವಿಲ್ಲ. ಇದು ಅಂದಿನ ಅವನ ಸ್ಥಿತಿ. ರಾಜು ಹೇಗೋ ಕಷ್ಟಪಟ್ಟು ಒಂದು ಬುಡ್ಡಿ ತಂದು ಸೀಮೆಎಣ್ಣೆ ದೀಪ ಇಟ್ಟುಕೊಂಡು ಅದರಲ್ಲೇ ಓದತೊಡಗಿದ. ಮನಸ್ಸಿದ್ದರೆ ಮಹಾದೇವ. ವಿದ್ಯೆ ಕಷ್ಟಪಟ್ಟರೆ ಬರುವುದೇ ಹೊರತು ಸುಖದಿಂದಲ್ಲ. ಇದು ಅವನಿಗೆ ಆಗಾಗ ಒದಗುತ್ತಿದ್ದ ಸ್ಫೂರ್ತಿದಾಯಕ ಯೋಚನೆಗಳು. ಒಂದೊಂದು ದಿನ ರಾಜುವಿಗೂ ಬಹಳ ಬೇಜಾರಾಗುತ್ತಿತ್ತು. ೧೯೪೭ರ ಸ್ವಾತಂತ್ರ್ಯ ಸಮರದಲ್ಲಿ ಅವನೂ ಭಾಗವಹಿಸಿದ್ದ. ದೇಶದ ಸ್ವಾತಂತ್ರ್ಯ ತನ್ನಂಥವರಿಗೆ ಹಿರಿಮೆಯನ್ನು ಗಳಿಸಿಕೊಡುವುದೆಂದು ನಂಬಿಹೋದ. ಸ್ವಾತಂತ್ರ್ಯ ಹಿರಿಮೆಯನ್ನೇನೋ ಗಳಿಸಿಕೊಟ್ಟಿತು. ಆದರೆ ಯಾರಿಗೆ? ರಾಜುವಿನಂಥವರಿಗಲ್ಲ, ಇವನಂತೆ ಮೂರ್ಖರಾಗಿ ಹಗಲಿರುಳು ದುಡಿದು ರಕ್ತವನ್ನು ಬಗಿದು ದೇಹವನ್ನು ಸವೆಸಿದ ಬಡ ಜನತೆಗಲ್ಲ, ದೀನ ದಲಿತರಿಗಲ್ಲ, ಕೇವಲ ಮೇಲುಪಚಾರಕ್ಕಾಗಿ, ತಾತ್ಕಾಲಿಕವಾಗಿ ಗಾಂಧಿ ಹೆಸರಿನಲ್ಲಿ ಬಿಳೀ ಟೋಪಿ ಧರಿಸಿದ ಕೆಲವು ಮಹನೀಯರಿಗೆ ಆ ಮಹಿಮೆ ಬಂದಿತು. ಅಂದು ತಂದೆ, ತಾಯಿ ಯಾರೂ ಹೇಳಿದರೂ ಕೇಳದೆ ಮುನ್ನುಗ್ಗಿದ್ದ ರಾಜು ಇಂದು ಬೀದಿಯಲ್ಲಿ ಬೀಡಿ ಮಾರುವ ಬುಡನ್ ಸಾಬಿಯ ಹತ್ತಿರ ಬುದ್ಧಿ ಕಲಿಯುತ್ತಿದ್ದ. ಬುಡನ್ ವಿದ್ಯೆಯಿಲ್ಲದ ತನ್ನ ಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಪ್ರಯೋಗಪೂರ್ವಕವಾಗಿ ತೋರಿಸಿದ್ದ. ಆದ್ದರಿಂದಲೇ ರಾಜು ವಿದ್ಯೆಗಾಗಿ ಅಷ್ಟು ಕಷ್ಟ ಪಡುತ್ತಿದ್ದುದು. ಆದರೆ ಅವನ ಸ್ಥಿತಿಗೆ ಮರುಕ ಪಡುವ ಜನ ಬುಡನ್ ಸಾಬಿಯಂತಹ ಅಸಹಾಯಕರೇ ಹೊರತು ಮನೆ ಸಾಹುಕಾರರಲ್ಲ. ಕೇವಲ ವಿಲಾಸಕ್ಕಾಗಿ ನೀರಿನಂತೆ ಹಣವನ್ನು ಖರ್ಚು ಮಾಡುವ ಜನ ಬಡವನ ವಿದ್ಯೆಗೆ ನಾಲ್ಕು ಕಾಸು ಕೊಡಲು ಹಿಂದೆಗೆಯುವುದು ರಾಜುವಿನಂಥ ಬಡವರ ದೌರ್ಭಾಗ್ಯವೇ ಸರಿ.

○ ○ ○ ○

ಅಂದು ಮಂಗಳವಾರ. ರಾಜುವಿಗೆ ಬೆಳಿಗ್ಗೆ ೧೧ ಘಂಟೆಗೇ ಕಾಲೇಜು. ಆದ್ದರಿಂದ ಅವನು ವಾರದ ಊಟದ ಮನೆಗೆ ೧೦॥ ಘಂಟೆಗೆ ಹೋಗಿ ಕುಳಿತುಕೊಂಡ. ಅವನು ಎಂದೂ ಯಾರ ಮನೆಯಲ್ಲೂ, ಅವರು ಕರೆಯುವ ಮುಂಚೆ ಊಟಕ್ಕೆ ಹೋದವನಲ್ಲ. ಅಂದು ಕೂಡ ಹಾಗೆಯೆ ಕುಳಿತಿದ್ದ. ಘಂಟೆ ೧೨ ಆಯಿತು. ರಾಜುವಿಗೆ ಕಳವಳವಾಯಿತು. ಹೊಟ್ಟೆ ಹಸಿದಿದೆ ಎನ್ನುತ್ತಿತ್ತು, ಕಾಲೇಜು ಕರೆಯುತ್ತಿತ್ತು. ಆದರೆ ಒಳಗಡೆ ಕರೆಯುವ ಸೂಚನೆಯೇನೂ ಕಾಣಬರಲಿಲ್ಲ. ಆದ್ದರಿಂದ ರಾಜು ಸುಮ್ಮನೆ ಕೋಣೆಗೆ ಹಿಂದಿರುಗಿ ಪುಸ್ತಕ ತೆಗೆದುಕೊಂಡು ಕಾಲೇಜಿಗೆ ಹೋದ. ಸ್ನೇಹಿತರು ಮುಖ ಸಪ್ಪಗಿದ್ದುದನ್ನು ನೋಡಿದರೂ, ಸಹಾಯಮಾಡುವ, ವಿಚಾರಿಸುವ ಬುದ್ಧಿ ಯಾರಿಗೂ ಹೊಳೆಯಲಿಲ್ಲ. ಸಂಜೆ ಐದು ಘಂಟೆಗೆ ಕಾಲೇಜು ಮುಗಿಸಿಕೊಂಡು ಹಸಿವು ತಾಳಲಾರದೆ ಕೋಣೆಗೆ ಬಂದು ಮಲಗಿದ. ರಾತ್ರಿ ೮॥ ಘಂಟೆಗೆ ಊಟಕ್ಕೆ ಹೋದ. ರಾಯರು ಕೋಣೆಯಲ್ಲಿ ಕುಳಿತಿದ್ದವರು ಹೊರಗೆ ಬಂದರು. ರಾಜುವಿನ ಸಪ್ಪೆ ಮುಖ ಕಂಡು ಅವರಿಗೆ ಸಂಕಟವಾಯಿತೇನೋ. "ಏಕಪ್ಪಾ, ಬೆಳಗ್ಗೆ ಹಾಗೇ ಹೋದೆ, ಅಡಿಗೆ ಆಗಿತ್ತು, ಕೇಳಿದ್ದರೆ ಹಾಕುತ್ತಿದ್ದರು, ಸುಮ್ಮನೆ ಉಪವಾಸ ಮಾಡಿದೆಯಲ್ಲ" ಎಂದು ಕರುಣೆಯಿಂದ ಕೇಳಿದರು. ರಾಜುವಿಗೆ ಹಸಿವಾಗಿದ್ದರೂ ಹಬ್ಬದೂಟ ಉಂಡಷ್ಟು ಸಂತೋಷವಾಯಿತು. ಅವನು ಉತ್ತರಿಸುವುದರಲ್ಲಿದ್ದ. ಅಷ್ಟರಲ್ಲೇ ಒಳಗಡೆ ಯಾರೋ ಗೊಣಗುತ್ತಿದ್ದುದು ಕೇಳುತ್ತಿತ್ತು. ಐದು ನಿಮಿಷ ತಡವಾದರೆ ಏನು ಸೂರೆ ಹೋಗುತ್ತಿತ್ತೋ ಇವನಿಗೆ, ಮಹಾರಾಜ ಬಂದ, ಎಂದು ಹಿಡಿದು ನಿಂತಿರಬೇಕು, ಬರುವುದು ಹಿಡಿಕೂಳಿಗಾಗಿ; ಜಂಭ ನೋಡಿದರೆ ಲಕ್ಷಾಧೀಶನಿಗೂ ಇರುವುದಿಲ್ಲ. ಇಂದು ತಿಂದು ಹೋಗಲಿ, ನಾಳೆಯಿಂದ ಇವನಿಗೆ ಕೂಳು ಕಾಣಿಸುವುದು ನೋಡುತ್ತೇನೆ!" ಇದು ಮನೆಯ ಯಜಮಾನಿಯ ನಿರ್ದಯತೆಯ ನಿರ್ಧಾರದ ನುಡಿ. ರಾಜುವಿಗೆ ಕ್ಷಣ ಹಿಂದೆ ಉಂಟಾದ ಸಂತೋಷ ಈಗ ಇರಲಿಲ್ಲ. ಕಣ್ಣು ರಕ್ತಹೀನವಾದಂತೆ ತೋರಿತು. ಅವನು ಮಾತನಾಡದೆ ಹಾಗೇ ಹೊರಗೆ ಬಂದು ಬಿಟ್ಟ. ರಾಯರು ಕರೆದರು, ರಾಜು ಬರಲಿಲ್ಲ. "ತಿರಿದು ತಿನ್ನೋ ತಿಪ್ಪೇನಾಯಿಗೆ ಹೆಡಿಗೆ ತುಂಬಾ ಮರ್ಯಾದೆ ಬೇಕಾಗಿತ್ತೇನೋ! ಹೋದರೆ ಹೋದ, ಪೀಡೆ ತೊಲಗಿತು ಬಿಡಿ, ಅವನನ್ನೇನು ಕೂಗುವುದು?" ಎಂದು ಅರಚಿದರು ಅಮ್ಮಾವರು. ಇಲ್ಲೂ ಅದೇ ಮಾತು. ರಾಜು ಪಕ್ಕದ ಮನೆಗೆ ಹೋಗಿ ನೋಡೋಣ ಎಂದುಕೊಂಡು ಪಕ್ಕದ ಮನೆಬಾಗಿಲು ತೆಗೆದು ಒಳಗೆ ಹೋ

ಗುವುದರಲ್ಲಿದ್ದ. ಹಿಂದಿನಿಂದ ಯಾರೋ ಕೂಗಿದ ಹಾಗಾಯಿತು. ತಿರುಗಿ ನೋಡಿದ, ಮನೆ ಯಜಮಾನರು ಹೊಟ್ಟೆ ನೀಡಿಕೊಳ್ಳುತ್ತಾ ಬರುತ್ತಿದ್ದರು. ಹತ್ತಿರ ಬಂದು ಇವನ ಮುಖ ನೋಡಿ, "ಏನಯ್ಯಾ ಇವತ್ತೇ ಅಂತ ತಿಳಿದುಕೊಂಡು ಬಂದು ಬಿಟ್ಟೆಯೋ, ನಾಳೇ ಅಲ್ವೇನಯ್ಯ?" ಎಂದರು. ರಾಜು ಸ್ವಲ್ಪ ವಿವರಿಸಿ ಹೇಳೋಣವೆಂದಿದ್ದ. ಅವರು ಮತ್ತೆ ಮುಂದುವರೆಸಿದರು: "ನೋಡಪ್ಪಾ, ನನ್ನ ಹೆಂಡತಿ ಊರಲ್ಲಿಲ್ಲ. ನಿನಗೆ ಹೇಳೋದು ಮರೆತಿದ್ದೆ. ನಾಳೆ ಬೇರೆ ಎಲ್ಲಾದರೂ ನೋಡಿಕೋಪ್ಪ. ಇನ್ನೊಂದು ತಿಂಗಳು ಹಾಗೇ ಮಾಡಿಕೊಂಡಿರು" ಎಂದುಬಿಟ್ಟರು. ರಾಜುವಿಗೆ ದಿಕ್ಕೇ ತೋಚದಾಯಿತು, ಕಣ್ಣು ಮಂಜಾಗ ತೊಡಗಿತು. ಬೆಳಗಿನಿಂದ ಊಟವಿಲ್ಲ. ಈಗ ನೋಡಿದರೆ ಒಂದು ಕಡೆ ಬಯ್ಗುಳ, ಇನ್ನೊಂದು ಕಡೆ ನಾಳಿನ ಊಟಕ್ಕಾದರೂ ಆಸೆ ಇಟ್ಟುಕೊಳ್ಳೋಣವೆಂದರೆ ಅದಕ್ಕೂ ಚಕ್ರ. ಹಿಂದಿನ ದಿನ ಊಟವಿಲ್ಲ. ಈ ಸ್ಥಿತಿಯಲ್ಲಿ ಕೋಣೆಗೆ ಬಂದು ತಲಪುವುದೇ ದುಸ್ತರವಾಯಿತು. ಹೇಗೋ ಹೇಗೋ ಬಂದು ಬುಡ್ಡಿಯಲ್ಲಿ ಎಣ್ಣೆ ನೋಡಿದ, ಅದೂ ತೀರಿತ್ತು. ತನ್ನ ಕಾಲವು ತೀರಿತೆಂದುಕೊಂಡ. ಎಂದೋ ಕೊಂಡು ತಂದಿದ್ದ ಒಂದು ಮೊಂಬತ್ತಿ ಚೂರನ್ನು ಹಚ್ಚಿಟ್ಟು ಅದರ ಬೆಳಕಿನಲ್ಲಿ ಪುಸ್ತಕದಿಂದ ಒಂದು ಹಾಳೆಯನ್ನು ಹರಿದು ಬರೆಯತೊಡಗಿದ:

"ತಂದೆಯವರಿಗೆ:—

ನಮಸ್ಕಾರಗಳು. ನಾನು ಕ್ಷೇಮವಾಗಿದ್ದೇನೆ, ನೀವು ಕ್ಷೇಮವಾಗಿರಬಹುದು. ನಾನು ಅಲ್ಲಿಂದ ಬಂದಾಗ ನನಗೆ ಇಲ್ಲಿ ಎಷ್ಟೋ ಸುಖವೆನಿಸಿತ್ತು. ಆದರೆ ಕಾಲ ಒಂದೇ ಸಮನೆ ಇರುವುದಿಲ್ಲ. ಇಂದು ಬೆಳಿಗ್ಯೆ ವಾರದವರ ಮನೆಗೆ ಹೋದೆ. ಆದರೆ ಕಾಲೇಜಿಗೆ ತಡವಾಗುವುದೆಂಬ ಹೆದರಿಕೆಯಿಂದ ಹಾಗೇ ವಾಪಸ್ಸು ಕಾಲೇಜಿಗೆ ಹೋದೆ. ಸಂಜೆ ಪುನಃ ಊಟಕ್ಕೆ ಹೋದೆ. ಆದರೆ "ತಾನೊಂದು ಬಗೆದರೆ ದೈವ ಒಂದು ಬಗೆಯಿತು" ಎಂಬಂತೆ ನನಗೆ ಅಲ್ಲಿ ಊಟವಲ್ಲ ಕಾದಿದ್ದು, ಮನೆಯ ಯಜಮಾನತಿಯ ನಿರ್ದಯತೆಯ ಕಠೋರ ನುಡಿ. ಅವರು ನಿರಾಕರಿಸಿದ್ದರ ಫಲವಾಗಿ ಇನ್ನೆಂದೂ ಅಲ್ಲಿ ಕೂಳು ಸಿಗದಾಯಿತು. ಹಾಗೆ ಪಕ್ಕದ ಮನೆಗೆ ಹೋದೆ. ಅಲ್ಲಿ ನಾಳಿನ ಊಟವಿತ್ತು. ಆದರೆ ದುರದೃಷ್ಟದಿಂದ ಅವರ ಮನೆಯವರು ಬೇರೆ ಊರಿಗೆ ಹೋಗಿದ್ದರಿಂದ ಅಲ್ಲಿ ನಾಳಿನ ಕೂಳಿಗೂ ಚಕ್ರಬಿತ್ತು. ನಿನ್ನೆಯ ದಿನ ಊಟವಿರಲಿಲ್ಲ. ಅದೃಷ್ಟವನ್ನು ದೂಷಿಸಿ ಫಲವಿಲ್ಲ. ಅವರ ಮನೆ ರಾಯರು ದಯೆ ತೋರಿಸಿದರು, ಆದರೆ ನನಗೋಸ್ಕರ, ಕೇವಲ ವಾರದೂಟದ ಹುಡುಗನಿಗೋಸ್ಕರ ಹೆಂಡತಿ ಮನನೋಯಿಸಲು ಒಪ್ಪಲಿಲ್ಲ. ಇನ್ನೊಬ್ಬರು ವಾರದ ಹುಡುಗನಿಗೋಸ್ಕರ ಊರಿಗೆ ಹೋಗುವುದು ಬಿಡಬೇಕೆ? ಹೇಳಬಹುದಾಗಿತ್ತು, "ಅವನಿಗೇನು ಹೇಳುವುದು" ಎಂದಿರಬಹುದು. ನಾನೂ ಯೋಚಿಸಿ, ಯೋಚಿಸಿ ಸಾಕಾದೆ. ಈ ಕಷ್ಟ ಪರಿಸ್ಥಿತಿಯಲ್ಲಿ ಇಂತಹ ಕಡೆಯಲ್ಲಿ ಯಾರನ್ನೂ ನಿಂದಿಸುವುದು ತರವಲ್ಲ. ಅಥವ, ನಮ್ಮ ಸ್ಥಿತಿಯನ್ನು ಯೋಚಿಸುತ್ತಾ ಕುಳಿತುಕೊಳ್ಳುವುದೂ ತಪ್ಪು. ವಿದ್ಯೆ ಈಗಿನ ಕಾಲಲ್ಲಿ ನಮಗಲ್ಲ, ನಾಲ್ಕು ಕಾಸು ಇಟ್ಟುಕೊಂಡು, ನಾಲ್ಕು ಜನರ ಸಹಾಯ ಪಡೆದು, ಸಮಾಜದಲ್ಲಿ ಗಣ್ಯರೆಂದು ಹೆಸರು ಪಡೆದ ಬಿಳೀ ಟೋಪಿ ಮಹನೀಯರ ದೃಷ್ಟಿಗೆ ಪಾತ್ರರಾದವರಿಗೆ ಮಾತ್ರ. ಇದರಲ್ಲಿ ನಮಗೆ ಯಾವುದಿದೆ? ಕೈಲಿ ಹಣವಿಲ್ಲ. ನಾಲ್ಕು ಜನರ ಸಹಾಯ ಮೊದಲೇ ಇಲ್ಲ. ಹಾಗಾದಲ್ಲಿ ನಮ್ಮನ್ನು ಲಕ್ಷಿಸುವವರಾದರೂ ಯಾರು? ನಿಮ್ಮ ಗುಣ, ನಡತೆ ಈಗಿನ ಜನರಿಗೆ ಬೇಕಾಗಿಲ್ಲ, ಹಣ. ಹಣಕೊಡಿ, ನಿಮಗೆ ಸೌಲಭ್ಯವಿದೆ. ಹಣವಿಲ್ಲ, ನೀವು ಒಂದು ಬದುಕಿರುವ ಹೆಣ, ಇದು ಈಗಿನ ದೀನ ದಲಿತರಿಗಾಗಿಯೇ ಮೀಸಲೆಂದು ಹೇಳಿಕೊಂಡು ಅಪಚಾರ ನಡೆಸುವ ಸಮಾಜದ ನೀತಿ. ಈ ಸಮಾಜದಲ್ಲಿ ಬಾಳುವುದು ನಮ್ಮ ನಿಮ್ಮ ಹಣೆಯಲ್ಲಿ ಬರೆದಿಲ್ಲ, ಬರೆದಿದ್ದರೂ ಅದು ಇಲ್ಲಿ ತನಕ ಮಾತ್ರ ಎಂದು ನಾನು ನಂಬಿರುತ್ತೇನೆ. ಹೆಚ್ಚೇನು ಬರೆಯಲಿ? ಹಣದ ಗುಣ ಎಷ್ಟು ಬರೆದರೂ ಸ್ವಲ್ಪವೇ, ನಾವು ಅದನ್ನು ಪಡೆದಿಲ್ಲ, ಪಡೆಯುವ ಸೌಲಭ್ಯ ನಮಗಿಲ್ಲ. ಆದ್ದರಿಂದ ನೀವು ಅದನ್ನು ಪಡೆಯುವ ಗೋಜಿಗೆ ಹೋಗಬೇಡಿ, ಇದ್ದಿದ್ದನ್ನು ಖರ್ಚುಮಾಡಿ ಸುಖವಾಗಿರಿ, ನನ್ನ ಯೋಚನೆ ಬಿಡಿ.

ನನ್ನ ನಮಸ್ಕಾರವನ್ನು ನನಗಾಗಿ ಹಗಲಿರುಳು ಯೋಚಿಸುತ್ತಿರುವ, ನನ್ನ ಅಭ್ಯುದಯವನ್ನೇ ಹಾರೈಸುತ್ತಿರುವ ತಾಯಿಗೆ, ಒಡಹುಟ್ಟಿದರೂ ತಮ್ಮನ ಅಭ್ಯುದಯವನ್ನು ಈಕ್ಷಿಸಲಾಗದ ಅಕ್ಕಂದಿರಿಗೆ ತಿಳಿಸಿಬಿಡಿ............ನಾ........ ನಿ........ನ್ನು.........

ಇಂತೀ ನಮಸ್ಕಾರಗಳು

ರಾಜು— "

ಪತ್ರವನ್ನು ಮುಗಿಸಿ ರಾಜು ಪುಸ್ತಕವನ್ನೆಲ್ಲ ಹುಡುಕಿ ಎಲ್ಲೋ ಇಟ್ಟಿದ್ದ. ಒಂದು ಕವರನ್ನು ತೆಗೆದುಕೊಂಡು, ಬಹಳ ಕಷ್ಟಪಟ್ಟು ವಿಳಾಸವನ್ನು ಬರೆದು, ಪ್ರಯಾಸಪಟ್ಟು ಹತ್ತಿರವಿದ್ದ ಪೋಸ್ಟು ಡಬ್ಬದಲ್ಲಿ ತೂರಿಸಿ ಬಂದು ಮಲಗಿದ. ಯಾವಾಗ ನಿದ್ರೆ ಬಂದಿತ್ತೋ ಗೊತ್ತಿಲ್ಲ.

o o o o

ಮುಂಜಾನೆ ಬೆಳಕು ಮುಂಬರಿಯುತ್ತಿತ್ತು. ಎತ್ತಿನ ಘಂಟೆಗಳ ಶಬ್ದ ದೂರದಿಂದ ಬರುವ ಗಾಡಿಯ ಘಡ-ಘಡತ ಶಬ್ದಕ್ಕೆ ಹೊಂದಿಕೊಂಡು ತಾಳ ರೂಪದಲ್ಲಿ ಕೇಳಿ ಬರುತ್ತಿತ್ತು. ಪೋಲೀಸರ ಶಿಳ್ಳೆಯ ಧ್ವನಿಯು ಕಿವಿ ಬಿರಿಯುತ್ತಿತ್ತು. ಮೂಡಣದಲ್ಲಿ ಮೂಡುವ ರವಿ ತನ್ನ ದೂತ ಅರುಣನನ್ನು ಕಳಿ

ಕನ್ನಡ ಸಂಸ್ಕೃತಿಗೆ ತುಳುನಾಡಿನ ದೇಣಿಗೆ

[ಲೇಖಕರು: ಶ್ರೀ। ಉಡುಪಿ ವೆಂಕಟಕೃಷ್ಣರಾಯರು]

ತುಳುನಾಡೆಂದು ಪ್ರಸಿದ್ಧವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಡುಪಿ, ಕಾರ್ಕಳ, ಪುತ್ತೂರು, ಕಾಸರಗೋಡು ತಾಲೂಕುಗಳನ್ನು ಸೊಬಗಿನ ಬೀಡೆಂದು ಮಹಾತ್ಮಾ ಗಾಂಧಿ ಮೊದಲಾದ ಅನ್ಯ ಪ್ರಾಂತದವರು ಕರೆದುದೇನೂ ಸೋಜಿಗವಲ್ಲ. ಪ್ರಕೃತಿ ಸೌಂದರ್ಯವೇ ಇಲ್ಲಿ ತಾಂಡವವಾಡುತ್ತಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಹ್ಯಾದ್ರಿ ಘಟ್ಟಗಳ ಶ್ರೇಣಿ, ಅನೇಕ ನದಿಗಳು, ಅರಬೀ ಸಮುದ್ರ, ಸುಂದರವಾದ ತೆಂಗಿನ, ಅಡಿಕೆಮರದ ತೋಟಗಳು, ಅಲ್ಲಲ್ಲಿ ಪ್ರಕೃತಿಯ ಸ್ವಾಮಿಯ ವೈಭವವನ್ನೇ ನೆನಪುಮಾಡಿಸುವರೆಯೋ ಎಂಬಂತೆ ಕಂಗೊಳಿಸುತ್ತಿರುವ ಹಿಂದೂ ದೇವಾಲಯ ಯಾ ಜಿನಾಲಯಗಳು—ಇವುಗಳನ್ನೆಲ್ಲಾ ಕಣ್ಣುತುಂಬಾ ನೋಡಿದರೂ ಸಾಕೆನ್ನಿಸಲಾರದು. ಶಿವಮೊಗ್ಗದ ಘಾಟಿಯ ಎತ್ತರದಿಂದ ಸೂರ್ಯಾಸ್ತಮಾನವನ್ನು ನೋಡಿ ಆನಂದಿಸದವನು ಯಾರು? ಕುದುರೆಮುಖದ ವರ್ಣನೆಯಲ್ಲಿ ಮೈಮರೆತವರಲ್ಲಿ ಅನೇಕರು ಅಮೇರಿಕ ದೇಶದ ಯಾತ್ರಿಕರಂತೆ! ಮಲ್ಪೆಯ ಹತ್ತಿರದ ಬಾದರಗಡವೆಂಬ ದ್ವೀಪವು ಸಮುದ್ರಮಧ್ಯದಲ್ಲಿದ್ದು ಎಲ್ಲರ ಮನಸ್ಸನ್ನೂ ಆಕರ್ಷಿಸುವದು. ಎಲ್ಲಿ ನೋಡಿದರೂ ಧನಧಾನ್ಯ ಸಮೃದ್ಧಿಯಿಂದ ತುಂಬಿದ ತೋಟಹೊಲಗಳು, ಅದಕ್ಕನುಗುಣವಾಗಿ ಸಹಜ ಸೌಹಾರ್ದದಿಂದ ತುಳುಕುತ್ತಿರುವ ಜನರು.

ಈ ಸಣ್ಣ ನಾಡಿನ ಜನರಾಡುವ ಭಾಷೆಗೆ ಅಕ್ಷರಮಾಲೆಯಿಲ್ಲದೆ ಅವರ ಪ್ರಾಚೀನ ಸಂಸ್ಕೃತಿಯನ್ನು ಕಾಪಾಡುವದಕ್ಕೆ ಸಾಧ್ಯವಾಗದೆ ಇರುವದು ಅತಿ ಶೋಚನೀಯವಾಗಿದೆ. ಇತ್ತೀಚೆಗೆ ಕೆಲವರು ಪುರೋಹಿತರು ತಮ್ಮ ಮಂತ್ರಗಳನ್ನು ಮಲೆಯಾಳ ಲಿಪಿಯ ಆಧಾರದಿಂದ ಕಲ್ಪಿಸಿದ ಒಂದು ಅಕ್ಷರಮಾಲೆಯಲ್ಲಿ ಬರೆಯುವ ವಾಡಿಕೆಯಿದ್ದರೂ ಇದು ಜನಸಾಮಾನ್ಯರಿಂದ ಆದೃತವಾಗದೇನೆ ಉಳಿದಿದೆ. ಅದರ ಸಮಾಚಾರವಂತಿರಲಿ, ಈ ತುಳುಜನರು ತಮ್ಮ ತನುಮನಧನಗಳನ್ನು ತ್ರಿಕರಣಪೂರ್ವಕವಾಗಿ ಕನ್ನಡಮಾತೆಯ ಅಡಿದಾವರೆಗಳಲ್ಲಿ ಧಾರೆಯೆರೆದಿರುವದು ಪ್ರಶಂಸಾರ್ಹವಾಗಿದೆ: ಜೀವನರಂಗದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ತೌಳವರು ಮುಂದುವರಿದು ದೇಶಸೇವೆ ಸಲ್ಲಿಸಿರುವರೆಂದರೆ ವಸ್ತುಸ್ಥಿತಿಯೇ ಆಗಿರುವದು. ಉಚ್ಚತಮವಾದ ಧಾರ್ಮಿಕಜೀವನದಿಂದ ಕೀಳು

ಸುವ ಹಂಚಿಕೆಯಲ್ಲಿದ್ದ. ಇಹಲೋಕದ ವ್ಯಾಪಾರಕ್ಕೆ ಆರಂಭವಾಗುವ ಕಾಲ ಪ್ರಾತಃಕಾಲ ಇಂಥ ಹೊತ್ತಿನಲ್ಲಿ ಗಲಿಬಿಲಿಯೇ? ಕೆಲವರು ಓಡುತ್ತಿದ್ದರು. ಇನ್ನು ಕೆಲವರು ಜೋರಾಗಿ ನಡೆಯುತ್ತಿದ್ದರು. ಅಂತೂ ಎಲ್ಲ ಒಂದೇ ಕಡೆಗೆ ಧಾವಿಸುತ್ತಿದ್ದರು. ಎಲ್ಲಿಗೆ? ಕೆಂಪಾಂಬುಧಿ ಕೆರೆ ದಂಡೆಗೆ. ಅಲ್ಲೊಂದು ಶವ ಬಿದ್ದಿತ್ತು. ಪೋಲೀಸಿನವರು ಮಹಜರು ನಡೆಸುತ್ತಿದ್ದರು. "ಒಂದು ಪಯಿಜಾಮ, ಶರಟು ಜೇಬಿನಲ್ಲಿ ಒಂದು ಪೆನ್ಸಿಲ್ಲು ಒಂದು ಕಾಗದ..........." ಇನ್ನೂ ಹೇಳುತ್ತಿದ್ದರು. ಅಷ್ಟರಲ್ಲೇ ಇನ್ನೊಬ್ಬರು ಕಾಗದ ಬಿಚ್ಚಿ ಓದುತ್ತಿದ್ದರು, ಅದರ ಒಕ್ಕಣೆ ಹೀಗಿತ್ತು: "ನಾನು ಯಾರ ಬಲವಂತಕ್ಕೂ ಈ ಸ್ಥಿತಿಯನ್ನು ಪಡೆದಿಲ್ಲ. ಜೀವನದಲ್ಲಿ ಈ ವಿದ್ಯಾರ್ಥಿ ಜೀವನದಲ್ಲಿ ಬೇಸರ ಪಡೆದ ನನ್ನ ಮನಸ್ಸು ಅನಂತ ಸುಖಕ್ಕಾಗಿ ಹಾತೊರೆಯುತ್ತಿದ್ದು ಇಂದು ತನ್ನ ಅಭಿಲಾಷೆಯನ್ನು ಸಾಧಿಸಿಕೊಂಡಿದೆ. ಇದಕ್ಕೆ ಯಾರೂ ಚಿಂತಿಸಬೇಕಾದ್ದಿಲ್ಲ, ಮತ್ತು ಯಾರೂ ಜವಾಬ್ದಾರರಲ್ಲ. ಆದರೆ ಒಂದೇ! ಈ ಪ್ರಪಂಚದಲ್ಲ, ಈ ಧನಪ್ರಪಂಚದಲ್ಲಿ, ಧನಸಾಗರದಲ್ಲಿ ನನ್ನಂತಹ ಬಡ ಹುಡುಗರು ವಿದ್ಯೆಗಾಗಿ (ಬೇರೆ ಯಾವುದಕ್ಕೂ ಅಲ್ಲ) ಬಂದು ನಿಮ್ಮ ಮನೆಗೆ ಹಿಡಿಕೂಳಿಗಾಗಿ ಅಲೆಯಬಹುದು. ಅಂಥವರಿಗೆ ಕಾಲಕ್ಕೆ ಸರಿಯಾಗಿ, ತಿಪ್ಪೇನಾಯಿ ಎಂದು ಹೆಸರಿಸದೆ ಸಂತೋಷದಿಂದ ಇಷ್ಟು ಕೂಳು ಕಾಣಿಸಿರಿ. ಅದೇ ನನ್ನ ಆತ್ಮಕ್ಕೆ ಚಿರಶಾಂತಿಯನ್ನು ತಂದೊಡ್ಡುವ ಅಮೃತ."

ಇತೀ ಹತಭಾಗ್ಯ

—ರಾಜು— "

ಸ್ವಲ್ಪ ಹೊತ್ತಿನಲ್ಲೇ ಶವ ಸಂಸ್ಕಾರವನ್ನೆಲ್ಲ ಮುಗಿಸಿ, ಶವವನ್ನು ಚಿತೆಯ ಮೇಲೆ ಇರಿಸಿ ಬೆಂಕಿ ಹಚ್ಚಿದರು. ಅಗ್ನಿ ತನಗೆ ಯಾರಲ್ಲೂ ಭೇದವಿಲ್ಲವೆಂಬಂತೆ ರಾಜುವಿನ ಶವವನ್ನು ಕಬಳಿಸಿದ. ಅದರ ಧಗೆಗೋ ಅಥವ ಅವನ ಮೇಲಿನ ಕರುಣೆಗೋ ಗೊತ್ತಿಲ್ಲ, ಸುತ್ತಲಿದ್ದವರೂ ಕಣ್ಣೀರು ಹಾಕಿದರು.

o o o o

ಪತ್ರ ತಲುಪಿತೋ ಇಲ್ಲವೋ ಗೊತ್ತಿಲ್ಲ. ಆದರೆ ಶಾಸ್ತ್ರಿಗಳ ಮನದಲ್ಲಿ ಅಂದು ಮುಂಜಾನೆ ಹೊಯ್ದಾಟ ಹೇಳಲಸಾಧ್ಯವಾಗಿತ್ತು. ಅವರ ಆತ್ಮ, "ನಿಮ್ಮ ಮಗ ಈ ಹಣಪ್ರಪಂಚದಲ್ಲಿ ಇನ್ನಿಲ್ಲ" ಎಂದು ಸಾರುತ್ತಿತ್ತು!

ತರದ ದೈನಂದಿನದ ವ್ಯವಹಾರದ ಮಟ್ಟದ ವರೇಗೂ ಪರಿಶೀಲಿಸಿದರೆ, ಪ್ರತಿಯೊಂದು ಕಾರ್ಯರಂಗದಲ್ಲಿಯೂ ತೌಳವರ ಮೇಲ್ಪಂಕ್ತಿಯೆಂಬುದು ಸ್ತುತ್ಯರ್ಹವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಮೊಟ್ಟಮೊದಲು ಧಾರ್ಮಿಕಪಂಥದಲ್ಲಿ ನಮ್ಮ ವಿಹಂಗಮದೃಷ್ಟಿಯನ್ನು ಬೀರಿದರೆ, ಮಧ್ವಾಚಾರ್ಯ ವಾದಿರಾಜ ಇತ್ಯಾದ್ಯನೇಕ ಪ್ರಖ್ಯಾತ ಹೆಸರುಗಳನ್ನು ನಾವು ಬೇರೆ ಬೇರೆ ಶತಮಾನಗಳಲ್ಲಿ ಕೇಳುತ್ತೇವೆ. ಹಿಂದೂಗಳು ಮಾತ್ರವಲ್ಲ, ಜೈನರ ಅನೇಕ ಆಲಯಗಳನ್ನೂ, ಗುಮ್ಮಟಗಳನ್ನೂ ನಾವು ನೋಡಿದೊಡನೆಯೇ, ಅವುಗಳನ್ನು ರಚಿಸಿದವರು ಮಹಾಮಹಿಮರೇ ಆಗಿದ್ದಿರಬೇಕೆಂದೇ ಒಪ್ಪಬೇಕಾಗುತ್ತದೆ. ಇವರ ಶಿಲ್ಪಚಾತುರ್ಯ (Engineering skill)ವೂ ಅಪಾರವಾಗಿದ್ದಿರಬೇಕಲ್ಲವೇ? ಈ ಹಿಂದೂ, ಜೈನ ಮಹಾಮಹಿಮರೆಲ್ಲರೂ ಜನರಲ್ಲಿ ದೈವಭಕ್ತಿಯ ಸಂದೇಶವನ್ನು ಬೀರಿ, ಜನರನ್ನು ಸನ್ಮಾರ್ಗನಿರತರನ್ನಾಗಿ ಮಾಡಿದರು. ಸಂಸ್ಕೃತದಲ್ಲಿ ದ್ವೈತ ವೇದಾಂತ ಪ್ರತಿಷ್ಠಾಪನಾಚಾರ್ಯರೆಂದು ಹೆಸರಾದ ಶ್ರೀಮನ್ಮಧ್ವಾಚಾರ್ಯರೇ ದ್ವಾದಶಸ್ತೋತ್ರದಷ್ಟೇ ಲಲಿತವಾದ ಹಾಡುಗಳನ್ನು ಕನ್ನಡದಲ್ಲಿಯೂ ಹಾಡಿ, ದಾಸಕೂಟದ ಪ್ರವರ್ತಕರಾಗಿದ್ದಾರೆಂದು ಐತಿಹ್ಯವಿರುವದು. ಇವರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರೂ (೧೨೪೮-೧೩೩೩) ಕೆಲವು ಹಾಡುಗಳನ್ನು ರಚಿಸಿದ್ದಾರೆ. ಇವರಿಂದ ಸಾಧಾರಣ ೧೫೦ ವರ್ಷಗಳ ತರುವಾಯ ಬಾಳಿದ ವಾದಿರಾಜರು (ಇಸ್ವಿ ೧೫೦೦) ತುಳುಭಾಷೆಯಲ್ಲಿ ಮೊಟ್ಟಮೊದಲನೆಯವರಾಗಿ ಪದ್ಯಗಳನ್ನು ಹಾಡಿ, ಮಧ್ವಸಿದ್ಧಾಂತದ ತತ್ತ್ವಗಳನ್ನು ಪಾಮರರಿಗೂ ತಿಳಿಯುವಂತೆ ಪ್ರಚಾರಮಾಡಿದರು. ಇವರ ಲಕ್ಷ್ಮಿಶೋಭನ ಹಾಡನ್ನು ಈಗಲೂ ಮದುವೆಮಂಟಪಗಳಲ್ಲಿ ಶ್ರದ್ಧೆಯಿಂದ ಸುಮಂಗಲೆಯರು ಹಾಡುವ ವಾಡಿಕೆಯುಂಟು. ಇದರ ಪ್ರಭಾವದಿಂದ ಸತ್ತ ವಧೂವರರು ಪುನಃ ಬದುಕಿದರೆಂಬ ಐತಿಹ್ಯ. ಇವರ ಅನುಗ್ರಹದಿಂದ ಈಗಲೂ ಉಡುಪಿಯಿಂದ ಸುಮಾರು ೫ ಮೈಲು ದಕ್ಷಿಣಕ್ಕಿರುವ ಮಟ್ಟು ಎಂಬ ಗ್ರಾಮದಲ್ಲಿ ರಸವತ್ತಾದ ಬದನೆ ಬೆಳೆಯುತ್ತಿದೆ. ಅದನ್ನು 'ವಾದಿರಾಜಗುಳ್ಳ'ವೆಂದು ಕರೆಯುವರು. ಇವರ ರುಕ್ಮಿಣೀಶ ವಿಜಯವೆಂಬ ಮಹಾಕಾವ್ಯಕ್ಕೆ ಪಂಡಿತವರ್ಗದಲ್ಲಿ ಮಾಘನ ಶಿಶು-ಪಾಲ ವಧಕ್ಕಿದ್ದಷ್ಟೇ ಗೌರವವಿರುವದು. ಇವರು ಪುರಂದರ ಕನಕಾದಿ ಪ್ರಸಿದ್ಧ ದಾಸರಿಗೂ ಗುರುಗಳಾಗಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರೆಂದು ಎಲ್ಲರಿಗೂ ಗೊತ್ತೇ ಇದೆ.

ಹೀಗೆಯೇ ತೌಳವರಲ್ಲಿ ಕೆಲವರು ಸಂಗೀತದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಸಂಪಾದಿಸಿ, ಸಾಹಿತ್ಯ ಸಂಗೀತಗಳ ಜೋಡಣೆಯಿಂದ ಹುಟ್ಟಿದ ಹೊಸದಾದ ಒಂದು ಕಲೆಯನ್ನು—ಯಕ್ಷಗಾನ ಅಥವಾ ಬಯಲಾಟವೆಂದು ಹೆಸರಾದದ್ದನ್ನು—ಎದುರಿಗೆ ತಂದರು. ಪೌರಾಣಿಕ ಯಾ ಸಾಮಾಜಿಕ ಕಥೆಯನ್ನೇ ಜೀವಾಳವಾಗಿಟ್ಟುಕೊಂಡು ವಿವಿಧ ವೃತ್ತಾಂತಗಳನ್ನು ತಾಳ-ಮೇಳಗಳೊಡನೆ ಅಭಿನಯಿಸಲಾರಂಭಿಸಿದರು. ಇವುಗಳಲ್ಲಿ ಹೆಚ್ಚಿನ ಶಿಕ್ಷಣವನ್ನು ಪಡೆಯದ ಪಾಮರರೂ ಭಾಗವಹಿಸಿ ಜನರಂಜನೆಗೆ ಹಾದಿಯನ್ನು ತೋರಿಸಿದರು. ಹೀಗೆ ಈ ಬಯಲಾಟಗಳನ್ನು ರಾತ್ರಿ ಇಡೀ ಆಡುವ ಮೇಳಗಳು ಈಗಲೂ ತುಳುನಾಡಿನ ದೊಡ್ಡ ದೊಡ್ಡ ದೇವಸ್ಥಾನಗಳನ್ನು ಹೊಂದಿ ಹೆಸರಾಗಿವೆ. ಧರ್ಮಸ್ಥಳ, ಪೆರಡೂರು ಇತ್ಯಾದಿ ಸ್ಥಳದ ಮೇಳಗಳು ಜಿಲ್ಲೆಯ ತುಂಬಾ ಸಂಚಾರಮಾಡುತ್ತವೆ. ಜನರಂತೂ ಹರಿಕೆ ಆಟಗಳಿಂದು ಆಯಾ ದೇವಸ್ಥಾನಗಳ ಅಧಿದೇವತೆಗಳ ಅನುಗ್ರಹವನ್ನು ಪಡೆಯಲು ಆಡಿಸುತ್ತಿರುತ್ತಾರೆ. ಇವುಗಳನ್ನು ಕಣ್ಣುತುಂಬಾ ನೋಡಿಯೇ ಪೌರಾಣಿಕ ವಿಷಯಗಳನ್ನು ಜನರು ಗ್ರಹಿಸುತ್ತಾರೆ. ಭಕ್ತಿಪಂಥದ ಹಿರಿಮೆಯನ್ನು ಜನರಲ್ಲಿ ಪ್ರಚುರಪಡಿಸುವರೆ ಇವೂ ತಾಳಮದ್ದಳೆಗಳೂ ಉತ್ತಮವಾದ ಸಾಧನಗಳಾಗಿವೆ. ಇನ್ನು ಸಾಮಾನ್ಯ ಜನರ ಮೂಢಭಾವನೆಯ ಪ್ರಕಾರ ನಮ್ಮ ಜೀವನಯಾತ್ರೆಯಲ್ಲಿ ಭೂತ ಪಿಶಾಚಗಳು ಒಳ್ಳೇ ಯಾ ಕೆಟ್ಟ ಪರಿಣಾಮಗಳನ್ನೆ ತೋರಿಸಲು ಸಮರ್ಥರಾದ್ದರಿಂದ ಅವುಗಳನ್ನು ಸದಾ ಸಂತುಷ್ಟರಾಗಿರಿಸುವದೇ ವಾಸಿಯೆಂದು ಜನಸಾಮಾನ್ಯರು ನಂಬುತ್ತಾರೆ. ಈ ಭೂತಗಳು ಪಂಜುರುಳಿ, ಜುಮಾದಿ, ಕಲ್ಲು-ಕುಟ್ಟಿಗ ಇತ್ಯಾದಿ ಹೆಸರಾಗಿವೆ. ಇವುಗಳನ್ನು ಸರಿಯಾಗಿ ಪೂಜಿಸಿ ತೃಪ್ತಿಪಡಿಸುವರೆ ಕೋಲ, ಪಾಡ್ದನಗಳೆಂಬ ಹಾಡುಗಳು, ಅದಕ್ಕನುಗುಣವಾದ ಕುಣಿಕೆ ಇತ್ಯಾದಿಗಳು ಜನರ ಚಿತ್ತವನ್ನಾಕರ್ಷಿಸುತ್ತವೆ. ಇವು ಪ್ರಾಯಃ ತುಳುನಾಡಿನಲ್ಲಿ ಮಾತ್ರ ಬಳಕೆಯಲ್ಲಿವೆಯೆಂದು ತೋರುವದು. ಇವುಗಳ ಪರಿಶೀಲನೆಯು (Anthropology) ಅಥವಾ ಸಮಾಜ ಬೆಳವಣಿಗೆಯ ಶಾಸ್ತ್ರದೃಷ್ಟ್ಯಾ ತುಂಬಾ ಲಾಭಕಾರಿಯಾಗಬಹುದು.

ಉತ್ತಮವಾದ ವಾಸ್ತುಶಿಲ್ಪ ಕಲೆಗಳಲ್ಲಿ ನೈಪುಣ್ಯವನ್ನು ಬಯಸಿದರೆ, ತುಳುನಾಡಿನ ದೇವಾಲಯಗಳ ಸೌಂದರ್ಯವೇ ನಮ್ಮ ಜನರ ದಕ್ಷತೆಗೆ ಸಾಕ್ಷ್ಯಗಳಾಗಿವೆ. ಮೊದಲೇ ಹೇಳಿದಂತೆ ಗುಮ್ಮಟನೆಂಬ ಭದ್ರಬಾಹುವಿನ ಶಿಲಾಪ್ರತಿಮೆಯನ್ನು ಮೊಟ್ಟಮೊದಲು ಅಂದರೆ ೯೮೧ A. D.ಯಲ್ಲಿ ಮೈಸೂರಿನ ಶ್ರವಣಬೆಳ್ಗೊಳದಲ್ಲಿ ದಿಗಂಬರ ಜೈನರಾಜನಾದ ಚಾಮುಂಡರಾಯನು ಕೆತ್ತಿದ್ದಾದರೂ ೧೪೩೨ನೆ ಇಸ್ವಿಯಲ್ಲಿ ಕಾರ್ಕಳದಲ್ಲಿಯೂ, ೧೬೦೩ರಲ್ಲಿ ವೇಣೂರಲ್ಲಿಯೂ ತೌಳವರೇ ಮಾಡಿ, ೫೦೦ ವರ್ಷದ ಮಳೆಗಾಳಿಗಳಿಂದ ಕೊಂಚವೂ ಮಾಸದೆ, ಮುಂಚಿನಂತೆಯೇ ಇರುವದು ಇವರ ಕರ್ಮನೈಪುಣ್ಯವನ್ನು ಒಡೆದು ತೋರಿಸುತ್ತದೆ. ಮೂಡುಬಿದರೆಯಲ್ಲಿ ಇದೇ ಜೈನರ ಸಾವಿರ ಕಂಬಗಳಿದ್ದ ಆಲಯವೊಂದಿದೆ. ಗಂಧ, ದಂತ,

ಮರದಲ್ಲಿ ನಾಜೂಕಾಗಿ ಚಿತ್ರಬಿಡಿಸುವವರೂ ಇವರಲ್ಲಿ ಅನೇಕರಿರುವರು. ನಮ್ಮ ದೇವಾಲಯಗಳಲ್ಲಿನ ಉತ್ಸವಕಾಲದ ರಥಗಳ ಬೆಡಗು ಬೇರೆಲ್ಲಿಯೂ ಕಂಡುಬರುವದೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮಲ್ಲಿಯ ಕೃಷಿಯ ಕ್ರಮಗಳನ್ನು ಸರಕಾರದ ಕೃಷಿ ಇಲಾಖೆಯ ಮೇಲಧಿಕಾರಿಗಳೇ ಅತ್ಯುತ್ತಮವಾದವುಗಳೆಂದು ಶ್ಲಾಘಿಸಿದ್ದಾರೆ. ವ್ಯವಸಾಯ, ವ್ಯಾಪಾರದೃಷ್ಟ್ಯಾ ವಿಚಾರಿಸಿದರೂ, ಬೆಲ್ಲ, ಹೆಂಡ, ಗೇರುಬೀಜ, ಮೀನು, ತೆಂಗಿನಕಾಯಿ, ತೆಂಗಿನೆಣ್ಣೆ, ಮಂಗಳೂರು ಹಂಚು ಇವೆಲ್ಲಾ ಯುರೋಪು ಅಮೇರಿಕಾ ದೇಶದ ವರೇಗೂ ವ್ಯಾಪಿಸಿ ಹೆಸರಾಗಿವೆ. ಸರಿಯಾದ ರೈಲು ಮಾರ್ಗ, ವಿದ್ಯುಚ್ಛಕ್ತಿಯ ಸಲಕರಣೆಗಳು ಸರ್ವತ್ರ ವ್ಯಾಪ್ತವಾದರೆ ಎಷ್ಟು ಉಪಕಾರವಾದೀತೆಂಬದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ. ಚರಿತ್ರದೃಷ್ಟ್ಯಾ ವಿಚಾರಿಸಿದರೂ ಅನೇಕ ರಾಜರೂ, ವೀರ ಯೋಧರೂ ಈ ನಾಡಿನಲ್ಲಿ ವಂಶಾವಳಿಗಳನ್ನು ಸ್ಥಾಪಿಸಿ ರಾಜ್ಯವಾಳಿದರೆಂದು ತಿಳಿಯುತ್ತದೆ. ಅಶೋಕ ಚಕ್ರವರ್ತಿಯ ಕಾಲದಲ್ಲಿಯೇ ಈ ದೇಶವು 'ಸತಿಯ ಪುತ್ರ'ವೆಂದು ಖ್ಯಾತಿಯನ್ನು ಹೊಂದಿತ್ತಂತೆ. ಅಬ್ಬಕ್ಕನೆಂದು ಹೆಸರಾದ ಇಲ್ಲಿಯ ರಾಣಿಯೊಬ್ಬಳು ಪೋರ್ಚುಗೀಸರನ್ನು ಹೊಡೆದೋಡಿಸಲು ಸಮರ್ಥವಾದ ನೌಕಾಪಡೆಯನ್ನಿಟ್ಟುಕೊಂಡಿದ್ದಳಂತೆ! ಇವರಲ್ಲಿರುವ ವಿದ್ಯಾವಂತರು ನೇಪಾಲದಿಂದ ಕನ್ಯಾಕುಮಾರಿಯ ವರೇಗೆ–ಹೆಚ್ಚೇಕೆ ವಿದೇಶಗಳಲ್ಲಿಯೂ— ಇಂಜಿನೀಯರು, ಡಾಕ್ಟರರು, ಪ್ರೊಫೆಸರರು, ಆಗಿರುವರು.

ಆದರೆ ಅವರ ಉಡಿಗೆತೊಡಿಗೆಗಳಲ್ಲಿ ಅವರ ನಾಡನ್ನು ಸೂಚಿಸುವ ವೈಶಿಷ್ಟ್ಯವು ತೋರಿಬರುವದಿಲ್ಲ; ಅವರಾಗಿ ತಮ್ಮ ನಾಡಿನ ಹಿರಿಮೆಯ ತುತೂರಿಯನ್ನೂದುವದಿಲ್ಲ. ಇದೇ ನಮ್ಮ ಜನರ Self sacrifice ಅಥವಾ ಸ್ವಾತ್ಮ ಸಮರ್ಪಣೆಯ ಪ್ರತೀಕ. ಕುವಲಯಾನಂದದಲ್ಲಿರುವ ಒಂದು ಶ್ಲೋಕ ಹೀಗಿದೆ:

ಅರ್ಧಂ ದಾನವ ವೈರಿಣಾ ಗಿರಿಜಯಾಪ್ಯರ್ಧಂ ಶಿವಸ್ಯಾಹೃತಂ
ದೇವೇತ್ಥಂ ಜಗತೀತಲೇ ಸ್ಮರಹರಾಭಾವೇ ಸಮುನ್ಮೀಲತಿ ।
ಗಂಗಾ ಸಾಗರಮಂಬರಂ ಶಶಿಕಲಾ ನಾಗಾಧಿಪಃ ಕ್ಷ್ಮಾತಲಂ
ಸರ್ವಜ್ಞತ್ವಮಧೀಶ್ವರತ್ವಮಗಮತ್ತ್ವಾಂ
ಮಾಂ ಚ ಭಿಕ್ಷಾಟನಂ ॥

ಇದರಲ್ಲಿ ಈಶ್ವರನೇ ಲೋಕದಲ್ಲಿಲ್ಲವೆಂದಾದ ಮೇಲೆ ಅವನನ್ನಾಶ್ರಯಿಸಿದ ಗಂಗಾದಿಗಳು ಬೇರೆ ಆಶ್ರಯದಾತರನ್ನು ಅಪೇಕ್ಷಿಸಿ ಹೋದಂತೆ, ತುಳುನಾಡಿನ ಅವಸ್ಥೆಯೂ ಆಗಿದೆಯೆಂದು ಹೇಳಬೇಕಾಗಿದೆ. ಆಚೆಯಿಂದ ಅಥವಾ ಸುತ್ತುಮುತ್ತು ಕನ್ನಡರಾಜ್ಯ–ಇದು ದಾನವವೈರಿಯ ಸ್ಥಾನದಲ್ಲಿ, ತೆಂಕಲಾಗಿ ಮಲೆಯಾಳರಾಜ್ಯ ಇದನ್ನು ಗಿರಿಜೆಯ ಸ್ಥಾನದಲ್ಲಿ ಕಲ್ಪಿಸಿಕೊಂಡು ತುಳುರಾಜ್ಯಕ್ಕೆ ವೈಶಿಷ್ಟ್ಯವೇ ಇಲ್ಲದಂತಾಗಿ ಅದನ್ನಾಶ್ರಯಿಸಿದ ಜನರು ಹೊಟ್ಟೆಪಾಡಿಗಾಗಿ ಬೇರೆ ಬೇರೆ ದೇಶಗಳಿಗೆ ಹೋಗಬೇಕಾದ ಪ್ರಸಂಗ ಬಂದೊದಗಿದೆ. ಇಂಥಾ ಸಂದರ್ಭದಲ್ಲಿ ನಮ್ಮ ಕರ್ತವ್ಯವೇನು? ಕಾಲ್ಡ್ವೆಲ್ (Dr. Caldwell) ಎಂಬ ಮಹನೀಯನೇ ಇದನ್ನು peculiar and very interesting language, most highly developed language—ಒಳ್ಳೇ ಪರಿಷ್ಕೃತವಾದ ಭಾಷೆಯೆಂದೊಪ್ಪಿರುವನು. ಬ್ರೈಜೆಲ್ ಎಂಬ ಇನ್ನೊಬ್ಬ ಭಾಷಾತತ್ತ್ವವೇತ್ತನು ಇದರ ಹೆಸರು ಅನ್ವರ್ಥವಾಗಿರುವದೆಂದರೆ ಈ ಭಾಷೆಯು ಸರಳ, ಮೃದು ಮಧುರವಾಗಿದೆಯೆಂದು ತಲೆದೂಗಿರುವನು. ತುಳು ಮಾತಿನಲ್ಲಿ ಮೆಲ್ಪು ಇದೆ, ಸಂಸ್ಕೃತಿ ಇದೆ. ಕನ್ನಡಕ್ಕಿಂತಲೂ ಸರಾಗವಾಗಿ ಜೀವನವನ್ನು ಚಿತ್ರಿಸಲು ಬೇಕಾದ ಶಬ್ದ ಸಂಪತ್ತಿಯಿದೆ. ಸಂಸ್ಕೃತಕ್ಕೆ ಮಣಿಯದೆ ತಾನಾಗಿ ನಿಂತಿರುವ ಭಾಷೆ ತುಳು. ತುಳು ಶಬ್ದಭಾಂಡಾರವನ್ನು ಪರಿಶೀಲಿಸಿದರೆ, ಪಾಡ್ದನಗಳನ್ನು ಕಿವಿಗೊಟ್ಟು ಕೇಳಿದರೆ, ಹಳ್ಳಿ ಜನರ ಮಾತಿನಲ್ಲಿ ಕಂಡುಬರುವ ಗಾದೆಗಳ ಅರ್ಥವನ್ನು ಯೋಚಿಸಿದರೆ, ನಮ್ಮ ಉಚ್ಚ ಸಂಸ್ಕೃತಿಯ ಮಟ್ಟವನ್ನು ನಾವು ಕಂಡುಹಿಡಿಯಬಹುದಲ್ಲವೇ?

▪▪▪▪▪▪▪▪



ಮಾಂದಿಯ ಮನವಿ

(ವಿಡಂಬನಾತ್ಮಕ)

[ಲೇಖಕರು: ಶ್ರೀ ಕೆ. ಎ. ದೇವದಾಸ, ಶಿರೋಮಣಿ, ಉಡುಪಿ]

ಮಹಾರಾಜಶ್ರೀಗಳಾದ ಅಖಿಲ ಭಾರತ ಜ್ಯೋತಿಷ್ಯ ಮಹಾಮಂಡಲದ ಅಧ್ಯಕ್ಷರ ನ್ಯಾಯದೃಷ್ಟಿಯ ಸಮಕ್ಷಮಕ್ಕೆ:-

ತ್ರೈಲೋಕ್ಯದೀಪನಾದ ರವಿದೇವನ ಮೊಮ್ಮಗನೂ, ಕಂಟಕ—'ಸಾಡೇಸಾತ್ತು'ಗಳಿಂದ ಲೋಕಪ್ರಸಿದ್ಧನಾ ಶನೀಶ್ವರರ ಅಂಗಜಾತನೂ ಆದ ಮಾಂದಿ ಯಾನೆ ಗುಳಿಗನು ಮಾಡುವ ಒತ್ತಾಯಪೂರ್ವಕದ ವಿನಂತಿಗಳು:—

ಮಾನ್ಯ ವಿದ್ವನ್ಮಣಿಗಳೇ,

ನಾನು— ನೀವು ಗೀಚುವ ಗ್ರಹಚಕ್ರದಲ್ಲಿ ಶಾಸ್ತ್ರಪ್ರಕಾರವ ನಿಮ್ಮಂಥವರ ಸಿದ್ಧಾಂತ ಪ್ರಕಾರ ಇತರ ಗ್ರಹಗಳಂತೆ ಬಹುಕಾಲದಿಂದಲೂ ಇದ್ದುಕೊಂಡು, ಆ ಚಕ್ರಧರ್ಮವನ್ನು ಪರಿಪಾಲಿಸುತ್ತಾ ಬಂದಿರುತ್ತೇನೆಂಬ ವಾಸ್ತವ ಸಂಗತಿ ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ಆದರೆ ಇತರ ಗ್ರಹಗಳಿಗೆ ನೀವುಗಳು ವಾ ನಿಮ್ಮ ಹಳೇ ಹಿರಿಯರು ಕಲ್ಪಿಸಿಕೊಟ್ಟಂತೆ ನಕ್ಷತ್ರಾಧಿಪತ್ಯ, ಕ್ಷೇತ್ರಾಧಿಪತ್ಯ, ದಶಾಧಿಕಾರ ಈ ಯಾವುದೂ ನನಗೆ ಸಿಗದೆ, 'ಕಲ್ಲಿಲ್ಲದ ಗುಳಿಗ' ಎಂಬ ಗಾದೆಗೂ ಗುರಿಯಾಗಿ ಬಿಟ್ಟಿದ್ದೇನೆ. ಇದು ಶೋಚನೀಯವಲ್ಲವೇ? ದೈವಜ್ಞ ಶಿಖಾಮಣಿಗಳಾದ ನಿಮ್ಮಂಥವರಿಗೊಬ್ಬರಿಗಾದರೂ ನನ್ನ ವಿಷಯವಾಗಿ ಯಾಕೆ ಕನಿಕರ ಹುಟ್ಟಲಿಲ್ಲವೋ ನನಗೇನೇ ತಿಳಿಯದಾಗಿದೆ. ಇರಲಿ—ನನ್ನಲ್ಲಿ ಗುಟ್ಟಿಲ್ಲ; ಇದ್ದುದನ್ನು ಮರೆಮಾಚಿ, ಮುಖಕ್ಕೆ ತಕ್ಕಂತೆ ಮಾತನಾಡುವ ಗೋಮುಖ ವ್ಯಾಘ್ರನು ನಾನಲ್ಲ. ತಿಳಿಯಿತೇ? ನನ್ನ ಸ್ವಭಾವ ನಿಮಗೆ ಗೊತ್ತಿದೆ. ಆದ್ದರಿಂದ ನನ್ನೀ ರಭಸವಾಣಿಗೆ ಸಿಟ್ಟಾಗಲಾರಿರೆಂದು ನಂಬಿಕೊಳ್ಳುತ್ತೇನೆ.

ಹುಂ! ಘನ ಪಂಡಿತೋತ್ತಮರೇ, ಇತ್ತ ಕೇಳಿರಿ. ತುದಿಬುಡವಿಲ್ಲದ ಆ ರಾಹು ಕೇತುಗಳಿಗೂ ಕೂಡಾ ನಿಮ್ಮಂಥವರು ಇತ್ತೀಚೆಗೆ ದಶಾಧಿಕಾರವನ್ನೂ ಇನ್ನೇನನ್ನೆಲ್ಲಾ ಕೊಟ್ಟು ಸಾಕುತ್ತೀರಿ. ಮೊದಮೊದಲು ರಾಹುವಿಗೆ ಮಾತ್ರ ಕೊಟ್ಟಿದ್ದೀರಿ. ಕ್ರಮೇಣ ಕೇತುವಿಗೂ ಪಟ್ಟಕಟ್ಟಿದಿರಿ. ಜ್ಯೋತಿರ್ಮಣಿಗಳಾದ ಆ ರವಿ ಚಂದ್ರರನ್ನು ಪೀಡಿಸುವ ಆ ಕಾಳಸರ್ಪಗಳಿಗೆ ಹಾಲೆರೆಯುತ್ತೀರಲ್ಲವೇ? ನೆನೆದರೆ ನನಗೇ ಆಶ್ಚರ್ಯವಾಗುತ್ತದೆ. ಆ ಕಾಳ ಸರ್ಪನನ್ನೂ ಆ ಛಿದ್ರ ಮೂರ್ತಿಯನ್ನೂ ಸಂತೋಷಗೊಳಿಸಲು ನಿಮ್ಮವರ ಪ್ರಯತ್ನವಾಗಿದ್ದಿರಬೇಕು. ಆದರೇನಾಯಿತು? 'ನಳಿಕಾಗತಮಪಿ ಕುಟಿಲಂ—' ಸೂರ್ಯ ಚಂದ್ರರಿಗೆ ಗ್ರಹಣವಾಗುವದು ನಿಲ್ಲುವ ಕಾಲವುಂಟೇ? ಒಂದು ಸಂತೋಷದ ಸಂಗತಿಯೇನೆಂದರೆ—ಪುಣ್ಯಕ್ಕೆ ಅವರಿಬ್ಬರಿಗೆ ವಾರಾಧಿಪತ್ಯ ಕೊಡಲಿಲ್ಲ. ಅದೇ ದೊಡ್ಡದು. ಇರಲಿ.

ಕೋವಿದರೇ, ನೀವು ನನಗೆ ಅಧಿಕಾರ ಕೊಡಬೇಕೆಂದು ನಾನೇನೂ ಈ ಮನವಿಯಲ್ಲಿ ಯಾಚಿಸಿಕೊಳ್ಳುತ್ತೇನೆಂದು ಭಾವಿಸಿಕೊಳ್ಳಬೇಕಾಗಿಲ್ಲ. ಇಷ್ಟವಿದ್ದರೆ ಕೊಡಿರಿ, ಇಲ್ಲವೇ ಬಿಡಿರಿ. ನಾನು ಸರ್ವಸ್ವತಂತ್ರನು. ನನ್ನನ್ನು ಏನು ಮಾಡಲಿಕ್ಕೂ ಯಾರಿಗೂ ಸಾಧ್ಯವಿಲ್ಲ. ಕಡಿಮೆಯೆಂದರೆ ಆರು ಸಾವಿರ ವರ್ಷಗಳಿಂದ ನಾನೀ ನಿಮ್ಮ ಮರ್ತ್ಯಭೂಮಿಯಲ್ಲಿ ಮನಬಂದಂತೆ ಮೆರೆದಾಯಿತು. ಇನ್ನೂ ಮೆರೆದೇನು ಎಂಬ ಧೈರ್ಯ ನನಗಿದೆ. ಆದರೂ ನಿಮಗೆ ನನ್ನ ವಿಷಯ ಯೋಚನೆ ಬರಲಿಲ್ಲವಲ್ಲ—ಅದೇ ಆಶ್ಚರ್ಯ. ಪಾಶ್ಚಿಮಾತ್ಯರು ನನ್ನನ್ನು ಒಂದು ಕತ್ತಲೆ ಎಂದಷ್ಟೇ ತಿಳಿದಿದ್ದಾರೆ. ಇರಲಿ—ಅವರಿಗೆ ನನ್ನ ಮೂಲ ಗೊತ್ತಿಲ್ಲವೆನ್ನುವಾ. ಮಾನ್ಯ ಅಧ್ಯಕ್ಷರೇ, ನನಗೆ ನನ್ನ ಯೋಗ್ಯತೆಯರಿತು ಸ್ಥಾನಮಾನ ಕೊಡದಿದ್ದರೆ ಮುಂದಕ್ಕೆ ಹಾನಿಯಿದೆ. ಯೋಚಿಸಿಕೊಳ್ಳಿರಿ. ಇಷ್ಟಬಂದಾಗ ತೋರಿದಲ್ಲಿ ನಿಂತು ಕಿಡಿಹಾರುವ ನನ್ನೀ ಮುಕ್ಕಣ್ಣುಗಳನ್ನು ತೆರೆದು ಪ್ರಪಂಚವನ್ನೇ ತತ್ತರಿಸುವಂತೆ ಮಾಡಿಬಿಡುವೆನು. ಆಗ ತಡೆಯುವವರಾರೆಂದು ನೋಡಿಬಿಡುವೆನು.

ಸತ್ಯ ಸಂಗತಿಯನ್ನು ವಿಸ್ತರಿಸಲೇ? ನಿಮ್ಮ ಭರತ ಖಂಡದಿಂದ ಬ್ರಿಟಿಷರು ತೊಲಗಿದ ಹಾಗೂ ನಿಮ್ಮವರೊಬ್ಬೊಬ್ಬರೇ ಒಂದೊಂದು ಅಧಿಕಾರವನ್ನೇರಲು ಹೋರಾಡತೊಡಗಿದಾಗ ಫಕ್ಕನೇ ನನಗೂ ಒಂದು ಯೋಜನೆಯು ತಲೆಯಲ್ಲಿ ಮಿಂಚಿತು. ಆ ಕಾಲಗಳಲ್ಲೆಲ್ಲಾ ನಾಗಸಾಕಿ, ನೌಖಾಲಿ, ಬೀಹಾರ್, ಹೈದರಾಬಾದ್ ಮುಂತಾದ ಕಡೆಗಳಿಗೆ ನನಗೆ ಆಗಾಗ ವಾಯುವೇಗದ ಸಂಚಾರವಿದ್ದುದರಿಂದ ಈ ವಿಷಯದಲ್ಲಿ ಕೈಹಾಕಲು ಬಿಡುವು ದೊರೆಯಲಿಲ್ಲ. ಕಳೆದ ವಿಕೃತಿ ಸಂವತ್ಸರ—ನನ್ನ ಅಜ್ಜನಾದ ಸೂರ್ಯದೇವನು ಚಾಂದ್ರ ಸ್ಥಾನದ ರಾಜನಾಗಿದ್ದುದರಿಂದ ಇದೇ ಸುಸಮಯವೆಂದು ಭಾವಿಸಿದೆನು. ಗ್ರಹಗಳ ಮಟ್ಟಿಗೆ ಒಂದು ಶಿಫಾರಸುಮಾಡಿಸಬೇಕೆಂದು ನಾನು ನನ್ನ ತಂದೆಯೊಡನೆ ಹೇಳಿಕೊಳ್ಳಲಿಕ್ಕಾಗಿ ಹೋದೆನು. ಅಂತರಿಕ್ಷದಲ್ಲಿ ಅವರು ಅತಿ ದೂರದಲ್ಲಿರುವವರಾದರೂ ನಾನು ನಿಮ್ಮ ಆಂಜನೇಯನು ಹಾರಿದುದಕ್ಕಿಂತಲೂ ಸೊಗಸಾಗಿ ಮೇಲಕ್ಕುರುಳಿದೆನು. ಆದರೇನು ಫಲ? ನನ್ನ ತಂದೆಗೂ ಅಜ್ಜನಿಗೂ ಏನೋ ಮನಸ್ತಾಪವಿದ್ದುದರಿಂದ ಅವರು ನನ್ನೊಡನೆ ಹೀಗೆಂದರು—'ಮಗೂ, ಅವಸರಪಡಬೇಡ. ಕೆಲಸವು ಮುಂದವಾಗಿ ನೆರವೇರುವದು. ನೀನೀಗ ಕೆಳಕ್ಕುರುಳು. ಮುಂದಿನ ಖರ ಸಂವತ್ಸರದಲ್ಲಿ ನಾನೂ ಶುಕ್ರನೂ ರಾಜಪದವಿಗೆ ಉಮೇದ್ವಾರರಾಗುತ್ತೇವೆ. ಚಾಂದ್ರರ ಕಡೆಯಿಂದಲೂ ಸೌರರ ಕಡೆಯಿಂದಲೂ—ಎರಡು ಕಡೆಯಿಂದಲೂ ನಿಲ್ಲುವೆವು. ಒಂದು ಕಡೆಯ ಸ್ಥಾನ ನನಗೆ ಸಿಕ್ಕದಿರಲಾರದು. ಎರಡೂ ಕಡೆಯ ರಾಜತ್ವ ಸಿಕ್ಕದಿದ್ದರೆ, ಒಂದು ಕಡೆಯ ರಾಜತ್ವವನ್ನೂ ಮತ್ತೊಂದು ಕಡೆಯ ಪ್ರಧಾನ ಮಂತ್ರಿಪದವಿಯನ್ನೂ ದೊರಕಿಸುವರೆ ಬೇಕಾದ ವ್ಯವಸ್ಥೆ ಮಾಡಿದ್ದೇನೆ. ಆಗ ನಾನು ನಿನಗೂ ರಾಶಿ, ದಶಾದಿ ಅಧಿಕಾರಗಳನ್ನು ಕೊಡಿಸುವೆನು' ಎಂದರು. ಆದರೆ ಖರ ಸಂವತ್ಸರದಲ್ಲಿ ನನ್ನ ಶ್ರದ್ಧೆಯೆಲ್ಲಾ ಕೋರಿಯಾ ಮುಂತಾದೆಡೆಯಾದುದರಿಂದ ಈ ಕಾರ್ಯವು ಅಷ್ಟರಲ್ಲೇ ನಿಂತುಹೋಯಿತು.

ಇದೀಗ ನಂದನ ಸಂವತ್ಸರ. ನನ್ನ ತಂದೆಯು ಸೌರ ರಾಜಪಟ್ಟವನ್ನೂ ಚಾಂದ್ರ ರಾಜನಾದ ಬುಧನ ಮುಖ್ಯ ಮಂತ್ರಿಪದವಿಯನ್ನೂ ಗಳಿಸಿಕೊಂಡಿದ್ದಾರೆ. ಆದ್ದರಿಂದ ನನಗೆ ಅಧಿಕ ಸ್ಥಾನಮಾನಗಳನ್ನು ಕೊಡುವ ವಿಚಾರದಲ್ಲಿ ಎರಡೆಣಿಸುವರೆ ಗ್ರಹಮಂಡಲದವರಿಗೆ ಯಾರಿಗೂ ಧೈರ್ಯವಿರಲಾರದು. ಆದ್ದರಿಂದ ಗ್ರಹಾನುಕೂಲವಿರುವ ಈ ಶನಿಯ ಭರಣಕಾಲದಲ್ಲಿ ನೀವುಗಳು ನನಗೆ ರಾಶಿಗಳಲ್ಲಿ ಒಂದು ಮನೆಯನ್ನೂ, ಕೆಲಮಂದಿ ತಾರೆಯರನ್ನೂ, ದಶಾಧಿಕಾರವನ್ನೂ ಕಲ್ಪಿಸಿಕೊಡಲು ಈಗಾಗಲೇ ಸಿದ್ಧರಾಗಬೇಕೆಂದು ನಾನು ನನ್ನ ಎದೆಯನ್ನು ಬಿಗಿಹಿಡಿದು, ಕೈಲಾದಷ್ಟು ವಿನಯವನ್ನು ಒಟ್ಟುಗೂಡಿಸಿ, ನಿಮ್ಮೊಡನೆ ಕೇಳಿಕೊಳ್ಳುತ್ತೇನೆ. ಏಕೆಂದರೆ—ಗ್ರಹಗಳು ಅಂತರಿಕ್ಷದಲ್ಲಿ ಎಲ್ಲಿದ್ದರೂ, ಏನೇನು ಮಾಡಿದರೂ ಇಂದು ಲೋಕದಲ್ಲಿ ನಿಮ್ಮ ಸಿದ್ಧಾಂತಗಳಿಗೆ ಮಾತ್ರ ಬೆಲೆ. ನೀವು ನವೀನ ದೃಷ್ಟಿಯಿಂದ ಗಣಿಸಿದರೂ ಸರಿ, ಪ್ರಾಚೀನ ದೃಷ್ಟಿಯಿಂದ ಗಣಿಸಿದರೂ ಸರಿ—ನನಗೆ ಬೇಕಾದುದು ಅದೇ—ನಾನು ಮೇಲೆ ಹೇಳಿದ್ದೇ.

ನನ್ನ ಯೋಗ್ಯತೆಯು ನಿಮಗೆಲ್ಲರಿಗೂ ಗೊತ್ತಿರುವದೇ ಆಗಿದೆ. ಆದರೂ–ಊದುವ ಶಂಖವನ್ನು ಊದಿಯೇ ಬಿಡುತ್ತೇನೆ. ಭಗವಾನ್ ಶ್ರೀರಾಮಚಂದ್ರನ ಕಾಲದಲ್ಲಿ, ಲಂಕೆಯ ರಾವಣನ ಪುತ್ರನಾದ ಇಂದ್ರಜಿತುವಿನ ಸಂಹಾರಕ್ಕಾಗಿ, ಆತನು ಹುಟ್ಟುವುದಕ್ಕೆ ಸ್ವಲ್ಪ ವಿಗಳಿಗೆ ಮುಂಚಿತ ಲಂಕೆಯಲ್ಲಿ ನನ್ನ ಜನನವಾಯಿತು. ನಿಮ್ಮ ಅಟಂ ಬಾಂಬಿಗಿಂತಲೂ ಭಯಂಕರವಾದ ನನ್ನ ದೃಷ್ಟಿಯು ಆ ಇಂದ್ರಜಿತುವಿನ ಅಷ್ಟಮಕ್ಕೆ ಬೀಳದಿರುತ್ತಿದ್ದರೆ ನಿಮ್ಮ ಲಕ್ಷ್ಮಣನಿಗೆ ಆತನು ಬಲಿಯಾಗುತ್ತಿರಲಿಲ್ಲವೆಂಬುದು ನಿಮಗೆ ತಿಳಿಯದ ವಿಷಯವಲ್ಲ. ಅಂದಿನ ರಾಮರಾಜ್ಯದ ಮೂಲಕರ್ತೃವು ನಾನಾದುದರಿಂದ ಅಂದಿನಿಂದಿಂದಿನ ವರೆಗೂ ಗ್ರಹಮಂಡಲದಲ್ಲಿ ಉರುಳಾಡುವ ಸಂಯೋಗ ವೊದಗಿತು. ಓ ಸಿದ್ಧಾಂತಿಗಳೇ, ಇಂದು ನೀವು ಬಯಸುವ ರಾಮರಾಜ್ಯದ ಕನಸು ನನಸಾಗಬೇಕಾದರೆ–ಅದು ನನ್ನಿಂದಲೇ ಆಗಬೇಕು. ಈ ಸೂರ್ಯವಂಶದ ಮಾಂದಿಗೆ ಒಂದು ಅಧಿಕಾರವನ್ನು ಕೊಡಿಸಿರಿ. ಒಂದೇ ನೋಟದಿಂದ ರಾಷ್ಟ್ರಘಾತುಕರ ವಂಶವನ್ನೇ ನಿರ್ಮೂಲವಮಾಡಿಬಿಡುವೆನು. ಇರುಳಿದ್ದಲ್ಲಿ ಹಗಲಿಲ್ಲ—ಹಗಲಿದ್ದಲ್ಲಿ ಇರುಳಿಲ್ಲದ ರೀತಿಯು ನನ್ನ ಇರವಿನ ಅರಿವನ್ನು ಪ್ರಪಂಚಕ್ಕೆ ತೋರಿಸಿಕೊಡುವೆನು. ಕೊಡಿರಿ ನನಗಧಿಕಾರ; ಸಿಗಲಿ ಮನೆ ನನಗೂ; ಬರಲಿ ನನ್ನೆಡೆಗೆ ಚೆಲು ತಾರೆಗಳು.

ಭಾರತದ ಭವಿಷ್ಯ-ವಿಜ್ಞಾನಿಗಳೇ, ಇನ್ನೊಂದೆರಡು ಮಾತುಗಳನ್ನು ಹೇಳಿ ನನ್ನೀ ಮನವಿಯನ್ನು ನಾನೇ ಕೊನೆಗಾಣಿಸಿಬಿಡುತ್ತೇನೆ. ಮಹಾವಿಷ್ಣುವಿನ ಅಂಶದಿಂದ ಕಪ್ಪು ಬಣ್ಣವನ್ನೂ ರುದ್ರಾಂಶದಿಂದ ತ್ರಿನೇತ್ರ-ತ್ರಿಶೂಲಗಳನ್ನೂ ತಾಳಿ, ಅಷ್ಟ ನಾಗಗಳಲ್ಲಿ ಒಬ್ಬನಾಗಿ ಮೆರೆದು, ಕೇರಳದಲ್ಲಿ ಅಲ್ಲಲ್ಲಿಯ ಭೂಭಾಗಗಳ ಪಾಲಕನೆಂದೆನಿಸಿ ಭಕ್ತರಿಂದ ಅಮೃತವನ್ನು ಕೈಕೊಳ್ಳುವ ದೈವವಲ್ಲವೇ ನಾನು! ನಾನು ಸಂತೃಪ್ತನಾದರೆ ಗರ್ಭಿಣಿಯರಿಗೆ ಸುಖಪ್ರಸವವಾಗುವಂತೆ ಅನುಗ್ರಹಿಸುತ್ತೇನೆ. ನನ್ನ ಉದಯವಾದಲ್ಲಿ ಗೃಹಪ್ರವೇಶಮಾಡಿದವರ ಮನೆಯನ್ನು ಹೊನ್ನಿನಿಂದ ತುಂಬುವೆನು. ದೇವಾಲಯದ ಪ್ರತಿಷ್ಠಾಮಹೋತ್ಸವವು ನನ್ನಿಂದಲೇ ನೆರವೇರಿದರೆ ಕಲೆ ತುಂಬುವದು. ನನ್ನ ಉದಯವೇ ಮಂಗಲಕರ. ಇಂತಹ ಯೋಗ್ಯತೆಯು ಮತ್ತಾರಿಗಿದೆ! ಹೆಚ್ಚೇಕೆ—ನೀವುಗಳು ನನ್ನ ಶಕ್ತಿ ಯೋಗ್ಯತೆಗಳನ್ನು ಪರಾಂಬರಿಸಿದರೆ ನನ್ನನ್ನು ಗ್ರಹನಾಯಕಪದವಿಗೇರಿಸಬಹುದೆಂದು ನನಗೇ ತೋರುತ್ತದೆ.

ಭಾರತದ ಸಾಂಸ್ಕೃತಿಕ ದಿಗ್ವಿಜಯ

[ಲೇಖಕ: ವೈದ್ಯಗುರು ಎಂ. ಆರ್. ಭಟ್]

ವಿಶ್ವದ ಇತಿಹಾಸದಲ್ಲಿ ಶಕ್ತಿಸಂಪನ್ನ ರಾಜನೈತಿಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಪ್ರತಾಪಶಾಲೀ ದಿಗ್ವಿಜಯಶಾಲಿಗಳು ಅನೇಕರಿರುವರು. ಹಮ್ಮೂರಬ್ಬೀ, ದಾರಾ, ಸಿಕಂದರ, ಸೀಜರ, ಸಮುದ್ರಗುಪ್ತ, ಶಾರ್ಲಮೇಗನ್, ಚಂಗೆಜಖಾನ, ತೈಮೂರ, ಬಾಬರ ಮತ್ತು ನೆಪೋಲಿಯನರು ವಿಶಾಲ ಸಾಮ್ರಾಜ್ಯಗಳ ಸಂಸ್ಥಾಪಕರಾಗಿದ್ದರು; ಬ್ರಿಟಿಶ್ ಸಾಮ್ರಾಜ್ಯವು ಸುಮಾರು ೨೦೦ ವರ್ಷಗಳ ತನಕ ಭೂಮಂಡಲದ ಚತುರ್ಥಾಂಶದ ಮೇಲೆ ವಿಸ್ತೀರ್ಣವಾಗಿತ್ತು; ಆದರೆ ಇವುಗಳೆಲ್ಲವುಗಳ ಉದ್ದೇಶವು ವೈಯಕ್ತಿಕ ಗೌರವ ಹಾಗೂ ಮಹತ್ತ್ವಾಕಾಂಕ್ಷೆಗಳ ಪೂರ್ತಿ, ಸ್ವಾರ್ಥಲಾಲಸೆ ಮತ್ತು ಪರಾಜಿತರ ಶೋಷಣವಾಗಿತ್ತು. ಸೇನೆಗಳು ತಲವಾರ ತೋಫುಗಳನ್ನು ಉಪಯೋಗಿಸಿ, ಬಾರೂದು ಬೊಂಬುಗಳಿಂದ ಹಾಗೂ ಪಿಶಾಚ ಕ್ರೂರತೆ ಹಾಗೂ ಅಸಭ್ಯವರ್ತನೆಗಳಿಂದ, ಈ ಸಕಲ ಸಾಮ್ರಾಜ್ಯಗಳು ಸ್ಥಾಪಿತವಾದವು; ಆದರೆ, ಇವುಗಳಿಗಿಂತ ವಿಲಕ್ಷಣ ಒಂದು ಸಾಂಸ್ಕೃತಿಕ ಸಾಮ್ರಾಜ್ಯಕ್ಕೆ ಭಾರತವು ಜನ್ಮ ನೀಡಿತು; ಆ ಸಾಮ್ರಾಜ್ಯದ ಉದ್ದೇಶವು ಲೋಕಕಲ್ಯಾಣವಾಗಿತ್ತು; ಅದರ ಸಾಧನವು ಶಸ್ತ್ರಧಾರೀ ಸೈನಿಕರಾಗಿರಲಿಲ್ಲ; ಕಾಷಾಯವಸ್ತ್ರಧಾರೀ ಧರ್ಮದೂತ ಮತ್ತು ಭಿಕ್ಷುಗಳಾಗಿದ್ದರು. ಪ್ರಸಿದ್ಧ ಫ್ರೆಂಚ್ ಪುರಾತತ್ತ್ವವೇತ್ತ 'ಸಿಲ್ವ್ಯಾಂ ಲೇವೀ'ಯವರ ಶಬ್ದಗಳಲ್ಲಿ—"ಭಾರತವು ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಾಮ್ರಾಜ್ಯಗಳನ್ನು ಸ್ಥಾಪಿಸಿದ ಕಾಲದಲ್ಲಿ, ಇಡೀ ಜಗತ್ತು ಅಸಭ್ಯತಾಪೂರ್ಣಕೃತ್ಯಗಳಲ್ಲಿ ಮಗ್ನವಾಗಿ, ಮುಳುಗಿ ಹೋಗಿತ್ತು; ಇಂದಿನ ಸಾಮ್ರಾಜ್ಯಗಳು ಅವುಗಳಿಗಿಂತ ಅಧಿಕ ವಿಸ್ತೃತಗಳಾಗಿರಬಹುದು; ಆದರೆ ಉಚ್ಚತ್ವದ ದೃಷ್ಟಿಯಿಂದ ಅವುಗಳು ಇಂದಿನದವುಗಳಿಗಿಂತ ಅಧಿಕ ಮೆರೆದಿದ್ದವು; ಯಾಕಂದರೆ, ವರ್ತಮಾನ ಸಾಮ್ರಾಜ್ಯಗಳಂತೆ, ವಾಯುಯಾನ ಮತ್ತು ವಿಷಮಯ ಗೇಸುಗಳಿಂದ ಸ್ಥಾಪಿತವಾಗದೆ, ಸತ್ಯ ಮತ್ತು ಶ್ರದ್ಧೆಯ ಆಧಾರದ ಮೇಲೆ ಪ್ರತಿಷ್ಠಿತವಾಗಿದ್ದವು."

ಭಾರತದ ಈ ವಿಲಕ್ಷಣ ಸಾಂಸ್ಕೃತಿಕ ಸಾಮ್ರಾಜ್ಯವು ಸ್ಯಾಬೇರಿಯಾದಿಂದ ಸಿಂಹಲದ್ವೀಪ ಮತ್ತು ಇರಾನಿನಿಂದ ಬೋರ್ನಿಯೋ ಮತ್ತು ಬಾಲೀದ್ವೀಪಗಳ ತನಕವಿರುವ ವಿಶಾಲ ಪ್ರದೇಶದಲ್ಲಿ ಸ್ಥಾಪಿತವಾಯಿತು. ಮಧ್ಯ ಏಸ್ಯದ ಆಗರ ಅಗ್ರಹಾರಗಳಲ್ಲಿ ತಿಬೇಟ, ಮಂಗೋಲಿಯಾ ಮತ್ತು ಮಂಚೂರಿಯಾದ ಗುಡ್ಡೆಗುಹೆಗಳಲ್ಲಿ, ಇರಾನಿನ ಉನ್ನತ ಪರ್ವತ ಶಿಖರಗಳಲ್ಲಿ, ಸ್ಯಾಬೇರಿಯದ ಹಿಮಮಯ ಪ್ರದೇಶಗಳಲ್ಲಿ, ಮಲಾಯಾ ಹಾಗೂ ಹಿಂದೇಶಿಯಾದ ದ್ವೀಪಗಳಲ್ಲಿ ಭಾರತವು ತನ್ನ ಸಂಸ್ಕೃತಿಯ ದೃಢ, ಶಾಶ್ವತ ಹಾಗೂ ಗಂಭೀರವಾದ ಮುದ್ರೆಯನ್ನು ಈ ಪ್ರದೇಶಗಳ ಧರ್ಮ, ಕಲಾ ಮತ್ತು ಸಾಹಿತ್ಯಗಳ ಮೇಲೆ ಒತ್ತಿರುತ್ತದೆ; ಒಂದು ಕಾಲದಲ್ಲಿ ಭಾರತೀಯ ಸಂಸ್ಕೃತಿಯು ಸಾಹಸಯುಕ್ತ ಆವಾಸಕ ಹಾಗೂ ಭಿಕ್ಷುಗಳಿಂದ ಒಂದು ಅಪೂರ್ವ ಹಾಗೂ ಅದ್ಭುತ ದಿಗ್ವಿಜಯ ಮಾಡಿತು. ಮೊತ್ತಮೊದಲು, ದಕ್ಷಿಣದಲ್ಲಿರುವ ಶ್ರೀಲಂಕೆಯಲ್ಲಿ ಧರ್ಮವಿಜಯದಿಂದ ಸಾಮ್ರಾಜ್ಯ ಸ್ಥಾಪಿಸಿತು; ಪೂರ್ವದಿಕ್ಕಿನಲ್ಲಿ

ಆದ್ದರಿಂದ—ಓ ಜ್ಯೋತಿಷ್ಯತಲ್ಲಜರೇ, ನನ್ನ ಕೇಳಿಕೆಯನ್ನು ಪೂರೈಸಿರಿ. ನನ್ನ ನೋಟಕ್ಕೆ ಶುಕ್ರಾಚಾರ್ಯರ ರೀತಿ ಮುಹೂರ್ತಭಂಗಮಾಡುವ ಶಕ್ತಿಯಿದೆಯೆಂಬ ಬೆದರಿಕೆ ಬೇಡ—ಅಧಿಕಾರಕೊಡಿರಿ. ಮೂರೂ ಮುಕ್ಕಾಲು ಗಳಿಗೆಯೊಳಗೆ ಭಾರತದೇಶದಲ್ಲಿ ನಡೆಯುವ ಕಳ್ಳಸಂತೆ, ಲಂಚ, ಮೈಗಳ್ಳತನ, ಕೊಲೆ, ಸುಲಿಗೆ, ದುರಾಡಂಬರ, ಅಧಾರ್ಮಿಕತನ ಮೊದಲಾದ ಆ ಷಡ್ವೈರಿ ಸಂತಾನಗಳನ್ನು ನಿರ್ಮೂಲಗೊಳಿಸುವೆನು. ನನ್ನ ಕೇಳಿಕೆಯನ್ನು ನೀವು ಪೂರೈಸದಿದ್ದರೆ, ಬಿಕ್ಕಟ್ಟು, ವಂಚನೆ, ಹಿಂಸೆ, ಅತ್ಯಾಚಾರ, ರೋಗ, ದುರ್ಮರಣ ಮೊದಲಾದ ಪ್ರಯೋಗಗಳಿಂದ ರಾಷ್ಟ್ರದಲ್ಲಿ ಎಲ್ಲೆಡೆಯಲ್ಲೂ ಗುಲ್ಲೆಬ್ಬಿಸಿಬಿಡುವೆನು. ತಿಳಿದಿರಲಿ—

ಇತಿ ರುದ್ರಪ್ರತಿರೂಪೀ ಗುಳಿಗ ಯಾನೆ ಮಾಂದಿಯ
ಹುಂಕಾರಾತ್ಮಕ ವಿನಂತಿಗಳು.

ವಿ. ಸೂ.: ಕ್ಷೇತ್ರಗಳನ್ನೂ ನಕ್ಷತ್ರಗಳನ್ನೂ ನನಗೆ ಇನ್ನು ಪ್ರತ್ಯೇಕಿಸಿಕೊಡಲಿಕ್ಕೆ ಸಾಧ್ಯವಾಗದಿದ್ದರೆ ಬೇಡ. ನನಗೆ ಎಲ್ಲಾ ಗ್ರಹಗಳ ಕ್ಷೇತ್ರಗಳಲ್ಲೂ ದಶೆಗಳಲ್ಲೂ ಭುಕ್ತಿ ಛಿದ್ರಗಳಲ್ಲೂ ಅತಿ ಕಡಿಮೆಯಾದ ಒಂದೊಂದು ಅಂಶವನ್ನು ಕೊಡಿಸಿರಿ; ಆ ನವಗ್ರಹಗಳ ತಾರೆಗಳನ್ನೇ ಅತಿ ಸ್ವಲ್ಪಕಾಲಕ್ಕೆ ನನಗೆ ಬಿಟ್ಟುಕೊಡಲಿ—ಅಂ—ಅದು ಸಾಕು ನನಗೆ—ಗುಳಿಗನಿಗೆ ಗಳಿಗೆ ಸಾಕು.

ಕೊನೆಗೊಂದು ಮಾತು. ನಿಮ್ಮ ಗುರುಗಳಾದ ವರಾಹಮಿಹಿರರೇ ಮೊದಲಾದವರು ಕೇವಲ ಕಾಲ (ಸಮಯ)ವಾದ ಲಗ್ನಕ್ಕೂ ದಶೆಯನ್ನು ಕೊಟ್ಟಿರುವಾಗ ಕಾಲನಾದ ನನ್ನನ್ನೂ "ಸಮಯ"ವೆಂದೇ ದೂರೀಕರಿಸಲು ನ್ಯಾಯವಿಲ್ಲ. ಇತಿ,

ರ. ಶ. ಮಾಂದಿ.

ಟರ್ನರ್ಮ, ಸಯಾಮ, ಚಂಪಾ(ಅನಾಮ), ಕಂಬುಜ(ಕಂಬೋಡಿಯಾ), ಮಲಾಯಾ, ಜಾವಾ, ಸುಮಾತ್ರಾ, ಬಾಲಿ, ಬೋರ್ನಿಯೋ ತನಕದ ಪ್ರದೇಶವು ಭಾರತೀಯ ಸಂಸ್ಕೃತಿಯಲ್ಲಿ ತಲ್ಲೀನವಾಯಿತು, ದಕ್ಷಿಣ ಪೂರ್ವ ಏಸ್ಯದ ಈ ಭೂಭಾಗವು ಭಾರತದ ಅಂಗವಾಗಿಯೇ ಭಾವಿಸಲ್ಪಟ್ಟಿತ್ತು; ಆ ಕಾಲದಲ್ಲಿ ಯುನಾನದವರು ಇದನ್ನು 'ಗಂಗಾ ಪಾರಕಾ ಹಿಂದ್' ಎಂದು ಕರೆಯುತ್ತಿದ್ದರು. ಇಂದು ಇದು 'ಪರಲಾ ಹಿಂದ್' ಎಂದು ಕರೆಯಲ್ಪಡುತ್ತದೆ. ಉತ್ತರ ದಿಕ್ಕಿನಲ್ಲಿ ಸಂಪೂರ್ಣ ಮಧ್ಯ ಏಸ್ಯ ಮತ್ತು ಅಫಘಾನಿಸ್ತಾನದಲ್ಲಿ—(ಇಂದು ಈ ಪ್ರದೇಶವು 'ಇಸ್ಲಾಮಿನ ಕೋಗಿಲೆ' ಎಂದು ಕರೆಯಲ್ಪಟ್ಟರೂ)–ಭಗವಾನ್ ಬುದ್ಧನ ಉಪಾಸನೆಯು ಭರದಿಂದ ನಡೆಯುತ್ತಿತ್ತು. ಮಧ್ಯ ಏಸ್ಯದಲ್ಲಿ ಭಾರತೀಯ ಸಭ್ಯತೆಯ ಅತ್ಯಧಿಕ ಅವಶೇಷಗಳು ಲಭಿಸಿರುತ್ತವೆ; ಭಾರತದ ಉತ್ತರದಲ್ಲಿರುವ ಈ ಪ್ರದೇಶಕ್ಕೆ "ಊಪರಲೇ ಹಿಂದ್" ಎಂಬ ಹೆಸರಿನಿಂದ ಕರೆಯುತ್ತಿದ್ದರು. ಪಶ್ಚಿಮದಲ್ಲಿ ಇರಾನದೇಶವನ್ನು ಭಾರತೀಯ ಆರ್ಯರ ಸಜಾತೀಯ 'ಪಾರಸಿ'ಯರು ಸೇರಿ, ಅಲ್ಲಿ ನೆಲಸಿ ಮೆರೆದರು. ಪಶ್ಚಿಮಿ ದೇಶಗಳೊಡನೆ ವ್ಯಾಪಾರಿಕ ಸಂಬಂಧವಿರುವುದರಿಂದ ಮಿಶ್ರೀ, ಯುನಾನೀ ಮತ್ತು ಅರಬ ಸಂಸ್ಕೃತಿಗಳ ಮೇಲೆ ಭಾರತವು ಯಥೇಷ್ಟ ಪ್ರಭಾವ ಬೀರಿತು.

ಶ್ರೀಲಂಕಾ

ಕಾಲಕ್ರಮದ ದೃಷ್ಟಿಯಿಂದ ಭಾರತದ ಗಡಿಗಳ ಹೊರಗೆ ಭಾರತದ ಸಾಂಸ್ಕೃತಿಕ ಸಾಮ್ರಾಜ್ಯವು ಮೊತ್ತಮೊದಲು ಶ್ರೀಲಂಕೆಯಲ್ಲಿ ವಿಸ್ತೀರ್ಣವಾಯಿತು; ಭಾರತೀಯ ರಾಮಾಯಣದ ಅನುಸಾರ, ಈ ದ್ವೀಪದಲ್ಲಿ ಸರ್ವಪ್ರಥಮ ಭಾರತೀಯ ಸಂಸ್ಕೃತಿಯ ಸಂದೇಶ ಮುಟ್ಟಿಸಿದವನು ಮರ್ಯಾದಾಪುರುಷೋತ್ತಮ ಶ್ರೀರಾಮಚಂದ್ರನಾಗಿದ್ದನು. ಆದರೆ, ಸಿಂಹಳ ಇತಿಹಾಸಕಾರರು ಹೇಳುವುದೇನೆಂದರೆ, ಕ್ರೈಸ್ತಶಕದ ಮುಂಚೆ ಆರನೇ ಶತಮಾನದಲ್ಲಿ ಕಾಠಿಯಾವಾಡಿನ ರಾಜಕುಮಾರ ವಿಜಯನ ನೇತೃತ್ವದಲ್ಲಿ ಭಾರತೀಯರು ಈ ದ್ವೀಪದಲ್ಲಿ ಹೋಗಿ ನೆಲಸಲು ಆರಂಭಿಸಿದರು. ಕ್ರೈಸ್ತಪೂರ್ವ ಮೂರನೇ ಶತಾಬ್ದಿಯಲ್ಲಿ ಸಮ್ರಾಟ್ ಅಶೋಕನು ಬೌದ್ಧಧರ್ಮದ ಪ್ರಚಾರಕ್ಕೋಸ್ಕರ ತನ್ನ ಪುತ್ರ ಮಹೇಂದ್ರ ಮತ್ತು ಪುತ್ರಿ ಸಂಘಮಿತ್ರೆಯರನ್ನು ಶ್ರೀಲಂಕೆಗೆ ಕಳುಹಿಸಿದನು. ಆ ಕಾಲದಿಂದಲೇ ಬೌದ್ಧಧರ್ಮವು ಅಲ್ಲಿಯ ರಾಷ್ಟ್ರೀಯ ಧರ್ಮವಾಯಿತು; ಮತ್ತು ಶ್ರೀಲಂಕೆಯ ಸಾಂಸ್ಕೃತಿಕ ವಿಕಾಸದ ಪ್ರಧಾನ ಸ್ರೋತಸ್ಸು ಇಂದಿನ ತನಕ, ಅದೇ ಆಗಿ ಉಳಿದು ಮೆರೆದಿರುತ್ತದೆ.

ಮಧ್ಯ ಏಸ್ಯ

ಸಮ್ರಾಟ ಅಶೋಕನ ಕಾಲದಿಂದಲೇ ಭಾರತೀಯರು ಮಧ್ಯ ಏಸ್ಯದಲ್ಲಿ ಹೋಗಿ ನೆಲಸಲು ಪ್ರಾರಂಭಿಸಿದರು; ೫ನೇ ಶತಮಾನದ ತನಕ, ಇಡೀ ಮಧ್ಯ ಏಸ್ಯದಲ್ಲಿ ಭಾರತೀಯ ಸಂಸ್ಕೃತಿಯು ನೆಲಸಿ ಮೆರೆದಿತ್ತು; 'ಫಾಹಿಯಾನ'ರು ಹೇಳುವಂತೆ, 'ಲೋಪನೋರ್' ಸರೋವರದ ಪಶ್ಚಿಮದ ಸಕಲ ಜಾತಿಗಳು ಭಾರತೀಯ ಧರ್ಮ ಮತ್ತು ಭಾಷೆಯನ್ನು ಗ್ರಹಣ ಮಾಡಿದ್ದರು; ಮಧ್ಯ ಏಸ್ಯದ ದಕ್ಷಿಣ ಭಾಗದ ದೊಡ್ಡ ದೊಡ್ಡ ಊರುಗಳಲ್ಲಿ—ಖೋತನ, ನಿಯಾ, ಚರ್ಚನ ಮುಂತಾದವುಗಳಲ್ಲಿ—ಉತ್ತರ ಪಶ್ಚಿಮ ಭಾರತದಿಂದ ಅತ್ಯಧಿಕ ಜನರು ಬಂದು ನೆಲಸಿ, ಅಲ್ಲಿಯ ರಾಜಭಾಷೆಯು ಪ್ರಾಕೃತ ಮತ್ತು ರಾಜಲಿಪಿಯು 'ಖರೋಷ್ಟೀ'ಯಾಯಿತು; ಈ ಪ್ರದೇಶದಿಂದ ಲಭಿಸಿದ ಸುಮಾರು ೮೦೦ ಶಿಲಾಲೇಖಗಳು ಅಲ್ಲಿ ಭಾರತೀಯ ಸಂಸ್ಕೃತಿಯ ಗಂಭೀರ ಪ್ರಭಾವವನ್ನು ಸೂಚಿಸುತ್ತವೆ; ಮಧ್ಯ ಏಸ್ಯದ ಉತ್ತರ ಭಾಗದ ಕೂಚಾ, ಕಟಾಶಹರ ಮತ್ತು ಕುರಫಾನವೆಂಬ ಊರುಗಳಲ್ಲಿ ಬೌದ್ಧಧರ್ಮ, ಬ್ರಾಹ್ಮೀಲಿಪಿ ಮತ್ತು ಸಂಸ್ಕೃತದ ಅತ್ಯಧಿಕ ಪ್ರಸಾರವು ಕಾಣಿಸುತ್ತದೆ. ೪ನೇ ಶತಮಾನದಲ್ಲಿ ಕೇವಲ 'ಕೂಚಾ'ಪಟ್ಟಣದಲ್ಲಿ ಬೌದ್ಧ ಮಂದಿರಗಳ ಸಂಖ್ಯೆಯು ಸುಮಾರು ೧೦,೦೦೦ ಆಗಿತ್ತು; ಈ ಪ್ರದೇಶದಿಂದಲೇ, ಭಾರತೀಯ ಸಂಸ್ಕೃತಿಯು ಚೀನಕ್ಕೆ ಗತಿಸಿತು.

ಚೀನ

ಚೀನದಲ್ಲಿ ಬೌದ್ಧಧರ್ಮ ತಕ್ಕೊಂಡುಹೋದ ಶ್ರೇಯಸ್ಸು ಕಶ್ಯಪ, ಮಾತಂಗ ಮತ್ತು ಧರ್ಮರತ್ನರೆಂಬ ಭಿಕ್ಷುಗಳಿಗೆ ಸಲ್ಲಬೇಕಾಗಿದೆ (68 A. D.). ಸಮ್ರಾಟ್ "ಮಿಂಗತೀ" ಯವರು ಇವರಿಗೋಸ್ಕರ ಒಂದು ವಿಹಾರವನ್ನು ಕಟ್ಟಿಸಿಕೊಟ್ಟರು (57 A. D.—76 A. D.). ಆ ವಿಹಾರದಲ್ಲಿದ್ದು ಈ ಧರ್ಮದೂತರು ಬೌದ್ಧಗ್ರಂಥಗಳ ಚೀನೀ ಅನುವಾದ ಮಾಡಿ, ಚೀನದಲ್ಲಿ ಸಾಂಸ್ಕೃತಿಕ ಸಾಮ್ರಾಜ್ಯದ ಸ್ಥಾಪನೆಯ ಪ್ರಾರಂಭೋತ್ಸವ ನಡಿಸಿದರು. ಮೂರನೇ ಶತಮಾನದಿಂದ ಆರನೇ ಶತಮಾನದ ತನಕ, ಬೌದ್ಧಧರ್ಮವು ಚೀನದಲ್ಲಿ ಅತ್ಯಂತ ರಭಸದಿಂದ ಸಾಗಿತು; ಹಾಗೂ ಶಾಶ್ವತವಾಗಿ ಬೇರೂರಿತು. 'ಚೀನದ ಅಶೋಕ'ನೆಂಬಲ್ಪಟ್ಟ ಸಮ್ರಾಟ್ 'ಯೂತೀ' (502 A. D.—549 A. D.) ಮತ್ತು ಅನಂತರ ಇತರ ರಾಜರು ಬೌದ್ಧಧರ್ಮವನ್ನು ಪರಿಪೋಷಿಸಿ, ಪ್ರೋತ್ಸಾಹಿಸಿ ಪ್ರಚಾರಮಾಡಿದರು; ಹಾಗೂ ಸಂರಕ್ಷಿಸಿದರು; ಇದರ ಪರಿಣಾಮವಾಗಿ, ಆರನೇ ಶತಮಾನದಲ್ಲಿ ಚೀನದಲ್ಲಿ ಬೌದ್ಧಮಂದಿರಗಳ ಸಂಖ್ಯೆಯು ೩೦ ಸಾವಿರವಾಯಿತು; ೨೦ ಲಕ್ಷ ಜನರು ಬೌದ್ಧಪುರೋಹಿತರೆಂದು ಪರಿಗಣಿಸಲ್ಪಟ್ಟರು. ಒಬ್ಬ ಚೀನೀಐತಿಹಾಸಿಕನ ಮಾತುಗಳಲ್ಲಿ-ಆ ಕಾಲದಲ್ಲಿ ಪ್ರತಿಯೊಂದು ಮನೆಯು ಬೌದ್ಧಧರ್ಮವನ್ನು ಸ್ವೀಕರಿಸಿತ್ತು; ಅಧಿಕ ಸಂಖ್ಯೆಯಲ್ಲಿ ಜನರು ಭಿಕ್ಷುಗಳಾಗುವುದರಿಂದ, ಕೂಲಿಕಾರರ ಅಭಾವವು ವ್ಯಕ್ತವಾಗುತ್ತಿತ್ತು; ಅದರಿಂದ ಕೃಷಿಯ ಕೆಲಸವು ಉಪೇಕ್ಷಿತ

ವಾಗಿ ಕಾಣಿಸುತ್ತಿತ್ತು. 'ಲಾಂಗ್' ವಂಶದ ಆಳ್ವಿಕೆಯಲ್ಲಿ, ಚೀನದಲ್ಲಿ ಬೌದ್ಧಧರ್ಮದ ಸ್ವರ್ಣಯುಗವಾಗಿತ್ತು; ಇದೇ ಕಾಲದಲ್ಲಿ, 'ಯುಆನ್‌ಚ್ವಾಂಗ್' ಹಾಗೂ 'ಇತ್ಸಿಂಗ್' ಮೊದಲಾದ ನೂರಾರು ಯಾತ್ರಿಗಳು ಮಾರ್ಗದ ಭಯಂಕರ ವಿಪತ್ತಿಗಳನ್ನು ಸೈರಿಸುತ್ತ, ಭಾರತದ ತೀರ್ಥಯಾತ್ರೆ ಮಾಡಿದರು; ಹದಿಮೂರನೇ ಶತಮಾನದಲ್ಲಿ ಚೀನದ ಮಂಗೋಲ ಸಮ್ರಾಟರು ಬೌದ್ಧಧರ್ಮ ಸ್ವೀಕಾರಮಾಡಿದರು; ಮಂಗೋಲರು ಇದರ ಪ್ರಸಾರವನ್ನು ಮಂಗೋಲಿಯಾ, ಮಂಚೂರಿಯಾ ಮತ್ತು ಸ್ಯಾಬೇರಿಯಾದಲ್ಲಿ ಮಾಡುವವರಾದರು. ಚೀನದಿಂದ ಕೊರಿಯಾ ಮಾರ್ಗವಾಗಿ, ಆರನೇ ಶತಮಾನದಲ್ಲಿ ಬೌದ್ಧಧರ್ಮವು ಜಪಾನು ಸೇರಿತು; ಮತ್ತು ಇಡೀ ಮಧ್ಯಕಾಲದಲ್ಲ ಇದನ್ನು ಅಲ್ಲಿಯ ರಾಜರು ಸಮರ್ಥಿಸುತ್ತ ಬಂದರು; ೧೮೬೭ರ ತನಕ ಜಪಾನಿನ ಅಧಿಕಾಂಶ ಉನ್ನತಿಯ ಶ್ರೇಯಸ್ಸು ಬೌದ್ಧಧರ್ಮ ಮತ್ತು ಭಾರತೀಯ ಸಂಸ್ಕೃತಿಗೆ ಸಲ್ಲಬೇಕಾಗಿದೆ; ಏಳನೇ ಶತಾಬ್ದಿಯಿಂದ ಟಿಬೇಟಿನಲ್ಲಿಯೂ ಬೌದ್ಧಧರ್ಮದ ಪ್ರಸಾರವಾಯಿತು.

ದಕ್ಷಿಣ ಪೂರ್ವ ಏಸ್ಯಾ

ಭಾರತೀಯ ಸಂಸ್ಕೃತಿಯ ಅತ್ಯಂತ ಅಧಿಕ ಗಂಭೀರ ಹಾಗೂ ಸ್ಥಾಯಿ ಪ್ರಭಾವವು ದಕ್ಷಿಣಪೂರ್ವೀ ಏಸ್ಯದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ; ಇಲ್ಲಿ ಭಾರತದ ಕೇವಲ ಸಾಂಸ್ಕೃತಿಕ ಸಾಮ್ರಾಜ್ಯ ಮಾತ್ರವಲ್ಲ, ಅನೇಕ ರಾಜನೈತಿಕ ರಾಜ್ಯಗಳು ಕೂಡ ಸ್ಥಾಪಿತವಾದವು. ವೀತನಾಮದಲ್ಲಿ ಫೂನಾನ, ಕಂಬುಜ (ಕಂಬೋಡಿಯಾ) ಮತ್ತು ಚಂಪಾ (ಅನಾಮ), ಹಾಗೂ ಸುವರ್ಣದ್ವೀಪ(ಜಾವಾ, ಸುಮಾತ್ರಾ ಇತ್ಯಾದಿ)ದಲ್ಲಿ ಶೈಲೇಂದ್ರ ಮತ್ತು ಬಿಲ್ವತಿಫ್‌ಗಳು ಇದೇ ಪ್ರಕಾರದ ಶಕ್ತಿಸಂಪನ್ನ ಸಾಮ್ರಾಜ್ಯಗಳಾಗಿದ್ದವು. ೧೬ನೇ ಶತಮಾನದಲ್ಲಿ ಈ ಪ್ರದೇಶದಲ್ಲಿ ಇಸ್ಲಾಮಿನ ಪ್ರಚಾರಪ್ರಭಾವದಿಂದ ಹಿಂದೂ ರಾಜ್ಯವು ಸಮಾಪ್ತವಾಯಿತು; ಆದರೆ, ಈ ಪ್ರದೇಶದ 'ಬಾಲೀ' ದ್ವೀಪದಲ್ಲಿ ಇಂದಿನ ತನಕ ಭಾರತೀಯ ಸಂಸ್ಕೃತಿಯು ಜೀವಿತ ರೂಪದಲ್ಲಿ ಕಾಣಸಿಗುತ್ತದೆ. ಬೋರ್ನಿಯೋ ದ್ವೀಪ ಹಾಗೂ ಅದರ ನೆರೆಕೆರೆಯ ದ್ವೀಪಗಳಲ್ಲಿ, ಹಿಂದೂ ಆವಾಸಕರು ನಾಲ್ಕನೇ ಶತಮಾನದ ತನಕ ಹೋಗಿ ನೆಲಸುತ್ತಿದ್ದರು. ಸನ್ ೧೯೨೫ರಲ್ಲಿ ಮಧ್ಯ ಹಾಗೂ ಪೂರ್ವೀ ಬೋರ್ನಿಯೋದ ಪುರಾತತ್ತ್ವೀಯ ಅನುಸಂಧಾನದಿಂದ ಮಹಾದೇವ ನಂದೀ, ಕಾರ್ತಿಕೇಯ, ಗಣೇಶ, ಅಗಸ್ತ್ಯ, ಬ್ರಹ್ಮಾ ಹಾಗೂ ಸ್ಕಂದ ಮೂರ್ತಿಗಳು ಲಭಿಸಿವೆ.

'ಭಾರತೀಯ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪ್ರಸಾರ ಮಾಡಿ ಪ್ರಚಲಿಸಿದ ಶ್ರೇಯಸ್ಸು ಬೌದ್ಧಭಿಕ್ಷುಗಳದ್ದು'–ಎಂದು ಹೆಚ್ಚಾಗಿ ತಿಳಿಯಬೇಕಾಗಿದೆ; ಆದರೆ, ಸುವರ್ಣದ್ವೀಪದಲ್ಲಿ ಈ ಕಾರ್ಯವನ್ನು ಹಿಂದೂಧರ್ಮದೂತರು ಮಾಡುವವರಾದರು; ಇಲ್ಲಿ, ವೈಷ್ಣವ ಮತ್ತು ಶೈವ ಧರ್ಮಗಳ ಪ್ರಧಾನತೆಯು ಕಂಡು ಬರುತ್ತದೆ. ಜಾವಾದಲ್ಲಿ ಶಿವ, ವಿಷ್ಣು, ಗರುಡ–ಇವರ ಸಾವಿರಾರು ಮೂರ್ತಿಗಳು ಕಾಣಸಿಗುತ್ತವೆ. ಪ್ರಸಿದ್ಧ ಪುರಾತತ್ತ್ವಜ್ಞ ಕ್ರಾಫೋರ್ಡರು ಜಾವಾದ ಸಂಬಂಧದಲ್ಲಿ ಹೀಗೆ ಯಥೋಚಿತ ಉಲ್ಲೇಖಿಸಿರುವರು:—"ಪುರಾಣಗಳಲ್ಲಿ ಉಲ್ಲೇಖಿಸಿದ ಸಕಲ ದೇವತೆಗಳ ಪ್ರತಿಮೆಗಳು ಜಾವಾದಲ್ಲಿ ಸಿಗದಿರಲಾರವು." ಇಲ್ಲಿ ಲಭಿಸಿದ ಶಿಲಾಲೇಖಗಳಿಂದಲೂ ಇದು ಪುಷ್ಟೀಕರಿಸಲ್ಪಡುತ್ತದೆ. ಚಂಪಾದಲ್ಲಿನ ೭೦ ಹಾಗೂ ಕಂಬುಜದ ಸುಮಾರು ೩೦೦ ಶಿಲಾಲೇಖಗಳ ಭಾಷೆಯು ನಿರ್ದೋಷ, ಲಲಿತ, ಪ್ರೌಢ ಹಾಗೂ ಪ್ರಾಂಜಲ ಸಂಸ್ಕೃತವಾಗಿದೆ. ಮಂದಿರಗಳಲ್ಲಿ ಪ್ರತಿದಿನ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಅಖಂಡ ಪಾಠಗಳು ಹಾಗೂ ಕಥೆಗಳು ನಡೆಯುತಿದ್ದವು. ಭಾರತೀಯ ಕಲೆಗಳು ಸಹ ಈ ಪ್ರದೇಶಗಳಲ್ಲಿ ತಮ್ಮ ಸ್ಮಾರಕವನ್ನು ಇರಿಸಿ ಮೆರೆದಿವೆ. ಕಂಬುಜದ ಅಂಗಕೋರ ಹಾಗೂ ಜಾವಾದ ಬರಬುದುರ ಶಹರುಗಳ ಅದ್ವಿತೀಯ ಮಂದಿರಗಳಂತಹ ದೇವಾಲಯಗಳು ಭಾರತದಲ್ಲಿ ಸಿಗಲಾರವು; ಮತ್ತು ಅನ್ಯದೇಶಗಳಲ್ಲಿಯೂ ಲಭಿಸಲಾರವು.

ಪಶ್ಚಿಮೀ ಜಗತ್ತು

ಪಶ್ಚಿಮೀ ದೇಶಗಳೊಡನೆ ಅತ್ಯಂತ ಪ್ರಾಚೀನಕಾಲದಿಂದ ಭಾರತಕ್ಕೆ ವ್ಯಾಪಾರಿಕ ಸಂಬಂಧವಿತ್ತು. ಸಿಕಂದರನ ಪಶ್ಚಿಮೀ ಏಸ್ಯದ ವಿಜಯದಿಂದ ಹಾಗೂ ಅಶೋಕನು ಈ ದೇಶಗಳಲ್ಲಿ ಬೌದ್ಧಧರ್ಮ ದೂತರನ್ನು ಕಳುಹಿಸಿದುದರಿಂದ, ಈ ಸಂಪರ್ಕವು ಇನ್ನೂ ಅಧಿಕ ವೃದ್ಧಿಗೊಂಡಿತು; ಪಶ್ಚಿಮದ ಅನೇಕ ಜಿಜ್ಞಾಸು ತತ್ತ್ವಚಿಂತಕರು ತಮ್ಮ ಜ್ಞಾನಪಿಪಾಸೆಯನ್ನು ಶಾಂತಗೊಳಿಸಲು ಪೂರ್ವದೇಶಗಳಲ್ಲಿ, ವಿಶೇಷವಾಗಿ, ಭಾರತದಲ್ಲಿ ಬರುತ್ತಿದ್ದರು; ಪಾಯಿಥೋಗೋರಸ್ ಮತ್ತು ಪ್ಲೇಟೋರವರ ಸಂಬಂಧದಲ್ಲಿ ಇದೇ ಪ್ರಕಾರ ಕೇಳಿಬರುತ್ತದೆ. ಯುನಾನೀ ದಾರ್ಶನಿಕರ ಅನೇಕ ಅಭಿಪ್ರಾಯಗಳು ಭಾರತೀಯ ವಿಚಾರಕರ ಹಲವು ಸಿದ್ಧಾಂತಗಳೊಡನೆ ಅದ್ಭುತಸಾಮ್ಯವನ್ನು ಇಟ್ಟುಕೊಂಡಿರುತ್ತವೆ. ಜೆನೋಫೆನೀಜರು ಸ್ಥಾಪಿಸಿದ ಈಲಿಯೇಟಿಕ್ ಸಂಪ್ರದಾಯದ ವಿಚಾರಗಳು ವೇದಾಂತದ ಸಿದ್ಧಾಂತಗಳೊಡನೆ ಅತ್ಯಂತ ಸಾಮ್ಯವನ್ನು ಗಳಿಸಿವೆ. 'ಎಂಪೀಡೊಕ್ಲೀಜ'ರ ಪ್ರಕೃತಿಯ ಅವಿನಶ್ವರತೆಯ ಸಿದ್ಧಾಂತವು ಸಾಂಖ್ಯದ ಸತ್ಕಾರ್ಯವಾದದ ಇನ್ನೊಂದು ರೂಪವೇ ಆಗಿದೆ. ಸಿಕಂದರಿಯಾದಲ್ಲಿ ವಿಕಸಿತವಾಗುತ್ತಿರುವ ಹರ್ಮೀವಾದ, ಅಧಿಜ್ಞಾನವಾದ, ನವಪ್ಲೇಟೋವಾದಗಳ ವಿಚಾರಧಾರೆಗಳ ಮೇಲೆ, ಭಾರತೀಯದರ್ಶನಶಾಸ್ತ್ರಗಳು ಯಥೇಷ್ಟಪ್ರಭಾವವನ್ನು ಬೀರಿವೆ. ಕ್ರೈಸ್ತಮತವು ಬೌದ್ಧಧರ್ಮದಿಂದ ಕರ್ಮಕಾಂಡವನ್ನು ಮತ್ತು ದಾರ್ಶನಿಕ ಅಭಿಪ್ರಾಯಗಳ ಅನೇಕ ವಿಷಯಗಳನ್ನು ಗ್ರಹಣಮಾಡಿದೆ. ಆರ್ಮೀನಿಯಾದಲ್ಲಿ ಎರಡನೇ

ಅಗ್ಗಿಷ್ಟಿಕೆಯ ಎದುರಿನಲ್ಲಿ

[ಲೇಖಕರು: ಮಧುಗಿರಿ ವಾಸುದೇವ ಮೂರ್ತಿ, ಬೆಂಗಳೂರು]

ಅಗ್ಗಿಷ್ಟಿಕೆಯ ಎದುರಿನಲ್ಲಿ ಕುಳಿತಿದ್ದೆ. ಅಡಿಗೆ ಮನೆಯಲ್ಲಿ ಕಾಫಿ ಕಾಯಿಸಿಕೊಳ್ಳುವ ಕೆಲಸ ಸುಗಮವಾಗಿ ಸಾಗಿತ್ತು. ಹಾಲು, ಸಕ್ಕರೆ, ಕಾಫಿಪುಡಿ, ಅಗ್ಗಿಷ್ಟಿಕೆ, ಇದ್ದಲು, ತಟ್ಟೆ ಬಟ್ಟಲು, ಎಲ್ಲ ಅಲ್ಲೆ ಕೈಯ ಹತ್ತಿರ ಅಣಿಯಾಗಿ ಇರುವುದು ಎಷ್ಟು ಸೊಗಸು! ಇಷ್ಟೆಲ್ಲ ಪದಾರ್ಥ ಸಿದ್ಧಪಡಿಸಿಕೊಡಲು ಎಷ್ಟೊಂದು ಮಂದಿ ನಮ್ಮನ್ನು ನೋಡಿಕೊಳ್ಳುತಿದ್ದಾರೆ ಎಂಬ ಧೈರ್ಯದಲ್ಲಿ ಆ ಸಮಯ ಮನೆಯಲ್ಲಿ ನಾನು ಒಬ್ಬನೇ ಇದ್ದೇನೆ ಎಂಬುದು ಮನಸ್ಸಿಗೆ ಅಷ್ಟಾಗಿ ತಟ್ಟಲಿಲ್ಲ. ಮನೆ ಬಾಗಿಲು ತೆರೆದಿತ್ತು. ಇದನ್ನು ನೆನೆಸಿಕೊಳ್ಳುವಾಗ ಇಂಗ್ಲೀಷಿನ ಸಂಪ್ರದಾಯಗಳ ಸರಣಿಯಲ್ಲಿ "ಒಳಗೆ ಬರುವಾಗ ಬಾಗಿಲು ಹಾಕಿಕೊಂಡು ಬಾ" ಎಂಬುದೊಂದು ಮಾತು ಇದೆ ಎಂದು ನಮಗೆ ಪಾಠ ಆಗುತ್ತಾ ಇದ್ದದ್ದು ಜ್ಞಾಪಕಕ್ಕೆ ಬರುತ್ತಿದೆ. ಅದರೊಂದಿಗೇ ಸತ್ಸಂಪ್ರದಾಯದ ಮಾತು 'ನಿಮ್ಮ ಹೃದಯಗಳು ತೆರೆದಿರಲಿ" ಎಂಬುದೂ ಒಂದು ಉಂಟು ಎಂದು ನೆನಪಾಗುತ್ತಿದೆ. ಸೂಕ್ಷ್ಮವಾಗಿ ಈ ಎರಡು ಅಭಿಪ್ರಾಯಗಳ ನಡುವೆ ಮನಸ್ಸು ಯಾವುದೋ ನಿಲುವಿನಲ್ಲಿ ನಿಂತು ಆ ದಿನ ಮನೆಯ ಬಾಗಿಲು ತೆರೆದಿತ್ತು. ನಾನು ಅಡಿಗೆಯ ಮನೆಯಲ್ಲಿ ಅಗ್ಗಿಷ್ಟಿಕೆಯ ಎದುರಿನಲ್ಲಿ ಮಣೆಯ ಮೇಲೆ ಕುಳಿತಿದ್ದೆ. ಕೆಂಡ ಅಗ್ಗಿಷ್ಟಿಕೆಯಲ್ಲಿ ತಳತಳಿಸುತ್ತಿತ್ತು. ಅದನ್ನು ನೋಡುತ್ತ ನೋಡುತ್ತ ಏನೇನೊ ಆಲೋಚನೆಗಳು ಮನಸಿನಲ್ಲಿ ಹಾದು ಹೋಗುತ್ತಿದ್ದವು.

ಕಾಫಿಮಾಡಿಕೊಂಡು ಕುಡಿಯುವುದು ಒಳ್ಳೆಯದೆ? ಹೊಟೇಲಿಗೆ ಹೋಗಿ ಕುಡಿಯುವುದೊಳ್ಳೆಯದೆ?

ಹೆಂಗಸರು ಕೂಡ ಅಡಿಗೆಗೆ ಕುಳಿತುಕೊಳ್ಳಲಾಗದು ಎಂದು ರಷ್ಯಾದಲ್ಲಿ ಕ್ಯಾಂಟೀನುಗಳ ಏರ್ಪಾಡನ್ನು

ಮತ್ತು ಮೂರನೇ ಶತಮಾನಗಳಲ್ಲಿ ಕೃಷ್ಣನ ಉಪಾಸನೆಯು ಪ್ರಚಲಿತವಾಗಿತ್ತು; ಮತ್ತು ಅಲ್ಲಿ ಅನೇಕ ಹಿಂದೂಮಂದಿರಗಳಿದ್ದವು; ನಾಲ್ಕನೇ ಶತಮಾನದಲ್ಲಿ ಕ್ರೈಸ್ತಪ್ರಚಾರಕರು ಇವುಗಳನ್ನು ವಿಧ್ವಂಸಗೊಳಿಸಿದರು. ಇಸ್ಲಾಮಿನ ಸೂಫೀವಾದದ ಮೇಲೆ, ಬೌದ್ಧಧರ್ಮ ಮತ್ತು ವೇದಾಂತದ ಪ್ರಭಾವವು ಕಾಣಿಸುತ್ತದೆ. ಮಧ್ಯಕಾಲದಲ್ಲಿ, ಅಬ್ಬಾಸೀ ಖಲೀಫಾರವರು ಪ್ರೋತ್ಸಾಹಿಸಿದುದರಿಂದ ಬಗ್ದಾದಿನಲ್ಲಿ ಆಯುರ್ವೇದ, ಗಣಿತ, ಜ್ಯೋತಿಷ ಮುಂತಾದ ವಿವಿಧ ವಿಜ್ಞಾನಗಳ ಸಂಸ್ಕೃತ ಗ್ರಂಥಗಳ ಅರಬೀ ಅನುವಾದ ಮಾಡುವವರಾದರು; ಅರಬರು ಭಾರತದಿಂದ ದಶಗುಣೋತ್ತರ ಅಂಕಲೇಖನಪದ್ಧತಿಯನ್ನು ಕಲಿತರು; ಭಾರತದ ಅನ್ಯ ವಿಜ್ಞಾನಗಳೊಡನೆ ಇದನ್ನು ಯುರೋಪಿಗೆ ಅರಬರು ಮುಟ್ಟಿಸಿದರು. ಯುರೋಪಖಂಡವು ಭಾರತಕ್ಕೆ ಸಲ್ಲಿಸಬೇಕಾದ ಸಾಂಸ್ಕೃತಿಕ ಋಣವನ್ನು ವಿಲ್ ಡ್ಯೂರೆಂಟ್ ಮಹಾಶಯರು ಈ ಕೆಳಗಿನ ಶಬ್ದಗಳಲ್ಲಿ ಉಲ್ಲೇಖಿಸಿರುವರು:—"ಭಾರತವು ನಮ್ಮ ಜಾತಿಯ ಜನ್ಮಭೂಮಿಯಾಗಿದೆ; ಸಂಸ್ಕೃತವು ಯುರೋಪೀಯ ಭಾಷೆಗಳ ಜನನಿಯ ಸ್ಥಾನದಲ್ಲಿದೆ; ಅದು ನಮ್ಮ ದರ್ಶನಶಾಸ್ತ್ರದ ಜನನಿಯು ಕೂಡ ಆಗಿರುತ್ತದೆ. ಅರಬರ ಮಾಧ್ಯಮದಿಂದ ನಮ್ಮ ಅಧಿಕಾಂಶ ಗಣಿತದ ಹಾಗೂ ಕ್ರೈಸ್ತ ಆದರ್ಶಗಳ ಜನನಿಯಾಗಿರುತ್ತದೆ. ಗ್ರಾಮಪಂಚಾಯತದಿಂದ ಅದು ಸ್ವಶಾಸನದ ಮತ್ತು ಪ್ರಜಾತಂತ್ರದ ಜನನಿಯು; ಭಾರತಮಾತೆಯು ಅನೇಕ ಪ್ರಕಾರದಿಂದ ನಮ್ಮೆಲ್ಲರ (ಯುರೋಪಿಯನರ) ಮಾತೆಯಾಗಿರುತ್ತಾಳೆ.

ಸಾಂಸ್ಕೃತಿಕ ಸಾಮ್ರಾಜ್ಯದ ಕ್ಷೀಣತೆ

ಭಾರತದ ಸಾಂಸ್ಕೃತಿಕ ಸಾಮ್ರಾಜ್ಯದ ಗತದಿವಸಗಳು ಬಹು ಉಜ್ವಲವಾಗಿದ್ದವು; ಆರನೇ ಶತಮಾನದಿಂದ ಅದರಲ್ಲಿ ಕ್ಷೀಣತೆಯು ಬಂದೊದಗಲು ಪ್ರಾರಂಭಿಸಿತು. ಇದರ ಕೆಲವು ಮುಖ್ಯ ಕಾರಣಗಳು ಪ್ರಾಚೀನ ಓಜಸ್ವೀ ಭಾವನೆಗಳ ಲೋಪ, ಪಾರಲೌಕಿಕ ಜೀವನ ಮತ್ತು ಆಧ್ಯಾತ್ಮಿಕತೆಯ ಭಾವನೆಯ ಮೇಲೆ, ಅನಾವಶ್ಯಕ ಬಲ, ಭಾಗ್ಯವಾದ, ವೈರಾಗ್ಯ ಮುಂತಾದ ನಿರಾಶಾವಾದೀ ವಿಚಾರಧಾರೆಗಳ ಪ್ರಾಧಾನ್ಯ, ಮೋಹನಿದ್ರಾ ಮತ್ತು ಮಿಥ್ಯಾಭಿಮಾನ ಹಾಗೂ ಅಂಧವಿಶ್ವಾಸಗಳ ಮತ್ತು ಸಂಕುಚಿತ ವಿಚಾರಗಳ ಪ್ರಾಧಾನ್ಯ—ಇವೇ ಮೊದಲಾದವುಗಳು ಕಾರಣಗಳಾಗಿರಬಹುದು. ಸ್ವಾತಂತ್ರ್ಯದ ಸ್ವರ್ಣಕಾಲದ ನಂತರ, ನವಭಾರತಕ್ಕೆ ಮತ್ತೊಮ್ಮೆ ಇಂದು ಈ ಅವಸರವು ಲಭಿಸಿರುತ್ತದೆ. ಭಾರತವು ಪ್ರಾಚೀನ ಪರಂಪರೆಯ ಅನುಕೂಲ ಸಾಂಸ್ಕೃತಿಕ ಸಾಮ್ರಾಜ್ಯವನ್ನು ಸ್ಥಾಪಿಸಿ, ಆರ್ಥಿಕ ಸಾಮ್ರಾಜ್ಯವಾದದಿಂದ ಪೀಡಿತ ಹಾಗೂ ಅಶಾಂತ ಜಗತ್ತಿಗೆ ಶಾಂತಿಯನ್ನು ನೀಡಲು ಸಮರ್ಥವಾಗಲಿ!

ವ್ಯವಸಾಯದ ಕ್ಷೇತ್ರಗಳಲ್ಲೆಲ್ಲ ಏರ್ಪಡಿಸಿದ್ದಾರಂತಲ್ಲ ಹೌದೆ?

ಕೆಲಸ, ಕೆಲಸ, ಕೆಲಸ!

ಎಷ್ಟು ಜನ ಹೇಗೆ ಕೆಲಸಮಾಡಿದರೂ ಈ ಜಗತ್ತಿನ ಹೊಟ್ಟೆ ತುಂಬುವುದಿಲ್ಲ.

ಜಮೀನು ಇದ್ದಷ್ಟೆ ಇದೆ; ಬೆಳೆ ಹೆಚ್ಚಬೇಕಾದಷ್ಟು ಹೆಚ್ಚಿಲ್ಲ; ತಿನ್ನುವವರ ಸಂಖ್ಯೆ ಒಂದಕ್ಕೆ ಎರಡರಷ್ಟು, ಎರಡಕ್ಕೆ ನಾಲ್ಕರಷ್ಟು ಏರಿತು.

ಅದಕ್ಕೇ ನಮಗೆ ಕಾಫಿ, ಹಾಲು, ಸಕ್ಕರೆ ಎಲ್ಲದಕ್ಕೂ ಅಭಾವ ಆಗುತ್ತಾ ಬಂದಿತು.

ಬೆಳೆದ ಬೆಳೆಗೆ ತಕ್ಕ ರೊಕ್ಕ ಬರದಿದ್ದರೆ ಬೆಳೆ ಏಕೆ ಬೆಳೆಯಬೇಕು ಎನ್ನುತ್ತಾರೆ ಬೆಳೆಯುವವರು.

ತೊಡಕೂ, ತೊಡಕು!

ಈ ಕಾಫಿ ಬೆಳೆಯುವವರಿಗೆ, ಈ ಸಕ್ಕರೆ ತಯಾರು ಮಾಡುವವರಿಗೆ ರೊಕ್ಕ ಬರುತ್ತಿದೆ ನೋಡಿರಿ; ಕಾಳು ಕಡ್ಡಿ ಬೆಳೆಯುವವರಿಗೆ ಬರುತ್ತ ಇಲ್ಲ.

ಅಲ್ಲ ಈ ಕಾಫೀನೇ ಏಕೆ ಕುಡಿಯಬೇಕು? ರಾಗಿ ಮಾಲ್ಟ್ ಸ್ವಲ್ಪ ಹಾಲಿಗೆ ಹಾಕಿಕೊಂಡು ಕುಡಿದರೆ ಆಗುವುದಿಲ್ಲವೆ?

ಕಾಫಿಯಾದರೂ ಉಳಿದಿದೆ. ರಾಗಿ ಎನ್ನುವುದು ಕನಸಾಗಿ ಹೋಯಿತು.

ಹೀಗೆ ಒಂದು ಲಕ್ಷ ವಿಷಯಗಳು ಮನಸ್ಸಿನಲ್ಲಿ ಹಾದು ಹೋದರೆ ಏನಾಗುತ್ತದೆ ಗೊತ್ತೆ? (೧) ಹುಚ್ಚು ಹಿಡಿಯುತ್ತದೆ. (೨) ಯಾವ ಒಂದು ಕೆಲಸವನ್ನೂ ಹಿಡಿದು ಮಾಡುವುದಕ್ಕಾಗುವುದಿಲ್ಲ. (೩) ನಮ್ಮ ಸುತ್ತಲೂ ಏನಿದೆ ಎನ್ನುವುದು ಕಾಣದೆ ಹೋಗುತ್ತದೆ. ನನಗೇಕಪ್ಪ ಈ ದೊಡ್ಡ ಪ್ರಪಂಚದ ವಿಚಾರ, ಸದ್ಯ ಈ ಕಾಫಿ ಮಾಡಿ ಮುಗಿಸೋಣ ಎಂದು ಕಾಡು ಮೇಯುವುದಕ್ಕೆ ಹೋಗಿದ್ದ ಮನಸ್ಸನ್ನು ಸದ್ಯದ ಕೆಲಸಕ್ಕೆ ತಿರುಗಿಸಿದ ಕೂಡಲೇ ಆ ಮನಸ್ಸನ್ನು ಕುರಿತ ಪದ್ಯವೇ ಒಂದು ಮತ್ತೆ ಜ್ಞಾಪಕಕ್ಕೆ ಬಂದಿತು —'ಮೊದಲೆ ಮರ್ಕಟ' ಇತ್ಯಾದಿ. ಮಗ್ಗುಲಲ್ಲಿ ನೋಡುತ್ತೇನೆ, ನಿಜವಾಗಿ ಒಂದು ಕೋತಿ ಬಂದು ಬಿಟ್ಟಿತ್ತು.

ಅಯ್ಯಯ್ಯೋ ಕೋತಿ! ಮನೆ ಒಳಗೆ! ಅಡಿಗೆ ಮನೆಯಲ್ಲಿ! ಹತ್ತಿರ ಒಂದು ಕೋಲು ಇತ್ತು ನೋಡಿರಿ. ತೆಗೆದುಕೊಂಡು ಓಡಿಸಿದೆ. ಹೊರಗೆ ಬಂದು ನೋಡುತ್ತೇನೆ ಗದ್ದಲವೋ ಗದ್ದಲ. ನೂರು ಕೋತಿಗಳು ಬಂದಿವೆ. ಸೀಬೆಯ ಕಾಯಿಗಳನ್ನೆಲ್ಲ ಉದುರಿಸಿವೆ, ಹೀರೆ ಕಾಯಿಗಳನ್ನೆಲ್ಲ ಕಿತ್ತು ಹಾಕಿವೆ, ಅಷ್ಟು ಇಷ್ಟು ಚಿಗುರುಗಳನ್ನೆಲ್ಲ ಕಿತ್ತುಹಾಕಿವೆ. ಸರಿ,ಕಲ್ಲು ಎಸೆದದ್ದಾಯಿತು,ದಡಬಡ ಶಬ್ದಮಾಡಿದ್ದಾಯಿತು; ಕೋತಿಗಳು ಮಗ್ಗಲು ಮನೆಗೆ ಹೊರಟು ಹೋದವು. ನಾನು ಒಳಕ್ಕೆ ಬಂದೆ.

ಹಾಗೇ ಸುಭಾಷಿತದ ಒಂದು ಪದ್ಯ ನೆನಪಿಗೆ ಬಂದಿತು: 'ಏಕಸ್ತಪೋ, ದ್ವಿರಧ್ಯಾಯೀ, ತ್ರಿಭಿರ್ಗೀತಮ್, ಚತುಃ ಪಥಮ್, ಸಪ್ತಪಂಚಕೃಷೀನಾಮ್ ಚ, ಸಂಗ್ರಾಮೋ ಬಹುಭಿರ್ಜನೈಃ' ಆ ಕೋತಿ ಒಂದೇ ಸಿಕ್ಕಿಕೊಂಡರೆ ಏಟು ಬಿದ್ದೀತು ಎಂದೇ ಬೇಗ ಓಡಿಹೋಗಿ ಗುಂಪು ಸೇರಿ ಕೊಂಡಿರಬೇಕು. ಹೌದು, ಸಂಗ್ರಾಮ ಹೂಡುವುದಕ್ಕೇ ಆ ಪ್ರಾಣಿಗಳು ಅಷ್ಟು ಸಂಖ್ಯೆಯಲ್ಲಿ ಬಂದಿದ್ದದ್ದು. ಕೋತಿಗೆ ಮಾತು ಬರುತ್ತದೆಯೆ! ಬರಬಹುದು. ನನ್ನ ಜ್ಞಾಪಕಕ್ಕೆ ಬಂದ ಪದ್ಯದ ಅರ್ಥವನ್ನೇ ಅದು ತನ್ನ ಭಾಷೆಯಲ್ಲಿ ಹೇಳಿ ಹೋಗಿರಬೇಕು. ಹೌದು, ಅಡಿಗೆ ಮನೆಯಿಂದ ಹೊರಕ್ಕೆ ಹೋದಾಗ ಆ ಕೋತಿ ಸುಮ್ಮನೆ ಹೋಗಲಿಲ್ಲ. ಹಲ್ಲು ಕಿರಿದು ಹೆದರಿಸಿಯೇ ಹೋಯಿತು. ಆದರೆ ಈ ಕೋತಿಗಳು ಹೀಗೆ ಬಹು ಸಂಖ್ಯೆಯಲ್ಲಿ ಮುತ್ತಿಗೆ ಹಾಕುವುದಕ್ಕೆ ನಾವು ಅವಕ್ಕೆ ಮಾಡಿದ್ದೇನು?

ಒಂದು ಮಾತು ಕಿವಿಯಲ್ಲಿ ಹೊಕ್ಕು ಕೇಳಿಸಿತು: ಹೊಟ್ಟೆ! ಹೊಟ್ಟೆ! ಹೊಟ್ಟೆ!

ಆದರೆ ಹೊಟ್ಟೆಗಾದರೆ ಅವು ಬೇಕಾದಷ್ಟು ಹಣ್ಣು ತಿಂದು ಹೋಗಲಿ; ಹೀಚುಗಳನ್ನೆಲ್ಲ ಉದುರಿಸಿ ಹಾಳುಮಾಡಿ ಹೋಗುವುದೇಕೆ? ಇದೇನೋ ಬರೀ ಹಸಿವಿನ ಮಾತಲ್ಲ, ಇನ್ನೊಬ್ಬರಿಗೆ ಹಿಂಸೆ ಕೊಡುವ ಮನೋಭಾವ ಕೂಡ ಇದರಲ್ಲಿ ಇದೆ ಎನ್ನಿಸಿತು. ಪಾಪ, ಕೋತಿ, ಇದೆಲ್ಲ ಒಂದು ಆಟ ಎಂದೇ ತಿಳಿದುಕೊಂಡಿರಬಹುದು. ಬಹುಶಃ ಅವುಗಳ ಊಟಕ್ಕೆ, ಆಟಕ್ಕೆ ಬೇರೆ ಸ್ಥಳ ಅವಕಾಶ ಇದ್ದಿದ್ದರೆ ಈ ಕೋತಿಗಳು ಇಲ್ಲಿಗೆ ಬರುತ್ತಲೇ ಇರಲಿಲ್ಲ. ಅವಕಾಶ ತಪ್ಪಿಸಿದವರು ಯಾರು?

ಮರ ಕೋತಿ! ಹಾಂ, ತಿಳಿಯಿತು. ಮರಗಳು ಬೇಕಾದ ಹಾಗೆ ಇದ್ದರೆ ಕೋತಿಗಳು ಅಲ್ಲಿ ಆಡಿಕೊಳ್ಳುತ್ತಿದ್ದವು. ಈಗ ಜನ ಕಾಡುಗಳನ್ನೆಲ್ಲ ಕಡಿದಿದ್ದಾರೆ. ಕೋತಿಗಳು ಊರಿಗೆ ನುಗ್ಗಿವೆ. ಏನೂ ತಪ್ಪಿಲ್ಲ.

'ನಮ್ಮ ಜನಕ್ಕೆಲ್ಲ ಹಂಚುವಷ್ಟು ಜಮೀನು ನಮಗಿಲ್ಲವಲ್ಲ; ಏನು ಮಾಡುವುದು?' ಎಂಬ ಒಂದು ಆರ್ಥಿಕ ಪ್ರಶ್ನೆ ಇದೆ ಎಂದು ಮೊನ್ನೆ ಯಾರೋ ಮಾತನಾಡಿಕೊಳ್ಳುತ್ತಿದ್ದುದು ಕೇಳಿಸಿತು. ಹಾಗೇ ಇದೂ ಒಂದು ನಮ್ಮ ಜೀವನಕ್ಕೆ ಸಂಬಂಧಪಟ್ಟ, ನಮ್ಮ ಜೀವದ ಸುತ್ತಲೂ ಬಂದಿರುವ ಒಂದು ಪ್ರಶ್ನೆ 'ಕೋತಿಗಳೆಲ್ಲ ಹೋಗಿ ಸೇರಿಕೊಳ್ಳುವಷ್ಟು ಮರಗಳಿಲ್ಲವಲ್ಲ; ಏನು ಮಾಡುವುದು?' ಎನ್ನುವುದು ಒಂದು ಅಬ್ಬರ ಕೇಳಿಬಂತು: 'ಬಂದ ಕೋತಿಗಳನ್ನು ಬಡಿದು ಹಾಕುವುದು.'

ಹೋ, ಹೋ, ಕೋತಿ ಕಾಳಗ! 'ಮಾಮಾ ಸಾಹಸಿಗಳಹುದಹುದು!' ಎಚ್ಚರಿಕೆ!

'ಕಾಡಿದೊಡೆ ಹಲ್ಲು ಕಿರಿದೀತು!
ಕೊಲ್ಲದೊಡೆ ಹಾರಿ ಕಚ್ಚೀತು'!

ಆದರೆ ಎತ್ತಿದರೆ, ಆಡಿದರೆ, ಈ ಕೊಲ್ಲುವ ಮನೋಭಾವ ಏಕಪ್ಪ? ಅದು ಮನಶ್ಶಾಸ್ತ್ರಜ್ಞರು ಹೇಳುವಂತೆ ಕಾಡು ಜೀವನದಿಂದ ಹರಿದು ಬಂದಿರುವ ಒಂದು ತಾನಾಗಿ ತಾನು ಹೊರಹೊಮ್ಮುವ ಚೇಷ್ಟೆ. ಕೋತಿ ಬಂತು, ಕೋಲು ತೆಗೆದುಕೊ. ಆಗ ಕೋತಿ ಹೇಳುತ್ತದೆ 'ಕೋಲು ಕಂಡೆ ಹಲ್ಲು ಕಿರಿದೆ' ಎಂದು. ದುಷ್ಟ ಜೀವಕ್ಕೆ ಸುಖವಿಲ್ಲ. ನಿಜ. ಆದರೆ ಇದೆಲ್ಲ ಒಂದು ಭೂತ ಚೇಷ್ಟೆ ಕಂಡಹಾಗೆ ಕಾಣುವುದಿಲ್ಲವೆ?

ಭೂತ ಎಂದ ಕೂಡಲೆ ನಮ್ಮ ಹಿರಿಯರು ಬೆಳಸಿಕೊಂಡಿದ್ದ ಒಂದು ತತ್ವ ಹೊಳೆಯಿತು: 'ಭೂತ ತೃಪ್ತಿ' ಎಂಬ ತತ್ವ.

ಸುಪ್ರಭಾತಂ ಭಗವತಃ ಪರಸ್ಯ ಬ್ರಹ್ಮಣೊ ವಿಭೋಃ
ಸುಪ್ರಭಾತಂ ಮದಾರ್ಯಾಣಾಂ
ಸರ್ವೇಷಾಂ ಪ್ರಾಣಿನಾಮಪಿ.

ಎಲ್ಲ ಪಾಣಿಗಳಿಗೂ ಸುಪ್ರಭಾತವನ್ನು ಬಯಸಿದರು ಅವರು. ಇದನ್ನು ಹೇಳಿಕೊಳ್ಳುತ್ತಾ ಹಿರಿಯರೊಬ್ಬರು ಮಾಡುತ್ತಿದ್ದ ಕೆಲಸ ಕಣ್ಣೆದುರಿಗೆ ಬಂದಿತು. ದಿನ ಬೆಳಗ್ಗೆ ಅವರು ಗ್ರಾಮ ಪ್ರದಕ್ಷಿಣೆಗೆ ಹೋಗುತ್ತಿದ್ದರು. ಹೋಗುವಾಗ ಸ್ವಲ್ಪ ಅಕ್ಕಿಯ ನುಚ್ಚನ್ನು ಕಟ್ಟಿಕೊಂಡು ಹೋಗುತ್ತಿದ್ದರು. ಇರುವೆಯ ಗೂಡು ಎಲ್ಲಿ ಕಂಡರೆ ಅಲ್ಲಿ ಸ್ವಲ್ಪ ನುಚ್ಚು ಉದುರಿಸುತ್ತಿದ್ದರು. ಭೂತ ತೃಪ್ತಿಗೆ ಇದೊಂದು ಉದಾಹರಣೆ.

ಇದರಲ್ಲಿ ಏನೋ ಶಾಸ್ತ್ರ ಇರಬೇಕು ಎನ್ನಿಸಿತು. ಇರುವೆಗಳು ನೋಡಿ, ಯಾವಾಗಲು ಕಾಳಿಗೆ ಮುತ್ತಿಗೆ ಹಾಕಿ ಗೂಡಿಗೆ ತೆಗೆದುಕೊಂಡು ಹೋಗುತ್ತಿರುತ್ತವೆ. ಅವುಗಳಿರುವ ಕಡೆಯಲ್ಲೇ ಸ್ವಲ್ಪ ಕಾಳು ಉದುರಿಸಿಬಿಟ್ಟರೆ ನಾವು ಹಾಕಿಕೊಂಡಿರುವ ಕಾಳಿನ ರಾಶಿಯನ್ನು ಹುಡುಕಿಕೊಂಡು ಬರಲಾರವು. ಬಹುಶಃ ಹಾವಿಗೆ ಹಾಲು ಎರೆಯುವುದರಲ್ಲಿ, ಕೋತಿಗಳಿಗೆ ಕಡಲೆಯ ಕಾಯಿ ಹಾಕುವುದರಲ್ಲಿ ಇದೇ ತತ್ವವೇ ಅಡಕವಾಗಿರಬೇಕು. ಆದರೆ ಒಂದು ಹಿಡಿ ಕುಚ್ಚಿನಲ್ಲಿ, ಒಂದು ಉದ್ಧರಣೆ ಹಾಲಿನಲ್ಲಿ, ಒಂದು ಪಾವು ನೆಲಗಡಲೆ ಕಾಯಿಯಲ್ಲಿ ಯಾವ ಕೀಟವನ್ನು, ಯಾವ ಜಂತುವನ್ನು, ಯಾವ ಪ್ರಾಣಿಯನ್ನು ತೃಪ್ತಿಗೊಳಿಸುವುದಕ್ಕಾದೀತು? ಆ ಮನೋಭಾವ ನೋಡಬೇಕಾದದ್ದು. ಒಟ್ಟಿನಲ್ಲಿ ಆಯಾ ಭೂತಗಳಿಗೆ ಅಲ್ಲಲ್ಲಿ ತೃಪ್ತಿಯಾಗುವ ಒಂದು ಸನ್ನಿವೇಶ ಇದ್ದರೆ ಅವುಗಳ ಚೇಷ್ಟೆ ಬೇಡವಾದ ಕಡೆಗೆ ಪಸರಿಸಲಾರದು.

ಆದರೆ ಮನುಷ್ಯಕೃತ ಉಪಾಯಗಳು ವಿಲಕ್ಷಣವಾದವು. ಗೋಹತ್ಯ ಮಾಡಬಾರದು. ಕೂಡದು, ಕೂಡದು, ಕೂಡದು. ವಿಚಾರ ಒಳ್ಳೆಯದು. ಆದರೆ ಆ ಮೂರನೆಯ ಸಲ ಕೂಡದು ಎಂದು ಹೇಳುವ ಹೊತ್ತಿಗೆ ಉಂಟಾಗುವ ತಾವು ಯಾವ ಪ್ರಾಣಿಯನ್ನು ನಾವು ಕಾಪಾಡಬೇಕೆಂದು ಹೊರಟಿರುವೆವೊ ಆ ಗೋಮಾತೆ, ಆ ಹಸುವಿನಲ್ಲಿ ಮೂರ್ತೀಭವಿಸಿರುವ ಸಾಧುತನವನ್ನು ಯಾವ ಬಗೆಯಲ್ಲೂ ಹೋಲದು, ಚಿತ್ರಿಸದು. ನೋವು ಉಂಟುಮಾಡದೆ ಪ್ರಾಣಿಯನ್ನು ಕೊಲ್ಲುವುದು ಎನ್ನುವುದು ಒಂದು ಉಪಾಯ. ಕನಿಕರದ ಪರಮಾವಧಿ ಕಾಣಿಸುವುದು ಈ ಉಪಾಯದಲ್ಲಿಯೋ, ಅಥವಾ ಪ್ರಾಣಿಯನ್ನು ಕೊಲ್ಲಬೇಡಿ ಎಂಬ ಒಂದು ಆರ್ಭಟದಲ್ಲಿಯೋ, ವಿಚಾರಮಾಡಹೊರಟಾಗ ಸ್ವಲ್ಪ ತಬ್ಬಿಬ್ಬಾಗುತ್ತದೆ.

ಇದಕ್ಕೇ ಯಾವ ಮಂತ್ರದ ಕೊನೆಯಲ್ಲಿಯೂ ನಮ್ಮ ಹಿರಿಯರು 'ಶಾಂತಿ, ಶಾಂತಿ, ಶಾಂತಿ' ಎಂಬ ಮಾತನ್ನು ಸೇರಿಸಿದರು.

ಆದರೆ ಹೇಳದೆ ಕೇಳದೆ ಒಂದು ಕೋತಿ, ಗಡವ, ಅಡಿಗೆಯ ಮನೆಗೆ ಬಂದಿರುವಾಗ ಕೋಲುತೆಗೆದುಕೊಂಡು ಹೆದರಿಸುವುದು ಬಟ್ಟು 'ಶಾಂತಿ' ಎಂದರೆ ಎಂತಹ ಶಾಂತಿ? ಅದು ಓಡಿಹೋಗುವಾಗ್ಗೆ ಸರಿಹೋಯಿತು; ಮೈ ಮೇಲೆ ಬಿದ್ದಿದ್ದರೆ?

ಆ ಮೇಲೆ ಅನ್ನಿಸಿತು, ಕೋತಿ ನನಗೆ ಹೇಗೆ ಕಂಡಿತೋ, ನಾನೂ ಕೋತಿಗೆ ಹಾಗೇ ಕಂಡಿರಬಾರದೇಕೆ? ಅದಕ್ಕೇ ಅದು ಹೆದರಿರಬೇಕು.

ಮತ್ತೆ, ನಮ್ಮ ಕೆಲಸಗಳೆಲ್ಲ ಒಂದು ಬಗೆಯಲ್ಲಿ ವಾನರ ಸ್ವರೂಪವಾಗಿರುವುದರಿಂದಲೆ ಈ ವಾರದ ದರ್ಶನ ಪ್ರಾಪ್ತಿ ಎನ್ನಿಸಿತು.

'ವಿನಾಯಕಂ ಪ್ರಕುರ್ವಾಣೋ
ರಚಯಾಮಾಸವಾನರಃ'

ಅಂದರೆ ವಿನಾಯಕನನ್ನು ಮಾಡುವುದಕ್ಕೆ ಹೋಗಿ ವಾನರನನ್ನು ಮಾಡಿ ಕೂಡಿಸುತ್ತಿದ್ದೇವೆ. ಹಾಗೆ ನೋಡಿದರೆ ನಾವು ವಿನಾಯಕ ಎಂದುಕೊಂಡಿರುವ ಮೂರ್ತಿಯು ವಿನಾಯಕರ್ತ ತಾನೇ ಏನು?

ನಾನು ಇನ್ನೂ ಕಾಫಿಯನ್ನು ಮಾಡಿ ಮುಗಿಸಿರಲಿಲ್ಲ, ಎಲ್ಲಿಗೋ ಹೋಗಿದ್ದ ಮನೆಯವರೆಲ್ಲ ಬಂದು ಸೇರಿದರು. ಪಾಠ ಶಾಲೆಗೆ ಹೋಗಿದ್ದ ಸಣ್ಣ ಹುಡುಗ ಮೊದಲು ಇಣಿಕಿ ನೋಡಿದ. 'ಮತ್ತೆ ಬಂದೆಯಾ ಕೋತಿ? ಹುಶ್' ಎಂದೆ. ಎಲ್ಲರೂ ಚೆನ್ನಾಗಿ ನಕ್ಕೆವು. ಕಾಫಿ ಮಾಡಿಕೊಂಡು ಕುಡಿದೆವು.

V. S. & SONS



SWEETS

THE CHOICE OF YOUR CHILD

BEST IN THE MARKET

SUPERIOR IN QUALITY

THE SOUTHERN INDIA CONFECTIONERY FACTORY,

Estd: 1925 KUMBAKONAM, S. INDIA.

Wholesale Stockists For S. Kanara:

M/s K. ANNAPPA SHANBHOGUE & BROS.,
MARKET ROAD, MANGALORE.

ಮಕ್ಕಳ ಮೆಚ್ಚುಗೆಯ ಪೆಪ್ಪರ ಮಿಠಾಯಿ

'ವಿ. ಎಸ್. ಎಂಡ್ ಸನ್ಸ್'ರವರ ಉತ್ತಮ ತಯಾರಿ.

ವಿವಿಧ ತರದ ಹಣ್ಣುಗಳ ಪರಿಮಳದಿಂದ- ಪ್ರತಿಯೋರ್ವನೂ ಆನಂದದಿಂದ ಕೊಂಡುಕೊಳ್ಳುವಂತೆ ಆಕರ್ಷಕವಾಗಿಯೂ ಉಚ್ಚವಾಗಿಯೂ ಇವೆ. ಈ ಮೇಲ್ತರಗತಿಯು, ಆದರೆ ಸರ್ವಸುಲಭವಾಗಿ ದೊರೆವ ಪೆಪ್ಪರ್ ಮಿಠಾಯಿ

ತಯಾರಿಸುವವರು:

ಸದರ್ನ್ ಇಂಡಿಯಾ ಕನ್ಫೆಕ್ಷನರಿ ಫೆಕ್ಟರಿ, ಕುಂಭಕೋಣಂ.

ದ. ಕ ಜಿಲ್ಲೆಯಲ್ಲಿ ಸ್ಟಾಕಿಸ್ಟರು:

ಕೊಂಚಾಡಿ ಅಣ್ಣಪ್ಪ ಶ್ಯಾನಭಾಗ ಎಂಡ್ ಬ್ರದರ್ಸ್,
ಮಾರ್ಕೆಟ್ ರೋಡ್, ಮಂಗಳೂರು.

ಕವಿಯು ಹುಚ್ಚನೆ?

[ಲೇಖಕರು: ಶ್ರೀ। ಜಿ. ವೆಂಕಟಸುಬ್ಬಯ್ಯ, ಎಂ. ಎ., ಬಿ. ಟಿ., ಬೆಂಗಳೂರು]

ಕವಿಯು ಹುಚ್ಚ ಅಥವಾ ಭ್ರಾಂತನೆನ್ನುವ ಅಭಿಪ್ರಾಯ ಪಾಶ್ಚಾತ್ಯರಲ್ಲಿ ಬಹಳ ಮೊದಲಿನಿಂದಲೂ ಇದೆ. ದಾರ್ಶನಿಕರಿಗಿಂತ ಬೇರೆಯಾದ ಮಾರ್ಗದಲ್ಲಿ ಕವಿಯ ಮನಸ್ಸು ಕೆಲಸ ಮಾಡುತ್ತದೆಯೆನ್ನುವುದೇ ಬಹುಕಾಲ ಅದಕ್ಕೆ ಸಾಮಾನ್ಯವಾದ ಅರ್ಥವಾಗಿದ್ದಿತು. ಆದರೆ ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಈ ಅಭಿಪ್ರಾಯಕ್ಕೆ ವ್ಯತ್ಯಾಸವುಂಟಾಗಿ ಕವಿಯ ಮಾನಸಿಕವಾದ ಆರೋಗ್ಯಕ್ಕೆ ಹುಚ್ಚನ್ನು ಅನ್ವಯಿಸುವ ಪಂಥ ಬೆಳೆಯಿತು. 'ರೊಮ್ಯಾಂಟಿಕ್' ಎನ್ನುವ ಸಾಹಿತ್ಯ ಚಳವಳಿಯಿಂದ ಇದಕ್ಕೆ ಮತ್ತಷ್ಟು ಪುಷ್ಟಿ ದೊರಕಿತು. ಜನರಿಗೆ ಈ ವಿಚಾರದ ಹೆಚ್ಚು ಹೆಚ್ಚಾಗಿ ನಂಬಿಕೆಯುಂಟಾಗುತ್ತಿದ್ದುದನ್ನು ಕಂಡು ಚಾರಲ್ಸ್ ಲ್ಯಾಂಬ್ ತನ್ನ "On the Sanity of True Genius" ಎಂಬ ಪ್ರತಿಭಾಪೂರ್ಣವಾದ ಪ್ರಬಂಧದಲ್ಲಿ ಈ ಅಭಿಪ್ರಾಯಗಳನ್ನೆಲ್ಲಾ ಹಾಸ್ಯಮಾಡಿ ಎದುರಿಸಿ, ಪ್ರತಿಭೆಯ ಪವಾಡವು ಭ್ರಾಂತಿಯಲ್ಲವೆನ್ನುವುದನ್ನು ಸ್ಥಾಪಿಸಬೇಕಾಯಿತು. ಆದರೂ ಈಚೆಗೆ ಕಲಾಸೃಷ್ಟಿಯಲ್ಲಿ ಆಸಕ್ತರಾದ ವಿಮರ್ಶಕರೂ ಕೂಡ ಈ ಭ್ರಾಂತಿಯು ಸತ್ಯಾನ್ವೇಷಣೆಗೆ ಅಗತ್ಯವಾದ ಒಂದು ಅವಸ್ಥೆ ಎಂದೇ ನಂಬುತ್ತಾ ಬಂದರು. ನಮ್ಮ ಪೌರಸ್ತ್ಯ ಸಂಸ್ಕೃತಿಯಲ್ಲಿ ಕವಿಯನ್ನು ಉನ್ಮತ್ತನೆಂದೂ ಆವೇಶಪೂರ್ಣನೆಂದೂ ಹೇಳಿದರೂ ಅವನನ್ನು ಹುಚ್ಚನೆಂದು ಯಾರೂ ಕರೆಯುವುದಿಲ್ಲ. ಇದೊಂದು ಸಮಾಧಾನದ ವಿಷಯ.

ಪಾಶ್ಚಾತ್ಯರಲ್ಲಿಯೂ ಈ ಅಭಿಪ್ರಾಯಕ್ಕೆ ಹೆಚ್ಚು ಜನ ಬೆಂಬಲವಿಲ್ಲ. ಮನೋವಿಶ್ಲೇಷಣೆಯಿಂದ ಕಾವ್ಯಸೃಷ್ಟಿಯನ್ನು ವಿವರಿಸಲು ಹೊರಟ ಪ್ರಾಯಿಡನು ಕೆಲವು ಯುಕ್ತವಾದ ತಿಳುವಳಿಕೆಯನ್ನೇ ಕೊಟ್ಟನು. "Beyond the pleasure Principle" "ಸುಖಾತೀತವಾದ ಆಸಕ್ತಿ" ಎನ್ನುವ ಸೂತ್ರದಿಂದ ಮಾನವರಿಗೆ ದುರಂತ ನಾಟಕದಲ್ಲಿರುವ ಆಸಕ್ತಿಯನ್ನು ವಿವರಿಸಿದ್ದಾನೆ. ಇದು ಬಹು ಸೂಕ್ತವೇ ಆಗಿದೆ. ಆದರೆ ಮೊದಮೊದಲು ಆತನು ಕವಿಯ ಕಾರ್ಯವನ್ನು ವಿಮರ್ಶಿಸುವಾಗ ಕವಿಯು "Substitute gratifications" ಮೂಲಕ ಸತ್ಯದಿಂದ, ವಾಸ್ತವತೆಯಿಂದ ತಪ್ಪಿಸಿಕೊಳ್ಳುವ ಹುಚ್ಚನೆಂದೇ ಹೇಳಿದುದು ಆಶ್ಚರ್ಯಕರ. ತನ್ನ ವಿಮರ್ಶೆಯನ್ನು ಮುಂದುವರಿಸಿದ ಮೇಲೆ ಪ್ರಾಯಿಡನಿಗೇ ಈ ತತ್ವ ಸರಿಯಾಗಿ ಕಾಣಲಿಲ್ಲ.

ಕವಿಯು ಸಾಮಾನ್ಯವಾಗಿ ಮುಂಗೋಪಿ. ತನ್ನ ಕೃತಿಗಳ ವಿಚಾರದಲ್ಲಿ ಬಹು ಆತ್ಮೀಯತೆಯಿರುವುದರಿಂದ ವಿಮರ್ಶೆಯನ್ನು ಅನಾಸಕ್ತನಾಗಿ ಸ್ವೀಕರಿಸಲಾರ. ಪಾಶ್ಚಾತ್ಯರ ರೊಮ್ಯಾಂಟಿಕ್ ಕವಿಗಳು ತಮ್ಮ ಕಾವ್ಯದ ವಿಚಾರದಲ್ಲಿ ಬಹು ಹೆಮ್ಮೆಯನ್ನು ತಳೆದಿದ್ದರು. ಅವರ ವ್ಯವಹಾರ, ಮಾತು, ಬರೆವಣಿಗೆಗಳೆಲ್ಲಾ ಬಹು ವಿಚಿತ್ರವಾಗಿದ್ದುವು. "Why did I laugh tonight?" "ರಾತ್ರೆ ನಾನೇಕೆ ನಕ್ಕೆ?" ಎಂದು ಒಬ್ಬ ಕವಿ ಬರೆದರೆ ಮತ್ತೊಬ್ಬನು ತನ್ನ ಶ್ರೇಷ್ಠ ಕಾವ್ಯವನ್ನು ಭಂಗಿ ಕುಡಿದು ಮಲಗಿದ್ದಾಗ ರಚಿಸಿದೆ ಎಂದು ಹೇಳಿದನು. ಝೋಲ (Zola) ಎಂಬ ಕವಿಯನ್ನು ಹದಿನೈದು ಜನ ಮನಶ್ಶಾಸ್ತ್ರಜ್ಞರು ಪರೀಕ್ಷಿಸಿ ಅವನ ಮಾನಸಿಕ ಪರಿಸ್ಥಿತಿಯಲ್ಲಿ ಹುಚ್ಚನ ಸಂಪರ್ಕವಿದೆಯೆಂದು ತೀರ್ಮಾನಿಸಿದರು. ಝೋಲನೂ ಅದನ್ನು ಒಪ್ಪಿಕೊಂಡನಂತೆ! ಆಡೆನ್ ಎಂಬ ಆಧುನಿಕ ಆಂಗ್ಲಕವಿಯು ತನ್ನ ಪ್ರತಿಭೆಯನ್ನು "Wound" ಎಂದರೆ 'ವ್ರಣ' ಎಂದು ಕರೆಯುತ್ತಾನೆ.

ಥಾಮಸ್‌ಮ್ಯಾನ್ ಎಂಬಾತನು ಆ ಭ್ರಾಂತಿಯ ಆರೋಪಣೆಯು ಒಂದು ಮುಖವಾಡವೆಂದೂ ಕವಿಯ ಸಂಸ್ಕೃತವಾದ ಮನಸ್ಸು ಬಹು ಸ್ತಿಮಿತವಾದುದೆಂದೂ ವಾದಿಸುತ್ತಾನೆ.

ಪ್ರಾರಂಭದಲ್ಲಿ ಕಲೆಯನ್ನು, ಕಾವ್ಯವನ್ನು ಮನೋವಿಶ್ಲೇಷಣೆಯ ದೃಷ್ಟಿಯಿಂದ ವಿಮರ್ಶಿಸಲು ಹೊರಟವರು ಕಲೆಗಾರನು ಭ್ರಾಂತಿಪೂರ್ಣನಾದುದರಿಂದ ಕಲಾಕೃತಿಯೂ ಭ್ರಾಂತಿಯುಕ್ತವಾದುದೆಂಬ ವಾದವನ್ನು ಹೂಡಿದರು. ಇಂತಹ ದೃಷ್ಟಿಯಲ್ಲಿ ಮಾಡಿದ ವಿಮರ್ಶೆಯಲ್ಲಿ ಡಾ। ಸಾಲ್ ರೋಜೆನ್ ಜ್ವೇಗ್ ಅವರ "The Ghost of Henry James" ಎಂಬ ಬಹು ಮುಖ್ಯವಾದ ಲೇಖನವೊಂದಿದೆ. ಜೇಮ್ಸನ ಗ್ರಂಥಗಳಲ್ಲಿ ಭ್ರಾಂತಿಯ ಸುಳಿವು ಇದೆಯೆಂದೂ, ಆದರೂ ಆ ಗ್ರಂಥಗಳ ಬೆಲೆಯಾಗಲಿ, ಯೋಗ್ಯತೆಯಾಗಲಿ ಕಡಿಮೆಯಾಗುವುದಿಲ್ಲವೆಂದೂ ಆತನೇ ಒಪ್ಪಿಕೊಳ್ಳುತ್ತಾನೆ. ಈತನ ಪ್ರಕಾರ ಕವಿಯ ಹುಚ್ಚು ರಸನಿಮಿಷವೊಂದನ್ನು ಅರ್ಥಪೂರ್ಣವಾಗಿ ಅವಲೋಕಿಸುವ ದೃಷ್ಟಿ ಮಾತ್ರ. ಇದು ಬಹು ಒಪ್ಪಿಗೆಯಾದ ಮಾತು. ಇಂತಹ ವಿಮರ್ಶಕರೆಲ್ಲರೂ

ಕಲೆಗಾರನ ಭ್ರಾಂತಿಯನ್ನವಲಂಬಿಸಿ ಕಲೆಯ ಪ್ರಭಾವವು ವ್ಯಕ್ತಗೊಳ್ಳುತ್ತದೆ ಎಂದು ನಂಬುತ್ತಾರೆ.

ಇದರಿಂದ ನಾವು ಒಂದು ಅರ್ಥವನ್ನು ವಿವರಿಸಬಹುದು. ಕಷ್ಟ ಅಥವಾ ದುಃಖದ ಅನುಭವದಿಂದ ಅಪೂರ್ವವಾದ ಶಕ್ತಿ ಸಂಪಾದನೆಯಾಗುತ್ತದೆನ್ನುವುದು ಈ ವಾದದ ಮೂಲ. ಪ್ರಾಚೀನ ಕಾಲದಲ್ಲಿ ಮೋಡಿಯ ಶಕ್ತಿಯನ್ನು ಗಳಿಸಬೇಕಾಗಿದ್ದರೆ ಏನೇನೊ ಕಷ್ಟಗಳನ್ನು ಅನುಭವಿಸಬೇಕಾಗಿದ್ದಿತಂತೆ. ಸುಖವನ್ನು ಸಾನ್ನಿಧ್ಯದಲ್ಲಿದ್ದರೂ ದೂರಮಾಡುವ ಮನಸ್ಥೈರ್ಯದಿಂದ ಶಕ್ತಿ ಸಂಚಯವಾಗುತ್ತದೆನ್ನುವುದು ಪ್ರಾಚೀನ—ಆಧುನಿಕವಾದ; ಪಂಚೇಂದ್ರಿಯಗಳಲ್ಲಿ ಒಂದು ವಿಕಲವಾದರೆ ಆ ಇಂದ್ರಿಯದ ಶಕ್ತಿ ಇತರ ಇಂದ್ರಿಯಗಳಲ್ಲಿ ಪ್ರವಹಿಸುತ್ತದೆ ಎನ್ನುವಂತೆ.

ಈ ವಾದದಲ್ಲಿ ಸ್ವಲ್ಪ ಹುರುಳಿಲ್ಲದಿಲ್ಲ. ಈ ಭ್ರಾಂತಿಯಿಂದ ಸುಷುಪ್ತಿಯಲ್ಲಿರುವ ಅನುಭವ ಸಹಸ್ರಗಳ ಸಂಪರ್ಕ ಹೆಚ್ಚು ಸಾಂದ್ರವಾಗುತ್ತದೆ ಎಂದು ಬೇಕಾದರೂ ಹೇಳಬಹುದು. ಇವೆಲ್ಲ ಸತ್ಯವೇ ಆದರೂ ಕಲಾವಿದನ ಕಲೆಯ ಮೂಲ ಬುದ್ಧಿಭ್ರಮಣೆಯಲ್ಲಿದೆ ಎನ್ನುವುದು ತಪ್ಪಾದೀತು. ಕವಿಗಳು ವಿಚಿತ್ರ ಕಲ್ಪನೆಗೆ ಅವಕಾಶ ಕೊಡುತ್ತಾರೆನ್ನುವುದು ಸತ್ಯವಾದುದು. ಕವಿಯು ಅದಕ್ಕೆ ಭಾಷೆಯಲ್ಲಿ ಯಾವ ವೇಷ ಕೊಟ್ಟರೂ ಅದರ ಮೂಲವನ್ನು ಸಂಪೂರ್ಣವಾಗಿ ಮರೆಸುವುದು ಅಸಾಧ್ಯ. ಹಾಗೆಯೇ ಪರೀಕ್ಷಿಸುವುದಾದರೆ, ವಿಜ್ಞಾನಿಗಳು, ಧನಿಕರು, ವಕೀಲರು, ವೈದ್ಯರು ಇವರೆಲ್ಲರೂ ಒಂದೊಂದು ರೀತಿಯಲ್ಲಿ ಈ ಭದ್ಮ್ಯವನ್ನು ಅನುಸರಿಸುತ್ತಾರೆ. ಅಭ್ಯಾಸ ಮಾಡುತ್ತಾರೆ ಎಂದು ಬೇಕಾದರೂ ಹೇಳಬಹುದು. ಉಪಾಧ್ಯಾಯರು ತರಗತಿಗಳಲ್ಲಿ ತೋರುವ ಕೋಪದಂತೆ; ನ್ಯಾಯಾಸ್ಥಾನದಲ್ಲಿ ನ್ಯಾಯಾಧೀಶರು ವ್ಯಕ್ತಪಡಿಸುವ ಆಸಕ್ತಿಯಂತೆ ಇವೂ. ಹೀಗಿದ್ದೂ ಲೇಖಕನಾದ ಕವಿಯೊಬ್ಬನೇ ಭ್ರಮಾವಶನೆನ್ನುವುದಾದರೆ, ಎಲ್ಲ ಬೌದ್ಧಿಕ ವ್ಯಾಪಾರಗಳೂ, ಶಕ್ತಿಗಳೂ ಭ್ರಮಾಜನಿತವೆಂದೇ ಹೇಳಬೇಕಾಗುತ್ತದೆ. ಅಷ್ಟೇ ಅಲ್ಲದೆ ಬೌದ್ಧಿಕವಾಗಿ ಶಕ್ತಿರಾಹಿತ್ಯವೂ, ಸಾಮಾನ್ಯ ಶಕ್ತಿಯೂ ಭ್ರಮಾಜನಿತವಾಗಿ ಹೋಗುತ್ತವೆ. ಅಂದರೆ ಒಟ್ಟು ಸಮಾಜವೇ ಭ್ರಮಾವೃತವೆಂದರೂ ತಪ್ಪಾಗುವುದಿಲ್ಲ.

ಈ ಸಂದರ್ಭದಲ್ಲಿ ಚಾರಲ್ಸ್ ಲ್ಯಾಂಬ ಬರೆದ ಪ್ರಬಂಧದಿಂದ ಈ ವಾಕ್ಯಗಳನ್ನು ಉದ್ಧಾರಮಾಡುವುದು ಬಹು ಉಚಿತವಾಗಿ ಕಾಣುತ್ತದೆ:

"The ground of the mistake is that men finding in the raptures of the highest poetry a condition of exaltation to which they have no parallel in their own experience, besides the spurious resemblance of it in dreams and fevers, impart a state of dreaminess and fever to the poet. But the true poet dreams being awake. He is not possessed by his subject but has dominion over it."

ಆದುದರಿಂದ ಕವಿಯ ವೀಕ್ಷಣ (Perception) ಅಭಿವ್ಯಕ್ತಿ (Presentation) ಮುಕ್ತಿ (Realization) ಇವು ಆ ಭ್ರಾಂತಿಯ ವಿಶೇಷ ಗುಣಗಳು. ಇದೊಂದು ಭ್ರಾಂತಿಯೆನ್ನುವುದಕ್ಕಿಂತ ಕ್ರಾಂತಿಪೂರ್ಣವಾದ ಶಾಂತಿಯೆನ್ನುವುದೂ, ದೈವದತ್ತವಾದ ಶಕ್ತಿಯೆಂದು ಹೇಳುವುದೂ ಯೋಗ್ಯವಾಗಿದೆ.

ಈ ಲೇಖನದಲ್ಲಿ ಹುಚ್ಚು, ಭ್ರಮೆ, ಭ್ರಾಂತಿ, ಬುದ್ಧಿಭ್ರಮಣೆ ಎಂಬ ಪದಗಳೆಲ್ಲಕ್ಕೂ ಹುಚ್ಚು, (Madness) ಎಂಬ ಅರ್ಥವೇ ಇದೆಯೆಂದು ಓದುಗರು ದಯವಿಟ್ಟು ತಿಳಿಯಬೇಕು. ಜಿ. ವೆ.

‘ಅಭಂಗ ವಿಠಲ’ನೆಂದರೇನು? (ಜಿಜ್ಞಾಸಾತ್ಮಕ)

(ಲೇಖಕರು: ವಿದ್ವಾನ್ ಕೆ. ವೆಂಕಟರಾಯಾಚಾರ್ಯರು, ಸುರತ್ಕಲ್ಲು)

ಆಸ್ತಿಕರಾದ ಭಾರತೀಯರು ತಮ್ಮ ಉಪಾಸ್ಯದೇವತೆಯನ್ನು ಹಲವಾರು ತೆರದಿಂದ ಪೂಜಿಸುತ್ತಾರೆಂಬುದು ನಮಗೆಲ್ಲಾ ತಿಳಿದುದೇ ಆಗಿದೆ. ಹರಿಪೂಜೆಯೊಂದಿಗೆ ಆತನ ಸ್ತುತಿಗಳನ್ನು ಹಾಡುವುದೂ ಉಂಟು, ಮಾತ್ರವಲ್ಲ, ‘ಕಲೌ ಸಂಕೀರ್ತನಾತ್’ ಎಂಬ ಭಾಗವತೋಕ್ತಿಯಂತೆ ಹಾಡುಗಳೇ ದೇವರಿಗೆ ಪ್ರೀತಿಯವುಗಳೆಂದೂ ಹೇಳಲಡ್ಡಿಯಿಲ್ಲ. ‘ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ (ಹರಿ)....’ಇತ್ಯಾದಿಯಾಗಿ ಶ್ರೀ ಜಗನ್ನಾಥದಾಸರು ‘ಹರಿಕಥಾಮೃತಸಾರ’ದಲ್ಲಿ ಸಾರಿದ್ದಾರೆ! ಇಂತಹ ಸ್ತುತಿಗಳನ್ನು—ಆ ಮೂಲಕ ತತ್ವಜ್ಞಾನವನ್ನೂ–ಜನತೆಗೆ ಒದವಿಸಿದ ಮಹನೀಯರನ್ನು ವ್ಯಾಸಕೂಟ ಹಾಗೂ ದಾಸಕೂಟವೆಂದು ಇಬ್ಬಗೆಯಲ್ಲಿ ಹೆಸರಿಸುವರು; ಸಂಸ್ಕೃತ ಹಾಗೂ ಆಯಾ ದೇಶಭಾಷೆಗಳಲ್ಲಿ ಆ ಕೃತಿಗಳನ್ನು ರಚಿಸಿದವರೆಂದು ಪ್ರತ್ಯೇಕಿಸುವ ಹೆಸರುಗಳವು! ತಮಿಳಿನಲ್ಲಿ ಆಳ್ವಾರರೂ, ಕನ್ನಡದಲ್ಲಿ ಪುರಂದರರೇ ಮೊದಲಾದವರೂ ಈ ದಾಸಕೂಟದಲ್ಲಿ ಸೇರತಕ್ಕವರು. ಇವರಲ್ಲಿ ಕನ್ನಡದವರು ರಚಿಸಿದ ಪದ್ಯಗಳ ಕೊನೆಗೆ ಅದೊಂದು ಪ್ರತ್ಯೇಕವಾದ ಮುದ್ರಿಕೆಗಳಲ್ಲದೆ (ಸ್ವನಾಮದವು) ವಿಠಲನೆಂಬ ಕೂಡಿಕೆಯಿದ್ದೇ ಇದೆ! ಈ ‘ವಿಠಲ’ನೆಂದರೇನೆಂದು ವಿವೇಚಿಸಿ, ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳುವರು: ಅತ್ತ, ‘ವಿದಾ ಠಾನ್ ಲಾತೀತಿ—(ಜ್ಞಾನೇನ ಮೂಢಾನ್ ಪಾಲಯತೀತಿ)—ವಿಠ್ಠಲ’ನೆಂದು **ಸಂಸ್ಕೃತದಲ್ಲಿ** ವಿಶದೀಕರಿಸುವರು. (ಶ್ರೀ। ವಿಜಯಧ್ವಜತೀರ್ಥರ ಭಾಗವತವ್ಯಾಖ್ಯಾನ ನೋಡಿರಿ)

ಇತ್ತ ‘ವಿಷ್ಣು’ವೆಂಬುದರ ರೂಪಾಂತರವು ವಿಟ್ಟುವೆಂದೂ, ಅದಕ್ಕೆ ‘ಅಲ’ವೆಂಬ ಪ್ರತ್ಯಯವನ್ನು ಹಚ್ಚಿದರೆ ವಿಟ್ಟಲ(ಳ)ವೆಂದಾಗುವದೆಂದೂ ಕನ್ನಡಿಗರು ಹೇಳುವರು!‘ಅಲ್ಪಪ್ರಾಣಾಕ್ಷರಗಳನ್ನು ಮಹಾಪ್ರಾಣಗಳಾಗಿ ಉಚ್ಚರಿಸುವ ಕ್ರಮ’ವು ಇತ್ತೀಚೆಗೆ ಜನರ ಸಾಹಿತ್ಯ ಹಾಗೂ ಮನೋಭಿತ್ತಿಯಲ್ಲಿ ಅಚ್ಚೊತ್ತಿದಂತೆ ಇರುವುದರಿಂದ, ಈ ವಿಟ್ಟಲ(ಳ)ನೆಂಬುದು ತಾನೇ ವಿಠ(ಠ್ಠ)ಲನೆಂದು ರೂಢಿಯಲ್ಲಿ ಬಂದಿರಬೇಕೆಂದು ತೋರುವುದು, (ಇದು ಹೇಗೂ ಪ್ರಕೃತದ ವಿಷಯವಲ್ಲವಾದುದರಿಂದ ಇಲ್ಲಿ ಅದರತ್ತ ಚರ್ಚೆಗೆಳಸಿಲ್ಲೆಂದು ಸಾಮಾನ್ಯತಃ ಹೇಳುತ್ತೇವೆ.) ಹರಿದಾಸರ ಕನ್ನಡ ಪದ್ಯ(ಹಾಡು)ಗಳ ತುದಿಗೆ ತನ್ನ ಮುದ್ರಿಕೆ ಹಾಗೂ ವಿಠಲನೆಂಬುದೂ ಇದ್ದೇ ಇದೆಯೆಂದು ವಾಡಿಕೆಯಲ್ಲಿ ಕಾಣುವುದು.

ಈ ವಿಠಲನ ಮೂರ್ತಿಗಳಲ್ಲಿ ಪ್ರಾಮುಖ್ಯವಾಗಿ ಭೀಮರಥಿ ನದಿಯ ದಡದಲ್ಲಿರುವ ಪುಂಡರೀಕ ಮುನಿಗೆ ಒಲಿದ ಕಾರಣ ‘ಪುಂಡರೀಕ ಕ್ಷೇತ್ರ’ವೆಂಬಲ್ಲಿ ಪಾಂಡುರಂಗನೆಂದು ಇನ್ನೊಂದು ಹೆಸರುಳ್ಳ, ವಿಠಲನ ಮೂರ್ತಿಯೇ ಹರಿದಾಸರೆಲ್ಲರಿಗೆ ಉಪಾಸ್ಯದೇವತೆಯಾಗಿ ಪ್ರಸಿದ್ಧವಾಗಿದೆಯಷ್ಟೆ! (ಬೇರೆಡೆಯ ವಿಠಲಮೂರ್ತಿಗಳಾದರೋ ಆ ಮೇಲಿನವೆಂದೇ ಇದರಿಂದ ಪ್ರತೀತವಲ್ಲವೇ?)

ಈ ವಿಠಲನ ಮೂರ್ತಿಯನ್ನು ಅದೊಮ್ಮೆ ‘ವಿಜಯನಗರ’ಕ್ಕೆ ತಂದರೆಂದೂ, ‘ತುಂಗಾ’ ತೀರದಲ್ಲಿಳಿಸಿ, ಗುಡಿಕಟ್ಟಿದರೆಂದೂ ಕೆಲವರು ಹೇಳುವರು. ಇದಕ್ಕೆ ಆಧಾರವಾದ ಅದೊಂದು ಹೇಳಿಕೆಯೆಂದರೆ, ಶ್ರೀ ವಾದಿರಾಜ ತೀರ್ಥರು (ಇ. ೧೪೮೦–೧೬೦೦) ಭಾರತವೆಲ್ಲೆಡೆ ಸಂಚರಿಸಿದ್ದು, ಆ ಬಗ್ಗೆ ರಚಿಸಿರಬೇಕೆಂಬ ‘ತೀರ್ಥಪ್ರಬಂಧ’ವೆಂಬ ಚಿಕ್ಕ ಹೊತ್ತಗೆಯ ಒಂದು ಪದ್ಯ:‘ತುಂಗಾತೀರಗತೋಽಸಿ ವಿಠ್ಠಲ **ದಿಶನ್ನನ್ಯಾಕೃತಿ-ವಾರ್ಣಂಛಿತಂ**’ಎಂದು (ಪೂರ್ವಪ್ರಬಂಧ ೧೩ನೆಯ ಪದ್ಯಾಂಶ) ಆದರೆ ಇಲ್ಲಿ ‘**ಅನ್ಯಾಕೃತಿ**’ಯೆಂದು ಹೇಳಿರುವುದರಿಂದ, ತುಂಗಾತೀರದ ವಿಠ್ಠಲನು ಪಂಡರಾಪುರದ ವಿಠ್ಠಲನಿಂದ ‘**ಅನ್ಯಾಕೃತಿ**’ಯೆಂದು (ವಿಜಯನಗರದ ವಿಠ್ಠಲನ ಗುಡಿಯ ಚಿತ್ರವು ಸುಪ್ರಸಿದ್ಧವೇ ಇದೆ, ಅಂದರೆ ಇಲ್ಲಿಯೂ ಭಕ್ತಿಯಿಂದ **ಬೇರೊಂದು** ವಿಠ್ಠಲನ ಗುಡಿ ಮೂರ್ತಿಗಳನ್ನು ನಿಲ್ಲಿಸಿದರೆಂದು) ತಾನೇ ಅರ್ಥವಾಗುವುದು.

ಆ ಪಂಢರಾಪುರದ ವಿಠಲನಿಗೆ(ಆ ಮೂರ್ತಿಗೆ) **ಅಭಂಗ ವಿಠಲನೆಂದು ಚೌಂಡರಸಕವಿಯು** ‘ಅಭಿನವ ದಶಕುಮಾರ ಚರಿತೆ ಮತ್ತು ನಳಚರಿತೆ’ಯಲ್ಲಿ ಹೇಳಿದ್ದಾನೆ. ಈ ‘ಅಭಂಗ’ನೆಂದರೇನೆಂದು ವಿವೇಚಿಸಿ, ಇದೇ ಕಳೆದ ಸಪ್ಟಂಬರ‘ಸುಬೋಧ’ದಲ್ಲಿ, ಶ್ರೀ‘ವಿದ್ಯಾರತ್ನ’ ಆರ್. ಎಸ್. **ಪಂಚಮುಖಿಯವರು** ಬರೆದಿದ್ದಾರೆ: ಅಭಂಗನೆಂದರೆ, ಭಂಗ (ಗಿ) ಹಾಗೂ ಮಣಿತ ಅಥವಾ **ಮುದ್ರೆಗಳಿಲ್ಲದ (ಅರ್ಥಾತ್ ನೇರವಾದ ನಿಲುವಿಕೆಯ)** ಮೂರ್ತಿಯೆಂದು. (‘ರಾಜಕವಿ’ ಶ್ರೀ. ಎಂ. ಗೋವಿಂದ ಪೈಯವರು ಇದನ್ನು ಒಪ್ಪಿದ ಪತ್ರವೂ ಇತ್ತು.)

ಆದರೆ, ಭಂಗ(ಗಿ)ಗಳಿಲ್ಲದೆ ಕೇವಲ ನೇರವಾದ ಮೂರ್ತಿಗಳಿಗೆ ಶಿಲ್ಪಕಲಾಶಾಸ್ತ್ರದಲ್ಲಿ ಅದೇನು ಹೆಸರಿಸಿರಬೇಕೆಂದು, ಅದೇ ಬರೆಹದಲ್ಲಿದ್ದ ಶ್ಲೋಕವೊಂದನ್ನು ವಿವರಿಸಿ ಶ್ರೀ। ಬಿ. **ವೆಂಕೋಬರಾಯರು** ಶ್ರೀ। ದಿವಂಗತ ಬಿ. ಎಂ. ಶ್ರೀಯವರ ‘ಸಂಭಾವನೆ’ಯಲ್ಲಿ (ಪುಟ ೪೩೪) ಬರೆದುದು:

೧. **ಸಮಭಂಗಿ:** ವಿಗ್ರಹದ ಎರಡು ಭುಜಗಳೂ ಒಂದೇ ತೆರನಾಗಿ; ಮಧ್ಯಸೂತ್ರವನ್ನು ಕಿರೀಟದಿಂದ ಹಿಡಿದರೆ, ಅದು ಕೆಳಗೆ ಹುಬ್ಬಿನ ನಡು ಹಾದು ಹೊಕ್ಕುಳ ಮೇಲಿಂದ ಪಾದಗಳ ಮಧ್ಯಕ್ಕೆ ಬರಬೇಕು.

೨. **ಅಭಂಗಿ:** ವಿಗ್ರಹದ ಎರಡು ಭುಜಗಳು ಒಂದೇ ತೆರನಾಗಿರದೆ, ಅವದಾದರೊಂದು ಭುಜವು ಕೊಂಚ ಕೆಳಗೆ ಇಳಿದಿರುವುದು. ಮಧ್ಯಸೂತ್ರವನ್ನು ಕಿರೀಟದಿಂದ ಕಾಲಿನ ಮಧ್ಯಕ್ಕೆ ಹಿಡಿದರೆ, ಅದು ನಾಭಿಯ ಎಡಕ್ಕಾಗಲೀ ಬಲಕ್ಕಾಗಲೀ ಬರುವುದು.

೩. **ತ್ರಿಭಂಗಿ:** ವಿಗ್ರಹವು ತಾವರೆಯ ದಂಟಿನಂತೆ ಮೂರು ಡೊಂಕಿನಲ್ಲಿರುತ್ತದೆ. ಮಧ್ಯಸೂತ್ರವು ಕಣ್ಣು ಗುಡ್ಡೆಯ ಮಧ್ಯಭಾಗದಿಂದ ಹೊರಟು, ವಕ್ಷಃಸ್ಥಳದ ಮೇಲಿಂದ ನಾಭಿಯ ಒಂದು ಪಾರ್ಶ್ವದಲ್ಲಿ ಹಾದುಹೋಗುವುದು.

೪. **ಅತಿಭಂಗಿ:** ಇದೂ ತ್ರಿಭಂಗಿಯಂತೆಯೇ. ಆದರೆ, ಹೆಚ್ಚಾಗಿ ಪಕ್ಕಕ್ಕೆ ಬಗ್ಗಿರುತ್ತದೆ.

ನಮ್ಮ ಮಾತು: ಆ ಸುಬೋಧದಲ್ಲೇ ಪ್ರಕಟಿಸಿದ ೨-೩ ವಿಠಲಮೂರ್ತಿಗಳಲ್ಲಿ ಅದಾವುದೂ ಇಲ್ಲಿ ಹೇಳಿದ ಅಭಂಗಿ (ಓರೆ) ಲಕ್ಷಣದಲ್ಲಿಲ್ಲ! ಹಾಗಾದರೆ, ಚೌಂಡರಸನು ಈ ಮೊದಲಲ್ಲಿ 'ಅಭಂಗ ವಿಠಲ'ನೆಂದುದರ ಆಶಯವೇನಿರಬಹುದೆಂದು ಬೇರೆ ಊಹಿಸಬೇಕಾಗಿದೆ: ಆ ೨-೩ ಚಿತ್ರದ ಮೂರ್ತಿಗಳಲ್ಲಿ ಪ್ರಾಚೀನತಮವಾಗಿರಬಹುದಾದ ಪಂಢರಾಪುರದ ವಿಗ್ರಹಕ್ಕೂ ಇತರ ಅರ್ವಾಚೀನಗಳಿಗೂ ಆಕಾರಭೇದವನ್ನು ಹೇಳಲಳವಲ್ಲ, ಎಲ್ಲವೂ **ನೇರವಾಗಿಯೇ** ಇವೆಯಷ್ಟೆ! ಅಂದಬಳಿಕ, ಆ ಪಂಢರಾಪುರದ ವಿಗ್ರಹವು ಕೆತ್ತನೆಯಲ್ಲಿ ಒಂದಿಷ್ಟೂ ಭಂಗವಾಗಿಲ್ಲೆಂದೋ, ಆ ಪಂಡರಿಗೆಗೆ ಈ ಮೊದಲಾಗಿರಬಹುದಾದ ಪರಕೀಯ ರಾಜರ ದಬ್ಬಾಳಿಕೆಯಲ್ಲಿ ಆ ವಿಗ್ರಹಕ್ಕೆ ಆದೇನೂ ಭಂಗವಾಗಿಲ್ಲೆಂದೋ, ಅರ್ಥದಿಂದ ಚೌಂಡರಸನು 'ಅಭಂಗವಿಠಲನೆ'ಂದು ಹೇಳಿರಬಹುದು! ಇದೊಂದು ಆಶಯಾಂತರವು ಶ್ರೀ! ಪಂಚಮುಖಿಯವರ ಬರೆಹಕ್ಕೆ ಅನುವಾಗಬಹುದೆಂದು ನಮಗೆ ತೋರುವುದು. (ಈ ವಿಷಯದಲ್ಲಿ ಚಾರಿತ್ರಿಕಾಧಾರಗಳು ವಿಚಾರಣೀಯಗಳಾಗಿವೆ.)

ಇನ್ನು, ಮರಾಠಿವಾಙ್ಮಯದಲ್ಲಿರುವ 'ಅಭಂಗ'ವೃತ್ತವು ಏನೊಂದೂ ಭಂಗ(ಬಂಧ)ವಿಲ್ಲದುದರಿಂದ ಆ ಹೆಸರುಗೊಂಡಂತೆ, ಈ ವಿಠಲನ ಮೂರ್ತಿಯೂ ಅದೇನೂ ಭಂಗ(ಗಿ)ಗಳಿಲ್ಲದುದರಿಂದ ಈ ಹೆಸರು ಬಂದಿರಬೇಕೆನ್ನಲಾಗದು. ಏಕೆಂದರೆ, ಅಭಂಗಗಳ ಸಾಲುಗಳ ಸಂಖ್ಯೆಗಳ ಮಟ್ಟಿಗೆ ಅದಷ್ಟು ನಿರ್ಬಂಧವಿಲ್ಲದಿದ್ದರೂ, ಪ್ರತಿ ಸಾಲುಗಳ ಮಟ್ಟಿಗೆ ಸಾಮಾನ್ಯ ನಿಯಮವಿರಲೇ ಬೇಕೆಂದು ಅವನ್ನು ಓದುವಾಗ ತಿಳಿವುದು. (ಈ ವಿಷಯದಲ್ಲಿ ಮರಾಠಿಭಾಷಾತಜ್ಞರ ಆಶಯವು ಬಹಳೇ ಅಗತ್ಯ) ಹಾಗೂ ಆ ವೃತ್ತದಿಂದಾಗಿ ಈ ವಿಠಲನಿಗೆ ಹೆಸರಿಸುವುದು ಅಸಂಭಾವ್ಯವಾದುದೆಂದು ಶ್ರೀಯುತರಂದಂತೆಯೇ, ಈ ವಿಠಲನ ಹೆಸರಿಂದಾಗಿ ಆ ಪದಗಳಿಗೆ ಅಭಂಗವೆಂದಿರಬೇಕೆಂಬುದೂ ಅಸಂಭಾವ್ಯವೆಂದು—(ಈ ಕ್ರಮಕ್ಕೆ ಬೇರೆ ಆಧಾರಗಳು ದೊರೆವನಕ)—ನಮಗೂ ತೋರುವುದು. ಉಡುಪು ಮೊದಲಾದೆಡೆಗಳ ನೇರವಾದ ಮೂರ್ತಿಗಳಿಗೆ ಅಭಂಗವೆಂದಿಲ್ಲ.

ಭಂಗ(ಗಿ) ಇಲ್ಲದುದು ಅಭಂಗವೆಂದು ಸಾಮಾನ್ಯವಾದ ಲೌಕಿಕ ರೀತಿಯಿಂದ ಒಮ್ಮೆಗೆ ಹೇಳಬಂದರೂ, ಇಂತಹ ಎಡೆಗೆ ಮೂರ್ತಿ ಶಿಲ್ಪಶಾಸ್ತ್ರದ ವಿಶೇಷಾರ್ಥವೂ ಅಗತ್ಯವಾಗಿದೆ. ಲೌಕಿಕದಲ್ಲೇ ಒಂದು ಶಬ್ದಕ್ಕೆ ಪರಸ್ಪರ ವಿರುದ್ಧಾರ್ಥವಿರುವ ನಿದರ್ಶನವಿದೆ: 'ರಿಷ್ಟ'ವೆಂದರೆ 'ಕ್ಷೇಮ (ಶುಭ) ವೆಂದೂ, 'ಅರಿಷ್ಟ'ವೆಂದರೆ ಕೆಟ್ಟುದೆಂದೂ ಸಾಮಾನ್ಯವಾಗಿ ನಮಗೆಲ್ಲಾ ತಿಳಿದುದೇ ಆಗಿದೆ. ಆದರೆ, 'ಅರಿಷ್ಟ'ವೆಂದರೆ ಒಳ್ಳಿತು ಕೆಡುಕುಗಳೆರಡಕ್ಕೂ ಹೆಸರಿದೆ (ಅರಿಷ್ಟೇತು ಶುಭಾಶುಭೇ—ಅಮರಕೋಶದ ನಾನಾರ್ಥವರ್ಗ). ಹಾಗೆ, ಅಭಂಗವೆಂದರೆ ಭಂಗವಿಲ್ಲದುದೆಂದು ಲೌಕಿಕಾರ್ಥವಿದ್ದರೂ, ಮೂರ್ತಿಶಿಲ್ಪನಿರ್ಮಾಣತಜ್ಞರ ಆಶಯದಲ್ಲಿ 'ಅಭಂಗವೆಂದರೆ ಭಂಗ(ಗಿ) ಇರುವಂತಹುದೆಂ'ದು ಇರಬಾರದೆಂದಿಲ್ಲ; ಮಾತ್ರವಲ್ಲ, ಇರುವುದನ್ನು ನಾವು ಈ ಮೊದಲೇ ತಿಳಿದೆವು.

ಒಟ್ಟಾರೆ, ಶ್ರೀಯುತ ಪಂಚಮುಖಿಯರೆಂದಂತೆ ಪಂಢರಾಪುರದ ವಿಠಲನ ಮೂರ್ತಿಯು ನೇರಾಗಿರುವುದರಿಂದ; ಅಭಂಗವೆಂದರೆ ಭಂಗವಾಗದ (ಭಿನ್ನವಾಗದ) ಮೂರ್ತಿಯೆಂಬುದೇ ಸಮಂಜಸವಾಗುವುದು.

ಈ ಬಗೆತಕ್ಕೆ ಇನ್ನೂ ಹೆಚ್ಚಿನ ಸಂಶೋಧನೆಯ ಬೆಂಬಲವು ದೊರೆಯಲೆಂದು ಹಾರೈಸಿದರೆ ತಪ್ಪಾಗಲಿಕ್ಕಿಲ್ಲ, ತಥಾಸ್ತು!

ದೂರದೃಶ್ಯ ಪ್ರಸಾರ (ಟೆಲಿವಿಷನ್)

[ಲೇಖಕರು: ಶ್ರೀ ಆರ್. ಎಲ್. ನರಸಿಂಹಯ್ಯ, ಬೆಂಗಳೂರು]

ನನ್ನ ಉಪನ್ಯಾಸಕ್ಕೆ ಪೀಠಿಕೆಯಾಗಿ ಉಪನಿಷತ್ತಿನ ಶಾಂತಿ ಮಂತ್ರವೊಂದನ್ನು ಆರಿಸಿಕೊಳ್ಳಲು ಅಪೇಕ್ಷಿಸುತ್ತೇನೆ. ಎಲ್ಲ ಉಪನಿಷತ್ತುಗಳ ಶಾಂತಿಮಂತ್ರಗಳೂ ಸರ್ವ ಸುಂದರವಾದವು, ಭಾವಪೂರ್ಣವಾದವು, ಆದರೆ ಇಂದಿನ ವಿಷಯದ ದೃಷ್ಟಿಯಿಂದ ಈ ಮಂತ್ರದ ಔಚಿತ್ಯ ಹೆಚ್ಚೆಂದು ನನ್ನ ನಂಬಿಕೆ. ಮಂತ್ರ ಇದು:

ಓಂ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮಥೋಬಲಂ ಇಂದ್ರಿಯಾಣಿ ಚ ಸರ್ವಾಣಿ । ಸರ್ವಂ ಬ್ರಹ್ಮೋಪನಿಷದಂ ಮಾಹಂ ಬ್ರಹ್ಮನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣಂ ಮೇऽಸ್ತು । ತದಾತ್ಮನಿ ನಿರತೇಯ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

ಈ ಪುರಾತನ ಮಂತ್ರದಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಭೂಮಿಯ ಮೇಲೆ ಮನುಷ್ಯನ ಸೃಷ್ಟಿಯಾದಂದಿನಿಂದ ಅವನು ತನ್ನ ಕೈಕಾಲುಗಳು, ಮಾತು, ಉಸಿರು, ಕಣ್ಣು, ಕಿವಿ ಮೊದಲಾದ ಎಲ್ಲ ಇಂದ್ರಿಯಗಳ ಸೌಷ್ಠವ, ಶಕ್ತಿಗಳು ಸರ್ವತೋಮುಖವಾಗಿ ಅಭಿವೃದ್ಧಿಯಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತ ಬಂದಿದ್ದಾನೆ. ಪ್ರಾರ್ಥನೆಗೆ ಸಹಕಾರಿಯಾಗಿ ಅವನ ಉದ್ಯಮ ಸಾಹಸಗಳ ನಡೆಯೂ ಇದೇ ದಿಕ್ಕಿನಲ್ಲಿ ಸಾಗಿದೆ. ಉದಾಹರಣೆಯಾಗಿ ಕಾಲುಗಳಿಂದ ನಡೆಯುವುದರಲ್ಲಿಯೂ, ಓಡುವುದರಲ್ಲಿಯೂ ಸಾಕಾದಷ್ಟು ಸಾಮರ್ಥ್ಯಗಳಿಸಿದ ಮೇಲೆ, ಅಷ್ಟಕ್ಕೇ ತೃಪ್ತನಾಗದೆ, ಹೆಚ್ಚು ದೂರ, ಹೆಚ್ಚು ವೇಗವಾಗಿ ಚಲಿಸುವ ಉದ್ದೇಶದಿಂದ ಕುದುರೆ, ಗಾಡಿ, ಒಂಟೆಗಳನ್ನು ತನ್ನ ಸೇವೆಗೆ ಅಳವಡಿಸಿಕೊಂಡನು. ಅದೂ ಅವನಿಗೆ ಸಾಲದಾಯಿತು. ರೈಲುಯಂತ್ರ, ಮೋಟಾರ್‌ಕಾರ್, ನೀರಿನ ಮೇಲೆ ಸಾಗಲು ಹಡಗುಗಳು, ನೀರಿನ ಒಳಗೆ ಕೂರಲು ಸಬ್‌ಮೆರೀನ್ ಅಥವಾ ಜಲಾಂತರ್ಗಾಮಿ ಯಂತ್ರಗಳು, ಗಾಳಿಯಲ್ಲಿ ಹಾರಲು ವಿಮಾನಗಳು ಅವನಿಗೆ ಬೇಕಾದುವು. ಬಾಹುಶಕ್ತಿಯನ್ನು ನೂರ್ಮಡಿ ಮಾಡಿಕೊಳ್ಳಲು ವಿಧವಿಧವಾದ ಯಂತ್ರಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಇದೇ ರೀತಿಯಲ್ಲಿ ತನ್ನ ವಾಕ್ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮೊದಲು ಭಾಷಾಸಂಪತ್ತನ್ನು ಬೆಳೆಸಿಕೊಂಡು, ತನ್ನ ಮಾತು ಏಕಕಾಲದಲ್ಲಿ ನೂರಿನ್ನೂರಕ್ಕಿಂತ ಹೆಚ್ಚು ಮಂದಿಗೆ ಕೇಳಿಸುವಂತೆ ಕೂಗಿಕೊಳ್ಳುವುದು ಸಾಧ್ಯವಲ್ಲದ್ದರಿಂದ ಧ್ವನಿವರ್ಧಕ(1)ಗಳನ್ನು ಬಳಕೆಗೆ ತಂದು ತನ್ನ ಶ್ರೋತೃವರ್ಗವನ್ನು ಹೆಚ್ಚಿಸಿಕೊಂಡಿದ್ದಾನೆ. ಕೇಳುವವನೂ ಕೂಡ ಅವನ ಎದುರಿಗಿರುವ ಹತ್ತಾರು ಮಂದಿಗಳ ಮಾತುಗಳು ಕಿವಿಗೆ ಬಿದ್ದಷ್ಟು ಮಾತ್ರಕ್ಕೆ ತೃಪ್ತನಾಗುವುದಿಲ್ಲ. ನೂರಾರು, ಸಾವಿರಾರು ಮೈಲುಗಳ ದೂರದಲ್ಲಿ ಮಾತನಾಡುತ್ತಿರುವವರ, ಹಾಡುತ್ತಿರುವವರ ಕಂಠ ಸ್ವರಗಳನ್ನು ಕೇಳಲು ಅವನಿಗೆ ಕುತೂಹಲ. ಈ ಬಯಕೆಯನ್ನು ಪೂರೈಸಲು ರೇಡಿಯೋ ಪ್ರೇಕ್ಷಕ(2)ಗಳನ್ನೂ, ಗ್ರಾಹಕ(3)ಗಳನ್ನೂ ತಯಾರಿಸಿದ್ದಾನೆ.

ಇನ್ನು ಉಸಿರು ಅಥವಾ ಪ್ರಾಣಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಕೃತಿಯಲ್ಲಿ ತಾನಾಗಿಯೇ ಬಿಡುವ ಕಾಯಿ ಹಣ್ಣುಗಳಿಂದ ಹೊಟ್ಟೆಯನ್ನು ತುಂಬಿಕೊಂಡು ಸುಮ್ಮನಿರಲಾಗಲಿಲ್ಲ. ಮಾನವನಿಗೆ ಮೇಕೆ ಹಸುಗಳ ಹಾಲು, ಗೋಧಿ ಭತ್ತ, ರಾಗಿ ಇತ್ಯಾದಿ ಧಾನ್ಯಗಳು, ಪಾಕವಿದ್ಯೆ ಇವೆಲ್ಲಾ ಬೇಕಾಯಿತು. ಅವನು ಇಷ್ಟಕ್ಕೂ ನಿಲ್ಲದೆ ಆಯುಸ್ಸನ್ನು ಹೆಚ್ಚಿಸಿಕೊಳ್ಳಲು ವೈದ್ಯವಿದ್ಯೆ, ಶಸ್ತ್ರ ಚಿಕಿತ್ಸೆಗಳನ್ನೂ ಕಲಿತಿದ್ದಾನೆ. ಆದರೆ ಈ ಮಾರ್ಗದಲ್ಲಿ ಪ್ರಾಯಶಃ ಅವನ ಉದ್ಯಮಗಳು ಸಾಕಷ್ಟು ಫಲಕಾರಿಯಾಗಿಲ್ಲ

ಕೊನೆಯದಾಗಿ ದೃಷ್ಟಿಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಟೆಲೆಸ್ಕೋಪ್ ಅಥವಾ ದೂರದರ್ಶಿನಿ, ಮೈಕ್ರೋಸ್ಕೋಪ್ ಅಥವಾ ಸೂಕ್ಷ್ಮದರ್ಶಿನಿ, ಪದಾರ್ಥಗಳ ಒಳಗೆ ಹುದುಗಿರುವುದನ್ನು ಭೇದಿಸಿ ನೋಡಲು X— ಕಿರಣಗಳು, ನೀಲಾತೀತ(4) — ರಕ್ತಾತೀತ(5) ಕಿರಣಗಳು ಮುಂತಾದ ಸಾಧನಗಳನ್ನು ಬಳಸಿಕೊಂಡಿದ್ದಾನೆ. ಇಷ್ಟಾದರೂ ಅವನ ಒಂದು ದೊಡ್ಡ ಬಯಕೆ ಪೂರ್ತಿಯಾಗಿ ಆರಿಲ್ಲ. ಅದು ದೂರದಲ್ಲಿ ನಡೆಯುತ್ತಿರುವ ದೃಶ್ಯಗಳನ್ನೂ ಅಥವಾ ನೋಟಗಳನ್ನು ಕುಳಿತಲ್ಲಿಯೇ ಕುಳಿತು ನೋಡುವುದು. ಇದು ಸಾಧ್ಯವಾಗುವಂತೆ ದೂರದೃಶ್ಯದರ್ಶಿನಿಗಳನ್ನು (ಟೆಲಿವಿಷನ್‌ಸೆಟ್‌ಗಳನ್ನು) ಬಳಕೆಗೆ ತರುವ ಸಾಹಸ ಕಾರ್ಯದಲ್ಲಿ ಇಂದಿನ ಅನೇಕ ವಿಜ್ಞಾನಿಗಳೂ, ಪರಿಕರ್ಮಿಗಳೂ, ಆಡಳಿತಗಾರರೂ ತೊಡಗಿದ್ದಾರೆ. ಇವರ ಪ್ರಯತ್ನಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬಂದಿವೆ

1. Speech amplifiers. 2. Transmitters. 3. Receivers. 4. Ultra-violet. 5. Improved.

ಯೆಂದು ತಿಳಿಸುವುದೇ ನನ್ನ ಇಂದಿನ ಪುಟ್ಟ ಉಪನ್ಯಾಸದ ಉದ್ದೇಶ.

ದೂರ ದೃಶ್ಯದರ್ಶಿನಿಯ ತತ್ತ್ವವು ರೇಡಿಯೋ ಮತ್ತು ವಾಕ್ಚಿತ್ರಗಳ ಪರಿಚಯವಿರುವವರಿಗೆ ಅಷ್ಟೇನೂ ಹೊಸದಾಗಿ ತೋರಲಾರದು. ವಾಕ್ಚಿತ್ರಗಳಲ್ಲಿ ಬೆಳಕನ್ನು ಮೊದಲು ವಿದ್ಯುತ್ಪ್ರವಾಹವನ್ನಾಗಿ ಪರಿವರ್ತಿಸಿ ಅನಂತರ ಅದನ್ನು ಧ್ವನಿಯನ್ನಾಗಿ ಮಾರ್ಪಡಿಸುತ್ತಾರೆ. ಇದಕ್ಕೆ ಉಪಯೋಗವಾಗುವ ಮುಖ್ಯ ಉಪಕರಣ ಪ್ರಭಾವಿದ್ಯುಕ್ಕೋಶ(6). ಪ್ರಭಾವಿದ್ಯುತ್ಕೋಶದ ಮೇಲೆ ಬೆಳಕು ಬಿದ್ದರೆ ವಿದ್ಯುತ್ತು ಉತ್ಪತ್ತಿಯಾಗುತ್ತದೆ. ವಾಕ್ಚಿತ್ರ ಯಂತ್ರದಲ್ಲಿ ಒಂದು ಪ್ರಭಾವಿದ್ಯುತ್ಕೋಶವನ್ನು ಉಪಯೋಗಿಸುತ್ತಾರೆ. ಟೆಲಿವಿಷನ್ ಯಂತ್ರದಲ್ಲಿ ಹಾಗಲ್ಲ. ನಾಲ್ಕಾರು ಅಂಗುಲ ಉದ್ದ ಅಗಲಗಳಿರುವ ಒಂದು ಫಲಕದ ಮೈತುಂಬ ತುಂತುರು ತುಂತುರಾಗಿ ಹಲವು ಕೋಟಿ ಸೂಕ್ಷ್ಮಗಾತ್ರದ ಪ್ರಭಾವಿದ್ಯುತ್ಕೋಶಗಳನ್ನು ಹರಡುತ್ತಾರೆ. ಈ ಫಲಕವನ್ನು ಒಂದು ಅನಿಲರಹಿತವಾದ ಗಾಜಿನ ಕೊಳವೆಯಲ್ಲಿ ನಿಲ್ಲಿಸುತ್ತಾರೆ. ಫೋಟೋಗ್ರಾಫಿಕ್ ಕ್ಯಾಮರವು ರೂಪಿಸುವ ಪ್ರತಿಬಿಂಬವನ್ನು ಈ ಪ್ರಭಾವಿದ್ಯುತ್ಕೋಶಗಳ ಫಲಕದ ಮೇಲೆ ಬೀಳುವಂತೆ ಮಾಡುತ್ತಾರೆ. ಪ್ರತಿಬಿಂಬದಲ್ಲಿ ಎಲ್ಲೆಲ್ಲಿ ಬೆಳಕೋ ಅಲ್ಲಲ್ಲಿ ವಿದ್ಯುತ್ತು ಶೇಖರವಾಗುತ್ತದೆ; ಎಲ್ಲಿ ಕತ್ತಲೋ ಅಲ್ಲಿ ವಿದ್ಯುತ್ತು ಹುಟ್ಟುವುದಿಲ್ಲ. ಬೆಳಕಿನ ಪ್ರಮಾಣ ಹೆಚ್ಚುಕಡಮೆಯಾದಂತೆ ಅದಕ್ಕನುಗುಣವಾಗಿ ಫಲಕದ ಮೇಲೆ ಶೇಖರವಾದ ವಿದ್ಯುತ್ತಿನ ಪ್ರಮಾಣವೂ ಹೆಚ್ಚುಕಡಮೆಯಾಗುತ್ತದೆ. ಒಟ್ಟಿನಲ್ಲಿ ನಮಗೆ ಪರಿಚಿತವಾಗಿರುವ ಸಾಮಾನ್ಯ ಚಿತ್ರಗಳು ಹೇಗೆ ವಿವಿಧ ಪ್ರಮಾಣಗಳ ನೆಳಲು ಬೆಳಕುಗಳ ವ್ಯೂಹಗಳೋ, ಹಾಗೆಯೇ ಫಲಕದ ಮೇಲೆ ರೂಪುಗೊಳ್ಳುವ ವಿದ್ಯುಚ್ಚಿತ್ರವು ವಿವಿಧ ಪ್ರಮಾಣಗಳ ವಿದ್ಯುತ್ಕಣಗಳ ವ್ಯೂಹ. ಆದರೆ ಈ ವಿದ್ಯುಚ್ಚಿತ್ರವು ನಮ್ಮ ಕಣ್ಣುಗಳಿಗೆ ಕಾಣುವುದಿಲ್ಲವಾದ್ದರಿಂದ, ವಿಜ್ಞಾನಿಯು ಇದನ್ನು ನೋಡಬಲ್ಲ ವಿದ್ಯುಚ್ಚಕ್ಷುಸ್ಸನ್ನೂ ಗಾಜಿನ ಕೊಳವೆಯಲ್ಲಿ ಇಟ್ಟಿರುತ್ತಾನೆ. ಕೊಳವೆಯ ಬುಡದಲ್ಲಿರುವ ತಂತಿಯ ಸಣ್ಣ ಸುರುಳಿಯೊಂದರಲ್ಲಿ ವಿದ್ಯುತ್ತನ್ನು ಹರಿಯಿಸಿ ಸುರುಳಿಯನ್ನು ಕೆಂಪಗೆ ಕಾಯಿಸುತ್ತಾನೆ. ಆಗ ಸುರುಳಿಯಿಂದ ವಿದ್ಯುತ್ಕಣಗಳ ಅಂದರೆ ಎಲೆಕ್ಟ್ರಾನ್‌ಗಳ ಧಾರೆಯೊಂದು ಹೊರಡುತ್ತದೆ. ಈ ಎಲೆಕ್ಟ್ರಾನ್ ಧಾರೆಯೇ ವಿದ್ಯುಚ್ಚಕ್ಷುಸ್ಸು. ನಾವು ಈ ಹಾಳೆಯನ್ನು ಓದುವಾಗ ಎಡದಿಂದ ಬಲಕ್ಕೆ ಹಾಳೆಯ ಮೊದಲನೆಯ ಸಾಲ ಮೇಲೆ ನಮ್ಮ ನೋಟವನ್ನು ಹರಿಸಿ, ಅನಂತರ ಎರಡನೆಯ ಸಾಲು, ಮೂರನೆಯ ಸಾಲು, ಹಾಗೆಯೇ ಕೊನೆಯ ಸಾಲು ವರೆಗೂ ನಮ್ಮ ದೃಷ್ಟಿಯನ್ನು ಕ್ರಮವಾಗಿ ಎಡದಿಂದ ಬಲಕ್ಕೆ ಹರಿಸುತ್ತೇವಷ್ಟೆ. ಅದೇ ರೀತಿಯಲ್ಲಿಯೇ ಎಲೆಕ್ಟ್ರಾನ್ ಧಾರೆಯ ತುದಿಯನ್ನು ಪ್ರಭಾವಿದ್ಯುತ್ಕೋಶಗಳ ಫಲಕದ ಮೇಲೆ ಎಡದಿಂದ ಬಲಕ್ಕೆ, ಮೇಲಿಂದ ಕೆಳಗೆ ಸಾಲು ಸಾಲಾಗಿ ಕ್ರಮವಾಗಿ ಹರಿಯಿಸುತ್ತಾರೆ. ಎಲೆಕ್ಟ್ರಾನ್ ಧಾರೆಯು ಈ ರೀತಿ ವಿದ್ಯುಚ್ಚಿತ್ರವನ್ನು ನೋಡುವ ವಿಧಾನವನ್ನು ಪ್ರಸ್ತಾರ(7)ವೀಕ್ಷಣವೆಂದು ಕರೆಯಬಹುದು. ಫಲಕದ ಮೇಲೆ ಎಲೆಕ್ಟ್ರಾನ್ ಧಾರೆಯು ಹೀಗೆ ಕ್ರಮವಾಗಿ ಹರಿದು ಹೋದಂತೆ ಫಲಕದ ವಿದ್ಯುತ್ಕೋಶಗಳಲ್ಲಿ ಶೇಖರವಾಗಿದ್ದ ವಿದ್ಯುತ್ತು ಪ್ರವಾಹರೂಪವಾಗಿ ಕೊಳವೆಯ ಹೊರಗಿರುವ ಉಪಕರಣದಲ್ಲಿ ಹರಿಯುತ್ತದೆ. ಈ ವಿದ್ಯುತ್ಪ್ರವಾಹದ ಏರಿಳಿತಗಳು ವಿದ್ಯುಚ್ಚಿತ್ರಕ್ಕನುಗುಣವಾಗಿ ಇರುತ್ತವೆ. ವಿದ್ಯುಚ್ಚಿತ್ರವು ಕ್ಯಾಮರಾ ಮುಂದಿನ ದೃಶ್ಯದ ಚಿತ್ರವಾದ್ದರಿಂದ ಹೀಗೆ ಉತ್ಪತ್ತಿಯಾದ ವಿದ್ಯುತ್ಪ್ರವಾಹದ ಏರಿಳಿತಗಳು ದೃಶ್ಯದ ಬೆಳಕು ಕತ್ತಲುಗಳನ್ನು ಅನುಸರಿಸುತ್ತವೆ ಎಂದ ಹಾಗಾಯಿತು.

ಈಗ ಎಲೆಕ್ಟ್ರಾನ್ ಧಾರೆಯು ಫಲಕದ ಉಳುಮೆಯನ್ನು ಎಷ್ಟು ಸಾಲುಗಳಲ್ಲಿ ಮುಗಿಸಬೇಕೆಂಬ ಪ್ರಶ್ನೆ ಬರುತ್ತದೆ. ಸಾಲುಗಳ ಸಂಖ್ಯೆ ಹೆಚ್ಚಾದಷ್ಟೂ ಚಿತ್ರವು ಹೆಚ್ಚು ವಿವರವಾಗಿ ಬಿಡಿಸಲ್ಪಡುತ್ತದೆಂಬುದು ಸ್ವತಃ ಸಿದ್ಧ. ದೃಶ್ಯದ ವಿವರಗಳೆಲ್ಲ ಸಮರ್ಪಕವಾಗಿ ನಮ್ಮ ಕಣ್ಣ ಮುಂದೆ ನಿಲ್ಲುವಂತಾಗಬೇಕಾದರೆ ೪೪೧ ಪಂಙ್ತಿಗಳ ಪ್ರಸಾರವೀಕ್ಷಣವು ಅವಶ್ಯವೆಂದು ಸದ್ಯಕ್ಕೆ ತೀರ್ಮಾನವಾಗಿದೆ. ಈ ಒಂದೊಂದು ಪಂಙ್ತಿಯುದ್ದಕ್ಕೂ ಬೆಳಕು ಕತ್ತಲೆಗಳು ವಿವಿಧ ಪ್ರಮಾಣಗಳಲ್ಲಿ ಹರಡಿರುತ್ತದೆ. ಚಿತ್ರವನ್ನು ಮೇಲಿಂದ ಕೆಳಗೆ ಬಿಡಿಸಲು ೪೪೧ ಸಾಲುಗಳು ಬೇಕಾದರೆ, ಅಷ್ಟೇ ವಿವರವಾಗಿ ಚಿತ್ರವನ್ನು ಎಡದಿಂದ ಬಲಕ್ಕೆ ಬಿಡಿಸಬೇಕಾದರೆ, ಒಂದೊಂದು ಸಾಲಿನಲ್ಲಿಯೂ ವಿದ್ಯುತ್ತಿನ ೪೪೧ ಏರಿಳಿತಗಳು ಎಲೆಕ್ಟ್ರಾನ್ ಧಾರೆಗೆ ಸಿಗುತ್ತವೆ ಎಂದ ಹಾಗಾಯಿತು. ಇದು ಫಲಕವು ಚೌಕವಾಗಿದ್ದರೆ, ಫಲಕದ ಉದ್ದವು ಅಗಲಕ್ಕಿಂತ ಹೆಚ್ಚಾದರೆ ಅದೇ ಪ್ರಮಾಣದಲ್ಲಿ ಏರಿಳಿತಗಳೂ ಹೆಚ್ಚು ಬಾರಿ ಆಗುತ್ತವೆ. ಸಾಮಾನ್ಯವಾಗಿ ಚಿತ್ರದ ಉದ್ದವು ಅಗಲದ ೪/೩ರಷ್ಟು ಇರುತ್ತದೆ. ಅಲ್ಲಿಗೆ ಚಿತ್ರದ ಒಂದು ಪ್ರಸ್ತಾರವೀಕ್ಷಣದಲ್ಲಿ ವಿದ್ಯುತ್ಪ್ರವಾಹವು ಸುಮಾರು ಎರಡೂಕಾಲು ಲಕ್ಷ ಬಾರಿ ಏರಿಳಿದಿರುತ್ತದೆ ಎಂದಾಯಿತು. ಒಂದು ಪ್ರಸ್ತಾರವೀಕ್ಷಣದ ಕಾಲ ಎಷ್ಟಿರಬೇಕೆಂಬುದು ಮುಂದಿನ ಪ್ರಶ್ನೆ. ದೃಶ್ಯವು ಚಲನ ದೃಶ್ಯವಾಗಿದ್ದರೆ, ಆ ಚಲನೆಯು ಸಹಜವಾಗಿ ನಮಗೆ ತೋರಬೇಕಾದರೆ, ಒಂದು ಸೆಕೆಂಡಿಗೆ ೨೦ ಬಾರಿಯಾದರೂ ಪ್ರಸ್ತಾರ ವೀಕ್ಷಣಗಳಾಗಬೇಕು. ಆದ್ದರಿಂದ ಚಿತ್ರಸಂಕೇತದ(8)ವಿದ್ಯುತ್ಪ್ರವಾಹವು ಸೆಕೆಂಡೊಂದಕ್ಕೆ ಸುಮಾರು ೪೦—೫೦ ಲಕ್ಷ ಸಲ ಏರಿಳಿದಿರುತ್ತದೆ. ಈ ನಲವತ್ತೈ

6. Photo-electric cell. 7. Scanning.
8. Picture Signal. 9. Video frequency.

ವತ್ತು ಲಕ್ಷಗಳನ್ನು ದೃಷ್ಟ್ಯಾವರ್ತ ಸಂಖ್ಯೆ(9)ಎಂದು ಕರೆಯುತ್ತಾರೆ.

ಪ್ರಭಾವಿದ್ಯುತ್ಕೋಶ ಫಲಕದಿಂದ ಉತ್ಪತ್ತಿಯಾದ ಈ ದೃಷ್ಟ್ಯಾವರ್ತ ಪ್ರವಾಹವು ಬಹಳ ಸೂಕ್ಷ್ಮ ಪ್ರವಾಹವು. ಆದ್ದರಿಂದ ಮೊದಲು ಧ್ವನಿವರ್ಧಕಗಳಂಥ ಸಾಧನಗಳನ್ನು ಉಪಯೋಗಿಸಿ ಈ ಸೂಕ್ಷ್ಮಪ್ರವಾಹವನ್ನು ಪ್ರಬಲದೃಷ್ಟ್ಯಾವರ್ತ ಪ್ರವಾಹವನ್ನಾಗಿ ವರ್ಧಿಸುತ್ತಾರೆ. ಇಲ್ಲಿಗೆ ಚಿತ್ರ ವಿಭಜನೆ ಮಾಡಿ ಅದನ್ನು ವಿದ್ಯುತ್ಪ್ರವಾಹವನ್ನಾಗಿ ಪರಿವರ್ತಿಸಿದ್ದಾಯಿತು. ಇದು ಎಲ್ಲ ದಿಕ್ಕುಗಳಿಗೂ ಪ್ರಸಾರವಾಗುವಂತಾಗಬೇಕಾದರೆ ಈ ಚಿತ್ರಸಂಕೇತಾವರ್ತಗಳಿಗೆ ನಾವು ಒಂದು ವಾಹನವನ್ನು ಒದಗಿಸಬೇಕು. ರೇಡಿಯೋ ಪ್ರಸಾರಗಳಲ್ಲಿ ಶ್ರವಣಾವರ್ತಗಳಿಗೆ(10) ಹೀಗೆಯೇ ವಾಹನವನ್ನು ಒದಗಿಸಿಕೊಡುತ್ತಾರೆ. ಅಲ್ಲಿ ಶ್ರವಣಾವರ್ತಗಳ ಸಂಖ್ಯೆ ಸೆಕೆಂಡೊಂದಕ್ಕೆ ೪೦ರಿಂದ ಆರೇಳು ಸಾವಿರಗಳನ್ನು ಮೀರುವುದಿಲ್ಲ. ಆದ್ದರಿಂದ ಅವುಗಳಿಗೆ ವಾಹನವಾಗಿ ಸೆಕೆಂಡೊಂದಕ್ಕೆ ಐವತ್ತು ಸಾವಿರದಿಂದ ಸುಮಾರು ಎರಡು ಕೋಟಿಗಳ ವರೆಗಿನ ಆವರ್ತಗಳ ರೇಡಿಯೋ ಅಲೆಗಳನ್ನು ಉಪಯೋಗಿಸುತ್ತಾರೆ. ಇಲ್ಲಿ ದೃಷ್ಟ್ಯಾವರ್ತಗಳ ಸಂಖ್ಯೆ ಸೆಕೆಂಡೊಂದಕ್ಕೆ ಐವತ್ತು ಲಕ್ಷಗಳ ವರೆಗೂ ಏರುವುದರಿಂದ, ಇವುಗಳಿಗೆ ವಾಹನವಾಗಿ ಹಲವು ಕೋಟಿಗಳಿಂದ ಹಲವು ನೂರು ಕೋಟಿಗಳ ಆವರ್ತಗಳ ರೇಡಿಯೋ ಅಲೆಗಳನ್ನೇ ಉಪಯೋಗಿಸಬೇಕಾಗುತ್ತದೆ. ಹೀಗೆ ದೃಷ್ಟಿ ಸಂಕೇತ ಆವರ್ತಗಳನ್ನು ಸೆಕೆಂಡೊಂದಕ್ಕೆ ಹಲವು ಕೋಟಿಗಳ ವಾಹನಾವರ್ತಗಳ(11) ಮೇಲೆ ಕೂಡಿಸಿ ಆ ವಾಹನಾವರ್ತ ಪ್ರವಾಹವನ್ನು ವಿಸರಣ ತಂತ್ರೀವ್ಯೂಹ(12) (ಏರಿಯಲ್ ವ್ಯೂಹ)ದಲ್ಲಿ ಹರಿಯಿಸಿದರೆ ದೃಶ್ಯಪ್ರಸಾರವಾಗುತ್ತದೆ. ಇದು ದೂರದೃಶ್ಯ ಪ್ರೇಕ್ಷಕಗಳ (ಕಳುಹಿಸುವ ಯಂತ್ರಗಳ) ತತ್ತ್ವದ ಸಂಕ್ಷಿಪ್ತ ವರ್ಣನೆ.

ದೂರದೃಶ್ಯ ಗ್ರಾಹಕಗಳ ತತ್ತ್ವ ಹೀಗೆ. ಪ್ರೇಕ್ಷಕದಿಂದ ಪ್ರಸಾರವಾಗುತ್ತಿರುವ ಹಲವು ಕೋಟಿ ಆವರ್ತಗಳ ವಿಸರಣ ಶಕ್ತಿಯನ್ನು ತಂತ್ರೀವ್ಯೂಹದಿಂದ (ಏರಿಯಲ್‌ಇಂದ) ಮೊದಲು ಹಿಡಿಯುತ್ತಾರೆ. ಆದರೆ ಏಕಕಾಲದಲ್ಲಿ ಅನೇಕ ಪ್ರೇಕ್ಷಕಗಳು ದೃಶ್ಯ ಪ್ರಸಾರ ಮಾಡುತ್ತಿರಬಹುದಲ್ಲವೇ? ಆದ್ದರಿಂದ ನಮಗೆ ಬೇಕಾದ ಪ್ರೇಕ್ಷಕದ ವಾಹನಾವರ್ತಕ್ಕೆ ಸರಿಯಾಗಿ ನಮ್ಮ ಗ್ರಾಹಕವನ್ನು ಶ್ರುತಿ(13)ಮಾಡಿಕೊಳ್ಳಬೇಕು. ಇದು ರೇಡಿಯೋ ಗ್ರಾಹಕಗಳನ್ನು ನಮಗೆ ಬೇಕಾದ ಕೇಂದ್ರಗಳಿಗೆ ಶ್ರುತಿಮಾಡಿಕೊಳ್ಳುವಂತೆಯೇ. ಹೀಗೆ ಸರಿಯಾಗಿ ಶ್ರುತಿಸಮನ್ವಯವಾದಾಗ ದೂರದೃಶ್ಯಗ್ರಾಹಕದಲ್ಲಿರುವ ಉಪಕರಣಗಳು ವಾಹನಾವರ್ತಗಳಿಂದ ದೃಷ್ಟ್ಯಾವರ್ತ ಸಂಕೇತಗಳನ್ನು ಪ್ರತ್ಯೇಕಿಸಿ ಅವುಗಳನ್ನು ವರ್ಧಿಸುತ್ತವೆ. ಈ ದೃಷ್ಟಿ ಸಂಕೇತಗಳು ದೃಶ್ಯವನ್ನು ತುಂಡು ತುಂಡಾಗಿ ಮಾಡಿದ್ದರ ಸಂಕೇತಗಳಾದ್ದರಿಂದ ಈ ಸಂಕೇತಗಳನ್ನು ಸರಿಯಾದ ಕ್ರಮದಲ್ಲಿ ಸಂಯೋಜಿಸಿ ವಿದ್ಯುತ್ಸಂಕೇತಗಳನ್ನು ಬೆಳಕಿಗೆ ಪರಿವರ್ತಿಸಿದರೆ ದೃಶ್ಯದ ಚಿತ್ರವು ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ.

ದೂರದೃಶ್ಯಗ್ರಾಹಕಗಳಲ್ಲಿ ಚಿತ್ರಸಂಯೋಜನೆಗಾಗಿ ಎಲೆಕ್ಟ್ರಾನ್ ಧಾರೆಯ ಒಂದು ಗಾಜಿನ ಕೊಳವೆಯನ್ನು ಉಪಯೋಗಿಸುತ್ತಾರೆ. ಪ್ರೇಕ್ಷಕದಲ್ಲಿ ಉಪಯೋಗಿಸುವ ಕೊಳವೆಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವುಂಟು. ಇದರ ತುದಿಯೇ ಗಾಜಿನ ಪರದೆ. ಈ ಪರದೆಗೆ ಸ್ಫುರಣದ್ರವವನ್ನು(14)ಬಳಿದಿರುತ್ತಾರೆ. ಎಲೆಕ್ಟ್ರಾನ್ ಧಾರೆಯು ಪರದೆಯನ್ನು ಯಾವ ಬಿಂದುವಿನಲ್ಲಿ ಸಂಧಿಸುತ್ತದೆಯೋ ಆ ಬಿಂದುವು ಕಾಂತಿಯಿಂದ ಹೊಳೆಯುವಂತೆ ಮಾಡುವುದೇ ಈ ಸ್ಫುರಣ ದ್ರವದ ಗುಣ ವಿಶೇಷ. ಧಾರೆಯಲ್ಲಿ ಎಲೆಕ್ಟ್ರಾನ್‌ಗಳ ಸಾಂದ್ರತೆ ಅಧಿಕವಾಗಿದ್ದರೆ ಅಧಿಕಕಾಂತಿಯಿಂದ, ಕಡಮೆ ಇದ್ದರೆ ಕ್ಷೀಣ ಕಾಂತಿಯಿಂದ ಬಿಂದುವು ಹೊಳೆಯುತ್ತದೆ. ಪ್ರೇಕ್ಷಕದ ಎಲೆಕ್ಟ್ರಾನ್ ಧಾರೆಯು ಫಲಕವನ್ನು ಸಾಲು ಸಾಲಾಗಿ ಉತ್ತಂತೆಯೇ ಗ್ರಾಹಕದ ಎಲೆಕ್ಟ್ರಾನ್ ಧಾರೆಯೂ ಪರದೆಯನ್ನು ಸಾಲು ಸಾಲಾಗಿ ಉಳುವಂತೆ ಯೋಜಿಸಿರುತ್ತಾರೆ. ಅಷ್ಟೇ ಅಲ್ಲ, ಪ್ರೇಕ್ಷಕದ ಧಾರೆಯ ಪ್ರಸ್ತಾರ ವೀಕ್ಷಣವು ೪೪೧ ಪಙ್ಕ್ತಿಗಳವಾದರೆ ಗ್ರಾಹಕದ ಪ್ರಸ್ತಾರ ಲೇಖನವೂ ೪೪೧ ಪಙ್ಕ್ತಿಗಳದೇ ಆಗಬೇಕು. ಪ್ರೇಕ್ಷಕದ ಧಾರೆಯು ಸೆಕೆಂಡೊಂದಕ್ಕೆ ೨೦ ಬಾರಿ ಫಲಕವನ್ನು ಪೂರ್ತಿಯಾಗಿ ವೀಕ್ಷಿಸಿದರೆ ಗ್ರಾಹಕದ ಧಾರೆಯೂ ಸೆಕೆಂಡೊಂದಕ್ಕೆ ಅದೇ ೨೦ ಬಾರಿ ಪರದೆಯ ಮೇಲೆ ಪೂರ್ತಿಯಾಗಿ ಚಿತ್ರಿಸಬೇಕು, ಇದರ ಜೊತೆಗೆ ವೀಕ್ಷಣ ಧಾರೆಯು ಫಲಕದ ಮೇಲೆ ಎಡಗಡೆಯಿಂದ ಒಂದೊಂದು ಪಙ್ಕ್ತಿಯನ್ನು ಆರಂಭಿಸುವ ಕಾಲಕ್ಕೆ ಸರಿಯಾಗಿ ಗ್ರಾಹಕದ ಪರದೆಯ ಮೇಲೆ ಆಯಾ ಪಙ್ಕ್ತಿಯನ್ನು ಆ ಕಾಲಕ್ಕೆ ಸರಿಯಾಗಿ ಲೇಖಕ ಧಾರೆಯು ಪ್ರಾರಂಭಿಸುವಂತೆ ಏರ್ಪಾಡಾಗಬೇಕು. ಇನ್ನು ಗ್ರಾಹಕದ ಧಾರೆಯು ದೃಶ್ಯವನ್ನು ಚಿತ್ರಿಸಬೇಕಷ್ಟೆ. ಇದಕ್ಕಾಗಿ ಗ್ರಾಹಕವು ಪ್ರತ್ಯೇಕಿಸಿ ವರ್ಧಿಸಿರುವ ದೃಷ್ಟ್ಯಾವರ್ತ ಸಂಕೇತಗಳೇ ಗ್ರಾಹಕದ ಎಲೆಕ್ಟ್ರಾನ್ ಧಾರೆಗೆ ಎಲೆಕ್ಟ್ರಾನ್‌ಗಳನ್ನು ಒದಗಿಸುವಂತೆ ಏರ್ಪಾಟು ಮಾಡುತ್ತಾರೆ. ಪ್ರೇಕ್ಷಕದ ಎಲೆಕ್ಟ್ರಾನ್ ಧಾರೆಯು ವಿದ್ಯುಚ್ಚಕ್ಷುಸ್ಸಾದರೆ ಗ್ರಾಹಕದ ಎಲೆಕ್ಟ್ರಾನ್ ಧಾರೆಯು ವಿದ್ಯುಲ್ಲೇಖನಿ. ವಿದ್ಯುಲ್ಲೇಖನಿಯು ಚಿತ್ರವನ್ನು ಸರಿಯಾಗಿ ಬರೆಯಬೇಕಾದರೆ ಮೇಲೆ ತಿಳಿಸಿರುವಂತೆ ವಿದ್ಯುಚ್ಚಕ್ಷುಸ್ಸು ವಿದ್ಯುಲ್ಲೇಖನಿಗಳ ಸರ್ವ

---

10. Audio frequency. 11. Carrier frequency. 12. Antenna array. 13. Tune. 14. Fluorescent Chemical.

ತ್ರೈಕ ಕಾಲಸಾಧನೆಯು(15) ಚಚು ತಪ್ಪದೆ ನಿಷ್ಕೃಷ್ಟವಾಗಿ ಆಗಬೇಕು. ಪ್ರೇಕ್ಷಕದ ಸಹಕಾರವಿಲ್ಲದೆ ಗ್ರಾಹಕವು ಇದನ್ನು ತಾನಾಗಿಯೇ ಸಾಧಿಸುವುದು ಅಸಾಧ್ಯ. ಅದಕ್ಕೋಸ್ಕರ ಪ್ರೇಕ್ಷಕವು ದೃಷ್ಟ್ಯಾವರ್ತ ಸಂಕೇತಗಳನ್ನೇ ಅಲ್ಲದೆ ಏಕ ಕಾಲಸಾಧನೆಯ ಸಂಕೇತಗಳನ್ನೂ(16) ಪ್ರತಿಯೊಂದು ಪಙ್ಕ್ತಿಯ ಅಂತ್ಯದಲ್ಲೊಂದೊಂದು ಸಲ ಪ್ರಸಾರ ಮಾಡುತ್ತದೆ. ವಿದ್ಯುಚ್ಚಕ್ಷುಸ್ಸು ಯಾವ ಕಾಲದಲ್ಲಿ ಫಲಕದ ಯಾವ ಭಾಗವನ್ನು ವೀಕ್ಷಿಸುತ್ತಿರುತ್ತದೆಯೋ ಗ್ರಾಹಕದ ಪರದೆಯ ಮೇಲೆ ಅದಕ್ಕೆ ಸರಿಯಾದ ಭಾಗದ ಮೇಲೆ ಅದೇ ಕಾಲದಲ್ಲಿ ಈ ಸಂಕೇತಗಳು ವಿದ್ಯುಲ್ಲೇಖನಿಯಿಂದ ಬರೆಯಿಸುತ್ತವೆ. ವೀಕ್ಷಕ ಲೇಖಕಗಳ ಈ ಸಮಯೋಗವನ್ನು ದೂರದೃಶ್ಯದರ್ಶನದ ಅನೇಕ ತೊಡಕಿನ ವ್ಯವಸ್ಥೆಗಳಲ್ಲೆಲ್ಲ ಅತ್ಯದ್ಭುತವಾದ ವ್ಯವಸ್ಥೆಯೆಂದು ಧಾರಾಳವಾಗಿ ಹೇಳಬಹುದು. ಹೀಗೆ ಗ್ರಾಹಕದ ಗಾಜಿನ ಪರದೆಯ ಮೇಲೆ ಚಿತ್ರಿತವಾಗುವ ದೃಶ್ಯಗಳು ಹೆಚ್ಚು ಕಡಮೆ ವಾಕ್ಚಿತ್ರ ಮಂದಿರಗಳ ಪರದೆಗಳ ಮೇಲೆ ಬೀಳುವ ದೃಶ್ಯಗಳಷ್ಟೇ ಸ್ಪಷ್ಟವಾಗಿರುತ್ತವೆ. ವರ್ಣರಂಜಿತ ವಾಕ್ಚಿತ್ರಗಳಿರುವಂತೆಯೇ ಸವರ್ಣ ದೂರದೃಶ್ಯ ಚಿತ್ರಗಳನ್ನು ಪ್ರಸಾರ ಮಾಡುವ ಪ್ರಯತ್ನಗಳೂ ಸಫಲಗಳಾಗಿವೆ.

ಇಷ್ಟೆಲ್ಲ ಕೇಳಿದ ಮೇಲೆ ಟೆಲಿವಿಷನ್‌ಗೆ ಸಂಬಂಧಿಸಿದ ಯಾವೊಂದು ಸಮಸ್ಯೆಯೂ ಉಳಿದೇ ಇಲ್ಲವೆಂದು ನಿಮಗೆ ತೋರಬಹುದು. ಹಾಗಾದರೆ ರೇಡಿಯೋ ಪ್ರಸಾರಗಳು ಹೇಗೆ ದೇಶ ದೇಶಗಳಿಗೆ ಹರಡಿವೆಯೋ ಹಾಗೆ ದೂರ ದೃಶ್ಯ ಪ್ರಸಾರಗಳು ಏಕೆ ಹರಡಿಲ್ಲ? ಅದರಲ್ಲಿಯೂ ಭಾರತದಲ್ಲಿ ಟೆಲಿವಿಷನ್‌ನ ಸೊಲ್ಲೇ ಇಲ್ಲದಿರಲು ಕಾರಣವೇನು? ಟೆಲಿವಿಷನ್ ವ್ಯವಸ್ಥೆಯು ರೇಡಿಯೋದಷ್ಟು ಜನಪ್ರಿಯವಾಗಿಲ್ಲದಿರುವುದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದು ದೂರದೃಶ್ಯಗ್ರಾಹಕಗಳ ಬೆಲೆ ಅತ್ಯಧಿಕ—ಎಂಟು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಾಗುವುದಿಲ್ಲ. ಎರಡನೆಯದು ದೂರ ದೃಶ್ಯ ಪ್ರೇಕ್ಷಕಗಳ ದೂರ ವ್ಯಾಪ್ತಿ ಬಹಳ ಕಡಮೆ—ಸುಮಾರು ೫೦ ಮೈಲುಗಳು ಮಾತ್ರ. ಪ್ರೇಕ್ಷಕದ ಸಾಮರ್ಥ್ಯವನ್ನು ಎಷ್ಟು ಹೆಚ್ಚಿಸಿದರೂ ಭೂಮಿಯ ಮೇಲೆ ಅದರ ವ್ಯಾಪ್ತಿ ಸುಮಾರು ಐವತ್ತರುವತ್ತು ಮೈಲಿಗಳೊಳಗೇ ಇರುತ್ತದೆ. ಇದಕ್ಕೆ ಕಾರಣವೇನೆಂದರೆ, ಪ್ರೇಕ್ಷಕದ ಅಲೆಗಳು ಬೆಳಕಿನಂತೆ ನೇರವಾಗಿ ಪ್ರಯಾಣ ಮಾಡಬಲ್ಲವೇ ಹೊರತು ವಕ್ರವಾದ ಭೂಗೋಳದ ಮೈಯನ್ನು ಅನುಸರಿಸಿಕೊಂಡು ಹೋಗಲಾರವು. ಪ್ರೇಕ್ಷಕದ ಪ್ರಸರಣ ತಂತ್ರೀವ್ಯೂಹವನ್ನು ಉನ್ನತ ಸ್ಥಾನದಲ್ಲಿ ಸ್ಥಾಪಿಸಿದರೆ ದಿಗಂತದ ದೂರವು ಹೆಚ್ಚುತ್ತದೆಯಾದ್ದರಿಂದ ಪ್ರೇಕ್ಷಕದ ವ್ಯಾಪ್ತಿಯೂ ಹೆಚ್ಚುತ್ತದೆ. ಅದರಿಂದಲೇ ಅಮೇರಿಕದ ದೂರದೃಶ್ಯ ಪ್ರಸಾರ ಕೇಂದ್ರಗಳು ಎಂಪೈರ್ ಸ್ಟೇಟ್ ಭವನದಂಥ ನೂರಾರು ಅಂತಸ್ತುಗಳ ಕಟ್ಟಡಗಳಲ್ಲಿ ಸ್ಥಾಪಿತವಾಗಿವೆ.

ಈ ಕಾರಣಗಳಿಂದ ಒಂದು ದೂರದೃಶ್ಯ ಪ್ರಸಾರ ಕೇಂದ್ರದ ಕಾರ್ಯಕ್ರಮವು ದೇಶದಲ್ಲೆಲ್ಲ ಕಂಡು ಕೇಳುವಂತಾಗಬೇಕಾದರೆ ಐವತ್ತೈವತ್ತು ಮೈಲಿಗಳಿಗೊಂದರಂತೆ ದೂರದೃಶ್ಯಗ್ರಾಹಕಪ್ರೇಕ್ಷಕ ಅಂದರೆ ಪುನಃಪ್ರಸಾರ ಕೇಂದ್ರಗಳ(17) ಜಾಲಬಂಧವನ್ನು(18) ಕಟ್ಟಬೇಕಾಗುತ್ತದೆ. ಇದು ಶ್ರೀಮಂತ ರಾಷ್ಟ್ರಗಳಿಗೆ ಮಾತ್ರ ಸಾಧ್ಯವೇ ಹೊರತು ಭಾರತದಂಥ ಬಡ ರಾಷ್ಟ್ರಗಳಿಗೆ ಸದ್ಯಕ್ಕೆ ಸಾಧ್ಯವಲ್ಲ.

ಈ ಸಂದರ್ಭದಲ್ಲಿ ತಮ್ಮಲ್ಲಿ ಅನೇಕರಿಗೆ ಒಂದು ಸಂದೇಹ ಹೊಳೆದಿರಬೇಕು. ಟೆಲಿವಿಷನ್ ಅಲೆಗಳು ಭೂಮಿಯ ಮೈಗೆ ಹೊಂದಿಕೊಂಡು ಬಗ್ಗಲಾರದೆ ಹೋದರೆ, ರೇಡಿಯೋ ಅಲೆಗಳಿಗೂ ಅದೇ ಪ್ರತಿಬಂಧಕವಿರಬೇಕಲ್ಲವೇ? ಹಾಗಿದ್ದಲ್ಲಿ ಲಂಡನ್, ಮಾಸ್ಕೋ, ನ್ಯೂಯಾರ್ಕ್‌ಗಳ ಧ್ವನಿ ಪ್ರಸಾರ ನಮಗೆ ತಲಪುತ್ತಿದೆಯಲ್ಲ, ಅದು ಹೇಗೆ? ರೇಡಿಯೋ ಅಲೆಗಳೂ ಕೂಡ ನೇರವಾಗಿ ಮಾತ್ರ ಪ್ರಯಾಣಮಾಡಬಲ್ಲವು ಎಂಬುದು ನಿಜ. ಆದರೆ ಭೂಮಿಯ ವಾಯುಮಂಡಲದಲ್ಲಿ ಭೂಮಿಯ ಮೈಯಿಂದ ಸುಮಾರು ೭೦ ಮೈಲಿಗಳ ಎತ್ತರದಲ್ಲೊಂದು, ೧೫೦ ಮೈಲಿಗಳ ಎತ್ತರದಲ್ಲಿನ್ನೊಂದು, ವಿದ್ಯುತ್ತಿನ ಕಣಗಳ ಅಥವಾ ಅಯೋಣುಗಳ ಹೊದಿಕೆಗಳು ಅಥವಾ ಸ್ತರ(19)ಗಳಿವೆ. ೭೦ ಮೈಲಿಗಳಿಂದಾಚೆ ಹೀಗೆ ಭೂಮಿಯನ್ನು ಆವರಿಸಿರುವ ಅಯೋಣು ಸ್ತರಗಳನ್ನು ಸಾಮೂಹಿಕವಾಗಿ ಅಯೋಣ್ವಾವರಣ(20) ಎಂದು ಕರೆಯುತ್ತಾರೆ. ರೇಡಿಯೋ ಅಲೆಗಳು ಈ ಸ್ತರವೊಂದನ್ನು ಸಂಧಿಸಿದರೆ, ಸ್ತರವು ಅಲೆಗಳನ್ನು ಪ್ರತಿಫಲಿಸುತ್ತದೆ ಅಂದರೆ ಭೂಮಿಗೇ ಹಿಂದಕ್ಕೆ ಕಳುಹಿಸುತ್ತದೆ. ಬೆಳಕಿಗೆ ಕನ್ನಡಿಯು ಹೇಗೋ, ರೇಡಿಯೋ ಅಲೆಗಳಿಗೆ ಅಯೋಣ್ವಾವರಣವೂ ಹಾಗೆ. ಈ ಕಾರಣದಿಂದ ರೇಡಿಯೋ ಅಲೆಗಳು ಕುಪ್ಪಳಿಸಿಕೊಂಡು ಭೂಮಿಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಾರಬಲ್ಲವು. ಅಲೆಗಳ ಆವರ್ತಸಂಖ್ಯೆಯು ಸೆಕೆಂಡೊಂದಕ್ಕೆ ೩ ಕೋಟಿಗಳಿಗಿಂತ ಹೆಚ್ಚಾದರೆ ಅಯೋಣ್ವಾವರಣವು ಅಂಥ ಅಲೆಗಳನ್ನು ಪ್ರತಿಫಲಿಸಲಾರದಾಗುತ್ತದೆ. ಈ ಅಧಿಕಾವರ್ತಸಂಖ್ಯೆಯ ಅಲೆಗಳು ಆವರಣವನ್ನು ತೂರಿಕೊಂಡು ಅಂತರಿಕ್ಷ ಮಾರ್ಗದಲ್ಲಿ ನೇರವಾಗಿ ಸಾಗುತ್ತಿವೆ. 'ದೂರದೃಶ್ಯಪ್ರಸಾರಗಳಲ್ಲಿ ದೃಷ್ಟ್ಯಾವರ್ತ ಸಂಕೇತಗಳಿಗೆ ವಾಹನವಾಗಿ ಹಲವು ಕೋಟಿಗಳ ಆವರ್ತಗಳ ಅಲೆಗಳನ್ನೇ ಉಪಯೋಗಿಸುವುದು ಅವಶ್ಯವಾದ್ದರಿಂದ, ಈ ಅಲೆಗಳನ್ನು ಬಗ್ಗಿಸಿ ಪ್ರಸಾರ ಕೇಂದ್ರಗಳ ದೂರ

---

15. Synchronisation. 16. Synchronising Signals. 17. Relay Transmitting Station. 18. Network 19. Ionised layers. 20. Ionosphere.

ವ್ಯಾಪ್ತಿಯನ್ನು ಹೆಚ್ಚಿಸಲು ಅಯೋಣ್ವಾವರಣವು ಸಹಕಾರಿ ಯಾಗುವುದಿಲ್ಲ.

ದೂರದೃಶ್ಯಪ್ರಸಾರ ಸಾಧನೆಗಳ ಉಪಯುಕ್ತತೆಯು ಕೇವಲ ಜನರಂಜನೆಯ ಕಾರ್ಯಕ್ರಮಗಳಿಗೇ ಮೀಸಲಾಗಿಲ್ಲ. ಸಮುದ್ರ ತಳದ ಪ್ರಾಣಿ ಸಸ್ಯಶಾಸ್ತ್ರಗಳ ಸಂಶೋಧನೆಗಳಿಗೂ ಇವು ಸಹಾಯ ನೀಡಬಲ್ಲವು. ಸಮುದ್ರದ ಆಳವನ್ನು ಶೋಧಿಸಲು ಮುಳುಗುಪಾತ್ರೆ ಅಥವಾ ಮುಳುಗುಘಂಟಿಗಳನ್ನು(21) ಉಪಯೋಗಿಸುತ್ತಾರೆ. ಈ ಘಂಟಿಯೊಳಗೆ ಶೋಧಕನನ್ನಿರಿಸುತ್ತಾರೆ. ಆತನ ಉಚ್ಛ್ವಾಸ ನಿಃಶ್ವಾಸಗಳು ತಡೆಯಿಲ್ಲದೆ ಆಗುವಂತೆ ಗಾಳಿಯನ್ನು ಒಯ್ಯುವ ಕೊಳವೆಗಳನ್ನು ದಡದಿಂದ ಘಂಟಿಗೆ ಒದಗಿಸಿರುತ್ತಾರೆ. ಹೀಗಿದ್ದರೂ ಸಮುದ್ರದ ಆಳದ ಪ್ರಚಂಡವಾದ ಒತ್ತಡಕ್ಕೆ ಸಿಕ್ಕಿರುವ ಶೋಧಕನ ಇಂದ್ರಿಯಗಳು ದಡದ ಮೇಲಿರುವವರ ಇಂದ್ರಿಯಗಳಷ್ಟು ಚುರುಕಾಗಿ ಕೆಲಸ ಮಾಡುವುದಿಲ್ಲ, ಆದ್ದರಿಂದ ಮುಳುಗುಘಂಟಿಗೆ ದೂರದೃಶ್ಯ ಪ್ರೇಕ್ಷಕನನ್ನೂ ಜೋಡಿಸುತ್ತಾರೆ. ಸಮುದ್ರತಳದ ಗಾಢಾಂಧಕಾರವನ್ನೂ ಬೆಳಗುವಂಥ ವಿದ್ಯುದ್ದೀಪದ ಸಹಾಯದಿಂದ ದೂರದೃಶ್ಯ ಪ್ರೇಕ್ಷಕವು ಅದರ ಸುತ್ತಮುತ್ತಲ ದೃಶ್ಯದ ಚಲನಚಿತ್ರವನ್ನು ದಡದ ಮೇಲಿರುವ ಗ್ರಾಹಕದ ಪರದೆಯ ಮೇಲೆ ಸಂತತವಾಗಿ ಪ್ರದರ್ಶಿಸುತ್ತದೆ. ಈ ಪರದೆಯ ವೀಕ್ಷಕನಿಗೆ ಸಮುದ್ರದ ಪ್ರಾಣಿಗಳ ಮತ್ತು ಸಸ್ಯಗಳ ವಿಚಿತ್ರ ಆಕಾರಗಳೂ ವರ್ತನೆಗಳೂ ಅಲ್ಲದೆ, ಮುಳುಗುಘಂಟಿಯೊಳಗಿರುವ ಶೋಧಕನು ಆ ಕ್ಷಣದಲ್ಲಿ ಏನು ಮಾಡುತ್ತಿದ್ದಾನೆಂದೂ ಕಾಣುತ್ತದೆ. ಅದನ್ನು ನೋಡಿ ಈತನು ಟೆಲಿಫೋನ್ ಮೂಲಕ ಸೂಕ್ತ ಸಲಹೆಗಳನ್ನು ಶೋಧಕನಿಗೆ ಕೊಡಬಹುದು. ಸಮುದ್ರದಲ್ಲಿ ಮುಳುಗಿ ಹೋಗಿರುವ ಹಡಗುಗಳ ಮತ್ತು ಇತರ ನಿಧಿಗಳ ಶೋಧನೆಗೂ ದೂರದೃಶ್ಯಪ್ರಸಾರ ಸಾಧನವು ಅಪಾರ ಬೆಂಬಲ ಕೊಡುತ್ತದೆ. ಹೀಗೆ ದೂರದೃಶ್ಯ ಸಾಧನಗಳು ನಮ್ಮ ದೃಷ್ಟಿಶಕ್ತಿಯನ್ನು ಅಗಾಧ ಪ್ರಮಾಣದಲ್ಲಿ ಹೆಚ್ಚಿಸಬಲ್ಲವು.

[ಕಾರ್ತಿಕ ಲಕ್ಷದೀಪೋತ್ಸವ ಸಮಾರಂಭದ ಅಂಗವಾಗಿ ಶ್ರೀ ಧರ್ಮಸ್ಥಳದಲ್ಲಿ ಏರ್ಪಡಿಸಿದ್ದ ಸಾಹಿತ್ಯ ವಿಜ್ಞಾನ ಸಮ್ಮೇಳನದಲ್ಲಿ ಶ್ರೀ ನಂದನ ಸಂವತ್ಸರದ ಕಾರ್ತಿಕ ಬ| ೩೦ (೧೯೫೨ನೆಯ ನೊವೆಂಬರ್ ೧೭) ಸೋಮವಾರ ಸಂಜೆ ಕೊಟ್ಟ ಭಾಷಣ.]

21· Diving bell·



"ಕರ್ನಾಟಕದ ಸ್ತ್ರೀ ಲೇಖಕಿಯರು"

(ಲೇಖಕರು: ಸಿ. ಕೆ. ನಾಗರಾಜರಾವ್)



ಕನ್ನಡ ಭಾಷೆ, ಹಾಗು ಸಾಹಿತ್ಯದ ಬೆಳವಣಿಗೆಗೆ ಮಹಿಳೆಯರು ಎಷ್ಟರ ಮಟ್ಟಿಗೆ ಸಾಧಕರಾಗಬೇಕಾಗಿತ್ತೋ ಅಷ್ಟರ ಮಟ್ಟಿಗೆ ಅವರು ಸಾಧಕರಾಗಿಲ್ಲವೆಂಬ ಆಕ್ಷೇಪ ಇದೆಯಾದರೂ, ಕೊಂಚಮಟ್ಟಿಗಾದರೂ ಅವರು ಸಾಧಕರಾಗಿದ್ದರೆಂಬುದು ನಿರ್ವಿವಾದವಾದ ವಿಚಾರ. ಅವರು ಏಕೆ ಸಾಕಷ್ಟು ಮಟ್ಟಿಗೆ ಸಾಧಕರಾಗಲಿಲ್ಲ? ಅವರಲ್ಲಿ ಬೇಕಾದಷ್ಟು ಆಸಕ್ತಿ ಉತ್ಸಾಹಗಳಿದ್ದರೂ ಅವರಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಡದೆ ಹಿಂದಕ್ಕೆ ತಳ್ಳಲಾಯಿತೆ? ಇವೇ ಮೊದಲಾದ ವಿಚಾರಗಳ ವಿಮರ್ಶೆಗೆ ನಾನು ಈ ಲೇಖನದಲ್ಲಿ ತೊಡಗುವುದಿಲ್ಲ. ಯಾವ ಯಾವ ಕಾಲದಲ್ಲಿ ಸ್ತ್ರೀ ಲೇಖಿಕೆಯರು ಸಾಹಿತ್ಯದ ಬೆಳವಣಿಗೆಗೆ ಸಾಧಕರಾಗಿದ್ದಾರೆಂಬುದನ್ನು ನೋಡುವುದಿಷ್ಟೇ ನನ್ನ ಈ ಲೇಖನದ ಉದ್ದೇಶ.

ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಕಂಡುಹಿಡಿಯಲು ಪ್ರಯತ್ನಿಸಿದ ಸಂಶೋಧಕರು ಕ್ರಿ. ಶ. ಎರಡು–ಮೂರನೆಯ ಶತಮಾನದಿಂದ ಸಾಹಿತ್ಯದ ಬೆಳವಣಿಗೆ ಆಗಿಕೊಂಡು ಬಂದಿದೆಯೆಂದು ಅಭಿಪ್ರಾಯಪಡುತ್ತಾರೆ. ಐದನೆಯ ಶತಮಾನದ ಮತ್ತು ನಂತರದ ಅನೇಕಾನೇಕ ಶಾಸನಗಳು, ಆ ವೇಳೆಗಾಗಲೆ ಕನ್ನಡ ಸಾಹಿತ್ಯ, ಒಂದು ಸ್ಪಷ್ಟವಾದ, ಪ್ರಭಾವಶಾಲಿಯಾದ ಸಾಹಿತ್ಯದ ರೂಪವನ್ನು ಮೈಗೂಡಿಸಿಕೊಂಡಿತ್ತು ಎಂಬುದಕ್ಕೆ ಸಾಕ್ಷಿಗಳಾಗಿವೆ. ಒಂಭತ್ತನೆಯ ಶತಮಾನದ ಆದಿ ಭಾಗದಲ್ಲಿಯೇ ರಚಿತವಾದ "ಕವಿರಾಜಮಾರ್ಗ" ಎಂಬ 'ಲಕ್ಷಣ ಗ್ರಂಥ' ನಮಗೆ ದೊರೆತಿರುವುದು ಕನ್ನಡ ಭಾಷೆಯ ಪ್ರಾಚೀನತೆಯ ಬಗ್ಗೆ ಹೆಗ್ಗುರುತಾಗಿದೆ. ಅಲ್ಲಿಂದ ಕ್ರಮವಾಗಿ ಉತ್ಕೃಷ್ಟ ಗ್ರಂಥರಾಶಿಗಳು ನಮಗೆ ದೊರೆತಿವೆ.

ಕರ್ನಾಟಕದ ಸ್ತ್ರೀ ಲೇಖಿಕೆಯರ ಬಗ್ಗೆ ಸಮಗ್ರವಾದ ಲೇಖನವನ್ನು ಬರೆಯಬೇಕಾದರೆ ಆ ಕಾಲದಿಂದಲೂ ನಾವು ಸ್ತ್ರೀಯರಿಂದ ರಚಿತವಾದ ಸಾಹಿತ್ಯ ಕೃತಿಗಳ ವಿಚಾರವನ್ನು ಅರಿತುಕೊಂಡು ಬರಬೇಕು. ಎರಡು ಭಾಗಗಳಾಗಿ ವಿಂಗಡಿಸಿ ನಮ್ಮ ಸ್ತ್ರೀ ಲೇಖಿಕೆಯರ ಬಗ್ಗೆ ತಿಳಿದುಕೊಳ್ಳೋಣ. ಮೊದಲನೆಯ ಭಾಗ–ಪ್ರಾರಂಭದಿಂದ ಹತ್ತೊಂಭತ್ತನೆಯ ಶತಮಾನ ಪೂರ್ತಿ ನಮಗೆ ದೊರಕುವ ವಿಷಯ. ಎರಡನೆಯ ಭಾಗ–ಇಪ್ಪತ್ತನೆಯ ಶತಮಾನದ ಸ್ತ್ರೀ ಲೇಖಿಕೆಯರು.

ನಮಗೆ ದೊರಕುವ ಆಧಾರಗಳಿಂದ ಸ್ತ್ರೀ ಲೇಖಿಕೆಯರ ಹೆಸರುಗಳನ್ನು ನಾವು ಕಾಣುವುದು ಹನ್ನೊಂದನೆಯ ಶತಮಾನದ ಕೊನೆಯ ಭಾಗದಿಂದ. ಮೊದಲನೆಯದಾಗಿ ನಾವು ಕೇಳುವ ಹೆಸರು—ಕಂತಿ. ಈಕೆ ದ್ವಾರಸಮುದ್ರದ (ಈಗಿನ ಹಳೆಬೀಡು) ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದಳೆಂದು ತಿಳಿಯಬರುತ್ತದೆ. ಈಕೆಗೆ 'ಅಭಿನವ ವಾಗ್ದೇವಿ' ಎಂಬ ಬಿರುದು ಸಹ ಇದ್ದಿರಬೇಕೆಂದು ದೊರೆತ ಉಲ್ಲೇಖಗಳಿಂದ ತಿಳಿಯಬಹುದು. ಈಕೆಯ ಪದ್ಯಗಳಿಂದ ಈಕೆ ಜೈನಮತ ಸಂಪ್ರದಾಯದವಳೆಂದು ತೋರುತ್ತದೆ. ಈಕೆಯ ಸಮಕಾಲೀನನಾದ ಈಗಲೂ ಪ್ರಸಿದ್ಧ ಕವಿಯೆಂದು ಹೆಸರು ಪಡೆದಿರುವ 'ಅಭಿನವ ಪಂಪ'ನಿಂದ ಪರೀಕ್ಷಿಸಲ್ಪಟ್ಟ ನಂತರ ಈಕೆಯನ್ನುಬಲ್ಲಾಳರಾಯನು ತನ್ನಆಸ್ಥಾನದ ವಿದ್ವತ್ಸಮೂಹದಲ್ಲಿ ಒಬ್ಬ ಕವೀಶ್ವರಿ ಎಂದು ಪರಿಗಣಿಸಿ ಈಕೆಗೆ ಸನ್ಮಾನ ಮಾಡಿದ್ದನೆಂದು ತಿಳಿದುಬರುತ್ತದೆ. ಈಕೆಯನ್ನು ಪರೀಕ್ಷೆ ಮಾಡಿ ಕೇಳಿದ ಪ್ರಶ್ನೆಗಳು, ಆ ಪ್ರಶ್ನೆಗಳ ಉತ್ತರಗಳು ಪದ್ಯರೂಪವಾಗಿದ್ದುವೆಂದು 'ಕಂತಿ ಹಂಪನ ಸಮಸ್ಯೆಗಳು' ಎಂದು ಆರಿಸಿ ತೆಗೆದ ಪದ್ಯಗಳಿಂದ ತಿಳಿದುಬರುತ್ತದೆ. ಈಕೆಯೇ ಸ್ವಂತವಾಗಿ ರಚಿಸಿದ ಕೃತಿ ಯಾವುದೂ ನಮಗೆ ದೊರೆತಿಲ್ಲ.

ನಂತರ ನಮಗೆ ಕಾಣುವ ಪ್ರಭಾವಶಾಲಿಯಾದ ಸ್ತ್ರೀ ಸಾಹಿತಿ ಮಹಾದೇವಿಯಕ್ಕ. ಈಕೆ ಹನ್ನೆರಡನೆಯ ಶತಮಾ

ನದ ಮಧ್ಯಭಾಗದಲ್ಲಿ ಇದ್ದಾಕೆ. ವೀರಶೈವ ಮತಸಂಪ್ರದಾಯವನ್ನು ಅವಲಂಬಿಸಿ, ಪ್ರಾಪಂಚಿಕವಾದುದು ಕ್ಷುಲ್ಲಕ, ಪಾರಮಾರ್ಥಿಕವಾದುದು ಪಾವನ ಎಂಬ ದೃಢವಾದ ನಂಬಿಕೆಯಿಂದ ಜೀವನ ಸಾಗಿಸಿದಾಕೆ. ಸ್ವಾತಂತ್ರ್ಯಪ್ರಿಯಳು. ಈಕೆಯು ನೂರಾರು ವಚನಗಳು ಜೀವನದ ಅನೇಕ ಅನುಭವಗಳನ್ನು ಸಾರವತ್ತಾಗಿ, ಸೂತ್ರರೂಪವಾಗಿ ಚಿತ್ರಿಸುತ್ತವೆ. ವಚನಗಳನ್ನು ನಾವು 'ಗದ್ಯಪದ್ಯ'ವೆಂದು ಹೆಸರಿಸಬಹುದು. ಕನ್ನಡ ಭಾಷೆಯಲ್ಲಿ, ಅಭಿಪ್ರಾಯಗಳನ್ನು, ಅನುಭವಗಳನ್ನು, ಜೀವನತತ್ವಗಳನ್ನು ಸುಲಭಗ್ರಾಹ್ಯವಾಗುವಂತೆ ಹೇಳುವ ಈ 'ವಚನಗಳ' ಕ್ರಮ ಒಂದು ವೈಶಿಷ್ಟ್ಯಪೂರ್ಣವಾದ ಕ್ರಮ. ಈಕೆಯ ವಚನಗಳ ಸಂಗ್ರಹ, ಯೋಗಾಂಗತ್ರಿವಿಧಿ ಎಂಬ ಸಂಗ್ರಹಗಳು ಅಮೂಲ್ಯವಾದವುಗಳು. ಪ್ರತಿಯೊಬ್ಬ ಸಾಹಿತ್ಯಾಭ್ಯಾಸಿಯೂ ಅಭ್ಯಾಸಮಾಡಬೇಕಾದ ಸಂಗ್ರಹಗಳು. ಈಕೆ 'ಸೃಷ್ಟಿಯ ವಚನ' ಮತ್ತು 'ಅಕ್ಕಗಳ ಪೀಠಿಕೆ' ಎಂಬೆರಡು ಪುಸ್ತಕಗಳನ್ನು ರಚಿಸಿದ್ದಂತೆ ತಿಳಿಯಬರುತ್ತದೆ. ಆದರೆ ಆ ಪುಸ್ತಕಗಳು ದೊರೆತಿಲ್ಲ. ಈಕೆಯ ಜೀವನವನ್ನು ಕುರಿತು, ಈಕೆಯ ತಾತ್ವಿಕ ದೃಷ್ಟಿಯನ್ನು ಕುರಿತು, ಈಕೆಯ ಸಾಹಿತ್ಯ ಸೃಷ್ಟಿಯ ಸೌಂದರ್ಯವನ್ನು ಕುರಿತು, ಈಕೆಯ ಜೀವನದಿಂದ ಕಂಡುಕೊಳ್ಳಬಹುದಾದ ಉದಾತ್ತ ಗುಣಗಳನ್ನು ಕುರಿತು ಆಧುನಿಕ ಲೇಖಕರು, ಸಂಶೋಧಕರು, ಹತ್ತಾರು ಗ್ರಂಥಗಳನ್ನು ಈಗಾಗಲೇ ರಚಿಸಿದ್ದಾರೆ. ಈಕೆಯ ಜೀವನ ಕುರಿತು ಈಕೆಯ ನಂತರ ಕೆಲವಾರು ವರ್ಷಗಳಲ್ಲಿಯೇ 'ಮಹಾದೇವಿಯಕ್ಕನ ರಗಳೆ' ಎಂಬ ಕಾವ್ಯವನ್ನು 'ಹರಿಹರ' ಕವಿ ಬರೆದಿದ್ದಾನೆಂದರೆ ಈಕೆಯ ಬಗ್ಗೆ ಆಗಲೂ ಎಷ್ಟು ಮೆಚ್ಚುಗೆ ಇದ್ದಿರಬೇಕು! ಮೀರಾ ಭಜನೆಗಳು ಹೇಗೋ ಈಕೆಯ ವಚನಗಳೂ ಹಾಗೆ. ಈಕೆಯ ಜೀವನ ಹೇಗೋ ಹಾಗೆಯೇ ಮೀರಾ ಜೀವನ ಸಹ. ಈಕೆ ಸಾಮಾನ್ಯ ರೈತನ ಮಗಳು. ಆದರೂ ಆಚಂದ್ರಾರ್ಕವಾಗಿ ಹೆಸರುಳಿಸಿಕೊಳ್ಳುವ ಶಿವಶರಣೆ.

ಹೀಗೆಯೇ ನೀಲಾಂಬಿಕೆಯೆಂಬ ಮತ್ತೊಬ್ಬ ಹೆಣ್ಣುಮಗಳನ್ನು ನಾವು ಇದೇ ಕಾಲದಲ್ಲಿ ಕಾಣುತ್ತೇವೆ. ಈಕೆ 'ನೀಲಮ್ಮನ ಸ್ತೋತ್ರ', 'ನಿಲಾಂಬಿಕಾ ಪಂಚವಿಂಶತಿ', 'ನೀಲಮ್ಮನ ತ್ರಿವಿಧಿ' ಮೊದಲಾದುವನ್ನು ರಚಿಸಿದ ಹಾಗೆ ತಿಳಿಯಬರುತ್ತದೆ.

ನೀಲಾಂಬಿಕೆಯಂತೆ ಅನೇಕ ಶರಣೆಯರನ್ನು ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ನಾವು ಕಾಣುತ್ತೇವೆ. ಇವರೆಲ್ಲರೂ ವಚನಕಾರರೇ. ವೀರಶೈವ ಧರ್ಮದ ಮಹತ್ತರವಾದ ಪ್ರಚಾರದ ಹೊನಲಿನಲ್ಲಿ ತೇಲಿಬಂದ ವಚನಕಾರರಲ್ಲಿ ಹತ್ತಾರು ಸ್ತ್ರೀಯರನ್ನು ನಾವು ಕಾಣಬಹುದು. ಅದುವರೆಗೆ ಬಹಳ ಮಟ್ಟಿಗೆ ಮರೆಯಲ್ಲಿದ್ದ, ಹೊಸಲು ದಾಟದಂತಿದ್ದ ಹೆಣ್ಣು ಮಕ್ಕಳು, ಈ ಚಳುವಳಿಯಲ್ಲಿ, ಸ್ತ್ರೀ ಸ್ವಾತಂತ್ರ್ಯದ ಪ್ರತೀಕವೋ ಎನ್ನುವಂತೆ, ಅನೇಕ ಶರಣೆಯರು ಹೊರಬಂದು ತಮ್ಮಲ್ಲಿ ಪ್ರಚೋದಿತವಾದ ಭಾವನೆಗಳನ್ನು ಲೋಕದ ಮುಂದೆ ನಿರ್ಭೀತಿಯಿಂದ ಇಟ್ಟರು. ಆಗಿನ ಕಾಲದಲ್ಲಿ ಅವರಿಗೆ ಎಷ್ಟರ ಮಟ್ಟಿನ ಉತ್ಸಾಹ ತುಂಬಿ ಬಂದಿತ್ತು ಎಂಬುದು ಇನ್ನೂ ಗ್ರಂಥಸ್ಥವಾಗಿ ಉಳಿದಿರುವ ಅವರ ವಚನಗಳನ್ನು, ಹೆಸರುಗಳನ್ನು ನೋಡುವುದರಿಂದ ತಿಳಿಯಬಹುದು. ಕೆಲವು ಶರಣೆಯರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದು—ಗಂಗಾಂಬಿಕೆ, ವೀರಮ್ಮ, ಅಕ್ಕನಾಗಮ್ಮ, ತಿಮ್ಮವ್ವೆ, ಲಕ್ಷಮ್ಮ, ರೇಚವ್ವೆ, ಕಾಶವ್ವೆ, ಸೋಮವ್ವೆ, ಗೊಗ್ಗವ್ವೆ, ಸತ್ಯಕ್ಕ, ಸುವರ್ಣದೇವಿ.

ಹಾಗೆಯೇ ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ಸಹ ನಾವು ಅನೇಕ ಮಹಿಳಾವಚನಕಾರರನ್ನು ಕಾಣುತ್ತೇವೆ. ಉದಾಹರಣೆಗೆ--ಗುಡ್ಡವ್ವೆ, ರೇಕಮ್ಮ, ಕಾಯಮ್ಮ, ಮಸಣಮ್ಮ ಮೊದಲಾದ ಹೆಸರುಗಳನ್ನು ಹೇಳಬಹುದು. ಇವರೆಲ್ಲ ಶಿವನ ಆರಾಧಕರಾಗಿ ಭಕ್ತಿಪಂಥಕ್ಕೆ ಸೇರಿದ ಶರಣೆಯರು. ಈ ಶರಣೆಯರ ವಚನಗಳು ಪ್ರಕೃತಿಸತ್ಯಗಳು. ಸ್ತ್ರೀ ಸಹಜವಾದ ಗಾಂಭೀರ್ಯದಿಂದಲೂ, ಮೃದುತನದಿಂದಲೂ, ಆಳವಾದ ನಂಬಿಕೆಯಿಂದಲೂ,ಅನಿರ್ವಚನೀಯವಾದ ಸೌಂದರ್ಯದಿಂದಲೂ ಈ ವಚನಗಳು ಬೆಳಗುತ್ತಿವೆ.

ನಮ್ಮ ಸ್ತ್ರೀಲೇಖಿಕೆಯರು ಸಂಸ್ಕೃತದಲ್ಲಿ ಸಹ ಪ್ರಭುತ್ವ ಪಡೆದು ಕಾವ್ಯ ರಚಿಸಿದುದು 'ಗಂಗಾದೇವಿ', 'ವಿಜಯಾ' ಮೊದಲಾದ ಕವಯಿತ್ರಿಯರಿಂದ ಗೋಚರವಾಗುತ್ತದೆ. ವಿಜಯ ನಗರದ ಅರಸು ಬುಕ್ಕರಾಯನ ಸೊಸೆಯಾದ ರಾಜಪುತ್ರಿ 'ಗಂಗಾದೇವಿ' ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವ ಸಂಪಾದಿಸಿದ್ದಳು. ಈಕೆಯ 'ವೀರಕಂಪಣರಾಯಚರಿತ' ಎಂಬ ಸಂಸ್ಕೃತ ಕಾವ್ಯ ಉತ್ಕೃಷ್ಟವಾದ ಕಾವ್ಯವೆಂದು ಪರಿಗಣಿಸಲಾಗಿದೆ.

ರಾಷ್ಟ್ರಕೂಟ ಅರಸರಲ್ಲಿ ಸೇನಾಪತಿಯಾಗಿದ್ದ 'ಬಂಕೇಶ'ನ ಮಡದಿ 'ವಿಜಯಾ' ಎಂಬ ಕರ್ನಾಟಿಯು ಸುಪ್ರಸಿದ್ಧ ಸಂಸ್ಕೃತ ಕವಯಿತ್ರಿಯಾಗಿದ್ದಳು.

ಹದಿನೈದನೆಯ ಶತಮಾನವು ಮುಗಿದ ನಂತರದ ನೂರು ನೂರೈವತ್ತು ವರ್ಷಗಳಲ್ಲಿ ನಮಗೆ ಸ್ತ್ರೀಯರಿಂದ ರಚಿತವಾದ ಕೃತಿಗಳು ಸಿಗುವುದಿಲ್ಲ. ಅದರಲ್ಲಿ ಅರ್ಧದಷ್ಟು ಕಾಲದಲ್ಲಿಯಂತೂ ಯಾವ ಸಾಹಿತ್ಯಕೃತಿಯೂ ಬೆಳಕು ಕಂಡಿಲ್ಲ. ಮೊದಲಿನಿಂದಲೂ ನಮ್ಮ ಸಾಹಿತ್ಯ ರಾಜಾಶ್ರಯದಿಂದ ಬೆಳಗುತ್ತ ಬಂದಿದೆ. ವಿಜಯ ನಗರ ಸಾಮ್ರಾಜ್ಯದ ನಾಶದಿಂದ ಕರ್ನಾಟಕಕ್ಕೆ ಈ ಕಾಲದಲ್ಲಿ ನಿಜವಾಗಿ ಅಂಧಕಾರ ವ್ಯಾಪಿಸಿತ್ತು. ಇದು ನಮ್ಮ ಸಾಹಿತ್ಯ ಸಂಗೀತ ಮೊದಲಾದವುಗಳೆಲ್ಲದರ ಬೆಳವಣಿಗೆಗೆ ಕೊಡಲಿ ಪೆಟ್ಟಾಯಿತು. ಸ್ಥಿತಿಯೇ ಹೀಗಿದ್ದಾಗ ಇನ್ನು ಸ್ತ್ರೀ ಲೇಖಿಕೆಯರೆಂತು ಬೆಳಕು ಕಾಣು

ವುದು? ವಾಸ್ತವವಾಗಿ ಬೆಳಕು ಕಂಡು ಜೀವಂತವಾಗಿರಬಹು ದಾದವಂತಹ ಅನೇಕ ಕೃತಿಗಳು ನಮಗೆ ದೊರಕದೆ ಹೋಗಿರ ಬಹುದು, ಕಾಲಪರಿಸ್ಥಿತಿಯ ಕಾರಣವಾಗಿ. ಕೃತಿಗಳು ದೊರೆ ತಿಲ್ಲವೆಂದು ಲೇಖಿಕೆಯರು ಇರಲಿಲ್ಲವೆಂದು ನಾವು ಇವತ್ತು ವಾದಮಾಡುತ್ತಿರಬಹುದು. ಇದ್ದರೋ ಏನೋ?

ಅಲ್ಲಿಂದ ಮುಂದೆ ನಾವು ಸಾಹಿತ್ಯದ ಬೆಳೆವಣಿಗೆಯನ್ನು ನೋಡುತ್ತ ಬಂದರೆ ಸ್ತ್ರೀ ಲೇಖಕಿಯರನ್ನು ನಾವು ಕಾಣು ವುದು ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ. ಪ್ರಾ ಮುಖ್ಯವಾಗಿ ಗಮನಿಸಬೇಕಾದ ಹೆಸರುಗಳು ಎರಡು. ಒಂದು ಸಂಚಿಯ ಹೊನ್ನಮ್ಮ; ಇನ್ನೊಂದು ಶೃಂಗಾರಮ್ಮ.

ಇದೇ ಕನ್ನಡ ಸಾಹಿತ್ಯದಲ್ಲಿ ತೇಜಸ್ವಿಗಳಾದ ಸ್ತ್ರೀ ಲೇಖ ಕಿಯರು ಯಾರು ಎಂದರೆ ಥಟ್ಟನೆ ಮನಸ್ಸಿಗೆ ಹೊಳೆಯು ವುದು ಎರಡು ಹೆಸರುಗಳು. ಒಂದು ಮಹಾದೇವಿಯಕ್ಕ; ಎರಡು ಹೊನ್ನಮ್ಮ. ಮಹಾದೇವಿಯಕ್ಕನ ವಿಚಾರ ಆಗಲೇ ತಿಳಿಸಿಯಾಗಿದೆ. ಈಗ ನಾವು ತಿಳಿದುಕೊಳ್ಳಬೇಕಾದುದು ಮೈಸೂರರಸರಾಗಿದ್ದ ಚಿಕ್ಕ ದೇವರಾಜ ಒಡೆಯರ ಊಳಿಗದ ವಳಾಗಿದ್ದ ಸಂಚಿಯ ಹೊನ್ನಮ್ಮನದು.

ಈಕೆ ಅರಮನೆಯಲ್ಲಿ ಊಳಿಗದವಳಾಗಿದ್ದಳು. ಗೃಹ ಸ್ಥಾಶ್ರಮದಲ್ಲಿ ಧರ್ಮದ ಬಾಳನ್ನು ಕಂಡು, ಅದರ ಚೆಲುವನ್ನು ಮನಗಂಡು, ಅದೇ ಸಂಸಾರದಲ್ಲಿಯೇ ನಿಷ್ಕಾಮ ಕರ್ಮದ ಮೂಲಕ ಪರಮಪದವನ್ನು ಹೆಂಗಸು ಪಡೆಯಬಹುದೆಂದು ಈಕೆ ಸಾರಿದಳು. ಈಕೆ ರಚಿಸಿ ನಮಗೆ ಇತ್ತಿರುವ ಕಾವ್ಯ 'ಹದಿಬದೆಯ ಧರ್ಮ'ದ ತಿರುಳು, ನಿರ್ಮಲ ಸತಿಯರ ಅನುಭವದ ತಿರುಳು. ಈಕೆಗೆ ಹೆಣ್ಣೆಂಬುದು ಬಹಳ ಅಭಿ ಮಾನಾಸ್ಪದವಾದ ಜೀವ ಎಂಬ ಉದಾತ್ತ ಭಾವನೆ ಇದ್ದಿರ ಬೇಕು. ಈಕೆ ಹೆಣ್ಣನ್ನು ಅಲ್ಲಗಳೆಯುವವರನ್ನು ಸುಮ್ಮನೆ ಬಿಟ್ಟಿಲ್ಲ.

"ಪೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದ ತಾಯಿ?
ಪೆಣ್ಣಲ್ಲವೆ ಪೊರೆದವಳು?
ಕುವರನಾದೊಡೆ ಬಂದ ಗುಣವೇನದರಿಂದ?
ಕುವರಿಯಾದೊಡೆ ಕುಂದೇನು?" ಎಂದು ಪ್ರಶ್ನೆ ಹಾಕಿ
"ಇವರಿರ್ವರೊಳೇಗ್ಗೆ ಪಡೆದವರಿಂದ
ಸವನಿಪ್ರದಿಹಪರ ಸೌಖ್ಯ" ಎಂದು ತನ್ನ ಸಮಭಾವ

ಸಿದ್ಧಾಂತವನ್ನು ನೆಲೆಗೊಳಿಸುತ್ತಾಳೆ. ಬಡತನದಲ್ಲಿ ಹುಟ್ಟಿ, ಬೆಳೆದು, ಅರಸರ ಕೈಹಿಡಿಯುವಂತಹ ದೇವಾಜಮ್ಮಣ್ಣಿಯ ಊಳಿಗದವಳಾಗಿ, ಅರಮನೆಯನ್ನು ಒಡತಿಯೊಡನೆ ಸೇರಿ, ತನ್ನ ಹುಟ್ಟನ್ನೂ, ಜಾತಿಯನ್ನೂ ಮರೆಸಿ, ಯೋಗ್ಯತೆಯ ಮನ್ನಣೆಯನ್ನು ಪಡೆದಂತಹ ಮಹಾಸಾಧ್ವಿ ಈಕೆ. ತನ್ನ ಗುರು ಅಳಸಿಂಗರಾರ್ಯರಿಂದ ಸಂಸ್ಕೃತ, ಕನ್ನಡ ಭಾಷಾ ವ್ಯಾಸಂಗ ಮಾಡಿ ದೈವದತ್ತವಾದ ಕಾವ್ಯ ಪ್ರತಿಭೆಯನ್ನು ಸದುಪಯೋಗ ಮಾಡಿಕೊಂಡಿದ್ದಾಳೆ ಈಕೆ. ಸ್ತ್ರೀತ್ವವೆಂದರೆ ಚಿನ್ನದ ಹಾಗೆ; ಪಾತಿವ್ರತ್ಯದಿಂದ ಅದು ಕೂಡಿದ್ದರೆ ಅದರ ಮೆರಗು ಸರ್ವ ಪ್ರಕಾಶಮಾನವಾಗಿ ಇರುತ್ತದೆ; ಎಂಬುದು ಹೊನ್ನಮ್ಮ ಕಂಡು ಕೊಂಡ ಅನುಭವ ಸಾರ. ಅದೇ 'ಹದಿಬದೆಯ ಧರ್ಮ'ದ ಜೀವ ಜೀವ.

ಈಕೆಯ ಜೊತೆಯಲ್ಲಿಯೇ ಅದೇ ರಾಜನ ಆಸ್ಥಾನದ ಲ್ಲಿಯೇ ಶೃಂಗಾರಮ್ಮನೆಂಬ ಸ್ತ್ರೀಲೇಖಿಕೆಯು ತನ್ನ ಕಾವ್ಯ ವ್ಯವ ಸಾಯವನ್ನು ಅಭಿವೃದ್ಧಿ ಪಡಿಸಿಕೊಂಡು ಬರುತ್ತಿದ್ದಳು. ಈಕೆ 'ಸಾಂಗತ್ಯ'ದಲ್ಲಿ 'ಪದ್ಮವತೀ ಕಲ್ಯಾಣ'ವೆಂಬ ಕಾವ್ಯವನ್ನು ರಚಿಸಿದ್ದಾಳೆ.

ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿ ರಾಜ ಮನೆತನದ 'ಚೆಲುವಾಂಬೆ' ಎಂಬ ಅರಸಿತಿಯು ಕಾವ್ಯರಚನೆಗೆ ತೊಡಗಿದ್ದಳು. ಈಕೆ 'ವರನಂದೀ ಕಲ್ಯಾಣ,' 'ವೆಂಕಟಾ ಚಲ ಮಹಾತ್ಮ್ಯೆ,' 'ಲಾಲಿಪದ,' 'ಅಲರ್ಮೇಲು ಮಂಗ ಲಾಲಿ ಪದ' 'ತಲಕಾವೇರೀ ಮಹಾತ್ಮ್ಯ ಟೀಕೆ' ಮೊದಲಾದ ಗ್ರಂಥ ಗಳನ್ನು ರಚಿಸಿದ್ದಾಳೆ. ಈಕೆಯ ಕಾವ್ಯಗಳು ಲಲಿತವಾಗಿವೆ; ಹೃದಯಂಗಮವಾಗಿವೆ; ಅನುಭವಪೂರ್ಣವಾಗಿವೆ.

ಅದೇ ಶತಮಾನದ ಮಧ್ಯಭಾಗದಲ್ಲಿ ನಾವು ಮತ್ತೊಬ್ಬ ಭಕ್ತೆಯನ್ನು ಕಾಣುತ್ತೇವೆ. ಮೀರಾ, ಅಕ್ಕಮಹಾದೇವಿ ಇವರ ಸಾಲಿಗೆ ಸೇರಿದಾಕೆ ಈಕೆ. ಹೆಸರು 'ಹೆಳವನ ಕಟ್ಟೆಯ ಗಿರಿಯಮ್ಮ'. ಭಕ್ತಿ ಪಂಥಕ್ಕೆ ಸೇರಿದ ಈಕೆಯ ಕೈಯಿಂದ ಹೊಮ್ಮಿದ ಕಾವ್ಯಲಹರಿ ಎಂತಹುದಾದೀತೆಂದು ಮತ್ತೆ ಹೇಳ ಬೇಕಾಗಿಲ್ಲ. 'ಚಂದ್ರಹಾಸನ ಕಥೆ' ಮತ್ತು 'ಉದ್ದಾಳಿಕನ ಕಥೆ'ಯನ್ನು ಸಾಂಗತ್ಯದಲ್ಲಿಯೂ, 'ಸೀತಾ ಕಲ್ಯಾಣ'ವನ್ನು ಹಾಡುಗಳ ರೂಪದಲ್ಲಿಯೂ ಈಕೆ ರಚಿಸಿದ್ದಾಳೆ. ಈಕೆಯ ಮನೆತನದವರು ಈಗಲೂ ಆ ಗ್ರಾಮದಲ್ಲಿ ವಾಸಿಸುತ್ತಾರೆ. ಸಂಸಾರದಲ್ಲಿದ್ದು, ಕಷ್ಟಸುಖಗಳನ್ನು ಅನುಭವಿಸುತ್ತಾ ತನ್ನ ಮುಕ್ತಿ ಮಾರ್ಗ ಸಾಧಿಸಿದ ಈ ಸಾಧ್ವಿ ಕನ್ನಡಿಗರ ಮನಸ್ಸಿನಲ್ಲಿ ನೆಲೆಯಾಗಿ ನಿಂತಿದ್ದಾಳೆ.

ಹತ್ತೊಂಬತ್ತನೆಯ ಶತಮಾನದಲ್ಲಿ ವೆಂಕಟ ಲಕ್ಷ್ಮಮ್ಮ, ವೆಂಕಟ ಸುಬ್ಬಮ್ಮ, ಹಾಡಿನ ರಂಗಮ್ಮ, ತುಳಸೀಬಾಯಿ, ಸಿ. ಆರ್. ಚೆಲ್ಲಮ್ಮ, ಮೊದಲಾದ ಲೇಖಿಕೆಯರು ಹೆಸರು ಪಡೆದವರು. ಹಾಡಿನ ರಂಗಮ್ಮ ಮತ್ತು ಕೊಡಗಿನ ವೆಂಕಟ ಸುಬ್ಬಮ್ಮ, ಇಬ್ಬರೂ ಹಾಡುಗಳನ್ನು ರಚಿಸಿದ್ದಾರೆ. ತುಳಸೀ ಬಾಯಿಯವರು ಹಾಡುಗಳನ್ನು ರಚಿಸುವುದರ ಜೊತೆಗೆ 'ರಂಗ ಸೆಟ್ಟಿ' ಮತ್ತು 'ಕಾಳಗೌಡ' ಎಂಬ ಕತೆಗಳನ್ನು ಬರೆದಿದ್ದಾರೆ. ಪೌರಾಣಿಕ, ಐತಿಹಾಸಿಕ ವಸ್ತುಗಳನ್ನು ಬಿಟ್ಟು, ನೆರೆಹೊರೆ ಯವರ ಕತೆಗಳನ್ನು ಬರೆಯುವ ಸಾಹಸಕ್ಕೆ ಈ ಲೇಖಿಕೆ ಕೈ ಹಾಕಿದ್ದಾಳೆ.

ಉಪಾಧ್ಯಾಯ ವೃತ್ತಿಯಲ್ಲಿದ್ದು ಸಾಹಿತ್ಯದ ಬೆಳವಣಿಗೆಗೆ ಸಾಧಕವಾಗುವ ವಾತಾವರಣದಲ್ಲಿ ಬೆಳೆದ ಸಿ. ಆರ್. ಚೆಲ್ಲಮ್ಮ, 'ರುಕ್ಮಿಣೀ ಸ್ವಯಂವರ,' 'ಪಾಂಚಾತಾಪ ಹರಣ,' ರಾಜಕಲಾ ನಿಧಿ,' 'ವೈರಾಗ್ಯ ಮಂಜರೀ,' 'ದ್ವಾದಶ ಮಂಜರೀ ಸ್ತೋತ್ರ,' 'ನೀತಿ ಕಾಲಹರಿ' ಮೊದಲಾದ ಗ್ರಂಥಗಳನ್ನು ಕನ್ನಡಿಗರಿಗೆ ನೀಡಿದ್ದಾರೆ.

ಈಗ ಸ್ಥೂಲವಾಗಿ ಪ್ರಾರಂಭದಿಂದ ಹತ್ತೊಂಬತ್ತನೆಯ ಶತಮಾನ ಪೂರ್ತಿ ಬೆಳಗಿದ ಲೇಖಿಕೆಯರ ಪರಿಚಯ ಮಾಡಿಕೊಂಡ ಹಾಗಾಯಿತು.

ನಮ್ಮ ಸಾಹಿತ್ಯದಲ್ಲಿ, ಆಂಗ್ಲ ಸಾಹಿತ್ಯ ಪ್ರಭಾವದಿಂದ ಹೊಸ ಹೊಸ ಪ್ರಯೋಗಗಳು ಆಚರಣೆಗೆ ಬಂದುದು ಇಪ್ಪತ್ತನೆಯ ಶತಮಾನದಲ್ಲಿ. ಆದರಿಂದ ಈ ಮೊದಲು ಬರೆದವರೆಲ್ಲ ಹಿಂದಿನ ಸಂಪ್ರದಾಯಬದ್ಧರೀತಿಯಲ್ಲಿ ತಮ್ಮ ಕಾವ್ಯ ಪ್ರತಿಭೆಯನ್ನು ವಿನಿಯೋಗಿಸಿದರು. ವಸ್ತುವನ್ನು ಆರಿಸುವುದರಲ್ಲಾಗಲೀ, ಹೊಸ ಮಾರ್ಗದಲ್ಲಿ ಬರವಣಿಗೆಯನ್ನು ರೂಢಿಸಿಕೊಂಡು ಬರುವುದರಲ್ಲಾಗಲೀ, ಮೊದಲಿನವರು ಪ್ರಯತ್ನಿಸಲು ಸಾಕಷ್ಟು ಒತ್ತಡದ ಪ್ರಭಾವ ಆವರುಗಳ ಮೇಲೆ ಬಿದ್ದಿರಲಿಲ್ಲ. ವಚನಗಳು, ರಗಳೆಗಳು ಕೊಂಚ ಮಟ್ಟಿನ ಹೊಸತನವನ್ನು ಮೈಗೂಡಿಸಿಕೊಂಡು ಬಂದಿವೆಯಾದರೂ ಅವಷ್ಟೇ ಸಾಕೆನಿಸುವುದಿಲ್ಲ. ಗಂಡಸಿಗಿಂತ ಹೆಂಗಸು ಸಾಮಾನ್ಯವಾಗಿ ಹೆಚ್ಚು ಸಂಪ್ರದಾಯಶರಣೆಯೆಂಬುದು ಅನುಭವದಿಂದ ಅರಿತುಕೊಂಡ ಮಾತು. ನಮ್ಮತನವೆಂಬುದು ಏನು ಇದೆಯೋ, ಇವತ್ತು ಅದಕ್ಕೆ ನಮ್ಮ ಹೆಂಗಸರು ಕಾರಣವೆಂದರೆ ಅತಿಶಯೋಕ್ತಿಯಲ್ಲ. ಆಚಾರ-ವ್ಯವಹಾರ, ರೀತಿ-ನೀತಿ, ನಡೆ-ನುಡಿ, ಧರ್ಮ-ನಿಷ್ಠೆ ಇವು ಇನ್ನೂ ಇವೆಯೆಂದು ನಮಗೆ ಕಾಣುವುದು ಹೆಂಗಸರಲ್ಲಿ. ಹೀಗಿರುವಾಗ ಸಂಪ್ರದಾಯವನ್ನು ಬಿಟ್ಟು, ಹೊಸ ಮಾರ್ಗ ಹುಡುಕಿಕೊಂಡು ಹಿಂದಿನ ಕಾಲದ ಲೇಖಿಕೆಯರು ಹೋಗಲಿಲ್ಲವೆಂದರೆ ಆಶ್ಚರ್ಯವೇನು?

ಇನ್ನು ಇಪ್ಪತ್ತನೆಯ ಶತಮಾನಕ್ಕೆ ನಾವು ಬಂದೊಡನೆಯೇ ಹಿರಿಯ ಲೇಖಿಕೆಯರ ಸಾಲಿಗೆ ಸೇರಿದ ಮೂವರು ಸ್ತ್ರೀಯರ ಹೆಸರು ಒಡನೆಯೇ ನೆನಪಾಗುತ್ತದೆ—ಶ್ರೀಮತಿ ತಿರುಮಲಾಂಬಾ, ಶ್ರೀಮತಿ ಆರ್. ಕಲ್ಯಾಣಮ್ಮ, ಶ್ರೀಮತಿ ತಿರುಮಲೆ ರಾಜಮ್ಮ.

ಶ್ರೀಮತಿ ತಿರುಮಲಾಂಬಾ ಅವರು 'ಸತೀ ಹಿತೈಷಿಣೀ ಗ್ರಂಥಮಾಲಾ' ಎಂಬ ಅಭಿದಾನದಿಂದ ಪುಸ್ತಕ ಪ್ರಕಟಣೆಗಳನ್ನು ಕೈಕೊಂಡರು. ಕನ್ನಡದ ಒಂದು ಪುಸ್ತಕದ ಮೊದಲ ಮುದ್ರಣದ ಸಾವಿರ ಪ್ರತಿಗಳು ಖರ್ಚಾಗಲು ಇಪ್ಪತ್ತು ವರ್ಷ ಬೇಕಾಗಿದ್ದ ದುಷ್ಕಾಲದಲ್ಲಿ ಈಕೆ ಪುಸ್ತಕಗಳನ್ನು ರಚಿಸುವುದಷ್ಟೇ ಅಲ್ಲ, ಅವುಗಳ ಪ್ರಕಟನೆಯ ಕೆಲಸವನ್ನೂ ಕೈಕೊಂಡರೆಂದ ಮೇಲೆ ಈಕೆಯ ಭಾಷಾ ಪ್ರೇಮ ಎಷ್ಟಿರಬೇಕು? ಹೊಸಗನ್ನಡ ಸ್ತ್ರೀ ಲೇಖಿಕೆಯರಲ್ಲಿ ಈಕೆ ಮೊದಲಿಗರೆಂಬ ಅಭಿಮಾನ ಮನಸ್ಸಿನಲ್ಲಿ ಮೂಡುವಷ್ಟು ಈಕೆ ಸಾಹಿತ್ಯದ ಕೆಲಸಮಾಡಿದ್ದಾರೆ. ಆರೆಂಟು ಪುಸ್ತಕಗಳನ್ನು ಬರೆದು, ಹತ್ತಾರು ಪುಸ್ತಕಗಳನ್ನು ಪ್ರಕಟಿಸಿ ಈಕೆ ಸಾಹಿತ್ಯ ಸೇವೆ ಮಾಡಿದ್ದಾರೆ. ಐತಿಹಾಸಿಕ ವಸ್ತುವನ್ನೇ ಹೆಚ್ಚಾಗಿ ಆರಿಸಿಕೊಳ್ಳುತ್ತಿದ್ದ ಕಾಲದಲ್ಲಿ ಈಕೆ ಸಾಹಿತ್ಯ ರಚನೆಗೆ ತೊಡಗಿದರು, ಬಂಗಲಿ ಹಾಗು ಮರಾಠಿ ಪುಸ್ತಕಗಳು ಹೇರಳವಾಗಿ ಕನ್ನಡಕ್ಕೆ ಭಾಷಾಂತರವಾಗುತ್ತಿದ್ದ ಕಾಲ. ಆ ಪ್ರಭಾವ ಈಕೆಯ ಬರವಣಿಗೆಯ ಮೇಲೆ ಬೀರದೆ ಹೋಗಿಲ್ಲ. ಈಕೆಯಿಂದ ರಚಿತವಾದ 'ವಿದ್ಯುಲ್ಲತಾ,' 'ವಿರಾಗಿಣಿ,' 'ಮಾತೃನಂದಿನಿ,' ಮೊದಲಾದ ಪುಸ್ತಕಗಳು ಈಗಲೂ ಓದುಗರಿಗೆ ಒಂದು ಬಗೆಯ ಉತ್ಸಾಹವನ್ನು ಕೊಡುತ್ತದೆ. ಇವರ ಕೆಲವು ರಚನೆಗಳು ಪಠ್ಯಪುಸ್ತಕಗಳು ಸಹ ಆಗಿದ್ದುವು.

ಶ್ರೀಮತಿ ಆರ್. ಕಲ್ಯಾಣಮ್ಮನವರು ಆರಿಸಿಕೊಂಡ ಕಾರ್ಯಕ್ಷೇತ್ರ ಹೆಚ್ಚು ವಿಸ್ತಾರವಾದುದು. ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡಿದ ಈಕೆ ರಾಜರ ಮನ್ನಣೆ ಪಡೆದರು. ಬೆಂಗಳೂರು ನಗರದಂತಹ ಮುಖ್ಯ ಪಟ್ಟಣಕ್ಕೆ ಪೌರ ಸಭೆಯ ಉಪಾಧ್ಯಕ್ಷಣಿಯಾಗಿದ್ದರು. ಈಕೆ ಇನ್ನೂ ಅನೇಕ ಸಾರ್ವಜನಿಕ ಸಂಘ, ಸಂಸ್ಥೆಗಳಲ್ಲಿ ಸೇವೆ ಸಲಿಸಿದ್ದಾರೆ. ಈ ಎಲ್ಲ ಅನುಭವಗಳು ಇವರ ಸಾಹಿತ್ಯ ನಿರ್ಮಾಣಕ್ಕೆ ಒಂದು ಮೆರುಗನ್ನುಕೊಟ್ಟದೆಯೆಂದರೆ ತಪ್ಪಾಗಲಾರದು. ಇವರ 'ಇಂದಿರೆ,' 'ಸುಖಲತಾ' ಮೊದಲಾದ ಕಾದಂಬರಿಗಳು, 'ಇಪ್ಪತ್ತನೆಯ ಶತಮಾನದ ಅಳಿಯ' ಮೊದಲಾದ ನಾಟಕಗಳು ಸಮಕಾಲೀನ ಸಮಸ್ಯೆಗಳನ್ನು ವಿಮರ್ಶಿಸುವಂತಹ ಕೃತಿಗಳು. ನಮ್ಮ ಜನಜೀವನವನ್ನು ಚಿತ್ರಿಸ ಹೊರಟ ಹಿರಿಯ ಲೇಖಿಕೆ ಈಕೆ. ಇವರಿಗೆ ಸಾಹಿತ್ಯ ನಿರ್ಮಾಣಕ್ಕಿಂತ, ಹೆಚ್ಚಿನ ಶ್ರೇಯಸ್ಸನ್ನು ಕೊಟ್ಟಿರುವುದು ಈಗ ಸುಮಾರು ಮೂವತ್ತು ವರ್ಷಗಳಿಗೂ ಮೇಲ್ಪಟ್ಟು ಅನೂಚಾನವಾಗಿ ನಡಸಿಕೊಂಡು ಬರುತ್ತಿರುವ 'ಸರಸ್ವತಿ' ಎಂಬ ಮಾಸಪತ್ರಿಕೆ. ಅನೇಕ ಉದಯೋನ್ಮುಖ ಲೇಖಕ ಲೇಖಿಕೆಯರಿಗೆ ಪ್ರೋತ್ಸಾಹವಿತ್ತು ಅವರೆಲ್ಲ ಉತ್ತಮ ಸಾಹಿತಿಗಳಾಗಲು ಈ ಪತ್ರಿಕೆಯ ಮುಖಾಂತರ ಶ್ರೀಮತಿಯವರು ನೆರವಾಗಿದ್ದಾರೆ. ಈಚೆಗೆ 'ಮಕ್ಕಳ ಕೂಟ'ವೆಂಬ ಮಕ್ಕಳ ಸಂಸ್ಥೆಯನ್ನು ಪ್ರಾರಂಭಿಸಿ, ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಹುಟ್ಟಲು, ಸಾಹಿತ್ಯ ನಿರ್ಮಾಣಶಕ್ತಿ ಇರುವುದು ಕಂಡುಬಂದರೆ ಆ ಶಕ್ತಿ ಬೆಳೆಯಲು ಸರ್ವವಿಧದಲ್ಲಿಯೂ ಶ್ರೀಮತಿಯವರು ದುಡಿಯುತ್ತಿದ್ದಾರೆ.

ಶ್ರೀಮತಿ ತಿರುಮಲೆ ರಾಜಮ್ಮನವರು, 'ಭಾರತಿ' ಎಂಬ ಕಾವ್ಯ ನಾಮದಿಂದ ಸಾಹಿತ್ಯ ರಚಿಸಿದ್ದಾರೆ. ಇವರು ಉತ್ತಮ ಕವಯಿತ್ರಿ. ಇವರು ಕನ್ನಡಿಗರ ಮನಸ್ಸನ್ನು ಈ ಇಪ್ಪತ್ತು ವರ್ಷಗಳ ಹಿಂದೆಯೇ ಸೂರೆಗೊಂಡುದು ತಮ್ಮ

'ತಪಸ್ವಿನೀ' ಎಂಬ ಕೃತಿನಿರ್ಮಾಣದಿಂದೆನ್ನಬೇಕು. ಇವತ್ತಿಗೂ ಈ ಕಾವ್ಯದಲ್ಲಿ ನವೀನತೆ ಇದೆ. ಇದು ಸರಳ ರಗಳೆಯ ನಾಟಕವಾದರೂ ಇದನ್ನು ಕಾವ್ಯದ ಗುಂಪಿಗೆ ಸೇರಿಸತಕ್ಕುದಾಗಿದೆ. ಆರಿಸಿಕೊಂಡಿರುವ ವಸ್ತು, ಬರೆದಿರುವ ಶೈಲಿ, ಭಾಷೆಯಲ್ಲಿ ಅಡಕವಾಗಿ ಬೆರೆತುಬಂದಿರುವ ಗಾಂಭೀರ್ಯ, ಹೃದಯಸ್ಪರ್ಶಿಯಾದ ಪದಬಂಧ, ಎಲ್ಲರನ್ನೂ ಸೂರೆಗೊಂಡಿದೆ. ಈ ಕೃತಿನಿರ್ಮಾಣದಿಂದ ಯಾರ ಮನಸ್ಸಿನಲ್ಲೂ ಎಡೆ ದೊರಕಿಸಿಕೊಳ್ಳಲಾರದಾಗಿದ್ದ ಲಕ್ಷ್ಮಣನ ಮಡದಿ ಊರ್ಮಿಳೆ ಶಾಶ್ವತವಾಗಿ ತಪಸ್ವಿನಿಯಾಗಿ ರಾರಾಜಿಸುತ್ತ ನೆಲಸಿಬಿಟ್ಟಿದ್ದಾಳೆ. ಊರ್ಮಿಳೆಯನ್ನು ಚಿರಸ್ಥಾಯಿಯಾಗಿಸಿದ ಕೀರ್ತಿ ಶ್ರೀಮತಿ ರಾಜಮ್ಮನವರಿಗೆ ಸಲ್ಲುತ್ತದೆ. ಶ್ರೀಮತಿಯವರು ಸ್ವಯಂ ವೈಣಿಕರು, ಸಂಗೀತಜ್ಞರು. ಅನೇಕ ಹಾಡುಗಳನ್ನು ಸಂಗೀತಕ್ಕೆ ಅಳವಡುವಂತೆ ರಚಿಸಿದ್ದಾರೆ. ಇವರ 'ಭಾರತ ಶಕ್ತಿ'ಎಂಬ ಕವನಸಂಗ್ರಹವು ಇವರ ರಾಷ್ಟ್ರಪ್ರೇಮದ ಪ್ರತೀಕವಾಗಿದೆ.

ಇಪ್ಪತ್ತನೆಯ ಶತಮಾನದ ಸ್ತ್ರೀ ಲೇಖಕಿಯರ ಮೊದಲನೆಯ ಪೀಳಿಗೆಯಲ್ಲಿ ಮೇಲಿನ ಮೂವರು ಕಾಣಿಸಿಕೊಂಡರೆ, ಎರಡನೆಯ ಪೀಳಿಗೆಯಲ್ಲಿ ಶ್ರೀಮತಿ ಶ್ಯಾಮಲಾದೇವಿ, ಶ್ರೀಮತಿ ಬಿ. ಟಿ ಜಿ. ಕೃಷ್ಣ (ಗೌರಮ್ಮ) ಶ್ರೀಮತಿ ಬೆಳಗೆರೆ ಜಾನಕಮ್ಮ ಇವರುಗಳು ನಕ್ಷತ್ರಗಳ ಹಾಗೆ ಮಿನುಗಿ ಕಣ್ಮರೆಯಾದುದು ನಮಗೆ ಅಪಾರ ದುಃಖಕೊಟ್ಟಿದೆ. ಮೊದಲಿನ ಇಬ್ಬರೂ ಉತ್ತಮ ಕತೆಗಾರ್ತಿಯರು. ಮೂರನೆಯವರು ಉತ್ತಮ ಕವಯಿತ್ರಿ. ಪೂರ್ವ ವಯಸ್ಸಿನಲ್ಲಿಯೇ, ಮೂವರೂ ಕಣ್ಮರೆಯಾದುದು ನಮ್ಮ ದುರ್ದೈವ.

ಶ್ರೀಮತಿ ಗೌರಮ್ಮನವರ 'ಮನುವಿನ ರಾಣಿ' ಎಂಬ ಕತೆ ಮೊಟ್ಟಮೊದಲು ಕನ್ನಡಿಗರ ಮನಸ್ಸನ್ನು ಸೆಳೆಯಿತು. ಇವರು ಹತ್ತಾರು ಉತ್ತಮ ಸಣ್ಣ ಕತೆಗಳನ್ನು ಬರೆದಿದ್ದಾರೆ. ಹೆಣ್ಣಿನ ಮನಸ್ಸೇನೆಂಬುದನ್ನು ಚಿತ್ರಿಸಲು ಪ್ರಯತ್ನಪಟ್ಟಿದ್ದಾರೆ. ಕಂಬನಿ, ಗೌರಮ್ಮನ ಕಥೆಗಳು ಮೊದಲಾದ ಸಂಗ್ರಹಗಳು ಅಚ್ಚಾಗಿವೆ. ಈಕೆಯ ಹೆಸರಿನಲ್ಲಿ ವರ್ಷಕ್ಕೊಂದು ಸಲ 'ಗೌರಮ್ಮ ಸ್ಮಾರಕ ಸ್ಪರ್ಧೆ'ಯು ನಡೆಯುತ್ತಿದೆ.

ಶ್ರೀಮತಿ ಶಾಮಲಾದೇವಿ ಅವರು ಸಹ ಚಿಕ್ಕ ವಯಸ್ಸಿನಲ್ಲಿಯೇ ವಿಧಿವಶರಾದರು. ಕನ್ನಡ ನಾಡಿನ, ಒಂದು ಕಾಲಕ್ಕೆ ಅತ್ಯುತ್ಕೃಷ್ಟವಾಗಿದ್ದ ಮಾಸಪತ್ರಿಕೆ ಜಯಕರ್ನಾಟಕದ ಸಂಪಾದಕರಾಗಿದ್ದ ಶ್ರೀ। ಬೆಳಗಾವಿ ರಾಮಚಂದ್ರರಾಯರ ಮಡದಿಯುವರಾಗಿದ್ದರು ಶ್ರೀಮತಿ ಶ್ಯಾಮಲಾ ದೇವಿ ಅವರು. ಲೇಖಕ, ಸಂಪಾದಕರ ಕೈಹಿಡಿದಿದ್ದ ಈಕೆಗೆ ಲೇಖನ ವೃತ್ತಿಗೆ ತೊಡಗಲು ಅನುಕೂಲವಾದ ವಾತಾವರಣವಿತ್ತು. ಸುಪ್ತವಾಗಿದ್ದ ಬರೆಯುವ ಚೇತನಕ್ಕೆ ಈ ವಾತಾವರಣ ಚಿಗುರಲು ಕಾರಣವಾಯಿತು. ಒಂದೆರಡು ಕಥಾಸಂಗ್ರಹಗಳು ಬಂದು ಇವರ ಹೆಸರು ಜನಗಳ ಮನಸ್ಸಿನಲ್ಲಿ ನಾಟುವಷ್ಟರಲ್ಲಿಯೇ ನಮ್ಮಿಂದ ದೂರವಾದರು. 'ಹೊಂಬಿಸಿಲು' ಮೊದಲಾದ ಕಥಾಸಂಗ್ರಹಗಳು ಈಗಲೂ ಉತ್ತಮಕಥಾ ಸಂಗ್ರಹಗಳ ಸಾಲಿಗೆ ಸೇರಿದ್ದಾಗಿವೆ.

ಶ್ರೀಮತಿ ಬೆಳಗೆರೆ ಜಾನಕಮ್ಮನವರು ಹುಟ್ಟುಕವಯಿತ್ರಿ. ಹಳ್ಳಿಯಲ್ಲಿ ಹುಟ್ಟಿ, ದೂರದ ಗಂಡನ ಮನೆಯಲ್ಲಿ ಬಡತನದಲ್ಲಿ ಇದ್ದುದರಿಂದ ಇವರ ಕವಿತೆಗಳು ಸಕಾಲದಲ್ಲಿ ಬೆಳಕು ಕಾಣಲಿಲ್ಲ. ಅದರಿಂದ ಈಕೆ ಕವನಗಳನ್ನು ಹಾಡಿಕೊಳ್ಳುವುದು, ಬರೆಯುವುದು, ಇಡುವುದು ರೂಢಿಮಾಡಿಕೊಂಡಿದ್ದರು. ಅದು ಸಾಹಿತ್ಯ, ಸಾರ್ವಜನಿಕರ ಉಪಯೋಗಕ್ಕೆ ಅವನ್ನು ಕೊಡಬೇಕೆಂಬುದರ ಕಡೆ ಸಹ ಈಕೆ ಗಮನಕೊಟ್ಟಿರಲಿಲ್ಲ. ತೀರ ಈಚೆಗೆ ಯಾರೋ ಅವರ ಮನೆಗೆ ಹೋಗಿ ಬಂದವರು ಅವರ ರಚನೆಗಳ ಪ್ರತಿಭೆಯನ್ನು ಕಂಡು ಅಚ್ಚುಹಾಕಿಸಿಜನತೆಗೆ ಕೊಡಬೇಕೆಂದು ಒತ್ತಾಯಮಾಡಲು,ಪ್ರಕಟನೆಗೆ ಒಪ್ಪಿದರು. ಆದರೆ ದುರದೃಷ್ಟ-ಅವರ ಸಂಗ್ರಹ ಅಚ್ಚಾಗಿ ಗ್ರಂಥರೂಪವಾಗಿ ಹೊರಬಿದ್ದುದನ್ನು ಕಣ್ಣಿಂದ ನೋಡುವ ಭಾಗ್ಯ ಸಹ ಈಕೆಯ ಪಾಲಿಗೆ ಉಳಿಯಲಿಲ್ಲ. ಒಂದು ಸಂಗ್ರಹ—'ಕಲ್ಯಾಣ' ಬಂದಿದೆ. ಇನ್ನೊಂದು ಸಂಗ್ರಹಕ್ಕಾಗುವಷ್ಟು ಕವನಗಳು ಕಾದಿವೆ. ಕನ್ನಡದಲ್ಲಿ ಕವಿತ್ವಮಾಡುವ ಸ್ತ್ರೀಯರ ಸಂಖ್ಯೆ ಬಹಳ ಕಡಮೆಯೆಂದು ಅರಿತ ಕನ್ನಡಿಗರು ಈಕೆಯ ಅಕಾಲ ಮರಣದಿಂದ ಬಹಳ ಮರಗುತ್ತಾರೆ. ಇವರ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ ಕನ್ನಡ ನಾಡಿನ ಅತ್ಯಂತ ಶ್ರೇಷ್ಠ ಕವಿಗಳಾದ ಬೇಂದ್ರೆಯವರು, "ಕವನಗಳಲ್ಲಿ ಮೆಚ್ಚಿಸುವ ಗುಣ ಇದೆ. ನಿರಾಡಂಬರದ ಕಾಂತಾಸಂಮಿತ ಶೈಲಿ, ಶೈಲಿಯ ಹಿಂದಿರುವ ಶೀಲದ ಮಾಧುರ್ಯ-ಶೀಲವೆಂದು ನೀರೆ ನೀರಸವಾಗಿಲ್ಲ,' ಸರಸ ಮಧುರವಾಗಿದೆ. ಇಷ್ಟು ಜೀವಂತವಾಗಿದೆ ಇಲ್ಲಿಯ ಹೃದಯನಿವೇದನ" ಎಂದು ಹೇಳಿದ್ದಾರೆ. ಎಂದ ಮೇಲೆ ಹೆಚ್ಚಿಗೆ ಬರೆಯುವ ಪ್ರಕೃತವಿಲ್ಲ.

ಈ ಶತಮಾನದಲ್ಲಿ ನಮ್ಮ ಕಣ್ಣಿಗೆ ಬೀಳುವ ಸ್ತ್ರೀ ಲೇಖಿಕೆಯರೆಂದರೆ ಬಹುಮಟ್ಟಿಗೆ ಕತೆಗಾರ್ತಿಯರು. ಶ್ರೀಮತಿ ಸುಬ್ಬಮ್ಮ (ಕಾವ್ಯನಾಮ 'ವಾಣಿ') ಶ್ರೀಮತಿ ಎಚ್. ವಿ. ಸಾವಿತ್ರಮ್ಮ, ಶ್ರೀಮತಿ ಸರಸ್ವತೀಬಾಯಿ ರಾಜವಾಡೆ (ಕಾವ್ಯನಾಮ-'ಗಿರಿಬಾಲೆ') ಕುಮಾರಿ ಕೃಷ್ಣಾ, ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್, ಶ್ರೀಮತಿ ಮಾಲತೀ ಶ್ರೀನಿವಾಸನ್, ಶ್ರೀಮತಿ ಆನಂದಿ ಶಿವರಾವ್, ಶ್ರೀಮತಿ ಲಲಿತ ರಾಮಣ್ಣ, ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಶ್ರೀಮತಿ ಲೀಲಾ ಕಾರಂತ, ಶ್ರೀಮತಿ ಶಾರದಾ ಜಡೆ, ಶ್ರೀಮತಿ ಉಮಾದೇವಿ ಶಂಕರರಾವ್, ಶ್ರೀಮತಿ ಪದ್ಮಾವತಿ ರಸ್ತೋಗೀ, ಶ್ರೀಮತಿ ಕುಂತಳಮ್ಮ, ಕುಮಾರಿ ಚಂದ್ರಿಕಾ ಮೊದಲಾದ ಕತೆಗಾರ್ತಿಯರು ತಮ್ಮ ಕತೆಗಳಿಂದ ನಮ್ಮ ಜನಜೀವನದಲ್ಲಿ

ಕಂಡುಬರುವ ಹೆಣ್ಣಿನ ಬಾಳನ್ನು, ಅದರ ಸಾರವನ್ನು ತಿಳಿಸಲು ಪ್ರಯತ್ನಪಟ್ಟಿದ್ದಾರೆ. ಶ್ರೀಮತಿ 'ವಾಣಿ' ಮತ್ತು ಶ್ರೀಮತಿ ಎಚ್. ವಿ. ಸಾವಿತ್ರಮ್ಮ ಇವರ ಕತೆಗಳು ಬೇಗ ಮನಸ್ಸನ್ನು ಆಕರ್ಷಿಸುತ್ತವೆ. ಕಾರಣ ಕತೆಗಳಲ್ಲಿ ಹರಿದುಬಂದಿರುವ ಅನುಭವದ ರಸವತ್ತಾದ ಚಿತ್ರಣ. ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್‌ರವರು ನಮ್ಮ ಕತೆಗಾರ್ತಿಯರಲ್ಲಿ ಸಂಖ್ಯೆಯ ದೃಷ್ಟಿಯಿಂದ ಪ್ರಮುಖ ಸ್ಥಾನವನ್ನು ಗಳಿಸಿದ್ದಾರೆ. ಈಗಾಗಲೆ ಇವರ ಆರೆಂಟು ಕಥಾ ಸಂಗ್ರಹಗಳು ಬೆಳಕು ಕಂಡು ಜನಮನನನ್ನು ಸೆಳೆದಿವೆ. ಶ್ರೀಮತಿಯವರು ಸ್ವಂತ ರಚನೆಯ ಜೊತೆಗೆ ತಮಿಳಿನಿಂದ ಕನ್ನಡಕ್ಕೂ, ಕನ್ನಡದಿಂದ ತಮಿಳಿಗೂ ಭಾಷಾಂತರ ಮಾಡಿ ಸಾಹಿತ್ಯ ಸೇವೆ ಮಾಡುತ್ತಿದ್ದಾರೆ.

ಕುಮಾರಿ ಕೃಷ್ಣಾ ಒಳ್ಳೆಯ ಕತೆಗಾರ್ತಿ; ಆಕೆಯ ಬರವಣಿಗೆಯಲ್ಲಿ ಹೃದಯವನ್ನು ನೇರವಾಗಿ ನಾಟುವ ಮೊನಚು ಇತ್ತು. ಭಾವನೆಗಳ ಉದಾತ್ತತೆಯಿಂದ ತುಂಬಿರುತ್ತಿದ್ದವು. ಹೇಳುವುದನ್ನು ನೇರವಾಗಿ ಮನಮುಟ್ಟುವಂತೆ ಹೇಳುವ ಈಕೆಯ ಶೈಲಿ ಮೆಚ್ಚುವಂತಹುದಾಗಿತ್ತು. ಆದರೇನು? ಆಕೆ ಇನ್ನೂ ಯೌವನಾವಸ್ಥೆಯಲ್ಲಿಯೇ ಪರಂಧಾಮವೈದಿದರು.

ಶ್ರೀಮತಿ ಸರಸ್ವತೀಬಾಯಿ ರಾಜವಾಡೆಯವರು ಉತ್ಸಾಹೀ ಲೇಖಿಕೆಯರು. ಶ್ರೀ ಜಯಲಕ್ಷ್ಮೀ ಆರ್. ಶ್ರೀನಿವಾಸನ್‌ರವರಂತೆ ಇವರು ಬಹಳ ಲೇಖನಗಳನ್ನೂ ಕತೆಗಳನ್ನೂ ರಚಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಕೆಗೆ ಮೊನ್ನೆ ಮೊನ್ನೆ ಅಲ್ಲಿನ ನಾಗರಿಕರು ಈಕೆಯ ಸಾಹಿತ್ಯಸೇವೆಗೆ ಗೌರವ ಸೂಚಿಸಿ ಸನ್ಮಾನಮಾಡಿದರು. ಈಕೆ ಹೆಣ್ಣುಮಕ್ಕಳ ಪುರೋಭಿವೃದ್ಧಿಗಾಗಿ ಹೆಣ್ಣುಮಕ್ಕಳ ಬರಹಗಳಿಗಾಗಿಯೇ ಮೀಸಲಾದ 'ಸುಪ್ರಭಾತ' ಎಂಬ ಮಾಸಪತ್ರಿಕೆಯನ್ನು ಸಹ ಈಚೆಗೆ ನಡಸತೊಡಗಿದ್ದಾರೆ.

ಶ್ರೀಮತಿ ಎಂ. ಆರ್. ಲಕ್ಷಮ್ಮ ಒಳ್ಳೆಯ ಲೇಖಿಕೆಯರು. ಅವರು ಪ್ರಾರಂಭದಲ್ಲಿ ಸಾಹಿತ್ಯನಿರ್ಮಾಣ ಮಾಡಹೊರಟು ಐತಿಹಾಸಿಕ ವಸ್ತುಗಳನ್ನು ಆರಿಸಿಕೊಂಡು ಸುಂದರ ನಾಟಕ ರಚಿಸಿದರು. ರಾಜಕೀಯಕ್ಕೆ ಅವರು ಕಾಲಿಟ್ಟ ಮೇಲೆ ಸಾಹಿತ್ಯ ಸೃಷ್ಟಿ ಹಿಂದಕ್ಕೆ ಬಿತ್ತು. ಆದರೂ ಅವರ ಸಾಹಿತ್ಯಸೇವೆ, 'ಸೋದರಿ' ಎಂಬ ವಾರಪತ್ರಿಕೆ ನಡಸಿಕೊಂಡು ಬರುತ್ತಾ ಇರುವ ಅವರ ಸಾಹಸಕಾರ್ಯದಲ್ಲಿ ಪರ್ಯವಸಾನಗೊಂಡಿದೆ. ಶ್ರೀಮತಿ ಪಡುಕೋಣೆ ಸೀತಾದೇವಿ ಅವರ ಹೆಸರನ್ನು ಮರೆಯುವಂತಿಲ್ಲ. ಇವರ ಇತ್ತೀಚಿನ ನಾಟಕ 'ವೇಣುಮಾವ' ಅವರ ಕೀರ್ತಿಗೆ ಮೆರಗುಕೊಟ್ಟಿತು. ಇದು 'ಚೆಕಾವ್'ನ 'ಅಂತರ್ ವ್ಯಾನ್ಯಾ' ನಾಟಕದ ರೂಪಾಂತರ. ಶ್ರೀಮತಿಯವರ ವ್ಯಕ್ತಿತ್ವ, ಶಕ್ತಿ, ಕೈವಾಡ, ಜಾಣ್ಮೆ ಈ ರೂಪಾಂತರದಲ್ಲಿ ಚನ್ನಾಗಿ ಎದ್ದುಕಾಣುತ್ತದೆ. ಇವರ ಹಿಂದಿನ ಕತೆಗಳೂ ಚನ್ನಾಗಿದ್ದವು. ಇವರ ಕೃತಿಗಳು ಹೊರಗೆ ಬರುವುದೆಂದರೆ ಬಹಳ ನಿದಾನ.

ಶ್ರೀಮತಿ ಪದ್ಮಾವತಿ ರಸ್ತೋಗಿ ಅವರು ಒಳ್ಳೆಯ ಕತೆಗಾರ್ತಿಯರು. ಒಂದೇ ಸಮನಾಗಿ ಲೇಖನ ವ್ಯವಸಾಯವನ್ನು ಬೆಳಸಿಕೊಂಡು ಬಂದಿದ್ದಾರೆ. ಮಧ್ಯೆ ಕೊಂಚ ಕಾಲ ಇವರ ಹೆಸರನ್ನು ನಾವು ಕೇಳುತ್ತಿರಲಿಲ್ಲವಾದರೂ ಈಚೆಗೆ ವಿಪುಲವಾಗಿ ಬರೆಯತೊಡಗಿದ್ದಾರೆ.

ಶ್ರೀಮತಿ ಪಿ. ಮಂದಾಕಿನೀ ಬಾಯಿಯವರು ಒಳ್ಳೆಯ ಲೇಖಿಕೆಯರು. ಪ್ರಾರಂಭದಲ್ಲಿ ಕತೆಗಳನ್ನು ಬರೆದು 'ಕಥಾಂಜಲಿ' ಎಂಬ ಉತ್ಕೃಷ್ಟ ಮಾಸಪತ್ರಿಕೆಯ ಮೂಲಕ ನಾಡಿಗೆ ಪರಿಚಿತರಾದರು. ಹಿಂದಿ, ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಪಾಂಡಿತ್ಯ ಪಡೆದು ಕಾಲೇಜ್ ಅಧ್ಯಾಪಕಿಯರಾಗಿ ಭಾಷಾ ಸೇವೆ ಸಲ್ಲಿಸುತ್ತಿದ್ದಾರೆ. ಹಿಂದಿಯಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಕೆಲಸವನ್ನು ಈಕೆ ಈಚೆಗೆ ಮಾಡತೊಡಗಿದ್ದಾರೆ.

ಇತ್ತೀಚೆಗೆ ನಾವು ಹೊಸದಾಗಿ ಕೇಳುತ್ತಿರುವ ಹೆಸರು ಶ್ರೀಮತಿ ಇಂದಿರಾಬಾಯಿಯವರದು. ಇವರ 'ಪದ್ಮಾವತಿ' ಎಂಬ ಕಾದಂಬರಿ ಕನ್ನಡಿಗರ ಮನಸ್ಸನ್ನು ಒಮ್ಮೆಲೇ ಸೆಳೆದಿದೆ. ಈ ಕಾದಂಬರಿಯ ಪ್ರಕಟಣೆಗೆ ಮೊದಲು ಶ್ರೀಮತಿಯವರ ಹೆಸರು ಅಷ್ಟಾಗಿ ರೂಢಿಗೆ ಬಂದಿರಲಿಲ್ಲವೆಂದರೆ ತಪ್ಪಾಗಲಾರದು.

ಶ್ರೀಮತಿ ಸಿ. ವಿ. ರತ್ನಮ್ಮನವರು 'ಮೇಡಾಂ ಕ್ಯೂರಿ' ಎಂಬ ಉತ್ಕೃಷ್ಟವಾದ ಜೀವನಚರಿತ್ರೆಯನ್ನು ಕೊಟ್ಟಿದ್ದಾರೆ ಹಾಗೆಯೇ ಶ್ರೀಮತಿ ಕೌಸಲ್ಯಾದೇವಿ, ಶ್ರೀಮತಿ ಸರಸ್ವತಮ್ಮ, ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್ ಮೊದಲಾದ ಲೇಖಿಕೆಯರು ಕೆಲವು ಜೀವನಚರಿತ್ರೆಗಳನ್ನು ರಚಿಸಿದ್ದಾರೆ. ಶ್ರೀಮತಿ ಕಾಮಾಕ್ಷಮ್ಮಾ ರಾಮಯ್ಯ, ಶ್ರೀಮತಿ ರಾಜಮಣಿ ನಾಗರಾಜರಾವ್, ಶ್ರೀಮತಿ ಸುಂದರಮ್ಮ, ಶ್ರೀಮತಿ ಕುಪ್ಪಮ್ಮ, ಶ್ರೀಮತಿ ಸುಶೀಲಾ ಜೋಶಿ, ಶ್ರೀಮತಿ ಲೀಲ, ಶ್ರೀಮತಿ ವಿಜಯಾದೇವಿ ಹಿರೇಮಠ, ಶ್ರೀಮತಿ ಶಾಂತಕ್ಕ ಮಾಳನಾಡ ಮೊದಲಾದ ಲೇಖಿಕೆಯರು ತಮ್ಮ ಲೇಖನಗಳಿಂದ, ಕತೆಗಳಿಂದ, ಭಾಷಾಂತರಗಳಿಂದ ಸಾಹಿತ್ಯಸೇವೆ ಮಾಡಿದ್ದಾರೆ.

ಬರೀ ಕತೆ, ಕಾದಂಬರಿಗಳನ್ನು ಮಾತ್ರ ರಚಿಸುವುದರಲ್ಲಿಯೇ, ನಮ್ಮ ಲೇಖಿಕೆಯರು ಮುಕ್ತಹಸ್ತರಾಗಿದ್ದಾರೆಂದು ತಿಳಿಯಬೇಕಾಗಿಲ್ಲ. ಸಂಶೋಧನ, ಸಂಪಾದನ, ವಿಮರ್ಶೆ, ವಿಡಂಬನ ಮೊದಲಾದ ಕ್ಷೇತ್ರಗಳಲ್ಲಿ ಸಹ ಅವರು ಕೆಲಸ ಮಾಡಿದ್ದಾರೆ.

ಶ್ರೀಮತಿ ಡಿ. ಚಂಪಾಬಾಯಿಯವರು 'ಸಂಚಿಯ ಹೊನ್ನಮ್ಮ'ನ 'ಹದಿಬದೆಯ ಧರ್ಮ'ವನ್ನು ಸಂಪಾದಿಸಿಕೊಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದವರು ಈಕೆಯಿಂದ

ಸಂಪಾದಿತವಾದ ಈ ಗ್ರಂಥವನ್ನು ಪ್ರಕಟಿಸಿದ್ದಾರೆಂದ ಮೇಲೆ ಈಕೆಯ ಪಾಂಡಿತ್ಯದ ಬಗ್ಗೆ ಹೆಚ್ಚಿಗೆ ಬರೆಯಬೇಕಾಗಿಲ್ಲ. ಈ ಗ್ರಂಥಕ್ಕೆ ಬರೆದಿರುವ ಈಕೆಯ ಸವಿಸ್ತಾರವಾದ ಪೀಠಿಕೆಯನ್ನು ಓದಿದರೆ ಈಕೆಯ ವಿಮರ್ಶಾಶಕ್ತಿ ಸಂಶೋಧನ ಹಾಗು ಸಂಪಾದನ ಕಾರ್ಯದಲ್ಲಿ ಇರುವ ದಕ್ಷತೆ ವ್ಯಕ್ತವಾಗುತ್ತದೆ.

ಲಘು ಹಾಸ್ಯದಿಂದೊಡಗೂಡಿ, ರಂಜನೆಯಾಗುವಂತೆ, ಆಳವಾಗಿ ಯೋಚಿಸುವಂತೆ, ಪ್ರೇರೇಪಿಸುವ ವಿಡಂಬನಾತ್ಮಕ ಲೇಖನಗಳು ಒಟ್ಟಿನಲ್ಲಿ ಬಹಳ ಕಡಮೆ. ಅದರಲ್ಲೂ ಸ್ತ್ರೀ ಲೇಖಿಕೆಯರಲ್ಲಿ ಇಲ್ಲವೆಂದು ಹೇಳಿದರೂ ಒಪ್ಪಬೇಕಾದ ಮಾತೆನ್ನುವಷ್ಟರ ಮಟ್ಟಿಗೆ ಸ್ಥಿತಿ ಇದೆ. ಆದರೆ ಶ್ರೀಮತಿ ಟಿ. ಸುನಂದಮ್ಮನವರು ಈ ಅಭಿಪ್ರಾಯವನ್ನು ದೂರಮಾಡಿದ್ದಾರೆ. ಅವರ ಚಟುವಟಿಕೆಗಳನ್ನು, ವಿಡಂಬನ ಲೇಖನಗಳನ್ನು, ಹೃದಯಸ್ಪರ್ಶಿ ಚಿತ್ರಗಳನ್ನು, ಅವುಗಳನ್ನು ರೂಪಿಸುವ ಬಗೆಯನ್ನು ನಾವು ಮರೆಯುವ ಹಾಗಿಲ್ಲ.

ಶ್ರೀಮತಿ ಇಂದಿರಾ ಲ. ರಾವ್, ಶ್ರೀಮತಿ ಕಮಲಮ್ಮ, ಶ್ರೀಮತಿ ಪದ್ಮಾ, ಶ್ರೀಮತಿ ಎಸ್. ರತ್ನಮ್ಮ, ಶ್ರೀಮತಿ ಬಿ. ಎಲ್. ಸುಶೀಲಮ್ಮ ಮೊದಲಾದವರು ವಿಮರ್ಶಾತ್ಮಕ ಲೇಖನಗಳನ್ನು ಬರೆಯತೊಡಗಿದ್ದಾರೆ. ಹರಟೆ, ಪ್ರಬಂಧ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀ ಲೇಖಿಕೆಯರು ವ್ಯವಸಾಯಮಾಡ ತೊಡಗಿದ್ದಾರೆ. ಸಮಾನ ಹಕ್ಕಿನ ಈ ನವಯುಗದಲ್ಲಿ ಅವರು ಸಾಕಷ್ಟು ಸಂಖ್ಯೆಯಲ್ಲಿ ಸಾಹಿತ್ಯದ ಕೆಲಸದಲ್ಲಿ ತೊಡಗಿದ್ದಾರೆಂದು ಹೇಳಲು ಧೈರ್ಯ ಸಾಲದಿದ್ದರೂ, ಈಚಿನ ಪತ್ರಿಕೆಗಳಲ್ಲಿ ಕಾಣುವ ಹತ್ತಾರು ಹೊಸ ಹೆಸರುಗಳನ್ನು ನೋಡುತ್ತಿರುವಾಗ, ಇನ್ನು ಮುಂದೆ ನಾವು ಸ್ತ್ರೀ ಲೇಖಿಕೆಯರಿಂದ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಳನ್ನು ನಿರೀಕ್ಷಿಸಬಹುದಾಗಿದೆ. ಈ ಪುಟ್ಟ ಲೇಖನದಲ್ಲಿ ಸಮಗ್ರವಾಗಿ ಎಲ್ಲ ಲೇಖಿಕೆಯರ ಬಗ್ಗೆಯೂ ಬರೆಯಲಾಗಿದೆಯೆಂದು ನಾನು ತಿಳಿದುಕೊಂಡಿಲ್ಲ. ನನಗೆ ತಿಳಿದ ಮಟ್ಟಿಗೆ ಸಾಕಷ್ಟು ಲೇಖಿಕೆಯರನ್ನು ಸ್ಮರಿಸಲು ಪ್ರಯತ್ನಿಸಿದ್ದೇನೆ.

ಒಟ್ಟಿನಲ್ಲಿ ಅನೇಕ ಕಟ್ಟುಕಟ್ಟಳೆಗಳಲ್ಲಿ, ಬಂಧನಗಳಲ್ಲಿ ನಿತ್ಯ ನಮ್ಮ ಹೆಣ್ಣು ಮಕ್ಕಳಿಗೆ ಸಾಕಷ್ಟು ಅವಕಾಶಗಳು ದೊರೆಯದೆ, ಅವರ ಸಾಹಿತ್ಯರಚನಾಶಕ್ತಿಯನ್ನು ನಾವು ಸಂಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯವಾಗದೆ ಹೋಗಿದೆಯೆಂದು ಹೇಳಬಹುದು. ಅಷ್ಟಕ್ಕಷ್ಟೇ ನಷ್ಟಪಟ್ಟವರು ನಾವೇ ವಿನಾ ಅವರಲ್ಲ. ಈಗಲಾದರೂ ನಾವು ಸ್ತ್ರೀ ಲೇಖಿಕೆಯರಲ್ಲಿರುವ ಚೈತನ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು, ಹೆಣ್ಣನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಅವರ ಭಾವನೆಗಳಿಗೆ, ಆಸೆ-ಆಕಾಂಕ್ಷೆಗಳಿಗೆ ಬೆಲೆ ಕೊಡುವುದನ್ನು ತನ್ಮೂಲಕ ತಿಳಿದುಕೊಂಡರೆ ಭಾಷಾಸೇವೆಗಷ್ಟೇ ಅಲ್ಲ, ಜೀವನ ಹದಮಾಡಿಕೊಳ್ಳಲು ಸಹ ಸಾಧಕರಾಗುತ್ತೇವೆ.

ಕಾಳಿದಾಸನ ಶಕುಂತಲೆ

(ಲೇಖಕರು: ಶ್ರೀ। ಪ್ರಭುಶಂಕರ, ಎಂ. ಎ., ಬೆಂಗಳೂರು)

ಭೂಮಿಯ ಮಣ್ಣಿನಿಂದ ಮೂಡಿದ ಗಿಡದಲ್ಲಿಯೇ ಅರಳಿ ಭಗವಂತನ ಶ್ರೀ ಸನ್ನಿಧಿಯನ್ನು ಸೇರಿ ಅಮರ್ತ್ಯದಲ್ಲಿ ಐಕ್ಯವಾಗುವ ಸುಂದರ ಪುಷ್ಪದಂತೆ ಶಕುಂತಲೆ. ವೈಣಿಕನ ಕೈಯ ವೀಣೆಯಿಂದ ಹೊರಹೊಮ್ಮಿ ತನ್ನ ಅಪೂರ್ವವಾದ ಅಲೌಕಿಕತೆಯ ಮೂಲಕವಾಗಿ ಅತೀತವಾದ ನಾದ ಬ್ರಹ್ಮನಲ್ಲಿ ಲೀನವಾಗುವ ಮಧುರಗಾನದಂತೆ ಶಕುಂತಲೆ. ಸಾಮಾನ್ಯನ ಕಣ್ಣಿಗೆ ಈ ಸುಂದರ ಪುಷ್ಪ ಅಗೋಚರ; ಅದರ ಸುವಾಸನೆ ಅವೇದ್ಯ; ಈ ಸುಮಧುರ ಸಂಗೀತ ಅಶ್ರುತ. ಆದರೆ ಶ್ರದ್ಧೆಯಿಂದ ಅರಸಿ ನೋಡುವವನಿಗೆ ಈ ಪುಷ್ಪದಲ್ಲಿ ಸೌಂದರ್ಯ ಮಾತ್ರವಲ್ಲದೆ ಭಗವಂತನ ಚರಣವನ್ನು ಅಲಂಕರಿಸುವ ಅರ್ಹತೆಯೂ ಈ ಮಹಾಗಾನದಲ್ಲಿ ಸ್ವರ್ಗದ ಅಲೌಕಿಕತೆಯೂ ಹೃದಯಗೋಚರವಾಗುತ್ತವೆ.

ಕಾಳಿದಾಸ ಮಹಾಕವಿ ಚಿತ್ರಿಸಿರುವ ಶಕುಂತಲೆ ವಿಶ್ವಸಾಹಿತ್ಯದಲ್ಲಿ ಒಂದು ಅಪೂರ್ವವಾದ ಸೃಷ್ಟಿ. ಭಾರತೀಯ ಸಾಹಿತ್ಯದಲ್ಲಿಯೂ,–ಸೀತೆ,ಸಾವಿತ್ರಿ, ಕಾದಂಬರಿ, ಊರ್ಮಿಳಾ, ದಮಯಂತಿಯರಂತಹ ಮಹಿಳಾರತ್ನಗಳನ್ನು ಚಿತ್ರಿಸಿರುವ ಭಾರತೀಯ ಸಾಹಿತ್ಯದಲ್ಲಿಯೂ—ರಸಜ್ಞನ ಸೂಕ್ಷ್ಮಮತಿ ಇಂತಹ ಇನ್ನೊಂದು ಪಾತ್ರವನ್ನು ಕಾಣಲಾರದು ಎನಿಸುತ್ತದೆ. ಅದರಿಂದಲೇ ಆಕೆಯ ಸ್ಥಾನ ಅದ್ವಿತೀಯವಾದದ್ದು ಎಂದು ಪರಿಗಣಿಸಲ್ಪಟ್ಟಿದೆ.

ವಂಗಕವಿ ರವೀಂದ್ರನಾಥ ಠಾಕೂರರು ಶಾಕುಂತಲ ನಾಟಕದ ಮೇಲಣ ತಮ್ಮ ಪ್ರತಿಭಾಪೂರ್ಣ ಸಮೀಕ್ಷೆಯಲ್ಲಿ ಹೀಗೆಂದಿದ್ದಾರೆ: "ಕಾಳಿದಾಸನು ಅಪೂರ್ವ ಕೌಶಲದಿಂದ ತನ್ನ ಕಾವ್ಯದ ನಾಯಿಕೆಯನ್ನು ಲೀಲೆಯ ಮತ್ತು ಧೈರ್ಯದ, ಸ್ವಭಾವದ ಮತ್ತು ನಿಯಮದ, ನದಿಯ ಮತ್ತು ಸಮುದ್ರದ ಸುಂದರವಾದ ಸಂಗಮ ಸ್ಥಾನದ ಮೇಲೆ ಸ್ಥಾಪಿತ ಮಾಡಿ ತೋರಿಸಿರುತ್ತಾನೆ."[೧] ಶಕುಂತಲೆಯ ಬದುಕನ್ನು ಮೊದಲಿನಿಂದ ಕೊನೆಯವರೆಗೆ ಪೂರ್ಣ ದೃಷ್ಟಿಯಿಂದ ಅವಲೋಕಿಸಿದರೆ ಇದು ಎಂತಹ ರಸಪೂರ್ಣ ಸತ್ಯ ಎಂಬುದು ಗೋಚರವಾಗುತ್ತದೆ.

ಶಕುಂತಲೆಯ ತಂದೆ ಋಷಿ. ತಾಯಿ ಅಪ್ಸರ ಸ್ತ್ರೀ. ತಪಸ್ಸು ಮತ್ತು ಕಾಮಗಳಿಗೆ ಹೋರಾಟ ನಡೆದು ಕಾಮ ಜಯಿಸಿ ಶಕುಂತಲೆ ಜನಿಸಿದಳು. ಆದರೆ ಜನನದ ಉತ್ತರಕ್ಷಣದಲ್ಲಿಯೇ ಆಕೆ ತಾಯಿ ತೊರೆದು ಪ್ರಕೃತಿ ಪುತ್ರಿಯಾದಳು. ಮೊದಲು ಪಕ್ಷಿ ಸಮೂಹ, ಅನಂತರ ಮಹರ್ಷಿ ಕಣ್ವರು ಅವಳಿಗೆ ಸಾಕು ತಾಯಿಯಾದರು. ಹೀಗೆ ಆಕೆಯ ಜನ್ಮವು ವ್ರತಭಂಗದಲ್ಲಿಯಾದರೂ ಬಳವಣಿಗೆ ತಪೋವನದಲ್ಲಿಯಾಯಿತು. ಆ ತಪೋ ವನವೋ ಈ ರೀತಿಯಾದುದು: "ಅಲ್ಲಿ ಸ್ವಭಾವ ತಪಸ್ಯೆಗಳೂ ಸೌಂದರ್ಯ ಸಂಯಮಗಳೂ ಏಕತ್ರ ಮಿಳಿತವಾಗಿವೆ. ಆ ತಪೋವನದಲ್ಲಿ ಸಮಾಜದ ಕೃತ್ರಿಮ ವಿಧಾನಗಳಿಲ್ಲ. ಆದರೆ ಧರ್ಮದ ಕಠೋರ ನಿಯಮವಿದೆ."[೨] ಪ್ರಕೃತಿ ತನ್ನ ಸೌಂದರ್ಯವನ್ನು ಅಲ್ಲಿ ಧಾರಾಳವಾಗಿ ಹೊರಚೆಲ್ಲಿದೆ. ಅದರ ನಡುವೆ ಶಕುಂತಲೆ ಸಹಜವಾಗಿ ಬಳೆದಿದ್ದಾಳೆ.

ಪ್ರಕೃತಿ—ಶಕುಂತಲೆಯರ ನಡುವೆ ಅಂತರಂಗ ಸಂಬಂಧವಿದೆ—ಆತ್ಮ ಮೈತ್ರಿಯಿದೆ. ಲತೆಯ ತುದಿಯಲ್ಲಿ ಸಹಜವಾಗಿ ಅರಳುವ ಪುಷ್ಪದಂತೆ ಪ್ರಕೃತಿಯ ಮಧ್ಯದಿಂದ ಆಕೆ ಮೂಡಿದ್ದಾಳೆ. ಕೊಳದ ಮಧ್ಯದಲ್ಲಿ ಅರಳಿರುವ ತಾವರೆಯಂತೆ ಆಕೆ ಶೋಭಿಸುತ್ತಿದ್ದಾಳೆ. ಕಾರ್ಮೋಡದ ಹಿನ್ನೆಲೆಯಲ್ಲಿ ಸುಮನೋಹರವಾಗಿ ತೋರುವ ಕಾಮನಬಿಲ್ಲಿನಂತೆ ಪ್ರಕೃತಿಯ ಹಿನ್ನೆಲೆಯಲ್ಲಿ ಈ ಸಹಜ ಸುಂದರಿ ತೋರುತಿದ್ದಾಳೆ. ಅರಣ್ಯ ಮಧ್ಯದಲ್ಲಿಯೇ ಬೆಳೆದು ಓಡಾಡುತ್ತಿರುವ ಜಿಂಕೆಗೂ ಈಕೆಗೂ ಏನೇನೂ ವ್ಯತ್ಯಾಸವಿಲ್ಲ. ಈಕೆ ಓಡಾಡುವ ಲತೆ, ರಾಜ ಸಖಿಯರೊಡಗೂಡಿದ ಇವಳನ್ನು ನೋಡಿ 'ತಪೋವನ ವಧುಗಳ ಲಾವಣ್ಯ ರಾಣಿವಾಸದ ಸ್ತ್ರೀಯರಿಗೆಲ್ಲಿಯದು?' ಎಂದುಕೊಂಡವನು, 'ಉದ್ಯಾನ ಲತಾವಳಿ ವನ ಲತೆಗಳಿಂ ತಿರಸ್ಕೃತವಲ್ತೆ' ಎಂದು ಲತೆಯಂತೆ ಓಡಾಡುತ್ತಿದ್ದ ಇವರ ಹಾವಭಾವಗಳನ್ನು ಗಮನಿಸಿಯೇ ಹೇಳಿದ್ದಾನೆ. ಅಲ್ಲದೆ ಈಕೆಯನ್ನು ಕಂಡು "ಈಕೆಯ ತುಟಿ ಚಿಗುರಿಗೆ ಸಮಾನವಾಗಿದೆ. ಇವಳ ನಳಿದೋಳುಗಳು ರೆಂಬೆಗಳನ್ನು ಹೋಲುತ್ತಿವೆ, ಗುಂಗುರು ಮುಂಗುರುಳುಳ್ಳ ಈಕೆಯ ಶರೀರದಲ್ಲಿನ ಯೌವನ ಹೂವಿನಂತೆ ಶೋಭಿಸುತ್ತಿದೆ' ಎಂದು ಆಶ್ರಮ ತರುವಿಗೂ ಈಕೆಗೂ ಅಭೇದವನ್ನು ಕಲ್ಪಿಸುತ್ತಾನೆ.

ಶಕುಂತಲೆಯ ಒಡನಾಡಿಗಳೋ—ಆಕೆಯಂತೆಯೇ ಪ್ರಕೃತಿ ಪುತ್ರಿಯರಾದ ಅನಸೂಯೆ–ಪ್ರಿಯಂವದೆಯರು.

---

೧ ರವೀಂದ್ರನಾಥ ಠಾಕೂರರ "ಪ್ರಾಚೀನ ಸಾಹಿತ್ಯ." ಶ್ರೀ। ಮೊಕಣ್ಣಯ್ಯನವರ ಅನುವಾದ.–ಶಾಕುಂತಲ—ಪುಟ ೪೩.

೨ ಅದೇ,— ಪುಟ ೪೩

ಇವರೂ ಓಡಾಡುವ ಬಳ್ಳಿಗಳೇ. ಆಕೆಯ ಸೋದರಿ ಇವಳೇ ನೀರೆರೆದು ಬೆಳೆಸಿದ ವನಜ್ಯೋತ್ಸ್ನೆಯೆಂಬ ಬಳ್ಳಿ. ಇವಳಂತೆಯೇ ತಾಯಿಯ ಪೋಷಣೆಯಿಂದ ವಂಚಿತವಾಗಿ ಈಕೆಯ ತಾಯಿ ಮಡಿಲಿನ ಆರೈಕೆಯಲ್ಲಿ ಬೆಳೆದ ದೀರ್ಘಾಪಾಂಗವೆಂಬ ಜಿಂಕೆಯ ಮರಿ ಈಕೆಯ ಮುದ್ದು ಕಂದ. ಆಕೆ ಆಶ್ರಮವನ್ನು ಬಿಟ್ಟು ಹೊರಟರೆ ಇಡಿಯ ಪ್ರಕೃತಿಯೇ ಗೋಳಿಡುತ್ತದೆ. ತಮ್ಮ ಮುದ್ದು ಮಗಳಿಗೆ ಆಶ್ರಮದ ತರುಗಳು ವಸನವನ್ನೂ ಆಭರಣಗಳನ್ನೂ ನೀಡುತ್ತಿವೆ. ಉಳಿದ ಹಿರಿಯರಂತೆಯೇ ತಾವೂ ಆಶೀರ್ವಚನವನ್ನು ನೀಡುತ್ತವೆ. ನವಿಲುಗಳು ಕುಣಿಯುವುದನ್ನು ನಿಲ್ಲಿಸುತ್ತವೆ. ಬಾಯಿಂದ ಹುಲ್ಲಿನ ತುತ್ತು ಜಾರುತ್ತಿದ್ದರೂ ಅದನ್ನು ತಿಳಿಯದೆ ನಿಂತಿವೆ ಜಿಂಕೆಗಳು. ತಮ್ಮ ಎಲೆಗಳನ್ನು ಉದುರಿಸುತ್ತ ಲತೆಗಳು ಕಣ್ಣೀರಿಡುತ್ತಿವೆ. ಹಿಂದೆಂದೋ ಕುಶಸೂಚಿ ತಾಕಿ ಗಾಯಗೊಂಡಾಗ ಈಕೆ ವ್ರಣಹರ ತೈಲವನ್ನು ಎರೆದು ಪೋಷಿಸಿದ್ದ ಜಿಂಕೆಯ ಮರಿ—ತನ್ನನ್ನು ಅಗಲಿ ಹೋಗುತ್ತಿರುವ ತಾಯಿಯನ್ನು ಸೆರಗೆಳೆದು ಹಿಡಿದು ನಿಲ್ಲಿಸಿ ದೃಷ್ಟಿಯಲ್ಲಿ ದೈನ್ಯವನ್ನು ಸೂಸುತ್ತಿರುವ ಮಗುವಿನಂತೆ—ಈಕೆಯ ನಾರುಡೆಯನ್ನು ಹಿಡಿದು ಎಳೆದು ನಿಲ್ಲಿಸುತ್ತಿದೆ. ಜಿಂಕೆಯ ಮರಿ ಇಡಿಯ ತಪೋವನದ ಪ್ರಕೃತಿಯ ಜಂಗಮ ಪ್ರತಿನಿಧಿ. ಶಕುಂತಲೆಗೆ ತಪೋವನವನ್ನು ಬಿಟ್ಟು ಅಗಲುವುದಕ್ಕೆ ಎಷ್ಟು ಯಾತನೆಯಾಗುತ್ತದೆಯೋ ತಪೋವನಕ್ಕೆ ಶಕುಂತಲೆಯನ್ನು ಬೀಳ್ಕೊಡುವುದಕ್ಕೆ ಅದಕ್ಕಿಂತಲೂ ಹೆಚ್ಚು ಯಾತನೆಯಾಗುತ್ತದೆ. ಅದರ ಯಾತನೆ ಈ ಮರಿಜಿಂಕೆಯ ಕಣ್ಣುಗಳ ಮೂಲಕ ವ್ಯಕ್ತವಾಗಿದೆ.

ಶಕುಂತಲೆಗೂ ತಪೋವನಕ್ಕೂ ಆಧ್ಯಾತ್ಮಿಕ ಸಂಬಂಧವಿದೆಯೆಂದುದಾಯಿತು. ಶಕುಂತಲೆಯ ಜೀವನದಿಂದ ತಪೋವನವನ್ನು ದೂರಮಾಡಿದರೆ ಆಕೆಯು ಅಸಂಪೂರ್ಣಳಾಗುತ್ತಾಳೆ. "ಆಕೆಯು ಸುತ್ತುಮುತ್ತಿನ ಎಲ್ಲ ವಸ್ತುಗಳೊಡನೆಯೂ ಏಕಾತ್ಮಭಾವದಿಂದ ಸೇರಿದವಳಾಗಿರುತ್ತಾಳೆ. ಆಕೆಯ ಮಧುರ ಚಾರಿತ್ರ್ಯವು ಅರಣ್ಯದ ನೆರಳಿನಿಂದಲೂ ಮಾಧವೀ ಲತೆಯ ಹುವ್ವಿನ ಗೊಂಚಲಿನಿಂದಲೂ ವ್ಯಾಪ್ತವಾದುದು, ಮತ್ತು ವಿಕಸಿತವಾದುದು, ಪಶುಪಕ್ಷಿಗಳ ಅಕೃತ್ರಿಮವಾದ ಸ್ನೇಹದಿಂದ ಗಾಢವಾಗಿ ಆಕರ್ಷಿಸಲ್ಪಟ್ಟುದು." ಸಮಸ್ತ ಬಾಹ್ಯ ಪ್ರಕೃತಿಯೂ ಶಕುಂತಲೆಯ ಚಾರಿತ್ರದಲ್ಲಿ ಪ್ರಕಾಶಿತವಾಗಿದೆ. "ಶಕುಂತಲೆಯ ಹೃದಯಲತೆಯು ಚೇತನಾಚೇತನ ವಸ್ತುಗಳೆಲ್ಲವನ್ನು ಸ್ನೇಹದ ಲಲಿತವಾದ ಆಲಿಂಗನದಿಂದ ಸುಂದರವಾಗಿ ಬಂಧಿಸಿರುತ್ತದೆ. ಆಕೆಯು ತಪೋವನದ ಗಿಡಗಳಿಗೆ ನೀರೆರೆಯುವಾಗ ಅದರ ಜತೆಜತೆಗೆ ಸೋದರ ಸ್ನೇಹದಿಂದಲೂ ಅವುಗಳಿಗೆ ಅಭಿಷೇಕ ಮಾಡಿದಳು. ಆಕೆಯು ನವಕುಸುಮ ಯೌವನಶಾಲಿಯಾದ ವನಜ್ಯೋತ್ಸ್ನೆಯನ್ನು ಸ್ನೇಹ ದೃಷ್ಟಿಯ ಮೂಲಕ ತನ್ನ ಕೋಮಲವಾದ ಹೃದಯದಲ್ಲಿ ಗ್ರಹಣಮಾಡಿದಳು." ಅವಳಿಗೆ ಪ್ರಕೃತಿ ಸೇವೆಯೇ ಭಗವಂತನ ಪೂಜೆ. ಆಕೆ ಪತಿಗೃಹಕ್ಕೆ ತೆರಳುವಾಗ ಕಣ್ವರು ತಪೋವನ ತರುಗಳನ್ನು ಕುರಿತು ಹೇಳಿದುದೇನು? "ಎಲೈ ಸನ್ನಿಹಿತ ತಪೋವನ ತರುಗಳಿರಾ, ಯಾವಳು ನಿಮ್ಮಯ ಪಾತ್ರೆಗೆ ನೀರೆರೆಯದೆ ತಾನು ನೀರನ್ನು ಕುಡಿಯುವುದಿಲ್ಲವೋ, ತನಗೆ ಸಿಂಗರಿಸಿಕೊಳ್ಳುವ ಆಸೆಯಿದ್ದರೂ ನಿಮ್ಮ ಚಿಗುರನ್ನು ಕೊಯ್ಯಳೋ, ನೀವು ಪುಷ್ಪವನ್ನು ಧರಿಸಿದರೆ ಅದನ್ನು ನೋಡಿಯೇ ಸಂತೋಷಿಸುವಳೋ ಅಂತಹ ಶಕುಂತಲೆ ಪತಿಯ ಮನೆಗೆ ಹೊರಟಿದ್ದಾಳೆ. ನೀವೆಲ್ಲರೂ ಅವಳಿಗೆ ಅನುಜ್ಞೆಯನ್ನು ನೀಡಿ."

ಇನ್ನು ಯಾರಿಗೆ "ಸಮಸ್ತ ಪ್ರಕೃತಿಯೊಡನೆ ಇಂತಹ ಅಂತರಂಗದ ಆತ್ಮೀಯತೆ, ಇಂತಹ ಪ್ರೀತಿ ಮತ್ತು ಕಲ್ಯಾಣದ ಬಂಧನ!"

ನಾಟಕದ ಪೂರ್ವಾರ್ಧದಲ್ಲಿ ಈ ಕಾನನ ಕುಸುಮಕ್ಕೆ ಧೂಳು ಹತ್ತುವುದನ್ನು ಆಶ್ರಮವಾಸಿಯಾದ ಈ ಹೇಣಿಗೆ ರಾಜನ ಕಾಮಬಾಣದ ಪೆಟ್ಟು ತಾಕುವುದನ್ನು, ಆಶ್ರಮದ ಈ ಪುಷ್ಪರಾಶಿಗೆ ಹೊರಗಿನಿಂದ ಬೆಂಕಿ ಬಂದು ಬೀಳುವುದನ್ನು ನಾವು ಕಾಣುತ್ತೇವೆ.

ಶಕುಂತಲೆ ಮುಗ್ಧೆ. ಆದರೆ ಆಕೆ ಅಜ್ಞೆಯೆಂದಾಗಲೀ, ಅಲ್ಪಜ್ಞೆಯೆಂದಾಗಲೀ ಭಾವಿಸಲಾಗದು. ಆಕೆಯ ಸಂಪೂರ್ಣ ಸೌಂದರ್ಯ, ಸದ್ಯಃ ಪ್ರಫುಲ್ಲ ನವಯೌವನ ಆಕೆಯ ಅರಿವಿಗೆ ಅಗೋಚರವಾಗದಂತೆ ಅವಳ ಸಖಿಯರು ನೋಡಿಕೊಳ್ಳುತ್ತಿದ್ದಾರೆ. ಹೆಣ್ಣಿನ ಬದುಕಿಗೆ ವಿವಾಹ ಒಂದು ಅನಿವಾರ್ಯದ ಅಂಗ ಎಂಬುದನ್ನು ಆ ತಪೋವನ ವಧುಗಳು ಕೂಡ ಪ್ರಕಾರಾಂತರವಾಗಿ ಸೂಚಿಸುತಿದ್ದಾರೆ. "ನವಕುಸುಮವೆಂಬ ಯೌವನವನ್ನು ಹೊದ್ದಿದ ವನಜ್ಯೋತ್ಸ್ನೆಗೂ, ಪಲ್ಲವಿತವಾಗಿರುವುದರಿಂದ ಉಪಭೋಗಕ್ಕೆ ಯೋಗ್ಯವಾದ ಎಳಮಾವಿಗೂ ರಮಣೀಯವಾದ ಕಾಲದಲ್ಲಿ ಸಂಬಂಧವುಂಟಾಯಿತು" ಎಂದು ತೃಪ್ತಿಯಿಂದ ಹೇಳುತ್ತಿರುವ ಆಕೆಯನ್ನು ಕುರಿತು "ಈ ವನಜ್ಯೋತ್ಸ್ನೆಯು ಅನುರೂಪವಾದ ವೃಕ್ಷವನ್ನು ಹೇಗೆ ಸೇರಿರುವುದೋ ಹಾಗೆಯೇ ತಾನೂ ತನಗೆ ತಕ್ಕ ವರನನ್ನು ಸೇರಬೇಕೆಂದು ಅಭಿಲಾಷೆಯುಳ್ಳವಳು" ಎಂದು ಹಾಸ್ಯಮಾಡುತ್ತಿದ್ದಾರೆ. ಆಕೆ ದುಂಬಿಯಿಂದ ಬಾಧೆಪಡುತ್ತಿದ್ದರೆ "ದುಷ್ಯಂತನಿಗೆ ಮೊರೆಯಿಡು" ಎಂದೂ ಹೇಳುತ್ತಿದ್ದಾರೆ. ಇದೆಲ್ಲವನ್ನೂ ನೋಡಿ ನಮ್ಮ ಮನಸ್ಸು ಶಕುಂತಲೆ ಅಜ್ಞೆಯಲ್ಲ, ಆದರೆ ಮುಗ್ಧೆ ಎಂದು ನಿರ್ಧರಿಸುತ್ತದೆ.

ಈಕೆ ಅಷ್ಟು ಮುಗ್ಧಳಾಗಿದ್ದುದರಿಂದಲೇ, ಸರಳ ಹೃದಯದವಳಾಗಿದ್ದುದರಿಂದಲೇ ಹೊರಗಣಿಂದ ಬಂದ ರಾಜಭೃಂಗ ಈಕೆಯ ಹೃದಯಮಧುವನ್ನು ಹೀರಲು ಸಮರ್ಥವಾದುದು.

ಈಕೆಯೂ ಹೆಣ್ಣು. ಈಕೆಯ ಸ್ತ್ರೀತ್ವಕ್ಕಾಗಲೀ, ಈಕೆಯ ಹೃದಯದ ಸಹಜ ಅಭಿಲಾಷೆಗಾಗಲೀ ಕಾಳಿದಾಸನು ಯಾವ ವಿಧವಲ್ಲಿಯೂ ಅನ್ಯಾಯಮಾಡಿಲ್ಲ. "ಯೌವನ ಮಾತ್ರ ಹಾವಭಾವಗಳು, ಲೀಲಾ ಚಾಂಚಲ್ಯಗಳು, ಪರಮ ಲಜ್ಜೆಯೊಂದಿಗೆ ಪ್ರಬಲವಾದ ಆತ್ಮಪ್ರಕಾಶದ ಸಂಗ್ರಾಮ ಇವುಗಳೆಲ್ಲವನ್ನೂ ಕವಿಯು ವ್ಯಕ್ತಪಡಿಸಿದ್ದಾನೆ. ಇದು ಶಕುಂತಲೆಯ ಸರಳತೆಯನ್ನು ನಿದರ್ಶಿಸುತ್ತದೆ. ಅನುಕೂಲ ಸಮಯ ದೊರೆತಾಗ ಈ ಭಾವಾವೇಶವು ಅಕಸ್ಮಾತ್ತಾಗಿ ಆವಿರ್ಭಾವನಾಗುವುದೆಂದು ತಿಳಿದುಕೊಂಡು ಅದಕ್ಕಾಗಿ ಆಕೆಯು ಪೂರ್ವದಿಂದಲೂ ಸಿದ್ಧಳಾಗಿರಲಿಲ್ಲ. ಆಕೆಯು ತನ್ನನ್ನು ತಾನು ದಮನಮಾಡುವುದಕ್ಕೆ ಅಥವ ಗೋಪನಮಾಡುವುದಕ್ಕೆ ತಕ್ಕ ಉಪಾಯವನ್ನು ಸಿದ್ಧಮಾಡಿಟ್ಟುಕೊಂಡಿರಲಿಲ್ಲ. ಯಾವ ಹರಿಣಿಯು ವ್ಯಾಧನನ್ನು ಗುರುತಿಸಲಾರದೋ ಅದು ಆಹತವಾಗುವುದಕ್ಕೆ ಎಷ್ಟು ಹೊತ್ತು ಬೇಕು? ಶಕುಂತಲೆಯು ಪಂಚಶರನನ್ನು ಚೆನ್ನಾಗಿ ತಿಳಿದಿರಲಿಲ್ಲ. ಆದುದರಿಂದಲೇ ಆಕೆಯ ಸರಳ ಹೃದಯವು ಅರಕ್ಷಿತವಾಗಿತ್ತು. ಆಕೆಗೆ ಕಾಮನಲ್ಲಾಗಲೀ ದುಷ್ಯಂತನಲ್ಲಾಗಲೀ ಸ್ವಲ್ಪವೂ ಅಪನಂಬಿಕೆ ಇರಲಿಲ್ಲ. ತಪೋವನದ ಹರಿಣಿಯು ಹೇಗೆ ಶಂಕಾರಹಿತವಾದುದೋ ಬಾಲಿಕೆಯೂ ಹಾಗೆಯೇ ವಿಚಾರರಹಿತಳು."

ಶಕುಂತಲೆ ಪರಾಭವಹೊಂದಿದಳು. ಆಶ್ರಮ ಧರ್ಮಕೆ ವಿರೋಧವಾದ ಕಾಮವಿಕಾರಕ್ಕೆ ಒಳಗಾದಳು. ಪರಾಮರ್ಶೆಯ ಪ್ರಯತ್ನವನ್ನೂ ಮಾಡದೆ, ತನ್ನನ್ನು ಮುದ್ದಿನಿಂದ ಪೋಷಿಸಿದ ಕಣ್ವರ ಒಪ್ಪಿಗೆಗೂ ಕಾಯದೆ ದುಷ್ಯಂತನ ಪತ್ನಿಯಾದಳು. ಇದು ಕೂಡ ಆಕೆಯ ಸ್ವಭಾವ ಸರಳತೆಯಿಂದ ಮೂಡಿದುದೇ. ಆದರೆ ಅಪರಾಧ ಅರಿಯದೆ ನಡೆದುದಾದರೂ ಶಿಕ್ಷೆ ಅದನ್ನು ಹಿಂಬಾಲಿಸಿಯೇ ತೀರುತ್ತದೆ. ದುರ್ವಾಸ ಶಾಪ ಹೇಗೆ ಧರ್ಮ ವಿಧಿಸಿದ ಶಿಕ್ಷೆ. "ಕಾಮ ಗಜವನ್ನು ಕವಿ ದುರ್ವಾಸ ಶಾಪದ ಸರಪಣಿಯಿಂದ ಕಟ್ಟಿಹಾಕಿದ್ದಾನೆ."

ದುಷ್ಯಂತ ಸಭೆಯಲ್ಲಿ ನಾವು ಕಾಣುವ ಶಕುಂತಲೆ ಎಷ್ಟೊಂದು ಕನಿಕರ ಮೂಡುವಂತೆ ಮಾಡುತ್ತಾಳೆ. ತುಂಬಿದ ಗರ್ಭಿಣಿ ಸಭೆಯಲ್ಲಿ ನಿಂತು ತನ್ನ ಸತೀತ್ವದ ಪರೀಕ್ಷೆ ಕೊಡಬೇಕಾಗಿದೆ. ಅಭಿಜ್ಞಾನಾಭರಣ ಮಾಯವಾದಾಗ ತನ್ನ ಏಕಾಂತ ಪ್ರಣಯದ ನಿಧಿಗೆ ಕೈಹಾಕಿ ಮಧುರ ವೃತ್ತಾಂತವೊಂದನ್ನು ಹೃದಯದಿಂದ ಹೊರಗೆ ತೆಗೆದು ಎಲ್ಲರ ಮುಂದೆ ಇಡಬೇಕಾಗಿದೆ. ಇಷ್ಟಾದರೂ ಅಪಮಾನ, ತಿರಸ್ಕಾರ, ನಿಂದೆ. ಎಂತಹ ತಪ್ಪಿಗೆ ಎಂತಹ ಶಿಕ್ಷೆ!

ಈಗ ಆಕೆಯ ಸ್ಥಿತಿಯೇನು? ಆಕೆಗೆ ಸ್ಥಾನವೆಲ್ಲಿ? ತಾನು ಸರ್ವಸ್ವವೆಂದು ನಂಬಿ ಆಸೆಯ ಸೌಧವನ್ನು ರಚಿಸಿಕೊಂಡಿದ್ದ ಪತಿ ಆಕೆಯನ್ನು ತಿರಸ್ಕರಿಸಿದ್ದಾನೆ. ತವರು ಆಕೆಗೆ ಆಶ್ರಯ ನೀಡುವಂತಿಲ್ಲ. ನೀಡಿದರೂ ಆ ಪರಿಚಿತ ವಸ್ತುಗಳ ನಡುವೆ ಸುತ್ತುವುದಕ್ಕಿಂತ, ಅವುಗಳ ರೋದನದ ನಡುವೆ ತಾನೂ ರೋದಿಸುವುದಕ್ಕಿಂತ ಹಿರಿಯ ಶಿಕ್ಷೆ ಬೇಕೆ? ಅಲ್ಲದೆ ಮಹರ್ಷಿ ಕಣ್ವರು ಈಕೆಗೆ ಅನುಜ್ಞೆ ಕೊಟ್ಟದು ಚಕ್ರವರ್ತಿಯಾದ ಮಗನಿಗೆ ರಾಜ್ಯವನ್ನು ಸಮರ್ಪಿಸಿ ಪತಿಯೊಡನೆ ಇಲ್ಲಿಗೆ ಹಿಂತಿರುಗು ಎಂದು. ಆದುದರಿಂದ ಈಗಿನ ಸ್ಥಿತಿಯಲ್ಲಿ ಕಣ್ವಾಶ್ರಮಕ್ಕೆ ಈಕೆಗೆ ಪ್ರವೇಶವಿಲ್ಲ. ಮನ್ಮಥನು ಸಹಾಯ ಪಡೆದು ಉಮಾ ಶಿವನು ತಪಸ್ಸನ್ನು ಬಿಟ್ಟು ಕಣ್ಣು ತೆರೆಯುವಂತೆ ಮಾಡಿದಳು. ಶಿವನು ಕಣ್ಣನ್ನೇನೋ ತೆರೆದ. ಆದರೆ ಆತನು ತೆರೆದದ್ದು ಮೂರನೆಯ ಕಣ್ಣನ್ನು. ಆದರಿಂದಾದದ್ದು ಮನ್ಮಥದಹನವಷ್ಟೇ. ಆಗ ಪಾರ್ವತಿ ತನ್ನ ಬಹಿರಂಗದ ಸೌಂದರ್ಯವನ್ನು ಹಳಿದು ತಪಸ್ಸಿನಿಂದ ಶಿವನನ್ನು ಒಲಿಸಿಕೊಳ್ಳಬೇಕಾಯಿತು.

ಕಣ್ವಕುವರಿಗೂ ಹೀಗೆಯೇ ಆಯಿತು. ಆಕೆ ತನ್ನ ಸಕಲ ಸೌಂದರ್ಯದಿಂದಲೂ ಹೋಗಿ ಅಪಮಾನಿತಳಾದಳು. "ದುರ್ವಾಸರ ಶಾಪವು ಕವಿಯ ರೂಪಕಮಾತ್ರ: ದುಷ್ಯಂತ–ಶಕುಂತಲೆಯರ ಸ್ವಚ್ಛಂದವಾದ, ಗುಪ್ತ ಸಮಾಗಮವು ಚಿರಕಾಲದ ಅಭಿಶಾಪದಿಂದ ಶಪಿತವಾದದ್ದು. ಉನ್ಮತ್ತತೆಯ ಉಜ್ವಲವಾದ ಕಾಂತಿಯು ಇರತಕ್ಕದ್ದು ಕ್ಷಣಕಾಲ ಮಾತ್ರ; ಅದಾದ ಮೇಲೆ ನೈರಾಶ್ಯ, ಅಪಮಾನ, ವಿಸ್ಮೃತಿ ಇವುಗಳ ಅಂಧಕಾರವು ಬಂದು ಕವಿದುಕೊಳ್ಳುತ್ತದೆ. ಇದು ಚಿರಕಾಲದ ನಿಯಮ. ಕಾಲಕಾಲದಲ್ಲಿಯೂ ದೇಶದೇಶದಲ್ಲಿಯೂ ಅಪಮಾನಿತಳಾದ ಹೆಂಗಸು ತನ್ನ ಲಲಿತವಾದ ದೇಹಕಾಂತಿಯನ್ನು ವ್ಯರ್ಥವೆಂದು ಭಾವಿಸಿ, ಶೂನ್ಯ ಹೃದಯಳಾಗಿ ಬಹು ಕಷ್ಟದಿಂದ ಗೃಹಾಭಿಮುಖವಾಗಿ ಹಿಂತಿರುಗುತ್ತಾಳೆ." ಕಣ್ವ ಪುತ್ರಿ ಈ ನಿರಂತರ ನಿಯಮಕ್ಕೆ ಹೊರಗಾದವಳಾಗಲಿಲ್ಲ.

ನಾಟಕದ ಉತ್ತರಾರ್ಧದಲ್ಲಿ ನಾವು ಕಾಣುವ ಶಕುಂತಲೆಯು ತಪಸ್ವಿನಿ. ಆಕೆ ಇಲ್ಲಿ ದುಷ್ಯಂತಭಾರ್ಯೆಯಲ್ಲ, ಭರತಜನನಿ. ತಾರುಣ್ಯದ ಚಂಚಲತೆ ಮಾಯವಾಗಿ ಹೋಗಿ ತಾಯ್ತನದ ಗಾಂಭೀರ್ಯ ಆಕೆಯಲ್ಲಿ ಸ್ಥಾಪಿತವಾಗಿದೆ. ಕಣ್ವಾಶ್ರಮದ ಶಕುಂತಲೆಯು ಬಹಿರಂಗದ ಸೌಂದರ್ಯಕ್ಕಿಂತ ಕೋಟಿಪಾಲು ಹೆಚ್ಚಿದ ಅಂತರಂಗದ ತಪಸ್ಸು ಮಾರೀಚಾಶ್ರಮದ ಶಕುಂತಲೆಯಲ್ಲಿ ಗೋಚರವಾಗುತ್ತದೆ.

ಕಣ್ವಾಶ್ರಮಕ್ಕೂ ಮಾರೀಚಾಶ್ರಮಕ್ಕೂ ಲೋಕಗಳಷ್ಟು ಅಂತರ. ಇಲ್ಲಿ ವಸಂತನ ಆಧಿಪತ್ಯವಿಲ್ಲ. ಮನ್ಮಥನಿಗೆ ಪ್ರವೇಶವಿಲ್ಲ. ಕಠೋರವಾದ ತಪಸ್ಸೊಂದೇ ಇಲ್ಲಿ ಸರ್ವಸ್ವಾಮ್ಯವನ್ನೂ ವಹಿಸಿದೆ. ಮೈಯ ಅರ್ಧಭಾಗದ ವರೆಗೂ ಹುತ್ತ ಬೆಳೆದಿರುವ ತಪಸ್ವಿಗಳು. ಹಾವಿನ ಪೊರೆ ಇವರಿಗೆ ಉತ್ತರೀಯ. ಇವರ ಕೂದಲಿನಲ್ಲಿ ಹಕ್ಕಿಗಳು ಗೂಡುಕಟ್ಟಿವೆ. ಇಷ್ಟು ತನ್ಮಯರಾಗಿ ತಪಸ್ಸುಮಾಡುತ್ತಿರುವವರ ನಡುವೆ ಶಕುಂತಲೆ. ಆಕೆಯೂ ಕಠೋರ ತಪಸ್ವಿನಿ. ಕಣ್ವಾಶ್ರಮದಲ್ಲಿ

ಕಂಡ ಶಕುಂತಲೆಗೂ ಮಾರೀಚಾಶ್ರಮದಲ್ಲಿ ಕಾಣುತ್ತಿರುವ ಶಕುಂತಲೆಗೂ ಜನ್ಮ ಜನ್ಮಗಳಷ್ಟು ಅಂತರ. ಇಲ್ಲಿ ಆಕೆಯಲ್ಲಿ ಯೌವನ ಲಾವಣ್ಯದ ಬದಲು ತಪೋಲಾವಣ್ಯ ಹೊರಸೂಸುತ್ತಿದೆ. ಇಲ್ಲಿ ಆಕೆಯ ನಾರುಡೆ ಮೈಯನ್ನು ಬಿಗಿಯುತ್ತಿಲ್ಲ, ಅದರ ಬದಲು ಅದು ಮಾಸಿ ಅದರ ವಿಷಯದಲ್ಲಿ ಅವಳು ಸಂಪೂರ್ಣ ಉದಾಸೀನಳು ಎಂಬುದನ್ನು ಸೂಚಿಸುತ್ತಿದೆ. ಮುಖದಲ್ಲಿ ಗಂಭೀರತೆ ನೆಲಸಿದೆ. ತಲೆಗೂದಲು ಒಂದೇ ಜಡೆಯಾಗಿ ಇಳಿಬಿದ್ದಿದೆ.

ಶಕುಂತಲೆಯ ಸ್ನೇಹ ಚೇತನಾಚೇತನ ವಸ್ತುಗಳನ್ನೆಲ್ಲ ಒಳಗೊಂಡದ್ದು. ಎಲೆ, ಗಿಡ, ಮರ, ಬಳ್ಳಿ, ಜಿಂಕೆ ಎಲ್ಲವನ್ನೂ ತನ್ನಂತೆಯೇ ಪ್ರೀತಿಸಲು ಅರಿತದ್ದು. ಅಂತಹುದು ರಾಜನನ್ನು ಅವನು ಒಮ್ಮೆ ಮಾಡಿದ ಅಪರಾಧಕ್ಕಾಗಿ ಚಿರವಾಗಿ ತಿರಸ್ಕರಿಸುತ್ತಿದೆಯೇ? ಆಕೆಯ ಹೃದಯ ಪೀಠ ಎಂದೋ ಅವನಿಗಾಗಿ ಮೀಸಲಾಗಿತ್ತು. ಶಕುಂತಲೆಯಂತಹ ಮಹಾಸ್ತ್ರೀಯ ಹೃದಯಪೂಜೆಗೆ ಅರ್ಹನಾಗಬೇಕಾಗಿತ್ತು ದುಷ್ಯಂತ. ಆದಾದ ಮೇಲೆ ಮತ್ತೆ ಪ್ರೇಮಪೂಜೆ ಆರಂಭವಾಯಿತು.

ಅವನ ವಿಷಯದಲ್ಲಿ ಆಕೆಯ ಪ್ರೇಮ ಎಂತಹುದು ಎಂಬುದನ್ನು ಮೊದಲೇ ಕಂಡಿದ್ದೇವೆ. ಆತನ ಚಿಂತನೆಯಲ್ಲಿಯೇ ಆಕೆ ತನ್ನನ್ನು ತಾನು ಮರೆತಿದ್ದಾಳೆ, ಆಶ್ರಮವನ್ನು ಮರೆತಿದ್ದಾಳೆ. ತನ್ನತನವನ್ನು ಸಂಪೂರ್ಣವಾಗಿ ಇಲ್ಲಗೈದು ಅವನಿಗೆ ಸಮರ್ಪಿಸಿಕೊಂಡಿದ್ದಾಳೆ. ದುರ್ವಾಸ ಶಾಪದ ದುರಂತವನ್ನು ಸಂಯಮದಿಂದ ಸಹಿಸಿದ್ದಾಳೆ. ಅಂತಹ ಪ್ರೇಮ ಈಗ ತಪಸ್ಸಿನಿಂದ ಪರಿತಪ್ತವಾಗಿ ಪರಿಶುದ್ಧವಾದ ಮೇಲೆ ಎಷ್ಟು ಕೋಟಿ ಪಾಲು ಹಿರಿದಾಗಿರಬೇಕು!

‘ಆರ್ಯ ಪುತ್ರನೆ’ ಎನ್ನಲು ಹೊರಟು ಅರ್ಧೋಕ್ತಿಯಲ್ಲಿಯೇ ನುಡಿ ತಡೆದು ಕಣ್ಣು ಕಂಬನಿಗೂಡುತ್ತದೆ. ಸ್ವಭಾವವೇ ಹಾಗೆ. ಮಾತು ಮಿತ. ಸಖಿಯರು ಹಾಸ್ಯ ಮಾಡಿದರೆ ಆಕೆಯ ಕೆನ್ನೆ ಕೆಂಪಾಗಬಲ್ಲುದು ಅಷ್ಟೆ. ಮಾತು ಹೊರಡದು. ಪ್ರಣಯ ಪ್ರಸಂಗದಲ್ಲಿಯೂ ಅಷ್ಟೆ— ಆಕೆಯಷ್ಟು ಮಿತಭಾಷಿಣಿ ಮತ್ತೆಲ್ಲಿಯೂ ದೊರೆಯಲಾರಳು. ಆಕೆ ಮೌನದ ಬೆಲೆಯನ್ನು ಬಲ್ಲವಳು. ಆಕೆಯ ನೀರವತೆಯ ಸೌರಭ ನಾಟಕವನ್ನೆಲ್ಲ ತುಂಬಿದೆ. ದುಷ್ಯಂತ ಸಭೆಯಲ್ಲಿ, ತಿರಸ್ಕಾರದ ಪ್ರಸಂಗದಲ್ಲಿ ದ್ರೌಪದಿಯೋ ಸುಭದ್ರೆಯೋ ಮಾಡಬಹುದಾಗಿದ್ದಷ್ಟು ರಂಪ ಈಕೆಯ ಕ್ರೋಧದ ತುತ್ತತುದಿಯಲ್ಲಿಯೂ ಹೊರಬರುವುದು ಅಸಾಧ್ಯ. ತಡೆಯಲಾರದಾದಾಗ ನಾಲ್ಕು ಮಾತನ್ನಾಡಿಯಾಳು. ಮತ್ತೆ ಮೌನ.

ಈಕೆಯ ಹೃದಯ ವಿಶಾಲವಾದದ್ದು. ದುಷ್ಯಂತ ತನ್ನ ವಿಷಯದಲ್ಲಿ ಅಪರಾಧಮಾಡಿದುದು ದುರ್ವಾಸ ಶಾಪ ಕಾರಣದಿಂದ ಎಂಬುದು ತಿಳಿದ ಮೇಲಂತೂ ಆತನ ವಿಷಯದಲ್ಲಿ ಈಕೆ ತೋರಿಸಿದ ಕರುಣೆಯೆಷ್ಟು—ಕ್ಷಮೆಯೆಷ್ಟು!

ವಂಗಕವಿ ಠಾಕೂರರ ಪ್ರತಿಭಾಪೂರ್ಣ ವಿಮರ್ಶೆಯ ಪೂರ್ಣ ಉಪಯೋಗವನ್ನು ಪಡೆದುಕೊಂಡಿದ್ದೇವೆ ಶಕುಂತಲಾ ದರ್ಶನದ ಈ ಪ್ರಯತ್ನದಲ್ಲಿ. ಅಂತೆಯೇ ವಂಗ ಕಲೆಗಾರರೊಬ್ಬರ ಅಪೂರ್ವವಾದ ಕಲಾಕೃತಿಯೊಂದರ ನೆರವನ್ನು ಪಡೆದುಕೊಂಡರೆ ಶಕುಂತಲೆಯ ಚಿತ್ರ ಪೂರ್ಣವಾಗಿ ನಮ್ಮ ಹೃದಯದಲ್ಲಿ ಮೂಡುತ್ತದೆ.

ಉಮಾ ತಪಸ್ಸಿಗೆ ಕುಳಿತಿದ್ದಾಳೆ. ತನ್ನ ತಪೋಗಮ್ಯವಾದ, ಪೂಜಾಮೂರ್ತಿಯಾದ ಶಿವನಲ್ಲಿಯೇ ನಟ್ಟ ಮನಸ್ಸುಳ್ಳವಳಾಗಿ ಧ್ಯಾನಮಗ್ನಳಾಗಿದ್ದಾಳೆ. ಕ್ರಮ ಕ್ರಮವಾಗಿ ಆಕೆಯ ತಲೆಗೂದಲಿನ ಅರ್ಧ ಜಟೆಯಾಗಿ ಪರಿವರ್ತಿತವಾಗುತ್ತಿದೆ. ಚಂದ್ರಕಳೆ ಮೂಡುತ್ತಿದೆ. ಮುತ್ತಿನ ಹಾರ ರುದ್ರಾಕ್ಷಿ ಮಾಲೆಯಾಗುತ್ತಿದೆ. ತಿಲಕ ಹಣೆಗಣ್ಣಾಗುತ್ತಿದೆ. ಮೈಯಲ್ಲಿ ಅಲ್ಲಲ್ಲಿ ಸರ್ಪ ಹೆಡೆಯಾಡುತ್ತಿವೆ. ಹೀಗೆ ತಪಸ್ಸಿಗೆ ಕುಳಿತ ಶಿವಾಣಿ ಶಿವನೇ ಆಗುತ್ತಿದ್ದಾಳೆ ಆಕೆಯಲ್ಲಿ ಚಿರ ಸೌಂದರ್ಯ ಮತ್ತು ಚಿರ ತಪಸ್ಸೇ ಏಕತ್ರ ಮಿಳಿತವಾಗಿರುವುದನ್ನು ಕಾಣುತ್ತೇವೆ. ಕಾಳಿದಾಸ ಸೃಷ್ಟಿಸಿರುವ ಶಕುಂತಲೆಯ ಪಾತ್ರ ಈ ಚಿತ್ರಕ್ಕೆ ಹತ್ತಿರ ಹತ್ತಿರ ಬಂದು ನಿಲ್ಲುತ್ತದೆ.

ವಿದ್ಯಾಭ್ಯಾಸದ ಭಾಷೆ

(ಲೇಖಕ: ಶ್ರೀ| ಆರ್. ಎಸ್. ರಾಮರಾವ್, ಎಂ. ಎ., ಬೆಂಗಳೂರು)

ಭಾರತ ಅನೇಕ ಪ್ರಬುದ್ಧ ಸುಸಂಸ್ಕೃತ ಭಾಷೆಗಳ ತವರು. ಈ ಎಲ್ಲ ಭಾಷೆಗಳಿಂದ ಭಿನ್ನಭಿನ್ನವಾಗಿ ಬೆಳೆದ ಸಂಸ್ಕೃತಿ ಒಂದಾದ ಹಿರಿಯ ಭಾರತೀಯ ಸಂಸ್ಕೃತಿಯಾಗಿದೆ. ಸಂಸ್ಕೃತಿಯ ಈ ಮಹಾಪೂರಕ್ಕೆ ಪ್ರಾಂತಭಾಷೆಯ ಉಪನದಿಗಳ ನೆರವು ಆವಶ್ಯಕ, ಅನಿವಾರ್ಯ. ಯಾವ ಉಪನದಿ ಇಂಗಿದರೂ ಮಹಾಪ್ರವಾಹಕ್ಕೆ ಕಳಪೆಯೇ. ಆದ್ದರಿಂದ ಭಾರತೀಯರಾದ ನಾವು ಎಂದರೆ ಪ್ರತಿ ಪ್ರಾಂತದವರು ನಮ್ಮ ನಮ್ಮ ಭಾಷೆಗಳ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಹಿರಿಯ ಸಂಸ್ಕೃತಿಗೆ ಕಾಣಿಕೆಯನ್ನು ಒಪ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲಂತೂ ಈ ಹೊಣೆ ಭಾರವಾಗಿದೆ.

ಇದುವರೆಗೆ ಭಾರತವನ್ನು ಆಳಿದ ಆಂಗ್ಲರು ತಮ್ಮ ಆಡಳಿತ ಸೌಕರ್ಯಕ್ಕೆ ಅನುಕೂಲವಾಗುವಂತೆ ಒಂದು ಹೊಸ ಭಾಷೆಯನ್ನು—ಇಂಗ್ಲಿಷನ್ನು ಇಲ್ಲಿ ಪ್ರಸಾರಕ್ಕೆ ತಂದರು. ಅವ್ಯಾಹತವಾದ ಅವರ ಇನ್ನೂರು ವರ್ಷಗಳ ಆಡಳಿತ, ಆಂಗ್ಲರ ಮಾದರಿಯ ವಿದ್ಯಾಭ್ಯಾಸ ಪ್ರಚಾರ, ಮತೀಯ ಪ್ರಸಾರ ಅವರ ಭಾಷೆಯನ್ನು ಭಾರತೀಯ ಭಾಷೆಯಲ್ಲಿ ಒಂದೆಂಬಂತೆ, ಇದರ ಅಭ್ಯಾಸವಿಲ್ಲದೆ ಜನರ ಏಳ್ಗೆಯಿಲ್ಲೆಂಬಂತೆ ಮಾಡಿತು. ಇಂಗ್ಲಿಷ್ ಭಾಷೆಯ ಸಾಹಿತ್ಯ ಭಂಡಾರ ಪ್ರಪಂಚದ ಎಲ್ಲ ಸಾಹಿತ್ಯಕೋಶಕ್ಕಿಂತಲೂ ಉತ್ತಮವಾದದ್ದು ಉನ್ನತವಾದದ್ದು ಬಹುರತ್ನನಿಬಿಡವಾದದ್ದು ಎಂಬ ಭ್ರಮೆಯನ್ನು ಹುಟ್ಟಿಸಿದರು. ಇತರ ದೇಶಗಳ ಸಾಹಿತ್ಯ ಬೆಳಕಿಗೆ ಬರಬೇಕಾದರೆ ಇಂಗ್ಲಿಷಿನ ಇಂಗ್ಲಿಷಿನವರ ಸಹಾಯವಿಲ್ಲದೆ ಸಾಧ್ಯವಿಲ್ಲ ಎಂಬ ಮನೋಭಾವ ಭಾರತೀಯರಲ್ಲಿ ಹುಟ್ಟಿ ಬೆಳೆಯುವಂತೆ ಮಾಡಿದರು. ನಮ್ಮ ಕವಿಗಳನ್ನು, ನಮ್ಮ ಕಾವ್ಯಗಳನ್ನು ಅವರ ಕವಿಗಳಿಗೆ ಕಾವ್ಯಗಳಿಗೆ ಸರಿಗಟ್ಟಬಲ್ಲುದು ಎಂಬ ಉಪಮಾನ ಉಪಮೇಯವೇ ನಮ್ಮ ಹೆಮ್ಮೆಯ ಮಾತಾಯಿತು. ಅವರ ಕೃತಿಗಳಿಗಿಂತ ನಮ್ಮ ಕೃತಿಗಳು ಹೆಚ್ಚೆಂಬ ಸೊಲ್ಲು ಕೇಳಿಬರುವುದೇ ದುರ್ಲಭವಾಯಿತು. ಹಾಗೆ ಹೇಳಿಕೊಳ್ಳುವುದು ಸಾಮಂತರ, ಕಡೆಗೆ ಗುಲಾಮರ ಸಂಸ್ಕೃತಿಗೆ ತಕ್ಕುದಲ್ಲವೆಂಬಂತೆ ಜನ ನಡೆದುಕೊಂಡರು. ಆದರೆ ಸಾಹಿತ್ಯಾಭ್ಯಾಸ, ಕಾವ್ಯರಸ ಕಾಲತೂಲದಲ್ಲಿ ಹಿರಿದಾವುದು ಕಿರಿದಾವುದು ಎಂಬುದನ್ನು ತೂಗಿ ನೋಡಿಬಿಡುತ್ತದೆ. ಇದು ಏನೇ ಇರಲಿ, ಇಂಗ್ಲಿಷು ಭಾರತದಲ್ಲಿ ನಿಂತು ಭಾರತೀಯರಿಗೆ, ಅವರ ಉದ್ಧಾರಕ್ಕೆ ಅನಿವಾರ್ಯವಾದ ಭಾಷೆಯಾಗಿದೆ. ಬಹುಭಾಷಾಮಾತೆಯಾದ ಭಾರತೆ ಇನ್ನೊಂದು ಭಾಷೆಯನ್ನು ದತ್ತು ತೆಗೆದುಕೊಂಡು ತನ್ನ ಮಕ್ಕಳ ಕಲಹಕ್ಕೆ ಹೆಚ್ಚು ಅವಕಾಶಮಾಡಿಕೊಟ್ಟಂತಾಗಿದೆ. ಇದು ತಾಯಿಯ ಅಪರಾಧವೋ ಹೊಸದಾಗಿ ಮನೆಹೊಕ್ಕ ದತ್ತುಪುತ್ರನ ಕುಚೇಷ್ಟೆಯೋ?

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ಮತ್ತೊಂದು ಸಿಕ್ಕು ಗಂಟಾಯಿತು. ಒಟ್ಟು ಭಾರತಕ್ಕೆ ಒಂದು ದೇಶಭಾಷೆಯ ಅಗತ್ಯ ಕಂಡುಬಂದಿತು. ಒಂದು ಪ್ರಾಂತದ ಭಾಷೆಯಾಗಿದ್ದ ಹಿಂದಿ ದೇಶಭಾಷೆಯ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಭಾರತೀಯ ರಾಜ್ಯಾಡಳಿತದಲ್ಲಿ ಇನ್ನು ೧೩–೧೫ ವರ್ಷಗಳಲ್ಲಿ ಮೂಲೆ ಮೂಲೆಗಳಲ್ಲಿ ಮನೆಮಾಡಿಕೊಳ್ಳುತ್ತಿದೆ. ಇದರಿಂದ ವಿದ್ಯಾರ್ಥಿಯ, ಭಾಷಾಭ್ಯಾಸಿಯ ದೃಷ್ಟಿಯಿಂದ ಸಮಸ್ಯೆ ಗಭೀರವಾಗಿದೆ. ವ್ಯವಹಾರಿಯ, ಸಾಮಾಜಿಕನ ದೃಷ್ಟಿಯಿಂದ ಭಾಷೆಗಳ ಅಗತ್ಯ ಎಷ್ಟು ಎಂಬ ಸಮಸ್ಯೆ ಅಪರಿಹಾರ್ಯವಾಗಿದೆ. ಈ ಸಮಸ್ಯೆಯ ವಿವರಣೆ ಅದರ ಪರಿಹಾರಕ್ಕೆ ಸೂಚನೆ ಇಲ್ಲಿನ ಪ್ರಯತ್ನ.

ಕನ್ನಡ ನಮ್ಮ ಪ್ರಾಂತೀಯ ಭಾಷೆ. ಈ ಭಾಷೆಯ ಪ್ರದೇಶ ನಾಲ್ಕು ಬೇರೆ ಬೇರೆ ಭಾಷೆಯ ಆಡಳಿತ ಸರ್ಕಾರಕ್ಕೆ ಹಂಚಿಹೋಗಿದೆ. ಆಯಾ ಸರ್ಕಾರದ ಆಡಳಿತಕ್ಕೆ ಒಳಪಟ್ಟ ಜನ ವ್ಯವಹಾರಕ್ಕೊಂದು ಭಾಷೆ, ಜೀವನೋಪಾಯಕ್ಕೊಂದು ಭಾಷೆ, ಗೃಹಕೃತ್ಯದ, ಸರಸಸಲ್ಲಾಪದ ನೆರವಿಗೊಂದು ಭಾಷೆ,—ಹೀಗೆ ಕೊನೆಯ ಪಕ್ಷ ಮೂರು ಭಾಷೆಯನ್ನಾದರೂ ಕಲಿಯಬೇಕಾಗುತ್ತದೆ. ಆಗ ಅಲ್ಲಿ ಅವರ ಮಾತೃಭಾಷೆಯ ಕ್ಷೇತ್ರವಿಸ್ತಾರ ಅವರ ಮನೆಗೆ ಮಾತ್ರ ಅನ್ವಯಿಸುತ್ತದೆ. ಅಲ್ಲು ಪರಭಾಷೆಯ ಹಣಕು ಕಂಡು ಬರದೆ ಇರುವುದಿಲ್ಲ. ಗುಡಾರದಲ್ಲಿ ತಲೆಯಿಟ್ಟ ಒಂಟೆಯಂತೆ ಮಾತೃಭಾಷೆ ಮಾಯೆಯಾಗಿ ಆಗಂತುಕ ಭಾಷೆ,—ದೇಶಭಾಷೆ—ಮನೆಮಾಡಿಕೊಳ್ಳುವ ಸಂಭವವೇ ಹೆಚ್ಚು. ಅಂಥ ಕಡೆ ಮಾತೃಭಾಷೆಯ ಸಾಹಿತ್ಯ ಅಭಿವೃದ್ಧಿಯಾಗುವುದಾದರೂ ಹೇಗೆ? ಅಕಸ್ಮಾತ್ ಆ ಮರುಭೂಮಿಯಲ್ಲಿ ಒಂದು ಕಾವ್ಯ ಹುಟ್ಟಿದರೆ ಅದು ಪ್ರಭಾವಶಾಲಿಯಾದ ಅಚ್ಚ ಕನ್ನಡ ಪ್ರೇಮಿಯಾದ ತಾಯಿಯನ್ನು ಮರೆಯದ ಕನ್ನಡಿಗನಿಂದ. ಅಂದ ಮೇಲೆ ಕನ್ನಡ ನುಡಿ ಬೆಳೆಯಬೇಕಾದರೆ ಅದು ಎಲ್ಲಿ ವ್ಯವಹಾರ ಭಾಷೆಯೂ ತಾಯಿನುಡಿಯೂ ಆಗಿರುತ್ತದೋ ಅಲ್ಲಿ. ಅಲ್ಲಿಯೂ ಕೂಡ ಅನೇಕ ತೊಂದರೆಗಳು ಅದರ ಅಭಿವೃದ್ಧಿಗೆ ಅಡಚಣೆ ತರುತ್ತವೆ.

ಕನ್ನಡ ವ್ಯವಹಾರವೂ ಮಾತೃಭಾಷೆಯೂ ಆಗಿರುವ ಕಡೆ ಆಡಳಿತ ಭಾಷೆ ಇಂಗ್ಲಿಷ್, ವಿದ್ಯಾಭ್ಯಾಸಕ್ರಮ ಇಂಗ್ಲಿಷಿನಲ್ಲಿ. ವಿದ್ಯಾಸಂಸ್ಥೆಯ ಅಧ್ಯಾಪಕರು, ಪ್ರಾಧ್ಯಾಪಕರು ಇಂಗ್ಲಿಷ್ ಅಭ್ಯಾಸವನ್ನು ಕೂಲಂಕಷವಾಗಿ ಅಭ್ಯಸಿಸಿ ಪ್ರವೀಣರಾಗಿ ಇಂಗ್ಲಿಷ್ ಮರಿಗಳಾಗಿದ್ದಾರೆ. ಅವರಿಗೆ ಮಾತೃಭಾಷೆಯ ಯೋಗ್ಯತೆ, ಅದರ ಮೇಲಿನ ಅಭಿಮಾನ, ಅದರ ಪ್ರಚಾರಕ್ಕಾಗಿ, ಅದರ ಬೆಳವಣಿಗೆಗಾಗಿ ತೋರಬೇಕಾದ ಉತ್ಸಾಹ ಕಡಮೆ. ಅಧಿಕಾರ ಸ್ಥಾನಗಳ ಬೆಂಬಲವಿಲ್ಲದೆ, ಸರ್ಕಾರದ ಬೆಂಬಲವಿಲ್ಲದೆ ಭಾಷೆ ಬೆಳೆಯುವುದು ಕಷ್ಟ ಸಾಧ್ಯ. ನಮ್ಮಲ್ಲಿ ಕನ್ನಡಕ್ಕೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ಸ್ಥಾನ ಸಿಕ್ಕಬೇಕಾದರೆ ಎಷ್ಟು ಕಾಲ, ಎಷ್ಟು ಹೋರಾಟ ನಡೆಯಬೇಕಾಯಿತೆಂಬುದು ಕನ್ನಡ ಹೋರಾಟದ ನೂತನ ಚರಿತ್ರೆಯನ್ನು ಅಭ್ಯಾಸ ಮಾಡಿದವರಿಗೆ ತಿಳಿಯುತ್ತದೆ. ಇಂಥ ಸ್ಥಿತಿಯಲ್ಲಿ ಭಾರತದ ಭಾಷೆ ಹಿಂದಿಗೆ ತಕ್ಕ ಸ್ಥಾನವನ್ನು ಕೊಡಬೇಕಾದ ಕಾಲಬಂದಿದೆ. ಇಂಗ್ಲಿಷಿನ ಅಪ್ರತಿಹತವಾದ ಪ್ರಭಾವ ಮರೆಯಾಗದೆ ಅದನ್ನು ಬಿಡುವಂತಿಲ್ಲ. ಅಲ್ಲದೆ ಅದು ವಿಶ್ವದಲ್ಲೆಲ್ಲ ಬಳಕೆಯಲ್ಲಿರುವ ಭಾಷೆ; ಮುಂದುವರಿಯುತ್ತಿರುವ ಪ್ರಚಲಿತ ಪ್ರಪಂಚದ ವಿಜ್ಞಾನಾದಿ ಶಾಸ್ತ್ರಗಳ ಅಭ್ಯಾಸಕ್ಕೆ ನೆರವಾದ, ವಿಶ್ವಸಾಹಿತ್ಯದ ಭಂಡಾರಕ್ಕೆ ಬಾಗಿಲಾದ, ಲೋಕಸಂಪರ್ಕಕ್ಕೆ ಸಹಾಯಕವಾದ ಭಾಷೆ. ನಮ್ಮ ರಕ್ತದಲ್ಲಿ ಇನ್ನೂರು ವರ್ಷಗಳಿಂದ ನೆನೆದು ನೆನೆದು ಅಭೇದ್ಯವಾಗಿರುವ ಭಾಷೆ. ಅದನ್ನು ಕಿತ್ತು ದೂರಮಾಡುವಂತಿಲ್ಲ. ಇವುಗಳ ಜೊತೆಗೆ ಆರ್ಷೇಯವಾದ, ಸಂಸ್ಕೃತಿ ಕೇಂದ್ರವಾದ, ಪಿತಾರ್ಜಿತವಾದ ಭಾರತೀಯ ಭಾಷೆಗಳೆಲ್ಲದರ ತಾಯಿಯೆನ್ನಿಸಿಕೊಳ್ಳುವ ಸಂಸ್ಕೃತ ಭಾಷೆ. ಹೀಗೆ ನಾಲ್ಕು ಭಾಷೆಗಳ ಅಭ್ಯಾಸ ನಮಗೆ ಈಗಿನ ಸ್ಥಿತಿಯಲ್ಲಿ ಆವಶ್ಯಕವೋ ಎನ್ನಿಸುತ್ತಿದೆ. ಇವುಗಳನ್ನು ಅಭ್ಯಾಸ ಮಾಡುವ ಕ್ರಮ ಏನು? ಸಾಮಾನ್ಯ ಜನದ ದೃಷ್ಟಿಯಿಂದ ಎಷ್ಟು ಭಾಷೆ ಅಗತ್ಯ? ಒಬ್ಬ ವಿದ್ಯಾರ್ಥಿಯ ಅಭ್ಯಾಸಕಾಲದಲ್ಲಿ ಅವನು ಯಾವ ಯಾವ ಭಾಷೆಗೆ ಎಷ್ಟೆಷ್ಟು ಕಾಲವನ್ನು ಮೀಸಲಾಗಿಡಬೇಕು? ಅವನ ಜೀವನೋದ್ಯಮದಲ್ಲಿ ಎಷ್ಟು ಭಾಷೆ ಸಾಕು? ಹಳ್ಳಿಯ ರೈತನಿಗೆ ಎಷ್ಟು ಭಾಷೆಯ ಆವಶ್ಯಕತೆಯಿದೆ? ಮೊದಲಾದ ಪ್ರಶ್ನೆಗಳನ್ನು ಸ್ವತಂತ್ರ ಭಾರತದಲ್ಲಿ ವಿದ್ಯಾಭ್ಯಾಸಕ್ರಮವನ್ನು ನೂತನವಾಗಿ ನಿಯೋಜಿಸುವ ಪ್ರಭೃತಿಗಳು ಆಲೋಚನೆ ಮಾಡಬೇಕಾಗಿದೆ.

ಭಾಷಾಭ್ಯಾಸದ ದೃಷ್ಟಿಯಿಂದ ನಾಡಿನ ಜನವನ್ನು ಹೀಗೆ ವಿಂಗಡಿಸಬಹುದು:

೧. ಹಳ್ಳಿಯಲ್ಲಿ ನಿಂತು ವ್ಯವಸಾಯಾದಿ ಕಾರ್ಯಗಳಲ್ಲಿ ನಿರತರಾಗಿ ದೇಶದ ಗ್ರಾಮಜೀವನವನ್ನು ರೂಪಿಸತಕ್ಕವರು.

೨. ಆಡಳಿತದ ಕಾರ್ಯಭಾರದಲ್ಲಿ ಮತ್ತಿತರ ಉದ್ಯಮಗಳಲ್ಲಿ ನೆಲಸತಕ್ಕವರು.

೩. ವ್ಯಾಪಾರಸಾಪಾರಗಳಲ್ಲಿ ಮನಸ್ಸಿಟ್ಟು ದೇಶದ ಸಂಪತ್ತನ್ನು ರೂಢಿಸುವ ಗುಂಪು.

೪. ವಿಜ್ಞಾನಾದಿ ಶಾಸ್ತ್ರಗಳನ್ನು ಅಭ್ಯಾಸಮಾಡಿ ಸಂಶೋಧನಾಕಾರ್ಯದಲ್ಲಿ ನಿರತರಾಗತಕ್ಕ ಸಂಶೋಧಕರು.

೫. ಪ್ರಾಂತವನ್ನು ತ್ಯಜಿಸಿ ಪರಪ್ರಾಂತಕ್ಕೋ, ಕೇಂದ್ರ ಸರ್ಕಾರಕ್ಕೋ ಹೋಗಿ ನೆಲಸುವ ಮನೋಪ್ರವೃತ್ತಿಯುಳ್ಳ ದೇಶದೂರರು.

೬. ಭಾರತದ ರಾಯಭಾರಿಗಳ ಕರ್ತವ್ಯವನ್ನು ನೆರವೇರಿಸತಕ್ಕವರು.

೭. ಪ್ರಾಂತೀಯ ಮತ್ತು ಕೇಂದ್ರ ಶಾಸನ ಸಭೆಗಳಲ್ಲಿ ಕೆಲಸಮಾಡತಕ್ಕ ಪ್ರಜಾ ಪ್ರತಿನಿಧಿಗಳು.

೮. ಭಾಷಾ ಶಾಸ್ತ್ರಜ್ಞರು, ಸಾಹಿತಿಗಳು, ಕಲಾವಿದರು ಇತ್ಯಾದಿ.

ಇದು ಸ್ಥೂಲವಾದ ವಿಂಗಡಣೆ. ಈ ಗುಂಪಿನ ಜನಕ್ಕೆಲ್ಲ ಸರ್ಕಾರ ವಿದ್ಯಾಭ್ಯಾಸವನ್ನು ಕೊಡಬೇಕು ಅಥವಾ ನಿರಕ್ಷರಸ್ಥರ ಹೆಚ್ಚು ಸಂಖ್ಯೆಯುಳ್ಳ ಭಾರತೀಯರು ಅಕ್ಷರಸ್ಥರಾಗಿ, ವಿದ್ಯಾವಂತರಾಗಿ ಜ್ಞಾನವಂತರಾಗಬೇಕು. ಜನ ತಮ್ಮ ತಮ್ಮ ಯೋಗ್ಯತೆಯನ್ನು ಕಂಡುಕೊಂಡು ತಾವು ಬಯಸುವ, ತಮ್ಮ ಮನೋಪ್ರವೃತ್ತಿಗೆ ಅನುಗುಣವಾದ ವಿದ್ಯೆಯನ್ನು ಕೈಕೊಳ್ಳಬೇಕು. ಅವರವರಿಗೆ ಬೇಕಾದ ವಿದ್ಯಾದಾನಮಾಡುವ ಸಂಸ್ಥೆಗಳನ್ನು ಸರ್ಕಾರ ಏರ್ಪಡಿಸಬೇಕು. ಹೀಗಾದಾಗ ಮಾತ್ರ ಒಂದು ಕ್ರಮಬದ್ಧವಾದ ಸಮಾಜ, ಸಂಸ್ಕಾರ ಉಂಟಾಗಿ ವಿದ್ಯೆಯ ಫಲ ದೊರಕೀತು. ಈ ಯೋಜನೆಯ ವಿವರವನ್ನು ಕುರಿತು ಯೋಚಿಸುವುದಕ್ಕೆ ಮುಂಚೆ ಈಗಿನ ವಿದ್ಯಾಭಾಸ ಕ್ರಮದ ರೂಪರೇಷೆಯನ್ನು ತಿಳಿಯುವುದು ಅಗತ್ಯ.

ಇಲ್ಲಿ ಮೈಸೂರಿನ ವಿದ್ಯಾಭ್ಯಾಸ ಕ್ರಮವನ್ನು ಮಾತ್ರ ವಿವರಿಸಲು ಯತ್ನಿಸುತ್ತೇನೆ. ಇದು ಎಲ್ಲ ಪ್ರಾಂತೀಯ ಭಾಷೆಯ ಜನಕ್ಕೂ ಅನ್ವಯಿಸುವ ಮಾತು. ನಮ್ಮ ವಿದ್ಯಾಭ್ಯಾಸಕ್ರಮ ಮೆಕಾಲೆಯಿಂದ ಆರಂಭವಾದ ಇಂಗ್ಲಿಷ್ ಪದ್ಧತಿ. ಇದೇ ಸದ್ಯಕ್ಕೆ ಭಾರತೀಯ ಪದ್ಧತಿ. ಈ ಯೋಜನೆಯಿಂದ ಜನಕ್ಕೆ ಬೇಕಾದ ವಿದ್ಯೆ ದೊರಕುತ್ತಿದೆಯೋ ಎಂಬುದನ್ನೂ ನಾವು ನೋಡಬೇಕಾಗಿದೆ. ಹೊಸ ಯೋಜನೆಯನ್ನು ಕೈಕೊಳ್ಳುವ ನಾವು ಹಳೆಯ ಕ್ರಮದಿಂದ ಆದ ಆಗುಹೋಗುಗಳನ್ನು ಪರ್ಯಾಲೋಚಿಸಿ ಹೊಸಯೋಜನೆಯಲ್ಲಿ ಹಳೆಯದರ ದುಷ್ಟಾಂಶಗಳು ಮರುಕಳಿಸಬಾರದೆಂಬುದನ್ನು ಗಮನಿಸಬೇಕು.

ವಿದ್ಯಾರ್ಥಿಯ ವಿದ್ಯಾಭ್ಯಾಸದ ಕಾಲ ಎಂದರೆ ಒಬ್ಬ ವಿದ್ಯಾರ್ಥಿ ಪದವೀಧರನಾಗುವುದಕ್ಕೆ ಬೇಕಾಗುವ ಕಾಲಾವಧಿ ಹದಿನೈದು ವರ್ಷಗಳು. ಪ್ರಾಥಮಿಕ ಶಾಲೆಯಲ್ಲಿ ನಾಲ್ಕು ವರ್ಷಗಳು, ಮಾಧ್ಯಮಿಕ ಶಾಲೆಯಲ್ಲಿ ನಾಲ್ಕು ವರ್ಷ, ಮೂರು ವರ್ಷ ಹೈಸ್ಕೂಲ್ ಅಭ್ಯಾಸ, ಮತ್ತೆರಡು ವರ್ಷ ಇಂಟರ್‌ಮಿಡಿಯಟ್, ಮುಂದಿನ ಎರಡು ವರ್ಷಗಳ ಕಾಲ ಬಿಎ, ನೋ ಬಿ. ಎಸ್‌ಸಿ ಯೋ ಬಿ.ಕಾಮೋ ಪದವಿ ಪಡೆಯುವುದಕ್ಕೆ ಮೀಸಲು. ಇದಲ್ಲದೆ ಮತ್ತೂ ಹೆಚ್ಚಿನ ವಿದ್ಯಾರ್ಜನೆಯನ್ನೂ ಬಯಸಿದರೆ ಮತ್ತೆರಡು ಮೂರು ವರ್ಷಗಳ ಕಾಲ ಅದಕ್ಕಾಗಿ ವಿನಿಯೋಗಿಸಬೇಕಾಗಿದೆ. ಹೀಗೆ ಒಂದು ಮಟ್ಟದ ವಿದ್ಯೆಯನ್ನು ಕಲಿಯಬೇಕಾದರೆ ಆತನ ಜೀವಮಾನದಲ್ಲಿ ೧೫-೧೮ ವರ್ಷಗಳನ್ನು ಸದುಪಯೋಗಪಡಿಸಿಕೊಳ್ಳಬೇಕಾಗುತ್ತದೆ. ಈ ಅವಧಿಯಲ್ಲಿ ಅವನು ಎಷ್ಟು ಭಾಷೆಗಳನ್ನು ಎಷ್ಟು ವಿಷಯಗಳನ್ನು ಅಭ್ಯಾಸಮಾಡಬಲ್ಲನೆಂಬುದನ್ನೂ ನಾವು ಕಾಣಬೇಕು.

ಪ್ರಾಥಮಿಕ ಶಾಲೆಯಲ್ಲಿ ಅಕ್ಷರಾಭ್ಯಾಸದಿಂದ ಆರಂಭಿಸಿ ಕನ್ನಡ ನಾಲ್ಕನೆಯ ತರಗತಿಯ ವರೆಗೆ ಆ ಮಗುವಿಗೆ ಪೂರ್ಣವಾಗಿ ಮಾತೃಭಾಷೆಯಲ್ಲಿ ಪಾಠವಾಗುತ್ತದೆ.

ಇದು ವಿದ್ಯಾಭ್ಯಾಸದ ಪ್ರವೇಶ ಮಾತ್ರ. ಇವರಿಗೆ ಭೂಗೋಳ, ಚರಿತ್ರೆ, ಗಣಿತ ಇವುಗಳ ಪರಿಚಯವಾದರೂ ಇವು ಹಿಂದಿನ ಕಾಲದಲ್ಲಿ ಸಂಪ್ರದಾಯಸ್ಥರು ಮಕ್ಕಳಿಗೆ ಹೇಳಿಕೊಡುತ್ತಿದ್ದ ಬಾಯಿಪಾಠದಷ್ಟು ಜ್ಞಾನವೂ ಬಂದಿರುವುದಿಲ್ಲ. ಆದರೂ ಹುಡುಗರಿಗೆ ಮುಂದಿನ ತರಗತಿಯಲ್ಲಿ ವಿಸ್ತಾರವಾಗಿ ಓದಬೇಕಾದ ವಿಷಯದ ಪ್ರವೇಶವಾಗಿರುತ್ತದೆ ಮೊದಲ ನಾಲ್ಕು ವರ್ಷಗಳ ಅವಧಿಯಲ್ಲಿ ಎನ್ನಬಹುದು. ಮುಂದಿನ ನಾಲ್ಕು ವರ್ಷಗಳು ಚರಿತ್ರಾದಿ ವಿಷಯಗಳ ತಕ್ಕ ಮಟ್ಟಿನ ವಿಸ್ತರಣವೂ ಇಂಗ್ಲೀಷಿನ ಅಕ್ಷರಾಭ್ಯಾಸವೂ ಆರಂಭವಾಗಿ ನಾಲ್ಕು ವರ್ಷಗಳಲ್ಲಿ ಬೇಸಿಕ್ ಇಂಗ್ಲಿಷಿನ ಮಟ್ಟವೂ ಇತರ ವಿಷಯಗಳ ತಕ್ಕ ಮಟ್ಟಿನ ಓದಿನ ಜ್ಞಾನವೂ ಲಭಿಸಲು ತಕ್ಕ ಏರ್ಪಾಡಿದೆ. ಇಲ್ಲಿಯೂ ಬೋಧಕ ಭಾಷೆ ಮಾತೃಭಾಷೆಯೇ. ಇಲ್ಲಿಂದ ಮುಂದೆ ವಿದ್ಯಾರ್ಥಿ ಪ್ರೌಢಶಾಲಾ ವಿದ್ಯಾರ್ಥಿ. ಆತನ ಎಳೆಮನಸ್ಸು ಬಲಿಯಲು ಆರಂಭವಾಗಿ ಕೌಮಾರ್ಯಯೌವನಗಳ ಹುರುಪಿನಲ್ಲಿ ಮುಂದರಿಯುತ್ತದೆ. ಪ್ರಪಂಚಜ್ಞಾನ ವ್ಯವಹಾರಚಾತುರ್ಯ, ಮುಗ್ಧತೆಯ ನಿವಾರಣೆ ಹೆಜ್ಜೆಯಿಡುತ್ತದೆ. ಅವನ ಪಾಠಕ್ರಮ ಇಂಗ್ಲಿಷ್ ಮಧ್ಯಮದಲ್ಲಿ ಆರಂಭವಾಗುತ್ತದೆ. ತಾನು ಇಂಗ್ಲೆಂಡಿನಲ್ಲೇ ಓದುತ್ತಿದ್ದೇನೆ ಎನ್ನುವ ಮನೋಭಾವ. ಉಪಾಧ್ಯಾಯರು ಹೇಳುವ ಪಾಠ, ಹುಡುಗನಿಗೆ ಎಷ್ಟರ ಮಟ್ಟಿಗೆ ಅರ್ಥವಾಗುತ್ತದೋ ಅಂತೂ ಅವನಾಡುವ ಮಾತೃಭಾಷೆ ಇಂಗ್ಲಿಷ್ ಶಬ್ದಗಳಿಂದ ತುಂಬಿ ಮನೆಯುವರನ್ನೂ ಬೆರಗುಗೊಳಿಸಿ, ಮಕ್ಕಳ ಮೇಲಿನ ಮೋಹ ತಂದೆ ತಾಯಿಯರಿಗೆ ಮೆಚ್ಚಿಗೆಯನ್ನು ತಂದುಕೊಡುತ್ತದೆ. ಇಲ್ಲಿ ಇಂಗ್ಲಿಷಿಗೆ ಪ್ರಾಧಾನ್ಯ. ಇಂಗ್ಲಿಷ್ ಅನಿವಾರ್ಯವಾದ ಓದಲೇಬೇಕಾದ ವಿಷಯ; ವಿಜ್ಞಾನದ ಪ್ರವೇಶ ಇಲ್ಲಿಂದಲೇ ಶುರು. ಇದರ ಜೊತೆಗೆ ಆರ್ಟ್ಸ್ ಪಾಠಗಳಾದ ಚರಿತ್ರೆ, ಭೂಗೋಳಗಳ ಹೆಚ್ಚಿನ ವಿಸ್ತೃತ ಅಭ್ಯಾಸವೂ ಗಣಿತದ ವಿಶೇಷ ಜ್ಞಾನಾರ್ಜನೆಯೂ ಮುಂದುವರಿಯುತ್ತದೆ. ಇಲ್ಲಿ ಅವನು ಓದಬೇಕಾದ ಭಾಷೆಗಳು ಎರಡು. ಒಂದು ಅಗತ್ಯದ ಭಾಷೆ ಇಂಗ್ಲಿಷ್ (Compulsory Language). ಇನ್ನೊಂದು ದ್ವಿತೀಯ ಭಾಷೆ ಕನ್ನಡ, ಸಂಸ್ಕೃತ, ಹಿಂದಿ, ತೆಲುಗು ಇತ್ಯಾದಿ. ಈಚೆಗೆ ಹಿಂದಿಯನ್ನೂ ಮಾಧ್ಯಮಿಕ ಶಾಲೆಯಲ್ಲೇ ಕಲಿಸಲು ಆರಂಭಿಸಿರುವುದೂ ಉಂಟು. ಇಲ್ಲಿಂದ ಮುಂದೆ ಇಂಗ್ಲಿಷೇತರ ಭಾಷೆಯ ಅಭ್ಯಾಸ ಕಡಮೆ. ವಿದ್ಯಾರ್ಥಿಗಳಿಗೆ ವಿಜ್ಞಾನಾದಿ ವಿಷಯಗಳ ಜ್ಞಾನಾಭಿಲಾಷೆ ಅತಿಯಾಗಿರುವುದರಿಂದ ದ್ವಿತೀಯ ಭಾಷೆಯ ಮೇಲೆ ಗಣನೆ ಕುಂಠಿತವಾಗಿ ಎಷ್ಟೋ ವೇಳೆ ಅದರಲ್ಲಿ ನಪಾಸಾಗುವುದೂ ಒಂದು ಪಕ್ಷ ತೇರ್ಗಡೆಯಾದರೆ ಜೀವನಾಂಶಕ್ಕೆ ಬೇಕಾಗುವಷ್ಟು ಮಾತ್ರ ಅಂದರೆ ಸೇಕಡ ೩೫ ಸಂಖ್ಯೆಯನ್ನು ಮಾತ್ರ ಪಡೆಯುವುದೂ ಕಂಡು ಬರುತ್ತದೆ. ಮುಂದಿನ ಎರಡು ವರ್ಷಗಳು ಇಂಟರ್ ಅಭ್ಯಾಸ. ಪದವೀಧರನಾಗುವುದಕ್ಕೆ ಮೊದಲೆರಡು ವರ್ಷಗಳ 'ಕೋರ್ಸು' ಇದು. ಇಲ್ಲಿಯೂ ಅಷ್ಟೆ. ವಿಜ್ಞಾನಾಭ್ಯಾಸವೇ ಪ್ರಮುಖ ಸೈನ್ಸ್ ಕಾಲೇಜುಗಳಲ್ಲಿ. ಆರ್ಟ್ಸ್ ತರಗತಿಗಳಿಗೆ ಸೇರುವ ವಿದ್ಯಾರ್ಥಿ ಸಂಖ್ಯೆ ಕಡಮೆ. ಕನ್ನಡ, ಸಂಸ್ಕೃತಾದಿ ಇತರ ಭಾಷೆಗಳು ದ್ವಿತೀಯ ಭಾಷೆಗಳು ಇಲ್ಲವೇ ಐಚ್ಛಿಕ ಭಾಷೆಗಳು. ಐಚ್ಛಿಕ ಭಾಷೆಗಳನ್ನಾಗಿ ಅಭ್ಯಾಸ ಮಾಡುವವರ ಸಂಖ್ಯೆ ಬೆರಳು ಮಡಿಸುವಷ್ಟು. ಹಾಗೆ ತೆಗೆದುಕೊಂಡು ತೇರ್ಗಡೆಯಾದ ಪದವೀಧರರಿಗೆ ಸಮಾಜದಲ್ಲಿ ಯಾವ ಕೆಲಸವನ್ನು ಕೈಕೊಳ್ಳಲೂ ಯೋಗ್ಯತೆಯಿಲ್ಲವೆಂಬ ಪತ್ರವನ್ನು ತೆಗೆದುಕೊಂಡಂತಾಗುತ್ತದೆ. ಇದೇ ಎರಡು ವರ್ಷಗಳ ವಿದ್ಯಾರ್ಜನೆಯನ್ನು ಮುಂದರಿಸುವ ಕಾಲ. ಪದವೀಧರನಾಗಲು ಯೋಗ್ಯತೆ ಪಡೆಯುವ ಅವಧಿ. ವಿಷಯಾಭ್ಯಾಸದಲ್ಲಿ ವಿಶೇಷವೇನೂ ಇರುವುದಿಲ್ಲ. ಇಂಟರ್ ತರಗತಿಗಳಲ್ಲಿ ಕಲಿತುದರ ಮುಂದಿನ ಪಾಠಗಳ ಪ್ರವಚನ ಇಲ್ಲಿ ನಡೆಯುತ್ತದೆ. ಭಾಷೆಗೆ ಅಪ್ರಮುಖ ಸ್ಥಾನವೇ. ಹೀಗೆ ಹದಿನೈದು ವರ್ಷಗಳನ್ನು ಕಳೆದು ಅವನು ಪದವೀಧರನಾಗುತ್ತಾನೆ. ೧೧ ವರ್ಷಗಳ ಅವ್ಯಾಹತವಾದ ಇಂಗ್ಲಿಷಿನ ಅಭ್ಯಾಸ ಅವನನ್ನು ಆಂಗ್ಲರ ಸಂಸ್ಕೃತಿಯ ಪ್ರಸಾರಕ್ಕೆ ಯೋಗ್ಯನನ್ನಾಗಿ ಮಾಡುತ್ತದೆಂದು ವಿದ್ಯಾಭ್ಯಾಸ ಯೋಜನೆಯವರ ಗುರಿ.

ಇಂಟರ್ ತೇರ್ಗಡೆಯಾದ ಮೇಲೆ ಯಾವುದಾದರೂ

ಒಂದು ವಿಷಯವನ್ನು ಉದಾಹರಣೆಗೆ ಅರ್ಥಶಾಸ್ತ್ರ, ತತ್ವ, ರಸಾಯನ ಶಾಸ್ತ್ರ, ಭೌತ ಶಾಸ್ತ್ರ, ಗಣಿತ ಶಾಸ್ತ್ರ, ಕನ್ನಡ, ಸಂಸ್ಕೃತ, ಇಂಗ್ಲಿಷ್—ಇವುಗಳನ್ನು ಕುರಿತು ಆಳವಾದ, ವಿಸ್ತಾರವಾದ ಅಭ್ಯಾಸ ಮಾಡುವವರೂ ಉಂಟು. ಇವರ ಸಂಖ್ಯೆಯೂ ಕಡಮೆ. ಈ ಅಭ್ಯಾಸವು ವಿಷಯದ ವಿಶಿಷ್ಟ ಜ್ಞಾನಕ್ಕೂ, ಸಂಶೋಧನಾದಿ ಕಾರ್ಯನಿರ್ವಹಣೆಗೂ ಸಹಕಾರಿಯಾಗುತ್ತದೆ. ಮುಂದೆ ಅದನ್ನು ರೂಢಿಸಿಕೊಳ್ಳ ಬೇಕಷ್ಟೆ.

ಮೇಲಿನ ಕ್ರಮದಲ್ಲಿ ಯಾವ ಯಾವ ಭಾಷೆಗೆ ಏನು ಸ್ಥಾನ ಕೊಡಲಾಗಿದೆ ಎಂಬುದನ್ನು ನಾವು ಕಾಣಬಹುದು. ಕನ್ನಡ ದೇಶದಲ್ಲಾಗಲಿ ಇತರ ಪ್ರಾಂತೀಯ ಭಾಷೆಯ ನಾಡಿನಲ್ಲಾಗಲಿ ಪ್ರೌಢ ಶಾಲೆಯಿಂದ ಹಿಡಿದು ಮುಂದಿನ ಎಲ್ಲ ಕಾಲವೂ ಪಾಠ ಪ್ರವಚನಗಳು ಪರಭಾಷೆಯೂ ಆಡಳಿತ ಭಾಷೆಯೂ ಆದ ಇಂಗ್ಲಿಷಿನಲ್ಲಿ ನಡೆಯುತ್ತದೆ. ಇಂಗ್ಲಿಷಿನ ಪ್ರಾಬಲ್ಯ ವಿದ್ಯಾರ್ಥಿಜೀವನದಲ್ಲಿ ಇಷ್ಟರ ಮಟ್ಟಿಗಿದ್ದರೂ ನಮ್ಮ ಪದವೀಧರರ ಇಂಗ್ಲಿಷ್ ಜ್ಞಾನ ಇಂಗ್ಲೆಂಡಿನ ಅನಕ್ಷರಸ್ಥನಾದ ಆಂಗ್ಲೇಯನ ವ್ಯಾಕರಣ ಶುದ್ಧವಾದ ಭಾಷಾ ಜ್ಞಾನದಷ್ಟೂ ಇಲ್ಲದಿರುವುದು ಎಷ್ಟೋ ವೇಳೆ ಕಂಡು ಬರುತ್ತದೆ. ಅಂಥವರು ಅವ್ಯಾಹತವಾದ ಹನ್ನೊಂದು ವರ್ಷಗಳ ಅಭ್ಯಾಸದಿಂದ ಸಾಧಿಸುವುದಾದರೂ ಏನು? ಅವರಿಗೆ ಮಾತೃಭಾಷೆಯಲ್ಲಿ ಹೆಚ್ಚಿನ ಪ್ರವೇಶವಿಲ್ಲ. ಪ್ರೌಢ ಶಾಲೆಗೆ ಬಂದಾಗ ಪೂರ್ವ ಸಂಸ್ಕೃತಿಯನ್ನು ಬಿಡಲಾರದ ಮೋಹದಿಂದ ಸಂಸ್ಕೃತವನ್ನು ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿ, ಅದನ್ನು ಕಡೆಯ ವರೆಗೆ ಮುಂದುವರಿಸಿ ಅದನ್ನು ಪದವೀಧರನಾದ ಮೇಲೆ ಕೈಬಿಡುವ ಸುಯೋಗವನ್ನು ಮಾತ್ರ ಕಲಿಯುವುದು ಆ ಭಾಷೆಯ ಪ್ರಯೋಜನ. ಇತ್ತಲಾಗಿ ಕನ್ನಡವಿಲ್ಲ ಅತ್ತಲಾಗಿ ಸಂಸ್ಕೃತವಿಲ್ಲ; ಇಂಗ್ಲಿಷ್ ಅಭ್ಯಾಸ ಮಾಡಿದರೂ ಭಾರತೀಯರ ನಾಲಗೆ ತಿರುಗದೆ ಅದೊಂದು 'ಗ್ರೀಕ್' ಆಗಿಯೇ ಉಳಿದುಬಿಡುತ್ತದೆ. ಆದರೆ ಒಂದಂಶ ವೇನೋ ಸತ್ಯ. ವ್ಯವಹಾರಕ್ಕೆ ಬೇಕಾದ ಇಂಗ್ಲಿಷನ್ನು ಆತ ಸಂಪಾದಿಸಿರುತ್ತಾನೆ. ಆತನ ೧೫ ವರ್ಷಗಳ ಅಭ್ಯಾಸವು ವ್ಯಕ್ತಿಯನ್ನು ಇಂಗ್ಲಿಷಿನಲ್ಲಿ ವ್ಯವಹಾರ ಮಾಡುವುದಕ್ಕೆ ತಕ್ಕವನನ್ನಾಗಿ ಮಾಡುವುದಷ್ಟೆ. ಇದೇ ಏನು ವಿದ್ಯಾಭ್ಯಾಸದ ಗುರಿ, ಜ್ಞಾನಾರ್ಜನೆಯ ಧ್ಯೇಯ? ಪದವೀಧರನಾಗಿ ಹೊರ ಬಂದು ಜೀವನೋದ್ಯಮವನ್ನು ಸಂಪಾದಿಸಿ ಗೃಹಸ್ಥನಾಗಿ ನಿಂತರೆ ಅವನ ವಿಜ್ಞಾನ, ಚರಿತ್ರೆ, ಭಾಷೆ ಎಲ್ಲವೂ ಅವನ ಉದ್ಯೋಗದ ಕಾರ್ಯಭಾರದಲ್ಲಿ ಮುಳುಗಿ ಹೋಗಿ ತಾನು ಅವುಗಳನ್ನು ಓದಲೇ ಇಲ್ಲವೇನೋ ಎನ್ನಿಸುತ್ತದೆ. ಅವನ ವಿದ್ಯಾಭ್ಯಾಸದ ಕಾಲ ವ್ಯರ್ಥ ಕಳೆದ ಕಾಲ ಎನ್ನಿಸೀತು. ಇದು ಈಗಿನ ವಿದ್ಯಾಭ್ಯಾಸಕ್ರಮದ ಒಂದು ಭಾಗ.

ಈಚೆಗೆ ಮೈಸೂರಿನಲ್ಲಿ ವಿದ್ಯಾಭ್ಯಾಸ ಕ್ರಮದಲ್ಲಿ ಮಾರ್ಪಾಡನ್ನು ತರುವ ಆಲೋಚನೆಯಿಂದ ಒಂದು ಸಮಿತಿಯನ್ನು ಕೂಡಿಸಿದ್ದಾರೆ. ಅದರ ಮುಂದಿರುವ ಯೋಜನೆಯ ಪ್ರಕಾರ ವಿದ್ಯಾಭ್ಯಾಸದ ಅವಧಿಯನ್ನು ೧೮ ವರ್ಷಗಳ ಕಾಲಗಳ ವರೆಗೆ ವಿಸ್ತರಿಸಿ ಆರು ಆರು ವರ್ಷಗಳ ಮೂರು ಘಟ್ಟಗಳನ್ನಾಗಿ ಮಾಡಿಕೊಂಡಿರುವಂತಿದೆ. ಮೊದಲ ಆರು ವರ್ಷಗಳು ಪ್ರಾಥಮಿಕ ಮಾಧ್ಯಮಿಕ ಶಾಲೆಗಳು. ಈಗ ಹೇಳಿ ಕೊಡುತ್ತಿರುವ ಮಟ್ಟದ ಜ್ಞಾನವನ್ನು ಬೋಧಿಸುವುದೂ ಅನಂತರ ಆರು ವರ್ಷಗಳಲ್ಲಿ ಪ್ರೌಢ ಶಾಲೆ ಮತ್ತು 'ಎಂಟ್ರೆನ್ಸ್' ಭಾಗದ ತಿಳಿವಿನ ಅರಿವೂ ಅನಂತರ ವೃತ್ತಿಶಿಕ್ಷಣಗಳನ್ನೊಳಗೊಂಡ ಅಭ್ಯಾಸವೂ ನಡೆಸುವ ಏರ್ಪಾಡಿರುವಂತೆಯೂ ತೋರುತ್ತದೆ. ಇಲ್ಲಿಯೂ ಭಾಷೆಯ ಸ್ಥಾನ ಸಂದೇಹವಾಗಿಯೇ ಇದೆ. ಇಂಗ್ಲಿಷಿನ ಸ್ಥಾನವನ್ನು ಹಿಂದಿ ಅಥವಾ ಹಿಂದೂಸ್ತಾನಿ ಆಕ್ರಮಿಸಿಕೊಳ್ಳುವ ಭಯವಿದೆ. ವಿದ್ಯಾದಾನಯೋಜಕರು ಭಾಷೆಯ ವಿಷಯಕ್ಕೆ ಹೆಚ್ಚು ಗಮನಕೊಟ್ಟಂತೆ ಕಾಣ ಬರುವುದಿಲ್ಲ.

ನಮ್ಮ ಜೀವನದಲ್ಲಿ ನಾವು ಸುಸಂಸ್ಕೃತ ಸಾಮಾಜಿಕನಾಗಬೇಕಾದರೆ ನಾವೆಷ್ಟು ಭಾಷೆಯನ್ನು ಕಲಿಯಬೇಕು ಎಂಬುದನ್ನು ನಾವು ನಿರ್ಧರಿಸಿಕೊಳ್ಳಬೇಕು. ಹಾಗೆ ಭಾಷೆಯನ್ನು ಕಲಿಯುವಾಗ ಯಾವುಯಾವುದರ ಜ್ಞಾನ ಎಷ್ಟರ ಮಟ್ಟದ್ದಿರಬೇಕೆಂಬುದನ್ನೂ, ನಮಗೆ ವಿಜ್ಞಾನಾದಿ ವಿಷಯಗಳು ಸ್ಪಷ್ಟವಾಗಿ ಖಚಿತವಾಗಿ ಅರಿವಾಗಬೇಕಾದರೆ ಅದನ್ನು ನಾವು ಯಾವ ಭಾಷೆಯ ಮೂಲಕ ಅರಿತುಕೊಳ್ಳಬೇಕೆಂಬುದನ್ನೂ ನಾವು ತಿಳಿದುಕೊಳ್ಳಬೇಕು. ನಾವು ಈ ದೃಷ್ಟಿಯಿಂದ ಮೇಲೆ ಹೇಳಿದಬೇರೆ ಬೇರೆ ಪಂಗಡದ ಜನಕ್ಕೆ ಯಾವ ಯಾವ ವಿಷಯಗಳ ಜ್ಞಾನ ಆಗತ್ಯ ಎಂಬುದನ್ನು ಗಮನಿಸಿ ವಿದ್ಯಾಭ್ಯಾಸದ ನೂತನ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರಬೇಕಾಗಿದೆ, ಈ ಕ್ರಮದಲ್ಲಿ ಭಾಷೆಗೆ ಯಾವ ಸ್ಥಾನವನ್ನು ಕೊಡಬೇಕೆಂಬುದನ್ನುನಿರ್ಧರಿಸಿಕೊಳ್ಳಬೇಕಾಗಿದೆ.

ಕನ್ನಡ ನಾಡಿನ ಎಲ್ಲ ಅಭಿರುಚಿಯ ಎಲ್ಲ ಪ್ರವೃತ್ತಿಯ ಜನಕ್ಕೆ ವಿದ್ಯಾದಾನ ಕನ್ನಡದಲ್ಲಿಯೇ ನಡೆಯುವುದು ವಿಷಯ ಪರಿಜ್ಞಾನದ ದೃಷ್ಟಿಯಿಂದ ಉತ್ತಮ. ಆ ಕ್ರಮವೇ ಏಕೈಕ ಸಾಧನ. ಅದ್ದರಿಂದ ಕನ್ನಡಕ್ಕೆ ಹೊಸ ವಿದ್ಯಾಭ್ಯಾಸ ಕ್ರಮದಲ್ಲಿ ಪ್ರಥಮ ಸ್ಥಾನ ದೊರಕಬೇಕು. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಅವರವರ ದೇಶವಲ್ಲದ ದೇಶಗಳ ಚರಿತ್ರೆ, ಸಾಹಿತ್ಯ, ಸಂಶೋಧನೆ, ಶಾಸ್ತ್ರಗಳನ್ನು ಹೇಳಿಕೊಡುವಾಗ ಆಯಾ ದೇಶೀಯ ಭಾಷೆಗಳಲ್ಲಿ ಬೋಧಿಸುತ್ತಾರೆಯೇ ವಿನ ವಿಷಯ ಯಾವ ರಾಷ್ಟ್ರಕ್ಕೆ ಸಂಬಂಧಿಸಿದುದೋ ಆ ವಿಷಯವನ್ನು ಆ ರಾಷ್ಟ್ರಭಾಷೆಯಲ್ಲಿ ಬೋಧಿಸುವುದಿಲ್ಲ. ವಿದ್ಯಾರ್ಥಿಗೆ ವಿಷಯ ಮನದಟ್ಟಾಗಬೇಕಾದರೆ ಅವನು ಆಡುವ ಮಾತಿನಲ್ಲೇ ಹೇಳಿ


ಕೊಡಬೇಕು. ಆಗ ವಸ್ತುವಿನ ವಿಷಯದ ಖಚಿತ ಜ್ಞಾನವುಂಟಾಗುತ್ತದೆ. ಆದ್ದರಿಂದ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿಯೂ ಬೋಧಕಭಾಷೆಯನ್ನಾಗಿಯೂ ಅನಿವಾರ್ಯವಾಗಿ ಬಳಕೆಗೆ ತರಬೇಕು.

ವ್ಯವಸಾಯಾದಿ ಗ್ರಾಮಕಾರ್ಯಗಳಲ್ಲಿ ನಿರತನಾಗುವವನಿಗೆ ಇತರ ಭಾಷೆಗಳ ಅಗತ್ಯವೇ ಕಂಡುಬರುವುದಿಲ್ಲ. ಅವನಿಗೆ ಭಾರತದ, ಪ್ರಪಂಚದ ಎಲ್ಲ ವಿಚಾರಗಳೂ ಕನ್ನಡದಲ್ಲಿ ದೊರಕುವಂತೆ ಮಾಡಿಕೊಡುವ ಇನ್ನೊಂದು ಗುಂಪಿನ ಜನಕ್ಕೆ ಇನ್ನೆರಡು ಮೂರು ಭಾಷೆಗಳ ಅವಶ್ಯಕತೆ ಬೇಕಾಗುತ್ತದೆ. ಅವರು ಸಾಹಿತಿಗಳೂ, ವಿಚಾರವೇತ್ತರೂ, ವಿದ್ವಾಂಸರೂ, ಪಂಡಿತರೂ ಈ ಗುಂಪಿಗೆ ಸೇರಿದವರು. ಇವರಿಗೂ ವ್ಯವಹಾರಕ್ಕೆ ಕನ್ನಡವೇ. ಕನ್ನಡ ಜನದ ಸಂಸ್ಕೃತಿಯ ಪ್ರಸಾರ ಇವರ ಕೈಯಲ್ಲಿ. ಇವರು ವಿಶ್ವಸಾಹಿತ್ಯದ ಪರಿಚಯವನ್ನು ಇಂಗ್ಲಿಷಿನಲ್ಲಿ ಪಡೆಯಬೇಕಾಗುತ್ತದೆ. ಭಾರತೀಯ ಸಾಹಿತ್ಯಾದಿ ವಿಷಯಗಳನ್ನು ಹಿಂದಿಯಿಂದ ಪಡೆಯಬೇಕಾಗುತ್ತದೆ. ಆರ್ಷೇಯ ಸಂಸ್ಕೃತಿಯ ವಿವರಣೆಗಾಗಿ ಸಂಸ್ಕೃತಾಭ್ಯಾಸ ಅಗತ್ಯವಾಗುತ್ತದೆ. ಇಂಥವರು ಚತುರ್ಭಾಷಾ ಪ್ರವೀಣರು. ಇವರ ಗುಂಪೇ ಬೇರೆ; ಇವರ ಅಭ್ಯಾಸವೇ ಬೇರೆ. ಇವರ ಹೆಚ್ಚಿನ ಅಭ್ಯಾಸಕಾಲವೆಲ್ಲ 'ಆರ್ಟ್ಸ್' ಅಭ್ಯಾಸಕ್ಕೆ, ಭಾಷಾ ಅಭ್ಯಾಸಕ್ಕೆ. ಸಂಶೋಧನಾದಿ ಕಾರ್ಯಗಳಲ್ಲಿ ನಿರತರಾಗುವವರಿಗೆ ಇಂಗ್ಲಿಷ್ ಅವಶ್ಯಕ. ಅವರು ಅದನ್ನೇ ಹೆಚ್ಚಾಗಿ ಕಲಿಯಬೇಕಾಗುತ್ತದೆ. ಪಾಶ್ಚಾತ್ಯ ವಿಜ್ಞಾನಾದಿಗಳನ್ನು ತಿಳಿದು ಅದನ್ನು ಭಾರತೀಯರಿಗೆ, ಕನ್ನಡಿಗರಿಗೆ ಕೊಡುವುದಕ್ಕಾಗಿ ಕನ್ನಡವನ್ನು ಚೆನ್ನಾಗಿ ಕಲಿತಿರಬೇಕು. ನಮ್ಮ ಶಾಸ್ತ್ರಾದಿಗಳು ಸಂಸ್ಕೃತ ಭಾಷೆಯಲ್ಲಿರುವುದರಿಂದ ಪಾಶ್ಚಾತ್ಯ ಪೌರ್ವಾತ್ಯ ಶಾಸ್ತ್ರಗಳನ್ನು ತುಲನೆಮಾಡಿ ಹೊಸ ಶಾಸ್ತ್ರವನ್ನು ರೂಢಿಸುವ ಕಾರ್ಯವಿರುತ್ತ ಅವರು ಸಂಸ್ಕೃತವನ್ನು ಚೆನ್ನಾಗಿ ಅಭ್ಯಾಸಮಾಡಬೇಕಾಗುತ್ತದೆ. ಹೀಗೆ ಸಂಶೋಧಕರಿಗೆ ಮೂರು ಭಾಷಾಜ್ಞಾನ ಅವಶ್ಯಕವೆನಿಸುತ್ತದೆ. ಪ್ರಜಾಪ್ರತಿನಿಧಿಗಳು ಪ್ರಾಂತಶಾಸನಸಭೆಗಳಿಗೆ ಚುನಾಯಿತರಾಗಿ ಬಂದರೆ ಕನ್ನಡವನ್ನು ಚೆನ್ನಾಗಿ ಕಲಿತಿರಬೇಕು. (ಇಲ್ಲಿ ಒಂದು ವಿಷಯವನ್ನು ಮಾತ್ರ ನಾವು ಊಹಿಸಿಕೊಂಡು ಈ ವಿಚಾರವನ್ನು ಮುಂದುವರಿಸಿದ್ದೇವೆ. ಸ್ವಾತಂತ್ರ್ಯ ಪಡೆದ ಭಾರತದ ಪ್ರಾಂತಗಳು ಭಾಷಾವಾರು ಪ್ರಾಂತಗಳಾಗಿ ವಿಂಗಡಣೆ ಹೊಂದೇ ಹೊಂದುತ್ತವೆ; ಹಾಗೆ ಭಾಷಾವಾರು ಪ್ರಾಂತರಚನೆಯಾದನಂತರ ಆಡಳಿತ ಭಾಷೆ, ಕೋರ್ಟು ಮುಂತಾದ ವ್ಯವಹಾರದಲ್ಲಿ ಬಳಸುವ ಭಾಷೆ ಕನ್ನಡವೇ ಎಂಬುದೇ ಈ ಊಹೆ). ಅವರು ಕೇಂದ್ರ ಸರ್ಕಾರದ ನಿಯಮ ನಿಬಂಧನೆಗಳನ್ನು ಅರ್ಥಮಾಡಿಕೊಂಡು ವಿವರಣೆ ಕೊಡಲು ವಿಮರ್ಶಿಸಲು ಸಹಾಯವಾಗುವಂತೆ ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯಲೇಬೇಕಾಗುತ್ತದೆ.

ಈ ಉಭಯಭಾಷಾವಿಶಾರದತೆಯ ಜೊತೆಯಲ್ಲಿ ಜ್ಞಾನಾಭಿವೃದ್ಧಿಗಾಗಿ ಅವರು ಇಂಗ್ಲಿಷ್ ಸಂಸ್ಕೃತವನ್ನೂ ಐಚ್ಛಿಕವಾಗಿ ಕಲಿಯಬಹುದು. ಪ್ರಮುಖವಾದ ಅಭ್ಯಾಸಕಾಲದ ವಿನಿಯೋಗ ಕನ್ನಡ ಮತ್ತು ಹಿಂದೀ ಭಾಷೆ ಕೇಂದ್ರ ಶಾಸನ ಸಭೆಯಲ್ಲಿ ಪ್ರಾಂತೀಯ ಪ್ರತಿನಿಧಿಗಳಾಗಿ ದುಡಿಯುವ ಜನಕ್ಕೂ ಮೇಲೆ ಹೇಳಿದ ಭಾಷೆಗಳ ಪರಿಜ್ಞಾನ ಸಾಕು. ಪರದೇಶಗಳಿಗೆ ಕಾರ್ಯಭಾರಿಯಾಗಿ ಹೋಗತಕ್ಕವರು, ನೆಲಸುವವರು ಇಂಥ ಪಂಗಡದ ಜನಕ್ಕೆ ಭಾರತೇತರ ದೇಶದ ಭಾಷಾಜ್ಞಾನವೂ ಒಂದು ಅಗತ್ಯವಾಗಿ ಬೇಕಾಗುತ್ತದೆ. ವ್ಯಾಪಾರ ಸಾಪಾರ ಮಾಡುವ ಜನಕ್ಕೆ ವ್ಯವಹಾರಕ್ಕೆ ಬೇಕಾದ ಕನ್ನಡವೂ ಇತರ ದೇಶದ ವ್ಯಾಪಾರಿಗಳೊಡನೆ ಸಂಪರ್ಕವನ್ನು ಇಟ್ಟುಕೊಳ್ಳುವುದಕ್ಕೆ ತಕ್ಕಷ್ಟು ಆಯಾ ದೇಶದ ಭಾಷೆಯ ಜ್ಞಾನವೂ ಬಂದರೆ ಸಾಕಾಗುತ್ತದೆ. ಅವರಿಗೆ ಇತರ ಭಾಷೆಗಳಲ್ಲಿ ಪಾಂಡಿತ್ಯ ಅನಾವಶ್ಯಕ. ಆದ್ದರಿಂದ ಅವರ ಅಭ್ಯಾಸದಲ್ಲಿ ಹೆಚ್ಚಿನ ಭಾಗ ಅರ್ಥಾದಿ ಶಾಸ್ತ್ರಗಳ ವಿವರಣೆ. ವಿದ್ಯಾಭ್ಯಾಸ ಪ್ರತಿಯೊಬ್ಬ ಮಾನವನಿಗೂ ಅಗತ್ಯ. ಅವನು ಜ್ಞಾನಪೂರ್ಣನಾಗಬೇಕಾದುದು ತೀರ ಆವಶ್ಯಕ. ಜ್ಞಾನಸಂಪಾದನೆ ಭಾಷೆಯ ಮೂಲಕ; ತಾಯಿ ನುಡಿಯ ಮೂಲಕ. ಈ ದೃಷ್ಟಿಯಿಂದ ಜ್ಞಾನದಾನದ ಯೋಜನೆಯನ್ನು ವಯೋನುಗುಣವಾಗಿ ಅಭ್ಯಾಸಮಾಡಬೇಕಾದ ಕ್ರಮವನ್ನೂ, ಯಾವುದೋ ಒಂದು ಮಟ್ಟದಲ್ಲಿ ವಿದ್ಯಾರ್ಥಿಗಳು ತಮ್ಮ ಮುಂದಿನ ಜೀವನ ಮಾರ್ಗವನ್ನೂ ಕೈಕೊಳ್ಳುವ ನಿರ್ಧಾರವನ್ನೂ ರೂಪಿಸಿಕೊಳ್ಳುವನಿಶ್ಚಯವನ್ನೂ ಒದಗಿಸುವಂತೆ ವಿದ್ವಾಂಸರೂ ಪರಿಣಿತರೂ ಆಲೋಚಿಸಿ ಭಾರತದ ಭವಿಷ್ಯದ ಭಾಗ್ಯವನ್ನು ರೂಪಿಸಲು ಸಹಾಯವಾಗುತ್ತಾರೆ ಎಂದು ನಂಬೋಣ. ಈಗಿನ ವಿದ್ಯಾಭ್ಯಾಸದ ಫಲಾಫಲಗಳನ್ನೂ ಶ್ರೀ ಐವರ್ ಜೆನ್ನಿಂಗ್ಸ್ ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭೋತ್ಸವದಲ್ಲಿ ನುಡಿದ ನುಡಿಗಳು ತಿಳಿಸುತ್ತವೆ: We University Teachers, are apt to lead our students astray by dividing knowledge into subjects............ ....we even make the mistake of inventing different degrees and giving you hoods of different colours. One student graduats in law, another in Science, and a third in medicine........... These divisions may be adminstratively convenient, but they are misleading.

"Many of you will now be called upon to solve Practical Problems, and you will find that no such problem falls nicely within the curriculum of your faculty.......... ...."

ಈ ವ್ಯವಹಾರಜ್ಞಾನವನ್ನು ಕೊಡದ ವಿದ್ಯಾಭ್ಯಾಸ ಕ್ರಮವನ್ನು ನಿಲ್ಲಿಸಿ ಹೊಸ ಯೋಜನೆಯನ್ನು ನಿರ್ಮಾಣ ಮಾಡಲು ಹೊರಟಿರುವ ಮೇಧಾವಿಗಳು, ಭಾರತದಲ್ಲಿ ತೊಡಕಾಗಿರುವ ಭಾಷಾಸಮಸ್ಯೆಯನ್ನು ಹೆಚ್ಚು ತೊಡಕಾಗಿ ಮಾಡದೆ ಸುಲಭದಲ್ಲಿ ವ್ಯವಹಾರಯೋಗ್ಯದೃಷ್ಟಿಯಿಂದ ಕಂಡು ಅಗತ್ಯವಾದ ರೀತಿಯಲ್ಲಿ ಬಳಸಿಕೊಂಡು ಪರಭಾಷಾವ್ಯಾಮೋಹಕ್ಕೆ ಒಳಗಾಗದೆ, ತಾಯಿ ನುಡಿಯ ಪ್ರೇಮದೂರರಾಗದೆ, ದೇಶದ ಮಕ್ಕಳ ಹಿತದೃಷ್ಟಿಯೊಂದನ್ನೇ ಗಮನದಲ್ಲಿಟ್ಟುಕೊಂಡು ಪುರಾತನ ನೂತನ ಸಂಸ್ಕಾರ ಸಂಸ್ಕೃತಿಗಳ ಸಮನ್ವಯದಿಂದ ಹೊಸ ಸಂಸ್ಕೃತಿಯ ದೇಶವನ್ನಾಗಿ ಮಾಡಲು ಶ್ರಮಿಸುತ್ತಾರೆಂದು ಹಾರೈಸೋಣ.



ಅಷ್ಟಾದಶ ವರ್ಣನೆ

(ಲೇಖಕ: ಎಂ. ವಿ. ಸೀತಾರಾಮಯ್ಯ)

ಸಂಸ್ಕೃತ ಆಲಂಕಾರಿಕರು ಮಹಾಕಾವ್ಯಕ್ಕೆ ಹದಿನೆಂಟು ವಿಷಯಗಳನ್ನು ಕುರಿತ ವರ್ಣನೆಗಳು ಅಂಗಗಳೆಂದು ವಿಧಿಸಿದ್ದಾರೆ. ಸಂಸ್ಕೃತ ಕವಿ ಕಾವ್ಯಗಳನ್ನು ತಮ್ಮ ಆದರ್ಶಗಳಾಗಿಟ್ಟುಕೊಂಡು ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯಗಳನ್ನು ಅದೇ ಚೌಕಟ್ಟಿನಲ್ಲಿ ಅಳವಡಿಸಿ ರಚಿಸುತ್ತ ಬಂದರು. ಮಹಾಕಾವ್ಯವಾಗಬೇಕಾದರೆ ಕಾವ್ಯವಸ್ತು ಗೌರವ, ಕಥಾವಿಸ್ತಾರ, ಭಾವೋನ್ನತಿ, ರಸಸಂಪತ್ತಿ—ಈ ಗುಣಗಳಿಗಿಂತ ಹೆಚ್ಚಾಗಿ ಈ 'ಅಷ್ಟಾದಶವರ್ಣನೆ'ಯೇ ಮುಖ್ಯ ಸಾಮಗ್ರಿಯೆಂದು ಅನೇಕ ಕನ್ನಡ ಕವಿಗಳು ಭಾವಿಸಿದರು. ಕಾವ್ಯದಲ್ಲಿ–ಅದು ಪದ್ಯಾತ್ಮಕವಾಗಲಿ ಗದ್ಯಾತ್ಮಕವಾಗಲಿ, ಪ್ರಾಚೀನವಾಗಲಿ ಅರ್ವಾಚೀನವಾಗಲಿ—ವರ್ಣನೆಗೆ ಒಂದು ಮುಖ್ಯ ಸ್ಥಾನವಿದೆ. ಆದರೆ ಕಾವ್ಯವೆಲ್ಲ ಈ ಅಷ್ಟಾದಶವರ್ಣನಾಮಯವಾಗಿ, ಕಾವ್ಯಕನ್ನಿಕೆ 'ಸೀಗೆಯೊಳಗಣ ಬಾಳೆ'ಗಣೆಯಾಗಿರುವ ಸಂದರ್ಭಗಳು ಎಷ್ಟೋ ಇವೆ. ಪಂಪ, ಹರಿಹರ, ಕುಮಾರವ್ಯಾಸರಂಥ ಪ್ರತಿಭಾವಂತ ಕವಿಗಳು ಮಾತ್ರ ಸಂಪ್ರದಾಯದ ಚೌಕಟ್ಟಿಗೆ ಒಳಗಾಗಿಯೂ ಕೂಡ ರಸಪ್ರವಾಹವನ್ನು ನಿರರ್ಗಳವಾಗಿ ಹರಿಯಬಿಟ್ಟಿದ್ದಾರೆ. ಇತರ ಸಾಮಾನ್ಯ ಕವಿಗಳು ವರ್ಣನೆಗಾಗಿಯೇ ವರ್ಣನೆಮಾಡುತ್ತ ಹೋಗಿ, ವರ್ಣನೆಯ ಮರಳುಗಾಡಿನಲ್ಲಿ ಕಾವ್ಯವಾಹಿನಿ ಬತ್ತಿಹೋಗಿರುವುದೇ ಹೆಚ್ಚು. ಆ ಅಷ್ಟಾದಶ ವರ್ಣನೆಗಳು ಯಾವುವೆಂದರೆ—

"ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ
ಕುಮಾರನಂ।
ಭೋರುಹ ವೈರಿ ಮಿತ್ರರುದಯಂ ಋತುನಂದನ-
ಮಂಬು ಸೀಧುಕಾಂ।
ತಾರತಿ ಚಿಂತೆ ಮಂತ್ರಿ ಚರ ಯಾನ ವಿರೋಧಿ
ಜಯಂಗಳೆಂಬಿವಂ।
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟು
ಮನೆಯ್ದೆ ಬಣ್ಣಿಪರ್" ‖

ಕವಿ ತಾನು ಆಯ್ದುಕೊಂಡ ಕಥೆಯ ತಡಿಕೆಯ ಮೇಲೆ ಕಾವ್ಯಲತೆಯನ್ನು ಹದಿನೆಂಟು ಕವಲುಗಳಾಗಿಯೇ ಹಬ್ಬಿಸಬೇಕೆಂದು ಲಾಕ್ಷಣಿಕರು ವಿಧಿಸಿದರು. ಮೊದಲು ಕಾವ್ಯ, ಆ ಮೇಲೆ ಲಕ್ಷಣಶಾಸ್ತ್ರ. ಆದಿ ಕಾವ್ಯ ರಾಮಾಯಣದಲ್ಲಿ ಹದಿನೆಂಟೇಕೆ, ಇಪ್ಪತ್ತೆಂಟು ಬಗೆಯ ವರ್ಣನೆಗಳೂ ದೊರೆಯಬಹುದೇನೊ. ರಾಮಾಯಣದಲ್ಲಿ ಸಮುದ್ರ ವರ್ಣನೆ ಕಾವ್ಯದ ಅವಶ್ಯ ಅಂಗವಾಗಿ ಬಂದರೆ, ಲಾಕ್ಷಣಿಕರ ಕಟ್ಟಳೆಗೆ ಕೈಮುಗಿದು ಹಲ ಕನ್ನಡ ಕವಿಗಳು ಈ ಹದಿನೆಂಟು ವರ್ಣನೆಗಳನ್ನು ತಮ್ಮ ಕಾವ್ಯಗಳಲ್ಲಿ ತುರುಕಲು ಪ್ರಯತ್ನಪಟ್ಟರು.

ಭಾಷೆ, ಶೈಲಿ, ವ್ಯಾಕರಣ ನಿಯಮಗಳು, ಛಂದಸ್ಸು—ಇವುಗಳ ಬಗ್ಗೆ ಹೀಗೆಯೇ ಬರೆಯಬೇಕೆಂಬ ಕಟ್ಟುಕಟ್ಟಳೆಗಳು ಏರ್ಪಟ್ಟು, ಕಾಲಕಾಲಕ್ಕೆ ಅವು ಮಾರ್ಪಾಟಾಗಿ ಹೊಸ ಕಟ್ಟುಕಟ್ಟಳೆಗಳು ರೂಢಿಗೆ ಬಂದಿವೆ. ಚಂಪೂ ಶೈಲಿ ಷಟ್ಪದಿ ಶೈಲಿಗೆ ಎಡೆಗೊಟ್ಟದ್ದು, ಶಕಟ ರೇಫ ರಳ ಕುಳಗಳು ಕ್ರಮಕ್ರಮವಾಗಿ ಕಣ್ಮರೆಯಾದದ್ದು ಈ ಮಾರ್ಪಾಟುಗಳಿಗೆ ನಿದರ್ಶನಗಳು. ಕಾವ್ಯದ ವಸ್ತು ಇಂಥದೇ ಆಗಿರಬೇಕೆಂಬ ಕಟ್ಟು ಯಾವುದೂ ಇದ್ದಂತೆ ಕಾಣಬರದಿದ್ದರೂ ಕನ್ನಡದಲ್ಲಿ ಜೈನ ಕವಿಗಳು ತೀರ್ಥಂಕರರ ಚರಿತ್ರೆಗಳನ್ನೂ, ವೀರಶೈವ ಕವಿಗಳು ಶಿವಶರಣರನ್ನೂ ಶಿವಭಕ್ತರನ್ನೂ ಶಿವಮಹಿಮೆಯನ್ನು ಸಾರುವ ಕಥೆಗಳನ್ನೂ ಬ್ರಾಹ್ಮಣ ಕವಿಗಳು ಭಾರತ ರಾಮಾಯಣ ಭಾಗವತಗಳನ್ನೂ ಕುರಿತು ಕಾವ್ಯರಚನೆ ಮಾಡುವುದು ಒಂದು ಸಂಪ್ರದಾಯವಾಗಿಯೇ ಪರಿಣಮಿಸಿತೆಂದು ಹೇಳಬಹುದು. ಯಾವ ಮತಪಂಥದ ಕವಿಯೇ ಆಗಲಿ, ಚಂಪೂ ಕಾವ್ಯವನ್ನೇ ಬರೆಯಲಿ, ಷಟ್ಪದಿ ಕಾವ್ಯವನ್ನೇ ಬರೆಯಲಿ, ಅಷ್ಟಾದಶ ವರ್ಣನೆಯ ನಿಯಮವನ್ನು ಮಾತ್ರ ಬಹುಮಟ್ಟಿಗೆ ಪಾಲಿಸಿಕೊಂಡು ಬಂದಿರುವುದು ಕಾಣಬರುತ್ತದೆ.

ಈ ಅಷ್ಟಾದಶ ವರ್ಣನೆಯ ನಿಯಮ ಕೆಲಮಟ್ಟಿಗೆ ಕಾವ್ಯದ ರೀತಿ, ನಿರೂಪಣ ಕ್ರಮ ಅಥವಾ ಶೈಲಿಗೆ ಸಂಬಂಧಪಟ್ಟಂತೆ ಕಂಡರೂ ಅದು ವಾಸ್ತವವಾಗಿ ಕಾವ್ಯ ಸಾಮಗ್ರಿಯಾಗಿಯೇ ಪರಿಣಮಿಸಿರುವುದು ಗೋಚರವಾಗುತ್ತದೆ. ವಸ್ತ್ರವನ್ನು ನೇಯುವಾಗ ಹತ್ತಿಯ ಒಡಲಿಗೆ ರೇಶಿಮೆ ಅಥವಾ ರೇಶಿಮೆಯ ಒಡಲಿಗೆ ಸರಿಗೆ ಅಂಚು ಸೆರಗುಗಳಿಗೆ ಅಲಂಕಾರವಾಗಬಹುದು; ಹಾಸುಹೊಕ್ಕುಗಳ ಎಳೆ ಎಳೆಯೊಂದಿಗೂ ಬೆರೆತು ಅಲಂಕರಣದ ಕಾರ್ಯವನ್ನು ಮೀರಿ ವಸ್ತ್ರ ಸಾಮಗ್ರಿಯ ಸ್ಥಾನವನ್ನು ಆಕ್ರಮಿಸಬಹುದು. ನೀರಿನಿಂದ ಮಾಡಿದ ಕಾಫಿಗೆ ರುಚಿಗೆಂದು ಹಾಲು ಬೆರಸುವ ಬದಲು ಹಾಲಿನಿಂದಲೇ ಕಾಫಿ ಮಾಡಿಕೊಳ್ಳಬಹುದಲ್ಲ—ಹಾಗೆ, ಅಷ್ಟಾದಶವರ್ಣನೆ

ಕಾವ್ಯದ ಸಾಮಗ್ರಿ ಅಥವಾ ವಸ್ತುವಿನ ಸ್ಥಾನವನ್ನೇ ಆಕ್ರಮಿಸಿ, ಎಷ್ಟೋ ಸಂದರ್ಭಗಳಲ್ಲಿ ಕಾವ್ಯಕ್ಕೋಸ್ಕರ ವರ್ಣನೆಯೋ ಅಥವಾ ವರ್ಣನೆಗೋಸ್ಕರ ಕಾವ್ಯವೋ ಎಂಬ ಭ್ರಾಂತಿಯನ್ನು ಹುಟ್ಟಿಸುವಂತಿರುತ್ತದೆ.

ಈ ಅಷ್ಟಾದಶ ವರ್ಣನೆಯ ನಿಯಮಪಾಲನೆ ಕವಿಸಮಯಕ್ಕೂ ಪುಟಕೊಟ್ಟಿತು. ಸಮುದ್ರವರ್ಣನೆ ಮಾಡಬೇಕೆಂಬ ನಿಯಮದ ಕೈಬೇಡಿಯ ಜೊತೆಗೆ ಅದನ್ನು ಹೇಗೆ ಮಾಡಬೇಕೆಂಬ ಸಮಯದ ಕಾಲ ಬೇಡಿಯೂ ಕೂಡಿಕೊಂಡಿತು; ಕವಿಯ ಸ್ವಾತಂತ್ರ್ಯ ಬಹುಮಟ್ಟಿಗೆ ಚಪ್ಪರದ ಬಳ್ಳಿಯಾಯಿತು, ಪಂಜರದ ಗಿಣಿಯಾಯಿತು.

"ತೆರೆ ನೊರೆ ಬುದ್ಬುದಂ ಸುೞಿ ಜಲಂ ತೆಗೆ
ಪೆರ್ಚುಗೆ ಗುಣ್ಪು ಘೋಷಣಂ |
ವರುಣನಗಂ ವಧೂಟಿ ಜನನಂ ಮಣಿಗಳ್
ವಡಬಾಗ್ನಿ ವಾಶ್ಚರಂ |
ಹರಿ ಮುೞುಯಾವೆ ನೇಳೆ ತೊೞಿಯಿೞಿಶತೆ
ನೀರ್ವೊಗೆವಭ್ರಮುರ್ವರಾ
ಪರಿವೃತಿ ನಾಗರಿಕ್ಕೆ ಬಗೆಗಾದೊಡೆ ಸೈತು
ಸಮುದ್ರ ವರ್ಣನಂ"
(ಮಲ್ಲಿಕಾರ್ಜುನ: ಸೂಕ್ತಿಸುಧಾರ್ಣವ)

ಈ ನಿಯಮ ನಿರ್ದೇಶದ ಪರಿಣಾಮವೇನಾಯಿತೆಂದರೆ, ಸ್ವಾನುಭವೈಕನಿಷ್ಠವಾದ ಪ್ರಕೃತಿ ವರ್ಣನೆ ಪರಾನುಕರಣ ದುಷ್ಟವೂ ನಿರ್ಜೀವ ಪದಾಡಂಬರಭೂಯಿಷ್ಠವೂ ಆಯಿತು. ಕೆಳಗಿನ ಎರಡು ಸಮುದ್ರವರ್ಣನೆಯ ಪದ್ಯಗಳಿಂದ ಈ ಅಂಶ ಸ್ಪಷ್ಟವಾಗುತ್ತದೆ:

"ಗಂಭೀರಸ್ಫಾರವೇಳಾ ಬಹಳ ಪರಿವೃತೋ-
ಲ್ಲೋಲಕಲ್ಲೋಲಮಾಲಾ |
ರಂಭಪ್ರೋಡ್ಡೀನಫೇನ ಪ್ರಬಳ ಜಲಚರೋ-
ಲ್ಲುಂಠಪಾಠೀನಶುಂಭ |
ತ್ಕುಂಭೀರಾಭೀಳನಕ್ರಪ್ರಕರಕಮಠನೀರೇಭ
ರತ್ನಪ್ರವಾಳೋ |
ಜ್ಜೃಂಭತ್ಪ್ರೋದ್ಭಾಸಿವೀಚೀನಿಚಯ ಘನಘನಾ-
ರಾವರೌದ್ರಂ ಸಮುದ್ರಂ ||
(ಶೂದ್ರಕ: ಕಾವ್ಯಸಾರ)

"ಬಲವೈರಿಸ್ಫಾರ ವಜ್ರಾಯುಧ ಭಯ
ಚಕಿತೋದ್ಧೂತ ಮೈನಾಕಗೋತ್ರಾ |
ಚಲಪಕ್ಷತ್ರಾಯಿ ಸಿಂಧುಪ್ರಿಯತಮನತಿ
ಗಂಭೀರನಂತರ್ನಿವಿಷ್ಟಾ |
ಖಿಲಲೋಕಂ ನಕ್ರಚಕ್ರಸ್ಫುರದುರು-
ತರಯಾದಶ್ಚರಾಧ್ಯಾಸಿತ ಪ್ರೋ |
ತ್ಕಲಿತಾಂಭಃ ಕುಂಭಿಕುಂಭೀನಸ
ಮಕರಕರಕ್ಷೋಭ ರೌದ್ರಂ ಸಮುದ್ರಂ ||
(ದುರ್ಗಸಿಂಹ: ಪಂಚತಂತ್ರ)

ಸಹಜಕವಿ ಸ್ವಾನುಭವದಿಂದ ಬರೆಯುವಾಗ ನಿಯಮವನ್ನು ಪಾಲಿಸಿಯೂ ಸೊಗಸು ತರಬಲ್ಲನು. ನಿಯಮಪಾಲನೆ ಎಲ್ಲ ಕವಿಗಳಿಗೂ ಎಲ್ಲ ಸಂದರ್ಭಗಳಲ್ಲಿಯೂ ಅಡ್ಡಿಯಾಗಿಯೇ ನಿಲ್ಲಬೇಕಾಗಿಲ್ಲ. ನಿಯಮಪಾಲನೆ ಸಾಮಾನ್ಯನಿಗೆ ಬೆದರಿಸುವ ಅಡ್ಡಗೋಡೆಯಾದರೆ ಬಲಶಾಲಿಯನ್ನು ಹಾರಲು ಹುರಿದುಂಬಿಸುವ ಪ್ರೇರಕಶಕ್ತಿಯೂ ಆಗಬಹುದು. ಸ್ವೋಪಜ್ಞನಾದ ಕವಿ ಅಷ್ಟಾದಶ ವರ್ಣನೆಯ ಅಷ್ಟ ದಿಗ್ಬಂಧನಕ್ಕೆ ಒಳಗಾಗಿ ಕಾವ್ಯರಚನೆಮಾಡುವಾಗಲೂ, ಹೊಸ ಹೊಸ ಕಲ್ಪನೆಗಳನ್ನು ಮುಂದಿಟ್ಟು ರಂಜಿಸಬಹುದು. ಇಂಥ ಮನೋರಂಜಕಗಳಾದ ವರ್ಣನೆಗಳು ಕನ್ನಡ ಸಾಹಿತ್ಯದಲ್ಲಿ ವಿಪುಲವಾಗಿವೆ. ಆ ವರ್ಣನಾವಿಲಾಸ ವೈವಿಧ್ಯವನ್ನೆಲ್ಲಾ ಪರಿಚಯ ಮಾಡಿಕೊಡುವುದು ಸಣ್ಣಲೇಖನದ ವ್ಯಾಪ್ತಿಗೆ ಮೀರಿದ್ದು. ಕೆಲವು ನಿದರ್ಶನಗಳನ್ನು ಗಮನಿಸಿ, ಅಷ್ಟಾದಶವರ್ಣನೆಯ ನಿಯಮದಿಂದ ಸಾಹಿತ್ಯಕ್ಕೆ ಆಗಿರುವ ಉಪಕಾರವನ್ನೂ ನೆನೆಯಬಹುದು.

ಕೆಳಗಿನ ಪದ್ಯದ ಊಹಾಚಮತ್ಕಾರವು ಮನೋಜ್ಞವಾಗಿದೆ:

"ಬೆಟ್ಟದ ಕಲ್ಲ ಸಂದಿಯೊಳಗೊಯ್ಯನೆ ಪೊಣ್ಮುವ ನಿರ್ಝರಕ್ಕೆ ಕ | ಯ್ಯಿಟ್ಟು ಪಿಪಾಸೆಯಿಂದಲರೆವಿೞಲಿತಲೋಚನನಾದ ದಂತಿಯಂ | ತೊಟ್ಟನೆ ಮುಟ್ಟೆ ಕಂಡದರ ಮೈನೆವಿಲಾಸೆಗೆ ಜಾತಿವೈರಮಂ | ಬಿಟ್ಟೊಳಪೊಕ್ಕು ಪಟ್ಟಿತು ಬಿಸಿಲ್ಗಗಿದೊಂದು ಗಜಾರಿ ಬಿಚ್ಚತಂ ||
(ಸೂಕ್ತಿ ಸುಧಾರ್ಣವ)

ಬಿಸಿಲಿನ ಬೇಗೆಗೆ ಬಾಯಾರಿದ ಆನೆ ಬೆಟ್ಟದ ಝರಿಗೆ ಸೊಂಡಿಲು ನೀಡಲು, ಬಿಸಿಲಿನಲ್ಲಿ ಬಳಲಿದ್ದ ಸಿಂಹವು ಆನೆಯ ದೊಡ್ಡ ನೆಳಲನ್ನು ಕಂಡು, ಸಹಜವಾದ ಜಾತಿವೈರವನ್ನೂ ತ್ಯಜಿಸಿ ಆ ನೆಳಲಿನಲ್ಲಿ ಮಲಗಿತಂತೆ! ಅಷ್ಟು ಉರಿ ಬೇಸಗೆ.

"ನಿಳಯದ ಸೂರ್ಗಳೊಳ್ ತರದೆ ಮುತ್ತಿನ ಸೂಸಕದಂತೆ, ನಂದನಂ | ಗಳ ತರುಪತ್ರದೊಳ್ ಮುಕುಳಮಂಜರಿಯಂತೆ, ಚರತ್ಪುರಾಂಗನಾ | ವಳಿಯ ಕರುಳ್ಗಳೊಳ್ ತಳದ ಸೇಸೆಗಳಂತೆಳಪುಲ್ಗಳೊಳ್ ಘನೋಪಳಕುಳದಂತೆ ತೋಱುದುವು ನವ್ಯಘನಚ್ಯುತ ತೋಯಬಿಂದುಗಳ್ ||
(ರುದ್ರಭಟ್ಟ: ಜಗನ್ನಾಥ ವಿಜಯ)

ಮಳೆಗಾಲದಲ್ಲಿ ಮಳೆಯ ಹನಿಗಳು ಎಲ್ಲೆಲ್ಲಿ ನೆಲೆಸಿ ಹೇಗೆ ಹೇಗೆ ಕಾಣಬರುತ್ತವೆಯೆಂಬ ಮೇಲಿನ ವರ್ಣನೆಯಲ್ಲಿ ಕವಿಯ ಸೂಕ್ಷ್ಮನಿರೀಕ್ಷೆಯ ಸೊಗಸು ಮೆಚ್ಚತಕ್ಕದ್ದಾಗಿದೆ.

ಕನ್ನಡ ಸಾಹಿತ್ಯದಲ್ಲಿ ಹಾಸ್ಯರಸ ಬಹು ಅಪೂರ್ವ. ಈ ಸಂಭೋಗ ಶೃಂಗಾರದ ವರ್ಣನೆಯಲ್ಲಿನ ಹಾಸ್ಯಚಮತ್ಕೃತಿ ಚಿತ್ತಾಕರ್ಷಕವಾಗಿದೆ:

"ನೆಲೆವೊಲೆಯೊತ್ತೆ ವಾತಮಧರಾಮೃತ
ಸೇವನೆಯಿಂದೆ ಪಿತ್ತಮು ।
ಗ್ಗಲಿಸಿದಲಂಪಿನಿಂದಮಿರುಳೆಂಟು ಪಗಲ್
ಪದಿನಾಱುಗೊಳ್ವ ಕೋ ।
ಟಲೆಯೊಳೆ ಪೋಗುಗುಂ ಕಫಮುದಕ್ಕಱವೆಜ್ಜರ
ಪೇೞ್ದ ಶಾಂತಿ ಪಿ ।
ಪ್ಪಲಿ ಮೆಣಸೇಂ ತ್ರಿದೋಷಹರಣಕ್ಕಬಲಾಜನ
ಸೇವೆ ಸಾಲದೆ" ॥

ಸೂರ್ಯೋದಯ ಸೂರ್ಯಾಸ್ತಗಳನ್ನು ವರ್ಣಿಸುವ ಅನೇಕ ಸಂದರ್ಭಗಳಲ್ಲಿ ಪಂಪ ಕುಮಾರವ್ಯಾಸರು ತೋರಿಸುವ ಔಚಿತ್ಯ ಜ್ಞಾನವೂ ನವೀನತೆಯೂ ಇತರ ಕವಿಗಳಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಕರ್ಣನ ಯುದ್ಧ ಮೊದಲಾದಾಗ "ಏಱುದಂ ರವಿ ಪೂರ್ವಾಚಲಮಂ ನಿಜಾತ್ಮಜನ ಗೆಲ್ದ ಗ್ರಾಜಿಯಂ ನೋೞ್ಪವೋಲ್" ಎಂಬುದು ಪಂಪನ ಇಂಥ ಸಂಗ್ರಹವಾದ ಸಂದರ್ಭೋಚಿತ ವರ್ಣನೆಗಳಲ್ಲಿ ಒಂದು. ಕರ್ಣನು ಮಡಿದಾಗ,

"ಪಱಿಯಿಗೆಯನುಡುಗಿ ರಥಮಂ
ಪೆಱಮನೆಸಗಲ್ಕೆವೇೞ್ದು ಸುತಶೋಕದ ಪೊಂ ।
ಪುಱುಯೊಳ್ ಮೆಯ್ಯುಱುಯದೆ ನೀ
ರಿಱುವಂತೆವೊಲಿರ್ದನಪರ ಜಳಧಿಗೆ ದಿನಪಂ ॥"


ಪಂಪನ ಈ ಚಂದ್ರೋದಯದ ವರ್ಣನೆಯನ್ನು ಬಗೆದು ಭಾವಿಸಿ ಮಾರುಹೋಗದ ರಸಿಕನಾವನು?

"ಅದೊಂದಿನಿಸು ಬೇಗದಿ ನವಜಪಾಪ್ರಸೂನಾಭಮಾ ।
ಯ್ತದೊಂದಿನಿಸು ಬೇಗದಿಂ ಕನಕ ಕುಂಭ
ದಂತಾಯ್ತು ಮ ।
ತ್ತದೊಂದಿನಿಸು ಬೇಗದಿಂ ಮೃದು ಮೃಣಾಳ
ಸಂಕಾಶ ಮಾ ।
ಯ್ತದೇಂ ಬೞಕೆ ಬಿಂಬದುಜ್ಜಳಿಕೆಯೋ
ಸುಧಾ ಸೂತಿಯಾ ॥

ಪೂರ್ಣಚಂದ್ರನು ಹುಟ್ಟಿದ ಕೂಡಲೆ ಮತ್ತು ಆ ಬಳಿಕ ತೋರುವ ವರ್ಣವ್ಯತ್ಯಾಸಗಳನ್ನು ಇಷ್ಟು ವಾಸ್ತವಿಕವಾಗಿ, ವರ್ಣವತ್ತಾಗಿ ವರ್ಣಿಸುವುದು ಪಂಪನಂಥ ಪ್ರತಿಭಾಶಾಲಿಯಾದ ಕವಿಗೆ ಮಾತ್ರ ಸಾಧ್ಯ.

ಮೇಲ್ಕಂಡ ನಿದರ್ಶನಗಳಿಂದ, ಒಂದು ಅಂಶ ವೇದ್ಯವಾಗುತ್ತದೆ: ಇಂಥದನ್ನೇ ವರ್ಣಿಸಬೇಕೆಂಬ 'ಅಷ್ಟಾದಶ ವರ್ಣನೆ'ಯಂಥ ಕಟ್ಟುನಿಟ್ಟಾದ ನಿಯಮಗಳು ಒಟ್ಟಿನ ಮೇಲೆ ಕಾವ್ಯ ಸೌಂದರ್ಯ ಸಾಧಕಗಳಾಗಲಾರವು. ಇದರಿಂದ ಈಗ ನಾವು ಒಂದು ಪಾಠ ಕಲಿಯಬೇಕಾಗಿದೆಯೆಂದು ತೋರುತ್ತದೆ. ಇಂದು ಸಾಹಿತ್ಯಕ್ಷೇತ್ರದಲ್ಲಿ ಇಂಥಿಂಥ ವಿಷಯವನ್ನೇ ಕುರಿತು ಬರೆಯಬೇಕು, ಹಾಗೆ ಬರೆದರೇ 'ಪ್ರಗತಿಶೀಲ' ಎಂಬ ಭ್ರಮಾಜನ್ಯ ವಿಧಿ-ನಿಷೇಧಗಳು ರೂಪಗೊಳ್ಳತೊಡಗಿವೆ. ಗಟ್ಟಿಗನಾದ ಸಾಹಿತಿ ಹೇಗೂ ಬರೆಯಬಲ್ಲೆ ಎಂದು ಸಾವಾಲನ್ನು ಅಂಗೀಕರಿಸಿ ಒಂದು ಒಳ್ಳೆಯ ಕೃತಿಯನ್ನು ಹೊರತರಬಹುದು. ಆದರೆ ಈ ಬಗೆಯ ವಿಧಿನಿಷೇಧಗಳಿಂದ ಸಾಹಿತ್ಯರಾಶಿಯ ಮೇಲೆ ಒಳ್ಳೆಯ ಪರಿಣಾಮವುಂಟಾದೀತೇ ಎಂಬುದು ವಿಚಾರಮಾಡಬೇಕಾದ ಪ್ರಶ್ನೆ. ಸ್ವಾತಂತ್ರ್ಯಪ್ರಿಯರಾದ ಕವಿಗಳು ಅವಶ್ಯ ಕಂಡಾಗ ವ್ಯಾಕರಣ ಛಂದೋನಿಯಮಗಳನ್ನೇ ಮೀರಬಹುದಾಗಿರುವಾಗ, ಕಾವ್ಯದಲ್ಲಿ ವರ್ಣನೀಯಾಂಶಗಳನ್ನೂ ಪ್ರತಿಪಾದ್ಯ ವಿಷಯಗಳನ್ನೂ ಕುರಿತು ಅವರಿಗೆ ವಿಧಿಸತೊಡಗುವುದು ಸಾಧುವೇ, ಸಾಹಿತ್ಯದ ಬೆಳವಣಿಗೆಗೆ ಲಾಭದಾಯಕವೇ ಎಂಬುದನ್ನೂ ಯೋಚಿಸಬೇಕಾಗಿದೆ.

ಪ್ರತಿಯೊಂದು ಯುಗವೂ ತನ್ನ ಶ್ರೇಷ್ಠ ಕವಿಗಳನ್ನು ತನ್ನ ಅಂತಸ್ಸತ್ತ್ವದಿಂದ ನಿರ್ಮಿಸಿಕೊಳ್ಳುತ್ತದೆ. ಕೆಲವು ಕಾಲದ ವರೆಗೆ ಅವರದೇ ಪಂಥವೊಂದು ನಿರ್ಮಾಣವಾದರೂ ಆಗಬಹುದು; ಆಗುತ್ತದೆ. ಲಾಕ್ಷಣಿಕರು ಆ ಪಂಥದ ಲಕ್ಷಣಗಳನ್ನು ನಿರ್ದೇಶಿಸಬೇಕೇ ಹೊರತು ಅವನ್ನು ಎಲ್ಲ ಕಾಲಕ್ಕೂ ಎಲ್ಲರ ಮೇಲೂ ಹೊರಿಸಹೋಗಬಾರದು.



★ ಟ್ಯೂನೀಷಿಯದ ಕ್ಷೋಭೆ ★

(ಲೇಖಕರು: ಶ್ರೀ ಕೆ. ವಾಸುದೇವ ಕಿಣಿ, ಬಿ. ಎ., ಎಲ್. ಟಿ., ಮಂಗಳೂರು)

ಹತ್ತೊಂಭತ್ತನೆಯ ಶತಮಾನದಲ್ಲಿ ಅಜ್ಞಾತಖಂಡವಾದ ಆಫ್ರಿಕವು ಹೆಚ್ಚಿನ ಮಟ್ಟಿಗೆ ಶೋಧಿಸಲ್ಪಟ್ಟಿತು. ಅಂದಿನಿಂದ ಯುರೋಪಿನ ಜನಾಂಗದವರು ಅವನ್ನು ತಮ್ಮೊಳಗೆ ಹಂಚಿಕೊಳ್ಳುವ ಹಂಚಿಕೆಯನ್ನು ಮಾಡಿಕೊಂಡವು. ಆಫ್ರಿಕಾ ಖಂಡವು ಕೈಗಾರಿಕೆಗಳಿಗೆ ಬೇಕಾದ ಅನೇಕ ತರದ ಕಚ್ಚಾ ಮಾಲುಗಳ ಸಂಪತ್ತಿನಿಂದ ಕೂಡಿದ ಪ್ರದೇಶವೆಂದು ಯುರೋಪಿನ ಜನಾಂಗಗಳು ತಿಳಿದವು. ಯುರೋಪಿನ ಹಲವು ರಾಷ್ಟ್ರದವರಿಗೆ ಜನಸಾಂಧ್ರತೆಯ ಒಂದು ಸಮಸ್ಯೆಯೂ ಪೀಡಿಸುತಿತ್ತು. ಆಫ್ರಿಕದಲ್ಲಿ ಮಾತ್ರ ಯುರೋಪಿಯನರಿಗೆ ನಿವಾಸಕ್ಕೆ ಸಾಕಾದಷ್ಟು ಭೂಮಿ ಇದ್ದಿತು. ಅದರ ಸಾಮಿಪ್ಯವೂ ಅನುಕೂಲವಾಗಿತ್ತು. ಯುರೋಪಿನ ಪ್ರತಿಯೊಂದು ರಾಷ್ಟ್ರದ ವರ್ತಕರೂ ಆ ಖಂಡದ ಸಂಪತ್ತಿನಲ್ಲಿ ಆದಷ್ಟು ದೊಡ್ಡ ಪಾಲನ್ನು ಕಸಿದುಕೊಳ್ಳಲು ಪ್ರಯತ್ನಿಸಿದರು. ಅವರಿಗೆ ಅಲ್ಲಿ ಮೂಲನಿವಾಸಿಗಳೊಡನೆ ವ್ಯಾಪಾರ ನಡೆಸಿ, ಬಹಳ ಲಾಭವನ್ನು ಸುಲಭವಾಗಿ ಸಂಪಾದಿಸಲು ಸಂದರ್ಭವು ದೊರಕಿತು.

ಆಫ್ರಿಕದ ಹಂಚುವಿಕೆಯ ಹೋರಾಟದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಹೆಚ್ಚಿನ ಭಾಗ ಲಭಿಸಿತು. ಆಫ್ರಿಕದ ಸುಮಾರು ೧/೩ ಭಾಗವು ಫ್ರಾನ್ಸಿನ ಕೈಸೇರಿತು. ಸುಮಾರು ಅಷ್ಟೇ ವಿಸ್ತಾರವಾದ ಭಾಗವು ಬ್ರಿಟಿಷರ ವಶವಾಯಿತು. ಆಫ್ರಿಕದ ವಾಯುವ್ಯ ಭಾಗದಲ್ಲಿ ಮೊರಕ್ಕೊ, ಅಲ್ಜೀರಿಯಾ ಮತ್ತು ಟ್ಯೂನಿಷಿಯಾ ಎಂಬ ಮೂರು ರಾಜ್ಯಗಳು ಫ್ರೆಂಚರ ಅಧೀನ ಇರುತ್ತವೆ. ಈ ಮೂರು ರಾಜ್ಯಗಳಲ್ಲಿ ಟ್ಯೂನೀಷಿಯವು ಅಲ್ಜೀರಿಯಕ್ಕೂ ಟ್ರಿಪೋಲಿ ಎಂಬ ರಾಜ್ಯಕ್ಕೂ ನಡುವಿದೆ. ಟ್ಯೂನೀಷಿಯವು ೧೮೮೧ರಲ್ಲಿ ಫ್ರೆಂಚರ ಕೈಸೇರಿತು. ಇದೊಂದು ಚಿಕ್ಕ ರಾಜ್ಯವಾದರೂ ಫ್ರೆಂಚರ ಆಳ್ವಿಕೆಯು ಆರಂಭವಾದಂದಿನಿಂದ ಸರ್ವತೋಮುಖವಾದ ಅಭಿವೃದ್ಧಿಯನ್ನು ಪಡೆದಿದೆ ಎಂದು ಫ್ರೆಂಚರು ಹೇಳುತ್ತಾರೆ. ಇದರ ವಿಸ್ತೀರ್ಣವು ೪೮,೩೦೦ ಚದರ ಮೈಲು ಮಾತ್ರ. ಟ್ಯೂನೀಷಿಯದ ಸನ್ನಿವೇಶವು ಮಧ್ಯ ಮೆಡಿಟರೇನಿಯನ್ ರಾಷ್ಟ್ರಗಳೊಡನೆ ವ್ಯವಹಾರಕ್ಕೆ ಅನುಕೂಲವಾಗಿದೆ.

ಈ ಚಿಕ್ಕ ರಾಜ್ಯವಾದ ಟ್ಯೂನೀಷಿಯದಲ್ಲಿ ಕಳೆದ ಐದಾರು ವರ್ಷಗಳಿಂದ ಮಹತ್ವದ ಒಂದು ರಾಷ್ಟ್ರೀಯ ಜಾಗ್ರತಿಯು ಉದ್ರೇಕಗೊಂಡಿದೆ. ರಾಷ್ಟ್ರೀಯತೆಯೊಡನೆ ಸ್ವಾತಂತ್ರ್ಯಾಭಿಲಾಷೆಯೂ ಜನ್ಮತಾಳಿದೆ. ಅಲ್ಲಿಯ ಜನರು ಫ್ರೆಂಚರ ಸಾಮ್ರಾಜ್ಯಶಾಹಿಯನ್ನು ಮುರಿಯಲು ಸರ್ವ ಸಿದ್ಧತೆಗಳನ್ನು ಮಾಡುತ್ತಾರೆ. ಎಲ್ಲಾ ತರದ ತ್ಯಾಗಮಾಡಿ ಸ್ವತಂತ್ರವನ್ನು ಪಡೆಯಲೇಬೇಕೆಂದು ಅವರು ನಿರ್ಧರಿಸಿರುವರು. ಇಲ್ಲಿಯ ಭೀಕರ ಚಳವಳದ ಬೆಸೆಯಿಂದ ಫ್ರೆಂಚ್ ಸರಕಾರಕ್ಕೆ ನೂತನ ಸಮಸ್ಯೆಯೊಂದು ಎದುರಿಸಿದೆ. ಟ್ಯೂನೀಷಿಯದ ಜನರಲ್ಲಿ ಕ್ರಾಂತಿ ವಿಚಾರಗಳು ಹಬ್ಬುತ್ತಿವೆ. ಅವರೆಲ್ಲಾ ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಎಂಬ ಸೊಲ್ಲುಗಳಿಂದ ರಣಗರ್ಜನೆ ಮಾಡುತ್ತಾರೆ. ಈ ಮೂರು ಮಂತ್ರಗಳಿಂದ ಫ್ರೆಂಚರ ಆಳ್ವಿಕೆಯನ್ನು ಕೊನೆಗೊಳಿಸಬೇಕೆಂದು ಅವರು ನಿರ್ಧಾರಮಾಡಿರುವರು. ಈ ಮೂರು ಮಾತುಗಳು ಫ್ರೆಂಚರಿಗೆ ಸ್ವಾತಂತ್ರ್ಯ ತಂದಿದ್ದವು. ಆದರೆ ಈಗ ಫ್ರೆಂಚರೇ ಈ ಮಾತುಗಳನ್ನು ಆಡುವ ರಾಷ್ಟ್ರವೀರರಿಗೆ ಹಿಂಸಿಸುತ್ತಾರೆ. ಟ್ಯೂನೀಷಿಯದಲ್ಲಿ ನಿಯೋ ಡಸ್ಟೂರ್ ಎಂಬ ಒಂದು ರಾಷ್ಟ್ರಪಕ್ಷವು ಜನ್ಮತಾಳಿದೆ. ಇದು ಫ್ರೆಂಚರು ಟ್ಯೂನೀಷಿಯವನ್ನು ತೊಲಗಿ ಹೋಗಬೇಕೆಂದು ಸಾರುತ್ತದೆ.

ಟರ್ಕಿಯ ಸಾಮ್ರಾಜ್ಯವು ಉನ್ನತಿಯ ಶಿಖರವನ್ನೇರಿದ ಸಮಯದಲ್ಲಿ ಟ್ಯೂನೀಷಿಯವು ಆ ಸಾಮ್ರಾಜ್ಯಕ್ಕೆ ಒಳಗಾಯಿತು. ಟರ್ಕಿಯು ಅವನತಿಯನ್ನು ಪಡೆದಾಗ ಟ್ಯೂನೀಷಿಯವು ಸ್ವಾತಂತ್ರ್ಯವನ್ನು ಪಡೆಯಿತು. ಟರ್ಕಿಯ ಸುಲ್ತಾನನು ಟ್ಯೂನೀಷಿಯಾ ಪ್ರಾಂತ್ಯವನ್ನು ಆಳಲು ಬಿಟ್ಟ ಅಧಿಕಾರಿಯನ್ನು ನೇಮಿಸಿ ಅವನಿಗೆ 'ಬೇ' ಎಂಬ ಬಿರುದನ್ನು ಕೊಟ್ಟಿದ್ದನು. ಈ ಹೊತ್ತಿಗೂ ಕೂಡ ಟ್ಯೂನೀಷಿಯವು ಹೆಸರಿಗೆ ಮಾತ್ರ ಒಬ್ಬ ಬೇ ಎಂಬವನ ಆಳ್ವಿಕೆಯೊಳಗಿದೆ. ಅವನು ಮಾತ್ರ ಫ್ರೆಂಚರ ವಿದೇಶೀ ಮಂತ್ರಿಯ ಆಜ್ಞೆಗಳಿಗೆ ಸರಿಯಾಗಿ ವರ್ತಿಸಬೇಕು. ಫ್ರೆಂಚರು ಟ್ಯೂನೀಷಿಯವನ್ನು ಆಳಲು ತಮ್ಮ ಒಬ್ಬ ರೆಸಿಡೆಂಟ್ ಜನರಲ್ ಎಂಬವನನ್ನು ನೇಮಿಸಿ ಹನ್ನೊಂದು ಮಂತ್ರಿಗಳನ್ನು ನೇಮಿಸಿದರು. ಇವರಲ್ಲಿ ಎಂಟು ಮಂದಿ ಫ್ರೆಂಚರು; ಮೂರು ಮಂದಿ ಟ್ಯೂನೀಷಿಯದವರು. ಆ ರೆಸಿಡೆಂಟನು ಟ್ಯೂನೀಷಿಯವನ್ನು ಹತ್ತೊಂಭತ್ತು ಜಿಲ್ಲೆಗಳಾಗಿ ವಿಂಗಡಿಸಿ ಸರಕಾರವನ್ನು ನಡಿಸಿದನು. ಪ್ರತಿಯೊಂದು ಜಿಲ್ಲೆಯನ್ನಾಳಲು ಒಬ್ಬ ಫ್ರೆಂಚ್ ಅಧಿಕಾರಿಯನ್ನೇ ನೇಮಿಸಲಾಯಿತು. [illegible]ರ

ಕಾರವೆಲ್ಲಾ ಫ್ರೆಂಚರಿಂದಲೇ ಸಾಗಿತು. ಸಾಧಾರಣ ೨೫೦,೦೦೦ ಫ್ರೆಂಚರು ಮೂರುವರೆ ಮಿಲಿಯ ದೇಶಿಯರನ್ನು ಆಳಿದರು. ಸಾಧಾರಣ ೭೦ ವರ್ಷಗಳ ತನಕ ಫ್ರೆಂಚರು ದಬ್ಬಾಳಿಕೆ ಯಿಂದಲೂ ಪೀಡಿಸಿಯೂ ಟ್ಯೂನೀಷಿಯವನ್ನು ತಮ್ಮ ವಶ ವಿಟ್ಟು ದೇಶದ ಸಂಪತ್ತನ್ನು ಹೀರಿಕೊಂಡರು.

ಟ್ಯೂನೀಷಿಯವು ಚಿಕ್ಕ ರಾಜ್ಯ; ಇಲ್ಲಿ ಅಪಾರವಾದ ಖನಿಜ ಸಂಪತ್ತಿದೆ. ಲವಣ, ಸೀಸ, ಸತುವು, ಕಬ್ಬಿಣದ ಅದುರು ಮತ್ತು ಸೀಮೆಯೆಣ್ಣೆ ಇಲ್ಲಿ ಯಥೇಷ್ಟ ದೊರೆಯು ತ್ತವೆ. ಲವಣದ ಮಟ್ಟಿಗೆ ಜಗತ್ತಿನಲ್ಲಿ ಇದೇ ಪ್ರಥಮ ರಾಜ್ಯ ವೆನ್ನಬಹುದು. ಈ ರಾಜ್ಯವು ವ್ಯವಸಾಯದ ರಾಜ್ಯವಾ ಗಿದೆ. ಇಲ್ಲಿ ಗೋದಿ, ಯವೆಗೋದಿ, ದ್ರಾಕ್ಷೆ, ಇಪ್ಪೆ ಮೊದ ಲಾದ ಮೆಡಿಟರೇನಿಯನ್ ಪ್ರಾಂತ್ಯದ ಬೆಳೆಗಳಾಗುತ್ತವೆ. ಆರ್ಥಿಕ ದೃಷ್ಟಿಯಿಂದ ಟ್ಯೂನೀಷಿಯದ ಜನರು ಬಲು ಬಡ ಸ್ಥಿತಿಯಲ್ಲಿರುವರು. ಅವರ ಸರಾಸರಿ ಆದಾಯ ವರ್ಷಕ್ಕೆ ರೂಪಾಯ ೧೫೦ಕ್ಕೆ ಮೀರಿಲ್ಲ. ಈ ದಾರಿದ್ರ್ಯದೊಡನೆ ಟ್ಯೂ ನೀಷಿಯದಲ್ಲಿ ರೋಗರುಜೆಗಳು ತುಂಬಾ ಹಬ್ಬಿಕೊಂಡಿವೆ. ಹೆಚ್ಚಿನ ಜನರು ನಿರಕ್ಷರಕುಕ್ಷಿಗಳಾಗಿರುವರು. ಶ್ರೀಮಂ ತರು ಕೆಲವರು ಮಾತ್ರ; ಬಡವರು ಹಲವರಿದ್ದಾರೆ. ಇಷ್ಟಾ ದರೂ ಆ ಜನರಿಗೆ ತಮ್ಮ ಚರಿತ್ರೆಯಲ್ಲಿಯೂ, ಮತದಲ್ಲಿಯೂ ತಮ್ಮ ಸಂಸ್ಕೃತಿಯಲ್ಲಿಯೂ ಬಹಳ ಅಭಿಮಾನವಿದೆ. ಫ್ರೆಂ ಚರು ತಮ್ಮ ಉದ್ಧಾರಕ್ಕಾಗಿ ಸಾಧಿಸುವರಲ್ಲದೇ ಪ್ರಜೆಗಳ ಅಭಿವೃದ್ಧಿಗೆ ಯಾವ ಯೋಜನೆಗಳನ್ನೂ ಕೈಕೊಳ್ಳಲಿಲ್ಲ. ಕಳೆದ ೭೦ ವರ್ಷಗಳಿಂದ ಟ್ಯೂನೀಷಿಯದ ಜನರ ಸ್ಥಿತಿಯು ದಿನೇ ದಿನೇ ನಿಕೃಷ್ಟವಾಗುತ್ತ ಬರುತ್ತಿದೆ. ಬಟ್ಟೆಯಿಲ್ಲದ ಹಿಟ್ಟಿಗಿಲ್ಲದ ನಿವಾಸಕ್ಕಿಲ್ಲದ ಜನರ ಸಂಖ್ಯೆಯು ಅಲ್ಲಿ ಅಧಿ ಕವಾಗುತ್ತಿದೆ. ವೈದ್ಯ ಸಹಾಯವು ಪುರಾತನ ಕಾಲದ್ದಾಗಿ ಉಳಿದುದರಿಂದ ಪ್ಲೇಗ್ ಮತ್ತು ಗುಪ್ತ ರೋಗಗಳನೇಕ ಚಿಕಿತ್ಸೆಯಿಲ್ಲದೇ ಹಾವಳಿಮಾಡುತ್ತಿವೆ. ರಾಜಧಾನಿಯಾದ ಟ್ಯೂನಿಸ್ ನಗರದಲ್ಲಿ ೨॥ ಮಿಲಿಯ ಜನರಿದ್ದರೂ ಅಲ್ಲಿ ೫೦ ಮಂದಿ ವೈದ್ಯರು ಮಾತ್ರ ಇರುವರು. ನೂರರಲ್ಲಿ ೮೪ ಜನರಿಗೆ ಓದುಬರಹದ ಗಂಧವಿರುವುದಿಲ್ಲ.

ವರ್ಷಗಳು ಕಳೆದು ಹೋದ ಹಾಗೆ ಅಲ್ಲಿಯ ಜನರ ಆರ್ಥಿಕ ಸ್ಥಿತಿಯು ಅವನತಿಗೆ ಇಳಿಯುತ್ತದೆ. ವ್ಯವಸಾ ಯವು ಮಣ್ಣು ನಿಸ್ಸಾರವಾಗಿ ಒಂದೂ ನೀರಾವರಿಯ ಏರ್ಪಾ ಡು ಇಲ್ಲದೆಯೂ ಲಾಭಕರವಾಗಿರುವುದಿಲ್ಲ. ಫ್ರೆಂಚರು ತಮ್ಮ ಪ್ರಜೆಗಳ ಅಭ್ಯುದಯಕ್ಕಾಗಿ ಹೆಚ್ಚಿನ ಯಾವ ಯೋ ಜನೆಗಳನ್ನು ಕೈಕೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದ ಟ್ಯೂ ನೀಷಿಯದ ಜನರಲ್ಲಿ ರಾಜಕೀಯ ಮತ್ತು ಆರ್ಥಿಕ ಕ್ರಾಂತಿ

ಮಾಡಬೇಕೆಂಬ ಹಟ ಹುಟ್ಟಿದೆ. ಟ್ಯೂನೀಷಿಯದಲ್ಲಿ ಫ್ರೆಂಚರು ಎಲ್ಲಾ ರಾಜಕೀಯ ಚಳವಳವನ್ನು ತಮ್ಮ ದಬ್ಬಾಳಿಕೆಯಿಂದ ನಾಶಮಾಡಲು ಯತ್ನಿಸಿದರು. ಆದರೂ ಅಲ್ಲಿ ನಿಯೋ ದಸ್ತೂರ್ ಪಕ್ಷವೊಂದು ತಲೆಯೆತ್ತಿದೆ. ಈ ಪಕ್ಷದ ನಾಯಕನು ಬೂರ್‌ಬಲ್ಲಾ ಎಂಬವನು. ಇವನು ಹೋದಲ್ಲೆಲ್ಲಾ ಫ್ರೆಂಚರ ಅತ್ಯಾಚಾರಗಳ ಪ್ರಚಾರಮಾಡಿ ತನ್ನ ಜನರ ಅಭಿಪ್ರಾಯಗಳನ್ನೂ ಸಂಕಷ್ಟಗಳನ್ನೂ ತನ್ನ ಜನರ ರಾಷ್ಟ್ರೀಯ ಮಹತ್ವಾಕಾಂಕ್ಷೆಗಳನ್ನೂ ಸಾರುತ್ತಾನೆ. ಆಸ್ಯದ ಅರಾಬ್ ರಾಷ್ಟ್ರಗಳೆಲ್ಲಾ ಈ ಪಕ್ಷಕ್ಕೆ ಸಹಾಯಮಾಡುತ್ತವೆ. ಆ ರಾಷ್ಟ್ರಗಳ ಪತ್ರಿಕೆಗಳೆಲ್ಲಾ ಫ್ರೆಂಚರ ಆಳ್ವಿಕೆಯನ್ನು ಖಂಡಿಸಿ ಟ್ಯೂನೀಸಿಯಕ್ಕಾದ ಅನ್ಯಾಯಗಳ ಪ್ರಕಟನೆ ಮಾಡುತ್ತಿವೆ. ಫ್ರೆಂಚರು ಈ ಚಳವಳವನ್ನು ನಿರ್ಮೂಲ ಮಾಡಬೇಕೆಂದು ವಿಶ್ವಪ್ರಯತ್ನಮಾಡಿದರು. ರಾಜಕೀಯ ಚಳವಳಗಾರರನ್ನು ಸೈನ್ಯ ನ್ಯಾಯಾಲಯಗಳನ್ನು ಏರ್ಪಡಿಸಿ ವಿಚಾರಣೆ ಮಾಡಿ ಹಲವರನ್ನು ಗಡಿಪಾರು ಮಾಡಿದರು. ಈ ದಬ್ಬಾಳಿಕೆಯಿಂದ ಚಳವಳವು ಅಳಿಯಲಿಲ್ಲ. ಅದು ಬಲವಾಗಿ ಬೆಳೆಯಿತು. ಅರಬರಲ್ಲಿ ರಾಷ್ಟ್ರೀಯ ಭಾವನೆಯು ಜಗತ್ತಿನ ಎಲ್ಲಾ ಭಾಗಗಳಲ್ಲಿ ಹಬ್ಬಿದೆ. ಫ್ರೆಂಚರ ಆಳ್ವಿಕೆಯೊಳಗಿದ್ದ ಸೀರಿಯಾ ಮತ್ತು ಲಿಬೇನನ್ ತಮ್ಮ ಸ್ವಾತಂತ್ರ್ಯವನ್ನು ಪಡೆದುಕೊಂಡವು. ಇದರಿಂದ ಟ್ಯೂನೀಷಿಯದ ಜನರಿಗೆ ಹುರುಪು ಹೆಚ್ಚಾಗಿದೆ.

೧೯೪೭ರಲ್ಲಿ ಫ್ರೆಂಚರು ಒಂದು ಹೊಸ ಧೋರಣೆಯನ್ನು ಕೈಕೊಂಡರು. ಟ್ಯೂನೀಷಿಯದ ರಾಜಕೀಯ ಚಳವಳವನ್ನು ಮುರಿಯಲು ಫ್ರೆಂಚರು ಪ್ರತಿಪಕ್ಷದವರ ಮನಸ್ಸನ್ನು ಒಲಿಸುವ ಧೋರಣೆಯನ್ನು ಕೈಕೊಂಡರು. ಅವರಿಗೆ ಹಲವು ರಾಜಕೀಯ ಹಕ್ಕುಗಳನ್ನು ಕೊಡುವುದಾಗಿ ಮಾತು ಕೊಟ್ಟರು. ಸರಕಾರದ ಆಳ್ವಿಕೆಯನ್ನು ಸುಧಾರಿಸಲು ಕೆಲವು ಸುಧಾರಣೆಗಳನ್ನು ಜಾರಿಗೆ ತಂದರು. ಆದರೆ ಪ್ರಜೆಗಳಿಗೆ ಮುಖ್ಯವಾಗಿರುವ ಇಲಾಖೆಗಳನ್ನು ನಡಿಸುವ ಅಧಿಕಾರವನ್ನು ಬಿಟ್ಟುಕೊಡಲಿಲ್ಲ. ಸೈನ್ಯ, ಅರ್ಥಿಕ ವಿಚಾರ, ರಕ್ಷಣೆಯ ಇಲಾಖೆಗಳನ್ನು ಫ್ರೆಂಚ್ ಅಧಿಕಾರಿಗಳೇ ವಹಿಸಿಕೊಂಡರು. ಈ ಸುಧಾರಣೆಗಳಿಂದ ಟ್ಯೂನೀಷಿಯದ ಅರ್ಥಿಕ ಸ್ಥಿತಿಯು ಸುಧಾರಿಸಲಿಲ್ಲ. ರಾಜಕೀಯ ಪಕ್ಷದವರು ಪುನಃ ಚಳವಳವಾರಂಭಿಸಿದರು. ಇದನ್ನು ಅಡಗಿಸಲು ಫ್ರೆಂಚ್ ಸರಕಾರದವರು ೧೯೫೧ರಲ್ಲಿ ಒಂದು ಘೋಷಣೆ ಮಾಡಿ ಟ್ಯೂನೀಷಿಯದ ಜನರ ಯಾವ ಬೇಡಿಕೆಯನ್ನೂ ಕೊಡಲಾಗುವುದಿಲ್ಲವೆಂದು ಸಾರಿದರು. ಇದರ ಪರಿಣಾಮವಾಗಿ ಚಳವಳವು ಭೀಕರ ರೂಪವನ್ನು ತಾಳಿತು. ಮುಷ್ಕರಗಳು, ಸಭೆಗಳು, ಮೆರವಣಿಗೆಗಳು, ಸೊಲ್ಲುಗಳು, ಪ್ರಕಟನಾ ಪತ್ರಿಕೆಗಳು, ಅಲ್ಲಲ್ಲಿ ಹಬ್ಬಿದವು. ರಕ್ತಪಾತವಾಗುವ ಸಂಭವವು ಕಂಡು ಬಂದಿತು. ಆದರೆ ಫ್ರೆಂಚರು ಸೈನ್ಯ ಸಹಾಯದಿಂದ ಪ್ರಮುಖ ಮುಖಂಡರನ್ನು ಸೆರೆಹಿಡಿದರು. ಈ ಸ್ಥಿತಿಯನ್ನು ಅರಬ ರಾಷ್ಟ್ರದವರು ನೋಡಿ ಟ್ಯೂನೀಷಿಯದ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯ ಮುಂದಿಟ್ಟರುವರು. ಭದ್ರತಾ ಸಮಿತಿಯವರು ಈ ಪ್ರಶ್ನೆಯನ್ನು ಪರಿಶೀಲಿಸಲು ತಿರಸ್ಕರಿಸಿದರು. ಬ್ರಿಟನು ಫ್ರಾನ್ಸಿನ ಧೋರಣೆಯನ್ನು ಅಂಗೀಕರಿಸುತ್ತಿದೆ. ಈ ಎರಡು ರಾಷ್ಟ್ರಗಳೂ ಸಾಮ್ರಾಜ್ಯವಾದೀ ರಾಷ್ಟ್ರಗಳಾಗಿವೆ. ಅಮೇರಿಕವು ತಟಸ್ಥ ಧೋರಣೆಯನ್ನು ಅವಲಂಬಿಸುತ್ತದೆ. ಅಮೇರಿಕಕ್ಕೆ ಮೊರಕ್ಕೊ ಮತ್ತು ಟ್ಯೂನೀಷಿಯಾ ರಾಜ್ಯಗಳ ಮೇಲೆ ದೃಷ್ಟಿಯಿದೆ. ಪಶ್ಚಿಮ ಯುರೋಪಿನ ರಕ್ಷಣೆಗಾಗಿ ಇವು ಅಗತ್ಯವೆಂದು ತೋರುತ್ತದೆ.

ಆಸ್ಯ ಅರಬ ರಾಷ್ಟ್ರಗಳು ಮಾತ್ರ ಟ್ಯೂನಿಷಿಯದ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಸ್ಥೆಯ ಮುಂದೆ ಬರಲು ಸರ್ವಯತ್ನ ಮಾಡುತ್ತಿವೆ. ಫ್ರಾನ್ಸು ಅದು ಅನ್ಯಾಯವೆಂದು ಸಾರುತ್ತದೆ. ಟ್ಯೂನೀಷಿಯದ ಕಷ್ಟನಿವಾರಣೆಯಾಗಬೇಕಾದರೆ ಅದಕ್ಕೆ ಪೂರ್ಣ ಸ್ವಾತಂತ್ರ್ಯ ದೊರಕಬೇಕು. ಸ್ವಾತಂತ್ರ್ಯದ ಬಳಿಕ ರಾಷ್ಟ್ರನಿರ್ಮಾಣಕಾರ್ಯವನ್ನು ರಭಸದಿಂದ ಸಾಗಿಸಬಹುದು. ಯಾಂತ್ರಿಕ ವ್ಯವಸಾಯ ಮಾಡಿಯೂ ಕೈಗಾರಿಕೆಯ ಕ್ರಾಂತಿಯಿಂದಲೂ ಟ್ಯೂನೀಷಿಯದ ಎಲ್ಲಾ ಕಷ್ಟಗಳನ್ನು ನಿವಾರಿಸಬಹುದಾಗಿದೆ. ಫ್ರಾನ್ಸು ತನ್ನ ಸ್ವಾತಂತ್ರ್ಯವನ್ನು ಸ್ಥಾಪಿಸಲು ದೊಡ್ಡ ವಿಪ್ಲವವನ್ನು ಮಾಡಿ ಸ್ವಾತಂತ್ರ್ಯವನ್ನು ಪಡೆಯಿತು. ತನ್ನಂತೆ ಪರರೂ ಸ್ವತಂತ್ರಜೀವನ ಮಾಡಬೇಕೆಂದು ಅದು ತಿಳಿದುಕೊಂಡರೆ ಲೋಕದಲ್ಲಿ ಶಾಂತಿಸ್ಥಾಪನೆಯಾದೀತು. ಸಾಮ್ರಾಜ್ಯವಿದ್ದ ರಾಷ್ಟ್ರಗಳು ಇರುವ ವರೆಗೆ ಜಗತ್ತಿನ ಶಾಂತಿಯು ಭಂಗವಾಗಲು ಎಡೆಯಿದೆ.

|| ಓಂ ||

ಶ್ರೀ ವೇದವ್ಯಾಸರು

(ಲೇಖಕರು: ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳು, ಎಂ. ಎ , ಬೆಂಗಳೂರು)

(ದ್ವೈತವಿಶಿಷ್ಟಾದ್ವೈತ ಅದ್ವೈತ ಎಂಬ ಮೂರು ಮುಖ್ಯ ಸಿದ್ಧಾಂತಗಳನ್ನು ಒಪ್ಪಿಕೊಂಡಿರುವ ವೇದಾಂತದರ್ಶಕವು ಬ್ರಹ್ಮಸೂತ್ರಗಳನ್ನು ಪ್ರಸ್ಥಾನವೆಂದು ಒಪ್ಪಿಕೊಂಡಿದೆ. ಈ ಬ್ರಹ್ಮ ಸೂತ್ರಗಳನ್ನು ಬರೆದ ಶ್ರೀ ವೇದವ್ಯಾಸರನ್ನು ಪ್ರಾಚಾರ್ಯರೆಂದು ಒಪ್ಪಿಕೊಂಡು ಬ್ರಹ್ಮವಿದ್ಯಾಸಂಪ್ರದಾಯ ಕರ್ತೃಗಳೆಂದು ಅಂಗೀಕರಿಸಿದೆ. ಜೊತೆಗೆ ಈ ಮೂರು ಸಿದ್ಧಾಂತಗಳ ಯತಿಗಳೂ ಚಾತುರ್ಮಾಸ್ಯ ವ್ರತವನ್ನು ಮಾಡುವಾಗ ವ್ಯಾಸ ಪೂಜೆಯನ್ನು ಮಾಡುತ್ತಾರೆ. ಆಷಾಢ, ಕಾರ್ತಿಕ, ಮಾಘ, ವೈಶಾಖಗಳ ಹುಣ್ಣಿಮೆಗಳನ್ನೂ ವ್ಯಾಸ ಪೂರ್ಣಿಮಾ ಎಂದು ಕರೆದು ಆ ಹೆಸರನ್ನು ಶಾಶ್ವತಗೊಳಿಸಿದ್ದಾರೆ. ಜೊತೆಗೆ ವೇದವ್ಯಾಸರನ್ನು "ಅಫಾಲಲೋಚನಶ್ಶಂಬುಹದ್ವಿಬಾಹುರಪರೋಹರಿಃ। ಅಚತುರ್ವದನೋ ಬ್ರಹ್ಮಾಭಗವಾನ್ ಬಾದರಾಯಣಃ॥ ಎಂದು ಗೌರವಿಸಿದ್ದಾರೆ. ಆದರೂ ಶಂಕರ ಜಯಂತಿ, ಮಧ್ವಜಯಂತಿ, ರಾಮಾನುಜ ತಿರುನಕ್ಷತ್ರಗಳಂತೆ, ವ್ಯಾಸ ಜಯಂತಿಯನ್ನು ಏಕೆ ಆಚರಿಸುವುದಿಲ್ಲ? ವೇದಶಾಸ್ತ್ರಪುರಾಣ ಉಪಪುರಾಣ ಕರ್ತೃಗಳಾಗಿ ಭಾರತೀಯರ ಸಂಸ್ಕೃತಿ ನಿಧಿಯನ್ನು ಊರ್ಜಿತಮಾಡಿರುವ ಶ್ರೀ ವೇದವ್ಯಾಸರನ್ನು ಸ್ಮರಿಸುವುದು ಆದ್ಯಕರ್ತವ್ಯವಾಗಬೇಕು: ಹಾಗಾಗಲೆಂದು ಈ ಲೇಖನವನ್ನು ಬರೆಯಲಾಗಿದೆ.)

(ಕಲಿಯುಗವು ಬಂದು ೫೦೬೩ ವರ್ಷಗಳಾಯಿತೆಂದು ನಮ್ಮವರ ಲೆಕ್ಕ. ಆದರಂತೆ ವ್ಯಾಸರ ಅವತಾರವಾದುದು ಕಲಿದ್ವಾಪರಗಳ ಸಂಧಿಯಲ್ಲಿ. ಯುಧಿಷ್ಠಿರನು ಬಹುದೀರ್ಘ ಕಾಲ ರಾಜ್ಯವಾಳಿದನೆಂಬ ಐತಿಹ್ಯವನ್ನೂ ಗಮನಿಸಿ, ವೇದವ್ಯಾಸರ ಅವತಾರವಾದುದು ಸುಮಾರು ೬೦೦೦ ವರ್ಷಗಳ ಕೆಳಗೆ ಎಂದು ಪೌರಾಣಿಕರು ಹೇಳುವರು. ಐತಿಹಾಸಿಕರು ಇದನ್ನು ಒಪ್ಪದೆ, ಬ್ರಹ್ಮಸೂತ್ರಗಳನ್ನು ಬರೆದ ವ್ಯಾಸರು ಸುಮಾರು ಅಶೋಕನ ಕಾಲದಿಂದ ಈಚಿನವರು ಎನ್ನುವರು ಅವರ ಲೆಕ್ಕದಲ್ಲಿ ಸುಮಾರು ೨೦೦೦ ವರ್ಷಗಳು. ನಾವು ದ್ವಾಪರವಾದದವರು.)

ವಸಿಷ್ಠರು ಬ್ರಹ್ಮರ್ಷಿಗಳು. ಅವರ ಮಗ ಶಕ್ತಿ. ಆತನು ಕಾರಣಾಂತರಗಳಿಂದ ಕಾಲವಶನಾದನು. ಆತನ ಹೆಂಡತಿಯು ಅದೃಶ್ಯಂತಿಯು ಆಗ ಗರ್ಭವತಿಯಾಗಿದ್ದಳು. ಗರ್ಭದ ಶಿಶುವು ತಾನಿದ್ದೆಡೆಯಲ್ಲಿಯೇ ವೇದಪಾರಾಯಣ ಮಾಡುತ್ತಿತ್ತು. ಒಮ್ಮೊಮ್ಮೆ ಆ ವೇದಪಾರಾಯಣವು ಹೊರಕ್ಕೂ ಕೇಳಿಸುತ್ತಿತ್ತು. ಹೀಗೆ ಗರ್ಭದಲ್ಲಿದ್ದಾಗಲೇ ವೇದ ಪಾರಾಯಣ ಮಾಡುತ್ತಿದ್ದ ಶಿಶುವೇ ಪರಾಶರರು.

ಪರಾಶರರು ಕಾಲವಿತ್ತುಗಳು: ಜ್ಯೋತಿಷವನ್ನು ಬಹು ಚೆನ್ನಾಗಿ ಬಲ್ಲವರು. ಅವರು ತಮ್ಮ ತಪೋಬಲದಿಂದ ಜ್ಯೋತಿಷದಲ್ಲಿ ಹೊಸದೊಂದು ಸಿದ್ಧಾಂತವನ್ನು ಏರ್ಪಡಿಸಿದರು, ಅದು ಪರಾಶರ ಸಿದ್ಧಾಂತವೆಂದು ಪ್ರಸಿದ್ಧವಾಯಿತು. ಹಾಗೆಯೇ ಮುಂದೆ ಬರಲಿರುವ ಕಲಿಯುಗದಲ್ಲಿ ಧರ್ಮವು ಯಾವ ರೂಪನಾಗಿರುವುದು: ಅದನ್ನು ಹೇಗೆ ಆಚಾರದಲ್ಲಿಟ್ಟುಕೊಂಡಿರುವುದು ಎಂಬುದನ್ನೂ ಧ್ಯಾನದಿಂದ ಸಾಕ್ಷಾತ್ಕರಿಸಿಕೊಂಡು ಒಂದು ಧರ್ಮಗ್ರಂಥವನ್ನು ಬರೆದರು. ಅದು ಪರಾಶರಸ್ಮೃತಿ ಎಂದು ಈಗಲೂ ಪ್ರಸಿದ್ಧವಾಗಿದೆ. ಹೀಗೆ ವೇದಾಂಗಗಳೆರಡನ್ನು ಸಮಗ್ರವಾಗಿ ಸಾಧಿಸಿದ ಮಹಾನುಭಾವರು ಆ ಪರಾಶರರು.

ಅವರಿಗೆ ಒಂದು ಕೆಲಸವಾಗಬೇಕೆಂದು ಬಹಳ ಆಶೆ. "ಮುಂದೆ ಕಲಿಯುಗವು ಬರುವುದು. ಆಗ ಅಖಂಡವಾದ ವೇದಗಳನ್ನು ಸಾಧಿಸಲು ಬೇಕಾದ ಬುದ್ಧಿಶಕ್ತಿಯೂ ಧಾರಣಾಶಕ್ತಿಯೂ ಮನುಷ್ಯರಿಗಿರುವುದಿಲ್ಲ. ಅಲ್ಲದೆ, ಸ್ವಸಾಮರ್ಥ್ಯದಿಂದ ವೇದವಿಭಾಗಮಾಡಿಕೊಳ್ಳಲೂ ಸಾಧ್ಯವಾಗುವುದಿಲ್ಲ. ಅದರಿಂದ, ವೇದಗಳನ್ನು ವಿಂಗಡಿಸಿ, ಇದು ಋಗ್ವೇದ, ಇದು ಯಜುರ್ವೇದ, ಇದು ಸಾಮವೇದ, ಇದು ಅಥರ್ವಣ, ಎಂದು ವಿಂಗಡಿಸಿಟ್ಟರೆ ಬಹಳ ಒಳ್ಳೆಯದು." ಎಂದು ಎಷ್ಟೋ ಸಲ ಎನ್ನಿಸುವುದು. ಆದರೆ ಆ ಕಾರ್ಯ ತಮ್ಮಿಂದಾಗುವುದಿಲ್ಲ. ತಮ್ಮ ಔರಸ ಪುತ್ರನಿಂದ ಅದು ಆಗಬೇಕು ಎನ್ನುವುದೂ ಅವರಿಗೆ ತಿಳಿದಿತ್ತು.

ಅಂತಹ ಔರಸ ಪುತ್ರನನ್ನು ಪಡೆಯಬೇಕೆಂದು ಒಮ್ಮೆ ಒಂದು ಕಲಶವನ್ನು ಸ್ಥಾಪಿಸಿ ಅದರಲ್ಲಿ ತಮ್ಮ ತೇಜಸ್ಸನ್ನು

ಸ್ಥಾಪಿಸಿದರು. ಅವಕ್ಕೆ ಬೇಕಾದ ಪೂಜೆಗಳನ್ನೆಲ್ಲಾ ಮಾಡಿದರು, ಅದು ಸಪ್ರಾಣವಾಯಿತು. "ನಡೆ ಹೋಗೋಣ" ಎಂದಿತು. ಅದನ್ನು ತೆಗೆದುಕೊಂಡು ಹೊರಟರು. ಅವರಿಗೆ ಗೊತ್ತು ಕಲಶದಲ್ಲಿರುವ ಪ್ರಾಣವು ತಾನು ದೇಹಿಯಾಗಲು ದೇಹಾಂತರವನ್ನು ಬಯಸುತ್ತಿದೆಯೆಂದು. ಅವರೇ ಆ ದೇಹಕ್ಕೆ ಬೇಕಾದ ಪಂಚಭೂತಗಳ ಅಂಶಗಳನ್ನು ಒದಗಿಸಬಲ್ಲರು. ಅದರೂ ಅವರು ನಿಯತಿಯನ್ನು ಉಲ್ಲಂಘಿಸಲಿಲ್ಲ. ಆ ತೇಜಸ್ಸನ್ನು ಧಾರಣಮಾಡಿ ಅದಕ್ಕೆ ಬೇಕಾದ ಪಿಂಡವನ್ನು ಒದಗಿಸಬಲ್ಲ ಪುಣ್ಯವತಿಯನ್ನು ಹುಡುಕಿಕೊಂಡು ಹೊರಟರು.

ಕಲಶದಲ್ಲಿದ್ದ ತೇಜಸ್ಸು ಸಾಮಾನ್ಯವಲ್ಲ. ಪಿಂಡವಾದಾಗ ಐನೂರು ಜನರ ತೂಕವಾಗುವುದು. ಪರಾಶರರೂ ಹಾಗೆಯೇ! ಐನೂರು ಜನರ ತೇಜಸ್ಸಿಗೆ ಸಮವಾದ ತೇಜಸ್ಸುಳ್ಳವರು.

ದಾರಿಯಲ್ಲಿ ಹೋಗುತ್ತಾ ಗುಣಿಸಿದರು: "ನನ್ನ ತೇಜಸ್ಸು ಐನೂರು; ಕಲಶದಲ್ಲಿರುವ ತೇಜಸ್ಸು ಐನೂರು. ಸಾವಿರ ತೇಜಸ್ಸುಗಳನ್ನು ಧರಿಸಬಲ್ಲ ಹೆಣ್ಣು ನಿಜವಾಗಿಯೂ ಅಲೌಕಿಕವಾಗಿರಬೇಕು. ಕಾಲವು ಬಂದಿದೆಯಾಗಿ ಅಂಥವಳು ಹುಟ್ಟಿರಬೇಕು. ಅರ್ಥಾತ್ ಅವಳು ಶಾಪದಿಂದ ಬಂದಿರುವ ದಿವ್ಯ ಸ್ತ್ರೀಯೇ ಆಗಿರಬೇಕು. ಲೆಕ್ಕವನ್ನು ನೋಡಿದರೆ, ಅವಳು ಯಮುನಾತೀರದಲ್ಲಿರಬೇಕು. ಗ್ರಹಣಹಿಡಿದ ಚಂದ್ರನಂತೆ, ವೇಷಾಂತರದಲ್ಲಿರಬೇಕು. ಸರಿ. ಯಮುನಾತೀರಕ್ಕೆ ಹೋಗೋಣ. ಮುಂದಿನ ಕಾರ್ಯವನ್ನು ಕಾಲವೇ ಮಾಡುವುದು. "ಕಾಲಸ್ಸರ್ವಸ್ಯಕರ್ತಾ" ಎಂದುಕೊಂಡು ಯಮುನಾತೀರಕ್ಕೆ ಬಂದರು. ಅವರು ಬಂದೆಡೆ ಇಂದು ಬೆಸ್ತರ ಹಳ್ಳಿಯಿತ್ತು. ನದಿಯನ್ನು ದಾಟುವುದಕ್ಕೆ ಬರುವವರೆಲ್ಲಾ ಅಲ್ಲಿಗೇ ಬರುವರು. ಅಲ್ಲಿ ಸಾವಿರ ಜನರನ್ನು ಕೂರಿಸಿಕೊಂಡು ಈ ಕಡೆಯಿಂದ ಆ ಕಡೆಗೆ ಹೋಗುವಂತಹ ಭಾರಿ ದೋಣಿಯೂ ಇತ್ತು. ಸಣ್ಣ ಪುಟ್ಟ ದೋಣಿಗಳೂ ಇದ್ದುವು.

ಪರಾಶರರು ಬರುವ ವೇಳೆಗೆ ಸಣ್ಣ ಪುಟ್ಟ ದೋಣಿಗಳೆಲ್ಲ ಹೊರಟು ಹೋಗಿವೆ. ಭಾರಿಯ ದೋಣಿ ಮಾತ್ರವಿದೆ. ಅದರಲ್ಲಿ ಒಂದು ಚೆಲುವೆಯಾದ ಹೆಣ್ಣು ಕುಳಿತಿದೆ. ಪರಾಶರರು ವಿಚಾರಿಸಿದರು: "ಈ ನಾವೆಯನ್ನು ನಡೆಸುವವರು ಯಾರು?"

ಹೆಣ್ಣು ಕೇಳಿತು: "ಯಾಕೆ?"

"ನಾನು ಅತ್ತ ಕಡೆಗೆ ಹೋಗಬೇಕು."

"ಇದು ಸಣ್ಣ ದೋಣಿಯಲ್ಲ. ಸಾವಿರ ಜನರ ನಾವೆ. ಸಾವಿರ ಜನ ಕುಳಿತಲ್ಲದೆ ಇದನ್ನು ಬಿಡಲಾಗುವುದಿಲ್ಲ."

"ಆಗಬಹುದು. ಸಾವಿರ ಜನರ ತೂಕ ನಮ್ಮಲ್ಲಿದೆ. ನಾನು ಐನೂರು: ಈ ಕಲಶ ಐನೂರು. ಎರಡೂ ಸೇರಿ ಸಾವಿರ. ನಡೆಸುವವರು ಯಾರು?"

ಹೆಣ್ಣಿಗೆ ಆಶ್ಚರ್ಯವಾಯಿತು: "ಬಂದಿರುವ ವ್ಯಕ್ತಿ ಒಬ್ಬ: ಕೈಯಲ್ಲಿ ಹಿಡಿದಿರುವ ಕಲಶ ಕಣ್ಣಿಗೆ ಸಾಮಾನ್ಯವಾಗಿ ಕಾಣುತ್ತಿದೆ. ಆದರೂ ಈ ತಪಸ್ವಿಗಳ ಪ್ರಭಾವವೆಂಥದೋ! ನೋಡೋಣ" ಎಂದು ಕುತೂಹಲವು ಕೆರಳಿತು. ತಾನೇ ನಡೆಸುವವಳು ಎಂದಳು. ಮಹರ್ಷಿಗೆ ಆಶ್ಚರ್ಯವಾಯಿತು. ಸಾವಿರ ಜನರು ಕೂರುವ ನಾವೆಯನ್ನು ನಡೆಸುವುದು ಸಾಮಾನ್ಯವೇ? ಹಾಗಾದರೆ ಇದೇ ಹೆಣ್ಣೋ ಎಂದು ಅವರಿಗೂ ಕುತೂಹಲವಾಯಿತು. ಒಬ್ಬರನ್ನೊಬ್ಬರು ಕಣ್ಣಿಟ್ಟು ನೋಡಿದರು. ಕಣ್ಣುಗಳೆರಡೂ ಸೌಮ್ಯವಾಗಿದ್ದು ಒಬ್ಬರ ದೃಷ್ಟಿಯನ್ನು ಇನ್ನೊಬ್ಬರ ದೃಷ್ಟಿ ಕಲೆತಾಗ ಸಾಮ್ಯವಾಗಿ ಶಿವವಾಗಿ ಶಾಂತವಾಗಿ ಸುಖವಾಗಿತ್ತು.

ಮಹರ್ಷಿಯು ಕಲಶದೊಡನೆ ನಾವೆಯನ್ನೇರಿದರು. ಅದುವರೆಗೂ ತೇಜೋರೂಪವಾಗಿ ಹಗುರವಾಗಿದ್ದ ತೇಜಸ್ಸು ಜಲ ಪೃಥಿವೀ ಅಂಶಗಳನ್ನು ವಹಿಸಿಕೊಂಡು ತನ್ನ ತೂಕವನ್ನು ತೋರಿಸಿತು. ನಾವೆಯು ತಾನು ಹೊತ್ತಿರುವ ಭಾರವೆಷ್ಟು ಎನ್ನುವುದನ್ನು ತೋರಿಸಿತು. ಸರಿಯಾಗಿದೆ. ಒಂದು ಸಾವಿರ ಜನರ ತೂಕ ನಾವೆಯಲ್ಲಿದೆ. ಹೆಣ್ಣು ಬೆಕ್ಕಸ ಬೆರಗಾಯಿತು. ತನ್ನ ಮಾತಿನಂತೆ, ನಾವೆಯು "ಲಂಗರು" ತೆಗೆದು ಅದನ್ನು ನೀರೊಳಕ್ಕೆ ನೂಕಿ, ಹುಟ್ಟನ್ನು ತೆಗೆದುಕೊಂಡಿತು. ನೋಡುವುದಕ್ಕೆ ಆಕಾರ ಹೆಣ್ಣು, ಮಾಡುವ ಕೆಲಸ ಅದ್ಭುತ. ಸಾವಿರ ಜನರ ಭಾರ ಹೊತ್ತ ನಾವೆಯನ್ನು ಹುಟ್ಟು ನೂಕುತ್ತಿದೆ. ಹುಟ್ಟು ಹಾಕುವುದರಲ್ಲೂ ಹೆಣ್ಣಿಗೆ ಆಯಾಸವಿಲ್ಲ. ಸಹಜವಾಗಿದೆ. ಹಿಂದಕ್ಕೆ ಬಗ್ಗಿ ಹುಟ್ಟು ಹಿಡಿದು, ಮುಂದಕ್ಕೆ ಬಾಗಿ ಅದನ್ನು ಜಗ್ಗುವಾಗ ಹೆಣ್ಣಿನ ಎದೆ ಪರ್ವತದಂತೆ ಮುಂದಕ್ಕೆ ಚಾಚಿ ಆಕಾಶದಂತೆ ವಿಸ್ತಾರವಾಗುತ್ತದೆ. ಮಹರ್ಷಿಗೆ ಆಶ್ಚರ್ಯವಾಯಿತು. ತಾನು ನೋಡಿದ್ದಾರಾಗಿ ಅವರು ನಂಬಬೇಕಾಯಿತು. ಧ್ಯಾನಮಾಡಿ ನೋಡಿದರು. ಹೌದು, ವೇದಗಳನ್ನು ವಿಭಾಗಿಸಿಟ್ಟು ಲೋಕೋಪಕಾರಮಾಡಲು ಮಹಾವಿಷ್ಣುವಂಶದಿಂದ ಹುಟ್ಟುವ ಮಹಾನುಭಾವನು ಅವತಾರ ಮಾಡುವ ಕಾಲವು ಬಂದಿದೆ. ಆದರೆ ಈ ಹೆಣ್ಣಿನಲ್ಲಿಯೇ? ಇದು ಬೆಸ್ತರ ಹೆಣ್ಣು?

ಮತ್ತೆ ಪರಾಶರರು ಲೆಕ್ಕಮಾಡಿದರು. "ಹೌದು. ಈ ಚಂದ್ರನಿಂದಲೇ ಆ ಅಮೃತ ಬರುವುದು. ಆದರೆ?........ ಏನಿಲ್ಲ. ಚಂದ್ರನಿಗೆ ಗ್ರಹಣ ಹಿಡಿದಿದೆ." ಆ ವೇಳೆಗೆ ಸರಿಯಾಗಿ ನದಿಯ ಮೇಲಿನ ಗಾಳಿ ಬೀಸಿ, ಹೆಣ್ಣು ಬೆಸ್ತರ ಜಾತಿ, ತಿಂದ ಮೀನಿನ ವಾಸನೆ ಮೈಯೆಲ್ಲ ವ್ಯಾಪಿಸಿಸುತ್ತ ಮುತ್ತಿನ ಗಾಳಿಗೂ ವ್ಯಾಪಿಸುತ್ತಿದೆಯೆಂಬುದನ್ನು ತೋರಿಸಿತು. ಮೂಗು "ಅಬ್ಬಾ! ಸಹಿಸಲಾರೆ" ಎಂದಿತು. ಮನಸ್ಸು ಮೂಗಿನ ಮಾತು ಕೇಳಲಿಲ್ಲ. ಸಂಯಮ ಮಾಡಿತು. ತನ್ನ ಕೋಶವನ್ನು ದಾಟಿ ಈ ಕೊನೆಯ ಪ್ರಾಣ, ಆ ಕೊನೆಯ ವಿಜ್ಞಾನ

ಗಳನ್ನು ಹಿಡಿದು, ವ್ಯಕ್ತಿತ್ವವನ್ನು ದಾಟಿ, ವ್ಯಕ್ತಿಯ ಹಿಂದಿನ ಜನ್ಮವೇನು ನೋಡಿತು.

"ಎದುರಿಗಿರುವ ಹೆಣ್ಣು ಬೆಸ್ತಳಾಗಿ ತೋರುತ್ತಿದ್ದರೂ ಬೆಸ್ತಳಲ್ಲ. ಪಿತೃದೇವತೆಗಳ ಮಾನಸ ಪುತ್ರಿ. ಅಯೋನಿಜೆ. ತನ್ನ ತಂದೆ ಯಾರು ಎಂದು ತಿಳಿಯುವ ಆಸೆಯಿಂದ ಹಂಬಲಿಸುತ್ತಾ ವಸುರಾಯನನ್ನು ಕಂಡು "ಎಂಥ ತೇಜಸ್ವಿ! ಇವನೇ ನನ್ನ ತಂದೆ ಇರಬೇಕು" ಎಂದುಕೊಂಡಳು. ಮಾನಸಪುತ್ರಿಯಾದ್ದರಿಂದ ಮನಸ್ಸಿನ ಆಶೆ ಸಂಕಲ್ಪವಾಗಿ ಅವಳ ತೇಜಸ್ಸು ಆತನ ಗರ್ಭವನ್ನು ಸೇರಿತು."

"ವಸುರಾಯನು ಸಾಮಾನ್ಯನಲ್ಲ: ಆತನು ಮಹಾ ತಪಸ್ವಿ. ಆತನೊಂದು ದಿನ ಬೇಟೆಯಲ್ಲಿರುವಾಗ ಆತನ ಗರ್ಭದಲ್ಲಿದ್ದ ತೇಜಸ್ಸು ತಾನು ದೇಹಧಾರಿಯಾಗುವ ಕಾಲ ಬಂದಿದೆ" ಎಂದು ಹೇಳಿತು. ಆತನು ಕೂಡಲೇ ಆ ತೇಜಸ್ಸನ್ನು ತೆಗೆದು ಎಲೆಯ ದೊನ್ನೆಯಲ್ಲಿಟ್ಟು, ಅಲ್ಲಿ ಹಾರುತ್ತಿದ್ದ ಹದ್ದನ್ನು ಕರೆದು, 'ಇದನ್ನು ತೆಗೆದುಕೊಂಡು ಹೋಗಿ ನನ್ನ ಹೆಂಡತಿಗೆ ಕೊಡು' ಎಂದು ಆಜ್ಞೆಮಾಡಿದನು. ಆ ರಾಜನ ರಾಜತ್ವವೆಂಥದು! ಬಾನಿನ ಹಕ್ಕಿಯೂ ಆ ಆಜ್ಞೆಗೆ ಬಾಗಬೇಕು. ಹದ್ದು ಕೆಳಗಿಳಿದು ದೊನ್ನೆಯನ್ನು ಕಚ್ಚಿಕೊಂಡು ರಾಜಧಾನಿಯ ಕಡೆ ಹೊರಟಿತು. ದಾರಿಯಲ್ಲಿ ಇನ್ನೊಂದು ಹದ್ದು ಏನೋಆಹಾರವೆಂದು ಕಿತ್ತುಕೊಳ್ಳಲು ಮೇಲೆ ಬಿತ್ತು. ದೊನ್ನೆಯು ಹರಿದು ಹೋಯಿತು. ವೀರ್ಯವು ಚೆಲ್ಲಿತು. ಕೆಳಗೆಹರಿಯುತ್ತಿದ್ದ ನೀರಿನಲ್ಲಿ ಬಿತ್ತು. ಅಲ್ಲೊಂದು ಮೀನು ಅದನ್ನು ನುಂಗಿತು."

"ವಸುರಾಯನು ಹತವೀರ್ಯನಲ್ಲ. ವೀರ್ಯವು ಬಹಿರ್ವಾಯುವಿನ ಸಂಪರ್ಕದಿಂದ ಪ್ರಾಣಹೀನವಾಗಲಿಲ್ಲ. ನಾಸಿಕಾಮುಖದಿಂದ ದೇಹದೊಳಕ್ಕೆ ಹೋದರೆ ಪ್ರಾಣವಾಗುವ ವಾಯುವು ಅಸ್ಥಾನದಲ್ಲಿ ಪ್ರಾಣಘಾತುಕವಾಗಬೇಕು. ದೇಹದೊಳಕ್ಕೆ ಹೋದ ವಾಯು ಅನ್ನವಾದರೆ,ದೇಹದ ಹೊರಗೆ ಅದೇ ವಾಯುವೇ ಅನ್ನಾಹವಾಗಬೇಕು. ಆದರೆ ವಸುರಾಯನ ವೀರ್ಯ ಊರ್ಜಸ್ವಿಯಾದುದರಿಂದ ಹೊರಗಿನ ವಾಯು ತನ್ನನ್ನು ತಿನ್ನುವುದಕ್ಕೆ ಬಿಡದೆ, ತಾನೇ ಅದನ್ನು ತಿಂದಿತು. ಮೀನಿನ ಹೊಟ್ಟೆಯಲ್ಲಿ ಜೀರ್ಣವಾಗುವ ಬದಲು, ಅಲ್ಲಿ ತನಗೆ ಬೇಕಾದುದನ್ನು ತೆಗೆದುಕೊಂಡು ಪಿಂಡವಾಗಿ ಬೆಳೆಯಿತು. ಪಿಂಡವು ಎರಡಾಗಿ ಒಂದು ಗಂಡು ಒಂದು ಹೆಣ್ಣು ಆಯಿತು. ಕಾಲಕ್ರಮದಲ್ಲಿ ಮೀನು ಬಲೆಗೆ ಸಿಕ್ಕಿ ಆ ಮಕ್ಕಳು ಈಚೆಗೆ ಬಂದರು. ಈ ಆಶ್ಚರ್ಯ ಶಿಶುಗಳನ್ನು ಆ ಮೀನು ಹಿಡಿದ ಬೆಸ್ತನು ತನ್ನ ಯಜಮಾನನ ಮೂಲಕ ದೊರೆಗೆ ಒಪ್ಪಿಸಿದನು. ಆ ದೊರೆ–ವಸುರಾಯನು ಗಂಡು ನನಗೆ, ಹೆಣ್ಣು ನಿನಗೆ ಎಂದನು. ಹೆಣ್ಣು ದಾಶರಾಜನ ಎಂದರೆ ಬೆಸ್ತರಾಯನ ಮಗಳಾಗಿ ಬೆಳೆದಳು."

ಪರಾಶರರಿಗೆ ಅರ್ಥವಾಯಿತು: "ಪಿತೃಕನ್ಯೆ. ಸ್ವಚಾಪಲ್ಯದಿಂದ ವಸುಪುತ್ರಿಯಾಗಿ ಕಾಲಕರ್ಮಬಲದಿಂದ ದಾಶಕನ್ಯೆಯಾಗಿದ್ದಾಳೆ. ಗ್ರಾಹ್ಯಳೇನು? ಧರ್ಮವು ಒಪ್ಪುವುದೇನು? ಸಂಸರ್ಗದಿಂದ ಕ್ಷೇತ್ರವೂ ದೂಷ್ಯವಾಗಿಲ್ಲವೇನು? ಈ ಕ್ಷೇತ್ರವನ್ನು ಕಲಶದಲ್ಲಿರುವ ತೇಜಸ್ವಿಯು ಅಂಗೀಕರಿಸುವನೇನು? ಹುಡುಗಿ ವಿಜಾತಿಯಾದರೂ ತೇಜಸ್ಸಂಪನ್ನಳೂ ನಿಜ. ಆದರೆ ನಾನಾಗಿ ಬೇಕೆಂದರೆ, ಕಾಮವು ಅಜ್ಞಾತವಾಗಿ ಬಲಿಯಲು ಅವಕಾಶ ಕೊಟ್ಟಂತಾದೀತು. ಇದೇ ಹೆಣ್ಣೇ ತೇಜೋಧಾರಿಣಿಯಾಗಬೇಕಾಗಿದೆ ಎಂದು ಶಾಸ್ತ್ರವು ನುಡಿಯುತ್ತಿರುವ ಮಾತು ನಿಜವಾದರೆ, ಕನ್ಯಾದಾನಕ್ಕೆ ಇವಳ ಪಿತೃವರ್ಗವೂ ಕನ್ಯಾಗ್ರಹಣಕ್ಕೆ ನಮ್ಮ ಪಿತೃವರ್ಗವೂ ಬರಲಿ. ಆಗ ಶಾಸ್ತ್ರದ ಮಾತು ಸತ್ಯವಾಗುವುದು" ಎಂದು ನಿಶ್ಚಯ ಮಾಡಿ ಸುಮ್ಮನೆ ಕುಳಿತರು.

ವಾಯುವು ಅಲೌಕಿಕವಾಗಿ ಚಲಿಸಿತು. ಚಲಿಸುತ್ತಿದ್ದ ನಾವೆಯು ನದಿಯ ನಡುಗುಡ್ಡೆಯೊಂದನ್ನು ಸೇರಿತು. ಅಲ್ಲಿ ಸಪತ್ನೀಕರಾದ ವಸಿಷ್ಠರೂ ಪಿತೃಗಳೂ ಬಂದು ಹೆಣ್ಣು ಗಂಡು ಎದುರುಗೊಂಡರು. ಹೆಣ್ಣು ಯಾರೋ ಬಂದು "ಮಗಳೇ! ಇವನನ್ನು ಮದುವೆಮಾಡಿಕೊ" ಎಂದರೆ ಒಪ್ಪುವುದೇ? ಪರಾಶರರನ್ನು ಕರೆದು "ಇವಳಿಗೆ ಜನ್ಮಾಂತರ ಜ್ಞಾನವನ್ನು ಕೊಡು" ಎಂದರು. ಪರಾಶರರು ಕೊಟ್ಟರು. ದಿವ್ಯ ಜನ್ಮದ ಜ್ಞಾನವಾಗುತ್ತಿದ್ದ ಹಾಗೆಯೇ ನೀಚ ಜನ್ಮದ ಸಂಬಂಧಿಯಾದ ಭೌತಿಕಾಂಶಗಳ ದೋಷಗಳು ಅಸ್ತವಾದುವು. ತಿರ್ಯಗ್ಯೋನಿ ಸಂಬಂಧವಾದ ಪೃಥ್ವೀಭೂತದ ದೋಷವೂ ತತ್ಫಲವಾದ ದುರ್ಗಂಧವೂ ಹೋದುವು. ಪಂಚಭೂತಗಳ ಪ್ರಸನ್ನವಾದ ಅಂಶವು ತಲೆದೋರಿದುದರ ಗುರುತಾಗಿ ದೇಹದಲ್ಲಿ ಸುಗಂಧವು ತಾನೇ ತಾನಾಯಿತು. ಭೂತಾಂಶವು ನಿರ್ದುಷ್ಟವಾಗಲು ಮನೋಬುದ್ಧಿಗಳು ಪ್ರಸನ್ನವಾಯಿತು. ಅಹಂಕಾರವು ಸಾತ್ವಿಕವಾಗಿ ತಾನು ದಾಶಕನ್ಯೆಯೆಂಬ ಮೋಹವನ್ನು ಬಿಟ್ಟು ಪಿತೃಕನ್ಯೆಯೆಂಬ ಸ್ಮೃತಿಯನ್ನು ತಳೆಯಿತು. ಹೆಣ್ಣು ಸಂತೋಷವಾಗಿ ಪಿತೃವಶವರ್ತಿನಿಯಾದಳು. ಸತ್ಯವನ್ನು ಕಂಡ ಸತ್ಯವತಿಯಾಗಿ ಪಿತೃದತ್ತಳಾಗಿ ಪರಾಶರರ ಕೈಹಿಡಿದಳು. ವಸಿಷ್ಠರು ಮೊಮ್ಮಗನಿಗಾಗಿ ಅವಳನ್ನು ಪರಿಗ್ರಹಿಸಿದರು. ಸತ್ಯವತೀ ಪರಾಶರರ ವಿವಾಹವಾಯಿತು.

ಸತೀಪತಿಯರು ಆ ನಡುಗಡ್ಡೆಯಲ್ಲಿಯೇ ಆ ದ್ವೀಪದಲ್ಲಿಯೇ ನಿಂತರು. ನಿಯತಿಯು ಮುಂದೆ ಆಗಬೇಕಾದ ಅವತಾರಕ್ಕೆ ತನ್ನ ಕಾಣಿಕೆಯಾಗಿ ಮಂಜನ್ನು ನಿರ್ಮಿಸಿತು. ನದಿಯ ಈ ಕೊನೆಯಿಂದ ಆ ಕೊನೆಯ ವರೆಗೂ ಮಂಜು ದಟ್ಟವಾಗಿ ಹರಡಿತು. ಎಲ್ಲಿದ್ದವರು ಅಲ್ಲೇ ಆದರು.

ಕಲಶದಲ್ಲಿ ತಾನು ಆವಾಹಿಸಿಟ್ಟಿದ್ದ ಪ್ರಾಣವನ್ನು ತನ್ನಲ್ಲಿ ಮತ್ತೆ ಆವಾಹಿಸಿಕೊಂಡು ತಾನು ಪ್ರಾಣಸ್ವರೂಪನಾಗಿ ಪರಾ

ಶರರು ಸ್ತ್ರೀರೂಪವಾದ ಅಪಾನ ಕುಂಡದಲ್ಲಿ ಆ ಪ್ರಾಣವನ್ನು ಹೋಮಮಾಡಿ ಪ್ರಾಣಾಪಾನ ಯಜ್ಞವನ್ನು ಸಾಂಗವಾಗಿ ನಿರ್ವಹಿಸಿದರು. ಯಜ್ಞಸ್ವರೂಪನಾದ ವಿಷ್ಣುವು ಆ ಯಜ್ಞದಿಂದ ಪ್ರಸನ್ನನಾಗಿ ಅಲ್ಲಿ ಆವಿರ್ಭವಿಸಿದನು. ಪ್ರಾಣವು ಕಲಶದಲ್ಲಿ ಪೂರ್ಣವಾಗಿ ಬೆಳೆದಿತ್ತು: ಗರ್ಭದಲ್ಲಿರಬೇಕಾದ ಅಗತ್ಯವಿರಲಿಲ್ಲ. ಸದ್ಯೋಗರ್ಭವಾಗಿ ಇತ್ತ ಕಡೆ ಗರ್ಭವನ್ನು ಸೇರುತ್ತಿದ್ದ ಹಾಗೆಯೇ ಈಚೆಗೆ ಮಗುವಾಗಿ ಬಂತು. ಅಷ್ಟೇ ಅಲ್ಲ ಬಹಿಃ ಬೀಸುತ್ತಿರುವ ಪವನನಿಂದ, ಸುತ್ತಲೂ ಆವರಿಸಿರುವ ಧೂಮದಿಂದ ತನಗೆ ಬೇಕಾದ ಪೋಷಕ ದ್ರವ್ಯವನ್ನೆಲ್ಲ ಸಂಗ್ರಹಿಸಿಕೊಂಡು ಐದು ವರ್ಷದ ಮಗುವಾಯಿತು. ಪರಾಶರರು ಕೂಡಲೇ, ಸಕಾಲವಾಗಿರುವುದನ್ನು ಅರಿತು ಆ ಮಗುವಿಗೆ ಪ್ರಾಣವಿದ್ಯೆಯನ್ನು ಉಪದೇಶಿಸಿದರು. ಅದೂ ಅದನ್ನು ಗ್ರಹಿಸಿತು ಸಾಂಗವಾದ ವೇದಮಂಡಲವನ್ನೆಲ್ಲ ಗ್ರಹಿಸಿ ತಾನೇ ವೇದಮೂರ್ತಿಯಾಗಿ, ಮೂರ್ತಿಗೊಂಡ ವೇದವೋ ಎಂಬಂತೆ ತೇಜಸ್ವಿಯಾಗಿ ನಿಂತಿತು.

ಮಗುವು ತೇಜಸ್ವಿ, ಆದರೂ ಕುರೂಪಿ. ವರ್ಣವು ಕಪ್ಪು, ದೇಹದಲ್ಲಿ ದುರ್ಗಂಧ, ತಂದೆಯು ಅದನ್ನು ಸರಿಮಾಡಲು ಉದಕವನ್ನು ತೆಗೆದುಕೊಂಡು ಮಂತ್ರಿಸಲು ಹೊರಟರು. ತ್ರಿಕಾಲಜ್ಞನಾದ ಮಗುವು ತಂದೆಯನ್ನು ತಡೆಯಿತು. "ಮಾತೃಗರ್ಭದಿಂದ ಬಂದ ಈ ದೇಹ ಮಾತೃವಿನ ತೇಜೋಭೂತದ ನ್ಯೂನಾಧಿಕ್ಯತೆಗಳನ್ನು ವಹಿಸಿಕೊಂಡು ಕುರೂಪಿಯಾಗಿದೆ. ಮಾತಾಮಹಿಯ ಅಂಶವನ್ನು ವಹಿಸಿಕೊಂಡು ತಿರ್ಯಗ್ಯೋನಿಯ ಪೃಥ್ವೀದೋಷವನ್ನು ಅಂಗೀಕರಿಸಿ ದುರ್ಗಂಧಭೂಯಿಷ್ಠವಾಗಿದೆ. ಇದರಿಂದಲೇ ಮಾತೃಗುಣವು ತೀರಿತೆಂದು ಅರ್ಥವಾಗುವುದಿಲ್ಲವೆ? ಅದರಿಂದ ಇದೂ ಒಂದು ಭೂಷಣವಾಗಿಯೇ ಇರಲಿ. ಅಲ್ಲದೆ, ಮುಂದೆ ನಾನು ಏಕಾಂತದಲ್ಲಿ ಕುಳಿತು ತಪಸ್ಸು ಮಾಡಲು ಈ ಕುರೂಪವೂ ದುರ್ಗಂಧವೂ ಉತ್ತಮ ಸಾಧನಗಳು. ಅಲ್ಲದೆ, ಗಂಧವು ಸುಗಂಧವಾದರೂ ಗಂಧವೇ! ದುರ್ಗಂಧವಾದರೂ ಗಂಧವೇ! ಗಂಧವು ಪೃಥ್ವಿಯ ಗುಣವು. ಅದನ್ನು ಅವೇದನದಿಂದ ಸಹಿಸಿಕೊಳ್ಳಬಲ್ಲ ಜ್ಞಾನವು ಪ್ರಬುದ್ಧವಾಗಿರುವಾಗ ಅದರಿಂದ ನಮಗೇನು ತೊಂದರೆಯಾದೀತು? ಅದರಿಂದ, ಆ ವಿಚಾರವನ್ನು ಬಿಟ್ಟು ಮುಂದಿನ ಕರ್ತವ್ಯಕಾರ್ಯವನ್ನು ಕುರಿತು ಆಜ್ಞಾಪಿಸಿರಿ" ಎಂದಿತು.

ಪರಾಶರರು ದೇಹವು ತಾನಲ್ಲ ಎಂಬುದನ್ನು ನಿದರ್ಶನ ಮಾಡಿ ತೋರಿಸುತ್ತಿರುವ ಮಗನನ್ನು ನೋಡಿ ಸಂತೋಷಪಟ್ಟು "ಮಗನೇ, ವಸಿಷ್ಠವಂಶದಲ್ಲಿ ಹುಟ್ಟಿರುವೆ, ವಂಶವಿದ್ಯೆಗಳೆಲ್ಲ ನಿನಗೆ ಅನುಗ್ರಹ ಮಾಡಿ ಪ್ರಸನ್ನವಾಗಲಿ, ಧರ್ಮಬ್ರಹ್ಮ ವಿವರ್ಧನದಿಂದ ಕೀರ್ತಿವಂತನಾಗು. ನಿನ್ನ ಅವತಾರ ಕಾರಣವು ಯಾವಾಗಲೂ ನಿನ್ನ ಲಕ್ಷ್ಯದಲ್ಲಿದ್ದು ನಿನ್ನನ್ನು ಕೃತಕಾರ್ಯನನ್ನಾಗಿ ಮಾಡಲಿ. ನೀನು ವೇದಗಳನ್ನು ವಿಭಾಗಿಸುವವನಾದ್ದರಿಂದ ವೇದವ್ಯಾಸನೆಂದೇ ಪ್ರಸಿದ್ಧನಾಗು" ಎಂದು ಅನುಗ್ರಹಿಸಿದರು.

ವ್ಯಾಸರು ಎದ್ದು ತಂದೆತಾಯಿಗಳಿಗೆ ನಮಸ್ಕಾರ ಮಾಡಿ ತಪಸ್ಸಿಗೆ ಅಪ್ಪಣೆಯನ್ನು ಬೇಡಿದರು. ತಾಯಿಯ ಕರುಳು ಕಂಡು ಮರುಗಿ "ತಾಯೇ, ನೀನು ಕೋರಿದಾಗ ಬಂದು ದರ್ಶನಮಾಡುವೆನು" ಎಂದು ಮಾತು ಕೊಟ್ಟು ತಂದೆಯ ಅಪ್ಪಣೆಯಿಂದ ಬದರಿಕಾಶ್ರಮಕ್ಕೆ ತೆರಳಿದರು.

"ಇನ್ನು ನಿನ್ನ ಪತ್ನೀತ್ವವು ಮುಗಿಯಿತು. ಇದಿಷ್ಟಕ್ಕಾಗಿಯೇ ನಿನ್ನನ್ನು ನಾನು ಗ್ರಹಣಮಾಡಿದ್ದುದು. ನೀನು ಮತ್ತೆ ಕನ್ಯತ್ವವನ್ನು ಪಡೆದು, ಕಾಲಕ್ರಮದಲ್ಲಿ ಒಬ್ಬ ಮಹಾರಾಜನ ಕೈಹಿಡಿದು ಬೇಕುಬೇಕಾದ ಭೋಗಭಾಗ್ಯಗಳನ್ನೆಲ್ಲ ಅನುಭವಿಸಿ ಕಾಲಾಂತರದಲ್ಲಿ ನಿನ್ನ ಪೂರ್ವದೇಹವನ್ನು ಪಡೆಯುವೆ" ಎಂದು ಭವಿಷ್ಯವನ್ನು ನುಡಿದು ಪರಾಶರರು ತಮ್ಮ ಪಾಡಿಗೆ ತಾವು ಹೋದರು.

ಮಂಜು ಹರಿಯಿತು. ಸತ್ಯವತಿಯು ತಾನು ಮತ್ತೆ ಕನ್ಯೆಯಾಗಿರುವುದನ್ನು ತಿಳಿದುಕೊಂಡು ತನ್ನ ವಿಚಿತ್ರ ಅನುಭವವನ್ನು ಕುರಿತು ತಾನೇ ವಿಸ್ಮಯಪಡುತ್ತಾ ದಾಶರಾಜನ ಮನೆಗೆ ಹಿಂತಿರುಗಿದಳು.

ಸ್ವಾಮೀ ವಿವೇಕಾನಂದರೂ ಭಾರತ ಪ್ರಬೋಧನೆಯೂ

(ಲೇಖಕರು: ಶ್ರೀ ಸ್ವಾಮೀ ಪ್ರಣವೇಶಾನಂದರು)

ಸ್ವಾಮೀ ವಿವೇಕಾನಂದರು ಅಮೇರಿಕ ಹಾಗೂ ಅನ್ಯಾನ್ಯ ಪಾಶ್ಚಾತ್ಯ ದೇಶಗಳಲ್ಲಿ ವಿಜಯಹೊಂದಿ ಭಾರತಕ್ಕೆ ಮರಳಿ ಬಂದು ತಮ್ಮ ದೇಹಸ್ಥಿತಿ ಕುಂದಿಹೋಗಿದ್ದರೂ ಸುಮಾರು ಎರಡುವರೆ ವರ್ಷ ತಮ್ಮ ಪ್ರಾಣೋಜ್ಜೀವಕ ಸಂದೇಶವನ್ನು ಭಾರತದಲ್ಲೆಲ್ಲ ಪ್ರಚಾರಿಸಲು ತಮ್ಮ ಸರ್ವ ಶಕ್ತಿಯನ್ನು ಪ್ರಯೋಗಿಸಿದರು. ಅವರ ಸಂದೇಶವು ಸಂಪೂರ್ಣ ಮಾನವವರ್ಗಕ್ಕೆ ಅನ್ವಯಿಸುವುದಾಗಿತ್ತು. ಅವರ ಸಾರ್ವಲೌಕಿಕ ಉದಾರಭಾವವು ಪಾಶ್ಚಾತ್ಯರ ಕಲ್ಪನೆಗೆ ಚೆನ್ನಾಗಿ ರಂಜಿಸಿತು. ಅವರು ಸ್ವಾಮೀಜಿಯವರನ್ನು 'ಭಾರತದ ಪ್ರಚಂಡ ಸಂನ್ಯಾಸಿ' ಎಂದು ಸ್ವಾಗತಿಸಿದರು ಹಾಗೂ ದೈವ ಪ್ರೇರಿತ ಧರ್ಮೋಪದೇಶಕರಾದ ಬುದ್ಧ, ಏಸುಕ್ರಿಸ್ತ ಮೊದಲಾದವರ ಸಾದೃಶ್ಯವನ್ನು ಅವರಲ್ಲಿ ಕಂಡರು.

ಭಾರತೀಯರು ಸ್ವಾಮೀಜಿಯವರನ್ನು ತಮ್ಮ ಗೌರವ ರಕ್ಷಕರೆಂದು ತಿಳಿದರು. ಭಾರತೀಯರು ಅನಾಗರಿಕರೆಂದೂ ಅವರ ಧರ್ಮವು ಮೂಢಾಚರಣೆ ಹಾಗೂ ಸಾಮಾಜಿಕ ಪದ್ಧತಿಗಳಿಂದ ಕೂಡಿದೆ ಎಂದೂ ಪಾಶ್ಚಾತ್ಯರು ಭಾವಿಸಿದ್ದರು. ಭಾರತದ ಬೆನ್ನ ಹಿಂದೆ ಸ್ವಕೀಯ ಮಹಿಮಾನ್ವಿತ ಇತಿಹಾಸ ಹಾಗೂ ಸಂಸ್ಕೃತಿ ಉಂಟೆಂದೂ ಅವರು ಪಾಶ್ಚಾತ್ಯರಿಗೆ ಮನದಟ್ಟುಮಾಡಿದರು. ಭಾರತೀಯ ಸಂಸ್ಕೃತಿ ಹಾಗೂ ಸಭ್ಯತೆ ಹಲವು ಶತಮಾನಗಳಿಂದ ಬಂದಿರುತ್ತವೆ ಎಂದೂ, ಭಾರತದಲ್ಲಿ ಬುದ್ಧದೇವನು, ಏಸುಕ್ರಿಸ್ತನು ಜನ್ಮವೆತ್ತಿ ಬರುವುದಕ್ಕೆ ಆರು ಶತಮಾನಗಳ ಹಿಂದೆಯೇ ಜನ್ಮವೆತ್ತಿದ್ದನೆಂದೂ, ಅವರು ಪಾಶ್ಚಾತ್ಯರಿಗೆ ಒತ್ತಿಹೇಳಿದರು. ಆಧುನಿಕ ಜನಾಂಗದ ಪೂರ್ವಿಕರು ತಮ್ಮ ಮೈಮೇಲೆ ಹಚ್ಚೆ ಹಚ್ಚಿಸಿಕೊಳ್ಳುತಿದ್ದಾಗಲೂ, ಅವರು ಕಾಡುಗುಹೆಗಳಲ್ಲಿ ವಾಸಿಸುತಿದ್ದು ಕೊಳ್ಳೆಮಾಡಿ ಜೀವನಯಾಪನಮಾಡುತಿದ್ದಾಗಲೂ ಭಾರತೀಯ ಸಭ್ಯತೆಯ ಪತ್ತೆಯನ್ನು ಹಚ್ಚಬಹುದೆಂದು ಹೇಳಿದರು. ಮಾನವ ಇತಿಹಾಸದ ಅರುಣೋದಯದಿಂದಲೂ ಜೀವಬ್ರಹ್ಮದ ಹಾಗೂ ವಿಶ್ವದ ಏಕತ್ವವನ್ನು ಭಾರತದ ವೇದಗಳು ನಿಸ್ಸಂದಿಗ್ಧ ಭಾಷೆಯಿಂದ ಪ್ರಕಟಿಸಿರುತ್ತವೆ.

ಪಾಶ್ಚಾತ್ಯದಲ್ಲಿ ಸ್ವಾಮೀಜೀ ತಮ್ಮ ತೀವ್ರ ಚಟುವಟಿಕೆಯ ನಡುವೆ ಭಾರತವನ್ನು ನಿರಾಶೆಯೆಂಬ ಹೂಳು ಹಾಗೂ ಅವನತಿಯಿಂದ ಹೇಗೆ ತಾನೆ ಎಬ್ಬಿಸುವುದೆಂದು ಪ್ರಚಂಡವಾಗಿ ಯೋಚಿಸುತಿದ್ದರು. ಕರ್ಮಠ, ಪ್ರಗತಿಪರ, ವಿರಚನಾಶಕ್ತಿಸಂಪನ್ನ, ಬಲಾಢ್ಯ ಹಾಗೂ ಧನಧಾನ್ಯಸಂಪನ್ನರಾದ ಯೂರೋಪು ಹಾಗೂ ಅಮೇರಿಕ ಜನರ ನಡುವೆ ಅವರು ವಾಸಿಸುತಿದ್ದಾಗ, ಭಾರತದ ನಿಮ್ನ ಶ್ರೇಣಿಯವರ ದಿಕ್ಕಿಲ್ಲದ ಪರಿಸ್ಥಿತಿಯನ್ನೂ, ಅವರ ಅನಕ್ಷರತೆ ಹಾಗೂ ದಾರಿದ್ರ್ಯವನ್ನೂ, ಸಾಮಾಜಿಕ ಅನಾಚಾರದ ಅನಿಷ್ಟ ಬಲಪ್ರಯೋಗದಿಂದ ಮೂಕ ಜನರ ಮನುಷ್ಯತ್ವವನ್ನು ಹಾಳುಮಾಡಿದ, ಧರ್ಮದ ಹೆಸರಿನಲ್ಲಿ ಅಸ್ಪೃಶ್ಯತೆ ಎಂಬ ತಪ್ಪು ಸೂತ್ರಗಳನ್ನು ಸಮಾಜದ ಮೇಲೆ ಬಲಪ್ರಯೋಗದಿಂದ ಹೇರಿಸಿದ ಸಾಂಪ್ರದಾಯಿಕ ಸಮಾಜದ ಢಾಂಬಿಕ ನಾಯಕರ ವೈದಿಕ ಧರ್ಮದ ಉದಾತ್ತ ಧ್ಯೇಯಗಳ ವಿಕಟಾನುಕರಣವನ್ನೂ, ಶಿಕ್ಷಿತ ಉದಾರ ಪಕ್ಷದವರ ಅಸಹ್ಯಕರವಾದ ತಿಳಿಗೇಡಿತನವನ್ನೂ, ಹಾಗೂ ಅವರ ರೀತಿನೀತಿಗಳಲ್ಲಿ ಪಾಶ್ಚಾತ್ಯ ಭಾವನೆಗಳ ಕಡೆಗೆ ಇಟ್ಟ ಅವರ ಎಚ್ಚರಗೇಡಿಯಾದ ಹಾಗೂ ಭೀತಿಕಾರಕವಾದ ಮಾರುಗಾಲನ್ನೂ, ಪರಸ್ಪರ ವಾದಿಸುವ ಅಗಣಿತ ಪ್ರಾಮಾಣ್ಯವಾದಿಗಳ ಪಂಥಗಳಿಂದಲೂ, ವಿದ್ಯಾವಂತ ಪಾಷಂಡಿಗಳ ಸರ್ವದಾ ವೃದ್ಧಿಗೊಳ್ಳುವ ಶ್ರೇಣಿಗಳಿಂದಲೂ ಕೂಡಿದ ಹಿಂದೂಗಳ ಪಕ್ಷಭಾವನಾ ಪ್ರಾಬಲ್ಯವನ್ನು ಕಂಡು ಅವರ ಕೋಮಲ ಹಾಗೂ ಸ್ವದೇಶಾಭಿಮಾನಯುಕ್ತ ಹೃದಯವು ಕೊರಗುತಿತ್ತು. ಪಾಶ್ಚಾತ್ಯದೇಶಗಳ ಸಮೃದ್ಧಿಯ ಹಾಗೂ ತಮ್ಮ ಪ್ರಿಯ ತಾಯಿನಾಡಿನ ದಾರಿದ್ರ್ಯದ ವ್ಯಥೆಗೊಳಿಸುವ ಭೇದವನ್ನು ಕಂಡು ಅವರು ಹಂಸತೂಲಿಕಾ ತಲ್ಪದಲ್ಲಿ ಮಲಗುವಾಗ ಕಂಬನಿಸುರಿಸುತ್ತ ನಿದ್ರೆಯಿಲ್ಲದೆ ರಾತ್ರಿಯನ್ನು ಕಳೆಯುತಿದ್ದರು. ಭಾರತಕ್ಕೆ ಮರಳಿ ಬಂದು ಅವರು ತಮ್ಮ ಅದ್ವಿತೀಯ ಸಂದೇಶ

ವನ್ನು ಕೊಡುತ್ತ ತೀಕ್ಷ್ಣ ಸ್ವದೇಶಪ್ರೇಮದಿಂದ ಇಡೀ ದೇಶದಲ್ಲಿ ಸಂಚಾರಮಾಡಿದರು.

ಸ್ವಾಮೀಜಿಯವರ ಪ್ರಾಣೋಜ್ಜೀವಕ ಸಂದೇಶದಿಂದ ಭಾರತೀಯರು ತಮ್ಮ ಹಿಂದಿನ ಮಹಾವೈಭವವನ್ನೂ ವ್ಯಕ್ತಿತ್ವವನ್ನೂ ತಿಳಿದುಕೊಂಡರು; ಹಾಗೂ ಪ್ರಭಾವಯುತ ಭವಿಷ್ಯವನ್ನು ಪರಿಣಾಮಗೊಳಿಸುವ ಸಾಮರ್ಥ್ಯವು ತಮ್ಮ ಪ್ರಾಚೀನ ಸಂಸ್ಕೃತಿ ಹಾಗೂ ಆಧ್ಯಾತ್ಮಿಕತತ್ತ್ವದಲ್ಲಿದೆ ಎಂದು ಸ್ಪಷ್ಟವಾಗಿ ಗ್ರಹಿಸಿದರು. ಪಾಶ್ಚಾತ್ಯ ಸಂಸ್ಕೃತಿ ಹಾಗೂ ತತ್ತ್ವಗಳಿಂದ ದಿಗ್ಭ್ರಮೆಗೊಂಡ, ಪಾಶ್ಚಾತ್ಯರ ದಾಸತ್ವವನ್ನು ಗ್ರಹಿಸಿದ ಶಿಕ್ಷಿತ ಭಾರತೀಯರು ಹಾಗೂ ಹಿಂದೂಮತದ ಕೆಲ ಅಂಶಗಳನ್ನು ಈ ತನಕ ಅವಹೇಳನಮಾಡಿ ಬಂದ ಸುಧಾರಿತ ಕೆಲ ಜನರು ಕೂಡ ತಮ್ಮ ಆಧ್ಯಾತ್ಮಿಕ ಸಂಸ್ಕೃತಿಯ ಶ್ರೇಷ್ಠತೆಯನ್ನು ಮನಗಂಡರು. ಅಲ್ಲದೆ ಅವರ ಸಂದೇಶವು ಭಾರತೀಯರಿಗೆ ತಮ್ಮ ಈಗಿನ ಅವನತಿಯ ಆಳವನ್ನು ಸರಿಯಾಗಿ ಅಳೆಯಲು ಸಹಾಯಮಾಡಿತು. ತಮ್ಮ ಶಾರೀರಕಕ್ಷೀಣತೆ, ಜಡಸ್ವಭಾವ, ನಿರ್ವೀರ್ಯತೆ, ಸ್ವಪ್ರಯತ್ನಹೀನತೆ, ಅಶ್ರದ್ಧೆ, ಅವಿಧೇಯತೆ, ಕಾರ್ಯಲಾಘವ, ರಚನಾಶಕ್ತಿಹೀನತೆ, ಮೇಲಾಗಿ ತಮ್ಮ ಅತ್ಯಂತ ಪ್ರೇಮಾಭಾವ, ಸಂಕುಚಿತ ಮನೋಭಾವ ಹಾಗೂ ಸಾಂಸ್ಕೃತಿಕ ಭಿನ್ನತೆ ತಮ್ಮನ್ನು ವಿಪನ್ನ ಜನಾಂಗಗಳ ಮಾದರಿಯನ್ನಾಗಿ ಇಳಿಸಿದ್ದಾವೆ ಹಾಗೂ ಅಶಕ್ತತೆ, ಆಶಾರಹಿತ ಹೊರಳಾಟದಿಂದಲೂ ಅಸ್ತವ್ಯಸ್ತತೆಯಿಂದಲೂ ಎದ್ದೇಳಲು ಸಾಮರ್ಥ್ಯಹೀನರನ್ನಾಗಿ ಮಾಡಿದ್ದಾವೆಂದು ಅವರು ತಿಳಿದುಕೊಂಡರು. ಹೊಲಸು ಹಾಗೂ ಅವನತಿಯ ಹೇಯವಾದ ಲೇಪದ ಕೆಳಕ್ಕೆ ಅವರ ಹೃದಯಾಂತರಾಳದಲ್ಲಿ ಅಪಾರ ಸತ್ತ್ವಗಳು ಇನ್ನೂ ಮರೆಯಾಗಿವೆ ಎಂದು ಅವರು ಕಂಡುಹಿಡಿಯುವಂತೆ ಸ್ವಾಮೀಜೀ ಅವರಿಗೆ ನೆರವಾದರು. ಪುನರಪಿ ಅವರ ಋಷಿವಾಣಿಯ ಮೂಲಕ ಭಾರತಕ್ಕೆ ಸಂಪೂರ್ಣ ಪುನರುಜ್ಜೀವಿತ ಹಾಗೂ ಉಜ್ವಲವಾದ ಭವಿಷ್ಯವುಂಟೆಂದೂ ಭಾರತೀಯರಿಗೆ ದೃಗ್ಗೋಚರವನ್ನಾಗಿ ಮಾಡಿಸಿದರು. ಸ್ವಾಮೀಜೀ ಹೀಗೆಂದರು–'ದೈವಾಜ್ಞೆ ಹೊರಟಿದೆ. ಭಾರತಮಾತೆಯು ಎದ್ದೇಳಲೇಬೇಕು. ಯಾರೂ ಅವಳನ್ನು ವಿರೋಧಿಸಲಾರರು; ಅವಳು ಇನ್ನೆಂದಿಗೂ ನಿದ್ದೆ ಹೋಗಲಾರಳು; ಹೊರಗಿನ ಆಳಿಕೆಯು ಅವಳನ್ನು ಇನ್ನೆಂದಿಗೂ ತಡೆಗಟ್ಟಲಾರದು; ಅಪಾರ ಶಕ್ತಿಯುತ ಪ್ರಚಂಡ ಭಾರತಮಾತೆಯು ಎದ್ದು ನಿಂತಿರುತ್ತಾಳೆ. ದೀರ್ಘತಮ ರಾತ್ರಿಯು ಗತಿಸಿಹೋಗುತ್ತಿದೆ, ದಾರುಣತಮ, ವಿಪತ್ತು ಕಟ್ಟಕಡೆಗೆ ಅಂತ್ಯವಾಗುತ್ತಿದೆ ಹಾಗೂ ಒಂದು ವಾಣಿ ಕೇಳುತ್ತಿದೆ–ಹಿಮಾಲಯದ ಮಂದಮಾರುತದಂತೆ ನಿರ್ಜೀವ ಎಲುಬುಗಳಿಗೂ ಸ್ನಾಯುಗಳಿಗೂ ಜೀವಕಳೆಯನ್ನು ಕೊಡುತ್ತಿದೆ, ಜಡತೆಯು ಲೋಪವಾಗುತ್ತಿದೆ; ಈ ಭಾರತಮಾತೆಯು ತನ್ನ ದೀರ್ಘ ಗಾಢನಿದ್ರೆಯಿಂದ ಎಚ್ಚರಗೊಳ್ಳುತ್ತಿದ್ದಾಳೆಂದು ಕುರುಡರು ಕಾಣಲಾರರು, ವಿಕಾರಸ್ವಭಾವದವರು ಒಪ್ಪಲಾರರು.' ವಾಸ್ತವಿಕವಾಗಿ ಸ್ವಾಮೀಜೀ ಒಂದು ಕೈಯಿಂದ ಭಾರತಮಾತೆಯ ಹಿಂದಿನ ಉಜ್ವಲ ಇತಿಹಾಸವನ್ನೂ, ಮತ್ತೊಂದು ಕೈಯಿಂದ ಅತಿದೇದೀಪ್ಯಮಾನವಾದ ಭವಿಷ್ಯವನ್ನು ತೋರಿಸುತ್ತಿದ್ದು, ಅವರೊಬ್ಬ ದೇವದೂತರೋ ಎಂಬಂತೆ ತೋರುತಿತ್ತು. ಅವರ ವಾಣಿಯು ಭಾರತೀಯರನ್ನು ಆಶಾಭರಿತರನ್ನಾಗಿಯೂ ಶಕ್ತಿವಂತರನ್ನಾಗಿಯೂ, ಉತ್ಸಾಹಿಗಳನ್ನಾಗಿಯೂ ಮಾಡಿತು ಹಾಗೂ ಸ್ವಕೀಯ ಸಂಸ್ಕೃತಿಯಲ್ಲಿಯೂ ಅಗಾಧ ಮಹಿಮೆಯಲ್ಲಿಯೂ, ತಮ್ಮಲ್ಲಿಯೂ ಶ್ರದ್ಧೆಯನ್ನು ಪ್ರೇರಿಸಿತು.

ಆದರೆ ಭಾರತೀಯರು ತಮ್ಮ ಪ್ರಾಚೀನ ಮಹಿಮೆಯನ್ನು ಸುಮ್ಮನೆ ಕೊಂಡಾಡುತ್ತ ಅಥವಾ ಭವಿಷ್ಯದ ಉಜ್ವಲ ಜೀವನದ ಕುರಿತು ಪದ್ಮಾಸನದಲ್ಲಿ ಕುಳಿತು ಧ್ಯಾನಿಸುತ್ತ ಇರಬೇಕೆಂದು ಸ್ವಾಮೀಜಿಯವರ ಉದ್ದೇಶವಲ್ಲ. ಈ ಋಷಿವಾಣಿಯಿಂದ ಅವರನ್ನು ಉತ್ಸಾಹಗೊಳಿಸಿ ಅವರ ಅವನತಿಯ ಕಾರಣಗಳನ್ನು ಕಂಡುಹಿಡಿಯಲೂ, ಅವರು ಕಳೆದುಕೊಂಡ ಮಹಿಮೆಯನ್ನು ಪುನಃ ಹೊಂದುವುದಕ್ಕೆ ಅಂತರಾಯವಾದ ಆ ಕಾರಣಗಳನ್ನು ಹೋಗಲಾಡಿಸಲೂ ಅವರನ್ನು ಪ್ರೋತ್ಸಾಹಿಸಿದರು. ಧರ್ಮದ ವಿಷಯದಲ್ಲಿ ಉದಾಸೀನತೆ, ಕರ್ತವ್ಯಕರ್ಮಗಳನ್ನು ಗೀತೋಪದೇಶದಂತೆ ನಿಷ್ಕಾಮಭಾವದಿಂದ ಮಾಡುವುದನ್ನು ತಪ್ಪಿದುದು, ನಿಮ್ನ ಶ್ರೇಣಿಯವರ ಹಾಗೂ ಹೆಂಗಸರ ಕ್ಷೇಮಾಭಿವೃದ್ಧಿಯ ಕಾರ್ಯದಲ್ಲಿ ಉದಾಸೀನತೆ, ದೈಹಿಕ ದೌರ್ಬಲ್ಯ, ಶ್ರದ್ಧಾರಾಹಿತ್ಯ, ವಿಚಾರಸರಣಿ ಹಾಗೂ ಕಾರ್ಯಾಚರಣೆಗಳಲ್ಲಿ ವ್ಯತ್ಯಾಸ, ಅಸೂಯೆ, ಪಕ್ಷಭಾವನೆ, ರಚನಾಶಕ್ತಿಶೂನ್ಯತೆ, ಸಂಕುಚಿತಭಾವ, ಹಿಂದಿನ ಸಂಸ್ಕೃತಿಯಲ್ಲಿ ಉದಾಸೀನತೆ, ಕ್ಷಾತ್ರಧರ್ಮದ ಪತನ, ಅಸ್ಪೃಶ್ಯತಾದೋಷ, ಅಪ್ರಾಪ್ತವಯಸ್ಕರ ವಿವಾಹ, ಸಾಮಾಜಿಕ ನಿಯಮಬಂಧನ ಇತ್ಯಾದಿಗಳು ನಮ್ಮ ಅವನತಿಗೆ ಕಾರಣಗಳೆಂದು ಅವರು ತೋರಿಸಿಕೊಟ್ಟರು. ಈ ಕೊರತೆಗಳನ್ನು ಹೋಗಲಾಡಿಸಲು ತಾಯಿನಾಡಿನ ಆತ್ಮೋದ್ಧಾರಕ್ಕಾಗಿ ತಮ್ಮ ಜೀವನವನ್ನು ಮೀಸಲಿಡಲು ಸ್ವಾಮೀಜೀ ತಮ್ಮ ದೇಶವಾಸಿಯರಿಗೆ ಹೇಳಿದರು.

ಸ್ವಾಮೀಜೀ ಹೀಗೆಂದರು—"ನಮ್ಮ ಅವನತಿಗೆ ನಾವೇ ಹೊಣೆಗಾರರು. ನಮ್ಮ ಶ್ರೀಮಂತ ಪೂರ್ವಜರು ನಮ್ಮ ದೇಶದ ನಿಮ್ನ ದರ್ಜೆಯವರನ್ನು ಅವರು ಅಸಹಾಯರಾಗುವ ತನಕ ಅವರನ್ನು ತಿರಸ್ಕಾರದ ದೃಷ್ಟಿಯಿಂದ ಕಂಡರು. ಅವರ ಯಮಯಾತನೆಯಿಂದ ನಮ್ಮ ಬಡಜನರು ತಾವು ಮನುಷ್ಯರೆಂದು ಕೂಡ ಮರೆತುಬಿಟ್ಟರು. ಮಧ್ಯಯುಗದ ಹಿಂದೂ ಸಮಾಜದ ಸಂಪ್ರದಾಯಸಿದ್ಧ ಮುಂದಾಳುಗಳಾದ ವಿಶೇಷಾಧಿ

ಕಾರಯುಕ್ತ ಪುರೋಹಿತವರ್ಗದವರು, ನಮ್ಮ ವೈದಿಕ ಋಷಿಗಳ ಉದಾತ್ತ ಧ್ಯೇಯವನ್ನು ಮರೆತುಬಿಟ್ಟು, ನಿಮ್ನ ಶ್ರೇಣಿಯ ಜನತೆಗಾಗಿ ಬಿರುಸಾದ ಸಾಮಾಜಿಕ ನಿಯಮಗಳನ್ನು ರಚನೆ ಮಾಡಿದ್ದರು. ಇದರಿಂದ ನಮ್ಮ ಜನಾಂಗವು ದುರ್ಬಲವಾಯಿತು. ಪುರೋಹಿತವರ್ಗದವರು ಧರ್ಮದ ಹೆಸರಿನಲ್ಲಿ ಜಾತಿ ವಿಭಾಗವನ್ನು ಪ್ರೋತ್ಸಾಹಿಸಿದರು. ಪಂಥಮನೋಭಾವವು ದಿನದ ಕಾರ್ಯಕ್ರಮವಾಗಿ ನಿಂತಿತು. ಇದು ಈ ಮಹಾಜನಾಂಗವನ್ನು ಅನೇಕಾನೇಕ ವಿರುದ್ಧದಳಗಳಾಗಿ ವಿಭಾಗಿಸಿತು. ಅವರು ಪರದೇಶಗಳಸಂಸರ್ಗವನ್ನೇ ಬಿಟ್ಟುಬಿಟ್ಟರು ಹಾಗೂ ಪರದೇಶಿಯರನ್ನು ಮ್ಲೇಚ್ಛರೆಂದು ತಿರಸ್ಕರಿಸಿದರು, ಅಲ್ಲದೆ ಕಡಲ ಪ್ರಯಾಣವನ್ನು ಕಡುಪಾಪವೆಂದೆಣಿಸಿದರು. ಭಾರತ ಜನಾಂಗವು ಈ ರೀತಿಯ ಪ್ರತಿಬಂಧಕದಲ್ಲಿದ್ದುಕೊಂಡು ಸಾಮಾಜಿಕ ನಿಯಮಗಳ ಹಾಗೂ ಧರ್ಮದ ಹೆಸರಿನಲ್ಲಿ ಪರಸ್ಪರ ಕಾದಾಡುತ್ತ ಬಲಹೀನರಾಗಿ ಪರದೇಶೀ ಶತ್ರುಗಳಿಗೆ ತುತ್ತಾದರು.

ಆದ್ದರಿಂದ ಭಾರತ ಜನಾಂಗವನ್ನು ಬಲಾಢ್ಯರನ್ನಾಗಿ ಮಾಡಬೇಕಾದರೆ ಅವರ ಸಂಕೀರ್ಣತೆಯ, ಮಡಾಂಧತೆಯ, ಸ್ವಾರ್ಥದ ಹಾಗೂ ಸಾಮಾಜಿಕ ದಬ್ಬಾಳಿಕೆಯ ಸಂಪೂರ್ಣ ಪ್ರಾಯಶ್ಚಿತ್ತದಿಂದಲೇ ಆಗಬೇಕೆಂದು ಸ್ವಾಮೀಜೀ ಅವರಿಗೆ ನಿರ್ದೇಶಿಸಿದರು. ಈ ಜನಾಂಗವು ಎಂದಿಗಾದರೂ ಗೌರವದ ಶಿಖರಕ್ಕೆ ಇನ್ನೊಮ್ಮೆ ಹತ್ತಬೇಕಾದರೆ ಅದು ಐಕಮತ್ಯದ ಮುನ್ನೆಲೆಯಿಂದಲೇ ಆಗಬೇಕೆಂದರು. ಔಪನಿಷದಿಕ ಋಷಿಗಳ ಉದಾರ ಘೋಷಣೆಗಳ ಆಧಾರದ ಮೇಲೆ ಹೊಂದಿಕೊಂಡಿರುವ ನಮ್ಮ ಸಾರ್ವತ್ರಿಕ ಧಾರ್ಮಿಕ ಮನೋಭಾವದಿಂದಲೇ, ಪುರೋಹಿತ ಅಧಿಕಾರಕ್ಕೆ ಒಳಪಟ್ಟ ವ್ಯತ್ಯಾಸಗಳನ್ನು ಏಕೀಕರಿಸುವುದರಿಂದಲೇ ಜನಾಂಗದ ಒಕ್ಕಟ್ಟಿನ ಮಾರ್ಗವನ್ನು ಹಿಂದೂಗಳು ಸುಗಮವನ್ನಾಗಿ ಮಾಡಬಹುದೆಂದು ಅವರು ವಿಪರಿಸಿದರು. ಹಿಂದೂ ಜನಾಂಗವು ತಮ್ಮ ಸ್ವಕೀಯ ಮೂಲಗ್ರಂಥವಾದ ವೇದಾಂತದ ಉನ್ನತ ಧ್ಯೇಯಗಳನ್ನು ಪುನಃ ತಮ್ಮ ಜೀವನದಲ್ಲಿ ಅನುಷ್ಠಿಸಿದರೆ, ಮನುಷ್ಯರಲ್ಲಿದ್ದ ಪ್ರಬೇಧದ ಪ್ರತಿಬಂಧಕವನ್ನು ಧ್ವಂಸಮಾಡಬಹುದೆಂದೂ, ಈ ವಿಧಾನದಿಂದ ಭಾರತದ ಪಂಥ ಹಾಗೂ ಕೋಮುಗಳನ್ನು ಒಂದು ಶಕ್ತಿಸಂಪನ್ನ ಜನಾಂಗವನ್ನಾಗಿ ಸಂಯೋಜಿಸಿ ಸಂಬದ್ಧತೆಯ ಅದ್ಭುತ ಸಾಮರ್ಥ್ಯವನ್ನು ವ್ಯಕ್ತಪಡಿಸಬಹುದೆಂದೂ ಸ್ವಾಮೀಜೀ ಒತ್ತಿಹೇಳಿದರು.

ಪ್ರಾಯೋಗಿಕ ವೇದಾಂತವನ್ನು ಅಂದರೆ ಮಾನವನ ದೇವತ್ವ ಹಾಗೂ ವಿಶ್ವದ ಏಕತ್ವ ಇತ್ಯಾದಿಗಳನ್ನು ಆಚರಣೆಯಲ್ಲಿ ತಂದರೆ ಭಾರತದ ಸಮಸ್ಯೆಗಳನ್ನು ಬಗೆಹರಿಸಬಹುದಲ್ಲದೆ, ತಾಮಸ ಹಾಗೂ ನಿರಾಶೆ ಎಂಬ ಹೂಳಿನಿಂದಲೂ ಭಾರತವನ್ನು ಎಬ್ಬಿಸಬಹುದೆಂದು ಸ್ವಾಮೀಜೀ ಇನ್ನೂ ನಿರ್ದೇಶಿದರು. ಈಗ ದೇಶಕ್ಕೆ ಬೇಕಾದುದು ಕಬ್ಬಿಣದ ಸ್ನಾಯುಗಳು ಹಾಗೂ ಉಕ್ಕಿನ ನರಗಳು, ವಿಶ್ವದ ರಹಸ್ಯವನ್ನೂ ಗೂಢತತ್ತ್ವವನ್ನೂ ಭೇದಿಸಿಕೊಂಡು ಹೋಗುವ ಹಾಗೂ ಯಾರಿಂದಲೂ ವಿರೋಧಿಸಲಾಗದ ಅದ್ಭುತವಾದ ಸಂಕಲ್ಪ, ಈ ಸಂಕಲ್ಪದಿಂದ ಕಡಲಡಿಗೆ ಹೋಗಿ, ಪ್ರತ್ಯಕ್ಷ ಮೃತ್ಯುವನ್ನು ಎದುರಿಸುವುದಾದರೂ ಎಲ್ಲ ಕಾರ್ಯಗಳನ್ನು ಸಾಧಿಸಬೇಕೆಂದು ಅವರು ಹೇಳಿದರು. ನಮಗೆ ಸರ್ವಪ್ರಥಮ ಬೇಕಾದುದು ಇದೇ. ಅದ್ವೈತದ ಧ್ಯೇಯವನ್ನು, ವಿಶ್ವ ಏಕತ್ವದ ಧ್ಯೇಯವನ್ನು ಸಿದ್ಧಿಸಿಕೊಂಡೇ ಇದನ್ನು ರಚಿಸಬಹುದು, ನೆಲೆಗೊಳಿಸಬಹುದು ಹಾಗೂ ಬಲಗೊಳಿಸಬಹುದು. ನಮಗೆ ಬೇಕಾದುದು ಶಕ್ತಿ– ಶಕ್ತಿಯನ್ನೇ ಅವಲಂಬಿಸಬೇಕು–ನಮ್ಮ ಉಪನಿಷತ್ತುಗಳು ಆ ಶಕ್ತಿಯ ಗಣಿಗಳು. ಇಡೀ ಜಗತ್ತನ್ನೇ ವೀರ್ಯಯುತವನ್ನಾಗಿ ಮಾಡುವ ಶಕ್ತಿ ಅವುಗಳಲ್ಲಿದೆ, ಅವುಗಳ ಮೂಲಕ ಇಡೀ ಜಗತ್ತನ್ನೇ ಚೇತನಗೊಳಿಸಬಹುದು, ಬಲಗೊಳಿಸಬಹುದು ಹಾಗೂ ಚಟುವಟಿಕೆಯಿಂದ ತುಂಬಿಸಬಹುದು. ಅವುಗಳು ಬಲಹೀನರನ್ನೂ, ದುಃಖಾರ್ತರನ್ನೂ, ಎಲ್ಲ ಜನಾಂಗಗಳಲ್ಲಿ ಮತಪಂಥಗಳಲ್ಲಿ ಕೆಳಕ್ಕೆ ತುಳಿದವರನ್ನೂ ತಮ್ಮ ಕಾಲಮೇಲೆ ನಿಂತುಕೊಳ್ಳಲೂ, ಮುಕ್ತನಾಗಲೂ ತುತೂರಿಕರೆಯಿಂದ ಕರೆಯುತ್ತವೆ. ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಮುಕ್ತಿಯೇ ಉಪನಿಷತ್ತುಗಳ ಸೂತ್ರವಾಕ್ಯವಾಗಿದೆ. ನೀವು ನಿಮ್ಮ ನೈಜಸ್ವರೂಪವನ್ನು ಕಂಡುಹಿಡಿಯಿರಿ, ಅನ್ಯರಿಗೂ ಕೂಡ ಅವರ ನೈಜಸ್ವರೂಪವನ್ನು ತಿಳಿಸಿರಿ, ಸುಪ್ತ ಆತ್ಮವು ಎಚ್ಚರಗೊಳ್ಳಲಿ, ಸ್ವಜಾಗೃತಿಯುಕ್ತ ಉದ್ಯಮದಲ್ಲಿ ಸುಪ್ತಆತ್ಮನು ಎಚ್ಚರಗೊಂಡರೆ ಶಕ್ತಿಯು ಬರುವುದು, ನಿರ್ಮಲ ಯಶಸ್ಸು ಬರುವುದು, ಸೌಜನ್ಯ ಬರುವುದು, ಪರಿಶುದ್ಧತೆ ಬರುವುದು ಹಾಗೂ ಅತ್ಯುತ್ತಮವಾದುದೆಲ್ಲ ಕೈಗೂಡುವುದು."

ವೇದಾಂತವು ಜನಾಂಗಕ್ಕೆ ಬೇಕಾದ ಶಕ್ತಿಯನ್ನು ಕೊಡುವುದೆಂದು ಘಂಟಾಘೋಷವಾಗಿ ಹೇಳಿದರು. "ಉಪನಿಷತ್ತುಗಳ ತತ್ತ್ವಗಳು ನಿಮ್ಮ ಸುಖದಲ್ಲಿವೆ, ಅವುಗಳನ್ನು ಗ್ರಹಿಸಿರಿ, ಅವುಗಳನ್ನು ನಿಮ್ಮ ನಿಮ್ಮ ಜೀವನದಲ್ಲಿ ಆಚರಿಸಿರಿ, ಹಾಗಾದರೆ ಭಾರತದ ಉದ್ಧಾರವು ಶೀಘ್ರದಲ್ಲಿಯೇ ಸಾಧ್ಯವಾಗುವುದು." ಇದನ್ನು ಸಾಧಿಸಲು ಪ್ರಥಮತಃ ಭಾರತದಲ್ಲಿ ವೇದಾಂತದ ಭಾವ ಹಾಗೂ ಆದರ್ಶಗಳ ಪ್ರವಾಹವು ಹರಿಯುವಂತೆ ಮಾಡಬೇಕು. ಅದರೊಂದಿಗೆ ನಿಮಗೆ ಬೇಕಾದ ಲೌಕಿಕ ಹಾಗೂ ಬೇರೆ ಎಲ್ಲ ಜ್ಞಾನವು ಬರುವುದು. ಆದರೆ ಧಾರ್ಮಿಕಜ್ಞಾನವನ್ನು ಕೊಡದೆ ಬರಿಯ ಲೌಕಿಕ ಜ್ಞಾನವನ್ನು ಕೊಟ್ಟರೆ, ನಿಮ್ಮ ಪ್ರಯತ್ನವು ವಿಫಲವಾಗುವುದು– ಜನತೆಯ ಮೇಲೆ ಅದರ ಪರಿಣಾಮವು ಶಾಶ್ವತವಾಗದು.

ಸ್ವಾಮೀಜೀ ಭಾರತದಲ್ಲೆಲ್ಲ ಸಂಚಾರಮಾಡಿ, ಎಲ್ಲ ವರ್ಗದ ಜನರೊಂದಿಗೆ ಸೇರಿದರು ಹಾಗೂ ಸಾವಿರಾರು

ವರ್ಷಗಳಿಂದ ಜನತೆಯು ಯೋಚನೆಗಳೂ, ಕಾರ್ಯಾಚರಣೆಗಳೂ, ಮನೋಭಾವಗಳೂ ಹೆಗ್ಗುರಿಗಳೂ ಧರ್ಮದ ಮೂಲಕವೇ ಹರಿದು ಬಂದಿವೆ ಎಂದು ಕಂಡರು. ಅವರು ತಮ್ಮ ಧಾರ್ಮಿಕ ಅಕೃತ್ರಿಮ ಆದರ್ಶಗಳನ್ನು ಸಂಕೀರ್ಣತೆ ಹಾಗೂ ಮತಾಂಧತೆಯಿಂದ ಕೆಲಕಾಲಕ್ಕಾಗಿ ಮರೆತು ಹೋಗಿರಬಹುದು. ಆದರೆ ಧರ್ಮವು ನಿಸ್ಸಂದೇಹವಾಗಿ ನಿಮ್ಮ ಶ್ರೇಣಿಯ ಜನರನ್ನು ಕಾರ್ಯಾಸಕ್ತಿಸಂಪನ್ನರನ್ನಾಗಿ ಮಾಡುವ ಒಂದು ಶ್ರೇಷ್ಠವಾದ ಪ್ರೇರಕಶಕ್ತಿ ಎಂದು ಮಹಾಪುರುಷರು ಪುನಃ ಪುನಃ ಜನ್ಮವೆತ್ತಿ ಪ್ರದರ್ಶಿಸಿ ಹೋಗಿದ್ದಾರೆ. ಬೇರೆ ಯಾವ ಆದರ್ಶವೂ ಅವರ ಸುಪ್ತಶಕ್ತಿಯನ್ನು ಎಚ್ಚರಗೊಳಿಸಲು ಸಮರ್ಥವಲ್ಲ, ಬೇರೆ ಯಾವ ಪ್ರಚೋದನೆಯೂ ಅವರ ವೀರ್ಯವತ್ತಾದ ಪ್ರತಿಮನೋಭಾವವನ್ನು ಹೊರಡಿಸಲಾರದು, ಬೇರೆ ಯಾವ ದೈವಪ್ರೇರಣೆಯೂ ಅವರ ಶ್ರೇಷ್ಠತಮ ತ್ಯಾಗವನ್ನೂ ಅತ್ಯುತ್ತಮ ಪ್ರಯತ್ನವನ್ನೂ ಮಾಡುವ ಉತ್ಸಾಹವನ್ನು ಕೊಡಲಾರದು. ನಿಮ್ಮಶ್ರೇಣಿಯವರನ್ನು ಧರ್ಮದಿಂದಲೇ ಮಾತ್ರ ಹುರಿದುಂಬಿಸಬಹುದು, ಚಟುವಟಿಕೆ ಸಂಪನ್ನರನ್ನಾಗಿ ಮಾಡಬಹುದೆಂದು ಸ್ವಾಮಿಜೀ ಹೇಳಿದರು.

ಸ್ವಾಮಿಜೀ ಇನ್ನೂ ಹೀಗೆಂದರು–"ಪ್ರತಿಯೊಬ್ಬ ವ್ಯಕ್ತಿಯಂತೆ ಪ್ರತಿಯೊಂದು ಜನಾಂಗಕ್ಕೂ ಒಂದು ಆದರ್ಶವಿದೆ. ಕೆಲ ದೇಶಗಳಲ್ಲಿ ಇಂಗ್ಲಂಡಿನಂತೆ ರಾಜನೈತಿಕ ಶಕ್ತಿಯೇ ಆದರ್ಶವಾಗಿದೆ. ಕಲಾಸೌಂದರ್ಯಜೀವನವೇ ಕೆಲವರಿಗೆ ಆದರ್ಶವಾಗಿದೆ, ಆದರೆ ಧರ್ಮವೇ ಭಾರತದ ಆದರ್ಶವಾಗಿದೆ. ಅದೇ ಭಾರತಜನಾಂಗ ಜೀವನಸಂಗೀತದ ಆಧಾರಶ್ರುತಿ. ಯಾವ ಜನಾಂಗವಾದರೂ ಅನೇಕಾನೇಕ ಶತಮಾನಗಳಿಂದ ಬಂದ ಈ ಪ್ರಾಣಧಾರಣಶಕ್ತಿಯನ್ನು ತೊರೆದರೆ, ಆ ಜನಾಂಗವು ಜೀವಿಸಲಾರದು. ಆದ್ದರಿಂದ ನೀವು ನಿಮ್ಮ ಧರ್ಮವನ್ನು ತ್ಯಜಿಸಿ ರಾಜನೈತಿಕ ಅಥವಾ ಸಾಮಾಜಿಕ ಅಥವಾ ಬೇರೆ ಯಾವ ಆದರ್ಶವನ್ನಾದರೂ ಗ್ರಹಿಸಿದರೆ ಹಾಗೂ ಅದನ್ನೇ ಜನಾಂಗಜೀವನದ ಪ್ರಾಣಧಾರಣಶಕ್ತಿಯೆಂದು ಕೈಕೊಂಡರೆ ನಿಮ್ಮ ಜನಾಂಗವು ನಿರ್ನಾಮವಾಗುವುದು ಖಂಡಿತ. ಇದನ್ನು ನಿವಾರಿಸಲು ನಿಮ್ಮ ಧರ್ಮವೆಂಬ ಪ್ರಾಣಧಾರಣಶಕ್ತಿಯ ಮೂಲಕ ಎಲ್ಲ ಕಾರ್ಯಾಚರಣೆಗಳನ್ನು ನಿರ್ವಹಿಸಬೇಕು. ನಿಮ್ಮ ಎಲ್ಲ ನರಗಳು ನಿಮ್ಮ ಧರ್ಮವೆಂಬ ಪ್ರಾಣಧಾರಣಶಕ್ತಿಯ ಮೂಲಕ ಸ್ಪಂದಿಸಲಿ. ಅಮೇರಿಕ ನಿವಾಸಿಗಳಿಗೆ ಧರ್ಮದ ಮೂಲಕ ಅವರ ಸಾಮಾಜಿಕ ಜೀವನದ ಪ್ರಾಯೋಗಿಕ ಪರಿಣಾಮವನ್ನು ತಿಳಿಸದೆ ಅವರಿಗೆ ಧರ್ಮವನ್ನು ಪ್ರಚಾರಿಸಲು ನನ್ನಿಂದಾಗಲಿಲ್ಲವೆಂದು ನಾನು ಕಂಡ ಪ್ರತ್ಯಕ್ಷ ವಿಷಯವಿದು. ವೇದಾಂತವು ಅದ್ಭುತವಾದ ರಾಜನೈತಿಕ ಪರಿವರ್ತನವನ್ನು ತರುವುದೆಂದು ತೋರಿಸದೆ ಇಂಗ್ಲಂಡ ನಿವಾಸಿಯರಿಗೆ ಧರ್ಮವನ್ನು ಪ್ರಚಾರಿಸಲು ನನ್ನಿಂದಾಗಲಿಲ್ಲ. ಆದ್ದರಿಂದ ಭಾರತದಲ್ಲಿ ಸಾಮಾಜಿಕ ಸುಧಾರಣೆಯನ್ನು ಪ್ರಚಾರಿಸಬೇಕಾದರೆ, ಅದು ಭಾರತೀಯರಿಗೆ ಎಷ್ಟು ಆಧ್ಯಾತ್ಮಿಕತೆಯನ್ನು ಕೊಡುವುದೆಂದು ತೋರಿಸಬೇಕು. ರಾಜನೀತಿಯ ವಿಷಯದಲ್ಲಿ ಹಾಗೆಯೇ ಎಂದು ತಿಳಿಯಬೇಕು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಆಯ್ಕೆಯನ್ನು ತಾನೇ ಮಾಡಿಕೊಳ್ಳಬೇಕು. ಹಾಗೆಯೇ ಜನಾಂಗದ ವಿಷಯದಲ್ಲಿ ಕೂಡಾ ಹೇಳಬಹುದು. ನಾವು ನಮ್ಮ ಆಯ್ಕೆಯನ್ನು ಅತಿ ಪ್ರಾಚೀನಕಾಲದಿಂದಲೂ ಮಾಡಿಕೊಂಡಿದ್ದೇವೆ, ನಾವು ಅದನ್ನೇ ಅನುಸರಿಸಬೇಕು."

ಸ್ವಾಮಿಜಿ ದೈವಪ್ರೇರಿತವಾಣಿಯಿಂದ ಧರ್ಮವೇ ಶಕ್ತಿಯುತವಾದ, ವೀರ್ಯವತ್ತಾದ ಹಾಗೂ ಒಗ್ಗಟ್ಟಾದ ಭಾರತ ಜನಾಂಗವನ್ನು ರಚಿಸುವುದೆಂದು ಪುನಃ ಪುನಃ ನಮಗೆ ಮನವರಿಕೆ ಮಾಡಿದರು. ಅವರು ಹೀಗೆಂದರು—"ಜೀವಾಧಾರವಾದ ರಕ್ತವು ವೀರ್ಯವತ್ತಾಗಿ ಹಾಗೂ ನಿರ್ಮಲವಾಗಿ ಹರಿಯುತಿದ್ದರೆ, ದೇಹದಲ್ಲಿ ವ್ಯಾಧಿಯ ಜೀವಾಣುಗಳು ಜೀವಿಸಲಾರವು. ಧರ್ಮವೇ ನಮ್ಮ ಜೀವಾಧಾರವಾದ ರಕ್ತ. ಅದು ವೀರ್ಯವತ್ತಾಗಿ ಹಾಗೂ ನಿರ್ಮಲವಾಗಿ ದೇಶದಲ್ಲಿ ಹರಿಯುತಿದ್ದರೆ ಎಲ್ಲವೂ ಕೈಗೂಡುವುದು. ಆ ರಕ್ತವು ನಿರ್ಮಲವಾದರೆ, ರಾಜನೈತಿಕ, ಸಾಮಾಜಿಕ ಅಥವಾ ಬೇರೆ ಕೊರತೆಗಳನ್ನು, ನಮ್ಮ ದೇಶದ ದಾರಿದ್ರ್ಯವನ್ನು ಕೂಡ ಹೋಗಲಾಡಿಸಬಹುದು. ಆಧ್ಯಾತ್ಮಿಕತೆಯ ಧ್ವಜವನ್ನು ಈ ದೇಶದಲ್ಲಿ ಎಷ್ಟು ಎತ್ತರವಾಗಿ ಹಿಡಿದುಕೋಡರೂ ಸಾಲದು. ಅದರಿಂದಲೇ ನಮ್ಮ ಆತ್ಮೋದ್ಧಾರ ಸಾಧಿತವಾಗುವುದು."

ಪಾಶ್ಚಾತ್ಯ ಆದರ್ಶವನ್ನು ತಮ್ಮದಾಗಿ ಮಾಡಿಕೊಂಡ ನಮ್ಮ ದೇಶವಾಸಿಯರು ಪಾಶ್ಚಾತ್ಯದಿಂದ ಹೊಂದಿದ ನಿರೂಪಣೆ ಹಾಗೂ ವಿಧಾನದಿಂದ ಭಾರತವನ್ನು ಪುನರುಜ್ಜೀವಿಸಬೇಕೆಂದು ಯೋಚಿಸುತಿದ್ದರು. ಆದರೆ ಅವರ ಪ್ರಯತ್ನವು ನಿರರ್ಥಕವೆಂದೂ, ಹಿಂದೂಜನರು ತಮ್ಮ ಸಾಮಾಜಿಕ, ಆರ್ಥಿಕ, ರಾಜನೈತಿಕ ಕ್ಷೇತಗಳ ಎಲ್ಲ ಕಾರ್ಯಾಚರಣೆಗಳನ್ನು ಧರ್ಮದ ಆಧಾರದ ಮೇಲೆ ನಡಸಿಕೊಂಡು ಹೋಗಬೇಕೆಂದು ಸಾವಿರಾರು ವರ್ಷಗಳಿಂದ ಮಾಡಿದ ಆಯ್ಕೆಯು ತಮ್ಮ ಜನಾಂಗದ ಪ್ರತಿಭೆಯ ಶ್ರೇಷ್ಠವಾದ ಕಾರ್ಯಸಿದ್ಧಿ ಎಂದೂ ಸ್ವಾಮಿಜೀ ನಿರ್ದೇಶಿಸಿದರು. "ಈ ಆಯ್ಕೆಯೇ ಮಹತ್ತಮ ವಿಪ್ಲವಗಳಿಂದ ಬದುಕಿಬರಲೂ ಅವರ ಜಾತಿಗತ ವ್ಯಕ್ತಿತ್ವವನ್ನು ಉಳಿಸಲೂ ಅವರಿಗೆ ಸಾಮರ್ಥ್ಯವನ್ನು ಕೊಟ್ಟಿತು. ನಾವು ಭಾರತದಲ್ಲಿ ಹೋರಾಡುವ ರಾಜನೈತಿಕ ವಿಧಾನಗಳು ಬಹುಕಾಲದಿಂದಲೂ ಯುರೋಪ ದೇಶದಲ್ಲಿದ್ದಾವೆ, ಅನೇಕ ಶತಮಾನಗಳಿಂದ ಅವರು ಅವುಗಳನ್ನು ಕಾರ್ಯಾಚರಣೆಗೆ ತಂದಿರುತ್ತಾರೆ, ಆದರೆ ಅವುಗಳು ಲಾಭ

ಯೋಯುಕವಲ್ಲವೆಂದು ಅವರು ಕಂಡುಹಿಡಿದಿದ್ದಾರೆ. ರಾಜನೀತಿಗೆ ಸಂಬಂಧಪಟ್ಟ ಸಂಸ್ಥೆಗಳು, ವಿಧಾನಗಳು ಉಪಯೋಗಕ್ಕೆ ಸಲ್ಲವು ಎಂದು ಕಂಡು ಹಿಡಿದಿದ್ದಾರೆ. ಯೂರೋಪಿನಲ್ಲಿ ಶಾಂತಿಯಿಲ್ಲ, ಯಾರನ್ನು ಅನುಸರಿಸಬೇಕೆಂದು ಅವರಿಗಿನ್ನೂ ತಿಳಿಯದು. ಖಡ್ಗದಿಂದ ರಾಜ್ಯಭಾರ ನಡೆಸುವುದು ನಿರರ್ಥಕವಾಗಿದೆ ಹಾಗೂ ಆಶಾಜನಕವಲ್ಲ. ಬಲಪ್ರಯೋಗದಿಂದ ರಾಜ್ಯಭಾರ ಮಾಡುವ ಮನೋಭಾವಗಳು ಯಾವ ಕೇಂದ್ರಗಳಲ್ಲಿ ಹುಟ್ಟಿದ್ದಾವೋ ಅವುಗಳೇ ಪ್ರಥಮತಃ ಕೀಳು ರೂಪಕ್ಕೆ ಇಳಿಯುವುವು ಹಾಗೂ ನುಚ್ಚುನೂರಾಗಿ ಒಡೆದು ಹೋಗುವುವು. ಪ್ರಾಪಂಚಿಕಶಕ್ತಿಯ ವಿಕಾಸಕೇಂದ್ರವಾದ ಯೂರೋಪು ದೇಶವು ಅದರ ಮನೋಭಾವವನ್ನು ಪರಿವರ್ತಿಸಲು ಗಮನಕೊಡದಿದ್ದರೆ, ಅದರ ನೆಲೆಯನ್ನು ಪರಿವರ್ತಿಸಿ ಆಧ್ಯಾತ್ಮಿಕತೆಯನ್ನು ಜೀವನಾಧಾರವಾಗಿ ಇಟ್ಟುಕೊಳ್ಳದಿದ್ದರೆ, ಅದು ಐವತ್ತು ವರ್ಷದೊಳಗೆ ನುಚ್ಚುನೂರಾಗುವುದು." ಎಂದು ಸ್ವಾಮೀಜೀ ಭವಿಷ್ಯವಾಣಿಯನ್ನು ಹೇಳಿದರು.

ಸಮಾಜಸ್ವಾಮ್ಯವಾದವನ್ನು ಅಥವಾ ಸಮತಾವಾದವನ್ನು ಕೂಡ ಆಧ್ಯಾತ್ಮಿಕತೆಯ ಮೇಲೆ ಆಧಾರವಾಗಿಟ್ಟುಕೊಳ್ಳದಿದ್ದರೆ ಯಶಸ್ವಿಯಾಗದೆಂದು ಕೂಡ ನಿರ್ದೇಶಿಸಿದರು. "ಸಮಾಜ ಸ್ವಾಮ್ಯವಾದ ಅಥವಾ ಜನತೆಯ ಯಾವುದಾದರೊಂದು ಆಳಿಕೆಯು—ಅದಕ್ಕೆ ಯಾವ ಹೆಸರನ್ನೇ ಕೊಡಬಹುದು—ರಂಗದಲ್ಲಿ ಬರುವುದು ಖಂಡಿತ. ಜನರು ಅಗತ್ಯವಾಗಿ ತಮ್ಮ ಪ್ರಾಪಂಚಿಕ ಅಭಾವಗಳನ್ನು ಪರಿಹಾರಮಾಡಲಪೇಕ್ಷಿಸುವರು. ಪರಿಶ್ರಮದ ಪರಿಮಾಣ ಹೆಚ್ಚಾಗಬಾರದೆಂದೂ, ಬೇಕಾದ ಆಹಾರ ಸಾಮಗ್ರಿಗಳನ್ನೂ ಬಟ್ಟೆಬರೆಗಳನ್ನೂ ಪಡೆಯಬೇಕೆಂದೂ ಅಪೇಕ್ಷಿಸುವರು—ಅವರು ದಬ್ಬಾಳಿಕೆಯನ್ನೂ ಯುದ್ಧವನ್ನೂ ಅಪೇಕ್ಷಿಸುವುದಿಲ್ಲ. ಸಭ್ಯತೆಯು ಅಧ್ಯಾತ್ಮಿಕತೆಯ ಮೇಲೆ, ಜನರ ಸೌಜನ್ಯದ ಮೇಲೆ ಹೊಂದಿಕೊಳ್ಳದಿದ್ದರೆ, ಅದು ಶಾಶ್ವತವಾಗಿ ನೆಲೆಯಾಗುವುದೆಂದು ನಮಗೆ ಭರವಸೆ ಎಲ್ಲಿ? ಧರ್ಮವು ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತದೆಂದು ಭರವಸೆಯನ್ನಿಡಿರಿ. ಧರ್ಮವನ್ನು ಆಧಾರವಾಗಿಟ್ಟುಕೊಂಡರೆ ಎಲ್ಲವು ಸರಿಯಾಗಿ ನಡೆಯುವುದು" ಎಂದು ಸ್ವಾಮೀಜೀ ಹೇಳಿದರು.

ಪಾಶ್ಚಾತ್ಯ ಆದರ್ಶವನ್ನು ಅನುಸರಿಸುವ ಭಾರತೀಯರು ಭಾರತದ ಅವನತಿಗೆ ಧರ್ಮವೇ ಕಾರಣವೆಂದು ದೂರುತ್ತಾರೆ. ಆದರೆ ಸ್ವಾಮೀಜೀ ಅದನ್ನು ಉತ್ಕಟವಾಗಿ ವಿರೋಧಿಸಿ "ಹಿಂದೂ ಸಮಾಜವನ್ನು ಅಭಿವೃದ್ಧಿಗೆ ತರಲು ಧರ್ಮವನ್ನು ನಾಶಗೊಳಿಸಬೇಕಾಗಿಲ್ಲವೆಂದು ನಾನು ಘಂಟಾ ಘೋಷವಾಗಿ ಹೇಳುತ್ತೇನೆ. ಈಗಿನ ಸಾಮಾಜಿಕ ಪರಿಸ್ಥಿತಿಯ ಕಾರಣ ಧರ್ಮವಲ್ಲ, ಧರ್ಮವನ್ನು ಸರಿಯಾಗಿ ಅನುಷ್ಠಿಸದಿದ್ದುದೇ ಕಾರಣ. ಇದರ ಸತ್ಯಾಂಶವನ್ನು ನಾನು ನಮ್ಮ ಪ್ರಾಚೀನ ಗ್ರಂಥಗಳಿಂದ ಪ್ರಮಾಣೀಕರಿಸಬಲ್ಲೆನು. ಇದೇ ನನ್ನ ಬೋಧನೆ. ಇದನ್ನು ನಾವು ನಮ್ಮ ಕಾರ್ಯಾಚರಣೆಯಲ್ಲಿ ತರಲು ಜೀವಮಾನವೆಲ್ಲ ಹೆಣಗಾಡಬೇಕು" ಎಂದು ಸ್ವಾಮೀಜೀ ಹೇಳಿದರು.

ಸ್ವಾಮೀಜೀ ಭಾರತದ ಏಳಿಗೆಗಾಗಿ ವೇದಾಂತದ ಆಧಾರದ ಮೇಲೆ ಸಮಾಜಸೇವೆಯ ವಿಧಾನವನ್ನು ನಿರ್ದಿಷ್ಟವಾಗಿ ಹೇಳಿಕೊಟ್ಟರು; ಬಡವರು, ಅನಕ್ಷರಸ್ಥರು ಹಾಗೂ ನಿಮ್ನ ಶ್ರೇಣಿಯ ಜನರೆಲ್ಲ ಪರಮಾತ್ಮನ ಸ್ವರೂಪಗಳೆಂದು ಅವರ ಸೇವೆಯನ್ನು ಭಕ್ತಿ, ತ್ಯಾಗ ಹಾಗೂ ಪೂಜ್ಯಭಾವನೆಯಿಂದ ಮಾಡಲು ದೇಶವಾಸಿಯರನ್ನು ಪ್ರೋತ್ಸಾಹಿಸಿದರು. "ನೀವು ದೇವರನ್ನು ಎಲ್ಲಿ ಕಾಣುತ್ತೀರಿ? ಬಡವರು, ದುಃಖಾರ್ತರು, ಅಶಕ್ತರೆಲ್ಲ ದೇವರಲ್ಲವೆ? ಪ್ರಥಮತಃ ಅವರನ್ನು ಭಜಿಸಿರಿ. ಗಂಗಾತೀರದಲ್ಲಿ ಬಾವಿ ತೋಡುವುದೇತಕ್ಕೆ? ಈ ಜನರೆಲ್ಲ ನಿಮ್ಮ ದೇವತೆಗಳಾಗಲಿ! ಅವರಿಗಾಗಿ ಯೋಚಿಸಿರಿ, ಅವರಿಗಾಗಿ ದುಡಿಯಿರಿ, ಅವರಿಗಾಗಿ ಸರ್ವದಾ ಪ್ರಾರ್ಥಿಸಿರಿ—ದೇವರು ನಿಮಗೆ ದಾರಿಯನ್ನು ತೋರಿಸುವನು. ದರಿದ್ರನಾರಾಯಣರಿಗಾಗಿ ಹೃದಯದ ರಕ್ತ ಸುರಿಸುವವನೇ ಮಹಾತ್ಮನು, ಅನ್ಯಥಾ ಮಾನವನು ದುರಾತ್ಮನು" ಎಂದು ಸ್ವಾಮೀಜೀ ಹೇಳಿದರು.

"ಕೆಳಗಿನ ದರ್ಜೆಯ ಜನರ ವಿಷಯವಾಗಿ ಉದಾಸೀನತೆಯನ್ನು ಅವಲಂಬಿಸಿದುದೇ ನಮ್ಮ ಜಾತಿಗತ ಮಹಾಪಾಪ, ಇದೇ ನಮ್ಮ ಅಧಃಪತನಕ್ಕೆ ಕಾರಣಗಳಲ್ಲೊಂದು. ಈ ಜನತೆಗೆ ಬೇಕಾದ ವಿದ್ಯೆ ಹಾಗೂ ಆಹಾರವನ್ನು ಒದಗಿಸಿಕೊಟ್ಟು ಅವರ ಆರೈಕೆಯನ್ನು ಸರಿಯಾಗಿ ತೆಗೆದುಕೊಳ್ಳದಿದ್ದರೆ ರಾಜನೀತಿ ನಿರರ್ಥಕವಾಗುವುದು. ಅವರು ನಮ್ಮ ವಿದ್ಯಾಭ್ಯಾಸಕ್ಕೆ ಹಣವನ್ನು ಕೊಡುತ್ತಾರೆ, ನಮ್ಮ ದೇವಾಲಯಗಳನ್ನು ಕಟ್ಟಿಸಿಕೊಡುತ್ತಾರೆ, ಅದರ ಬದಲಾಗಿ ನಾವು ಅವರನ್ನು ನಮ್ಮ ಪಾದದಡಿಯಲ್ಲಿ ಹಾಕಿ ತುಳಿಯುತಿದ್ದೇವೆ, ಪ್ರಾಯೋಗಿಕವಾಗಿ ಅವರು ನಮ್ಮ ದಾಸತ್ವವನ್ನು ಗ್ರಹಿಸಿದ್ದಾರೆ. ಭಾರತವನ್ನು ಪುನರುಜ್ಜೀವಿಸಬೇಕಾದರೆ ನಾವು ಅವರಿಗಾಗಿ ದುಡಿಯಬೇಕು. ನಮ್ಮ ಮಿಲಿಯಗಟ್ಟಲೆಯ ಜನರು ಕ್ಷುಧಾರ್ತರೂ ಅನಕ್ಷರಸ್ಥರೂ ಆಗಿರುವ ತನಕ, ಅವರ ಹಣದಿಂದ ವಿದ್ಯೆಯನ್ನು ಕಲಿತು, ಅವರ ಅಭಿವೃದ್ಧಿಯ ಕುರಿತು ಗಮನ ಕೊಡದಿದ್ದ ಪ್ರತಿಯೊಬ್ಬನನ್ನೂ ನಾನು ದ್ರೋಹಿ ಎಂದು ಭಾವಿಸುತ್ತೇನೆ" ಎಂದು ಸ್ವಾಮೀಜೀ ಹೇಳಿದರು. ಈ ರೀತಿಯಾಗಿ ಅವರು ಸಾಮಾನ್ಯ ಜನತೆಯ ಕುರಿತು ಧನಿಕರ ಹಾಗೂ ವಿದ್ಯಾವಂತರ ಕರ್ತವ್ಯಬುದ್ಧಿಯನ್ನು ಎಚ್ಚರಿಸಿದರು. ಭಾರತ ಜನಾಂಗದ ಪ್ರಗತಿಯನ್ನು ಅಪೇಕ್ಷಿಸಿದವರಿಗೆ ಹೀಗೆಂದು ವಿಧಿಸಿದರು—"ಅವರು ತಮ್ಮ ಸ್ವಭಾವಸಿದ್ಧ ಆಧ್ಯಾತ್ಮಿಕ ಸ್ವರೂಪವನ್ನು ಕಳೆದುಕೊಳ್ಳದಂತೆ ಅವರಿಗೆ ತಮ್ಮ ನಷ್ಟವ್ಯಕ್ತಿತ್ವವನ್ನು ಕೊಡಿರಿ." ಧರ್ಮವೇ ಆಧ್ಯಾತ್ಮಿಕ

ಉನ್ನತಿಯನ್ನೂ, ದೇಶದ ಮೊದಲಿನ ಸ್ಥಾನಮಾನ, ಯಶಸ್ಸು ಕೀರ್ತಿಗಳ ಸ್ಥಾಪನೆಯನ್ನು ಮಾಡುವುದೆಂದು ಅವರಿಗೆ ಒತ್ತಿ ಹೇಳಿದರು. "ತ್ಯಾಗ ಹಾಗೂ ಸೇವೆ–ಇವುಗಳು ರಾಷ್ಟ್ರೀಯ ಧ್ಯೇಯಗಳು. ಈ ಧ್ಯೇಯಗಳನ್ನು ಗಾಢವಾಗಿ ಅಭ್ಯಾಸ ಮಾಡತಕ್ಕದ್ದು. ಹಾಗೆ ಮಾಡಿದರೆ ಬೇರೆ ಎಲ್ಲ ವಿಷಯಗಳು ತಾನಾಗಿಯೇ ರಕ್ಷಿಸಲ್ಪಡುವುವು" ಎಂದು ಕೂಡ ಸ್ವಾಮೀಜೀ ಹೇಳಿದರು.

"ಸರ್ವದಾ ದಾರಿದ್ರ್ಯ ಹಾಗೂ ಅಜ್ಞಾನದಲ್ಲಿ ಮುಳುಗಿ ಕೆಳಕ್ಕೆ ಬಿದ್ದ ಈ ನಾನ್ನೂರು ಮಿಲಿಯ ನರನಾರಿಯರನ್ನು ಪುನರುಜ್ಜೀವಿಸಲು ನಮ್ಮ ಶ್ರೀಮಂತರು, ವಿದ್ಯಾವಂತರು ಹಾಗೂ ವಿಶೇಷಾಧಿಕಾರವನ್ನು ಹೊಂದಿದವರು ಅವರಿಗೆ ಆಹಾರವನ್ನೂ ವಿದ್ಯೆಯನ್ನೂ ಕೊಟ್ಟು ಅವರನ್ನು ಎಚ್ಚರಿಸಬೇಕು. ಪ್ರಥಮತಃ ಅವರ ಹಸಿವನ್ನೂ, ಕಡುಬಡತನವನ್ನೂ—ಈ ಬರಿಯ ಬದುಕಿನ ಕುರಿತ ಅವರ ಯೋಚನೆಯನ್ನೂ—ಹೋಗಲಾಡಿಸಬೇಕು. ಅನಂತರ ಅವರಿಗೆ ವಿದ್ಯೆಯನ್ನು ಕೊಡಬೇಕು. ಬಹು ಪರಿಣಾಮಕಾರಿಯಾದ ಜೀವನ ಸಮಸ್ಯೆಗಳ ಕುರಿತು ತಮ್ಮ ಪೂರ್ವಜರೂ ಅನ್ಯಾನ್ಯ ಜನಾಂಗಗಳೂ ಏನನ್ನು ಹೇಳಿದ್ದಾರೆಂದು ಅವರು ತಿಳಿಯಲಿ! ವಿಶೇಷತಃ ಬೇರೆಯವರು ಈ ಸಮಸ್ಯೆಗಳನ್ನೆಲ್ಲ ಬಗೆಹರಿಸಲು ಏನನ್ನು ಮಾಡುತಿದ್ದಾರೆಂದು ಕಂಡು ಅವರು ಕೂಡ ಒಂದು ನಿರ್ಧಾರಕ್ಕೆ ಬರಲಿ! ನಾವು ಬೇಕಾದ ರಾಸಾಯನಿಕ ದ್ರವ್ಯಗಳನ್ನು ಒಟ್ಟಿಗೆ ಬೆರಸಿಡಬೇಕು. ಪ್ರಕೃತಿಯ ನಿಯಮಕ್ಕನುಸಾರವಾಗಿ ಸ್ಫಟಿಕಾಕೃತಿ ತಾನಾಗಿಯೇ ಸಂಭವಿಸುವುದು" ಎಂದು ಸ್ವಾಮೀಜೀ ಹೇಳಿದರು.

ಭಾರತಕ್ಕೆ ಅನುಗುಣವಾದ ವೇದಾಂತದ ಉಪದೇಶಗಳ ಹಾಗೂ ಲೌಕಿಕ ವಿದ್ಯೆಯ ಪ್ರಚಾರದಿಂದ ನಮ್ಮ ಜನತೆಯು ಪುನರುಜ್ಜೀವಿತವಾಗುವುದು ಖಂಡಿತ, ಹಾಗಾದರೆ ಆಧುನಿಕ ಕಾಲಕ್ಕೆ ಸರಿಯಾದ ನೂತನ ಸಂಸ್ಥೆಗಳನ್ನೂ ನೂತನ ಸಾಮಾಜಿಕ ನಿಯಮಗಳನ್ನೂ ಪರಿಣಾಮಗೊಳಿಸಲು ಅವರು ಸಮರ್ಥರಾಗುವರು. ಶ್ರೇಷ್ಠತರವಾದ ಸಂಸ್ಥೆಗಳನ್ನು ಪರಿಣಾಮಗೊಳಿಸದೆ, ಪುರಾತನ ಸಂಸ್ಥೆಗಳನ್ನು ಒಡೆದು ಬಿಡುವ ಪ್ರಯತ್ನವು ಅನರ್ಥಕ್ಕೀಡಾಗುವುದೆಂದು ಸ್ವಾಮೀಜೀ ನಮಗೆ ಮುನ್ನೆಚ್ಚರಿಕೆಯನ್ನು ಕೊಟ್ಟರು. ಈ ರೀತಿಯಾಗಿ ಅವರು ಸಾಮಾಜಿಕ ಸುಧಾರಣಾಕ್ಷೇತ್ರದಲ್ಲಿ ಕೂಡಾ ಪುನರ್‍ರಚನೆಗಿಂತ ಕ್ರಮಪರಿಣಾಮದ ಕಾರ್ಯಗತಿಯನ್ನೇ ಹೆಚ್ಚಾಗಿ ಪ್ರೋತ್ಸಾಹಿಸಿದರು.

ಈಗ ವಾಸ್ತವಿಕ ದೋಷಗಳೆಂದು ಕಾಣಬರುವ ಪುರಾತನಪದ್ಧತಿಗಳು ಹಿಂದಿನ ಕಾಲದಲ್ಲಿ ವಾಸ್ತವಿಕ ಪ್ರಾಣೋಜ್ಜೀವಕವಾಗಿದ್ದುವು ಎಂದು ಸ್ಮರಣೆಯಲ್ಲಿಡಬೇಕೆಂದು ಸ್ವಾಮೀಜೀ ಸುಧಾರಣಾ ಮುಂದಾಳುಗಳಿಗೆ ತಿಳಿಸಿದರು. ಈಗ ಅವುಗಳನ್ನು ತೊರೆಯಬೇಕಾದರೆ ಆಶೀರ್ವಾದ ಹಾಗೂ ಕೃತಜ್ಞತೆಯಿಂದ ತ್ಯಜಿಸಬೇಕಲ್ಲದೆ ಧರ್ಮನಿಂದಕ ಭಾಷೆಯಿಂದಲ್ಲ. ಏಕೆಂದರೆ ಈ ಪದ್ಧತಿಗಳು ಹಿಂದೆ ಅತ್ಯಂತ ಶ್ಲಾಘನೀಯವಾದ ಕೆಲಸವನ್ನು ಮಾಡಿವೆ, ನಮ್ಮ ಜನಾಂಗಕ್ಕೆ ಹಾಸಿತಟ್ಟದಂತೆ ಅದನ್ನು ಸುರಕ್ಷಿತವನ್ನಾಗಿ ಇಟ್ಟಿವೆ. "ರಾಷ್ಟ್ರೀಯ ಜೀವನವನ್ನು ಅದಕ್ಕೆ ಬೇಕಾದ ಸಾಮಗ್ರಿಯಿಂದಲೇ ಪುಷ್ಟೀಕರಿಸಬೇಕು—ಅದೊಂದೇ ಉಪಾಯ. ಹಾಗಾದರೆ ಆ ಜೀವನವು ತಾನಾಗಿಯೇ ಬೆಳೆಯುವುದು, ಕಟ್ಟಾಜ್ಞೆಯಿಂದ ಬೆಳೆಸಲಾಗದು. ಪುನರಪಿ ಮಾನವನನ್ನು ಇದ್ದಲ್ಲಿಂದ ಮೇಲಕ್ಕೆ ಎತ್ತಬೇಕು. ನನ್ನಿಂದಲೂ ನಿಮ್ಮಿಂದಲೂ ಅದನ್ನು ಮಾಡಲು ಸಾಧ್ಯವೆ? ಒಬ್ಬ ಮಗುವಿಗಾದರೂ ಕಲಿಸಲು ನಿಮ್ಮಿಂದ ಸಾಧ್ಯವೆಂದು ಎಣಿಸುತ್ತೀರಾ? ನಿಮ್ಮಿಂದ ಸಾಧ್ಯವಲ್ಲ. ಮಗುವು ತನ್ನನ್ನು ತಾನೇ ಕಲಿಸುವುದು. ಅದಕ್ಕೆ ಸುಯೋಗವನ್ನು ಕಲ್ಪಿಸಿಕೊಡುವುದು ನಿಮ್ಮ ಕರ್ತವ್ಯ" ಎಂದು ಸ್ವಾಮೀಜೀ ಹೇಳಿದರು.

"ಹಿತಕರವಾದ ಸಾಮಾಜಿಕ ಪರಿವರ್ತನೆಗಳು ಆಧ್ಯಾತ್ಮಿಕ ಆಂತರಿಕಶಕ್ತಿಯ ವಿಕಾಸಗಳಾಗಿವೆ; ಹಾಗೂ ಇವುಗಳು ಪ್ರಬಲಗೊಂಡರೆ ಮತ್ತು ಸರಿಹೊಂದಿಸಿದರೆ, ಇವುಗಳಿಗನುಸಾರವಾಗಿ ಸಮಾಜವು ತಾನಾಗಿಯೇ ಸರಿಹೊಂದಿಸಲ್ಪಡುವುದು. ಆದ್ದರಿಂದ ಸಾಮಾಜಿಕ ಸುಧಾರಣೆ ಎಂದೆನ್ನಿಸಿಕೊಂಡ ಪರಿವರ್ತನದಲ್ಲಿ ನೀವು ತಲೆಹಾಕಬೇಡಿರಿ, ಏಕೆಂದರೆ ಪ್ರಥಮತಃ ಆಧ್ಯಾತ್ಮಿಕ ಸುಧಾರಣೆ ಇಲ್ಲದೆ, ಯಾವ ಸುಧಾರಣೆಯೂ ಸಾಧ್ಯವಲ್ಲ. ನೀವು ಯಾವ ವಿಷಯದಲ್ಲೇ ಆಗಲಿ, ಅದರ ಬುಡವನ್ನು ಮುಟ್ಟಬೇಕು. ಅದೇ ಅಮೂಲಾಗ್ರವಾದ ಸುಧಾರಣೆ ಎಂದು ಕರೆಯುತ್ತೇನೆ. ಅಲ್ಲಿ ಬೆಂಕಿಯನ್ನು ಹಚ್ಚಿಸಿರಿ, ಆ ಬೆಂಕಿ ಮೇಲಕ್ಕೆ ಉರಿಯಲಿ ಹಾಗೂ ಭಾರತಜನಾಂಗವನ್ನು ರಚಿಸಲಿ" ಎಂದು ಸ್ವಾಮೀಜೀ ಹೇಳಿದರು.

"ನಿಮ್ಮ ಬಾಯನ್ನು ಮುಚ್ಚಿರಿ, ನಿಮ್ಮ ಹೃದಯವು ತೆರೆಯಲಿ. ಸಂಪೂರ್ಣ ಹೊರೆಯು ನಿಮ್ಮ ಪ್ರತಿಯೊಬ್ಬರ ಹೆಗಲ ಮೇಲಿದೆ ಎಂದು ಭಾವಿಸಿ ನಿಮ್ಮ ತಾಯಿನಾಡಿನ ಹಾಗೂ ಇಡೀ ಜಗತ್ತಿನ ಉದ್ಧಾರಕಾರ್ಯವನ್ನು ಕೈಕೊಳ್ಳಿರಿ" ಎಂಬ ಸ್ವಾಮೀಜಿಯವರ ವಾಣಿಯಿಂದ ಅವರ ಪ್ರೇಮವು ತಮ್ಮ ತಾಯಿನಾಡಿನಲ್ಲಿ ಮಾತ್ರ ಕೇಂದ್ರೀಕರಿಸಲಿಲ್ಲವೆಂದು ವ್ಯಕ್ತವಾಗುತ್ತದೆ. ಅವರ ಪ್ರೇಮವು ಇಡೀ ಜಗತ್ತನ್ನು ಆವರಿಸಿತ್ತು. ಭಾರತದ ವೇದಾಂತ ಸಂಸ್ಕೃತಿ ಶಕ್ತಿಯ ಮೂಲಕ ತಾಯಿನಾಡು ಉದ್ಧಾರವಾಗುವುದಲ್ಲದೆ ಇಡೀ ಜಗತ್ತು ಕೂಡ ಉನ್ನತಿಗೊಳ್ಳುವುದೆಂದು ಅವರು ತಿಳಿದಿದ್ದರು. ಎಲ್ಲ ಜನಾಂಗಗಳ ದುರ್ಬಲರ, ದುಃಖಾರ್ತರ ಹಾಗೂ ಅದುಮಿದವರ ಹೇಳಲಾಗದ ಕಷ್ಟಗಳನ್ನು ಹೋಗಲಾಡಿಸಿ

ವೇದಾಂತ ಸತ್ವಗಳ ಕಾರ್ಯಸಮರ್ಥತೆಯನ್ನು ಜಗತ್ತಿನ ಸಮ್ಮುಖಕ್ಕೆ ಪ್ರಾಯೋಗಿಕವಾಗಿ ಭಾರತವು ಪ್ರಥಮತಃ ಪ್ರಮಾಣೀಕರಿಸಬೇಕೆಂದು ಅವರು ಅಪೇಕ್ಷಿಸಿದರು. ಇದೇ ಭಾರತದ ನಿಷ್ಕೃಷ್ಟವಾದ ದೈವನಿಯಾಮಿತ ಕಾರ್ಯ. ಇದಕ್ಕಾಗಿಯೇ ಭಾರತವು ಎಷ್ಟೋ ಶತಮಾನಗಳ ದಬ್ಬಾಳಿಕೆ ಹಾಗೂ ಅನಾಗರಿಕತೆಯಿಂದ ಬದುಕಿರುತ್ತದೆಂದು ಸ್ವಾಮೀಜೀ ದೇಶವಾಸಿಯರಿಗೆ ನಿರ್ದೇಶಿಸಿದರು. ಎಲ್ಲ ಮಾನವವರ್ಗಕ್ಕೆ ನಮ್ಮ ಪ್ರಾಚೀನ ಋಷಿಗಳು ಕಂಡುಹಿಡಿದ ಸಾರ್ವತ್ರಿಕ ಸತ್ಯಗಳೆಂಬ ನಿಧಿಯನ್ನು ಕೊಟ್ಟು ಬ್ರಹ್ಮಾಂಡ ಹಾಗೂ ಪಿಂಡಾಂಡಗಳ ನಿಯಾಮಕನಾದ ಪರಮಾತ್ಮನಲ್ಲಿ ನೆಲೆ ನಿರ್ಧರಿಸಿ ಮಾನವಸಭ್ಯತೆಯಲ್ಲಿ ಹೊಸ ಜೀವಕಳೆಯನ್ನು ತುಂಬಿಸಬೇಕಾಗಿಯೇ ಭಾರತವು ಇಷ್ಟು ಕಾಲ ಬದುಕಿದೆ ಎಂದು ಅವರು ನಂಬಿದರು. ಭಾರತಮಾತೆಯು ಈಗ ಸಂಸ್ಕೃತಿಯ ಅವ್ಯವಸ್ಥೆಯಲ್ಲಿ ಹಾಗೂ ಸಾಮಾಜಿಕ ಅವನತಿಯಲ್ಲಿದ್ದರೂ ಅವಳು ಜಾಗೃತಳಾಗುವಳು ಖಂಡಿತ; ಹಾಗೂ ತನ್ನ ಗೌರವದ ಉನ್ನತ ಶಿಖರಕ್ಕೇರುವಳು. ಅವಳು ತನ್ನ ಉದಾತ್ತ ಆಧ್ಯಾತ್ಮಿಕ ಧ್ಯೇಯವನ್ನು ಬೌದ್ಧ ಬೋಧಕರಂತೆ ಇನ್ನೊಮ್ಮೆ ಜಗತ್ತಿನಲ್ಲೆಲ್ಲ ಪ್ರಚಾರಿಸುವಳು. ಅವಳು ತನ್ನ ವಿಶ್ವಪ್ರೇಮದಿಂದ ಇಡೀ ಮಾನವವರ್ಗವನ್ನು ವಾಸ್ತವಿಕ ಪ್ರಗತಿಪರ ಜೀವನಗತಿಯಲ್ಲಿ ಧೀರಸ್ಥಿರವಾಗಿ ಮುಂದುವರಿಯಲು ನೆರಳಾಗುವಳು. ಸ್ವಾಮೀಜೀ ಭಾರತಮಾತೆಯ ಈ ಪವಿತ್ರವಾದ ಹಾಗೂ ಉನ್ನತವಾದ ದೈವನಿಯಾಮಿತ ಕಾರ್ಯವನ್ನು ತಿಳಿದುಕೊಂಡು, ದೇಶವಾಸಿಯರು ತಮ್ಮ ಸ್ವಕೀಯ ದೇಶೋದ್ಧಾರ ಕಾರ್ಯದಲ್ಲಿ ನಿರತರಾದಾಗ, ವಿಶ್ವಶಾಂತಿ ಹಾಗೂ ಸಮನ್ವಯಕ್ಕಾಗಿ ದುಡಿಯಬೇಕೆಂಬುವ ಹಾಗೂ ತಮ್ಮ ಶುದ್ಧಾಂಗ ಪ್ರೇಮವನ್ನೂ ಸೇವೆಯನ್ನೂ ಸರ್ವಕಾಲಕ್ಕೂ ಸಲ್ಲಿಸಬೇಕೆಂಬುವ ಮುಖ್ಯ ಸತ್ಯಾಂಶವನ್ನು ಸರ್ವದಾ ಸ್ಮರಣೆಯಲ್ಲಿಡಬೇಕೆಂದು ಅವರಿಗೆ **ಒತ್ತಿ**ಹೇಳಿದರು.

★ ಮಗುವಿಗೊಂದು ಶಾಲೆ ★

(ಲೇಖಕರು: ಶ್ರೀಮಾನ್ ಬಿ. ಶ್ರೀ. ಪಾಂಡುರಂಗರಾಯರು. ಸ್ಥಾಪಕರು: ಮಕ್ಕಳ ಮಂಟಪ, ಬೆಂಗಳೂರು.)

"ಮಕ್ಕಳ ಇಸ್ಕೂಲ್ ಮನೇಲಲ್ವೇ!"

ನಮ್ಮ ಕನ್ನಡ ಸಾಮಾಜಿಕ ನಾಟಕಗಳ ''ಪ್ರಹಸನ ಪಿತಾಮಹ''ರಾದ ದಿವಂಗತ ಶ್ರೀ ಕೈಲಾಸಂ ಅವರು ತಮ್ಮ ನಾಟಕಗಳೊಂದರಲ್ಲಿ ''ಮಕ್ಕಳ ಇಸ್ಕೋಲ್ ಮನೇಲಲ್ವೆ!'' ಎಂದು ಹೇಳಿದ ಹಾಗೆ ಓದಿದ ನೆನಪು. ಅವರು ಸಮಾಜಕ್ಕೆ ಸರಿಯಾದ ಪ್ರಶ್ನೆಯನ್ನೇ ಹಾಕಿದ್ದಾರೆ. ಅದು ಪ್ರತಿಯೊಂದು ಸಂಸಾರಕ್ಕೂ ಅನ್ವಯಿಸುತ್ತದೆ. ಹೌದು, ತಾಯಿಯ ಉದರದಿಂದ ಹೊರಬಂದ ಘಳಿಗೆಯಿಂದ ಹಿಡಿದು ನಾಲ್ಕೈದು ವರುಷಗಳು ತುಂಬುವ ವರೆಗೆ ಮಗುವಿಗೆ ಮೊದಲನೆಯ ಶಾಲೆಯೆಂದರೆ ಮನೆಯೇ ಸರಿ. ಆದರಿಂದಲೇ "ಮಕ್ಕಳ ಇಸ್ಕೋಲ್ ಮನೇಲಲ್ವೆ!" ಎಂದು ಶ್ರೀ ಕೈಲಾಸಂ ಕೇಳಿದ್ದು.

ಆದರೆ ''ಮಕ್ಕಳ ಇಸ್ಕೋಲ್'' ಮನೆಯಾಗುವುದು ಎಲ್ಲರಿಗೂ ಸಾಧ್ಯವಿಲ್ಲ. ಅಲ್ಲೋ ಇಲ್ಲೋ ಒಬ್ಬಿಬ್ಬರಿಗೆ ಅದು ಸಾಧ್ಯವಿರಬಹುದು. ಬಂಗಾರದ ಚಮಚದಲ್ಲಿ ಉಂಡು, ಗುಲಾಬಿ ಹೂವಿನ ಸುಪ್ಪತ್ತಿಗೆಯಲ್ಲಿ ಮಲಗಿ, ಬನಾತಿನದೋ ಇಲ್ಲ ಹಸನಾದ ತುಪ್ಪಟ್ಟದ್ದೋ ರತ್ನಗಂಬಳಿಯ ಮೇಲೆ ನಡೆಯುವಂಥ ಕುಬೇರರ ಮಕ್ಕಳಿಗೆ ಮಾತ್ರ ''ಮಕ್ಕಳ ಇಸ್ಕೋಲ್ ಮನೇಲಲ್ವೆ'' ಎಂಬ ಘೋಷಣೆ ಅನ್ವಯಿಸುತ್ತದೆ. ಒಬ್ಬ ರವೀಂದ್ರನಾಥ ಠಾಕೂರ, ಒಬ್ಬ ಜವಾಹರಲಾಲ ನೆಹರು ತಮ್ಮ ಬಾಲ್ಯದಲ್ಲಿ ಮನೆಯಲ್ಲಿಯೇ ಶಿಕ್ಷಣವನ್ನು ಪಡೆಯುವಂಥ ಸುಯೋಗವನ್ನು ಕೇಳಬಂದಿದ್ದರು. ಆಜನ್ಮ ಶ್ರೀಮಂತರಾಗಿ ಹುಟ್ಟಿದ ಈ ಮಹಾಪುರುಷರಿಗೆ ಮನೆಯೇ ಸ್ಕೂಲಾಗಿ ಪರಿಣಮಿಸಿತು. ಆದರೆ ಇದೇ ಭಾಗ್ಯ ಎಲ್ಲರಿಗೂ ಲಭ್ಯವಾಗಬೇಕು ಎಂದರೆ ಗಾಳಿಯಲ್ಲಿ ಗೋಪುರ ಕಟ್ಟಿದ ಹಾಗೆ.

ಮನೆಯು ಶಾಲೆಯಾಗಬೇಕಾದರೆ ಮನೆ ಮನೆಯಾಗಿಯೇ ಇರುವ ಹಾಗಿಲ್ಲ. ಅದರ ವಾತಾವರಣವೆಲ್ಲಾ ಸಂಪೂರ್ಣವಾಗಿ ವ್ಯತ್ಯಾಸವಾಗಬೇಕು. ಮನೆಯವರೆಲ್ಲಾ ಶಿಶುವಿನ ಬಯಕೆ—ಹಂಬಲಿಕೆಗಳಿಗೆ, ಆಮೋದ—ಆನಂದಗಳಿಗೆ, ಆಸೆ—ನಿರಾಸೆಗಳಿಗೆ, ಊಹೆ-ಹೊಂಗನಸುಗಳಿಗೆ ಅನುಗುಣವಾಗಿ ತಾವೂ ಹೊಂದಿಕೊಂಡು ಬಗ್ಗಿಹೋಗಬೇಕು. ಶಿಶುವಿನೊಡನೆ ಶಿಶುವಾಗಿ, ಮಗುವಿನೊಡನೆ ಮಗುವಾಗಿ, ಅದರೊಡನೆ ತಾವೂ ಒಂದಾಗಿ ಆಗಿಬಿಡಬೇಕು. ಆಗ ''ಮಕ್ಕಳ ಇಸ್ಕೋಲ್ ಮನೇಲಲ್ವೆ!'' ಎಂದು ಯಾರಾದರೂ ಕೇಳಿದರೆ, ನಾವು, "ಹೌದು, ಮಕ್ಕಳ, ಇಸ್ಕೋಲ್ ಮನೇಲೇ" ಎಂದು ಹೇಳಬಹುದು.

ಮನೆಯಂತೂ "ಮಕ್ಕಳ ಇಸ್ಕೋಲ್" ಆಗುವುದು ಸಾಧ್ಯವಿಲ್ಲವೆಂದಂತಾಯಿತು. ಹಾಗಾದರೆ ಮಕ್ಕಳ ಶಿಕ್ಷಣವನ್ನು ಯಾರು ಕೈಗೊಳ್ಳಬೇಕು? ಮಕ್ಕಳ ಶಾಲೆಯ ಹೊಣೆಯನ್ನು ಯಾರ ಹೆಗಲಮೇಲೆ ಹೊರಿಸೋಣ? ಈ ಪ್ರಶ್ನೆಗಳಿಗೆ ಉತ್ತರ ಸಿದ್ಧವಾಗಿಯೇ ಇದೆ. ಶಿಶು ಶಿಕ್ಷಣವನ್ನು ನಮ್ಮ ಪರವಾಗಿ ಇರುವ ಸರಕಾರ ಕೈಗೊಳ್ಳಬೇಕು; ನಮ್ಮ ಸಮಾಜ ವಹಿಸಿಕೊಳ್ಳಬೇಕು. ಈ ಬಯಕೆ ನ್ಯಾಯವಾದದ್ದೇ. ಅದನ್ನು ನಾವು ಸರಕಾರ—ಸಮಾಜದಿಂದ ನಿರೀಕ್ಷಿಸುವುದು ತಪ್ಪೇನಲ್ಲ.

ಹುಟ್ಟಿದಂದಿನಿಂದ ಸಾಯುವ ವರೆಗೆ ಮಾನವನು ಸಂಘ ಜೀವಿಯಾಗಿಯೇ ಬಾಳಬೇಕು. ತಾನಿರುವ ನೆರೆಹೊರೆಯನ್ನು ಅನುಸರಿಸಿ, ಅದಕ್ಕೆ ಹೊಂದಿಕೊಂಡು ಏಗಬೇಕು. ತನ್ನ ಸುತ್ತಮುತ್ತಲಿರುವ ವಾತಾವರಣಕ್ಕೆ ಬಗ್ಗಿಕೊಂಡು ಹೋಗಬೇಕು. ಪ್ರಕೃತಿಯ ಮಡಿಲಲ್ಲಿ ಬೆಳೆದ ಶಿಶು ಪ್ರಕೃತಿಯೊಡನೆಯೇ ಹೋರಾಡಿ ಅದರ ಕಷ್ಟ-ಸುಖಗಳಲ್ಲಿಯೇ ಈಸಾಡಿ ಅದನ್ನೇ ಜಯಿಸಿ ಪ್ರಕೃತಿಯ ಶಿಶುವಾಗಿ ಜೀವನ ನಿರ್ವಹಿಸಬೇಕು. ನಮ್ಮ ಸಮಾಜ—ಸರಕಾರ ಶಿಶುವನ್ನು ಅದರ ಭವಿಷ್ಯ ಜೀವನಕ್ಕೆ ಯೋಗ್ಯವಾಗುವಂತೆ ಮಾಡುವುದಕ್ಕೆ ಈ ತತ್ವವನ್ನು ಅನುಸರಿಸಿ ಮೊದಲ ಶಿಕ್ಷಣವನ್ನು ರೂಪಿಸಬೇಕು. ಈ ತೆರನಾದ ಹೊರೆಯನ್ನು ಮನೆಯು ಹೊರುವುದು ಸಾಧ್ಯವಲ್ಲ. ನಾವು ಅದರಿಂದ ನಿರೀಕ್ಷಿಸಲೂ ಬಾರದು.

ಸರಕಾರ—ಸಮಾಜ ಶಿಶುಶಿಕ್ಷಣವನ್ನು ಕೈಗೊಳ್ಳಬೇಕು ಎಂಬುದು ನಿರ್ವಿವಾದದ ಮಾತಾಯಿತು. ಮಗುವು ಮನೆಯ ನಾಲ್ಕು ಗೋಡೆಗಳ ಆವರಣದಲ್ಲಿಯೇ ತನ್ನ ಮೊದಲ ಶಿಕ್ಷಣವನ್ನು ಪಡೆದರೆ ಕೂಪಮಂಡೂಕವಾಗುವ ಪರಿಸ್ಥಿತಿ ಅದಕ್ಕೆ ಸಹಜವಾಗಿ ಬರುತ್ತದೆ. ಶಿಶುತನ ಕಳೆದು ಬಾಲ್ಯ ಬಂದು, ಯೌವನ ಪ್ರಾಪ್ತವಾಗಿ, ಮಾನವಜೀವಿ ಈ ಜಗತ್ತಿನಲ್ಲಿ ತನ್ನ ನಿರ್ವಹಣತನವನ್ನು ಹೊತ್ತಾಗ ಎಷ್ಟೋ ಸಲ ಅವನು ತನ್ನ ಜೀವನ ಸಾಗಿಸುವುದರ ಸಾಹಸದಲ್ಲಿ ಮುಗ್ಗರಿಸಿ ಬೀಳುವುದನ್ನು ನೋಡಿದ್ದೇವೆ. ಜನದೊಂದಿಗೆ ಹೊಂದಿಕೊಂಡು ಹೋಗುವುದರಲ್ಲಿ ಜಯಶೀಲನಾಗದೆ ಸೋಲನ್ನಪ್ಪಿಕೊಳ್ಳುವುದನ್ನು ಕಂಡಿದ್ದೇವೆ. ತನ್ನ ಸುತ್ತುಮುತ್ತಲ ವಾತಾವರಣಕ್ಕೆ ಹೊಂದಿಕೊಳ್ಳದೆ, ಅವರ ಕಷ್ಟಸುಖದಲ್ಲಿ ಭಾಗಿಯಾಗದೇ "ತಾನುಂಟೋ ಮೂರು

ಲೋಕವೆಂಟೋ" ಎಂಬಂತೆ ಇರುವ ಧೋರಣೆಯನ್ನು ಅನುಸರಿಸುವ ಸ್ವಾರ್ಥವ್ಯಕ್ತಿಯನ್ನು ಸಮಾಜದಲ್ಲಿ ಕಾಣುತ್ತಿದ್ದೇವೆ. ಈ ಬಗೆಯ ವ್ಯಕ್ತಿ ವೈಶಿಷ್ಟ್ಯಕ್ಕೆ ಕಾರಣವನ್ನು ಹುಡುಕುವುದು ಕಷ್ಟವಲ್ಲ. ಅದು ಅವನ ಮನೆಯನ್ನೇ ಅವಲಂಬಿಸಿದೆ. ತಾನು ಹುಟ್ಟಿದ ಮನೆಯ ವಾತಾವರಣವನ್ನೇ ಅನುಸರಿಸಿದೆ. ಮನೆಯ ಧೋರಣೆ, ವಾತಾವರಣ, ನಡವಳಿಕೆ, ಮಗುವಿದ್ದಾಗ, ತನ್ನ ಮೇಲೆ ಬಲವಾದ ಮುದ್ರೆಯೊತ್ತಿ, ತಾನು ದೊಡ್ಡದಾಗಿ ಬೆಳೆದಾಗಲೂ ಕೂಡ ತುಸೂ ಮಾಸದೆ ತನ್ನ ಮನಸ್ಸಿನ ಮೇಲೆ ಆಳವಾಗಿ ಬೇರೂರಿತು. ಅದರಿಂದ ಈ ವ್ಯಕ್ತಿ ಸಮಾಜದಲ್ಲಿದ್ದೂ ಸಮಾಜಕ್ಕೆ ಹೊಂದಿಕೊಳ್ಳಲಾರ; ಹಾಗೆಂದು ಸಮಾಜದಿಂದ ಹೊರಗಾಗಲಾರ. ಅದರಿಂದ, ಮನೆ, ಸರಕಾರ, ಸಮಾಜ, ತನ್ನದಾದ ಮಗುವನ್ನು ತನ್ನ ಆಸ್ತಿಯಾದ ಮಗುವನ್ನು, ಪೋಲಾಗುವುದಕ್ಕೆ ಬಿಡದೆ ಎಳೆತನದಿಂದಲೇ ಅದರ ಸುಭದ್ರತೆಗೆ, ಸಂರಕ್ಷಣೆಗೆ ನಿಗಕೊಡಬೇಕು. ಅದಕ್ಕಾಗಿ ಮಗುವಿಗೊಂದು ಶಾಲೆ, ಮಗುವಿಗಾಗಿಯೇ ಒಂದು ಶಾಲೆ ಅವಶ್ಯಕವಾಗಿ ಬೇಕು. ಇಪ್ಪತ್ತನೆಯ ಶತಮಾನ ಶಿಶುವಿನ ಜವಾಬ್ದಾರಿಯನ್ನು ಅರಿತುಕೊಂಡಿದೆ. ಈಗೀಗ ಪ್ರಪಂಚವೆಲ್ಲಾ ಮಗುವಿನ ಬಾಳುವಿನ ಕಡೆ ಎಲ್ಲೂಯಿಲ್ಲದ ಗಮನವಿತ್ತು ನಾಗಾಲೋಟದಲ್ಲಿ ಹೆಜ್ಜೆ ಹಾಕತೊಡಗಿದೆ. ನಮ್ಮ ದೇಶವೂ ಈ ಜಾಗ್ರತಿಗೆ ಹೊರತಲ್ಲ, ಹೊರತಾಗಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ರೂಸೋ, ಪೆಸ್ಟಲಾಸ್ಸಿ, ಫ್ರೊಬೇಲ್, ಮೆರಿಯಾ ಮಾಂಟೆಸೂರಿ ಮೊದಲಾದ ಬಾಲಯುಗ ಪ್ರವರ್ತಕರು ಮಗುವಿನ ಉದ್ಧಾರಕ್ಕಾಗಿ ಹೆಣಗಿ, ಕಂಡುಹಿಡಿದ ನರ್ಸರಿ ಸ್ಕೂಲುಗಳೇ ನಮ್ಮ ದೇಶದಲ್ಲಿ ಈಗ ಶಿಶುವಿಹಾರಗಳೆಂಬ ಹೆಸರಿನಿಂದ ಮಕ್ಕಳ ಶಾಲೆಗಳಾಗಿ ಹುಟ್ಟಿಕೊಂಡಿವೆ. ಬಾಲವನಗಳೆಂದು, ಮಕ್ಕಳ ಮಂಟಪಗಳೆಂದು ಜನ್ಮತಾಳಿವೆ.

ಶಿಶುವಿಹಾರಗಳು ಕೇವಲ ಮೂರರಿಂದ ಆರು ವರುಷಗಳ ವರೆಗಿನ ಮಕ್ಕಳುಗಳಿಗಾಗಿಯೇ ಏರ್ಪಟ್ಟ ಶಾಲೆಗಳು. ಇವುಗಳು ಸಾಧಾರಣವಾಗಿ ಶಿಶುವಿನ ಪಂಚೇಂದ್ರಿಯಗಳ ಕಡೆಗೆ ವಿಶೇಷ ನಿಗಕೊಟ್ಟು ಅವುಗಳ ಚಟುವಟಿಕೆಗಳನ್ನು ಕೆರಳಿಸುವುವು. ಸರಿಯಾದ ಮಾರ್ಗವನ್ನು ಅನುಸರಿಸುವಂತೆ ಮಾಡುವುವು. ಮಗುವಿನ ಹುಟ್ಟುಗುಣಗಳನ್ನು ಸರಿಯಾಗಿ ವೀಕ್ಷಿಸಿ ಅವುಗಳನ್ನು ಮಗುವು ತನ್ನ ಭವಿಷ್ಯ ಜೀವನಕ್ಕೆ ಸರಿಯಾಗಿ ಉಪಯೋಗಿಸಿಕೊಳ್ಳುವಂತೆ ಅವಕಾಶ ಕಲ್ಪಿಸುವುವು. ಸ್ಥೂಲವಾಗಿ ಹೇಳುವುದಾದರೆ ಶಿಶುವಿಹಾರಗಳು ಮಾನವ ಜೀವನದ ನಿರ್ವಹಣೆಗೆ ಕೈಮರವಿದ್ದಂತೆ.

ನಮ್ಮ ದೇಶದ ಸ್ಥಿತಿಗತಿಗಳಿಂದ, ನಮಗಿನ್ನೂ ಶಿಶುಶಿಕ್ಷಣದ ಮಹತ್ವ ಅರಿವಾಗಿಲ್ಲ ನಿಜವಾಗಿಯೂ ಜ್ಞಾನಾರ್ಜನೆಯ ಅಸ್ತಿಭಾರ ಮಗುವಿನ ಮನಸ್ಸಿನ ಮೇಲೆ ಬೇರೂರುವುದು ಶಿಶುವಿಹಾರಗಳಲ್ಲಿಯೇ. ಬರಿಯ ನಾಲ್ಕು ಗೋಡೆಗಳೊಳಗೆ ಕುಳಿತು ಓದು, ಬರಹ, ಎಣಿಕೆ ಕಲಿತರೆ ಅದೇ ಮಗುವಿನ ಕಲಿಕೆ ಎಂದು ಎಣಿಸುವ ಜನ ನಾವು. ಮಗುವಿನ ಕಣ್ಣು ಚುರುಕಾಗಿರಬೇಕು, ಕಿವಿ ಚುರುಕಾಗಿರಬೇಕು, ಮೂಗು ಯಾವ ಗಮಲನ್ನಾದರೂ ಗ್ರಹಿಸುವಷ್ಟು ಶಕ್ತವಾಗಿರಬೇಕು. ನಾಲಗೆ ಎಂಥ ರುಚಿಯನ್ನಾದರೂ ಕಂಡುಹಿಡಿಯಬೇಕು. ಚರ್ಮವು ಯಾವ ಸೂಕ್ಷ್ಮವನ್ನಾದರೂ ಹೀರುವಷ್ಟು ಸೂಕ್ಷ್ಮವಾಗಿರಬೇಕು. ಈ ಪಂಚೇಂದ್ರಿಯಗಳ ಅರಿವು ಮಗುವಿಗೆ ಆಗಬೇಡವೆ? ಮಕ್ಕಳಿಗೆ ನಾಲ್ಕು ಗೋಡೆಗಳ ಒಳ ಆವರಣಕ್ಕಿಂತ ಹೊರ ಬಯಲೆಂದರೆ ಆಸೆ. ಬರಿಯ ಕಾಗುಣಿತಕ್ಕಿಂತ ಚಿತ್ರ ಬರೆಯೋಣವೆಂದರೆ, ಅದಕ್ಕೆ ಬಣ್ಣ ಹಾಕೋಣವೆಂದರೆ ಹಿಗ್ಗು. ಹಾಡಿ ಕುಣಿದು ಕುಪ್ಪಳಿಸುವುದೆಂದರೆ ಸಂತೋಷ. ಹಾಯಾಗಿ ಕೈಕಾಲು ಬೀಸುಬೀಸಾಗಿ ಚಾಚಿ ಸಾಮೂಹಿಕವಾಗಿ ಕವಾಯಿತು ಮಾಡುವುದೆಂದರೆ ಅವರಿಗೆ ಆನಂದ. ಮಣ್ಣನ್ನು ಕೆದರಿ ತೋಡಿ, ಗುಳಿಮಾಡಿ, ಬದನೆಯ ಕಾಯನ್ನೋ ಹುರಳಿಯ ಕಾಯನ್ನೋ, ಇಲ್ಲವೇ ಬಣ್ಣಬಣ್ಣದ ಹೂವುಗಳನ್ನೊ ಬೆಳೆದು, ಇದು ನನ್ನದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ಆನಂದ. ತಮ್ಮ ನೆರೆಹೊರೆಯ ಬಾಳನ್ನು ತಮ್ಮ ಊಹೆಯಿಂದ ಚಿತ್ರಿಸಿಕೊಂಡು ಪೀರ–ಗಪೂರನೋ, ಶಾಸ್ತ್ರಿ–ಭಟ್ಟನೋ, ಅಥವ ಶ್ಯಾಮುಯಲ್–ಜೋಸಫನೋ ಇಲ್ಲವೇ ಮನ್ನೂಲಾಲ್-ರಾಮ್ ಭಾಯಿಯೋ ಆಗಿ ಅನುಕರಣ ಮಾಡಿ ಸಂಸಲ್ಲಾಪವೆಸಗುವುದೆಂದರೆ ಸ್ವರ್ಗ ಮೂರೇಗೇಣು ಎಟುಕಿದಂತೆ. ಈ ಮಕ್ಕಳ ಹಿಗ್ಗಾಟಗಳಿಗೆಲ್ಲಾ ಆಧುನಿಕ ರೀತಿಯಲ್ಲಿ ಸಜ್ಜಾಗಿರುವ ಶಾಲೆಗಳೆಂದರೆ ಅವು ಶಿಶುವಿಹಾರಗಳು. ಇಂಥ ಶಾಲೆಗಳೇ ನಮಗೀಗ ಬೇಕಾಗಿರುವುದು.

ನಮ್ಮ ಮಗುವಿಗೆ ಇಂಥ ಒಂದು ಶಾಲೆ ಈಗ ಅತ್ಯಾವಶ್ಯಕ. ಮಗುವಿಗೊಂದು ಶಾಲೆ ಬೇಕು. ಅದನ್ನು ಕೊಡುವುದು ಬಿಡುವುದು ನಮ್ಮ ಜನದ ಕೈಯಲ್ಲಿದೆ, ಸಮಾಜವನ್ನವಲಂಬಿಸಿದೆ, ಹಣವಂತರ ಕೊಡುಗೈದಾನದಲ್ಲಡಗಿದೆ. "ನಮೋ ಅರ್ಭಕೇಭ್ಯಃ" ಎಂದು ಹೇಳಿದ ದೇಶ ಮನಸ್ಸು ಮಾಡಿದರೆ, ಹೆಚ್ಚಲ್ಲ, ಜನ ಎಚ್ಚೆತ್ತರೆ, ದೇವಲೋಕವೇ ಭೂಮಿಯ ನಂದನವನವಾದೀತು! ಕಂದವಿಹಾರವಾಗಿ ಪರಿಣಮಿಸೀತು.



ವಿಚಾರ



ವಿನೋದ

★ ಕನಸಿನ ನೆನಸು ★

("ಭ್ರಮರ*)

"......ನಿನ್ನ ಪ್ರೊಫೆಸರರಾಗಿದ್ದ ಸರ್ಜನ್ ಶಿವಸ್ವಾಮಿ ಅಯ್ಯರರು ಇದೇ ತಾ. ೧೨ರಿಂದ ಸರ್ಜನ್ ಜನರಲರ ಪರ್ಸನಲ್ ಅಸಿಸ್ಟಾಂಟ್‌ರಾಗಿ ಬರುವರೆಂದು ನಾನು ತಿಳಿಯುತ್ತೇನೆ. ಇದರಿಂದ ನಿನಗೇನಾದರೂ ಪ್ರಯೋಜನ ಆಗುವುದಾದರೆ ನನಗೆ ಬಹಳ ಸಂತೋಷ........"

ಶ್ರೀಕರನು ಪತ್ರದ ಈ ಭಾಗವನ್ನು ಹಲವು ಸಲ ಓದಿದನು. ಮದ್ರಾಸಿನಲ್ಲಿ ಇದ್ದ ತನ್ನ ಸೋದರಮಾವನಿಂದ ಆಗತಾನೇ ಬಂದ ಪತ್ರದ ಕೊನೆಯ ವಾಕ್ಯವೇ ಅದಾಗಿತ್ತು. ಇದನ್ನು ಓದಿ ಅವನಿಗೆ ನೆನಪಾದ ಸಂಗತಿಯು ಮುಂಚಿನ ದಿನ "ಹಿಂದೂ" ದೈನಿಕದಲ್ಲಿ ಓದಿದ ಒಂದು ವರ್ತಮಾನ. ಕೂಡಲೆ ಪೇಪರನ್ನು ತೆಗೆದು ಸಂಬಂಧಪಟ್ಟ "ಕೋಲಮ್" ಹುಡುಕಿ ಅದರಲ್ಲಿ ಈ ರೀತಿ ಓದಿದನು:

"ರಾಣೀಪುರದಲ್ಲಿ ೮೦೦ ಮಂಚಗಳ ಜನರಲ್ ಆಸ್ಪತ್ರೆಯನ್ನು ತೆರೆಯುವ ಬಗ್ಗೆ ಎಲ್ಲ ವ್ಯವಸ್ಥೆಗಳೂಪೂರ್ಣಆಗಿವೆ. ಇದೇ ತಾ. ೨೦ರಲ್ಲಿ ಅಸಿಸ್ಟೆಂಟ್ ಸರ್ಜನರ ಚುನಾವಣೆಯಾದ ಮೇಲೆ ಈ ಆಸ್ಪತ್ರೆಗೆ ಡಾಕ್ಟರರನ್ನು ನಿಯಮಿಸಲಿರುವುದರಿಂದ, ಆಸ್ಪತ್ರೆಯನ್ನು ಬರುವ ತಿಂಗಳ ಸಾಧಾರಣ ೧೫ನೇ ತಾರೀಕಿನಿಂದ ತೆರೆಯಬಹುದೆಂದು ನಮ್ಮ ಸ್ವಂತ ಬಾತ್ಮೀದಾರರು ತಿಳಿಸುತ್ತಾರೆ."

ಮುಂಚೆ ಒಂದು ಸಲ ಅಸಿಸ್ಟಾಂಟ್ ಸರ್ಜನ್ ಕೆಲಸಕ್ಕೆ ತನ್ನ ಅರ್ಜಿ ಕಳುಹಿಸಿದ್ದರೂ ಶ್ರೀಕರನು ಚುನಾಯಿಸಲ್ಪಟ್ಟಿರಲಿಲ್ಲ. ಅದು ಮೂರು ವರ್ಷಗಳ ಹಿಂದಿನ ಮಾತು. ಆಗ ಅವನಿಗೆ ಅದರಿಂದ ಅಷ್ಟೊಂದು ವ್ಯಸನವಾಗಿರಲಿಲ್ಲ. ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಎಮ್. ಬಿ. ಬಿ. ಎಸ್. ಕಲಿತು ಪಾಸಾಗಿ, ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ ಆಗಿ ಒಂದು ವರ್ಷ ಕಳೆದು, ಹೊರಗೆ ಬಂದ ಕೂಡಲೆ ನಡೆದ ಸಂಗತಿಯಿದು. ನೇರಾಗಿ ತನ್ನ ಊರಾದ ಮಂದೂರಿಗೆ ಹೋಗಿ ಒಂದು 'ಡಿಸ್ಪೆನ್ಸರಿ' ಇಟ್ಟು ಕುಳಿತನು. ರೋಗಿಗಳು ಬಂದು ನುಗ್ಗುವರೆಂದು ಗ್ರಹಿಸಿ ಶ್ರೀಕರನು ತನ್ನ ವೈಟಿಂಗ್‌ರೂಮಿನಲ್ಲಿ ಉದ್ದದ ಎರಡು ಬೆಂಚುಗಳನ್ನಲ್ಲದೆ ಒಂದು ಡಜನ್ ಕುರ್ಚಿಗಳನ್ನೂ ಇರಿಸಿದ್ದನು. ಆದರೆ, ವಾರಗಳು ಉರುಳುತ್ತಿದ್ದಂತೆ ಶ್ರೀಕರನ ನಿರಾಶೆಯು ಹೆಚ್ಚಾಯಿತು. ಒಂದು ದಿನಕ್ಕೆ ಮೂವರು ರೋಗಿಗಳು ಅವನ ಡಿಸ್ಪೆನ್ಸರಿಯ ಹತ್ತಿರ ಬರುವುದೂ ಕಷ್ಟವಾಯಿತು. ಹೊಸ ಬೋರ್ಡ್ ಕಂಡು ಒಳನುಗ್ಗುವ ಜಾತಿಯೊಂದೇ-'ಮೆಡಿಕಲ್ ರೆಪ್ರೆಸೆಂಟೆಟಿವ್' ಎಂಬವರದು. ಇವರು ಹೊಸ ಡಾಕ್ಟರರಿಗೆಲ್ಲ ತಮ್ಮ ಕಂಪೆನಿಯವರು ತಯಾರಿಸುವ ನಾನಾ ತರಗತಿಯ ಮದ್ದು ಇತ್ಯಾದಿಗಳ ವಿಷಯ ತಿಳಿಸಲು ಆತುರಪಡುತಿದ್ದರು. ಏನೂ ಕೆಲಸವಿಲ್ಲದೆ ಕೂತ ಶ್ರೀಕರನೊಡನೆ ಮಾತನಾಡಲು ಹೆಚ್ಚು ಅವಕಾಶವೂ ಅವರಿಗೆ ಸಿಗುತ್ತಿತ್ತು. ಮತ್ತು ವಿಶೇಷ ಮಾಹಿತಿಯಿಲ್ಲದ ಇಂತಹ ಡಾಕ್ಟರರೊಡನೆ ತಮ್ಮ ಮದ್ದುಗಳ ಪ್ರಶಂಸೆಯನ್ನು ಮಾಡಿದ್ದಲ್ಲಿ ಅವರು ನಂಬಿ ತಮ್ಮ ಮದ್ದುಗಳನ್ನೇ ಉಪಯೋಗಿಸಬಹುದೆಂಬ ಒಂದು ಆಶೆಯೂ ಅವರಲ್ಲಿ ಪ್ರಬಲವಾಗಿರುವುದು ಸಹಜ. ಇದರಿಂದ ಈ 'ರೆಪ್ರೆಸೆಂಟೆಟಿವ್'ಗಳು ಶ್ರೀಕರನ ಆಫೀಸಿನಲ್ಲಿ ಯಾವಾಗಲೂ ಹಾಜರು. ಆದರೆ, ದೊಡ್ಡ ದೊಡ್ಡ ಡಾಕ್ಟರರಿಗೆಲ್ಲ ಡೈರಿ, ಕೆಲೆಂಡರ್, ಸೆಂಪಲ್ಸ್ ಇತ್ಯಾದಿ ಕೊಟ್ಟು ಸತ್ಕರಿಸುವ ಇವರು ಶ್ರೀಕರನಿಗೆ ಬರೀ ಮಾತಿನಿಂದಲೂ, ಹೆಚ್ಚೆಂದರೆ ಮದ್ದುಗಳನ್ನು ವರ್ಣಿಸಿ ಬರೆದ ಕಾಗದಗಳಿಂದಲೂ ಸೇವೆ ತೀರಿಸುತ್ತಿದ್ದರು.

ಕೆಲ ತಿಂಗಳುಗಳು ಹೀಗೆ ಕಳೆದ ಮೇಲೆ ಶ್ರೀಕರನೊಡನೆ ಒಬ್ಬೊಬ್ಬರೇ ರೋಗಿಗಳು ಬರಲಾರಂಭಿಸಿದರು. ಇವರು ಹೆಚ್ಚಾಗಿ ಬೇರೆ ಎಲ್ಲ ಡಾಕ್ಟರರ ಹತ್ತಿರ ಸಂಚರಿಸಿ, ಎಲ್ಲ ಕಡೆಗಳಲ್ಲಿಯೂ ಸಾಲಮಾಡಿ, ಅದನ್ನು ಪೂರಯಿಸದೆ ಇವನಲ್ಲಿಗೆ ಬಂದ 'ಹೊಸ' ಗಿರಾಕಿಗಳು. ಮೊದಮೊದಲು ಶ್ರೀಕರನು ಅವರನ್ನು ಸ್ವಾಗತಿಸುತ್ತಿದ್ದರೂ, ಬರಬರುತ್ತ ಕಾಸು ಕೊಡದೆ ಮದ್ದನ್ನೂ ತನ್ನ ಬಾಟ್ಲೆಯನ್ನೂ ಕೊಂಡುಹೋಗಿ ತಿರಿಗಿ ಬರದಿರುವ ಇಂತಹವರು ತನ್ನೆಡೆಗೆ ಬರುವುದಕ್ಕಿಂತ ಬರದೆ ಇರುವುದೇ ಒಳ್ಳೆಯದೆಂದು ಅವನಿಗೆ ಎನಿಸಿತು. ಅದಲ್ಲದೆ, ಇಂತಹವರ ಮಹಾಗುಣ ಒಂದೆಂದರೆ, ತಮ್ಮಂತೆಯೇ ಹಣಕೊಡದ ಇತರರನ್ನು ಕಳುಹಿಸುವುದು ಎಂಬುದೂ ಶ್ರೀಕರನಿಗೆ ಮಂದಟ್ಟಾಯಿತು.

ಮತ್ತೆ ಸ್ವಲ್ಪ ಸಮಯ ಹೋದ ಮೇಲೆ ಇನ್ನೊಂದು ತರದ ರೋಗಿಗಳು ಬರಲಾರಂಭಿಸಿದರು. ಇಷ್ಟರೊಳಗೆ ಶ್ರೀಕರನ ಬೋರ್ಡು ಹಳೆಯದಾಗಿದ್ದು ಶ್ರೀಕರನು "ಕೆಲ

ಸಮಯದಿಂದ ಇಲ್ಲಿದ್ದ" ಡಾಕ್ಟರನಾದನು. ಆದುದರಿಂದ, ಬೇರೆಲ್ಲ ಕಡೆಗೆ ಸುತ್ತಿ ಗುಣಸಿಗದೆ ಹತಾಶರಾಗಿ ಇದ್ದ ರೋಗಿಗಳು ಇವನೆಡೆಗೆ ಬರಲಾರಂಭಿಸಿದರು. ಇವರಲ್ಲಿ ಹಲವರ ರೋಗಗಳು ವಾಸಿಯಾಗದಂಥವುಗಳು. ಆದರೂ ಮದ್ದು ಕೊಡಬೇಕೆಂಬುದು ಖಂಡಿತ. ಶ್ರೀಕರನು ಮದ್ದು ಕೊಡುತ್ತಾ ಬಂದನು. ಮೊದಮೊದಲು ಮದ್ದಿಗೆ ಇಂತಿಷ್ಟೇ ಹಣ ಸಿಗಬೇಕೆಂದು ಆಲೋಚನೆ ಇದ್ದ ಶ್ರೀಕರನು ಈಗ ಎಷ್ಟು ಸಿಕ್ಕಿದರೂ ಅದೇ ಲಾಭವೆಂದೆಣಿಸಲಾರಂಭಿಸಿದನು. ಇದು ಮಾತ್ರವಲ್ಲದೆ ಈ ರೋಗಿಗಳಿಗೆ ಮದ್ದು ಕೊಡುತ್ತಾ ಬಂದು, ಶ್ರೀಕರನ ಮದ್ದಿನಿಂದ ಗುಣ ಆಗುವುದೇ ಇಲ್ಲವೆಂಬ ದೂರೂ ಕೇಳಲಾರಂಭಿಸಿತು.

ಕೊನೆಗೆ ಬರಲಾರಂಭಿಸಿದ ಜನರು ರೋಗಿಯ ಸಂಬಂಧಿಕರು. ಇವರು ಬರುವಾಗ ರೋಗಿಯ ಸ್ಥಿತಿಯು ಬಹಳ ಹೀನಾವಸ್ಥೆಯಲ್ಲಿರಬೇಕಿತ್ತು. "ಇನ್ನು ಬದುಕುವುದಿಲ್ಲ, ನೀವು ಬೇರೆ ಮದ್ದುಮಾಡಿ ನೋಡಬಹುದು" ಎಂದು, ಅಷ್ಟರ ತನಕ ಉಪಚರಿಸುತ್ತಿದ್ದ ವೈದ್ಯರು ಹೇಳಿದ ಕೂಡಲೇ ರೋಗಿಯ ಸಂಬಂಧಿಕರು ಬೇರೆ ವೈದ್ಯರನ್ನು ಹುಡುಕಲಾರಂಭಿಸುವರು. ಆದರೆ ಅಂತಹ ರೋಗಿಯ ಚಿಕಿತ್ಸೆಯನ್ನು ನೋಡಿಕೊಳ್ಳಲು ಯಾರು ತಾನೇ ಒಪ್ಪುವರು? ಅಂತೂ ಶ್ರೀಕರನಿಗೆ ಬೇರೆ ಗತಿಯಿಲ್ಲದಿದ್ದುದರಿಂದ ಅವನು ಯಾವ ರೋಗಿಯ ಚಿಕಿತ್ಸೆಗೂ ಒಪ್ಪುತ್ತಿದ್ದನು. ಇಂತಹ ರೋಗಿಗಳ ಚಿಕಿತ್ಸೆಯನ್ನು ಕೈಕೊಂಡ ಕೆಲಸಮಯದಲ್ಲೇ ಶ್ರೀಕರನಿಗೆ "ದ್ವಿತೀಯ ಯಮ" ಎಂಬ ಬಿರುದೂ ಸಿಕ್ಕಿತು. ಆದುದರಿಂದ ಬೇರೆ ಯಾವ ತರದ ರೋಗಿಗಳೂ ಇವನೊಡನೆ ಬರುವ ಧೈರ್ಯವನ್ನು ತಾಳಲಾರದವರಾದರು. ಶ್ರೀಕರನ "ಕೈಗುಣ"ವು ಬಹಳ ಕೆಟ್ಟದೆಂದು ಜನರು ಹೇಳಲಾರಂಭಿಸಿದರು. ಆದರೆ, ಈ ಎಲ್ಲ ಕಷ್ಟಗಳಲ್ಲಿ ಶ್ರೀಕರನಿಗೆ ಸಮಾಧಾನ ತರುವ ಒಂದು ಯೋಜನೆಯೆಂದರೆ ತನ್ನ ಮನಸ್ಸಾಕ್ಷಿಗೆ ವಿರುದ್ಧವಾಗಿ ತಾನು ಯಾವ ಕೆಲಸವನ್ನೂ ಮಾಡದೆ ಇರುವುದೆಂಬುದು. ಹಲವು ಸಾರೆ ದುಡ್ಡಿನ ಆಶೆ ತೋರಿಸಿ ಜನರು ಇವನಿಂದ ಗರ್ಭಪಾತ, ಸುಳ್ಳು ವೈದ್ಯಕೀಯ ದಾಖಲೆ ಇತ್ಯಾದಿಗಳಲ್ಲಿ ಸಹಾಯವನ್ನು ಕೋರಿದ್ದರೂ ಶ್ರೀಕರನು ಅವರನ್ನು ಮೆಚ್ಚಿಸುವ ಸ್ಥಿತಿಗೆ ಬಂದಿರಲಿಲ್ಲ; ಅಲ್ಲಿಗೆ ಬರುವ ಮುಂಚೆಯೇ ಊರು ಬಿಡಬೇಕೆಂಬ ನಿಶ್ಚಯವೂ ಅವನಲ್ಲಿ ಪ್ರಬಲವಾಗಿತ್ತು.

ಇದರಿಂದಾಗಿ ಸೋದರ ಮಾವನ ಪತ್ರವನ್ನು ಹಲವು ಸಾರೆ ಓದಿ ನೋಡಿದನು. ಶಿವಸ್ವಾಮಿ ಅಯ್ಯರರ ನೆನಪೂ ಆಯಿತು............

ಆರು ವರ್ಷಗಳ ಹಿಂದಿನ ಸಮಯ. ಶ್ರೀಕರನು ಒಮ್ಮೆ ರಾತ್ರಿ ಸಿನೆಮಾ 'ಶೋ'ಗೆ ಹೋಗಿದ್ದನು.. ಅಲ್ಲಿಂದ ಹಿಂದಿರುಗುವಾಗ ಸೈಕಲ್ ಟಾಯರಿಗೆ ಗಾಳಿಯಿಲ್ಲ—ತೂತಾಗಿತ್ತು, ಎಂದು ಕಂಡು ಸೈಕಲ್ ದೂಡುತ್ತ ಮೆಲ್ಲಗೆ ಬರುತ್ತಿದ್ದನು. ಹಾಗೇ ಬರುವಾಗ ಮಾರ್ಗದ ಬದಿಯಲ್ಲಿ ಒಂದು ಕಾರ್ ನಿಂತುದನ್ನು ಕಂಡನು. ಬೊನೆಟ್ ಎತ್ತಿತ್ತು. ಕಾರನಲ್ಲಿ ಯಾರೂ ಇರಲಿಲ್ಲ. ಯಜಮಾನ ಟೋರ್ಚ್‌ಲೈಟ್ ಹಿಡಿದು ಕಾರಿನ ಯಂತ್ರದತ್ತ ಏನೋ ನೋಡುತ್ತಿದ್ದರು. ದೀಪದ ಪ್ರಕಾಶಕ್ಕೆ ಅವರ ಮುಖ ಕಂಡು ಶ್ರೀಕರನು "ಶಿವಸ್ವಾಮಿ ಅಯ್ಯರ್" ಎಂದು ತನ್ನೊಳಗೇ ಅಂದುಕೊಂಡನು. "ಗುಡ್‌ನೈಟ್, ಸರ್," ಎಂದನು ಶ್ರೀಕರ. ಕಾರಿನಲ್ಲೇ ಮಗ್ನರಾಗಿದ್ದ ಅಯ್ಯರರು ಬೆನ್ನು ಚಾಚಿ ನಿಂತು, "ಗುಡ್‌ನೈಟ್" ಎಂದರು. ಕಾರು ನಡೆಯದೆ ನಿಂತಿದೆ ಎಂಬುದು ಶ್ರೀಕರನಿಗೆ ಗೊತ್ತಿದ್ದ ವಿಷಯ. ಯಾವ ಕಾರಣದಿಂದ ಎಂಬುದು ಅವನಿಗೆ ಗೊತ್ತಿಲ್ಲದ ವಿಷಯ. ಕಾರು ನಡೆಯದೆ ನಿಲ್ಲಲು ಹಲವು ಕಾರಣಗಳಿರಬಹುದೆಂದು ಅಯ್ಯರರಿಗೆ ಗೊತ್ತಿತ್ತು. ಆದರಲ್ಲಿ ಯಾವುದು ಎಂದು ಹೇಗೆ ಕಂಡು ಹಿಡಿಯಲಿ ಎಂದು ಯೋಚಿಸುತ್ತ ಟೋರ್ಚ್‌ಲೈಟ್ ಹಾಕಿ ನೋಡುತ್ತಿದ್ದರು, ಅವರು. ಆದರೆ, ಶ್ರೀಕರನಿಗೆ ಕಾರಿನ ವಿಷಯ ಏನೂ ಗೊತ್ತಿಲ್ಲ, ಆದರೂ "ಗುಡ್ ನೈಟ್, ಸರ್" ಎಂದೂ ಹಾಗೆಯೇ ನಿಲ್ಲಲೂ ಕೂಡದೆ, ಏನೂ ಹೇಳುವುದೆಂದೂ ತೋಚದೆ ಕೊನೆಗೆ "ಪೆಟ್ರೋಲ್ ಇಲ್ಲವೇ, ಸರ್?" ಎಂದನು. ಮಾತು ಹೊರಬಿದ್ದ ಕೂಡಲೆ, "ಎಂತಹ ಹುಚ್ಚ ನಾನು, ಪೆಟ್ರೋಲ್ ಇಲ್ಲದೆ ಇದ್ದರೆ ಅವರಿಗೆ ಗೊತ್ತಿರದೆ ಇರುತ್ತಿತ್ತೆ," ಎಂದುಕೊಂಡನು.

ಆದರೆ ಮಾತಿನ ಪರಿಣಾಮ ಅಯ್ಯರರಲ್ಲಿ ಬೇರೆಯೇ ತರವಾಯಿತು. ಏನೆಂದಿರಿ, ಪೆಟ್ರೋಲ್ ಇಲ್ಲದೆ?" ಎಂದಂದರು. ಕಾರಿನ ಬಾಗಿಲು ತೆರೆದು ಒಳಗೆ ಪ್ರಕಾಶವನ್ನು ಬೀರಿಸಿ ಕಾರಿನ "ಸ್ವಿಚ್ ಒನ್" ಮಾಡಿ, ಒಂದು "ಡಾಯಲ್" ನೋಡಿ,"ಸರಿ, ಎಂತಹ ಹುಚ್ಚ ನಾನು! ಪೆಟ್ರೋಲ್ ಇಲ್ಲ. ಕಾರಣ ಏನಾಗಿರಬಹುದೆಂದು ಆಲೋಚಿಸುತ್ತ ಇದ್ದೆ. ಅದು ಹೊಳೆಯಲೇ ಇಲ್ಲ. ಈಗೇನು ಮಾಡಲಿ?" ಎಂದರು.

ಇಂತಹ ದೊಡ್ಡ ಸರ್ಜನರಿಗೆ ತನ್ನಿಂದಾಗುವ ಯಾವ ಉಪಕಾರವನ್ನೂ ಮಾಡಲು ತಯಾರಿದ್ದ ಶ್ರೀಕರನು "ಹೆದರದಿರಿ, ಸರ್. ಇಲ್ಲೇ ಅರ್ಧ ಮೈಲಿನಲ್ಲಿ ಪೆಟ್ರೋಲ್ ಬಂಕ್ ಇದೆಯಲ್ಲ. ಅಲ್ಲಿಂದ ಈಗಲೇ ಪೆಟ್ರೋಲ್ ತಂದು ಕೊಡುತ್ತೇನೆ" ಎಂದು ಹೇಳಿ ಟಾಯರಿನಲ್ಲಿ ಗಾಳಿಯಿರದಿದ್ದರೂ ಸೈಕಲ್ ಹತ್ತಿ ಓಡಿದನು. ಬಂಕಿಗೆ ಹೋಗಿ ಅಲ್ಲಿಯವನನ್ನು ಎಚ್ಚರಿಸಿ, ಅವನು ಮೊದಲಿಗೆ ಒಪ್ಪದಿದ್ದರೂ ಇನಾಮಿನ ಆಶೆ ತೋರಿಸಿ, ಹೇಗೂ ಅಲ್ಲಿಂದ ಡಬ್ಬಿಯೊಂದನ್ನು ಪಡಕೊಂಡು, ಪೆಟ್ರೋಲ್ ತೆಗೆದುಕೊಂಡು ಹೋಗಿ ಶಿವಸ್ವಾಮಿ ಅಯ್ಯರರ ಕಾರು ನಡೆಯುವಂತೆ ಮಾಡಲು ಸಹಾಯಮಾಡಿದನು.

ಅಂತೂ ಕಾರು ಹೊರಡಿಸುತ್ತ ಹೋಗುವಾಗ ಶ್ರೀಕರನಿಗೆ ಧನ್ಯವಾದಗಳನ್ನು ಸಮರ್ಪಿಸಿ ಅಯ್ಯರರು "ನಿಮಗೆ ಎಲ್ಲಿ?" ಎಂದು ಕೇಳಿದರು.

"ನಾನು ಬರುವ ವರ್ಷ ನಿಮ್ಮ ಸ್ಟೂಡೆಂಟ್, ಸರ್, ಈಗ ನಾಲ್ಕನೇ ವರ್ಷದಲ್ಲಿದ್ದೇನೆ, ಮೆಡಿಕಲ್ ಕೊಲೇಜಿನಲ್ಲಿ" ಎಂದ ಶ್ರೀಕರ.

"ಆಹಾ, ಮೆಡಿಕಲ್ ಸ್ಟೂಡೆಂಟೊ? ಹಾಗಾದರೆ ನೀನು ದೊಡ್ಡ ವೈದ್ಯನಾಗುವೆ, ಖಂಡಿತ. 'ಡಾಯಗ್ನೊಸಿಸ್' ಮಾಡುವುದರಲ್ಲಿ ಜಾಣ, ನೀನು" ಎಂದು ನಗುತ್ತ ಹೇಳಿ, ಅಯ್ಯರರು ಕಾರು ಚಲಿಸಿ ನಡೆದರು.

ಮುಂದಿನ ವರ್ಷ ಸುದೈವದಿಂದ ಶ್ರೀಕರನಿಗೆ ಸರ್ಜರಿ ಕಲಿಯಲು ಅಯ್ಯರರ ವಾರ್ಡಿಗೇ ಹಾಕಿದರು. ಮೊದಲ ದಿನವೇ ಅಯ್ಯರರು ಶ್ರೀಕರನನ್ನು ಕಂಡು ಗುರುತಿಸಿದರು. ಅದಲ್ಲದೆ ಅವನ ಅಂದಿನ ರಾತ್ರಿಯ ಉಪಕಾರಕ್ಕೆ ಅವ ನನ್ನು ಎಲ್ಲರೆದುರು ಸನ್ಮಾನಿಸಿ, ಅಂದಿನ ಕತೆಯನ್ನು ತಿಳಿಸಿ ದರು. ಅಂದಿನಿಂದ ಅಯ್ಯರರಿಗೆ ಶ್ರೀಕರನ ಮೇಲೆ ಒಂದು ತರದ ಮಮತೆಯುಂಟಾಯಿತು.

ಮೂರು ತಿಂಗಳು ದಿನಂಪ್ರತಿ ಬೆಳಿಗ್ಗೆ ಅರ್ಧದಿನ ಆಸ್ಪತ್ರೆಯಲ್ಲಿ ಅಯ್ಯರರ ಹಿಂದೆಯೇ ಓಡಬೇಕು. ವಾರದಲ್ಲಿ ಮೂರು ದಿನ ಒಪರೇಶನ್ ಥಿಯೇಟರಿನಲ್ಲಿ; ಮೂರು ದಿನ ವಾರ್ಡಿನಲ್ಲಿ. ಆದಿತ್ಯವಾರ ರಜೆಯೆಂದು ಲೆಕ್ಕ. ಆದರೂ, ಅಯ್ಯರರು ಶ್ರೀಕರನನ್ನು ಯಾವಾಗಲೂ ಕೇಳುತ್ತಿದ್ದುದ ರಿಂದ, ಅವನಿಗೆ ಆದಿತ್ಯವಾರವೂ ಅವರ ಹಿಂದೆಯೇ ಇದ್ದು ಸಂಜೆ ನಾಲ್ಕರ ತನಕವೂ ಆಸ್ಪತ್ರೆಯಲ್ಲಿರಬೇಕಿತ್ತು.

ಅಯ್ಯರರು ಶ್ರಮಜೀವಿ. ಇತರರೂ ತನ್ನಂತೆಯೇ ಶ್ರಮ ಪಟ್ಟರೆ ಅವರಿಗೆ ಬಹಳ ಸಂತೋಷ. ಶ್ರೀಕರನು ಬಹಳ ಶ್ರಮ ಪಟ್ಟು ಕಲಿಯುವ ಹುಡುಗನೆಂದು ಅವರಿಗೆ ಹೇಗೋ ಮನ ಸ್ಸಾಯಿತು. ಅಂತೂ ಒಂದು ದಿನದ ಘಟನೆಯು ಅವರ ಈ ಅಭಿಪ್ರಾಯವನ್ನು ಬಲಪಡಿಸಿತು. ಆ ದಿನ ಶ್ರೀಕರನಿಗೆ ಬೆಳಿಗ್ಗೆ ಬೇಗನೆ ಎದ್ದು ಸೆಂಟ್ರಲ್ ರೈಲ್ವೇ ಸ್ಟೇಶನಿಗೆ ಹೋ ಗುವ ಕೆಲಸವಿತ್ತು. ಮಂದೂರಿನಲ್ಲಿ ಅವನೊಟ್ಟಿಗೆ ಇಂಟರ್ ಮೀಡಿಯಟ್ ಕಲಿತ ಅವನ ಮಿತ್ರ ರಮಾನಂದ ಅಂದು ಬೆಳಿಗ್ಗೆ ಮಂದೂರಿಂದ ಬರುವ ಮೈಲಿನಲ್ಲಿ ಆರೂವರೆ ಗಂಟೆಗೆ ಮದ್ರಾಸು ತಲಪಿ, ಏಳೂವರೆ ಗಂಟೆಗೆ ಹೊರ ಡುವ ಗ್ರೇಂಡ್ ಟ್ರಂಕ್ ಎಕ್ಸ್‌ಪ್ರೆಸ್ಸಿನಲ್ಲಿ ಕೂತು,ಬನಾ ರಸಿಗೆ ತನ್ನ ಎಂಜಿನಿಯರಿಂಗ್ ಕೊಲೇಜಿಗೆ ಹೋಗುವ ವನಿದ್ದನು. ಅವನನ್ನು ಕಾಣುವ ಆಸೆಯಿಂದ ಶ್ರೀಕರ ಆರು ಗಂಟೆಗೇ ಸ್ಟೇಶನ್ ತಲಪಿದನು. ಹೇಗೂ ಎಂಟು ಗಂಟೆಗೆ ಆಸ್ಪತ್ರೆಗೆ ಹೋಗಬೇಕಾದುದರಿಂದ ಪುಸ್ತಕಗಳನ್ನೆಲ್ಲ ಕೊಂಡೇ ಹೋದನು. ಹೆಚ್ಚಾಗಿ ಮೆಡಿಕಲ್ ವಿದ್ಯಾರ್ಥಿಗಳು ಧರಿಸುವಂತೆ ಸ್ಟೆತೆಸ್ಕೋಪ್ ಒಂದು ಅವನ ಕೊರಳನ್ನು ಅಲಂಕರಿಸು ತ್ತಿತ್ತು. ಆ ದಿನ ಮಂದೂರ್ ಎಕ್ಸ್‌ಪ್ರೆಸ್ ಸ್ಟೇಶನಿಗೆ ಬರುವ ಮುಂಚೆಯೇ ಘೋರ ಮಳೆಗೆ ಆರಂಭಿಸಿತು. ಅದನ್ನು ಕಂಡು ತಾನೇಕೆ ಲೋಜಿನಿಂದ ಈ ದಿನ ಹೊರಬಿದ್ದೆನಪ್ಪಾ ಎಂದೆನಿಸಿತು, ಶ್ರೀಕರನಿಗೆ. ಮಂದೂರು ರೈಲೂ ಬಂತು. ಅದರಲ್ಲಿ ರಮಾನಂದನ ಸವಾರಿಯೇ ಇಲ್ಲ! ಅದರಿಂದ ಇನ್ನಷ್ಟು ಹತಾಶನಾಗಿ ಶ್ರೀಕರ ಮುಂದೇನು ಮಾಡುವು ದೆಂದು ಯೋಚಿಸುತ್ತಿದ್ದನು. ಅಲ್ಲಿಂದ ಹೋಗ ಬೇಕುಎದು ರಿಗೇ ಇರುವ ಆಸ್ಪತ್ರೆಗೆ—ಬರೇ ನೂರು ಗಜಗಳ ದಾರಿ. ಆದರೆ ಎರಡು ಹೆಜ್ಜೆಯಷ್ಟು ಹೊರಗೆ ಹೋದರೂ ಇಡೀ ಒದ್ದೆಯಾಗುವಂತಹ ಮಳೆ. ಯೋಚನೆ ತೋರದೆ ಹಾಗೆಯೇ ಬದಿಯಲ್ಲಿ ಒಂದು ಕಂಬಕ್ಕೆ ಒರಗಿ ನಿಂತನು. ಆಸ್ಪತ್ರೆಗೆ ಒಮ್ಮೆ ಮುಟ್ಟಿದರೆ ಅಲ್ಲಿಂದ ಕೊಲೇಜು ಸೇರುವುದು ಬಹಳ ಸುಲಭ, ಕಾರಣ ಇವೆರಡು ಕಟ್ಟಡಗಳು ಒಂದಕ್ಕೊಂದು ಒತ್ತಿದ್ದವು. ಕೊಲೇಜಿನ ಕೆಂಟೀನ್‌ದಲ್ಲಿ ಆಗ ಸಿಕ್ಕುವ ಬಿಸಿಬಿಸಿ ಇಡ್ಲಿ ಸಾಂಭಾರ್ ಮತ್ತು ಕಾಫಿಗಳೇ ಅವನ ಆಗಿನ ಗುರಿ!

ದಾರಿಕಾಣದೇ ಯೋಚಿಸಿ ನಿಂತ ಶ್ರೀಕರನನ್ನು ಯಾರೋ "ಡೋಕ್ಟರ್!" ಎಂದು ಕರೆದ ಕೂಗೇ ಎಚ್ಚರಿಸಿತು. ಇವನ ಕೊರಳಿನ ಅಲಂಕಾರದ 'ಸ್ಟೆತೆಸ್ಕೋಪ್' ನೋಡಿ ಇವನನ್ನು ಡೊಕ್ಟರ' ಎಂದು ಬಗೆದು ಇವನೊಡನೆ ಒಬ್ಬರು, ಪರವೂರಿ ನಿಂದ ತಂದ ಸೊಂಟ ಮುರಿದ ಒಬ್ಬ ರೋಗಿಯನ್ನು ಆಸ್ಪತ್ರೆಗೆ ಹೇಗೆ ಕರಕೊಂಡು ಹೋಗಬಹುದೆಂದು ಕೇಳಬಂದಿದ್ದರು. ಆಸ್ಪತ್ರೆಯಿಂದ ಎಂಬ್ಯುಲೆನ್ಸ್ ವೇನ್ ತರಿಸುವ ಸೂಚನೆ ಕೊಟ್ಟು, ಶ್ರೀಕರ ಅವರಿಗೆ ಸಹಾಯಮಾಡಿದ. ಅಲ್ಲಿಂದ ಟೆಲಿ ಫೋನ್ ಮೂಲಕ ತಿಳಿಸಿ, ವೆನೂ ಬಂತು. ರೈಲಿನಿಂದ ರೋಗಿ ಯನ್ನು ವೆನಿಗೆ ಸಾಗಿಸಿದರು. ಶ್ರೀಕರನೂ ರೋಗಿಯೊಡನೆ ವೆನಿಗೆ ನಡೆದು, ಅಲ್ಲಿಂದ ಆಸ್ಪತ್ರೆ ಸೇರಿ, ರೋಗಿಯನ್ನು ಆಸ್ಪತ್ರೆಯಲ್ಲಿರಿಸುವ ವ್ಯವಸ್ಥೆ ತಿಳಿಸಿ, ನೇರಾಗಿ ಕೊಲೇಜ್ ಕೆಂಟೀನಿಗೆ ಹೋಗಿ ಬಿಸಿ ಇಡ್ಲಿಯನ್ನು ಹೊಟ್ಟೆಯಲ್ಲಿರಿಸಿದ. ಕಾಫಿ ತಿಂಡಿ ಮುಗಿಸಿದ ತರುವಾಯ ಒಂದು ಸಿಗರೆಟ್ ಸೇದುತ್ತ ಅಲ್ಲೇ ರೀಡಿಂಗ್ ರೂಮಿನಲ್ಲಿ ಹೋಗಿ ಕುಳಿತ. ಎಂಟು ಗಂಟೆಯಾದರೂ ಯಾರ ಸುಳಿವೂ ಇಲ್ಲ. ವಿಪ ರೀತ ಮಳೆಯಿಂದಾಗಿ ಅಂದು ಯಾರೂ ಕೊಲೇಜಿಗೆ ಬಂದಿ ರಲಿಲ್ಲ. ಆ ದಿನ ರಜೆ ಕೊಡುವರೆಂಬುದು ಖಂಡಿತ. ಆದುದರಿಂದ ನೆನೆದು ಬರುವುದೇಕೆಂದು ಹೆಚ್ಚಿನವರು ಬರು ತ್ತಲೇ ಇದ್ದಿಲ್ಲ. ಅಂತೂ ಎಂಟು ಗಂಟೆ ಕಳೆದ ಮೇಲೆ ಶ್ರೀಕರ ಆಸ್ಪತ್ರೆ ಸೇರಿದ. ಅಂದು ಔಟ್ ಪೇಶಂಟ್ ಡಿಪಾ ರ್ಟ್‌ಮೆಂಟಿಗೆ ಅವನು ಹೋಗಬೇಕಿತ್ತು. ಅಲ್ಲಿ ಹೋದರೆ ಒಬ್ಬ ಅಸಿಸ್ಟಾಂಟ್ ಸರ್ಜನರೂ ಇಬ್ಬರು ಹೌಸ್ ಸರ್ಜನರೂ ಇದ್ದರು. ಅಸಿಸ್ಟಾಂಟರಿಗೆ ಕಾರ್ ಇತ್ತು; ಆದುದರಿಂದ

ಬರುವುದು ಕಷ್ಟವಿಲ್ಲ. ಹೌಸ್ ಸರ್ಜನರು ವಾಸಿಸಿರುವುದೇ ಆಸ್ಪತ್ರೆಯ ಪಠಾರದಲ್ಲಿ. ಮತ್ತೆ ಆ ದಿನ ಅಲ್ಲಿ ಇದ್ದವ ರೆಂದರೆ ಬರೇ ಮೂರು ಜನ ರೋಗಿಗಳು. ಯಾವಾಗಲೂ ಕನಿಷ್ಟ ಪಕ್ಷ ೧೫೦ ಜನರು ಅಲ್ಲಿದ್ದು, ಅವರ ನೂಕು—ನುಗ್ಗಾಟದ ಗಲಾಟೆಯ ಬದಲು ಇಂದಿನ ನಿಶ್ಶಬ್ದತೆ ನೋಡಿ ಶ್ರೀಕರನಿಗೆ ಆಶ್ಚರ್ಯವಾಯಿತು. ಶ್ರೀಕರನನ್ನು ನೋಡಿ ಅಲ್ಲಿದ್ದ ಮೂವರು ಡಾಕ್ಟರರಿಗೂ ಅತ್ಯಂತ ಆಶ್ಚರ್ಯವಾಯಿತು. "ಏನಪ್ಪಾ, ರೋಗಿಗಳೆಲ್ಲರೂ ರಜೆ ತಗೊಂಡರೂ ನೀನು ಹಾಜರ್! ಕಲಿಯುವ ಮನಸ್ಸು ಬಹಳವಿದೆ ನಿನಗೆ" ಎಂದು ಅವರು ತಮಾಷೆ ಮಾಡಿದರು. ತಾನು ಬರಲು ನಿಜವಾದ ಕಾರಣವು ರಮಾನಂದನನ್ನು ನೋಡಲು ಸ್ಟೇಶನಿಗೆ ಬರ ಲಿದ್ದ ಕೆಲಸವೆಂದೂ, ಅದಲ್ಲದಿದ್ದರೆ ಅಷ್ಟು ಹೊತ್ತಿಗೆ ತಾನೂ ಲೋಜಿನಲ್ಲಿ ಅಲ್ಲಿಯ ಇತರರಂತೆ ಮುಸುಕು ಹಾಕಿ ಇನ್ನೂ ಹಾಸಿಗೆಯಲ್ಲೇ ಇರುತ್ತಿದ್ದೆನೆಂದೂ ತಿಳಿಸಲು ನಾಚಿ, ಶ್ರೀಕರ ಸುಮ್ಮನಾದ.

೧೦ ಗಂಟೆಗೆ ಔಟ್‌ಪೇಶಂಟ್ ಕೆಲಸ ಮುಗಿಸಿ ಆಸ್ಪ ತ್ರೆಗೆ ಹೋಗುವಾಗ ಬಂದ ರೋಗಿಗಳ ಒಟ್ಟು ಸಂಖ್ಯೆ ಬರೇ ೧೦. ಅವರಲ್ಲಿ ಮೂರು ಅರ್ಜಂಟ್ ಕೇಸುಗಳು. ಒಪ ರೇಶನ್ ಕೂಡಲೆ ನಡೆಯತಕ್ಕದ್ದು. ಅವರನ್ನು ಒಪರೇಶನ್ ಥಿಯೇಟರಿಗೆ ಸಾಗಿಸಿಯೂ ಆಗಿತ್ತು. ಶ್ರೀಕರ ಥಿಯೇಟರಿಗೆ ಹೋಗಲು, ಬಿಳಿ ಹೊರಕೋಟು, ಟೋಪಿ, ಮುಖಪರದೆ ಮತ್ತು ಶೂಸಿಗೆ ಹೊರವಸ್ತ್ರ ಧರಿಸಿದ. ಮೊದಲನೇ ರೋಗಿ ಯನ್ನು ಒಳಗೆ ಕೊಂಡುಹೋಗುವಾಗ ತಾನೂ ಹೋದ.

ಒಳಗೆ ಅಯ್ಯರರು ಒಪರೇಶನಿಗೆ ಸಜ್ಜಾಗಲು ಕೈತೊಳೆ ಯುತ್ತಿದ್ದರು. "ಗುಡ್‌ಮೋರ್ನಿಂಗ್, ಸರ್" ಎಂದ, ಶ್ರೀಕರ. ಸ್ವರವನ್ನು ಕೇಳಿಯೇ ಅಯ್ಯರರು ಶ್ರೀಕರನನ್ನು ಗುರುತಿಸಿ, "ಗುಡ್ ಮೋರ್ನಿಂಗ್, ಶ್ರೀಕರ, ನಾನು ನಿನ್ನನ್ನು ಈಹೊತ್ತು ನಿರೀಕ್ಷಿಸಿರಲಿಲ್ಲ," ಎಂದರು. ಅಷ್ಟರಲ್ಲೇ ಅಸಿಸ್ಟಾಂಟರು ಬಂದು ಅಂದಿನ ರೋಗಿಗಳ ವಿವರ ಹೇಳಿದರು. ಮೊದ ಲನೇ ಕೇಸು "ಪರ್ಫೊರೇಟೆಡ್ ಗೆಸ್ಟ್ರಿಕ್ ಅಲ್ಸರ್" (Perforated Gastric Ulcer). ಜೀರ್ಣಕೋಶ (ಜಠರ)ಕ್ಕೆ ಕುರು ಆಗುವುದುಂಟು. ಜಾಗ್ರತೆ ಮಾಡದಿ ದ್ದರೆ ಅದು ಹೆಚ್ಚಾಗಿ, ಪಸರಿಸಿ, ಕೊನೆಗೆ ಒಡೆಯುವುದು. ಆಗ ಒಪರೇಶನ್ ಮಾಡಿ ಅದನ್ನು ಮುಚ್ಚದಿದ್ದರೆ ಸಾವು ಸಿದ್ಧ. ಅಯ್ಯರರು ಈ ಎಲ್ಲ ವಿಷಯಗಳನ್ನು ಸವಿಸ್ತಾರ ವಾಗಿ ಶ್ರೀಕರನಿಗೆ ತಿಳಿಸಿದರು. ಇಂದು ಬೇರೆ ಯಾವ ವಿದ್ಯಾ ರ್ಥಿಯೂ ಇಲ್ಲದಿದ್ದುದರಿಂದ ಒಪರೇಶನ್ ಮಾಡುವಾಗ ಹತ್ತಿರ ನಿಂತು ಚೆನ್ನಾಗಿ ನೋಡಲು ಶ್ರೀಕರನಿಗೆ ಸುಸಂಧಿ. ಒಪರೇಶನ್ ನಡೆಯುತ್ತಿದ್ದಂತೆ ಅಯ್ಯರರು ಎಲ್ಲವನ್ನೂ ವಿಸ್ತರಿಸಿ ಹೇಳಿದರು. ಎರಡನೆಯ ಕೇಸು ಬಂತು. ಅಯ್ಯ ರರು ಮರಳಿ ಕೈ ತೊಳೆದು ಬಂದರು. ವೇಗದಿಂದ ಓಡುವ ಮೋಟರಿನಡಿಗೆ ಬಿದ್ದು ಒಬ್ಬನು ಒಂದು ಕಾಲನ್ನು ಮುರಿದು ಕೊಂಡಿದ್ದ. ಕಾಲನ್ನು ರಕ್ಷಿಸುವ ಯಾವ ಉಪಾಯವೂ ಇಲ್ಲದಿದ್ದುದರಿಂದ ಮೊಣಕಾಲಿನಡಿಗೆ ಅದನ್ನು ಕಡಿಯುವ ಯೋಚನೆಮಾಡಿದ್ದರು. ಇದನ್ನು ಅಯ್ಯರರು ಶ್ರೀಕರನಿಗೆ ವಿವರಿಸಿ, ಒಪರೇಶನ್ ಮಾಡಲು ಬಂದರು. ಅದನ್ನು ಕೆಲವೇ ನಿಮಿಷಗಳಲ್ಲಿ ಮುಗಿಸಿಯೂ ಆಯಿತು. ಅಷ್ಟ ರೊಳಗೆ ಒಬ್ಬ ಹೌಸ್ ಸರ್ಜನ್ ಬಂದು ಅಯ್ಯರರೊಡನೆ ಇನ್ನೊಂದು ಕೇಸ್ ಅದಾಗಲೇ ಬಂದಿರುವುದೆಂದು ತಿಳಿಸಿ ದನು. ಡಿಫ್ತೀರಿಯಾ ರೋಗದಿಂದ ನರಳುವ ಸಣ್ಣ ಮಗು ವದು. ತೊಂಡೆಯಲ್ಲಿ ರೋಗವು ಹೆಚ್ಚಾದುದರಿಂದ ಶ್ವಾಸ ಕ್ರಿಯೆಯು ಬಹಳ ಕಷ್ಟಕರವಾಗಿತ್ತು. ಗಾಳಿಯು ಹೀಗೆ ಮೇಲಿನಿಂದ ತೊಂಡೆ ದಾಟಿ ಒಳಗೆ ಹೋಗಲು ಕಷ್ಟವಾಗು ವುದರಿಂದ ಕುತ್ತಿಗೆಯ ಎದುರುಗಡೆಯಿಂದ ತೂತುತೆಗೆದು ನಳಿಗೆಯೊಂದನ್ನಿಟ್ಟರೆ ಗಾಳಿಯು ಸರಾಗವಾಗಿ ಇಲ್ಲಿಂದ ಒಳಗೆ ಹೋಗಿ ಶ್ವಾಸಕ್ರಿಯೆಯು ಸುಲಭವಾಗುವುದೆಂದು ಅಯ್ಯರರು ಶ್ರೀಕರನಿಗೆ ತಿಳಿಸಿ, ಆ ಕೇಸ್ ಬಹಳ ಅರ್ಜಂಟ್ ಇದ್ದುದರಿಂದ ಅದನ್ನೇ ಮೊದಲು ಮಾಡಬೇಕೆಂದರು. ಆ ಮಗುವನ್ನು ತರಿಸಿ, ಅದನ್ನು ಒಪರೇಶನ್ ಮೇಜಿನ ಮೇಲೆ ಮಲಗಿಸಿ, ಕೈ ತೊಳೆಯುವಾಗ, ಅಯ್ಯರರು ಶ್ರೀಕರನಿಗೆ, "ಈ ಕೇಸಿಗೆ ನೀನೇ ನನಗೆ ಸಹಾಯಮಾಡು. ಆಗ ಚೆನ್ನಾಗಿ ನೋಡುವಿಯಂತೆ ಈ ಒಪರೇಶನ್ ಬಹಳ ಸಣ್ಣದು, ಆದರೆ ಇದರ ಮಹತ್ವ ಹೆಚ್ಚು. ಮಗುವಿನ ಪ್ರಾಣವುಳಿಸಲು ಇದು ಅತ್ಯಗತ್ಯ. ಆದುದರಿಂದ ಪ್ರತಿ ಡಾಕ್ಟರರೂ ಇದನ್ನು ಮಾಡಬಲ್ಲವರಾಗಿರಬೇಕು. ಅದ ಕ್ಕಾಗಿ ನೀನೆ ನನ್ನ ಸಹಾಯಕ್ಕೆ ಬಾ," ಎಂದರು. ಯಾವ ಒಪರೇಶನ್ ಮಾಡುವಾಗಲೂ, ಮುಖ್ಯ ಕೆಲಸಮಾಡುವವ ರಿಗೆ ಒಬ್ಬ ಅಥವಾ ಹೆಚ್ಚಿನ ಸಹಾಯಕರು ಇರುವುದುಂಟು. ಸಹಾಯಕರು ಒಪರೇಶನಿನಲ್ಲಿ ಚಿಲ್ಲರೆ ಕೆಲಸಗಳನ್ನು ಮಾಡು ವುದಾದರೂ ಅವುಗಳನ್ನು ದಕ್ಷತೆಯಿಂದಲೇ ಮಾಡಬೇಕು. ಅಯ್ಯರರಿಗೆ ಒಪರೇಶನ್ ಮಾಡಲು ಸಹಾಯಕ್ಕೆ ಹೋಗು ವುದೆಂದರೆ ಶ್ರೀಕರನಿಗೆ ಸ್ವಲ್ಪ ಹೆದರಿಕೆಯಾಯಿತು. ಯಾಕೆಂ ದರೆ ಅವನು ಅಷ್ಟರ ತನಕ ಆ ಕೆಲಸ ಮಾಡಿರಲಿಲ್ಲ. ಹೆಚ್ಚಾಗಿ ವಿದ್ಯಾರ್ಥಿಗಳು ಒಪರೇಶನುಗಳನ್ನು ನೋಡು ವುದು ಮಾತ್ರ. ಅವರು ಕೊನೆಯ ಪರೀಕ್ಷೆ ಮುಗಿಸಿ ಹೌಸ್ ಸರ್ಜನ್ ಆಗಿ ಬಂದಾಗ ಮಾತ್ರ ಅವರು ಒಪರೇ ಶನ್ ಕೆಲಸಗಳಿಗೆ ಹೋಗುವುದು. ಆದರೂ ಶ್ರೀಕರನು ಅಯ್ಯರರು ಕರೆದಾಗ ಧೈರ್ಯಗೊಂಡು ಮುಂದರಿದ. ಈ ವರೆಗೆ ಒಪರೇಶನಿಗೆ ಹೋಗದ ಅವನಿಗೆ ಯಾವುದು ಹೇಗೆ ಮಾಡಬೇಕೆಂಬುದೇ ಗೊತ್ತಿಲ್ಲ. ಥಿಯೇಟರ್ ಸಿಸ್ಟರಿಗೆ

ಶರಣುಹೋದ. ಅವಳು, "ಹೆದರಬೇಡಿ, ಎಲ್ಲ ನಾನು ಹೇಳಿಕೊಡುವೆನು" ಎಂದು ಹೇಳಿದಳು. ಅವನು ಒಳಗೆ ಬರುವಾಗ ಧರಿಸಿದ ಮುಖಪರದೆ, ಟೋಪಿ ಮತ್ತು ಮೇಲ್ಕೋಟು ತೆಗೆದು, ಹೊರಗೆ ಕೋಣೆಯಲ್ಲಿ ತನ್ನ ಕೋಟನ್ನೂ ಕಳಚಿ ಇಟ್ಟು ಬಂದ. ಶರ್ಟಿನ ಕೈಗಳನ್ನು ಆದಷ್ಟು ಮೇಲಕ್ಕೆ ಸುರುಳಿಮಾಡಿ, ಮೊಣಕೈ ತನಕ ಸಾಬೂನು ಹಾಕಿ ಬ್ರಶ್ಶಿನಿಂದ ಚೆನ್ನಾಗಿ ತಿಕ್ಕಿ, ತಿಕ್ಕಿ ತೊಳೆದ. ಮತ್ತೆ ಲೋಶನಿನಲ್ಲಿ ಕೆಲ ನಿಮಿಷ ಕೈಗಳನ್ನು ಮೊಣ ಕೈ ತನಕ ಅದ್ದಿ ಹಿಡಿದುದಾಯಿತು. ಆ ಮೇಲೆ ಸ್ಟರಲೈಸ್ ಮಾಡಿದ ಟೋಪಿ, ಕೋಟು, ಮುಖವಸ್ತ್ರ ಧರಿಸಿದ. ಕೈಗಳಿಗೆ ಸ್ಟರಲೈಸ್ ಮಾಡಿದ ರಬ್ಬರಿನ ಗ್ಲವ್ಸ್ ಧರಿಸಿ, ಒಪರೇಶನಿಗೆ ಅನುವಾದ. ಅಯ್ಯರರೂ ಆದಾಗಲೇ ಸಜ್ಜಾಗಿದ್ದರು. ರೋಗಿಯನ್ನು ಮಂಚದ ಮೇಲೆ ಮಲಗಿಸಿದುದಾಯಿತು. ಶ್ವಾಸಕ್ರಿಯೆಯು ಕಷ್ಟವಾದುದರಿಂದ ಮಗುವಿನ ವರ್ಣವು ನೀಲವಾಗಲಾರಂಭಿಸಿತ್ತು.

ಹತ್ತೇ ನಿಮಿಷಗಳಲ್ಲಿ ಒಪರೇಶನ್ ಮುಗಿಯಿತು. ಶ್ರೀಧರನಿಗೆ ಅದರಲ್ಲಿ ತಾನೂ ಸಹಕರಿಸುವೆನೆಂಬುದೇ ಒಂದು ಹೆಮ್ಮೆ. ಮಗುವು ಬದುಕಿ ಉಳಿದರೆ ಅದರ ಪ್ರಾಣವನ್ನು ರಕ್ಷಿಸುವ ಕಾರ್ಯದಲ್ಲಿ ತನ್ನದೂ ಸಹಾಯವಿದೆಯೆಂಬ ಆಲೋಚನೆಯೇ ಅವನಿಗೆ ಬಹಳ ತೃಪ್ತಿಯನ್ನು ಕೊಟ್ಟಿತ್ತು. ಈ 'ಟ್ರೆಕಿಯೊಟೊಮಿ' ಒಪರೇಶನ್ ಮುಗಿಸಿ, ಟ್ಯೂಬಿನಿಂದ ಒಕ್ಸಿಜನ್ ಕೊಡಿಸುತ್ತ ಮಗುವನ್ನು ಹೊರಗೆ ಕಳುಹಿಸಿದರು. ಒಪರೇಶನಿಗಾಗಿ ಉಟ್ಟ ಹೊರವಸ್ತ್ರಗಳನ್ನೆಲ್ಲ ಕಳಚುತ್ತ ಶ್ರೀಕರನೂ ಮಗುವಿನೊಟ್ಟಿಗೆ ಹೊರಗೆ ಬಂದನು. ಅಲ್ಲಿ ಮಗುವಿನ ತಾಯಿಯು ನಿರೀಕ್ಷಿಸುತ್ತ ನಿಂತಿದ್ದಳು. ಮಗುವು ಟ್ಯೂಬಿನಿಂದ ಶ್ವಾಸಕ್ರಿಯೆ ಮಾಡುವಾಗ ಒಂದು ತರದ ಶಬ್ದವು ಹೊರಡುತ್ತಿತ್ತು. ಮಗುವು ಸ್ವಸ್ಥವಾಗಿ ಮಲಗಿತ್ತು. ಇದನ್ನು ನೋಡಿ ತಾಯಿ ಹೆದರಿದ್ದಳು. ಶ್ರೀಕರನನ್ನು ನೋಡಿ ಅವಳು, "ಆಯ್ಯಾ, ಮಗುವು ಬದುಕುವುದೆ?" ಎಂದು ಅಂಗಲಾಚಿದಳು. ಸರಿಯಾಗಿ ತಿಳಿಯಲು ಇನ್ನೂ ೨೪ ತಾಸುಗಳು ಹೋಗಬೇಕಾದರೂ, "ಹೌದಮ್ಮ, ಹೆದರಬೇಡಿ. ಒಪರೇಶನ್ ಸರಿಯಾಗಿ ನಡೆಯಿತು. ಇಂಜೆಕ್ಷನ್ ಹೇಗೂ ಮೊದಲೇ ಕೊಟ್ಟಿದೆ. ಇನ್ನು ಖಂಡಿತ ಮಗುವಿಗೆ ಬೇಗನೆ ಗುಣವಾಗುವುದು," ಎಂದು ಹೇಳಿ ತಾಯಿಗೆ ಧೈರ್ಯ ಕೊಟ್ಟು ಶ್ರೀಕರ ಅವಳ ಹೃತ್ಪೂರ್ವಕ ಧನ್ಯವಾದಗಳನ್ನು ಗಳಿಸಿದನು.

ಅಯ್ಯರರು ಥಿಯೇಟರಿನ ಹತ್ತಿರದ ತಮ್ಮ ಚಿಕ್ಕ ಕೋಣೆಗೆ ಹೋದರು. ಒಂದು ಗ್ಲಾಸು ಲೆಮನ್‌ಜ್ಯೂಸ್ ಕುಡಿಯುವುದು ಅವರ ಪದ್ಧತಿ. ಇನ್ನೊಂದು ಕೋಣೆಯಲ್ಲಿ ಇತರ ಐದಾರು ಡಾಕ್ಟರರು ಸೇರುವರು. ಅವರು ಇಂದು ಶ್ರೀಕರನನ್ನು ಕರೆದರು. ಇವನಿಗೂ ಒಂದು ಗ್ಲಾಸ್ ಪಾನೀಯ ದೊರಕಿತು. ಅಷ್ಟರೊಳಗೆ ನಾಲ್ಕನೆಯ ಕೇಸ್ ತಯಾರಾಯಿತು.

ಮುಖ ತೊಳೆದು, ಅನಂತರ ನಾಲಿಗೆಯನ್ನು ಸ್ವಚ್ಛ ಮಾಡಲು ಟೂತ್ ಬ್ರಶ್ ಉಪಯೋಗಿಸುವಾಗ, ಮಾಡಿನ ಕಡೆಗೆ ಏನೋ ಶಬ್ದವಾಗಿ, ಬ್ರಶ್ ಉಪಯೋಗಿಸುತ್ತಲೇ ಮೇಲೆ ನೋಡುವಾಗ ಓಕರಿಕೆ ಬಂದು, ಆಕಸ್ಮಿಕವಾಗಿ ಬ್ರಶ್ ತೊಂಡೆಯೊಳಗೆ ಜಾರಿ, ಹೊಟ್ಟೆ ಸೇರಿದ ಆಸಾಮಿಯೊಬ್ಬ ಬಂದಿದ್ದ. ಮೂರು ದಿನಗಳ ಹಿಂದೆ ನಡೆದ ಕತೆಯಿದು. ಹೊಟ್ಟೆನೋವು ತಡೆಯಲಾರದೆ ಈಗ ಬಂದಿದ್ದ. ಎಕ್ಸ್‌ರೇ ಪಠ ತೆಗೆದು ಬ್ರಶ್ ಜಠರದಲ್ಲಿ ಅಡ್ಡ ಮಲಗಿದ್ದುದನ್ನು ಕಂಡು ಹಿಡಿದಿದ್ದರು. ಒಪರೇಶನ್ ಮಾಡಿಯೇ ಇದನ್ನು ತೆಗೆಯಬೇಕಿತ್ತು. ಅದಕ್ಕೆ ಪೇಶಂಟನ್ನು ಒಪ್ಪಿದನು. ೪೫ ನಿಮಿಷಗಳಲ್ಲಿ ಆ ಒಪರೇಶನ್ ಕೆಲಸವೂ ಮುಗಿದು, ತೊಂದರೆ ಕೊಡುವ ಬ್ರಶ್ ತೆಗೆದುದಾಯಿತು. ಇನ್ನು ಕೇಸುಗಳಿಲ್ಲವೆಂದು ಸಿಸ್ಟರ್ ತಿಳಿಸಲು ಅಯ್ಯರರು ಹೋಗಲನುವಾದರು.

ಆಗಲೇ ಕೆಜುವೆಲಿಟಿ ಡಿಪಾರ್ಟ್‌ಮೆಂಟಿನ ಆಳೊಬ್ಬನು ಓಡಿ ಬಂದು ಅಯ್ಯರರ ಅಸಿಸ್ಟಾಂಟರ ಕೈಯಲ್ಲಿ ಒಂದು ಚೀಟು ಕೊಟ್ಟ. ಅವರು ಅದನ್ನು ಓದಿನೋಡಿ ಅಯ್ಯರರಿಗೆ ತೋರಿಸಿದರು. ಅವರು ಅದನ್ನು ಓದಿ "ಸರಿ, ಕೆಜುವೆಲಿಟಿ ಡಿಪಾರ್ಟ್‌ಮೆಂಟಿಗೆ ಹೋಗುವ" ಎಂದರು. ಅಯ್ಯರರೂ, ಅವರ ಹಿಂದೆ ಅವರ ಅಸಿಸ್ಟಾಂಟರೂ ಮತ್ತು ಇನ್ನೂ ನಾಲ್ಕೈದು ಡಾಕ್ಟರರೂ ಸೇರಿ ಕೆಜುವೆಲಿಟಿ ಡಿಪಾರ್ಟ್‌ಮೆಂಟಿಗೆ ನಡೆದರು. ಶ್ರೀಕರನೂ ಅವರೊಡನೆ ಹೋದ. ಆತ್ಮಹತ್ಯ ಮಾಡಿಕೊಳ್ಳಲು ನೇಣುಹಾಕಿ ಪ್ರಯತ್ನಿಸಿ, ಸಫಲವಾಗದೆ ಇದ್ದ ಒಬ್ಬನನ್ನು ಅಲ್ಲಿ ಮಲಗಿಸಿದ್ದರು. ಅವನು ಇನ್ನೂ ಜೀವಂತವಿದ್ದರೂ ಅವನ ಶ್ವಾಸಕ್ರಿಯೆಯು ಬಹಳ ಕಷ್ಟತರವಿತ್ತು. ತಂದೆಯೊಡನೆ ಜಗಳವಾಡಿ, ಬಂದ ಕೋಪಕ್ಕೆ ನೇಣುಹಾಕಿಕೊಂಡವನು ತರುಣನಾಗಿದ್ದನು. ತಂದೆಯೂ ತಲೆಗೆ ಕೈ ಕೊಟ್ಟು ಒಂದೆಡೆ ಕೂತಿದ್ದ, ಇನ್ನೊಂದೆಡೆ ಇಬ್ಬರು ಪೋಲೀಸಿನವರು ನಿಂತಿದ್ದರು.

ರೋಗಿಯನ್ನು ಪರೀಕ್ಷಿಸಿ ಅಯ್ಯರರೆಂದರು: "ನೇಣು ಹಾಕಿಕೊಂಡುದು ಸರಿಯಾಗದಿದ್ದುದರಿಂದ, ಪ್ರಾಣವು ಕೂಡಲೆ ಹೋಗಲಿಲ್ಲ. ಆಗಲೇ ಅವನನ್ನು ರಕ್ಷಿಸಿದರು. ನೇಣು ಹಾಕಿಕೊಂಡಲ್ಲಿ ಕುತ್ತಿಗೆಗೆ ಎದುರುಗಡೆ ಸ್ವಲ್ಪ ಜಖಮಾಗಿ ಶ್ವಾಸವು ಒಳಗೆ ಹೋಗುವುದು ಕಷ್ಟವಾಗಿದೆ. ಆದುದರಿಂದ ಈ ಕೇಸಿಗೆ ಈಗಲೇ ಟ್ರೆಕಿಯೊಟೊಮಿ ಮಾಡಿದರೆ, ಇವನು ಒಂದೆರಡು ದಿನಗಳಲ್ಲೇ ಗುಣಮುಖವಾಗುವನು"

ಅಯ್ಯರರು ತಿರಿಗಿ ಥಿಯೇಟರಿಗೆ ಹೋಗಿ, ಒಪರೇಶನಿಗೆ ಸಜ್ಜಾದರು. ಶ್ರೀಕರನನ್ನು ಕರೆದು, "ನೀನು ಈ ದಿನವೇ

ಆ ಮಗುವಿನ ಟ್ರೆಕಿಯೊಟೊಮಿನಲ್ಲಿ ನನಗೆ ಸಹಕರಿಸಿ ಅದರ ವಿಷಯ ತಿಳಿದಿರುವೆಯಲ್ಲ. ಇದನ್ನು ನೀನೇ ಮಾಡು. ದೊಡ್ಡವರಲ್ಲಿ ಮಾಡುವುದು ಇನ್ನೂ ಸುಲಭ. ನಾನೇ ಸಹ ಕರಿಸುವೆ" ಎಂದರು. ಶ್ರೀಕರನಿಗೆ ಹೆಮ್ಮೆಯೊಟ್ಟಿಗೆ ಹೆದರಿ ಕೆಯೂ ಆಯಿತು. ಆದರೂ ಧೈರ್ಯತಾಳಿ ಸಜ್ಜಾದನು. ಅಯ್ಯರರೂ ಬಂದರು. ಒಪರೇಶನ್ ಪ್ರಾರಂಭವಾಯಿತು. ಅಯ್ಯರರು ಚೂರಿಯನ್ನು ಶ್ರೀಕರನ ಕೈಗೆ ಕೊಟ್ಟು ಎಲ್ಲಿ ಗಾಯ ಹಾಕಬೇಕೆಂದು ತಿಳಿಸಿದರು. ಶ್ರೀಕರನು ಅವರು ಹೇಳಿದಂತೆ ಮಾಡಿದನು. ಸಮಯವೇನೋ ಹೆಚ್ಚು ಹೋ ಯಿತು. ಆದರೆ ಶ್ರೀಕರನೇ ಟ್ಯೂಬ್ ಇಟ್ಟನು. ಇದೆಲ್ಲ ಮುಗಿದಾಗ ಶ್ರೀಕರನ ಹೆಮ್ಮೆ ಹೇಳತೀರದು. ಆದರೆ ಕೇಸ್ ಶೀಟಿನಲ್ಲಿ ಓಪರೇಶನ್ ಅಯ್ಯರರಿಂದಲೇ ನಡೆದುದೆಂದು ಬರೆ ಯಲು ಅವರು ಹೇಳಿದರು. ಪೋಲೀಸ್ ಕೇಸ್ ಆದುದರಿಂದ ಸಾಕ್ಷಿಹೇಳುವುದಿದ್ದರೆ ಶ್ರೀಕರನಿಗೆ ತೊಂದರೆಯಾಗಬಾರದೆಂ ಬುದೇ ಇದರ ಉದ್ದಿಶ್ಯ. "ಇನ್ನೂ ಮೂರು ದಿನಗಳಲ್ಲಿ ತೊಂ ಡೆಯ ಸುತ್ತಲಿನ ಉಬ್ಬರವು ಕಡಿಮೆಯಾಗಿ ಶ್ವಾಸಕ್ರಿಯೆಯು ಸುಲಭವಾಗುವುದು. ಆಗ ಟ್ಯೂಬ್ ತೆಗೆಯಬಹುದು" ಎಂದು ಅಯ್ಯರರು ಹೇಳಿದರು.

ಗಂಟೆ ಆಗಲೇ ಎರಡಾಗಿತ್ತು. ಅಯ್ಯರರು ಮನೆಗೆ ಹೊರಟರು. ಹೋಗುವಾಗ ಶ್ರೀಕರನನ್ನು ಕರೆದು ಅಂದು ಅವನು ಆಸ್ಪತ್ರೆಗೆ ಬಂದುದರಿಂದ ಅವನಿಗೆ ಹೀಗೆ ಅನುಭ ವವು ಸಿಕ್ಕಿತೆಂದು ಹೇಳಿ, ಈ ಜಡಿಮಳೆಯಲ್ಲಿಯೂ ಅವನು ಆಸ್ಪತ್ರೆಗೆ ಬರಲು ಮನಸ್ಸುಮಾಡಿದುದಕ್ಕಾಗಿ ಅವನನ್ನು ಹೊಗಳಿದರು. ನಿಜವಾದ ಕಾರಣವನ್ನು ಶ್ರೀಕರನು ತನ್ನಲ್ಲೆ ಇಟ್ಟುಕೊಂಡನು! ಇನ್ನೂ ಮಳೆಯು ಒಂದೇ ಸಮನೆ ಬರು ತ್ತಿದ್ದುದರಿಂದ ಶ್ರೀಕರನನ್ನು ಅವನ ಲೋಜಿಗೆ ತನ್ನ ಕಾರಿ ನಲ್ಲೇ ತಲಪಿಸುವೆನೆಂದು ಅಯ್ಯರರು ಹೇಳಿದರು. ಕಾರಿ ನಲ್ಲಿ ಕೂತುಕೊಳ್ಳಹೋದಾಗ ಶ್ರೀಕರನು ಮುಂದೆ ಡ್ರೈವರನ ಹತ್ತಿರದ ಸೀಟಿನ ಬಾಗಿಲು ತೆರೆಯಲು, ಅಯ್ಯ ರರು ಬಿಡದೆ ಅವನನ್ನು ಹಿಂದೆ ತನ್ನ ಹತ್ತಿರವೇ ಕುಳ್ಳಿರಿಸಿ ದರು. ಇದನ್ನೆಲ್ಲ ನೋಡಿ ಅಯ್ಯರರನ್ನು ಬೀಳ್ಕೊಡಲು ಬಂದ ಅವರ ಪರಿವಾರದ ಡಾಕ್ಟರರು ಶ್ರೀಕರನಲ್ಲಿ ಅಸೂಯೆ ಪಡದಿರಲಿಲ್ಲ. ಶ್ರೀಕರನಿಗೆ ಬಹಳ ಹೆಮ್ಮೆಯಾದರೂ, ಇದನ್ನು ನೋಡಲು ಅಲ್ಲಿ ಒಬ್ಬ ಸ್ಟೂಡೆಂಟ್ ಕೂಡ ಇಲ್ಲ ವಲ್ಲ ಎಂಬುದೇ ಅವನ ಒಂದು ಕನಿಕರ!

ಹೀಗೆ ವಿದ್ಯೆಯಲ್ಲಿ ತುಂಬ ಶ್ರದ್ಧೆ ವಹಿಸಿದರೆ ಶ್ರೀಕ ರನು ಒಳ್ಳೆಯ ಡಾಕ್ಟರ್ ಆಗುವುದರಲ್ಲಿ ಏನೂ ಸಂಶಯ ವಿಲ್ಲವೆಂದು ಅಯ್ಯರರು ಅವನನ್ನು ಹೊಗಳಿದರು. ಕಾರು ಲೋಜಿಗೆ ತಲಪಿ, ಶ್ರೀಕರನು ಅಯ್ಯರರಿಗೆ ಧನ್ಯವಾದ ಹೇಳಿ, ನಮಸ್ಕರಿಸಿ, ಇಳಿದನು. ಕಾರು ಬಂದು ನಿಂತಾಗ ಯಾರಿದಿರಬಹುದೆಂದು ಇಣಿಕಿ ನೋಡುತ್ತ ನಿಂತ ಲೋಜಿನ ಇತರ ಮೆಡಿಕಲ್ ವಿದ್ಯಾರ್ಥಿಗಳು ಅಯ್ಯರರ ಕಾರಿನಿಂದ ಅವರ ಹತ್ತಿರವೇ ಕುಳಿತಿದ್ದ ಶ್ರೀಕರನು ಇಳಿಯುವುದನ್ನು ನೋಡಿ, ಅಯ್ಯರರಿಗೆ ನಮಸ್ಕಾರ ಹೇಳುವುದನ್ನೂ ಮರೆತು ಸ್ತಬ್ಧರಾದುದನ್ನು ಕಂಡು ಶ್ರೀಕರನಿಗೆ ಒಂದು ತರದ ತೃಪ್ತಿ ಯಾಯಿತು!

ಶ್ರೀಕರನು ಹೀಗೆ ಅಯ್ಯರರಿಂದ ಆಕಸ್ಮಿಕ ಪ್ರಶಂಸೆ ಗಳಿಸಿದ್ದರೂ, ಮುಂದೆ ನಿಜವಾದ ಶ್ರದ್ಧೆ ವಹಿಸಿ, ಒಳ್ಳೆಯ ಮಾರ್ಕ್ ಪಡೆದು, ಬಹುಮಾನ ಏನೂ ಸಿಗದಿದ್ದರೂ ಕಷ್ಟ ವಿಲ್ಲದೆ ತೇರ್ಗಡೆ ಹೊಂದಿದನು. ಎಮ್. ಬಿ., ಬಿ. ಎಸ್. ಪಾಸಾದ ಮೇಲೆ ಒಂದು ವರ್ಷ ಆಸ್ಪತ್ರೆಯಲ್ಲಿ ಕೆಲಸಮಾ ಡಲು ಹೌಸ್ ಸರ್ಜನ್ ಆಗಿ ಸೇರಿದಾಗ, ಅಯ್ಯರರ ಶಿಫಾ ರಸು ಪಡೆದು ಅವರ ವಾರ್ಡಿನಲ್ಲಿಯೇ ಕೆಲಸ ಮಾಡಲು ನಿಯಮಿಸಲ್ಪಟ್ಟು, ಆರು ತಿಂಗಳು ಅವರಿಗೆ ತೃಪ್ತಿಯಾಗುವಂತೆ ದುಡಿದನು. ಉಳಿದ ಆರು ತಿಂಗಳು ಆಸ್ಪತ್ರೆಯ ಬೇರೆ ಬೇರೆ ಶಾಖೆಗಳಲ್ಲಿ ಕೆಲಸಮಾಡಿದನು. ವರ್ಷದ ಕೆಲಸ ಮುಗಿದ ಮೇಲೆ ಅಸಿಸ್ಟಾಂಟ್ ಸರ್ಜನರ ಕೆಲಸಕ್ಕೆ ಅರ್ಜಿ ಹಾಕಿ ಕೆಲಸ ಸಿಕ್ಕದಿದ್ದುದರಿಂದ ಮುಂದೂರಿಗೆ ಹೋಗಿ ತನ್ನದೇ "ಡಿಸ್ಪೆನ್ಸರಿ" ತೆರೆದು ಕೂತನು. ಮೂರು ವರ್ಷಗಳು ಕಳೆ ದುವು. ಮದುವೆಯಾಗಿ, ಒಂದು ಮಗುವೂ ಆಯಿತು. ವರದಕ್ಷಿಣೆಯಾಗಿ ಪಡೆದ ಸ್ವಲ್ಪ ಹಣವು ಆದಾಗಲೇ ಬರಿದಾ ಗಿತ್ತು. ಇತ್ತ ವೃತ್ತಿಯಲ್ಲಿ ಆದಾಯವು ಅತ್ಯಲ್ಪವಾದುದ ರಿಂದ, ಇನ್ನು ಊರು ಬಿಡುವುದೇ ಒಳ್ಳೆಯದೆಂದು ಶ್ರೀಕರ ಸಂಕಲ್ಪಮಾಡಿದನು.

ಸೋದರ ಮಾವನ ಕಾಗದ ಬಂದ ಮೇಲೆ ೧೫ ತಾರೀ ಕಿಗೇ ಶ್ರೀಕರ ಮದ್ರಾಸಿಗೆ ಹೊರಟ. ಮಾರನೆಯ ದಿನ ಅಲ್ಲಿ ತಲಪಿದ. ತನ್ನ ಸೋದರ ಮಾವನಲ್ಲಿ ಹೋಗಿ ಸ್ನಾನ, ಊಟ ಮುಗಿಸಿ ಹತ್ತು ಗಂಟೆಗೆ ಹೊರಟು, ಹನ್ನೊಂದಕ್ಕೆ ಸರಿಯಾಗಿ ಸರ್ಜನ್ ಜನರಲರ ಆಫೀಸು ತಲಪಿದ. ತನ್ನ ಹೆಸರಿನ ಚೀಟನ್ನು ಶಿವಸ್ವಾಮಿ ಅಯ್ಯರರಿಗೆ ಕಳುಹಿಸಿ, ಕಾದು ಕುಳಿತ. ಮರುಕ್ಷಣದಲ್ಲೆ ಜವಾನನು ಓಡಿ ಬಂದು, "ಸರ್, ಇತ್ತ ಬನ್ನಿ! ಪಿ. ಎ. (ಪರ್ಸನಲ್ ಅಸಿಸ್ಟಾಂಟ್) ನಿಮ್ಮನ್ನು ಈಗಲೇ ನೋಡುವರಂತೆ" ಎಂದನು. ಅವನನ್ನು ಹಿಂಬಾಲಿಸಿ ಶ್ರೀಕರ ಅಯ್ಯರರ ಕೋಣೆಗೆ ತಲಪಿದ. ಶ್ರೀಕರ ಅಯ್ಯರರ ಕೋಣೆಗೆ ತಲಪಿದ. ಶ್ರೀಕರನನ್ನು ನೋಡಿ ಅಯ್ಯ ರರು ಸಂತಸಗೊಂಡು, "ಏನು ಶ್ರೀಕರ, ಹೇಗಿದ್ದೀ? ಮುಂದೂರಿ ನಲ್ಲೇ ಇದ್ದೀಯಲ್ಲ? ಸೌಖ್ಯವೇ? ಮದುವೆಯಾಗಿದೆಯಲ್ಲ, ಎಷ್ಟು ಮಕ್ಕಳು ನಿನಗೆ?" ಎಂದು ಮುಂತಾಗಿ ಕೇಳಿದರು. ಶ್ರೀಕರನು ಎಲ್ಲ ಪ್ರಶ್ನೆಗಳಿಗೆ ಸವಿಸ್ತಾರವಾಗಿ ಉತ್ತರ ಹೇಳಿ, ತನ್ನ ಕಷ್ಟಗಳನ್ನು ತಿಳಿಸಿದ. ರಾಣೀಪುರದಲ್ಲಿ ಹೊಸ

ಆಸ್ಪತ್ರೆಗೆ ಕೆಲವು ಡಾಕ್ಟರರನ್ನು ನಿಯಮಿಸುವಾಗ ತನಗೂ ಒಂದು ಕೆಲಸ ಸಿಕ್ಕಿದರೆ ಉಪಕಾರವಾದೀತೆಂದು ಹೇಳಿದ.

ಅಯ್ಯರರು ತನ್ನ ಸಹಾನುಭೂತಿಯನ್ನು ಸೂಚಿಸಿದರು. ''ನಿನ್ನಷ್ಟು ಕಷ್ಟಪಟ್ಟು ಕೆಲಸ ಮಾಡುವ ಡಾಕ್ಟರರಿಗಲ್ಲದೆ ಬೇರೆ ಯಾರಿಗೆ ಕೆಲಸ ಸಿಕ್ಕೀತು? ಮುಂಚಿನ ಸಲವೇ ನಿನ್ನನ್ನು ಸಿಲೆಕ್ಟ್ ಮಾಡಬೇಕಿತ್ತು. ಇರಲಿ, ಹೆದರ ಬೇಡ. ಈ ಸಲ ನೀನು ಕೆಲಸಕ್ಕೆ ಅರ್ಜಿ ಹಾಕು; ನಿನಗೆ ಸಿಗುವಂತೆ ಸಹಾಯ ಮಾಡುವೆನು,'' ಎಂದು ಭರವಸೆ ಹೇಳಿ ಕಳಿಸಿದರು.

ಶ್ರೀಕರ ಅಯ್ಯರರನ್ನು ವಂದಿಸಿ, ಅವರ ಆಫೀಸಿನಿಂದ ಹೊರಬಿದ್ದ. ಎದುರಿಗೇ ಇದ್ದ ಬಸ್ 'ಸ್ಟೊಪಿ'ನ ಹತ್ತಿರ ನಿಂತ. ಎರಡು ಬಸ್ ತಪ್ಪಿ, ಮೂರನೆಯದರಲ್ಲಿ ಜಾಗ ಸಿಕ್ಕಿತು. ಆದರೇನು, ಅದು ಒಂದು ಮೈಲು ದೂರ ಹೋಗುವಷ್ಟರಲ್ಲಿ ಹಾಳಾಗಿ ನಿಂತಿತು. ಕಂಡಕ್ಟರ್, ಡ್ರೈವರರು ಹಲವು ತರದ ಪ್ರಯತ್ನ ಮಾಡಿದರೂ ಅಲ್ಲಿಂದ ಮುಂದರಿಯಲು ಕೇಳಲಿಲ್ಲ. ಶ್ರೀಕರ ಇಪ್ಪತ್ತು ನಿಮಿಷ ಕಾದನು; ಮತ್ತೆ ನಿರಾಶೆಗೊಂಡು ಬಸ್ಸಿನಿಂದ ಇಳಿದನು. ಅಲ್ಲಿಂದ ನಡೆದು ಒಂದು ಫರ್ಲಾಂಗಿನಷ್ಟು ದೂರ ಹೋಗಿ, ಬಸ್‌ಸ್ಟೊಪಿನ ''ಬಸ್ ಇಲ್ಲಿ ನಿಲ್ಲುತ್ತದೆ'' ಎಂದು ಬೋರ್ಡು ಹಚ್ಚಿಸಿದ ಕಂಭಕ್ಕೆ ಒರಗಿ ನಿಂತ. ಮೂರು ಬಸ್ಸುಗಳು ಓಡಿದುವು; ಒಳಗೆ ನಿಲ್ಲಲೂ ಜಾಗವಿಲ್ಲದುದರಿಂದ ಅವು ನಿಲ್ಲಲೇ ಇಲ್ಲ. ಅಷ್ಟರೊಳಗೆ ಮುಕ್ಕಾಲು ಗಂಟೆ ಕಳೆಯಿತು. ''ಇನ್ನು ನಡಕೊಂಡೇ ಹೋಗಲೇ? ಇದ್ದ ಮೂರು ಸಿಗರೇಟೂ ಸೇದಿ ಬೂದಿಯಾದವು'' ಎಂದು ಯೋಚಿಸುತ್ತಿದ್ದಂತೆಯೇ, ಒಂದು ಥಳಕಿನ ದೊಡ್ಡ ಹೊಸ ಕಾರ್ ಅವನೆದುರಿಗೇ ಬಂದು ನಿಂತಿತು. ಒಳಗೆ ಹಿಂದಿನ ಸೀಟಿನಲ್ಲಿ ಒರಗಿ ಕುಳಿತ ಒಬ್ಬನು, ''ಹಲೋ, ಶ್ರೀಕರ, ಎತ್ತ ಹೊರಟೆ?'' ಎಂದನು.

ಶ್ರೀಕರನಿಗೆ ನಿಂತ ಕಾರ್ ಕಂಡು ಕುತೂಹಲವಾಗಿತ್ತು. ಒಳಗಿರುವ ಕುಪ್ಪುಸಾಮಿಯನ್ನು ಕಂಡು ಅತ್ಯಾಶ್ಚರ್ಯವಾಯಿತು. ''ಹಲೋ, ಕುಪ್ಪುಸಾಮಿಯೇ? ನಾನು ಪೆರೀಸ್ ಕೊರ್ನರಿಗೆ ಹೋಗಬೇಕೆಂದಿದ್ದೇನೆ" ಎಂದ. ''ಬಾ, ಕಾರಿನಲ್ಲಿ" ಎಂದ ಕುಪ್ಪುಸಾಮಿ. ಶ್ರೀಕರ ಕಾರ್ ಹತ್ತಿದ. ಕುಪ್ಪುಸಾಮಿ ಡ್ರೈವರನಿಗೆ ಪೆರಿಸ್ ಕೊರ್ನ್‌ರಿಗೆ ಕಾರ್ ಕೊಂಡುಹೋಗಲು ಹೇಳಿದ. ಕಾರ್ ಓಡಿತು. ಕುಪ್ಪುಸಾಮಿ ಶ್ರೀಕರನೊಡನೆ ಮಾತು ಆರಂಭಿಸಿದ. ''ಎಲ್ಲಿರುವುದೀಗ?" ಶ್ರೀಕರ ಮಂದೂರೆಂದು ತಿಳಿಸಿ, ''ಕಾರ್ ಯಾರ ದಯ್ಯಾ? ಎಂದು ಕೇಳಿದ. ''ಸ್ವಂತ! ಶೋಕಾಗಿಲ್ಲವೆ? ಬ್ಯೂಕ್ ಕಾರ್" ಎಂದ ಕುಪ್ಪು ಸಾಮಿ. ಹಲ್ಲು ಕಿರಿಯುತ್ತ ಶ್ರೀಕರ ಅಳು ಮೊರೆ ಮಾಡುವ ಸಂದರ್ಭವಾದರೂ ಹುಸಿನಗೆ ನಗುತ್ತ, ''ಚೆನ್ನಾಗಿದೆ'" ಎಂದು ಒಪ್ಪಿದ.

ಕುಪ್ಪುಸಾಮಿಯೆಂದರೆ ಎಲ್ಲರ ನಗೆಗೀಡಾದ ಒಬ್ಬ ಆಸಾಮಿಯಾಗಿದ್ದ, ಕೊಲೇಜಿನಲ್ಲಿ ಕಲಿಯುವಾಗ. ಅವನಿಗೆ ಪಾಠದಲ್ಲಿ ಆಸಕ್ತಿಯಿದ್ದಿಲ್ಲ. ಬದಲು ಹೆಣ್ಣು ಜಾತಿಯಲ್ಲಿ ಬಹಳ. ಯಾವ ಹೆಂಗಸಾದರೂ ಅವನು ಮನಸೋಲುತ್ತಿದ್ದ. ಹುಡುಗಿಯರನ್ನು ಹಿಂಬಾಲಿಸಿ, ಹೇಗಾದರೂ ಅವರನ್ನು ಮಾತನಾಡಿಸಿ, ಅವರ ಪ್ರೇಮಕ್ಕೆ ಪಾತ್ರನಾಗಬೇಕೆಂಬುದೇ ಕುಪ್ಪುಸಾಮಿಯ ಜೀವನದ ಧ್ಯೇಯವಾಗಿತ್ತೆಂದರೆ, ಹೆಚ್ಚಾಗದು. ಅಂತೂ ಹಲವೊಮ್ಮೆ ಕಷ್ಟದಲ್ಲಿ ಬಿದ್ದಿದ್ದ. ಹೇಗೂ ಹತ್ತು ವರ್ಷಗಳ ತರುವಾಯ ಕೊಲೇಜಿನಿಂದ ಹೊರಬಿದ್ದ. ಕೊನೆಯ ಒಂದು ವರ್ಷ ಅವನು ಶ್ರೀಕರನಿಗೆ ಗಂಟುಬಿದ್ದ. ಕಾರಣ ಇಷ್ಟೇ: ಆ ವರ್ಷ ತೇರ್ಗಡೆಯಾಗದಿದ್ದರೆ ಇನ್ನು ಹಣವನ್ನು ಕೊಡಲಾಗುವುದಿಲ್ಲವೆಂದು ಅವನ ಚಿಕ್ಕಪ್ಪ ಹೆದರಿಸಿದ್ದ. ಆದುದರಿಂದ ಕುಪ್ಪುಸಾಮಿ ಪಾಸಾಗುವ ಮನಸ್ಸು ಮಾಡಿ, ತನಗೆ ಪಾಠ ಹೇಳಿಸಲು ಶ್ರೀಕರನಿಗೆ ಶರಣು ಬಂದ. ಅಂತೂ ಪಾಸೂ ಆದ, ಬಹಳ ಕಷ್ಟದಿಂದ. ಅಯ್ಯರರೂ ಒಮ್ಮೆ ಹೇಳಿದ್ದರು, "ಕುಪ್ಪುಸಾಮಿಗೆ ಸರ್ಜರಿಯಲ್ಲಿ ಐದು ಮಾರ್ಕು ಕಮ್ಮಿಯಿತ್ತು. ನಾನಾಗಿ ಹೆಚ್ಚಿಸಿದೆ, ಇರಲಿ, ನಿನ್ನ ಸಂಗಡಿಗನಲ್ಲವೇ ಎಂದು" ಇಂತಹ ಕುಪ್ಪುಸಾಮಿಯೇ ಈ ಥಳಕಿನ ಹೊಸ ಕಾರ್‌ನಲ್ಲಿ ತಿರುಗುವುದೆಂದರೆ! ಅದೂ ಪಾಸಾದ ಮೂರು ವರ್ಷದಲ್ಲಿ! ಶ್ರೀಕರ ಇಷ್ಟು ಯೋಚಿಸುವಲ್ಲಿ ಕಾರ್ ಪೆರಿಸ್ ಕೊರ್ನರಿಗೆ ಬಂದು ಮುಟ್ಟಿತು. ಇಬ್ಬರೂ ಇಳಿದರು. ಕುಪ್ಪುಸಾಮಿ ಡ್ರೈವರನಿಗೆ ಕಾರ್ ಕೊಂಡು ಹೋಗಲು ಹೇಳಿದ.

''ಒಂದು ಕಪ್ ಕಾಫಿ ಕುಡಿಯುವ, ಶ್ರೀಕರ" ಎಂದ, ಕುಪ್ಪುಸಾಮಿ. ಇಬ್ಬರೂ ಒಂದು ಹೊಟೇಲ್ ಒಳಗೆ ಹೋದರು. ಕಾಫಿಗೆ ಹೇಳಿ ಕೂತು, ಮಾತಿಗೆ ಆರಂಭವಾಯಿತು.

''ಹೇಗಿದ್ದೀ, ಶ್ರೀಕರ, ಸೌಖ್ಯವೇ? ಪ್ರೆಕ್ಟಿಸ್ ಹೇಗೆ?" ಎಂದು ಕೇಳಿದ, ಕುಪ್ಪುಸಾಮಿ. ಕುಪ್ಪುಸಾಮಿಯ ಹೊಸ ಬ್ಯೂಕ್ ಕಾರ್ ಕಂಡು ಮರೆಯದ ಶ್ರೀಕರ, ''ಒಳ್ಳೆಯದಿದೆ ಕಣೊ. ತಿಂಗಳಿಗೆ ಹೆಚ್ಚು ಕಡಿಮೆ ಒಂದು ಸಾವಿರ ರೂಪಾಯಿ ಸಿಗುತ್ತದೆ. ಅಂತೂ ಪರವಾಯಿಲ್ಲ" ಎಂದ.

ಕುಪ್ಪುಸಾಮಿ ಕೇಳಿದ: ''ಯಾವ ಕಾರ್ ಇರುವುದು ನಿನ್ನ ಹತ್ತಿರ?" ಶ್ರೀಕರ ಯೋಚಿಸದೆ, ''ಒಸ್ಟಿನ್ ಟೆನ್'' ಎಂದ. ''ಸಣ್ಣದಾಯಿತಲ್ಲವೇನೊ?'' ಎಂದ ಕುಪ್ಪುಸಾಮಿ. ''ಅದಕ್ಕೇ ಕಣೋ ಕೊಟ್ಟು ಬಿಟ್ಟೆ; ಈಗ ದೊಡ್ಡ ಕಾರ್ ಒಲ್ಡ್ಸ್‌ಮೊಬೈಲ್ ಕೊಂಡುಹೋಗಲು ಬಂದಿದ್ದೇನೆ" ಎಂದು ಉತ್ತರ ಕೊಟ್ಟ ಶ್ರೀಕರ. ಇಷ್ಟು ಸಲೀಸಾಗಿ ಮಾತನಾಡಲು ಶ್ರೀಕರನಿಗೆ ಕಾರಣವಿತ್ತು. ಮಂದೂರಿನ ಹಿರಿಯ ಡಾಕ್ಟರರೊಬ್ಬರು ಅದಾಗಲೇ ಅವರ ಹಳೆಯ ಒಸ್ಟಿನ್‌ಟೆನ್ ಕಾರನ್ನು ಕೊಟ್ಟು ಹೊಸ ಒಲ್ಡ್ಸ್‌ಮೊಬೈಲ್ ಕಾರನ್ನು

ತೆಗೆದುಕೊಂಡಿದ್ದರು. ಅಂತೂ ಕುಪ್ಪುಸಾಮಿ ಶ್ರೀಕರನಿಂದ ತಿಳಿದ ವಿಷಯ ಇಷ್ಟು: ಶ್ರೀಕರನಿಗೆ ಮಂದೂರಿನಲ್ಲಿ ಕೆಲಸದ ಸುರಿಮಳೆ. ಒಂದು ಕಡೆಯಲ್ಲಿ ಡಿಸ್ಪೆನ್ಸರಿ; ಇನ್ನೊಂದು ಕಡೆ ಇಪ್ಪತ್ತು ರೋಗಿಗಳ ನರ್ಸಿಂಗ್ ಹೋಮ್. ಎಲ್ಲ ಮನೆಗಳಲ್ಲಿ ರೋಗಿಗಳನ್ನು ನೋಡಲು ಹೆಚ್ಚಾಗಿ ಶ್ರೀಕರನನ್ನೇ ಕರೆಯುವರು. ದಿವಸದಲ್ಲಿ ಅವನಿಗೆ ಒಂದು ನಿಮಿಷವಾದರೂ ಪುರುಸೊತ್ತಿಲ್ಲ. ಬೆಳಿಗ್ಗೆ ಎಂಟರಿಂದ ರಾತ್ರಿ ಎಂಟರತನಕ ಒಂದೇ ಸಮನೆ ಕೇಸಿಗೆ ಹೋಗುತ್ತ ಇರಬೇಕು. ಹೆಚ್ಚಾಗಿ ರಾತ್ರಿ ಕರೆ ಬರುವುದೂ ಇದೆ. ತಿಂಗಳಿಗೆ ೨೫೦೦ ರೂಪಾಯಿ ಸಿಕ್ಕಿದರೂ ಖರ್ಚು ಕಳೆದು ಎರಡು ಸಾವಿರ ಉಳಿಯುತ್ತಿತ್ತು. ಹಳೆಯ ಕಾರು ಸಾಲದಾಗಿ, ಮಾರಿ, ಈಗ ಹೊಸದನ್ನು ಕೊಂಡುಕೊಳ್ಳಲು ಮದ್ರಾಸಿಗೆ ಬಂದಿದ್ದ.

"ನೀನು ಹೇಗಿದ್ದೀ, ಕುಪ್ಪುಸಾಮಿ? ಮದ್ರಾಸಿನಲ್ಲೇ ಇರುವುದೇ?" ಎಂದು ಕೇಳಿದ ಶ್ರೀಕರ. ಕುಪ್ಪು ಸಾಮಿ ತಿಳಿಸಿದ; ಅವನಿರುವುದು ಆರ್ಪಕಂ ಎಂಬಲ್ಲಿ. ಜನರಿರುವುದು ಕಡಿಮೆ. ಆದರೂ ಕಾಸಿದ್ದವರೇ ಹೆಚ್ಚು; ಕೇಳಿದಷ್ಟು ಕೊಡಲು ಹಿಂಜರಿಯುವವರಲ್ಲ. ಕುಪ್ಪುಸಾಮಿ ಚಿಕಿತ್ಸೆಯಲ್ಲಿ ಅಷ್ಟು ಪ್ರವೀಣನಲ್ಲದಿದ್ದರೂ ತಿಂಗಳಿಗೆ ೭೦೦ ರೂಪಾಯಿಯಷ್ಟು ನಿರಾಯಾಸವಾಗಿ ಸಿಗುತಿತ್ತು.

"ಮತ್ತೆ ಕಾರ್ ಹೇಗೆ ಕೊಂಡುಕೊಂಡೆ?" ಎಂದ, ಶ್ರೀಕರ.

"ಅದು ಮಾವನವರು ಕೊಟ್ಟದ್ದು; ಮದುವೆಯಲ್ಲಿ ಪ್ರೆಸೆಂಟ್. ಶ್ರೀಮಂತ ಮಾವ ಸಿಕ್ಕಿದ; ನನ್ನ ಹೆಂಡತಿ ಅವರ ಒಂದೇ ಮಗು. ಹೊಸದಾಗಿ ಮದುವೆಯಾದೆ; ಒಂದು ತಿಂಗಳೂ ಆಗಿಲ್ಲ. ಹೊಸ ಕಾರ್ ಬಂದುದರಿಂದ ಪ್ರೆಕ್ಟಿಸ್ ನೋಡಲು ಒಬ್ಬ ಡಾಕ್ಟರರಿಗೆ ಹೇಳಿ, ಹೆಂಡತಿಯನ್ನು ಕರಕೊಂಡು ತಿರುಗಾಡಲು ಮದ್ರಾಸಿಗೆ ಬಂದಿದ್ದೇನೆ. ಕಾರಿನಲ್ಲೇ ಬಂದೆವು. ಇಲ್ಲಿಂದ ಅರ್ಪಕಂಗೆ ಬರೀ ಇನ್ನೂರು ಮೈಲಿ ಅಂತರ. ಈ ಸಂಜೆಯೇ ಹೊರಡುವೆವು; ಸಮಯವಿಲ್ಲ. ಸ್ವಲ್ಪ ಶೋಪಿಂಗ್ ಮಾಡಲು ಇರುವುದರಿಂದ ಹೆಂಡತಿಯನ್ನು ತರಲು ಕಾರನ್ನು ಕಳುಹಿಸಿದ್ದೇನೆ.'' ಎಂದು ವಿವರಿಸಿದ, ಕುಪ್ಪುಸಾಮಿ.

ಕಾಫಿ ಕುಡಿದು ಮುಗಿಸಿ ಇಬ್ಬರೂ ಒಬ್ಬರನ್ನೊಬ್ಬರು ಬೀಳ್ಕೊಂಡರು. ಇನ್ನು ಪುನಃ ಭೇಟಿಯಾಗುವುದು ಯಾವ ಯಾವ ಯುಗದಲ್ಲೋ ಎಂದೂ ಹೇಳಿಕೊಂಡರು. ಕುಪ್ಪುಸಾಮಿಯ ಅದೃಷ್ಟವನ್ನೇ ಯೋಚಿಸುತ್ತ ಶ್ರೀಕರ ನಡೆದ. "ಹೊಸ ಕಾರ್ ತಿಂಗಳಿಗೆ ೭೦೦ ರೂಪಾಯಿ ಸಂಪಾದನೆ ಶ್ರೀಮಂತ ಮಾವ. ಇನ್ನೇನು ಬೇಕು? ಅವನ ಅದೃಷ್ಟ. ಇರಲಿ; ನಾನು ಸ್ವಲ್ಪ ಕಟ್ಟುಕತೆಯನ್ನಾದರೂ ಹೇಳಿದೆನೆಲ್ಲಾ! ಇಲ್ಲದಿದ್ದರೆ, ಕೊಲೇಜಿನಲ್ಲಿ ಅವನಿಗಿಂತ ಹತ್ತು ಪಾಲು ಮೇಲಿದ ನನ್ನ ಈಗಿನ ನಿಜಸ್ಥಿತಿಯನ್ನು ತಿಳಿಸಿದರೆ ಅವನಿಗೆ ಅಸಹ್ಯವಾಗಲಿಕ್ಕಿಲ್ಲವೇ?'' ಎಂದೆಲ್ಲ ಯೋಚಿಸಿ, ಶ್ರೀಕರ ಚಿಕ್ಕಪ್ಪನ ಮನೆ ಸೇರಿದ.

ಅಸಿಸ್ಟೆಂಟ್ ಸರ್ಜನರ ಚುನಾವಣೆ ನಡೆಯಿತು. ಅಯ್ಯರರ ಸಹಾಯದಿಂದ ಶ್ರೀಕರನಿಗೆ ಕೆಲಸವೂ ಸಿಕ್ಕಿತು. ಅವನ ಆಸೆಯಂತೆ ಅವನನ್ನು ರಾಣೀಪುರದ ಹೊಸ ಆಸ್ಪತ್ರೆಗೆ ನೇಮಿಸಿದ್ದರು. ೫ನೇ ತಾರೀಕಿಗೆ ಹಾಜರಿರಬೇಕೆಂದು ಒರ್ಡರ್. ಶ್ರೀಕರ ೪ನೇ ತಾರೀಕಿಗೇ ರಾಣೀಪುರಕ್ಕೆ ತಲಪಿದ. ಹೊಟೇಲ್ ಒಂದರಲ್ಲಿ ಉಳಕೊಂಡ. ಬೆಳಿಗ್ಗೆ ಊಟ ಮುಗಿಸಿ ಮನೆ ಹುಡುಕುವ ಕೆಲಸಕ್ಕೆ ಹೊರಟ. ಎಷ್ಟು ಸಮಯ ಹೆಂಡತಿ–ಮಗುವನ್ನು ಬಿಟ್ಟು ಹೊಟೇಲಿನಲ್ಲಿ ಇರಲು ಸಾಧ್ಯ, ಈಗಿನ ಸಂಬಳಕ್ಕೆ?

ಮೂರು ನಾಲ್ಕು ಮಾರ್ಗಗಳಲ್ಲಿ ಅಲೆದು ಬಿಸಿಲಿನ ಭರಕ್ಕೆ ಕಣ್ಣು ಕತ್ತಲೆ ಬರುವಂತಿದ್ದರೂ ಒಂದೇ ಒಂದು "ಮನೆ ಬಾಡಿಗೆಗೆ" ಬೋರ್ಡು ಕಾಣಲಿಲ್ಲ. ಕದ ಮುಚ್ಚಲ್ಪಟ್ಟ ಮನೆಗಳು ಅತಿ ವಿರಳ; ಅಂತಹವು ಇದ್ದಲ್ಲಿ ಅವೆಲ್ಲ ಒಕ್ಕಲು ಇದ್ದವೇ ಆಗಿದ್ದುವು. ಅಂತೂ ಎರಡು ಗಂಟೆಗೆ ಬಾಯಾರಿ, ದಾರಿಯಲ್ಲಿ ಸಿಕ್ಕಿದ ಹೊಟೇಲೊಂದನ್ನು ಹೊಕ್ಕಿ, ಎರಡು ತಂಪು ಪಾನೀಯಗಳನ್ನು ತರಿಸಿ ಒಮ್ಮೆಲೇ ಕುಡಿದ. ಅಷ್ಟು ಹೊತ್ತಿಗೆ ಜನರ ಸುಳಿವು ಕಡಿಮೆಯಿದ್ದುದರಿಂದಲೂ, ಶ್ರೀಕರ ಕುಳಿತ ಸ್ಥಳ ಹೊಟೇಲಿನ ಯಜಮಾನನ ಆಸನದ ಹತ್ತಿರವಿದ್ದುದರಿಂದಲೂ, ನೋಡುವಾಗಲೇ ಪರಕೀಯನೆಂದು ತಿಳಿಯುವ ಶ್ರೀಕರನನ್ನು ಹೊಟೇಲಿನ ಮಾಲಿಕನು ಮಾತನಾಡಿಸಿದ.

"ಯಾವೂರಾಯ್ತು ಸ್ವಾಮಿ?"

ಶ್ರೀಕರನಿಗೆ ಮಾತನಾಡುವ ಇಚ್ಛೆಯಿಲ್ಲದಿದ್ದರೂ, ಮಾತಾಡಿ, ಮನೆ ಹುಡುಕುವ ಕೆಲಸದಲ್ಲಿ ಸಹಾಯ ಸಿಕ್ಕೀತೆಂಬ ಆಸೆಯಿಂದ ಆ ವಿಷಯವನ್ನೂ ಹೊಟೇಲಿನವನೊಡನೆ ಚರ್ಚಿಸಿದ. ಪುಣ್ಯಕ್ಕೆ ಅವನು, "ನಮ್ಮ ಮನೆಯ ಹತ್ತಿರ ನಾಲ್ಕು ಮನೆಗಳು ಈಗ್ಗಾಗಲೇ ಕಟ್ಟಿ ಆಗಿವೆ. ನಿಮಗೆ ಒಂದು ಸಿಗಬಹುದು. ಪಟ್ಟಣದಿಂದ ಸ್ವಲ್ಪ ದೂರವಾದುದರಿಂದ ಅವುಗಳಿಗೆ ಅಷ್ಟೊಂದು ಗಿರಾಕಿ ಇಲ್ಲ. ಆದರೆ, ನಿಮಗೆ ಆಸ್ಪತ್ರೆಗೆ ಹತ್ತಿರ" ಎಂದು ವಿವರಿಸಿದ.

ಶ್ರೀಕರ ಅವನಿಂದ ಆ ಮನೆಗಳ ವಿಳಾಸ ಪಡಕೊಂಡು, ಅಲ್ಲಿ ಹೋಗಿ ಮುಟ್ಟುವ ರೀತಿ ತಿಳಿದು, ಬಸ್ಸಿನಲ್ಲಿ ಹೊರಟು ಮೂರುವರೆ ಗಂಟೆಗೆ ಮನೆಗಳ ಹತ್ತಿರ ತಲಪಿದ.

ಮನೆಗಳ ಕೆಲಸವು ಇನ್ನೂ ನಡೆಯುತ್ತಲೇ ಇತ್ತು. ಶ್ರೀಕರನು ಒಬ್ಬ ಕೂಲಿಯಾಳಿನೊಡನೆ ಮನೆಯ ಯಜಮಾನರಿರುವುದೆಲ್ಲಿಂದು ಕೇಳಲು, ಅಲ್ಲೇ ಅತ್ತಿತ್ತ ಓಡಾಡಿ ಕೆಲಸದ ಮೇಲ್ವಿಚಾರ ನೋಡುತ್ತಲಿದ್ದ ಒಬ್ಬ ಸುದೃಢನನ್ನು ಆಳು ತೋರಿಸಿದ. ಶ್ರೀಕರನು ಅವನೊಡನೆ ಹೋಗಿ, "ನೀವೇ

ಏನು ಈ ಮನೆಗಳ ಯಜಮಾನರು? ಇವು ಬಾಡಿಗೆಗೆ ಕೊಡಲ್ಪಡುವುವೇ?" ಎಂದು ಕೇಳಿದ.

ಅವನು ಶ್ರೀಕರನನ್ನು ನೋಡಿ, "ಹೌದು ಸ್ವಾಮಿ. ಮನೆಗಳಲ್ಲಿ ಮೂರು ಈಗಾಗಲೇ ಕೊಟ್ಟಾಗಿವೆ. ಇನ್ನೊಂದು ಖಾಲಿಯಿದೆ. ನಿಮಗೇನು ಕೆಲಸ?" ಎಂದನು.

ಶ್ರೀಕರನು ತಾನು ರಾಣೀಪುರದ ಹೊಸ ಆಸ್ಪತ್ರೆಯಲ್ಲಿ ಡಾಕ್ಟರನೆಂದು ತಿಳಿಸಿದ. ಆಗ ಮನೆಗಳ ಯಜಮಾನನು ಸಂತೋಷವನ್ನು ಸೂಚಿಸಿ "ಹಾಗಾದರೆ ಬಹಳ ಒಳ್ಳೆಯದಾಯಿತು, ಡಾಕ್ಟರರೇ. ಇನ್ನೊಂದು ಮನೆಯನ್ನೂ ಅದೇ ಆಸ್ಪತ್ರೆಯ ಇನ್ನೊಬ್ಬ ಡಾಕ್ಟರರು ತೆಗೆದುಕೊಂಡಿದ್ದಾರೆ. ಅವರಿಗೆ ಮನೆ ಬಹಳ ಖಾಯಿಷಿಯಾಯಿತು. ನೋಡಿದರೆ ನೀವೂ ಒಪ್ಪುವಿರಿ. ಆ ಡಾಕ್ಟರರು ಇದೀಗಲೇ ಬರುವವರಿರುವರು. ಅವರ ಹೆಂಡತಿಯೂ ಅದೇ ಆಸ್ಪತ್ರೆಯಲ್ಲಿ ನರ್ಸ್ ಕೆಲಸಕ್ಕೆ ಇರುವಳಂತೆ" ಎಂದನು. ಆ ಮೇಲೆ ಶ್ರೀಕರನಿಗೆ ಮನೆ ತೋರಿಸಿಯಾಯಿತು. ಶ್ರೀಕರನು ಮನೆಯನ್ನು ಬಾಡಿಗೆಗೆ ಕೊಂಡುಕೊಳ್ಳಲು ಒಪ್ಪಿ, ಮನೆಯವನು ಅವನ್ನು ಬೇಕೆಯುವರಿಗೆ ಕೊಡದಂತೆ ಎರಡು ತಿಂಗಳ ಬಾಡಿಗೆಯನ್ನು ಆಗಲೇ ಮುಂಗಡವಾಗಿ ತೆತ್ತನು. ಮನೆಯವನು ಅದನ್ನು ಸ್ವೀಕರಿಸಿ, ಶ್ರೀಕರನಿಗೆ ರಶೀದಿಕೊಡಲು ಪಕ್ಕದಲ್ಲಿರುವ ತನ್ನ ಸಣ್ಣ ಮನೆಗೆ ಕರಕೊಂಡುಹೋದನು. ಮನೆಯವನು ಒಳಗೆ ಹೋಗಿ ರಶೀದಿ ಬರೆದು ತಂದು ಶ್ರೀಕರನಿಗೆ ಕೊಟ್ಟು, ಶ್ರೀಕರ ಹೊರಡಲನುವಾದುದನ್ನು ನೋಡಿ, "ಅದೆಲ್ಲ ಆಗದು, ಒಂದು ಅರ್ಧ ಕಪ್ ಕಾಫಿಯಾದರೂ ಕುಡಿದು ಹೋಗಬೇಕು, ನಮ್ಮ ಮುಂದಿನ ಸ್ನೇಹಕ್ಕಾಗಿ," ಎಂದು ಉಪಚರಿಸಿದನು. ಶ್ರೀಕರನು ಉಪಾಯವಿಲ್ಲದೆ ಒಪ್ಪಿದನು. ಮನೆಯವನು ಕಾಫಿ ತಯಾರಿಸಲು ಹೆಂಡತಿಗೆ ತಿಳಿಸಲಿಕ್ಕಾಗಿ ಒಳಗೆ ಹೋದನು. ಶ್ರೀಕರ ಅಲ್ಲೇ ಕುರ್ಚಿಯಲ್ಲಿ ಕೂತುಕೊಂಡನು. ಅತ್ತಿತ್ತ ನೋಡಿ ಕೊನೆಗೆ ಅವನ ದೃಷ್ಟಿಯು ಆ ಮನೆಯ ಗೇಟಿನ ಕಡೆಗೆ ಹರಿಯಿತು. ಅಲ್ಲಿ ಒಬ್ಬ ಗಂಡಸೂ ಇನ್ನೊಬ್ಬ ಹೆಂಗಸೂ ಒಟ್ಟಿಗೆ ಮಾತನಾಡುತ್ತ ಬರುತ್ತಿದ್ದರು. ದೂರದಲ್ಲಿದ್ದಾಗ ಅವರಾರೆಂದು ಶ್ರೀಕರನಿಗೆ ತಿಳಿಯಲಿಲ್ಲ. ಆದರೆ ಅವರು ಹತ್ತಿರ ಬರುತ್ತಲೇ ಗಂಡಸು ತನ್ನ ಸಹಪಾಠಿ ಡಾಕ್ಟರ್ ಕುಪ್ಪುಸ್ವಾಮಿಯೆಂದೂ, ಹೆಂಗಸು ನರ್ಸ್ ದುರ್ಗಾಂಬಾಯೆಂದೂ ತಿಳಿದ. ನರ್ಸ್ ದುರ್ಗಾಂಬಾ ಎಂಬವಳನ್ನು ಮದ್ರಾಸಿನ ಜನರಲ್ ಆಸ್ಪತ್ರೆಯಲ್ಲಿ ಶ್ರೀಕರನು ಕೆಲಸ ಮಾಡುತ್ತಿದ್ದ ಸಮಯದಲ್ಲಿ ತಿಳಿಯದ ಅಲ್ಲಿಯ ಡಾಕ್ಟರರಿದ್ದಿಲ್ಲ. ಅವಳು ಒಳ್ಳೆಯ ಜಾರಿಣಿಯಾಗಿದ್ದಳು. ತನ್ನ ಬಲೆಯನ್ನು ಯಾವಾಗಲೂ ಬೀಸುತ್ತಲೇ ಇರುವಳೆಂದೂ, ಎಂದು ಆ ಬಲೆಯಲ್ಲಿ ಒಬ್ಬ ಡಾಕ್ಟರನು ತನಗೆ ಪತಿಯಾಗಿ ಸಿಗುವನೆಂಬುದೇ ಅವಳ ಹಂಬಲವೆಂದೂ ಆಸ್ಪತ್ರೆಯ ಮಾತಾಗಿತ್ತು. ಅವಳ ನೋಟ ಶ್ರೀಕರನ ಕಡೆಯೂ ಹರಡಿತ್ತು. ಆದರೆ ಯಾರಲ್ಲಿಯೂ ಆಸಕ್ತಿ ತೋರಿಸದ ಶ್ರೀಕರ ಅದರಿಂದ ಸಹಜವಾಗಿಯೇ ತಪ್ಪಿದ. ಕುಪ್ಪುಸ್ವಾಮಿಯಾದರೆ ಅವಳೊಡನೆ ಹಲವು ಸಲ ಸಿನೆಮಾ ಇತ್ಯಾದಿಗಳಿಗೆ ಹೋಗಿದ್ದ. ಆದರೂ ಅವನೂ ಅವಳ ಬಲೆಗೆ ಬೀಳದೆ ತಪ್ಪಿಸಿಕೊಂಡಿದ್ದ. ಈ ಇಬ್ಬರನ್ನೂ ಒಟ್ಟಿಗೆ ರಾಣಿಪುರದಲ್ಲಿ ಇಷ್ಟು ಅನಿರೀಕ್ಷಿತವಾಗಿ ಕಂಡ ಶ್ರೀಕರನಿಗೆ ಅತ್ಯಂತ ಆಶ್ಚರ್ಯವಾಗಿ ಅದು ಅವನ ಮುಖದ ಮೇಲೆ ಮೂಡಿತ್ತು. ಹಾಗೆಯೇ ಹತ್ತಿರ ಬರುತ್ತಲೇ ಇದ್ದ ಅವರಿಬ್ಬರೂ, ಜಗಲಿಯ ಮೆಟ್ಟಲುಗಳನ್ನು ಹತ್ತುತ್ತಿದ್ದಂತೆಯೇ ಶ್ರೀಕರನನ್ನು ಕಂಡು ಪಟ್ಟ ಆಶ್ಚರ್ಯಕ್ಕೆ ಮೆಟ್ಟಲು ಹತ್ತುವುದನ್ನು ಮರೆತು ಅಲ್ಲೇ ನಿಂತರು!

ಅಷ್ಟರಲ್ಲಿ ಒಳಗೆ ಹೋಗಿದ್ದ ಮನೆಯವನು ಹೊರಗೆ ಬಂದಿದ್ದ. ಅವನು ಮೆಟ್ಟಲು ಮೇಲೆ ನಿಂತಿದ್ದ ಕುಪ್ಪುಸಾಮಿಯನ್ನು ನೋಡಿ, "ಓಹೋ, ಹೋ, ಬನ್ನಿ ಡಾಕ್ಟ್ರೆ, ಬನ್ನಿ; ಬನ್ನಿಯಮ್ಮ, ಒಳಗೆ ಬನ್ನಿ. ಸಂತೋಷ, ಬಹಳ ಸಂತೋಷ. ಅಮ್ಮನವರು ಮನೆಯನ್ನು ನೋಡಿ ಮೆಚ್ಚದಿರಲಿಕ್ಕಿಲ್ಲ. ಈ ನಮ್ಮ ಡಾಕ್ಟರರೂ ಮೆಚ್ಚಿದರು," ಎಂದು ಶ್ರೀಕರನೆಡೆ ತೋರಿಸಿ, ಅವನನ್ನು ನೋಡಿ, "ಇವರೇ ಸ್ವಾಮಿ, ನಾನು ಈ ಮೊದಲೇ ನಿಮಗೆ ಹೇಳಿದ ಡಾಕ್ಟರರು; ನಿಮ್ಮ ಮುಂದಿನ ನೆರೆಕೆರೆಯವರು," ಎಂದು ಹೇಳಿ, ಕುಪ್ಪುಸಾಮಿಯನ್ನು ನೋಡಿ, ಶ್ರೀಕರನನ್ನು ತೋರಿಸಿ, "ಇವರೂ ನಿಮ್ಮ ಹಾಗೆಯೇ ರಾಣೀಪುರದ ಆಸ್ಪತ್ರೆಯಲ್ಲಿ ಕೆಲಸಕ್ಕಿರುವರಂತೆ" ಎಂದನು.


ಆಶ್ಚರ್ಯಾಧಿಕ್ಯದಿಂದ ಕೆಲಸಮಯ ಇಬ್ಬರೂ ಮಾತನಾಡದಿದ್ದರೂ, ಕೊನೆಗೆ ಮೊದಲು ಮಾತನಾಡಿದವ ಕುಪ್ಪುಸಾಮಿಯೇ. ಒಡನೆ ಓಡುತ್ತ ಮೆಟ್ಟಲುಗಳನ್ನು ಹತ್ತಿ, ಶ್ರೀಕರನ ಕೈಯನ್ನೆಳೆದು ಹಸ್ತಲಾಘವ ಮಾಡಿ, "ಹಲೋ, ಶ್ರೀಕರ, ನೀನೂ ರಾಣೀಪುರ ಆಸ್ಪತ್ರೆಯಲ್ಲೇ ಅಸಿಸ್ಟಾಂಟ್ ಸರ್ಜನನೋ? ಭಲೇ, ಒಳ್ಳೆಯದಾಯಿತು. ಸಹಪಾಠಿಗಳಾಗಿದ್ದ ನಾವು ಇನ್ನು ಮೇಲೆ ಸಹೋದ್ಯೋಗಿಗಳಾಗುವೆವು'' ಎಂದೆನ್ನುತ ದುರ್ಗಾಂಬಾ ಕಡೆಗೆ ತಿರುಗಿ, "ಮಿಸೆಸ್ ಕುಪ್ಪುಸ್ವಾಮಿ ಇವರೇ. ನಿನಗೆ ನಾನು ಪರಿಚಯ ಮಾಡಿಕೊಡಬೇಕಾಗಿಲ್ಲವಲ್ಲ? ನೀವು ಮೊದಲೇ ಪರಿಚಿತರು, ಎಂದ.

ಮನೆಯ ಯಜಮಾನನ ಒತ್ತಾಯದ ಮೇರೆಗೆ ಎಲ್ಲರೂ ಕುರ್ಚಿಗಳಲ್ಲಿ ಕುಳಿತರು. ಅದಾಗಲೇ ಕಾಫಿ ಬಂತು; ಅದನ್ನು ಕುಡಿದಾಯಿತು. ಕುಪ್ಪುಸಾಮಿ ಸಿಗರೇಟ್ ಪೆಟ್ಟಿಗೆ ತೆಗೆದು ಒಂದನ್ನು ಶ್ರೀಕರನಿಗೆ ಕೊಟ್ಟ. ಮನೆಯ ಯಜಮಾನನು ಸೇದುವುದಿಲ್ಲವೆಂದೊಡನೆ, ಇನ್ನೊಂದನ್ನು ತಾನು ಸೇದಲು ತೊಡಗಿದ. ಅಷ್ಟರಲ್ಲಿ ಮನೆಯ ಯಜಮಾನನು, "ನೀವು ಐದು ನಿಮಿಷ ಕೂತಿರಿ. ನಾನು

ಕೆಲಸದತ್ತ ಹೋಗಿಬರುವೆನು. ಮತ್ತೆ ನಿಧಾನವಾಗಿ ಮನೆ ನೋಡಿದರಾಯಿತು," ಎಂದ. ನರ್ಸ್ ದುರ್ಗಾಂಬಾ ಕುಪ್ಪುಸಾಮಿಯೊಡನೆ, "ನೀವಿಬ್ಬರೂ ಮಾತನಾಡಲು ಉತ್ಸುಕರಾಗಿದ್ದಂತೆ ತೋರುತ್ತದಲ್ಲಾ, ಹಳೆಯ ಸ್ನೇಹಿತರು. ನೀವಿಲ್ಲಿರಿ; ನಾನೊಬ್ಬಳೇ ಹೋಗಿ ಮನೆಯನ್ನು ನೋಡಿಬರುತ್ತೇನೆ" ಎಂದು ಹೇಳಿ, ಕುಪ್ಪುಸಾಮಿ ಒತ್ತಾಯಮಾಡಿದರೂ ಅಲ್ಲಿರದೆ ಹೊಸ ಮನೆಗಳತ್ತ ಹೋದಳು. ಅವಳು ಕಣ್ಮರೆಯಾದೊಡನೆ ಕುಪ್ಪುಸಾಮಿಯು ಗಟ್ಟಿಯಾಗಿ ನಕ್ಕು ಹೇಳಿದ: "ತಿಳಿಯಿತಲ್ಲ, ಶ್ರೀಕರ ನಿನಗೆ ನನ್ನ ಗುಟ್ಟು! ಆ ದಿನ ಮದ್ರಾಸಿನಲ್ಲಿ ನೀನು ನನ್ನನ್ನು ನೋಡಿದಾಗ ನಾನು ಕೂತಿದ್ದ ಬ್ಯೂಕ್ ಕಾರ್ ನನಗೆ ಮಾವ ಕೊಟ್ಟದ್ದಲ್ಲ! ನನ್ನದೂ ಅಲ್ಲ. ಚಿಕ್ಕಪ್ಪನವರದು. ನನ್ನದೇ ಆಗಿದ್ದರೆ ಎಷ್ಟು ಒಳ್ಳೆಯದು ಎಂದು ಮನಸ್ಸಿನಲ್ಲೇ ಯೋಚಿಸುತ್ತ ಇದ್ದೆ. ಅದಾಗಲೇ ನಿನ್ನನ್ನು ಕಂಡೆ. ಒಮ್ಮೆಗೆ ಕಾರ್ ನನ್ನದೇ ಎಂದು ಹೇಳಿಬಿಟ್ಟೆ. ಮತ್ತೆ ನನ್ನದಲ್ಲವೆಂದು ತಿಳಿಸಲು ನಿನ್ನ ಪ್ರೆಕ್ಟಿಸ್, ಒಲ್ಡ್ಸ್‌ಮೊಬೈಲ್ ಇತ್ಯಾದಿಗಳ ಸಮಾಚಾರ ಕೇಳಿದ ತರುವಾಯ ಮನಸ್ಸು ಹಿಂಜರಿಯಿತು. ಅಂತೂ ನನ್ನದೇ ಎಂದರೆ ಅದರಲ್ಲೇನು ಹಾನಿ ಎಂದುಕೊಂಡೆ; ನಾವಿಬ್ಬರೂ ಇನ್ನು ಮೇಲೆ ಒಬ್ಬರಿಗೊಬ್ಬರು ಕಾಣಸಿಗುವುದು ಎಂದೋ ಏನೋ ಎನಿಸಿತು. ಕಾರ್ ನನ್ನದಾಗಿರಿಸಲು ಮಾವ ಕೊಟ್ಟದ್ದು, ಎಂದೆ! ಮಾವ! ದುರ್ಗಾಂಬಾಗೆ ತಂದೆ ಇದ್ದಾರೊ ಇಲ್ಲವೋ ಎಂದು ಇನ್ನೂ ಕೇಳಿಲ್ಲ. ಅವಳು ಗಂಟುಬಿದ್ದುದು ಅರ್ಪಕಂ ಸರಕಾರಿ ಆಸ್ಪತ್ರೆಯಲ್ಲಿ ಒಬ್ಬ ರೋಗಿಯನ್ನು ಕೊಂಡು ಅಲ್ಲಿರಿಸಲು ಹೋದಾಗ. ಅಲ್ಲಿಗೆ ಆಗತಾನೇ ವರ್ಗವಾಗಿ ಬಂದಿದ್ದ ಇವಳು ನೋಡಸಿಕ್ಕಿದಳು. ಅವಳೊಡನೆ ಚೆಲುಮಾತು ಆಡಿದರೆ ರೋಗಿಯನ್ನಾದರೂ ಒಳ್ಳೆಯದಾಗಿ ಕಾಣುವಳೆಂಬ ಆಸೆಯಿಂದ ಚೆನ್ನಾಗಿಯೇ ಮಾತನಾಡಿದೆ; ಹಲವು ಸಲ ಆಸ್ಪತ್ರೆಗೆ ಹೋದೆ. ಕೊನೆಗೆ ರೋಗಿಗಿಂತ ಹೆಚ್ಚಾಗಿ ಇವಳನ್ನೇ ಕಂಡೆ. ಅಂತೂ ಅವಳ ಬಲೆಯಲ್ಲಿ ಬಿದ್ದೆನೆನ್ನು! ಹತ್ತು ಸಾವಿರ ವರದಕ್ಷಿಣೆ ಕೊಡಲೊಪ್ಪಿದ ಹೆಣ್ಣಿನ ಕಡೆಯವರು ಬಂದರೂ ಕನಿಷ್ಟ ಪಕ್ಷ ಇಪ್ಪತ್ತುಸಾವಿರವಾದರೂ ಸಿಗಬೇಕೆಂಬ ಹಟ ಮಾಡಿ, ಈ ಅವಸ್ಥೆಯಲ್ಲಿ ಬಿದ್ದುಬಿಟ್ಟೆ! ಮೊದಲೇ ಅರ್ಪಕಂದಲ್ಲಿ ಕಾಸು ಸಿಗುವುದು ಕಡಿಮೆಯಾಯಿತ್ತು; ಮತ್ತೆ ಇವಳನ್ನು ಮದುವೆಯಾದ ಮೇಲೆ ಜನರು ನನ್ನ ಹತ್ತಿರ ಬರುವುದನ್ನೇ ನಿಲ್ಲಿಸಿಬಿಟ್ಟರು. ಅಂತೂ ಊರೇ ಬಿಡಬೇಕಾಯಿತು. ಚಿಕ್ಕಪ್ಪನವರಿಗೆ ಶರಣುಹೋದೆ. ಅವರು ಎರಡು ವರ್ಷಗಳಿಂದ ಮದ್ರಾಸಿನಲ್ಲೇ ಇರುವುದು, ಚೀಫ್ ಎಂಜಿನಿಯರರಾಗಿ, ಅವರ ನೆರೆಮನೆಯೇ ನಮ್ಮ ಶಿವಸ್ವಾಮಿ ಅಯ್ಯರರದು. ಚಿಕ್ಕಪ್ಪನವರು ಅಯ್ಯರರ ಹತ್ತಿರ ಮಾತಾಡಿ, ಈ ಕೆಲಸವನ್ನು ಸಿಕ್ಕುವ ಹಾಗೆ ಮಾಡಿದರು; ದುರ್ಗಾಂಬಾಳಿಗೆ ಕೂಡ ಇಲ್ಲಿ ವರ್ಗಾಯಿಸಲು ಒಪ್ಪಿದರು. ಆ ದಿನ ನಿನಗೆ ಕಾರಿನಲ್ಲಿ ಸಿಕ್ಕಿದಾಗ ಅದಾಗಲೇ, ಕೆಲಸಕ್ಕೆ ಅರ್ಜಿಕೊಟ್ಟು ಮೂರು ನಿಮಿಷವಾಗಿರಲಿಲ್ಲ! ಈ ಕತೆಯನ್ನು ನನ್ನ ಮಿತ್ರ ನಿನ್ನಲ್ಲಲ್ಲದೆ ಇನ್ನೆಲ್ಲಿ ತೋಡಿಕೊಳ್ಳಲಿ? ಆ ದಿನವೇ ಹೇಳುವುದಿತ್ತು; ಆದರೆ ನೀನು ಸಾವಿರಗಟ್ಟಲೆ ರೂಪಾಯಿ ಗಳಿಸಿ ಹೊಸ ಓಲ್ಡ್ಸ್‌ಮೊಬೈಲ್ ಕೊಂಡುಹೋಗಲು ಬಂದವನು, ನನ್ನಂತಹವನ ಕಷ್ಟಗಳಿಗೆ ಎಲ್ಲಿ ಕಿವಿಗೊಡುವೆಯೋ ಎಂದೆನಿಸಿ, ಮತ್ತೆ ಹೇಳದೆ ನನ್ನ ಮೊದಲಿನ ಕಟ್ಟುಕತೆಯನ್ನೇ ನಿಜವೆಂಬಂತೆ ನಟಿಸಿದೆ. ಅದಿರಲಿ, ನೀನು ಇಲ್ಲಿ ಬರಲು ಕಾರಣವೇನು?''.

ಶ್ರೀಕರ ಗಹಿಗಹಿಸಿ ನಕ್ಕ. "ಸರಿ, ಕುಪ್ಪುಸಾಮಿ, ನಿನ್ನ ಬ್ಯೂಕ್ ಮಹತ್ವವನ್ನು ನೋಡಿ ಅದಕ್ಕೆ ಸರಿಹೋಲುವಂತೆ ಆ ದಿನ ನನ್ನ ಓಲ್ಡ್ಸ್‌ಮೊಬೈಲ್ ಕಲ್ಪಿಸಿದೆ. ಅಷ್ಟೆ! ನಿಜಸ್ಥಿತಿಯೊ? ನಾನಿದ್ದಲ್ಲಿ ಬರುವ ರೋಗಿಗಳೆಲ್ಲ ಮರಣಕ್ಕೆ ತುತ್ತಾದವರೇ. ಅವರ ಮರಣಕ್ಕೆ ನಾನೇ ಕಾರಣನೋ ಎಂಬಂತೆ ಜನರು ನನಗೆ 'ದ್ವಿತೀಯ ಯಮ'ನೆಂಬ ಬಿರುದನ್ನು ದಯಪಾಲಿಸಿದರು. ಇತ್ತ ಮದುವೆಯೂ ಆಯಿತು, ಮಗುವೂ ಆಯಿತು. ಕೈಯಲ್ಲಿದ್ದ ಕಾಸು ಬರಿದಾದ ಮೇಲೆ, ಬರದ ಹಣಕ್ಕೆ ಇನ್ನೂ ಕಾದಿರುವುದು ಒಳ್ಳೆಯದಲ್ಲವೆಂದು ಯೋಚಿಸುತ್ತಿದ್ದಾಗ ಅಸಿಸ್ಟಾಂಟ್ ಸರ್ಜನರ ಚುನಾವಣೆಯಾಗುವುದೆಂದು ತಿಳಿದೆ. ಅಯ್ಯರರ ಸಹಾಯದಿಂದ ಕೆಲಸವೂ ಸಿಕ್ಕಿ, ಈಗ ಇಲ್ಲಿದ್ದೇನೆ,'' ಎಂದು ಮಾತು ಮುಗಿಸಿದ.

"ಅಂತೂ ಸಹಪಾಠಿಗಳಾಗಿ ಮುಂಚೆ ಒಮ್ಮೆ ಒಟ್ಟಿಗಿದ್ದ ನಾವು ಇನ್ನು ಮೇಲೆ ಸಹೋದ್ಯೋಗಿಗಳಾಗಿ ಒಟ್ಟಿಗೆ ಇಲ್ಲಿರಲು ಯಾರ ಆತಂಕವೂ ಇಲ್ಲನಷ್ಟೇ?'' ಎಂದು ಕುಪ್ಪುಸಾಮಿ ನಗುತ್ತ ಹೇಳಿದ.



ಡಾಕ್ಟರ್ ಎಡ್ವರ್ಡ್ ಜೆನ್ನರ್

(ಲೇಖಕರು: **ಕೈಂತಜೆ ಗೋವಿಂದ ಭಟ್**, ಎಡ್ವಕೇಟ್, ಮಂಗಳೂರು)

ಹೊಸ ವಿಚಾರಗಳಿಗೆ ವಿರೋಧ ಬರುವುದು ಹೊಸತಲ್ಲ. ಹೊಸ ವಿಚಾರಗಳಲ್ಲಿ ಹುರುಳಿದ್ದರೆ ವಿರೋಧಗಳು ಹುಟ್ಟಡಗಿ ಕಾಲಕ್ರಮೇಣ ನೆಲೆನಿಲ್ಲುವವು. ಹೊಸ ವಿಚಾರಗಳನ್ನು ಪ್ರತಿಪಾದಿಸುವ ವ್ಯಕ್ತಿ ಒಂದಲ್ಲ ಎರಡಲ್ಲ–ಹಲವಾರು ಎಡರುತೊಡರುಗಳನ್ನೆದುರಿಸಬೇಕಾಗುವುದು. ಸಮಾಜದ ಕುರುಡು ನಂಬುಗೆ, ಆಚರಣೆಗಳನ್ನು ಕೆಣಕುವುದು ಸಾಮಾನ್ಯ ವಿಚಾರವಲ್ಲ. ಹಾಗೆ ಕೆಣಕುವ ಸಾಹಸಮಾಡಿದವರು ಹೆಚ್ಚಾಗಿ ಜೀವನದ ಹೆಚ್ಚಿನ ಪಾಲನ್ನು ದುಃಖ ದಾರಿದ್ರ್ಯಗಳಲ್ಲಿ ಕಳೆದಿದ್ದಾರೆ. ಅನೇಕರು ಜೀವವನ್ನೂ ಕೊಟ್ಟಿದ್ದಾರೆ. ಹೊಸ ವಿಚಾರಗಳನ್ನು ಮಂಡಿಸಿದ ಯೇಸುವನ್ನು ಶಿಲುಬೆಗೆ ಏರಿಸಲಿಲ್ಲವೆ? ಇಂದಿಗೂ ನೆಲೆನಿಂತಿರುವ ತತ್ವಗಳನ್ನು ಬೋಧಿಸಿದ ಸಾಕ್ರೆಟೀಸನಿಗೆ ವಿಷಪಾನ ಮಾಡಿಸಲಿಲ್ಲವೆ? ಭಾರತದ ಜನಕ್ಕೆ ಬಂಧುಗಳಂತಿರಲು ಉಪದೇಶ ಮಾಡಿದ ಗಾಂಧಿಯನ್ನು ಗುಂಡಿಕ್ಕಿ ಕೊಲ್ಲಲಿಲ್ಲವೆ? ಬಳಿಕ, ಹತ್ತರೊಡನೆ ಹನ್ನೊಂದು ಎಂಬಂತೆ ಸಿಡುಬಿಗೆ ಇಂದಿಗೂ ಬೇರೆ ಇದಿರಿಲ್ಲದ ಔಷಧಿಯನ್ನು ಕಂಡುಹಿಡಿದು ಪ್ರಚಾರಮಾಡಿದ ಎಡ್ವರ್ಡ್ ಜೆನ್ನರನಿಗೆ ಕಷ್ಟ, ದುಃಖ, ಅವಹೇಳನಗಳು ಜೀವನದಲ್ಲಿ ಬಂದೊದಗಿದರೆ ಆಶ್ಚರ್ಯವಲ್ಲ.

ಎರಡು ಶತಮಾನಗಳ ಹಿಂದೆ ಜೆನ್ನರನು ಸೊಡ್‌ಬರಿಯಲ್ಲಿ ವ್ಯಾಸಂಗಮಾಡುತಿದ್ದನು. ಹಳ್ಳಿಯ ಹುಡುಗಿಯೊಬ್ಬಳ "ನನಗೆ ಸಿಡುಬಾಗದು. ನನಗೆ ಆಕಳ ಸಿಡುಬಾಗಿದೆ" ಎಂಬ ಮಾತು ಜೆನ್ನರನ ಕುತೂಹಲವನ್ನು ಕೆರಳಿಸಿತು. ಗೊಲ್ಲ ಗೊಲ್ಲತಿಯರಲ್ಲಿ 'ಆಕಳ ಸಿಡುಬಾದವರಿಗೆ ಸಿಡುಬು ಬರುವುದಿಲ್ಲ'ವೆಂಬ ಪ್ರತೀತಿ ಹಿಂದೆಯೇ ಇದ್ದರೂ ಜೆನ್ನರನು ಅದರಲ್ಲಿ ಆಸಕ್ತಿ ವಹಿಸುವ 'ತನಕ ಅದಕ್ಕೆ ಯಾರೂ ಬೆಲೆ ಕೊಟ್ಟಿರಲಿಲ್ಲ. ಎಲ್ಲರೂ ಅದನ್ನು 'ಹುಚ್ಚು-ಹರಟೆ'ಯೆಂದು ಭಾವಿಸುತ್ತಿದ್ದರು.

ಹಳ್ಳಿಯ ಹುಡುಗಿಯ ಮಾತಿನಿಂದ ಕುತೂಹಲ ಕೆರಳಿದ ಜೆನ್ನರನು ಅದರ ವಿಚಾರವಾಗಿ ಕೆಲಸಮಾಡತೊಡಗಿದನು. ವಿಚಾರಗಳನ್ನು ವಿಮರ್ಶಿಸಿ ತನ್ನ ಅಭಿಪ್ರಾಯವನ್ನು ಹೇಳತೊಡಗಿದನು. ಆಕಳ ಸಿಡುಬಿನಲ್ಲಿ ಸಿಡುಬನ್ನು ತಡೆಯುವ ಶಕ್ತಿ ಇರುವ ವಿಚಾರ ಅವನು ಸಹೋದ್ಯೋಗಿಗಳಿಗೂ ಮಿತ್ರರಿಗೂ ಹೇಳಲು ಅವರು ಅವನನ್ನು ಗೇಲಿಮಾಡಿದ್ದು ಮಾತ್ರವಲ್ಲ, ಅವನು ಆ ವಿಚಾರವಾಗಿ ಇನ್ನೂ ಕೆಲಸವನ್ನು ಮುಂದುವರಿಸಿದರೆ ತಮ್ಮ ಸಂಸ್ಥೆಯಿಂದ ತಳ್ಳಿಬಿಡುವುದಾಗಿ ಹೆದರಿಸಿದರು.

ಜೆನ್ನರನು ಲಂಡನ್ ಮಹಾನಗರಕ್ಕೆ ಬಂದು ಜೋನ್ ಹಂಟರ್ ಎಂಬ ಶರೀರ ಮರ್ಮ ಶಾಸ್ತ್ರಜ್ಞನ (Anatomist) ಕೈಕೆಳಗೆ ಅಭ್ಯಾಸಮಾಡತೊಡಗಿದನು. ಅವನಿಗೆ ಜೆನ್ನರನು ತನ್ನ ಯೋಚನೆಗಳನ್ನು ತಿಳಿಸಲಾಗಿ ಅವನು ಹೇಳಿದುದು ಒಂದೆ–"ಯೋಚನೆಗಳಿಂದ ಏನು ಬಂತು? ಪರೀಕ್ಷಿಸಿ ನೋಡು! ತಾಳ್ಮೆಯಿಂದ ಸತ್ಯವನ್ನರಸು" ಎಂಬುದಾಗಿ.

ಹಂಟರನ ಉಪದೇಶದಿಂದ ಹುರುಪುಗೊಂಡು ಜೆನ್ನರನು ಹಳ್ಳಿಗೆ ಹೋಗಿ ನೆಲಸಿದನು. ಅಲ್ಲಿ ತನ್ನ ಉದ್ಯೋಗದಲ್ಲಿ ತೊಡಗಿದನು. ಹಗಲಿರುಳೆನ್ನದೆ ಇಪ್ಪತ್ತು ವರ್ಷಗಳ ಕಾಲ ಸಿಡುಬಿನ ಮತ್ತು ಅದರ ನಿವಾರಣೆಯ ವಿಚಾರದಲ್ಲಿ ಅನೇಕಾನೇಕ ಶೋಧನೆಗಳನ್ನು ಮಾಡಿದನು. ದಾಕು ಹಾಕಿ (Vaccination) ಸಿಡುಬನ್ನು ತಡೆಕಟ್ಟಲು ಸಾಧ್ಯವಿದೆ ಎಂದು ಕಂಡುಹಿಡಿದನು. ಅದರಲ್ಲಿ ಅವನಿಗೆ ಅಚಲ ವಿಶ್ವಾಸವಿತ್ತು. ಅವನ ಮಗನಿಗೇ ಜೆನ್ನರನು ಮೂರು ಬಾರಿ ದಾಕು ಹಾಕಿದನು.

ಆದರೆ ಜನತೆ ಡಾಕ್ಟರ್ ಜೆನ್ನರನ 'ದಾಕುಹಾಕುವದರಿಂದ ಸಿಡುಬು ಬರುವುದಿಲ್ಲ'ವೆಂಬ ಶೋಧನೆಯನ್ನು ಸ್ವೀಕರಿಸಲಿಲ್ಲ. ಜನರು, ಮೊದಮೊದಲು ಏನೂ ಲಕ್ಷ್ಯ ಮಾಡಲಿಲ್ಲ. ಬರಬರುತ್ತ ಅದರ ಮೇಲೆ ವಿಶೇಷ ವಿರೋಧ ಬೆಳೆಯತೊಡಗಿತು. ಡಾಕ್ಟರ್ ಜೆನ್ನರನು ತನ್ನ ಸಹೋದ್ಯೋಗಿಗಳಿಗೆ ದಾಕುಹಾಕುವುದ್ದರಿಂದ ಆಗುವ ಪ್ರಯೋಜನವನ್ನೂ ಅದರ ವಿಧಾನವನ್ನೂ ತಿಳಿಸಿಕೊಡುವ ಬಗ್ಗೆ ಲಂಡನಿಗೆ ತೆರಳಿದನು. ಮೂರು ತಿಂಗಳುಗಳ ಕಾಲ ಅಲ್ಲಿ ಹೋಗಿ ನೆಲಸಿದರೂ ಯಾರೂ ಮುಂದೆ ಬರಲಿಲ್ಲ. ಜೆನ್ನರನು ತನ್ನ ಹಳ್ಳಿಗೆ ಮರಳಬೇಕಾಯಿತು. ಹಲವರು, "ದನಗಳ ಕೆಚ್ಚಲಿನಿಂದ ಕೊಳಕು ಪದಾರ್ಥವನ್ನು ತೆಗೆದು ಮಾನವನ ರಕ್ತಕ್ಕೆ ಸೇರಿಸುತ್ತಾನೆಂ"ದು ಜರೆದರು. 'ಪೈಶಾಚಿಕ'ವೆಂದು ಧರ್ಮಾ

ಧಿಕಾರಿಗಳು ಸಾರಿದರು. ಕೆಲವರು 'ದಾಕುಹಾಕುವುದರಿಂದ ಹಸುಗಳಂತೆ ಮುಖವುಳ್ಳವರಾಗುತ್ತಾರೆ....ಬರಬರುತ್ತ ಅವುಗಳಂತೆ ವಿಕಾರ ಸ್ವರದಲ್ಲಿ ಕೂಗಲು ಆರಂಭ ಮಾಡುತ್ತಾರೆ" ಎಂಬುದಾಗಿ ಪ್ರಚಾರ ಮಾಡಲೂ ಹಿಂಜರಿಯಲಿಲ್ಲ. ಆದಿಯಲ್ಲಿ ದಾಕು ಹಾಕಲು ಮುಂದೆ ಬಂದವರನ್ನು ಕಲ್ಲಿನಿಂದ ಹೊಡೆಯಲೂ ಜನರು ಹಿಂದೆ ಮುಂದೆ ನೋಡಲಿಲ್ಲ.

ಆದರೆ ಸತ್ಯಕ್ಕೆ ಚ್ಯುತಿಯಿಲ್ಲ. ಕಟ್ಟಕಡೆಗೆ ದಾಕು ಹಾಕುವ ವಿಧಾನವು ನೆಲೆನಿಂತಿತು. ದೊಡ್ಡ ಮನೆತನಕ್ಕೆ ಸೇರಿದ, ಸಮಾಜದಲ್ಲಿ ಗಣ್ಯಸ್ಥಾನವಿದ್ದ ಲೇಡಿ ಡ್ಯೂಸಿ ಮತ್ತು ಕೌಂಟೆಸ್ ಬರ್ಕ್ಲಿ ಎಂಬ ಇಬ್ಬರು ಮಹಿಳೆಯರು ಧೈರ್ಯದಿಂದ ತಮ್ಮ ಮಕ್ಕಳಿಗೆ ದಾಕು ಹಾಕಿಸಿದರು. ಇಬ್ಬರು ಮುಂದೆ ಬಂದುದೇ ತಡ, ದಾಕುಹಾಕುವ ವಿಚಾರದಲ್ಲಿ ಹಿಂದೆ ಇದ್ದ ಭಾವನೆ ಬದಲಾಯಿತು.

ಜೆನ್ನರನನ್ನೂ, ಅವನ ವಿಶೇಷವಾದ ಶೋಧನೆಯನ್ನೂ ಸಮಾಜಕ್ಕೆ ಗಣಿಸದೆ ಗತ್ಯಂತರವಿಲ್ಲದಾಯಿತು. ಅವನನ್ನು ಕರೆದು ಬಹಳ ಗೌರವಿಸಿದರು. ಅವನನ್ನು ಲಂಡನಿನಲ್ಲೆ ನೆಲಸುವಂತೆ ಕೇಳಿಕೊಳ್ಳಲಾಯಿತು. ಅವನು ಅಲ್ಲಿ ನೆಲಸಿದ್ದರೆ ಕೋಟ್ಯಾಧಿಪತಿಯಾಗಬಹುದಿತ್ತು. ಆದರೆ ಅವನಿಗೆ ಅದು ಬೇಕಾಗಿರಲಿಲ್ಲ. ಜೆನ್ನರನು ಹಳ್ಳಿಗೇ ನಡೆದನು.

ಸಾವಿರದ ಏಳುನೂರ ತೊಂಭತ್ತೆಂಟರಲ್ಲಿ ಜೆನ್ನರನ ಸಾಧನೆಯ ಸಾರವನ್ನು ಸಂಗ್ರಹಿಸಿದ ಸುಮಾರು ಎಪ್ಪತ್ತು ಪುಟಗಳ ಚಿಕ್ಕ ಹೊತ್ತಗೆಯು ಹೊರಬಿದ್ದಿತು. ಅವನಿಗೆ ಸಿಡುಬನ್ನು ತಡೆಗಟ್ಟುವ ವಿಧಾನವು ತಿಳಿದು ಬಂತಾದರೂ ಅದಕ್ಕೆ ಕಾರಣವು ಅವನಿಗೆ ತಿಳಿಯಲಿಲ್ಲ. ಅದಕ್ಕೆ ಕಾರಣವನ್ನು ಸುಮಾರು ನೂರು ವರ್ಷಗಳ ಬಳಿಕ 'ರೊಬರ್ಟ್ ಕೊಕ್' (Robert Koch) ಎಂಬ ಜರ್ಮನ್ ಡಾಕ್ಟರನೊಬ್ಬನು ಕಂಡುಹಿಡಿದನು.

ಮಿಲಿಯಗಟ್ಟಲೆ ಜನರ ಜೀವಗಳನ್ನೂ, ರೂಪವನ್ನೂ ಉಳಿಸಿದ ಜೆನ್ನರನನ್ನು ಒಂದು ಕಾಲದಲ್ಲಿ ತಾತ್ಸಾರದಿಂದ ಕಂಡರು, ಹೀಯಾಳಿಸಿದರು, ಬೈದರು. ಆದರೆ ಅವನು ಧೃತಿಗೆಡಲಿಲ್ಲ. ತನ್ನ ಕೆಲಸವನ್ನು ಮುಂದುವರಿಸಿದನು. ಅವನ ಜೀವಮಾನದಲ್ಲೆ ಭೂಲೋಕದ ಸರ್ವ ನಾಗರಿಕ ರಾಷ್ಟ್ರಗಳಲ್ಲೂ ದಾಕುಹಾಕುವ ಕ್ರಮವು ವ್ಯಾಪಿಸಿತು. ಡಾಕ್ಟರ್ ಜೆನ್ನರನು ಮಾನವಕೋಟಿಯ ಉದ್ಧಾರಕ್ಕಾಗಿ ಹೊರಟು, ಅದನ್ನು ಸಾಧಿಸಿ ಶಾಶ್ವತವಾದ ಕೀರ್ತಿಯನ್ನು ಗಳಿಸಿದನು.

(ಸಂಪೂರ್ಣ ಹಕ್ಕುಗಳು ಲೇಖಕರದು)

(ಲೇಖಕ:
ಶ್ರೀ। ಕುಮಾರ ವೆಂಕಣ್ಣ,
ಬೆಂಗಳೂರು)

ವಿಜಯನಗರದ ಕೊನೆ

ಇತಿಹಾಸದ ಭೀಕರ ಎಚ್ಚರಿಕೆ!

ಜನವರಿ ತಿಂಗಳು.

ಭಾರತ ಪ್ರಜಾರಾಜ್ಯವೆಂದು ಸಾರಲ್ಪಟ್ಟ ತಿಂಗಳು; ೨೬ನೇ ಜನವರಿ ಅಂಥ ದಿನ!

ಆದರೆ, ವಿಚಾರವಾದಿಯಾದ ಭಾರತೀಯನಿಗೆ, ಮುಖ್ಯವಾಗಿ ಕನ್ನಡಿಗನಿಗೆ ಇದು ಎಂದೆಂದೂ ಮರೆಯಲಾಗದ ತಿಂಗಳು; ಭಾರತ ಇತಿಹಾಸದಲ್ಲಿ ಈ ತಿಂಗಳಲ್ಲಿ ನಡೆದ ಘಟನೆಗಳು ರಕ್ತಾಕ್ಷರಗಳಲ್ಲಿ ಬರೆಯಲ್ಪಟ್ಟವೆ.

ಈ ತಿಂಗಳಲ್ಲಿ ನಡೆದ ಘಟನೆಗಳನ್ನು ಅರಿತು, ಅದಕ್ಕೆ ಕಾರಣವಾದ ಪರಿಸ್ಥಿತಿಗಳನ್ನು ಅರ್ಥಮಾಡಿಕೊಂಡು ಮುನ್ನಡೆಯದಿದ್ದುದರಿಂದಲೇ ಭಾರತವು ದಾಸ್ಯತೆಗೆ ಒಳಗಾಯಿತು, ಸುಲಿಗೆಗೆ ಸಾಧನವಾಯಿತು, ಕೃತಿಯನ್ನು ಮರೆತ ಮಾತುಗಾರರ ಮಲ್ಲಸಜ್ಜನವಾಯಿತು.

ಭಾರತ ಪ್ರಜಾರಾಜ್ಯವಾಯಿತು— ಎಂದು ನಲಿದಾಡುವ ಮಹಾನಾಯಕರು, ಅವರ ಹಾಡಿಗೆ ಕುಣಿಯುವ ಸಾವಿರಾರು ಮಂದಿ ಈ ತಿಂಗಳಲ್ಲಿ ಹಿಂದೆ ನಡೆದ ಕತೆಯ ಅರಿವು ಮಾಡಿಕೊಂಡು ಮುನ್ನಡೆಯಬೇಕಾಗಿದೆ. ಅಂದಿನ ತಪ್ಪುಗಳನ್ನೇ ಇಂದೂ ಮಾಡುತ್ತಿರುವ ಇವರು ಈ ದಿನದ ನಲಿವು ಮುಂದಿನ ತುತ್ತಾಗದಿರುವಂತೆ ಎಚ್ಚರಿಕೆ ವಹಿಸಬೇಕಾಗಿದೆ.

ಕನ್ನಡಿಗರಲ್ಲದ, ಕನ್ನಡತನವಿಲ್ಲದ, ಕನ್ನಡನಾಡನ್ನು ವ್ಯಾಪಾರದ ಸಾಧನವಾಗಿ ತಿಳಿದು ಹೆಚ್ಚು ಬೆಲೆ ತೆರುವವರಿಗೆ ವಿಕ್ರಯಿಸಲೂ ಸಿದ್ಧರಾದ ನಾಯಕರನ್ನು ನಂಬಿ ಮೋಸ ಹೋದ ಕನ್ನಡ ಜನತೆಯೂ ಈ ತಿಂಗಳ ಕತೆ ನೆನೆಯಬೇಕು.

ಪ್ರಜಾರಾಜ್ಯವೆಂದು ಸಾಮ್ರಾಜ್ಯಶಾಹಿ ರಥಕ್ಕೆ ಇನ್ನೂ ಅಂಟಿಕೊಂಡಿರುವ ಭಾರತವನ್ನು ಕರೆಯುತ್ತ; ಸಾಮ್ರಾಜ್ಯಶಾಹಿಗಳಿಗೆ ದೇಶದಲ್ಲಿ ಎಡೆಕೊಟ್ಟು, ಅವರ 'ಏಜಂಟ'ರುಗಳಿಗೆ ಸರ್ವಾಧಿಕಾರ ನೀಡಿ, ಲಾಭವೊಂದೇ ಧ್ಯೇಯವಾಗಿರುವವರನ್ನು ದೇಶದ ನಾಯಕರೆಂದು ಕರೆದು, ವೈರಿಯ ಶಕುನಿ ಸಚಿವತ್ವಕ್ಕೆ ಬಾಗಿ ರಾಜ್ಯವಾಳಲೆಳಸುವ ಭಾರತ ಮಹಾನಾಯಕರು ಹಳೆಯ ಕತೆ ಅರ್ಥಮಾಡಿಕೊಳ್ಳಬೇಕು. ಸೇನಾಧಿಕಾರವನ್ನು ವೈರಿಯ ಪಡೆಯುವರ ಕೈಗೊಪ್ಪಿಸಿ, ಆರ್ಥಿಕ ಶಕ್ತಿಸಂಪತ್ತನ್ನು ಸಾಮ್ರಾಜ್ಯಶಾಹಿಗಳಿಗೆ ದಾನಮಾಡಿ, "ಪ್ರಜಾರಾಜ್ಯ" ನಡೆಸುತ್ತಿರುವ ಇತಿಹಾಸದ ಪ್ರತಿಬಿಂಬಗಳು ಭಾರತ ಇತಿಹಾಸವನ್ನು ಇನ್ನೊಮ್ಮೆ ಓದಬೇಕು.

ಜನವರಿ ೧೩೯೮ರಲ್ಲಿ—

ತೈಮೂರನ ಗಧಾಪ್ರಹಾರಕ್ಕೆ—ದೆಹಲಿಯ ಸೇನೆ ಶರಣಾಯಿತು. ಅವನ ಅಶ್ವಾರೋಹಿಗಳು ಕ್ರೂರ ಸೇನೆ ದೇಹಲಿಯನ್ನು ಪ್ರವೇಶಿಸಿ ಕೊಲೆ, ಸುಲಿಗೆ, ಅತ್ಯಾಚಾರ, ಧ್ವಂಸ, ದಾಸ್ಯಗಳ—ಮಹಾಯಾಗ ನಡೆಸಿತು.

ಜನವರಿ ೨೩—೧೫೬೫—

ದಖ್ಖನಿನ ನಾಲ್ವರು ಸುಲ್ತಾನರ ಸಂಯುಕ್ತ ಸೇನೆ ವಿಜಯನಗರದ ಸೇನೆಯನ್ನು ಪೂರ್ಣ ನಾಶಪಡಿಸಿ, ಸುಮಾರು ಒಂದು ಲಕ್ಷ ಸೈನಿಕರನ್ನು ಕೊಲೆಮಾಡಿತು. ಎಂಭತ್ತು ವರ್ಷದ ಮಹಾಮಂತ್ರಿ ರಾಮರಾಯ ವೈರಿಯ ಖಡ್ಗಕ್ಕೆ ತಲೆ ಕೊಟ್ಟ. ರಾಜಧಾನಿಯು ನೆಲಸಮವಾಯಿತು. ರಕ್ಕಸ ತಂಗಡಿಯಲ್ಲಿ ನಡೆದ ಈ "ತಾಳಿಕೋಟೆ" ಸಮರದಲ್ಲಿ ಕರ್ನಾಟಕದ ಸಾಮ್ರಾಜ್ಯ-ವೈಭವ ಎಂದೆಂದೂ ತಲೆ ಎತ್ತದಂತೆ ಅಳಿಯಿತು. ಆ ಕಾಲದ ಅತ್ಯಂತ ವೈಭವಯುಕ್ತ, ಸಂಪದ್ಯುಕ್ತ, ಮಹಾನಗರ ನೆಲಸಮವಾಯಿತು.

ಜನವರಿ ೧೭೬೧ —

ಪಾಣಿಪತದ ಸಮರ ನಡೆಯಿತು. ಎರಡು ತಿಂಗಳ ಸತತ ಹೋರಾಟದ ನಂತರ ಅಫಘನ್ ಆಕ್ರಮಣಕಾರಿ ಅಹಮ್ಮದ್‌ಶಾ ಅಬ್ದಾಲಿ, ಮಹಾರಾಷ್ಟ್ರೀಯರ ಸೇನೆಯನ್ನು ನಿರ್ನಾಮಗೊಳಿಸಿದನು. ಅವನ ಸೇನೆ ಚಿಕ್ಕದು; ಆದರೆ ವಿಧೇಯರಾದ ಸೈನಿಕರು, ಶಿಸ್ತು, ತರಬೇತಿ, ಉತ್ತಮ ಶಸ್ತ್ರಾಸ್ತ್ರ ಅವನಲ್ಲಿತ್ತು. ಸೈನ್ಯಾಧಿಕಾರಿಯಾದ ಅಬ್ದಾಲಿ ಚಾಣಾಕ್ಷ, ಶಾಂತಚಿತ್ತ, ಅಸಮಾನ ಸಮರತಂತ್ರಜ್ಞ, ಮರಾಟ ಸರದಾರರೆಲ್ಲರ ಸೇನೆಗಳ ಸರ್ವಾಧಿಕಾರಿ ಸದಾಶಿವ ರಾವು ಭಾವೋ ಚಾಣಾಕ್ಷನಾದರೂ, ವೀರನಾದರೂ ಶೀಘ್ರ ಕೋಪಿ, ದುಡುಕು ಸ್ವಭಾವದವನು. ತನ್ನ ಕೈಕೆಳಗಿನವರ ರಚನಾತ್ಮಕ ಸಲಹೆಗಳಿಗೆ ಕಿವಿಗೊಡದಷ್ಟು ಅಹಂಭಾವಿ. ಎಂತಲೇ ಸುಮಾರು ಎರಡು ಲಕ್ಷ ಸೈನಿಕರು ಸಮರಮಾರಿಗೆ ಬಲಿಯಾದರು; ಭಾರತ ಸ್ವತಂತ್ರವಾಗುವ, ಪ್ರಜಾರಾಜ್ಯವಾಗುವ ಆಶೆ ಅಳಿಯಿತು.

ವೈಮರೆತ ಮಾಂಡಲಿಕರು

ಇವುಗಳಲ್ಲೆಲ್ಲ ಅತಿಪೂರ್ಣವೂ ಶೀಘ್ರವೂ ನಡೆದ ವಿನಾಶ ತಾಳಿಕೋಟೆಯದು; ವಿಜಯನಗರ ಸಾಮ್ರಾಜ್ಯ ಎಂದೆಂದೂ ತಲೆ ಎತ್ತದಂತೆ ಅಳಿದುಹೋಯಿತು; ಆ ಮಹಾನಗರ ಅವಶೇಷದ ಸಮಾಧಿಯಿಂದ ಇನ್ನೂ ತಲೆ ಎತ್ತಲಿಲ್ಲ. "ಜಗತ್ತಿನ ಇತಿಹಾಸದಲ್ಲಿ ಇಂತಹ ಆಘಾತ ಎಂದೂ ಆಗಿರಲಾರದು; ಅಂಥ ಅದ್ಭುತ ನಗರದ ಮೇಲೆ, ಸಂಪತ್ತು ಮತ್ತು ಕ್ರಿಯಾಶೀಲ ಜನತೆಯಿಂದ ತುಂಬಿದ್ದ ನಗರದ ಮೇಲೆ, ಅಷ್ಟು ಶೀಘ್ರವಾದ ಆಘಾತ ಉಂಟಾಗಿರಲಾರದು" ಎಂದು ಇತಿಹಾಸಕಾರರು ಉದ್ಗಾರವೆತ್ತಿದ್ದಾರೆ. ಹುಡಿಗೂಡಲು ನಾಶಪಡಿಸಲು ಸಾಧ್ಯವಾದುದೆಲ್ಲವನ್ನು ವೈರಿಗಳು ನಾಶಪಡಿಸಿದರು. ಆ ನಗರದ ಮೇಲ್ಮೆಯನ್ನು ವೈಭವವನ್ನು ಅರ್ಥಮಾಡಿಕೊಳ್ಳುವುದೂ ಅಸಾಧ್ಯವಾಗುವಂತೆ ಮಾಡಿದರು.

ಆದರೂ, ವಿಜಯನಗರದ ನಾಶಕ್ಕೆ ಅಂದಿನ ಚಕ್ರವರ್ತಿಗಳು, ಅವರ ಮಾಂಡಲಿಕರು ಕಾರಣ ಎಂದು ಹೇಳಬಹುದು. ತಾವು ತಮಗೆ ಇದಿರಿಲ್ಲ ಎಂದು ತಮ್ಮನ್ನೇ ಮರೆತು ಬಾಳಿ ಮೆರೆದರು. ವೈರಿ ತನ್ನ ಶಕ್ತಿ ಬೆಳೆಸಿಕೊಳ್ಳುತ್ತಿದ್ದುದನ್ನು ತಿಳಿದೂ ಸುಮ್ಮನಾದರು. ತಾಳಿಕೋಟೆಯ ಸಮರಕ್ಕೆ ೧೨೦ ವರ್ಷಗಳಿಗೆ ಹಿಂದೆಯೇ ಈ ಸಾಮ್ರಾಜ್ಯದ ನಾಶದ ಬೀಜವನ್ನು ಎರಡನೇ ದೇವರಾಯ ಬಿತ್ತಿದ. ವೈರಿಯ ಪಾಳೆಯದಲ್ಲಿದ್ದ ಸೈನಿಕರನ್ನೂ ಸೈನ್ಯಾಧಿಕಾರಿಗಳನ್ನೂ ತನ್ನ ಸೇನೆಗೆ ಸೇರಿಸಿಕೊಂಡ. ಮತ್ತೆ ಈ ದುರಂತಕ್ಕೆ ಇಪ್ಪತ್ತು ವರ್ಷಗಳ ಪೂರ್ವದಲ್ಲಿ ವೈರಿಗಣದಲ್ಲಿನ ಆಂತರಿಕ ಕಲಹಗಳನ್ನು ಬಗೆಹರಿಸಲು ರಾಮರಾಯ ಮುಂದಾಗುತ್ತಲಿದ್ದ. ಆಕ್ರಮಣಶೀಲರು ಆಕ್ರಮಣ ನೀತಿಯಲ್ಲಿ ಎಂದಾದರೂ ಒಂದಾಗುತ್ತಾರೆ; ಇನ್ನೊಂದು ರಾಜ್ಯ ಕಬಳಿಸುವ ಸಂದರ್ಭದಲ್ಲಿ ತಮ್ಮ ಆಂತರಿಕ ಹೋರಾಟಗಳನ್ನು ಅವರು ಮರೆಯುತ್ತಾರೆ ಎಂಬುದು ಈ ಮಹಾಮಂತ್ರಿಗೆ ಅರಿವಾಗಲಿಲ್ಲ. ತನ್ನ ಪರರಾಷ್ಟ್ರ ನೀತಿಯಿಂದ ನಿಜವಾದ ಸ್ನೇಹಿತರನ್ನಾತ ಕಳೆದುಕೊಂಡ. ವೈರಿಗಳ ಸ್ನೇಹಗಳಿಸಲು ಮುಂದಾಗಿ ತನ್ನ ಸಾಮ್ರಾಜ್ಯದ ಸಮಾಧಿ ತಾನೇ ತೋಡಿಕೊಂಡ. ಜತೆಗೆ ತನ್ನ ದೇಶದಲ್ಲಿ, ಸೇನೆಯಲ್ಲಿ ತುಂಬಿದ್ದ ಪರರಾಷ್ಟ್ರ ಬಂಧುಗಳನ್ನು ಇರಗೊಳಿಸಿ ಪ್ರೋತ್ಸಾಹಿಸಿದ. ಅಂತೂ, ತನ್ನ ರಾಷ್ಟ್ರದ ನಾಶಕ್ಕೆ ಬೇಕಾದ ಎಲ್ಲ ನೀತಿಗಳನ್ನು ಆತ ಸದುದ್ದೇಶದಿಂದಲೇ ಸಾಧಿಸಿದ.

ಜಾತಿಗೆಟ್ಟ ಹಿಂದುಗಳು

ಈ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ವಿಜಯನಗರದ ಇತಿಹಾಸವನ್ನು ನೋಡಬೇಕು. ರಾಜ್ಯದ ಹುಟ್ಟು ಬೆಳವಣಿಗೆಗಳನ್ನು ತಿಳಿದಾಗ ಅದೇಕೆ ಅಷ್ಟು ಶೀಘ್ರವಾಗಿ ನಾಶವಾಯಿತೆಂಬ ಅರಿವಾಗಬಹುದು.

ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಖಿಲ್ಜಿ ಅರಸರ ಸೇನೆ ದಕ್ಷಿಣದ ಮೇಲೆ ದಂಡಯಾತ್ರೆ ಆರಂಭಿಸಿತು. ೧೩೦೭ರಲ್ಲಿ ದೇವಗಿರಿ ಸೋತುಹೋಯಿತು. ೧೩೨೩ರಲ್ಲಿ ವಾರಂಗಲ್, ೧೩೧೦ರಲ್ಲಿ ದ್ವಾರಸಮುದ್ರ, ಹಾಗೇ ಮುಂದೆ ೧೩೧೧ರಲ್ಲಿ ಮಧುರೆಯೂ ಉರುಳಿತು. ಎಲ್ಲೆಲ್ಲೂ ಆಕ್ರಮಣಕಾರಿಗಳ ನೀತಿ ಒಂದೇ; ಕೊಲೆ, ಹಿಂಸೆ, ಅತ್ಯಾಚಾರ, ಸುಲಿಗೆ, ಲೂಟಿ, ದಹನ! ಶತಮಾನಗಳಿಂದ ಈ ಅರಸೊತ್ತಿಗೆಗಳು ಇಲ್ಲಿನ ಜನತೆ ಕೂಡಿದ್ದ ಧನಕನಕ ದೇಹಲಿಗೆ ಒಯ್ಯಲ್ಪಟ್ಟಿತು. ಅಲ್ಲಿಂದ ಮುಂದೆ ತೈಮೂರನ ಮಹಾಸೇನೆ ಅದನ್ನು ಒಯ್ದು ಮಧ್ಯಏಷ್ಯದ ಮರುಭೂಮಿಯಲ್ಲಿ ಹರಡಿತು!

ಖಿಲ್ಜಿ ಚಕ್ರವರ್ತಿಗಳ ಆಕ್ರಮಣ ಸಾಗಿದ್ದಾಗ, ವಾರಂಗಲ್ ಅರಸನ ಆಸ್ಥಾನದಲ್ಲಿ ಐದು ಮಂದಿ ಸಹೋದರರು ಕೆಲಸ ಮಾಡುತಿದ್ದರು. ಅವರಲ್ಲಿಬ್ಬರು ಹರಿಹರ ಮತ್ತು ಬುಕ್ಕ. ತಮ್ಮ ರಾಜ್ಯ ಅಳಿಯಲು ಅವರು ತುಂಗಭದ್ರಾನದಿಯ ಉತ್ತರಕ್ಕಿದ್ದ ಆನೆಕೊಂಡಿ ಸಂಸ್ಥಾನಕ್ಕೆ ತೆರಳಿದರು. ಆನೆಕೊಂಡಿಯೂ ತುರುಕರಿಗೆ ಬಲಿಯಾಗಲು, ಇವರು ಸೆರೆಯಾದರೆಂದೂ, ಅವರನ್ನು ಬಲಾತ್ಕಾರಿಕವಾಗಿ ಮುಸ್ಲಿಮರನ್ನಾಗಿ ಮಾಡಲಾಯಿತೆಂದೂ ಇಬ್ಬರು ಮುಸ್ಲಿಂ ಇತಿಹಾಸಕಾರರು ಬರೆದಿದ್ದಾರೆ.

ಹೀಗೆ ಮುಸಲ್ಮಾನರಾದ ಈ ಇಬ್ಬರು ತಮ್ಮ ಚಕ್ರವರ್ತಿಯ ಪ್ರತಿನಿಧಿಯಾಗಿ ದಕ್ಷಿಣಕ್ಕೆ ಬಂದರು. ಹಿಂದಿನ ಧರ್ಮದ ನೆನಪು ಸುಳಿದು ವಿದ್ಯಾರಣ್ಯ ಮಾಧವಾಚಾರ್ಯರ ಪ್ರಭಾವಕ್ಕೆ ಒಳಗಾದರು. ಪುನಃ ಹಿಂದೂಗಳಾದರು.

ವಿಜಯನಗರದ ಸ್ಥಾಪನೆ

೧೩೩೬ರಲ್ಲಿ ಧಾರ್ಮಿಕ ಆಕ್ರಮಣಗಳಿಗೆ, ಸಮರಗಳಿಗೆ, ದೂರವಾಗಿ ತುಂಗಭದ್ರಾನದಿಯ ದಕ್ಷಿಣಕ್ಕೆ ಹರಿಹರ ಮತ್ತು ಬುಕ್ಕ ಪಟ್ಟಣವೊಂದನ್ನು ಸ್ಥಾಪಿಸಿ ಅದನ್ನು ವಿಜಯನಗರವೆಂದು ಕರೆದರು. ದೆಹಲಿಯ ಚಕ್ರವರ್ತಿಗಳಿಗೆ ಕಪ್ಪಕಾಣಿಕೆ ಸಲ್ಲಿಸಲು ಅವರು ನಿರಾಕರಿಸಿದರೂ, ಅರಸರೆಂದು ಮೆರೆಯಲು ಹಿಂಜರಿದರು ಮುಂದಿನ ನಲ್ವತ್ತು ವರ್ಷಗಳು ದಕ್ಷಿಣದ ಇತಿಹಾಸದಲ್ಲಿ ಸುಪ್ರಸಿದ್ಧವಾದುವು.

೧೮೩೫ರಲ್ಲಿ ಮಧುರೆಯ ಸುಲ್ತಾನರ ಪ್ರಭಾವ ಬೆಳೆದು ನಿಂತಿತ್ತು. ಮಹಮ್ಮದ್ ತಗ್ಲಖ್ ಅವರನ್ನು ಸೋಲಿಸಲು ಯತ್ನಿಸಿ ವಿಫಲನಾದ. ಆದರೆ ತುರ್ಕಿಯರ ಆಕ್ರಮಣಾನಂತರ ಚೇತರಿಸಿ ನಿಂತ ದ್ವಾರಸಮುದ್ರದ ಹೊಯಿಸಳ ಬಲ್ಲಾಳರು ಮಧುರೆಯನ್ನು ಗೆದ್ದರು. ಇನ್ನೊಂದೆಡೆ ಬಹಮ್ಮನಿ ಸುಲ್ತಾನರು ತಗ್ಲಖ್ ಆಳ್ವಿಕೆಯ ಕೊನೆಯ ಘಟ್ಟದಲ್ಲಿ, ೧೩೪೭ರಲ್ಲಿ, ತಲೆ ಎತ್ತಿನಿಂದು ವಿಜಯನಗರದ ಬಾಗಿಲಲ್ಲಿ ನಿಂತ ಮಾರಿಯಾಗಿದ್ದರು.

ಕೃಷ್ಣಾ–ತುಂಗಭದ್ರಾ ನದಿಗಳ ದಕ್ಷಿಣದ ಭಾರತವು ವಿಜಯನಗರದ ಮೂರನೇ ಅರಸನಾದ ಎರಡನೆ ಹರಿಹರನ ಅಂಕೆಯಲ್ಲಿ ನಿಂತಿತು. ಎಲ್ಲ ಪಾಳೆಯಗಾರರೂ, ಚಿಕ್ಕ ಪುಟ್ಟ ಅರಸರೂ ಜತೆಗೂಡಿ ನಿಂತರು. ಈತ ಮಹಾರಾಜಾಧಿರಾಜ ಎಂದು ಕರೆಯಿಸಿಕೊಂಡ. ಶಾಂತಿ ತೃಪ್ತಿ ವೈಭವಗಳು ಇಲ್ಲಿ ನೆಲೆಯೂರಿದುವು. ಉತ್ತರದಲ್ಲಿ ಬಹಮ್ಮನಿ ಸುಲ್ತಾನರು ತಮ್ಮ ಸೇನೆಯನ್ನು ಅಸಮಾನ ಕುದುರೆಯಾಳುಗಳಿಂದ, ಬಿಲ್ಗಾರರಿಂದ, ವೀರರಿಂದ ಬಲಪಡಿಸಿಕೊಳ್ಳುತ್ತ, ಸಮಯ ಕಾಯುತಿದ್ದರು.

ಸಂಪತ್ಸಮೃದ್ಧಿಯಿಂದ ವಿಜಯನಗರದ ಪ್ರಜಾಕೋಟಿ ಕಾಲಕಳೆಯುತ್ತ ತಮ್ಮ ಹಿಂದಿನ ಕತೆಯನ್ನು ಮರೆತರು. ಸಾಮ್ರಾಜ್ಯಶಾಹಿ ವೈರಿಯ ಶಕ್ತಿ ಬೆಳೆಯುತ್ತಿರುವುದನ್ನು ತಿಳಿಯಲೂ ನಿರಾಕರಿಸಿದರು. ಎಂತಲೇ ಮುಸ್ಲಿಮರು ಪದೇ ಪದೇ ವಿಜಯನಗರ ಸಾಮ್ರಾಜ್ಯದ ಮೇಲೆ ಆಕ್ರಮಣ ನಡೆಸಿ, ಆಕ್ರಮಣದ ಭೀತಿ ಹುಟ್ಟಿಸಿ, ತಮ್ಮ ಬೊಕ್ಕಸ ತುಂಬಿಕೊಳ್ಳುತ್ತ ಬರಲಾರಂಭಿಸಿದರು. ಮುಂದಿನ ೧೫೦ ವರ್ಷಗಳ ಕಾಲ ಈ ಆಟ ಹೀಗೇ ನಡೆದು ಲಕ್ಷಾಂತರ ಮಂದಿ ಹತರಾದರು. ಕಾರಣವಿಲ್ಲದೆ, ಕುಂಟು ನೆಪಹೇಳಿ, ಏನೇನೋ ತೆರಳಿ ತೆಗೆದು ಸಮರ ನಡೆಸುವುದೇ ಅವರಿಗೆ ಅಭ್ಯಾಸವಾಯಿತು. ಅನೇಕ ಹೋರಾಟಗಳು "ಕಪ್ಪಕಾಣಿಕೆ"ಗಳಿಗಾಗಿ ಸಾಗಿದುವು. ಒಂದು ಕಾಳಗ ಒಂದು ಹೆಣ್ಣಿಗಾಗಿ ನಡೆಯಿತು.

ಇಂಥ ಒಂದು ಸಮರವನ್ನು ನಡೆಸಿದ ಬಹಮ್ಮನಿ ಸುಲ್ತಾನ ಮೊದಲನೇ ಮುಹಮ್ಮದ್ ಶಹಾ, ಜನತೆಯನ್ನು ಕೊಲ್ಲುವುದಕ್ಕಾಗಿಯೇ ಆಟ ಹೂಡಿ ಲಕ್ಷ ಜನರನ್ನು ಕೊಂದ–ಸಂದರ್ಭವನ್ನು ಆಚರಿಸಿದ. ವಿಜಯನಗರ ಸೇನೆ ಸೋತು, ಆಗಣಿತ ಹಣವನ್ನಿತ್ತು ಸಂಧಾನಮಾಡಿಕೊಂಡಿತು. ಅವನ ನಂತರದ ಮುಜಾಹಿದ್ ಕಾಲದಲ್ಲಿ ವಿಜಯನಗರದ ಸೇನೆ ವಿಜಯಿಯಾಗಿ ಕೆಲಕಾಲ ರಾಯಚೂರು ಕೋಟೆಯನ್ನು ಹಿಡಿದುಕೊಂಡಿತ್ತು. ಈ ಕೋಟೆಯನ್ನೆ ನೆಪಮಾಡಿಕೊಂಡು, ಅನೇಕ ವೇಳೆ ಅದು ತಮ್ಮ ಅಂಕೆಯಲ್ಲೇ ಇದ್ದರೂ ಕೂಡಾ, ಬಹಮ್ಮನಿ ಅರಸರು ಆಕ್ರಮಣ ನಡೆಸುತಿದ್ದರು.

ಹೆಣ್ಣನ್ನು ಕೊಟ್ಟ ಹೇಡಿಗಳು

ಫಿರೋಸ್ ಬಹಮ್ಮನಿ ಪಟ್ಟವನ್ನೇರಿದೊಡನೆ ಪರಿಸ್ಥಿತಿ ಇನ್ನೂ ಜಟಿಲವಾಯಿತು. ವಿಜಯನಗರದ ಆಕ್ರಮಣ ತನ್ನ ಧರ್ಮವೆಂದು ತಿಳಿದು ಆತ ವರ್ತಿಸಿದ. ತಾನು ಕುಡಿದಾಗ ಕಳುಹಿದ್ದ ಪತ್ರದಂತೆ ಹಣಕೊಡಲಿಲ್ಲವೆಂದೊಮ್ಮೆ, ಮುದ್ಗಲ್‌ನ ಸುಂದರ ತರುಣಿಯನ್ನು ತನ್ನ ರಾಣೀವಾಸಕ್ಕೆ ಸೇರಿಸಿಕೊಂಡನೆಂದು ಇನ್ನೊಮ್ಮೆ ಆತ ಆಕ್ರಮಣ ನಡೆಸಿದ.

ಈ ಸುಲ್ತಾನರಿಂದ ಅತ್ಯಧಿಕ ಸಂಕಟಗಳಿಗೆ ಈಡಾದವನು ೧೪೨೨–೧೪೪೬ರ ವರೆಗೆ ವಿಜಯನಗರವನ್ನಾಳುತಿದ್ದ ಎರಡನೇ ದೇವರಾಯ. ಶಾಂತಿ ಸಂಧಾನ ಸಾಧಿಸಿಕೊಳ್ಳುವುದಕ್ಕಾಗಿ ತನ್ನ ಮಗಳನ್ನೇ ಬಹಮ್ಮನಿ ಅರಸರಿಗೆ ಅವನು ಕಾಣಿಕೆಯಾಗಿ ಕೊಡಬೇಕಾಯಿತು. ಆದರೂ ಕೂಡ, ಆ ವಿವಾಹಕಾಲದಲ್ಲಿ ಅವನು ಹರ್ಷಿತನಾಗಿರಲಿಲ್ಲ ಎಂಬ ಕಾರಣದಿಂದ ಮತ್ತಷ್ಟು ಅಮೂಲ್ಯ ಕಾಣಿಕೆ ಅವನು ಕೊಡಬೇಕಾಯಿತು.

ಇಂಥ ಆಕ್ರಮಣಗಳಿಂದ ಬೇಸರಗೊಂಡ ಜನತೆ ಇದು ತಮ್ಮ ಹಣೆಬರೆಹವೆಂದುಕೊಂಡು ನಿರಾಶರಾದರು. ಸರಕಾರವು ರಚನಾತ್ಮಕ ಕಾರ್ಯಗಳಿಗೆ ಕೈಯಿಕ್ಕಿತು. ಅರಮನೆಗಳೂ ದೇವಾಲಯಗಳೂ ತಲೆ ಎತ್ತಿದುವು. ವಿದ್ಯಾಕೇಂದ್ರಗಳು ಸ್ಥಾಪಿತವಾದುವು. ಉತ್ತರ ದೇಶದಿಂದಲೂ ವಿವಿಧ ಭಾಗಗಳಿಂದಲೂ ವಿದ್ಯಾವಂತರು ಇತ್ತ ಬರತೊಡಗಿದರು. ಗ್ರಂಥಗಳು ಬರೆಯಲ್ಪಟ್ಟುವು; ಸಂಸ್ಕೃತಿಯ ಬೆಳವಣಿಗೆಗೆ ಹೊಸ ಉತ್ಸಾಹ ದೊರೆಯಿತು. ಪಾಶ್ಚಿಮಾತ್ಯ ರಾಷ್ಟ್ರಗಳಿಂದಲೂ ಅನೇಕ ರಾಯಭಾರಿಗಳು ಈ ಆಸ್ಥಾನಕ್ಕೆ ಬಂದರು. ವಿಜಯನಗರದ ಕೀರ್ತಿ ಎಲ್ಲೆಡೆಗೂ ಹರಡಿತು.

ಆದರೆ, ಅತೀ ಅಗತ್ಯವಾದ ಸೇನೆಯ ಬಗೆಗೆ ವಿಜಯನಗರದ ಅರಸರು ಗಮನವೀಯಲಿಲ್ಲ. ಶಿಸ್ತು, ತರಬೇತಿಗಳಿಲ್ಲದ ಅಪ್ರಯೋಜಕರಿಂದ ಸೇನೆ ತುಂಬಿತ್ತು. ತನ್ನ ಸೈನ್ಯದಲ್ಲೂ ಕಾಲಾಳುಗಳೂ ಬಿಲ್ಲಾಳುಗಳೂ ಬೇಕು, ಮದ್ದುಗುಂಡುಗಳು ಬೇಕು ಎಂದು ತಿಳಿದು ಎರಡನೇ ದೇವರಾಯ ವೈರಿಗಣದಿಂದಲೇ ಸೈನಿಕರನ್ನು ಸೇರಿಸಿಕೊಂಡ. ಹೀಗಾಗಿ ಬಹಮ್ಮನಿ ರಾಜ್ಯದಲ್ಲಿದ್ದು ಹೋರಾಡುತಿದ್ದವರ ಕೈಗೇ ವಿಜಯನಗರದ ಸೇನೆಯೂ ಸಿಕ್ಕಿದಂತಾಯಿತು. ತನ್ನ ವಿಶಾಲದೃಷ್ಟಿ, ಧರ್ಮಾತೀತ ರಾಜ್ಯಭಾರ, ಉದಾರಹೃದಯದಿಂದ ದೇವರಾಯ ತನ್ನ ರಾಜ್ಯದ ಅಸ್ತಿಭಾರವನ್ನು ಉಳಿಸಲು ಬೇಕಾದ ಎಲ್ಲ ಕಾರ್ಯವನ್ನೂ ನಡೆಸಿದ. ಮಹಾಜನತೆಯೂ ತಮ್ಮ ಚಕ್ರವರ್ತಿಯಂತೆಯೇ ಧರ್ಮದ ಮದಿರೆಯಿಂದ ಮತ್ತರಾಗಿ ವಿಲಾಸದಲ್ಲಿ ಕಾಲಕಳೆಯುತ್ತ ಭವಿಷ್ಯವನ್ನು ಕಾಣದ ದೇವರ ಕೈಯಲ್ಲೂ ಕಾಣುವ ಸಾಮ್ರಾಜ್ಯಶಾಹಿಗಳ ಕೈಯಲ್ಲೂ ಬಿಟ್ಟುಕೊಟ್ಟರು.

ಸುವರ್ಣ ಯುಗ

ಎರಡನೇ ದೇವರಾಯನ ನಂತರ ಅವನ ಇಬ್ಬರು ಮಕ್ಕಳು–ಒಬ್ಬನ ನಂತರ ಇನ್ನೊಬ್ಬ ಅಧಿಕಾರಕ್ಕೇರಿದರು. ವಿಜಯನಗರ ಕುಸಿದು ಬೀಳುವ ಸ್ಥಿತಿಗೆ ಮುಟ್ಟಿತು. ಆಗ ಅದನ್ನುಳಿಸಲು ಸರ್ವಾಧಿಕಾರಿಯಾಗಿ ಸಾಳುವ ನರಸಿಂಹ ಬಂದನು. ಅದೇ ಸಂದರ್ಭದಲ್ಲಿ ಬಹಮ್ಮನಿ ಸುಲ್ತಾನರೂ ತಮ್ಮ ಆಂತರಿಕ ಸಮಸ್ಯೆಗಳಲ್ಲೇ ಪರಿತಪಿಸುತಿದ್ದರು. ೧೪೮೬

ರಿಂದ ೧೫೦೩ರ ಅಂತರದಲ್ಲಿ ಒಂದರ ಹಿಂದೊಂದು ಪ್ರಾಂತ್ಯದ ಮೇಲೇರಿ ನಡೆದು ಈತ ಐಕ್ಯತೆಯನ್ನು ಸಾಧಿಸಿದ. ಇವನ ಮುಂದೆ ಇವನ ಮಗ ಇಮ್ಮಡಿ ಸಾಳ್ವ ಪಟ್ಟವೇರಲು ಯತ್ನಿಸಿದನಾದರೂ ಅವನನ್ನು ತಳ್ಳಿ ತುಳುವ ಸೈನ್ಯಾಧಿಕಾರಿ ನರಸನಾಯಕ ಅಧಿಕಾರಕ್ಕೆ ಬಂದ.

೧೪೮೦ರಿಂದ ೧೫೨೦ರ ಅಂತರದಲ್ಲಿ ಬಹಮ್ಮನಿ ರಾಜ್ಯದ ಗವರ್ನರರೆಲ್ಲ ಬೇರೆ ಬೇರೆಯಾಗಿ ಸ್ವತಂತ್ರರಾದರು. ೧೫೦೯ರಲ್ಲಿ ಕೃಷ್ಣದೇವರಾಯನು ಪಟ್ಟವನ್ನೇರಿ ತುಳುವ-ಸಾಳ್ವ ವೈಮನಸ್ಸನ್ನು ಬಗೆಹರಿಸಿ, ಸಾಳುವ ತಿಮ್ಮರಾಯನನ್ನು ತನ್ನ ಮಂತ್ರಿಯಾಗಿ ನೇಮಿಸಿಕೊಂಡ. ಬಹಮ್ಮನಿ ಸುಲ್ತಾನರಲ್ಲಿ ಅನೈಕ್ಯತೆ ಉಂಟಾಗಿದ್ದುದರಿಂದ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ೨೧ ವರ್ಷಗಳ ಕಾಲ ಆಳ್ವಿಕೆ ನಡೆಸಿದ. ಇದು ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿ ಸುವರ್ಣಯುಗವಾಯಿತು. ಸಾಹಿತ್ಯ, ಕಲೆ, ಸಂಸ್ಕೃತಿಗಳು ಉನ್ನತ ಮಟ್ಟವೇರಿದುವು. ವಿಜಯನಗರದ ಕೀರ್ತಿ ವಿಶ್ವವ್ಯಾಪಿಯಾಯಿತು. ಇವನ ಸೇನೆಗೆ ಸೋಲೇ ಇಲ್ಲವಾಯಿತು; ಕೀರ್ತಿಗೆ ಕಳಂಕವಿರಲಿಲ್ಲ.

ಇದೇ ಕಾಲದಲ್ಲಿ ಪೋರ್ಚುಗೀಸರು ಗೋವೆಯಲ್ಲಿ ನೆಲೆನಿಂತು ವಿಜಯನಗರದ ಮಿತ್ರರಾದರು.

ವಿನಾಶ ಕಾಲ

ಕೃಷ್ಣದೇವರಾಯನೂ ತನ್ನ ಸೇನೆಯಲ್ಲಿ ವೈರಿದಳದವರನ್ನು ಸೇರಿಸಿಕೊಳ್ಳುವ ನೀತಿ ಬಿಡಲಿಲ್ಲ. ಗೋವೆ ಮೂಲಕ ಮದ್ದುಗುಂಡುಗಳನ್ನು ತರಿಸಿ ಬಲವಾದ ಸೇನೆ ಕಟ್ಟಬಹುದಾಗಿದ್ದರೂ ಹಾಗೆ ಮಾಡಲಿಲ್ಲ.

ಇವನ ನಂತರ ಪಟ್ಟವೇರಿದ ಅಚ್ಚುತರಾಯ ಇನ್ನೂ ವಿಚಿತ್ರ ಪ್ರಾಣಿ. ತನ್ನನ್ನು ಸೋಲಿಸಿದ ಕೃಷ್ಣದೇವರಾಯನ ಮರಣವನ್ನೇ ಇದಿರುನೋಡುತಿದ್ದ ಆದಿಲ್ ಶಹಾ ರಾಯಚೂರು ಕೋಟೆಯನ್ನು ಆಕ್ರಮಿಸಿದ. ಮುಂದೆ ಕೆಲಕಾಲದ ನಂತರ ಅಚ್ಚುತರಾಯ ತನ್ನ ಸರದಾರರಲ್ಲಿರುವ ಅನೈಕ್ಯತೆಯಿಂದಾಗಿ ಆದಿಲ್ ಶಹಾನನ್ನೆ ರಾಜಧಾನಿಗೆ ಬರಮಾಡಿಕೊಂಡು ಕೈತುಂಬ ಕಾಣಿಕೆ ಕೊಟ್ಟು ಕಳುಹಿದ.

ಈತನ ಮರಣಾನಂತರ ಅವನ ಮಗ-ಚಿಕ್ಕ ಬಾಲಕ-ಪಟ್ಟವೇರಿದ. ಅವನೂ ಅಲ್ಪಾವಧಿಯಲ್ಲೆ ಅಳಿದ ನಂತರ ಸದಾಶಿವರಾಯ ಅರಸನಾದ. ಆದರೆ ಆಳ್ವಿಕೆಯೆಲ್ಲ ಸಾಳುವ ತಿಮ್ಮನ ಮಕ್ಕಳಾದ ರಾಮರಾಯ ಮತ್ತಿಬ್ಬರ ಕೈಯಲ್ಲಿತ್ತು. ಆಗಲೇ ಅರುವತ್ತು ದಾಟದ್ದರೂ ರಾಮರಾಯ ಮಹಾಸಾಹಸಿ, ದೇಶಪ್ರೇಮಿ, ಬುದ್ಧಿಶಾಲಿ. ರಾಜಕಾರಣದಲ್ಲಿ ನಲ್ವತ್ತು ವರ್ಷಗಳ ಅನುಭವವಿತ್ತು. ಆದಿಲ್ ಶಹಾ ವಿಜಯನಗರಕ್ಕೆ ಬರಲು ಕಾರಣವಾದ ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂಬ

ನಿರ್ಧಾರವಮಾಡಿದ. ಆದರೆ, ಈತ ಸೇನೆಯ ಬಗೆಗೆ ಗಮನ ಕೊಡದೆ, ವೈರಿಗಳು ತಮ್ಮೊಳಗೆ ಒಂದುಗೂಡಲು ಅವಕಾಶವಿತ್ತು, ಅವರು ದಂಡೆತ್ತಿ ಬರುವ ವರೆಗೂ ಕಾದುನಿಂತು, ಕೊನೆಗೆ ರಣಭೂಮಿಯಲ್ಲಿ ಮಡಿದ; ಜತೆಗೆ ಒಂದು ಲಕ್ಷ್ಯ ಜನರನ್ನೂ ಕಳೆದುಕೊಂಡ. ರಾಜಕಾರಣದಲ್ಲೂ ಕೂಡಾ ದಕ್ಷಿಣದ ಸುಲ್ತಾನರಲ್ಲಿ ಸೌಹಾರ್ದ ಬೆಳೆಸಲು ಯತ್ನಿಸಿ ದುಡಿದ. ಎಲ್ಲರಿಗೂ ಹಿತಚಿಂತಕನಾಗಿ ಬಾಳಲೆಳಸಿ, ವೈರಿಗಳ ಸಂಘಟನೆಗೆ ಸಾಧಕನಾದ. ಜತೆಗೆ ಹೊಗಳುಭಟರೂ, "ಮಹಾಪಂಡಿತ"ರೂ ಇವನ ಸುತ್ತ ನಿಂತರು. ಪರಿಣಾಮವಾಗಿ ಧ್ಯೇಯವಾದಿಯಾದ, ಆದರ್ಶವಾದಿಯಾದ ರಾಮರಾಯ, ತನ್ನ ನೀತಿಯಿಂದಲೇ ತನ್ನ ಸಾಮ್ರಾಜ್ಯದ ನಾಶದ ಬೀಜ ಬಿತ್ತಿದ. ಮುಸ್ಲಿಮ್ ಅರಸರ ಒಳಜಗಳಗಳಲ್ಲಿ ಕೈಹಾಕಿ ಅವರ ದ್ವೇಷವನ್ನು ಕಟ್ಟಿಕೊಂಡು; ವೈರಿಗಳನ್ನು ನಾಶಪಡಿಸುವ ಬದಲಾಗಿ ರೇಗಿಸಿ ಹಿಂತಿರುಗಿಸಿ; ಬಹಮ್ಮನಿ ಸುಲ್ತಾನರೆಲ್ಲ ಪಾಟ ಕಲಿಯುವಂತೆ ಮಾಡಿ ತಾನು ಮಾತ್ರ ಯಾವ ಪಾಟವನ್ನೂ ಕಲಿಯದಾದ.

ಸುಲ್ತಾನರೆಲ್ಲ ತಮ್ಮ ದ್ವೇಷವನ್ನು ಹೋರಾಟದ ಕಹಿ ಅನುಭವದಿಂದ ಮರೆತು, ಜತೆಗೂಡಲಾರಂಭಿಸಿದರು. ವಿಜಯನಗರದ ನಾಶವೇ ತಮ್ಮ ಗುರಿ ಎಂದು ಎಲ್ಲರೂ ನಿರ್ಧರಿಸಿಕೊಂಡರು. ಅವರ ಸಮರಸಿದ್ಧತೆ ಏಳು ವರ್ಷಗಳ ಕಾಲ ಸಾಗಿತು. ಆದರೆ, ತನ್ನ ಬೆನ್ನು ತಾನೇ ತಟ್ಟಿಕೊಂಡು ರಾಮರಾಯ ಕರ್ತವ್ಯ ಮರೆತು ಕುಳಿತ. ಮುಸ್ಲಿಮರ ಮಹಾಸೇನೆ ತಾಳಿಕೋಟೆಯಲ್ಲಿ ಸೇರಿತು. ನೈಜಾಮ್ ಶಹಾ ಸರ್ವಸೇನೆಗಳ ದಂಡನಾಯಕನಾಗಿದ್ದ ಆ ಕಾಲದ ಅತ್ಯಂತ ಸುಸಜ್ಜಿತ ಸೇನೆ ಅದು. ವಿಜಯನಗರದ ಕಡೆ ಮೋಸ, ಕುತಂತ್ರ, ಆಲಸ್ಯ ವಿಲಾಸ ಪ್ರಿಯತೆಗಳಿಲ್ಲ ತುಂಬಿದ್ದುವು. ೧೫೬೫ರ ಜನವರಿ ೨೩ರಂದು ಇಕ್ಕಡೆಯ ಸೇನೆಗಳೂ ಕೊನೆಯ ಕಾಳಗಕ್ಕೆ ಸಿದ್ಧವಾದುವು. ರಾಮರಾಯನೇ ಸ್ವತಃ ಸರ್ವಸೇನಾನಾಯಕತ್ವ ವಹಿಸಿಕೊಂಡ. ಚಾಣಕ್ಯತೆಯಿಲ್ಲದೆ ಉತ್ಸಾಹ ಭರದಲ್ಲಿ ಸಮರ ಹೂಡಿ, ಕೈಕೆಳಗಿನವರನ್ನು ಪೂರ್ಣ ನಂಬಿ ಆತ ಸೋತ. ವಿಜಯ ನಗರ ಸೇನೆ ಸೋತು ಓಡಿತು.

ಸಮರರಂಗದಲ್ಲಿ ಸಾವಿಗಂಜದೆ ಸೈನಿಕರನ್ನು ಹುರಿದುಂಬಿಸಿ ಹೋರಾಡುತಿದ್ದ ರಾಯ, ವೈರಿಯ ಕೈಗೆ ಸಿಕ್ಕಿಬಿದ್ದ. ಅವನ ತಲೆಯನ್ನು ನೈಜಾಮ್ ಶಹಾ ತನ್ನ ಕೈಯಿಂದಲೇ ತುಂಡರಿಸಿ, ಅದನ್ನು ಭಲ್ಲೆಯ ತುದಿಗೆ ಸಿಕ್ಕಿಸಿ ಪ್ರದರ್ಶಿಸಿದ. ಸೈನಿಕರು ವಿಜಯೋತ್ಸವ ನಡೆಸಿದರು. ಕೈಗೆ ದೊರೆತುದೆಲ್ಲವನ್ನೂ ನಾಶಪಡಿಸಿದರು. ಲೂಟಿಮಾಡಿದರು. ನೆಲಸಮ ಮಾಡಿದರು.

ಇದು ವಿಜಯನಗರದ ವಿನಾಶದ ಕತೆ.

ಕೃಷ್ಣದೇವ ಮತ್ತು ಸಾಳ್ವ ತಿಮ್ಮನ ವಂಶಜರು ಮುಂದೆ ತಲೆ ಮರೆಸಿಕೊಂಡು ಎಲ್ಲೆಲ್ಲೋ ಬಾಳಿದರು. ಅಂತೂ ೧೭ನೆ ಶತಮಾನದ ವೇಳೆಗೆ ಕೊನೆಯ ವಂಶಜ ಶಹಜಹಾನ್, ಅವರಂಗಜೇಬ ಇವರನ್ನು ತನ್ನನ್ನು ಉಳಿಸುವಂತೆ ಬೇಡಿಕೊಳ್ಳುತಿದ್ದ ಕತೆ ತಿಳಿದುಬರುತ್ತದೆ.

ಸಮಾಧಿ ಶಾಂತಿ


ಭಾರತ ಈ ಕತೆ ಅರ್ಥಮಾಡಿಕೊಳ್ಳಬೇಕು. ಅಂತರರಾಷ್ಟ್ರೀಯ ಕೀರ್ತಿಗಳಿಸಿದ ಇಂದಿನ ಸರಕಾರ ತನ್ನನ್ನೂ ತನ್ನ ಜನಕೋಟಿಯನ್ನೂ ಮರೆತು ಮೈಮರೆದು ಕಾಲಕಳೆಯುತ್ತಲಿದೆ. ಜನತೆಗೆ ಅನ್ನವಿಲ್ಲ, ನೆಮ್ಮದಿಯಿಲ್ಲ, ರಕ್ಷಣೆಯಿಲ್ಲ. ಭಾರತ ಸೇನೆ ಸಾಮ್ರಾಜ್ಯಶಾಹಿಗಳ ನಾಯಕತ್ವದಲ್ಲಿದೆ. ಭಾರತದ ಮೂಲೆ ಮೂಲೆಗಳಲ್ಲೂ ಸಾಮ್ರಾಜ್ಯಶಾಹಿ ಏಜಂಟರು ತಮ್ಮ ನೆಲೆ ಸ್ಥಾಪಿಸಿಕೊಳ್ಳಲು ಅವಕಾಶಕೊಡಲಾಗಿದೆ.

ಕರ್ನಾಟಕದ ಮಾತೂ ಇದೇ. ನಮ್ಮ ನಾಯಕತ್ವ, ರಾಜ್ಯಾಡಳಿತ, ಪತ್ರಿಕೆಗಳು ಎಲ್ಲವೂ ಕನ್ನಡನಾಡಿನ ವೈರಿಗಳ ಕೈಗೆ ಸಾಗಿವೆ, ಸಾಗುತ್ತಿವೆ. ನಾಡಿನ ಏಕೀಕರಣಕ್ಕಾಗಿ ದುಡಿಯುತ್ತೇವೆ ಎಂದುಕೊಂಡು ಕೆಲವೊಂದು ನಾಡವೈರಿಗಳು ನಮ್ಮ ಚಳುವಳಿಯನ್ನು ಅಡ್ಡದಾರಿಗೆ ತಿರುಗಿಸಲು ಯತ್ನಿಸುತಿದ್ದಾರೆ. ಅಂತೂ ಕರ್ನಾಟಕ ಇಂದು ತನ್ನನ್ನೇ ತಾನು ಮರೆತು ಮಲಗಿದೆ.

ವಿಜಯನಗರದ ಕತೆ ನಮ್ಮಲ್ಲಿ ನವಚೇತನ ಮೂಡಿಸಿ ನಮ್ಮನ್ನು ಮುನ್ನಡೆಸಬೇಕಾಗಿದೆ. ನಮ್ಮನ್ನು ನಾವು ತಿಳಿದು ಹಿಂದೆ ಮಾಡಿದ ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆಯಬೇಕಾಗಿದೆ.

ಇಲ್ಲವಾದರೆ—

ದೇಶವೂ ನಾಡೂ ವಿಜಯನಗರದ ದಾರಿ ತುಳಿದೀತು.
ಇನ್ನೊಮ್ಮೆ ನಮ್ಮ ಸ್ವಾತಂತ್ರ್ಯ ನಾಶವಾದೀತು.
ಇದು ಈ ಜನವರಿ ತಿಂಗಳ ಎಚ್ಚರಿಕೆ.



ಶಿಶು ಸಂರಕ್ಷಣೆ

ಬರೆದವರು:
ಕಿರಣ್, ಬೆಂಗಳೂರು.

ಮಗುವಿನ ಆರೋಗ್ಯವು ಸಂಪೂರ್ಣವಾಗಿ ತಾಯಿಯ ಆರೋಗ್ಯವನ್ನವಲಂಬಿಸಿರುವುದು. ಆಕೆಯು ತನ್ನ ಆಹಾರ ವಿಹಾರಗಳ ವಿಚಾರದಲ್ಲಿ ಬಹಳ ಜಾಗರೂಕಳಾಗಿರಬೇಕು. ಶರೀರದಲ್ಲಿ ಸಾಕಷ್ಟು ಬಲವೂ ಉಷ್ಣವೂ ಉಂಟಾಗತಕ್ಕ ಆಹಾರವನ್ನು ಸೇವಿಸಬೇಕು. ಮಗುವಿಗೇನಾದರೂ ಕಾಯಿಲೆಯಾದರೆ ತಾಯಿ ತನ್ನ ಆರೋಗ್ಯದ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕೇ ಹೊರತು, ಹೆಚ್ಚಿನ ಔಷಧಿಗಳನ್ನು ಮಾಡ ಹೋಗಬಾರದು. ಮಗುವಿನ ದೇಹ ಪ್ರಕೃತಿಯು ಬಹಳ ಸೂಕ್ಷ್ಮವಿರುವುದರಿಂದ ಕೆಲವೊಮ್ಮೆ ಔಷಧಿಗಳಿಂದ ದುಷ್ಪರಿಣಾಮಗಳೇ ಹೆಚ್ಚು. ಮಗುವಿಗೆ ಸಾಧಾರಣವಾಗಿ ಕೆಮ್ಮು, ಶೀತ, ಅತಿಸಾರ, ಕಾಯಿಲೆಗಳಾದರೆ, ಹೆದರಿ ಔಷಧಿಗಳನ್ನು ಮಾಡುವುದರ ಬದಲು ರೋಗದ ಮೂಲ ಕಾರಣವನ್ನು ಕಂಡು ಹಿಡಿದು ಅದನ್ನೇ ತೆಗೆದು ಹಾಕಲು ಪ್ರಯತ್ನಿಸಬೇಕು. ನಿರುಪಯೋಗವಾಗಿ ಚಿಕಿತ್ಸೆಮಾಡಲು ಹೋಗಬಾರದು.

ತಾಯಿಯು ಮಗುವಿಗೆ ಕ್ಲುಪ್ತ ಸಮಯದಲ್ಲಿ ಹೊಟ್ಟೆಗೆ ಕೊಡಬೇಕು. ರಾತ್ರಿ ಚೆನ್ನಾಗಿ ನಿದ್ರೆ ಮಾಡಲು ಬಿಡುವುದು. ಮಲಬದ್ಧತೆಯಾಗದಂತೆ ನೋಡಿಕೊಂಡಿರಬೇಕು. ಮಗುವನ್ನು ಪರಿಶುದ್ಧವಾದ ಗಾಳಿಯಲ್ಲಿ ಮಲಗಿಸಬೇಕು. ಮಕ್ಕಳನ್ನು ಹೆಚ್ಚಾಗಿ ಯಾವಾಗಲೂ ಎತ್ತಿಕೊಳ್ಳಬಾರದು. ಪ್ರತೀದಿನ ಬಿಸಿನೀರಲ್ಲಿ (ಸ್ವಲ್ಪ ಬಿಸಿ) ಸ್ನಾನಮಾಡಿಸಬೇಕು. ಸ್ವಚ್ಛ ಮತ್ತು ಶಾಕವಾದ ಬಟ್ಟೆಗಳಿಂದ ಮೃದುವಾಗಿ ಒರಸಬೇಕು. ಕಣ್ಣು, ಕಿವಿ, ಬಾಯಿ, ಮೂಗು ಇವು ಶುಚಿಯಾಗಿರಿಸುವ ವಿಷಯದಲ್ಲಿ ಗಮನಕೊಡಬೇಕು. ಮೃದುವಾದ ಬೆಚ್ಚಗಿನ ವಸ್ತ್ರವನ್ನು ಹೊದಿಸುವುದು. ಅಂಗಿ ಚಡ್ಡಿ ಉಪಯೋಗಿಸುವುದು ಅಷ್ಟೊಂದು ಹಿತಕರವಲ್ಲ. ಈ ನಿಯಮಗಳನ್ನು ಪಾಲಿಸಿದರೆ ಹೆಚ್ಚಾಗಿ ಮಗುವಿಗೆ ಯಾವ ರೋಗವೂ ಉಂಟಾಗಲಾರದು.

ತಾಯಿಯ ಮೊಲೆಯಲ್ಲಿ ಸಾಕಷ್ಟು ಒಳ್ಳೆಯ ಹಾಲು ಇರುವ ವರೆಗೆ ಬೇರೆ ಅಹಾರ ಮಗುವಿಗೆ ಅಗತ್ಯವಿಲ್ಲ. ಕಮ್ಮಿಯಿದ್ದರೆ ಮಾತ್ರ ಹಸುವಿನ ಹಾಲಿಗೆ ನೀರು ಹಾಕಿ ಚೆನ್ನಾಗಿ ಕಾಯಿಸಿ ಕುಡಿಸಬಹುದು. ಮಕ್ಕಳಿಗೆ ಕ್ರಮೇಣ ಹಣ್ಣುಹಂಪಲುಗಳ ಅಹಾರ ಕೊಡುತ್ತಾ ಬಂದರೆ ರಕ್ತ ಶುದ್ಧವಾಗಿ ತೇಜಸ್ವಿಯಾಗಿಯೂ, ಬಲವಾಗಿಯೂ ಬೆಳೆಯುವುದು. ಹಲ್ಲು ಬರುವ ಮುಂಚೆ ಅನ್ನ ವಗೈರೆ ಕೊಡುವುದು ಹಿತಕರವಲ್ಲ. ಮಕ್ಕಳಿಗೆ ಚಾ ಕಾಫಿ ಅಭ್ಯಾಸಮಾಡಿಸಬಾರದು. ಮಕ್ಕಳು ಬರಿಕಾಲಿನಲ್ಲಿ ನಡೆದರೆ ಪಾದಗಳು ಬಲವಾಗುವ ಕಾರಣ ಚಿಕ್ಕಂದಿನಲ್ಲಿ ಬೂಟು ವಗೈರೆ ಹಾಕಬಾರದು. ಮಕ್ಕಳು ಹುಟ್ಟಿದ ಕೆಲವು ವಾರಗಳ ವರೆಗೆ ಅಗಾಗ್ಯೆ ಅಳುತ್ತಾ ಇರುತ್ತವೆ. ಇದು ಪ್ರಕೃತಿ ನಿಯಮ. ಇದಕ್ಕೆ ಹೆದರಬೇಕಾಗಿಲ್ಲ. ಅತ್ತಕೂಡಲೆ ಹಸಿವೆಗೊಂಡು ಅಳುತ್ತದೆಂದು ಯಾವಾಗಲೂ ಹಾಲು ಕೊಡುತ್ತಾ ಇರುವುದೂ ಒಳ್ಳೆಯದಲ್ಲ. ಸಣ್ಣದರಲ್ಲಿ ಆಗಾಗ್ಯೆ ಅಳುವುದರಿಂದ ಮಕ್ಕಳಿಗೆ ಶಕ್ತಿ ಬಂದು ಬಲಿಷ್ಠವಾಗುತ್ತವೆ. ಮಕ್ಕಳಿಗೆ ಅವರ ಪ್ರಾಯಕ್ಕನುಸಾರವಾಗಿ ಆಹಾರವನ್ನು ಕೊಡಬೇಕೇ ಹೊರತು ಅತ್ತಕೂಡಲೆ ಯಾವಾಗಲೂ ತಿಂಡಿ ತಿನಸುಗಳನ್ನು ಕೊಡಲೇಬಾರದು. ಹೀಗೆ ಕೊಡುವುದರಿಂದ ಹಲವಾರು ರೋಗಗಳುಂಟಾಗುತ್ತವೆ. ಮಕ್ಕಳಿಗೆ ಹೆದರಿಸುವುದು, ಶಿಕ್ಷಿಸುವುದು, ಮಿತಿಮೀರಿ ತಿನ್ನಿಸುವುದು, ನಿಷಿದ್ಧವಾಗಿದೆ. ಮಕ್ಕಳಿಗೆ ತಾಯಿತಂದೆಗಳ ಬಳಿಯಲ್ಲಿ ಸಿಕ್ಕಿದ ಶಿಕ್ಷಣ ಎಲ್ಲಿಯೂ ದೊರೆಯಲಾರದು. ಆದ್ದರಿಂದ ತಂದೆ ತಾಯಿಗಳು ಯೋಗ್ಯ ರೀತಿಯಿಂದ ಮಕ್ಕಳೊಡನೆ ವ್ಯವಹರಿಸಲು ಮರೆಯಬಾರದು. ಮಕ್ಕಳನ್ನು ನಿರೋಗಿಗಳಾಗಿ ಗುಣವಂತರಾಗಿ ಮಾಡುವುದು ತಂದೆತಾಯಿಗಳ ಕರ್ತವ್ಯವು. ಬಾಲ್ಯದಲ್ಲಿ ತೊದಲ್ನುಡಿಗಳನ್ನಾಡುವಾಗಲೇ ಶಬ್ದಜ್ಞಾನದ ಆರಂಭವಾಗುವುದು. ಆಗ್ಯೆ ಕೆಟ್ಟ ಶಬ್ದಗಳನ್ನು ಹೇಳಿಕೊಡದೆ ತಮ್ಮ ಕರ್ತವ್ಯವನ್ನರಿತುಕೊಂಡು ತಂದೆತಾಯಿಗಳು ಯೋಗ್ಯರೀತಿಯಿಂದ ಮಾತನಾಡಲು ಕಲಿಸಬೇಕು. ವಿಚಾರಶೀಲರಾದ ತಂದೆತಾಯಿಗಳು ಈ ಮೇಲಿನ ಸಂಗತಿಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಅತ್ಯಗತ್ಯ. ಮಗುವಿನ ಮುಂದಿನ ಏಳಿಗೆ ತಂದೆತಾಯಿಗಳನ್ನು ಅನುಸರಿಸಿಕೊಂಡಿದೆಯೆಂಬುದನ್ನು ಯಾವಾಗಲೂ ಮರೆಯಬಾರದು.

ಮಕ್ಕಳಿಗೆ ಸಣ್ಣ ಪ್ರಾಯದಲ್ಲಿ ಮುಖ್ಯವಾಗಿ ಕೆಲವು ಕಾಯಿಲೆಗಳುಂಟಾಗುತ್ತವೆ. ಆಗ್ಯೆ ಹೆದರದೆ ಕೆಳಗೆ ಬರೆದ ಚಿಕಿತ್ಸೆಯನ್ನು ಮಾಡುವುದು ಶ್ರೇಯಸ್ಕರ.

೧. ಮಲಬದ್ಧತೆ—Constipation.

ಕೆಲವು ಮಕ್ಕಳಿಗೆ ಸರಿಯಾಗಿ ಕಾಲಪ್ರವೃತ್ತಿಯಾಗುವುದಿಲ್ಲ. ಇದರಿಂದಾಗಿ ಅವು ಹಟಮಾರಿಗಳಾಗಿಯೂ ಅಸುಖಿ.


AWAIT
their Release
in your
TOWN
1953
HITS
from
BASANT
बसंत चित्र
नवदुर्गा
दिग्दर्शक:
बाबुभाई मिस्त्री
हुस्न का चोर
दिग्दर्शक:
जे. बी. एच. वाडीया
अलीबाबा और चालीस चोर
दिग्दर्शक:—
होमी वाडीया
ASHA ADVTS.

ಗಳಾಗಿಯೂ ಆಗುತ್ತವೆ. ಕೆಲವು ವೇಳೆ ಹೊಟ್ಟೆನೋವಿನಿಂದ ಅಳುತ್ತವೆ. ಆಗ್ಯೆ ಅದರ ಕಾರಣವನ್ನು ಕಂಡುಕೊಂಡು, ನೀರು ಬೆರಸಿದ ಹಸುವಿನ ಹಾಲು, ಅಥವಾ ಕಿತ್ತಳೆ ರಸ ಕೊಟ್ಟರೆ ಸರಿ ಹೋಗುವುದು. ಕೆಲವು ವೇಳೆ ತಾಯಿಗೆ ಎದೆ ಹಾಲು ಇಲ್ಲದೆಯೂ ಮಕ್ಕಳಿಗೆ ಮಲಬದ್ಧತೆಯಾಗುವುದುಂಟು. ತಾಯಿಯರಿಗೆ ಮಲಬದ್ಧತೆಯಿದ್ದರೆ ಮಕ್ಕಳಿಗೂ ಬರುತ್ತದೆ. ಆದ್ದರಿಂದ ತಾಯಿಯಾದವಳು ಮಲಬದ್ಧತೆಯಾಗದಂತೆ ಜಾಗ್ರತೆ ವಹಿಸಬೇಕು.

೨. ವಾಂತಿ—Vomit

ಕೆಲವು ಮಕ್ಕಳಿಗೆ ಹಾಲು ವಾಂತಿಯಾಗುತ್ತದೆ. ತಾಯಿಗೆ ಮೊಲೆಯಲ್ಲಿ ಹಾಲು ಹೆಚ್ಚಾಗಿದ್ದರೆ, ಹೀಗಾಗುವುದುಂಟು. ತಾಯಿಗೆ ಹಾಲು ಹೆಚ್ಚಾಗಿದ್ದರೆ ಅದನ್ನು ಸ್ವಲ್ಪ ಹಿಂಡಿ ತೆಗೆಯಬೇಕು. ಹೊಟ್ಟೆಗೆ ಕೊಡುವ ಅಂತರವನ್ನು ಸ್ವಲ್ಪ ಕಮ್ಮಿ ಮಾಡಿದರೂ ಸರಿಹೋಗುವುದು.

೩. ಅಳುತ್ತಾ ಇರುವುದು.

ಹಲವಾರು ಕಾರಣಗಳಿಂದ ಮಕ್ಕಳು ಅಳುತ್ತಾ ಇರುತ್ತವೆ. ಕೆಲವು ನಿದ್ದೆಗಾಗಿಯೋ, ಹಸಿವಿನಿಂದಲೋ, ಹೊಟ್ಟೆನೋವಿನಿಂದಲೊ, ಕಿವಿನೋವಿನಿಂದಲೊ ಅಳುತ್ತಾ ಇರುತ್ತವೆ. ಆಗ್ಯೆ ಸರಿಯಾದ ಕಾರಣವನ್ನು ಉಪಾಯವಾಗಿ ಕಂಡು ಹಿಡಿದು ಚಿಕಿತ್ಸೆಮಾಡಬೇಕು.

೪. ಅತಿಸಾರ— DIARRHOEA-DYSENTRY

ಆಹಾರ ದೋಷದಿಂದ, ಅತಿ ಆಹಾರದಿಂದ ಮಕ್ಕಳಿಗೆ ಅತಿಸಾರ ಉಂಟಾಗುತ್ತದೆ. ಆಗ್ಯೆ ಮೊದಲು ಆಹಾರವನ್ನು ಸರಿಪಡಿಸಿಕೊಳ್ಳಬೇಕು. ೨೦-೩೦ ತೊಟ್ಟು ಹರಳೆಣ್ಣೆ ಬಿಸಿ ನೀರಿನಲ್ಲಿ ಹಾಕಿ ಕೊಡಬೇಕು. ಕಿಬ್ಬೊಟ್ಟೆಯ ಮೇಲೆ ಒಂದು ಉಣ್ಣೆಯ ಪಟ್ಟಿ ಕಟ್ಟಬೇಕು. ಹೊಟ್ಟೆಗೆ ಹೆಚ್ಚಿಗೆ ಆಹಾರ ಕೊಡಬಾರದು. ಗ್ಲೂಕೋಸ್ ಕೊಡುವುದು ಉತ್ತಮ. ಅತಿಸಾರವನ್ನು ಕಡೆಗಣಿಸಿದರೆ ಆಮಶಂಕೆಯುಂಟಾಗುತ್ತದೆ. ಮಗುವು ರಕ್ತ, ಆಮವನ್ನು ಭೇದಿಮಾಡುತ್ತದೆ. ಆಗ್ಯೆ ಕೂಡಲೆ ವೈದ್ಯರಿಗೆ ತೋರಿಸಿ ಸರಿಯಾದ ಚಿಕಿತ್ಸೆ ಮಾಡಿಸಲು ಮರೆಯಬಾರದು. ಕೆಲವೊಮ್ಮೆ ಮಕ್ಕಳಿಗೆ ಮೇಲಿನ ಕಾಯಿಲೆಗಳು ಹಾಲು ಕುಡಿಸುವ ಬಾಟ್ಲಿಯ 'ನಿಪ್ಪಲ್' ದೋಷದಿಂದಲೂ, ಡಬ್ಬಿ ಹಾಲು ಕುಡಿಸುವುದರಿಂದಲೂ ಬರುತ್ತದೆ. ತಕ್ಷಣ ಇದನ್ನು ನಿಲ್ಲಿಸಬೇಕು.

೫. ಹೊಟ್ಟೆಯುಬ್ಬರ—

ಕೆಲವೊಮ್ಮೆ ಆಹಾರ ದೋಷದಿಂದ ಹೊಟ್ಟೆಯಲ್ಲಿ ವಾಯು ತುಂಬಿ, ಉಬ್ಬಸ ಬರುತ್ತದೆ. ಆಗ್ಯೆ ಆಹಾರ ಕೊಡುವುದನ್ನು ನಿಲ್ಲಿಸಿ ಸ್ವಲ್ಪ ಬಿಸಿ ನೀರು ಕುಡಿಸಬೇಕು. ಬಟ್ಟೆಯನ್ನು ನೀರಲ್ಲಿ ಅದ್ದಿ ಆಗಾಗ್ಯೆ ಹೊಟ್ಟೆಯ ಮೇಲೆ ಶೇಕಕೊಡುತ್ತಾಯಿದ್ದರೆ ಸರಿ ಹೋಗುವುದು.

೬. ಜ್ವರ, ಕೆಮ್ಮು, ನೆಗಡಿ— FEVER, COUGH, COLD, CATARRH.

ಸ್ನಾನದ ದೋಷದಿಂದಲೂ, ತಣ್ಣಗಿನ ಗಾಳಿ ಬೀಸುವುದರಿಂದಲೂ, ತಾಯಿಗೆ ನೆಗಡಿಯಾಗುವುದರಿಂದಲೂ, ಮಗುವಿಗೆ ನೆಗಡಿ, ತಲೆನೋವು, ಮೂಗಿನಲ್ಲಿ ನೀರು ಸುರಿಯುವುದು ಸ್ವಲ್ಪ ಮೈ ಬಿಸಿಯಾಗುತ್ತದೆ. ಬಿಸಿನೀರಿನ ಕಡಾಯಿಯಲ್ಲಿ (ಟಬ್) ಕೂಡಿಸಬೇಕು. ಇದರಿಂದ ತಲೆನೋವು ಕಡಿಮೆಯಾಗಿ ಜ್ವರ ಇಳಿಯುತ್ತದೆ. ಒಳ್ಳೆ ಮೆಣಸು ಹಾಕಿ ಕಾಯಿಸಿದ ಹಾಲನ್ನು ಕುಡಿಸಬೇಕು. ಅಥವಾ ವೈದ್ಯರಲ್ಲಿ ಯೋಗ್ಯ ಔಷಧಿ ಕೊಡಿಸಬೇಕು.

೭. ಚರ್ಮರೋಗSKIN DISEASE (Dermatitis)

ಮಕ್ಕಳಿಗೆ ತಂದೆ ತಾಯಿಗಳ ದೋಷಗಳಿಂದಲೂ ಪಾಚನಶಕ್ತಿಯ ವಿಕಾರದಿಂದಲೂ ಚರ್ಮದ ಮೇಲೆ ಹಲವು ರೀತಿಯ ಹುಣ್ಣುಗಳಾಗುತ್ತವೆ. ಆಗ್ಯೆ ಯಾವ ದೋಷದಿಂದ ಉಂಟಾಗಿದೆಯೆಂದು ತಿಳಿದುಕೊಂಡು ಚಿಕಿತ್ಸೆಮಾಡಬೇಕು.

೮ ಪಕ್ಷಿರೋಗ (RICKETS)

ಇದು ಮಕ್ಕಳಿಗೆ ಹೆಚ್ಚಾಗಿ ಆರನೆ ತಿಂಗಳ ನಂತರ ಬರುತ್ತದೆ. ಇದು ಕೃತಕ ಹಾಲಿನಿಂದ ಬರುವ ಕಾಯಿಲೆ. ಈ ಕಾಯಿಲೆ ಉಂಟಾದಾಗ ಮಕ್ಕಳ ಕೀಲುಗಳ ಬಳಿ ಇರುವ ಅಸ್ಥಿಗಳು ಬಲಹೀನವಾಗಿ ಕುರೂಪಿಯಾಗುತ್ತವೆ. ಎದೆಯ ಎಲುಬುಗಳು ಗುಳಿ ಬಿದ್ದು ಮುಂಗೈ ಎಲುಬುಗಳ ಕೆಳಭಾಗದ ಕೊನೆ ದಪ್ಪವಾಗುತ್ತದೆ. ತಲೆ ದೊಡ್ಡದಾಗಿ ಕಾಣುತ್ತದೆ. ರಾತ್ರಿ ಮೈ ಬಿಸಿಯಾಗಿರುತ್ತದೆ. ಯಾವಾಗಲೂ ನೆಗಡಿ, ಅತಿಸಾರ ರೋಗವಿರುತ್ತದೆ. ಇದಕ್ಕೆ ಹೆಚ್ಚಾಗಿ ಜೀವನೀಯ ಸತ್ವ A. ಮತ್ತು D ಯಿರುವ ಆಹಾರವನ್ನು ಕೊಡುತ್ತಾ ಬಂದರೆ, ಯೋಗ್ಯ ಚಿಕಿತ್ಸೆ ಮಾಡಿದರೆ ಸರಿಹೋಗುವುದು,

೯. ಬಾಲಗ್ರಹ CONVULSIONS.

ಮಕ್ಕಳಿಗೆ ಹೆಚ್ಚಾಗಿ ಬರುವ ರೋಗವೆಂದರೆ ಬಾಲಗ್ರಹ. ಆಗಾಗ್ಯೆ ಈ ರೋಗ ಕಾಣಿಸಿಕೊಳ್ಳುವುದುಂಟು. ತಾಯಿ ತಾನು ಕಲಿತ ಸಾಮಾನ್ಯ ಪ್ರಥಮ ಚಿಕಿತ್ಸೆಮಾಡಿ ನಿಲ್ಲಿಸಬಹುದು. ಮಗುವಿನ ದೇಹವನ್ನು ಬಿಸಿನೀರಿನ ತೊಟ್ಟಿಯಲ್ಲಿ ಅದ್ದಿ ಮಂಜುಗೆಡ್ಡೆ ಚೀಲದಿಂದ ತಲೆಗೆ ತಂಪುಕೊಡುವುದರಿಂದ ಬಾಲಗ್ರಹ ನಿವಾರಣೆಯಾಗುತ್ತದೆ. ಗ್ಲಿಸರಿನ್ ಎನಿಮಾ ಕೊಡಬಹುದು. ಆಗಾಗ್ಯೆ ಬರುತ್ತಾ ಇದ್ದರೆ ವೈದ್ಯರಿಗೆ ತೋರಿಸಿ ಚಿಕಿತ್ಸೆಮಾಡಿಸಬೇಕು.

೧೦. ನಾಯಿಕೆಮ್ಮು WHOOPING COUGH.

ಇದು ಉಂಟಾದಾಗ ಮೊದಲು ಸ್ವಲ್ಪ ಜ್ವರವಿದ್ದು ನಂತರ ಕೆಮ್ಮು ಪ್ರಾರಂಭವಾಗುತ್ತದೆ. ನಂತರ ಮಗು ಯಾವಾಗಲೂ ಕೆಮ್ಮುತ್ತಾ ಇರುತ್ತದೆ. ಕೆಮ್ಮುವಾಗ ಶಕ್ತಿ ಸಾಲದೆ ಶ್ವಾಸ ತೆಗೆದುಕೊಳ್ಳುವರೆ ಆಗದೆ ಮಕ್ಕಳು ಬಹಳ ಕಷ್ಟಪಡುತ್ತವೆ. ಮುಖ ಕೆಂಪಗಾಗುತ್ತದೆ. ಅದು ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆಯಾಗಿದೆ. ಮೂರು ನಾಲ್ಕು ವಾರಗಳ ನಂತರ ಮೆಲ್ಲಗೆ ಕಮ್ಮಿಯಾಗುತ್ತದೆ. ಕೆಲವು ಮಕ್ಕಳಿಗೆ ನಾಲ್ಕಾರು ತಿಂಗಳುಗಳ ತನಕ ಇರುವುದೂ ಉಂಟು. ಈ ಕಾಯಿಲೆ ಉಂಟಾದಾಗ ಮಕ್ಕಳ ಎದೆಗೆ ಗಾಳಿ ತಾಗದಂತೆ ಬಟ್ಟೆ ಹಾಕಿರಬೇಕು. ಯೋಗ್ಯ ಆಹಾರ ಔಷಧಿಗಳನ್ನು ಮಾಡಬೇಕು.

ಇಷ್ಟು ಮಾತ್ರವಲ್ಲದೆ ಸಣ್ಣ ಮಕ್ಕಳಿಗೆ ಯಕೃತ್ ವೃದ್ಧಿ, ಕಿವಿಯಲ್ಲಿ ಕೀವು ಸುರಿಯುವುದು, ಸವೆಯುವ ರೋಗ, ಕಂಠ ರೋಹಿಣಿ, ಕಣ್ಣುನೋವು, ಉದರ ಕ್ರಿಮಿ, ವಿಷಮ ಜ್ವರ, ಸಿಡುಬು, ರೇಷ್ಮೆರೋಗ, ಹಿಚಕಿ, ದಡಾರ ಮೊದಲಾದ ರೋಗಗಳುಂಟಾಗುತ್ತವೆ. ಆಗ್ಯೆ ಎಚ್ಚರಿಕೆ ತೆಗೆದುಕೊಂಡು, ರೋಗದ ಸರಿಯಾದ ಕಾರಣವನ್ನು ಕಂಡುಕೊಂಡು ಚಿಕಿತ್ಸೆಮಾಡಲು ತಂದೆತಾಯಿಗಳು ಯಾವಾಗಲೂ ಮರೆಯಬಾರದು. ಇಂದಿನ ಮಕ್ಕಳೆ ನಾಳಿನ ಜನಾಂಗ. ಭಾರತದ ಬಹುಮಂದಿ ತಂದೆತಾಯಿಗಳು ತಮ್ಮ ಅಜ್ಞಾನದಿಂದ ತಮ್ಮ ಮಕ್ಕಳ ಸಾವಿಗೆ ತಾವೇ ಕಾರಣರಾಗುತ್ತಾರೆ. ಜನರ ಅಜ್ಞಾನವನ್ನು ಹೋಗಲಾಡಿಸಿ, ಶಿಶುಸಂರಕ್ಷಣೆಯ ಕುರಿತು ಸರಿಯಾದ ತಿಳುವಳಿಕೆಯನ್ನು ಕೊಡಲು ಸರಕಾರ ಹೆಚ್ಚಿನ ಗಮನಕೊಡುವುದು ಅತ್ಯಗತ್ಯ. ಭಾರತದಲ್ಲಿ ಬೇರೆ ದೇಶಗಳಿಗಿಂತ ಶಿಶುಮರಣ ಹೆಚ್ಚಾಗಲು ಮುಖ್ಯ ಕಾರಣ ಬಡತನ, ಅಜ್ಞಾನ ಮತ್ತು ಆರೋಗ್ಯ ವಿಭಾಗದ ಅಜಾಗರೂಕತೆಯೆಂದರೂ ತಪ್ಪಾಗದು. ನಮ್ಮ ಸರಕಾರದ ದೃಷ್ಟಿ ಈ ಕಡೆ ಸದಾ ಹೆಚ್ಚಿಯೇ ಇರಲಿ!

"ನಾನೃಷಿಃ ಕುರುತೇ ಕಾವ್ಯಂ"

ಲೇಖಕರು: ಶ್ರೀ। ಎಸ್. ಸುಬ್ರಾಯನ್, ವಿದ್ವಾನ್.

ಕವಿಯೊಬ್ಬ ಋಷಿ. ಋಷಿಯೇ ಕಾವ್ಯ ಕರ್ತೃ. ಋಷಿಯಲ್ಲದವ ಕಾವ್ಯವನ್ನು ಬರೆಯಲಾರ. ಕವಿಯ ಜೀವನವು ತ್ಯಾಗ ಮತ್ತು ತಪಸ್ಸ್ಯಾಪೂರ್ಣವಾಗಿದ್ದು ವಿವಿಧ ಶಾಸ್ತ್ರಗಳ ಪಾಂಡಿತ್ಯ ಮತ್ತು ಲೋಕದ ವಿವಿಧ ವಿಷಯಗಳ ಸಿಧಿ. ಆತನ ಉದ್ದೇಶ ಜಗತ್ತಿನ ಕಲ್ಯಾಣ ಸಿದ್ಧಿ. ಅದಕ್ಕಾಗಿಯೇ ಆತನ ತಪಸ್ಯೆ ಮತ್ತು ತ್ಯಾಗ ಸದಾ ನಡೆಯುತ್ತಿರುವವು. ಜನತೆಯ ಸುಖಾನಂದ ತೃಪ್ತಿಗಿರುವ ತಪಸ್ಯೆಯೇ ಆತನ ಅನುದಿನದ ತಪಸ್ಯೆ. ಈ ವಿಷಯದಲ್ಲೇ ಆತನು ಮಗ್ನನಿರುವನು; ಜಗತ್ತಿನ ಮಾರ್ಗದರ್ಶಕನಾಗಿರುವನು; ಕತ್ತಲಲ್ಲಿ ತೊಳಲುತ್ತಿರುವ ಪ್ರಾಣಿಗಳಿಗೆ ಬೆಳಕನ್ನು ತೋರಿಸಿಕೊಡುವನು. ಕಾವ್ಯದೀಪವನ್ನುರಿಸಿ ಮಾರ್ಗದರ್ಶಕನಾಗುವನು.

ಮನೋರಂಜನೆಯೊಂದೇ ಕಾವ್ಯದ ಧ್ಯೇಯವಲ್ಲ. ಮಾನವನ ಜೀವನದ ಜಟಿಲ ಸಮಸ್ಯೆಗಳಾವುದನ್ನೂ ಬಗೆಹರಿಸದೆ ವಾಚಕನ ಆತ್ಮೋನ್ನತಿಗಿರುವ ಪ್ರೇರಣೆಯನ್ನು ಜನಿಸದೆ ಇರುವ ಕಾವ್ಯ ನಿರರ್ಥಕ. ಇಂತಹ ಕಾವ್ಯಗಳ ರಚನೆಯಿಂದ ಜಗತ್ತಿಗೆ ಕಲ್ಯಾಣ ಸಿದ್ಧಿಸದು. ಮಾನವ ಸಮಾಜದ ಉದ್ಧಾರವಾಗದು.

ಕಾವ್ಯದ ಮೂಲಕ ಉಂಟಾಗುವ ಆನಂದ ಅಲೌಕಿಕ. ಅಲೌಕಿಕ ಆನಂದಪ್ರಾಪ್ತಿಯೇ ಜೀವನದ ಮುಖ್ಯ ಉದ್ದೇಶ. ಜನತೆಯನ್ನು ಅಲೌಕಿಕ ಆನಂದಪ್ರಾಪ್ತಿಗಾಗಿ ಜೀವನದ ಮುಖ್ಯ ಉದ್ದೇಶಸಿದ್ಧಿಗಾಗಿ ನಡೆಯಿಸುವ ಕರ್ತವ್ಯದ ಹೊಣೆಗಾರಿಕೆ ಕವಿಯದು. ಕವಿಯು ಈ ಕರ್ತವ್ಯದ ಹೊಣೆಗೊಂಡು ತನ್ನ ಜೀವನವನ್ನು ನಡೆಸುತ್ತಿರುವನು. ಆತನ ಈ ಜೀವನದಲ್ಲಿ ಸತ್ಯ, ಕರುಣೆ, ಅಹಿಂಸೆಗಳು ತುಂಬಿಕೊಂಡಿರುತ್ತವೆ. ಹೃದಯದಲ್ಲಿ ತುಂಬಿಕೊಂಡಿರುವ ರಸವು ಕರುಣೆಯಾದುದರಿಂದಲೇ ದಯಾಧರ್ಮವನ್ನು ಬೋಧಿಸುತ್ತಿರುವನು, ಸಮಭಾವನೆಯನ್ನು ಹುಟ್ಟಿಸುತ್ತಿರುವನು ಈ ರಸವೇ ಕಾವ್ಯದ ಉಗಮಕ್ಕೆ ಕಾರಣವಾಗುತ್ತಿರುವುದು. ಪತಿತರ ಉದ್ಧಾರ ಕಾರ್ಯವೇ ಕವಿಯ ನೈಜ ಕಾರ್ಯ. ಜನಾಂಗ ಕೀಳು ನೆಲೆಯಲ್ಲಿರುವುದನ್ನು ಕಂಡು ಕವಿ ಕರುಣಾಮಯನಾಗುತ್ತಾನೆ. ಈ ಕರುಣೆಯ ಹರಿವೇ ಕಾವ್ಯದ ಸೃಷ್ಟಿಗೆ ಹೇತುವಾಗುತ್ತದೆ. ಕವಿಗಳು ಇದರಿಂದಲೇ ಸಮಾಜದ ಸುಧಾರಕರೂ ಅಹುದು, ವಿಶ್ವಕುಟುಂಬದ ಸುಧಾರಕರೂ ಉದ್ಧಾರಕರೂ ಹೌದು. ಕವಿಯ ಸಂದೇಶವಾಣಿ ಅಮೃತವಾಣಿ. ಈ ಅಮೃತವಾಣಿಯೇ ಕವಿಯ ಅಜರಾಮರತೆಗೆ ಕಾರಣ.

ಕವಿಯೊಬ್ಬ ಋಷಿಯೇ ಆಗಿದ್ದು, ವಸ್ತುಗಳ ವಿಚಿತ್ರ ಭಾವ, ವಿಭಿನ್ನ ಹಾಗೂ ವಿಚಿತ್ರ ಧರ್ಮತತ್ವಗಳನ್ನು ಚೆನ್ನಾಗಿ ತಿಳಕೊಳ್ಳುತ್ತಿರುವನು. ಅನ್ಯರಿಗೆ ಈ ತಿಳಿವನ್ನು ಜ್ಞಾನದಿಂದ ಕಂಡು ಬೋಧಿಸುತ್ತಿರುವನು. "ಕವಯಃ ಕ್ರಾಂತದರ್ಶಿನಃ" ಎಂಬ ಮಾತು ಇದರಿಂದಲೇ ಹುಟ್ಟಿದೆ. ಕಣ್ಣುಗಳಿಗೆ ತೋರದ ಬಹಳ ಮುಂದಿರುವ ಭವಿಷ್ಯವನ್ನು ಯಥಾರ್ಥರೂಪದಿಂದ ನೋಡುವ ಪುಣ್ಯಪುರುಷನಾದ ಮುನಿಯು ಮಹಾಕವಿ. ಕವಿ ಮುನಿಯಾಗಿ ವಸ್ತುತತ್ವಗಳನ್ನು ಶಬ್ದಗಳ ಮೂಲಕ ವರ್ಣಿಸುತ್ತಾನೆ ಈ ವರ್ಣನೆಯಿಂದಲೇ ಕವಿಯೆನಿಸುವನು. ವಸ್ತುತತ್ವಗಳ ದರ್ಶನದಿಂದ ಋಷಿತ್ವದ ನೆಲೆಯುಂಟಾದ ಬಳಿಕ ಶಬ್ದ ಸಾಮಗ್ರಿಗೊಂಡು ಅದನ್ನು ಲೋಕಕ್ಕೆ ಅರುಹುತ್ತಿರುವಾತನೇ ಕವಿ.

ನಾನೃಷಿಃ ಕವಿರಿತ್ಯುಕ್ತ
ಋಷಿಶ್ಚ ಕಿಲ ದರ್ಶನಾತ್
ವಿಚಿತ್ರ ಭಾವ ಧರ್ಮಾಂಶ-
ತತ್ವಪ್ರಖ್ಯಾ ಚ ದರ್ಶನಂ ॥
ಸತತ್ವದರ್ಶನಾದೇವ
ಶಾಸ್ತ್ರೇಷು ಕಥಿತಃ ಕವಿಃ
ದರ್ಶನಾದ್ವರ್ಣನಾಚ್ಚಾಥ
ಲೋಕೇರೂಢಾ ಕವಿ ಶ್ರುತಿಃ ॥

ಈ ಪದ್ಯಗಳು ಈ ಮೊದಲು ಹೇಳಿದ ವಿಷಯವನ್ನೇ ತಿಳಿಸುವವು.

ಕನ್ನಡಿಗರ ಕುಲಕ್ಕೆ "ನಾನೃಷಿಃ ಕುರುತೇ ಕಾವ್ಯಂ" ಎಂದು ಹೇಳಿದಾತ ರುದ್ರಭಟ್ಟ. ರುದ್ರಭಟ್ಟನು ಜಗನ್ನಾಥ ವಿಜಯದಲ್ಲಿ ಅವಿಷ್ಟಲಿಂಗಗೊಳಿಸಿಯೇ ಇದನ್ನು ಬರೆದಿರುತ್ತಾನೆ.

ಕಂದ ॥ ಕೋಕನದ ಗರ್ಭನಿಂ ವಾ
ಲ್ಮೀಕಿಯೆ ಕವಿ ಮುನಿನಿಕಾಯದೊಳ್ ಸಂದತ್ತೀ।
ಲೋಕಕ್ಕೆ ನಾನೃಷಿಃ ಕುರು-
ತೇ ಕಾವ್ಯಮೆನಿಪ್ಪ ಮಹಿಮೆ ತನ್ಮುನಿವರನಾ ॥

—ಜಗನ್ನಾಥವಿಜಯ ಪ್ರ. ಆ. ನು. ೭

ಬ್ರಹ್ಮನ ಮೂಲಕ ಮುನಿಗಳ ಗುಂಪಿನಲ್ಲಿ ವಾಲ್ಮೀಕಿಯೆ ಕವಿಯೆನಿಸಿದನು. ಋಷಿಯಲ್ಲದಾತ ಕಾವ್ಯವನ್ನು ರಚಿಸಲಾರ. ಆ ಮುನಿವರ್ಯನದೀ ಮಹಿಮೆ. ವಾಲ್ಮೀಕಿ ಲೋಕಕಲ್ಯಾಣಕ್ಕಾಗಿಯೇ ರಾಮಾಯಣವನ್ನು ರಚಿಸಿದನು. ಆತನೊಡಲಲ್ಲಿ ಕ್ರೌಂಚವಧದಿಂದುಂಟಾದ ಶೋಕ ಉಕ್ಕಿಹರಿದು ಕರುಣಾಮೃತದ ಕಾವ್ಯ ಜನಿಸಿತು. ಕರುಣೆಯ ಮೂಲಕ ಉಂಟಾದ ಈ ಕಾವ್ಯ ಇಂದೂ ಮಾನವ ಸಮಾಜದ ಉನ್ನತಿ ಸಾಧಕ ವಸ್ತು. ಈ ಕಾವ್ಯದೊಳಗೆ ಸಿಗುವ ವಸ್ತುಗಳು ಮಾನವನ ಜೀವಿಕೆಗೆ ಮಾರ್ಗದರ್ಶಕಗಳು. ಅಣ್ಣತಮ್ಮಂದಿರು ಹೇಗಿರಬೇಕು? ಸ್ತ್ರೀಧರ್ಮವೇನು? ಸವತಿಯರ ವರ್ತನೆ ಹೇಗಿರಬೇಕು? ತಂದೆಯ ಮಾತನ್ನು ಮಗನು ಹೇಗೆ ಪಾಲಿಸಬೇಕು? ಎಂಬಿತ್ಯಾದಿಯ ಆದರ್ಶ, ಗೃಹಸ್ಥಧರ್ಮದ ಚಿತ್ರ ರಾಮಾಯಣದಲ್ಲಿದೆ. ಇನ್ನೊಂದೆಡೆ ಆದರ್ಶ ರಾಜ್ಯಭಾರ ಕ್ರಮದ ರಾಜನೀತಿಯಿದೆ. ರಾಜನೂ ಈ ಗ್ರಂಥದಿಂದ ತಿಳಿಯತಕ್ಕ ಪಾಠವಿದೆ. ಕಿರುಹರೆಯದ ಬಾಲನೂ ಬಡವನೂ ಹೊಂದಲಿರುವ ಬೋಧೆಗಳಿವೆ. ಬಾಲಕನು ಲವಕುಶರಿಂದ ಕಲಿಯಲಿರುವ ಪಾಠವಿದೆ. ಆ ಹುಡುಗರು ಮುನಿಶಿಷ್ಯರೊಂದಿಗೆ ಹೇಗಿದ್ದರು? ಲವಕುಶರು ಆಶ್ರಮದ ಕಣ್ಣಾಗಿಯೇ ಹೇಗೆ ನಿಂತರು? ಎಂಬುದನ್ನು ತಿಳಿಯಲಿದ್ದೇವೆ. ತಂದೆ ಮತ್ತು ಮಕ್ಕಳು ಹೇಗಿರಬೇಕೆಂಬುದನ್ನೂ ಕಾಣುತ್ತೇವೆ. ರಾಮರಾಜ್ಯದಲ್ಲಿ ಬಡವನಿಗೂ ಬಲ್ಲವನಿಗೂ ಸಮಾನಸ್ಥಾನ ಮಾನಗಳಿದ್ದುವು ಎಂಬುದನ್ನು ಕಾಣುವೆವು. !ಬಾಪೂಜಿ ರಾಮರಾಜ್ಯದ ಸುಖಾನುಭವಕ್ಕೆ ಏನುಬೇಕೆಂದು ಹೇಳಿದ್ದಾರೆ. ಸತ್ಯ, ಅಹಿಂಸೆ, ದಯೆ, ಕರುಣಾಭಾವ, ಸಹಾನುಭೂತಿಗಳು ಜೀವನದಲ್ಲಿ ಹೇಗಿರಬೇಕೆಂದು ತೋರಿಸಿಕೊಟ್ಟಿದ್ದಾರೆ.

ಕಾವ್ಯಗಳು ಮಾನವಜೀವನದಲ್ಲಿ ಸಮವೇದನೆಯ ಕರುಣಾಭಾವನೆಯನ್ನೂ ಸತ್ಯ ಅಹಿಂಸೆಗಳ ಬೋಧನೆಯನ್ನೂ ಮಾಡದ ವಿನಾ ಉತ್ತಮಗಳೆನಿಸವು. ಸಮಾಧಿಯ ಆನಂದ ಪ್ರಾಪ್ತಿಗೆ ಸತ್ಯ, ಅಹಿಂಸೆ ಕರುಣೆ ಈ ಮೂರು ಮುಖ್ಯಗಳಾಗುತ್ತಿವೆ. ಮನುಷ್ಯನ ಜೀವನದಲ್ಲಿ ಸುಖದುಃಖಗಳು ಉರುಳುತ್ತಲೇ ಇರುವವು. ಸುಖಾನುಭವ ಕಡಮೆ. ದುಃಖಾನುಭವ ಅಧಿಕ. ಸುಖಾನುಭವ ಖಡ್ಗಧಾರೆಯಲ್ಲಿರುವ ಮಧುವಿನಂತೆ ಮಾತ್ರ. ವಾಲ್ಮೀಕಿ ಹಿಂಸೆಯ ವಿರೋಧಿ. ಸುಖಾನುಭವಕ್ಕೆ ಯುದ್ಧವು ಬೇಡವೆಂಬಾತ. ಕ್ರೌಂಚವನ್ನು ವಧಿಸುವ ನಿಷಾದನಿಗೆ ಮಾತ್ರವಲ್ಲ, ಎಲ್ಲಾ ಹಿಂಸಕ ಮತ್ತು ಯುದ್ಧಪ್ರಿಯ ಜಾತಿಗಳಿಗೆ ಶಾಪವನ್ನೇ ಕೊಡುವಾತ. ಯಾವ ಹಿಂಸೆ ಪ್ರಿಯಜನರ ವಿಯೋಗವನ್ನುಂಟುಮಾಡದು? ಆಶೆಯ ನೋಹದ ಕಟ್ಟುಪಾಡನ್ನು ಕೆಡಿಸದು? ಎಂದು ಕೇಳುವ ಮಹಾಕವಿ.

ಭಾರತೀಯ ವಾಙ್ಮಯ ಈ ಉದ್ದೇಶದಿಂದಲೇ ಹುಟ್ಟಿ ಹರಿದಿದೆ. ಪರಕೀಯರ ಆಳಿಕೆ ರಾಷ್ಟ್ರಕ್ಕೆ ಬಂತು. ಅವರ ಅಧಿಕಾರ ದರ್ಪಗಳು ಎಲ್ಲೆಲ್ಲೂ ಹರಡಿದವು. ಅಧಿಕಾರಿಗಳ ಗುಲಾಮರಾಗುವ ಮನಗೊಂಡೆವು. ಅವರ ಮನಮೆಚ್ಚುವಂತೆ ನಡೆದೆವು. ನಮ್ಮ ಹೃದಯವಿಚಾರಗಳೆಲ್ಲಾ ಅವರನ್ನು ಮರೆಹೊಕ್ಕವು; ಮಾರುಹೋದುವು. ಕಾವ್ಯಸೃಷ್ಟಿಯ ಕ್ರಮಸರಣಿ ತಪ್ಪಿತು. ತಪ್ಪಿದುದೆಲ್ಲಿ ಎಂಬುದನ್ನು ಕಾಣುತ್ತಿಲ್ಲ. ಕಾವ್ಯದ ಉದ್ದೇಶವನ್ನೂ ನಾವರಿಯುತ್ತಿಲ್ಲ. ಭಿನ್ನಭಿನ್ನ ಪಕ್ಷನಾದಗೊಳ್ಳುತಿದ್ದೇವೆ. ಜಾತಿವಾದ, ಪ್ರಾಂತವಾದಗಳು ನಡೆಯುತ್ತಿವೆ. ಕೈಕಾಲು ಅಂಗಾಂಗಗಳ ಜಗಳ ನಡೆವಂತೆ ಕಂಡುಬರುತ್ತದೆ. ಆವ ಮಾರ್ಗ ಬೇಕು? ಆವ ಬೆಳಕನ್ನು ಕೊಡಬೇಕು ಎಂಬ ತಿಳಿವು ಕವಿಕುಲಕ್ಕೆ ಬೇಕು. ಕಾವ್ಯಋಷಿಗಳು ಪ್ರಪಂಚದರ್ಶನೆಯ ಮೂಲಕ ಜನರಿಗೆ ಬೇಕಾದ ತತ್ವವನ್ನು ಬೋಧಿಸಬೇಕು. ಇಂದು ಈ ಕೆಲಸ ನಮಗೆಬೇಕಿದೆ.

ಕವಿವರ್ಯನಾದ ರುದ್ರಭಟ್ಟನು ಕನ್ನಡ ವಾಙ್ಮಯದ ಉಪಾಸಕರಿಗೆ ಹೇಳಿದ ಬೋಧೆ ಹಿರಿದು. ಅವನು ಜಗನ್ನಾಥ ವಿಜಯವನ್ನು ಈ ತತ್ವ ವಿವರಣೆಗಾಗಿಯೇ ಬರೆದಿರುತ್ತಾನೆ. **"ನಿರ್ಮಳ ತತ್ವಬೋಧಮುದ್ಯೋತಿಪುದೆಂಬುದಂ ಬಯಸಿ ಪೇಳಲೊಡರ್ಚಿದೆನೀ** ಪ್ರಬಂಧಮಂ" (ಪ್ರ. ಅ. ಸು. ೧೭) ಎಂದು ಆತನೇ ಹೇಳಿರುವನು. ನಿರ್ಮಲ ತತ್ವಬೋಧೆ ರಾಷ್ಟ್ರಕ್ಕೆ ಉಂಟಾಗಬೇಕು. ಅಂತಹ ಪ್ರಬಂಧರಚನೆಗೆ ಕೈಯಿಕ್ಕಿ ಲೋಕದ ಜನತೆಗೆ ಏಕಕುಟುಂಬ ಭಾವನೆಯನ್ನು ಮೊಳೆಸಬೇಕು.

ವಿಜ್ಞಾನಿಗಳು ಲೋಕವನ್ನು ಒಂದೇ ಸೂತ್ರದಲ್ಲಿ ಪೋಣಿಸಲಿರುವ, ಏಕ ಕುಟುಂಬದವರಾಗಲಿರುವ, ಸಲಹೆಕರಣೆಗಳನ್ನು ನಮಗೊದಗಿಸಿಕೊಟ್ಟಿದ್ದಾರೆ. ಪತ್ರಿಕೆ, ಆಕಾಶವಾಣಿ, ಜಲ, ಸ್ಥಲ, ನಭಯಾನಗಳೇ ಮೊದಲಾದುವು ಲೋಕದ ಜನತೆಯೊಡನೆ ಸಮೀಪ ಬಾಂಧವ್ಯಸಂಪರ್ಕವನ್ನೊದಗಿಸಿಕೊಟ್ಟಿವೆ. ವಿಶ್ವದ ಜನರು ಒಂದೇ ಮನೆಯವರು. ಅವರ ಸುಖದುಃಖಗಳೊಡನೆ ಸಹಾನುಭೂತಿ ಮತ್ತು ಸಮೀಪ ಬಾಂಧವ್ಯ ಸುಖಸಂಪರ್ಕವನ್ನೊದಗಿಸುವ ಕರ್ತವ್ಯವೇ ವಿಜ್ಞಾನಿಗಳ ಕರ್ತವ್ಯ. ಈ ಕರ್ತವ್ಯದೊಂದಿಗೆ ಲೋಕಕಲ್ಯಾಣಕ್ಕಿರುವ ಮಾರ್ಗವನ್ನು ತೋರ್ಪಡಿಸುವ ದೀಪವನ್ನೊದಗಿಸುವುದೇ ಕವಿಋಷಿಯ ಕೆಲಸ. ಈ ಕೆಲಸದ ಸಾಧನೆಯು ಕವಿ ಋಷಿಗಳಿಂದಾಗಲಿ! ಭಾರತದ ಕಾವ್ಯರ್ಷಿಗಳು ಈ ಉದ್ಯಮದಿಂದ ಅಮರರಾಗಲಿ!

ಸಮಾಜದಲ್ಲಿ ವೈದ್ಯರ ಪಾತ್ರ

ಡಾ| ಎಸ್. ಬಿ. ಪುಟ್ಟಣ್ಣ
ಬಿ. ಯಸ್. ಸಿ, ಎಂ. ಬಿ. ಬಿ. ಎಸ್., ಡಿ. ಓ. ಎಂ. ಎಸ್. (ಲಂಡನ್)

ಸಮಾಜವೆಂದರೇನು?

ಸಮಾಜವೆಂದರೆ ಜನಗಳ ಸಮುದಾಯ ಮಾತ್ರವೇ ಅಲ್ಲ; ಜನಗಳಲ್ಲಿ ಉದ್ಭವಿಸುವ ಕಾರ್ಯಾಚರಣೆಗಳ ಸಮ್ಮಿಶ್ರಣ ದಿಂದುಂಟಾಗಿರುವ ಒಂದು ಸ್ವರೂಪವೆಂದು ಹೇಳಬಹುದು. ಮಂದಿ ಒಬ್ಬರಿಗೊಬ್ಬರು ಹೊಸೆದುಕೊಂಡು ಬಾಳುವ ರೀತಿ. ಸಮಾಜದಲ್ಲಿ ಜನರು ಹೊರಗಿನಿಂದ ಬಂದರೂ ಅಥವಾ ಒಳ ಗಿಂದ ಹೊರಗೆ ಹೋದರೂ ಸಮಾಜವು ಒಂದು ಬಗೆಯ ಸ್ಥಿರಪ್ರಕೃತಿಯನ್ನು ಹೊಂದಿರುವುದು. ಮುಖ್ಯವಾಗಿ ಒಬ್ಬರಿ ಗೊಬ್ಬರಿಗಿರುವ ಜೀವಿಗಳ ಮಿಳಿತ ಮತ್ತು ಹೊದಿಕೆಯ ಅಡಿ ಗಲ್ಲೇ ಸಮಾಜದ ಸ್ವರೂಪ.

ಮಾನವ ಜೀವಿಗಳ ಇರುವಿಕೆಯು ಸಮಾಜವನ್ನು ಕೂಡಿದ್ದಾಗಿರುತ್ತದೆ. ಜನವಿಲ್ಲದೇ ಸಮಾಜವಿಲ್ಲ; ಸಮಾಜ ವಿಲ್ಲದೆ ಜನವಿಲ್ಲ; ಮಾನವನು ಹುಟ್ಟಿದ ಕೂಡಲೇ ಶೈಶವಾ ವಸ್ಥೆಯಲ್ಲೇ ಅಸಹಾಯಕನೆಂಬುದು ಎಲ್ಲರಿಗೂ ತಿಳಿದ ವಿಷಯ. ಇವನನ್ನೂ ಬೆಳಿಸಲು ಸಮಾಜವಿಲ್ಲದಿದ್ದರೆ ಹೇಗೆ ತಾನೆ ಬೆಳದಾನು? ಬಹಳ ದಿನದವರಿಗಾದರೂ ಸಮಾಜದ ನೆರವು ಅತ್ಯವಶ್ಯಕ. ಆದರಿಂದ ಮನುಷ್ಯ ಜೀವವು ಭೂಮಿಗೆ ಬರುವಾಗಲೇ ತನ್ನನ್ನು ರಕ್ಷಿಸಲು, ಬೆಳಸಲು ಸಮಾಜವು ಇರುತ್ತದೆಂದು ನಂಬಿ ಬರುತ್ತದೆಂದು ಹೇಳಬಹುದು. ಒಬ್ಬರಿ ಗೊಬ್ಬರು ಮಿಳಿತವಾಗಿ ಅರಿತುಕೊಂಡು ನಡೆದುಕೊಳ್ಳುವ ವ್ಯಕ್ತಿಗಳಿಲ್ಲದಿದ್ದಲ್ಲಿ ಸಮಾಜವೇ ಇರುವುದಿಲ್ಲ. ಮಂದಿ ಯಲ್ಲಿರುವ ಪ್ರತಿಯೊಬ್ಬನೂ ಸಮಾಜವನ್ನು ನಂಬುತ್ತಾನೆ. ಈ ಸಮಾಜದ ಒಂದು ಚೌಕಟ್ಟಿನಲ್ಲಿ ಪ್ರಪಂಚವನ್ನು ನೋಡು ವುದು ಮಾತ್ರವೇ ಅಲ್ಲದೆ, ತನ್ನ ಎಲ್ಲಾ ಅನುಭವವನ್ನು ಈ ಚೌಕಟ್ಟಿಗೇ ಸರಿಹೊಂದಿಸುತ್ತಾನೆ.

ನಮ್ಮ ಸಮಾಜದ ರೂಪವು ಹಿಂದೊಂದು ರೀತಿಯ ಲ್ಲಿತ್ತು. ಹೊರಗಿನವರ ಸಂಪರ್ಕದಿಂದಲೂ ಮತ್ತು ಯಂತ್ರ ಯುಗದ ಚಟುವಟಿಕೆಯಿಂದಲೂ ದಿನೇ ದಿನೇ ಸಮಾಜವು ಮಾರ್ಪಾಡುಹೊಂದುತ್ತಿರುತ್ತದೆ. ಹಿಂದಿನ ಸಮಾಜಕ್ಕೆ ಒಂದು ಬಗೆಯ ಗ್ರಾಮ್ಯ ರೂಪವಿತ್ತು. ಅದು ಹೋಗಿ ನಗರದ ಆಧುನಿಕ ರೂಪಕ್ಕೆ ಎಡೆಗೊಟ್ಟಿದೆ. ಹೀಗಾಗುವು ದಕ್ಕೆ ಆರ್ಥಿಕ ತಳಹದಿ ಇಲ್ಲದೇ ಇಲ್ಲ. ಮನುಷ್ಯನು ಜೀವನ ಮಾಡುವ ರೂಪ ಹೋಗಿ ಇಂದು ಜೀವನ ಸಂಪಾದಿಸುವ ರೂಪವನ್ನು ತಾಳಿದೆ. ಈ ಆರ್ಥಿಕ ಬದಲಾವಣೆಯು ಮಾನವ ಜೀವನದ ಸ್ವರೂಪವನ್ನೇ ಬದಲಾಯಿಸಿದೆ. ಹೀಗಾಗುವು ದಕ್ಕೆ ಸಂಪತ್ತು ಮತ್ತು ವರಮಾನದ ಅಸಮಾನ ಹಂಚಿಕೆಯೇ ಕಾರಣ. ಇಂದಿನ ಸಮಾಜದ ಸ್ಥಿತಿಯು ಒಂದು ಬಗೆಯ ಅಸ್ಥಿರತೆಗೆ ಎಡೆಗೊಟ್ಟಿದೆ. ಆದರಿಂದ ಸ್ಥಿರತೆಯ ಅವಶ್ಯ ಕತೆಯು ಎಂದಿಗಿಂತಲೂ ಇಂದು ಹೆಚ್ಚಾಗಿರುತ್ತದೆ.

ಸಮಾಜದ ಭದ್ರತೆ

ನಮ್ಮ ಸಮಾಜದ ಆರ್ಥಿಕ ವ್ಯವಸ್ಥೆಯು ಅವಿಭಕ್ತ ಕುಟುಂಬ ಪದ್ಧತಿಯ ಆಧಾರದ ಮೇಲೆ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುತ್ತದೆ. ಕುಟುಂಬದಲ್ಲಿರುವವರೆಲ್ಲರ ಸಂಪಾದನೆಯನ್ನು ಒಟ್ಟುಕೂಡಿಸಿ ಸಂಪಾದಿಸಲಿ, ಸಂಪಾದಿಸ ದಿರಲಿ ಕುಟುಂಬದವರೆಲ್ಲರನ್ನೂ ಕಾಪಾಡುವ ಹೊಣೆಗಾರಿಕೆ ಇತ್ತು. ಈ ಕ್ರಮವು ಒಂದು ಬಗೆಯ ಕುಟುಂಬದಲ್ಲಿಯೇ ಆಚರಣೆಯಲ್ಲಿದ್ದ ವಿಮಾ ಪದ್ಧತಿ ಎಂದು ಹೇಳಬಹುದು. ಈ ಒಳ್ಳೆಯ ಪದ್ಧತಿಯು ದಿನೇ ದಿನೇ ಕಡಿಮೆಯಾಗುತ್ತಾ ಬರು ತ್ತಿದೆ. ಇನ್ನು ಕೊಂಚ ಕಾಲದಲ್ಲಿ ಪೂರ್ತಿ ನಶಿಸಿಹೋಗುವ ಸೂಚನೆಗಳು ಕಾಣುತ್ತಿದೆ. ಆದರೆ ಈ ಕ್ರಮದ ಅಭಾವ ವನ್ನು ತುಂಬಲು ಬೇರಾವ ಮಾರ್ಗವೂ ಹೊಳೆದಿಲ್ಲ.

ಜೀವನದ ವೆಚ್ಚವು ಮಿತಿಮೀರಿ ಹೆಚ್ಚಿದುದು ಮತ್ತು ಇತ್ತೀಚಿನ ಆರ್ಥಿಕ ಪದ್ಧತಿಯು ಕುಟುಂಬದ ಒಲವಿನ ಬೇರು ಗಳನ್ನು ಸಡಲಿಸಿ ಸಮಾಜದ ಸ್ಥಿರತೆಗೆ ಧಕ್ಕೆ ತಂದಿರುತ್ತದೆ. "ತಾನೂ ಮತ್ತು ತನ್ನ ಪುಟೆಂಕು", "ದುಡ್ಡಿದ್ದರೆ ದೊಡ್ಡಪ್ಪ" ಎಂಬ ಸ್ವಾರ್ಥಿಗಳ ಕೂಗುಗಳು ಹೆಚ್ಚಿ ಸಮಾಜದ ವ್ಯವಸ್ಥೆ ಯನ್ನೇ ಅದಲುಬದಲುಮಾಡಿವೆ. ಗ್ರಾಮಕೈಗಾರಿಕೆ, ಗೃಹ ಕೈಗಾರಿಕೆಗಳಿಗೆ ಉತ್ತೇಜನವು ತಪ್ಪಿ ಕಾರ್ಖಾನೆಗಳ ಗಿರಣಿಗಳ ಕಡೆಗೆ ಜೀವನ ಸಂಪಾದಿಸಲು ಹಳ್ಳಿಗಳಿಂದ ಜನರ ವಲಸೆ ಇರುವೆಗಳ ಸಾಲಂತೆ ಬರಲು ಪ್ರಾರಂಭವಾಗಿರುತ್ತದೆ. ಹಿಂದಿನ ಸಮಾಜದ ಸುವ್ಯವಸ್ಥೆಗೆ ಗೃಹ ಮತ್ತು ಗ್ರಾಮಕೈಗಾರಿಕೆಗಳೇ ತಳಹದಿಯಾಗಿದ್ದವು. ಜನರು ಹಳ್ಳಿಗಳಲ್ಲಿ ಅವರ ನೆಂಟ



ಪ್ರಖ್ಯಾತ ನೇತ್ರ ವೈದ್ಯರಾದ ಡಾ॥ ಎಂ. ಸಿ. ಮೋದಿ, ಅವರು ೧೯೫೧ನೇ ಅಕ್ಟೋಬರ ತಿಂಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ, ಶ್ರೀ॥ ಡಿ. ಮಂಜಯ್ಯ ಹೆಗ್ಗಡೆಯವರ ಆಶ್ರಯದಲ್ಲಿ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸಿದಾಗ, ನೂರಾರು ನೇತ್ರ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದರು. ಮೆಳ್ಳಗಣ್ಣನ್ನು ಸರಿಪಡಿಸುವುದರಲ್ಲಿ ಡಾ॥ ಮೋದಿಯವರ ನೈಪುಣ್ಯವೆಷ್ಟೆಂದು, ಧರ್ಮಸ್ಥಳದಲ್ಲಿ ಅವರು ನಡೆಸಿದ ಇಂತಹ ಚಿಕಿತ್ಸೆಯಲ್ಲಿ ಒಂದನ್ನು ಇಲ್ಲಿ ನೋಡಿ ತಿಳಕೊಳ್ಳಬಹುದು. ಈ ಹುಡುಗಿ, ಮಂಗಳೂರಿನ ಶ್ರೀ॥ ಕೆ. ರಾಮ ಶೆಣೈಯವರ ಪುತ್ರಿ ಕುಮಾರಿ ಮನೋರಮಾ. ಶಸ್ತ್ರ ಚಿಕಿತ್ಸೆಯ ನಂತರ ಅವಳ ಕಣ್ಣುಗಳೂ, ತತ್ಪರಿಣಾಮವಾಗಿ ಮುಖವೂ ಹೇಗೆ ಕಾಣುವುವೆಂಬುದನ್ನು ನೋಡಿರಿ.

ರಿಷ್ಟರ ಮಧ್ಯೆ ನೆಮ್ಮದಿಯಾಗಿ ಬಾಳಲು ಇಷ್ಟಪಡುತ್ತಿದ್ದರು. ಇಂದು ನಗರವಾಸದ ಮೋಹಕ್ಕೆ ಬಲಿಯಾಗಿ ಜೀವನವನ್ನು ಸಂಪಾದಿಸುವ ಸಲುವಾಗಿ ಆಪ್ತೇಷ್ಟರನ್ನು ತೊರೆದು ಜೇರಿಯವರ ಮಧ್ಯದಲ್ಲಿ ವಾಸಿಸಲು ತೊಡಗಿರುತ್ತಾರೆ. ಜನಗಳ ಜನಸಂಖ್ಯೆಯು ಕೈಗಾರಿಕಾ ಕೇಂದ್ರಗಳಲ್ಲಿ ಕೇಂದ್ರೀಕೃತವಾಗುತ್ತಿದೆ. ಇಂದಿನ ಆಧುನಿಕ ಜೀವನದ ಏರಿಳಿತಗಳು ಸಮಾಜದಲ್ಲಿ ಹೆಚ್ಚು ನಷ್ಟಕ್ಕೂ ಮತ್ತು ಮನುಷ್ಯನ ಪತನಕ್ಕೂ ಕಾರಣವಾಗಿರುತ್ತದೆಂದರೆ ಅತಿಶಯೋಕ್ತಿಯಲ್ಲ.

ಇಂದಿನ ಸಮಾಜದ ಈ ಆರ್ಥಿಕ ಅವ್ಯವಸ್ಥೆಗೆ ಕಾರಣವೇನು? ಜನಗಳ ಮುಂದಾಳುಗಳೆನಿಸಿಕೊಂಡವರು ಸ್ವಾರ್ಥಕ್ಕೆ ಬಲಿಯಾಗಿ ರಚನಾಕ್ರಮಗಳಿಗೆ ಮನಕೊಡದೆ ಸಮಾಜವನ್ನು ಕೂಡ ಕೊಲೆಮಾಡಲು ಮೊದಲುಮಾಡಿದುದೆಂದು ಹೇಳದೇ ವಿಧಿ ಇಲ್ಲ. ಅದೂ ಸ್ವತಂತ್ರ ಬಂದ ಮೇಲಂತೂ ವ್ಯಕ್ತಿ ಸ್ವಾತಂತ್ರ್ಯದ ಅರ್ಥವನ್ನೇ ತಿರುಗ ಮುರುಗ ಮಾಡಲಿಕ್ಕೆ ಹತ್ತಿರುತ್ತಾರೆ. ಎಲ್ಲಾ ದೇಶಗಳಲ್ಲೂ ಸಮಾಜದ ಮುಂದಾಳುಗಳು ಸಾಧಾರಣವಾಗಿ ಗುರು ಮತ್ತು ವೈದ್ಯರಿರುತ್ತಾರೆ. ನಮ್ಮ ದೇಶದಲ್ಲಿ ಕ್ರಿ. ಶ. ೮೦೦ರಿಂದಲೂ ಬ್ರಾಹ್ಮಣ ಗುರುವೇ ಸಮಾಜದ ಗುರುವಾಗಿದ್ದುಕೊಂಡು ಅವನ ಜೀವನವನ್ನು ಸಮಾಜದಿಂದಲೇ ಜರುಗಿಸುತ್ತಿದ್ದನು. ಅಲ್ಲದೆ ಈ ಗುರು ನಿಸ್ವಾರ್ಥ ಮನೋಭಾವದವನಾಗಿದ್ದುದರಿಂದ ಅಂದಿನ ಸಮಾಜದ ಏಳಿಗೆಗೂ ಮತ್ತು ಉತ್ತಮ ಸ್ಥಿತಿಗೂ ಕಾರಣನಾಗಿದ್ದನು ಅಂತಹ ನಿಸ್ವಾರ್ಥಿ ಗುರುಗಳು ಇಂದಿನ ಸಮಾಜದಲ್ಲಿ ಎಷ್ಟು ಮಂದಿ ಇರುತ್ತಾರೆಂಬುದನ್ನು ನೀವೇ ಯೋಚಿಸಿ. ಅಂತಹ ಗುರುಸ್ಥಾನವನ್ನು ಇಂದು ಗುರುವೆನಿಸಿಕೊಳ್ಳಲೂ ಸಹ ಯೋಗ್ಯತೆ ಇಲ್ಲದ, ತಾವು ಮೇಲೇರಲು ಯಾವ ಮಾರ್ಗವನ್ನು ಹಿಡಿಯಬೇಕೆನ್ನುವ, ಎಲ್ಲಾ ಬಗೆಯ ಹವ್ಯಾಸಗಳಲ್ಲಿಯೂ ತಲೆ ಹಾಕುತ್ತಿರುವ, ಸಮಾಜದ ಹೆಸರಿನಲ್ಲಿ ತಮ್ಮ ಸ್ವಾರ್ಥವನ್ನು ಸಾಧಿಸುವ ಜನಗಳಿಗೆ ಹಿತಮಾಡುವ ಸೋಗಿನಲ್ಲಿ ತನ್ನ ಹಿತ ಸಾಧಿಸುವ ಸ್ವಾರ್ಥಿಗಳ ಕೈಯಲ್ಲಿ ಸಮಾಜವು ಸಿಲುಕಿದರೆ ಇದರ ಉದ್ಧಾರವಾಗುವುದೆಂತು? ಅದರಂತೆಯೇ ಇಂದಿನ ವೈದ್ಯರೂ ಕೂಡ ಸಮಾಜದ ಉದ್ಧಾರಕ್ಕಾಗಿ ಏನೂ ಶ್ರಮೆ ಪಡುತ್ತಿಲ್ಲ.

ಹಿಂದಿಗಿಂತಲೂ ಇಂದು ನಮಗೆ ಬೇಕಾಗಿರುವುದು ಸಮಾಜದ ಭದ್ರತೆ (Social Security). ಮಂದಿಯೂ ಇಂದು ದಿನಗೂಲಿಯವನಾಗಿರುವುದರಿಂದ ಅವನಿಗೆ ಕೆಲಸ ಸಿಗದಿರುವಾಗ ಅವನು ತನ್ನನ್ನೇ ಆಗಲಿ ಅಥವಾ ತನ್ನ ಸಂಸಾರವನ್ನೇ ಆಗಲಿ ಹೇಗೆ ಸಾಕಿಯಾನು? ಆದರಿಂದ ಇಂದು ಸಮಾಜದ ಭದ್ರತೆಯಲ್ಲಿ ಮೊದಲನೆಯ ಅವಶ್ಯಕತೆ "ನಿರುದ್ಯೋಗಿಗಳ ವಿಮೆ." ಮತ್ತು ಅವರಿಗೆ ಕೆಲಸ ದೊರಕಿಸುವ ಜವಾಬ್ದಾರಿಯು ಸಮಾಜದ ಮೇಲೆ ಬಿದ್ದಿರುವ ಭಾರ. ಆ ಮೇಲೆ ಕೆಲಸಗಾರನು ರೋಗಕ್ಕೆ ತುತ್ತಾದಾಗ ಅವನು ಸಂಪಾದಿಸಲಾಗುವುದಿಲ್ಲವಾದುದರಿಂದ "ರೋಗ ವಿಮೆ" ಅವಶ್ಯಕ. ಇದು ಹಲವು ಕಾರ್ಖಾನೆಗಳಲ್ಲಿ ಆಗಲೇ ಆಚರಣೆಯಲ್ಲಿರುತ್ತದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಕೂಲಿಗಾರರ ಆರೋಗ್ಯವನ್ನು ಕಾಪಾಡುವ ಹೊಣೆಗಾರಿಕೆಯನ್ನು ವಹಿಸಿಕೊಂಡುದರ ಫಲವಾಗಿ ಕಡ್ಡಾಯವಾದ ಕೂಲಿಗಾರರ ವಿಮಾ ಪದ್ಧತಿಯು ಭಾರತದ ಹಲವು ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಜಾರಿಯಲ್ಲಿರುತ್ತದೆ. ಈ ಪದ್ಧತಿಯು ಇನ್ನು ಕೊಂಚ ದಿನಗಳಲ್ಲಿ ನಮ್ಮ ಸಂಸ್ಥಾನದಲ್ಲಿಯೂ ಜಾರಿಗೆ ಬರಲಿದೆ. ರೋಗಿಯಾಗಿರುವಾಗ ಅವನಿಗೆ ಚಿಕಿತ್ಸಾ ಸೌಲಭ್ಯವು ಜೊತೆಗೆ ಅವನ ಸಂಸಾರವನ್ನು ನಡೆಸುವಷ್ಟರ ಮಟ್ಟಿನ ಪರಿಹಾರ ಮಾತ್ರ ಸಿಗುವುದು. ಹೆಣ್ಣಾಳುಗಳಿಗೆ ಹೆರಿಗೆ ಪರಿಹಾರವು ದೊರಕುವುದು. ಈ ವಿಮಾಪದ್ಧತಿಯಲ್ಲಿ ಸರ್ಕಾರವೂ ಕಾರ್ಖಾನೆಯ ಮಾಲೀಕರುಗಳೂ ಮತ್ತು ಕೂಲಿಗಾರರೂ ಅವರವರ ಭಾಗದ ಶುಲ್ಕವನ್ನು ಕೊಡಬೇಕಾಗಿದೆ. ಇದರಲ್ಲಿ ಕೂಲಿಗಾರನಿಗೆ ಸಿಗುವ ಸೌಲಭ್ಯಕ್ಕೆ ಅವನು ಕೊಡಬೇಕಾಗಿರುವ ಶುಲ್ಕವು ಬಹಳ ಸ್ವಲ್ಪ. ಅಂತು ಈ ಪದ್ಧತಿಯಿಂದ ಭಾರತದ ಕಾರ್ಮಿಕರ ಆರೋಗ್ಯವನ್ನು ಕಾಪಾಡುವ ಸೂಚನೆಗಳು ಕಾಣಬರುತ್ತಿರುವುದು ಸಂತೋಷದ ಸಂಗತಿಯೇ ಸರಿ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಕಾರ್ಖಾನೆಯ ಕೂಲಿಗಾರರ ಸಂಖ್ಯೆಯು ಬಹಳ ಸ್ವಲ್ಪ. ಈ ಸೌಲಭ್ಯವು ಭಾರತದ ರೈತರೆಲ್ಲರಿಗೂ ಅನ್ವಯಿಸುವಂತೆ ಮಾಡಬೇಕಾದುದು ಅತ್ಯಗತ್ಯ. ಸ್ವತಂತ್ರ ಬಂದ ಮೇಲೆ ಕಾರ್ಮಿಕನ ಆರೋಗ್ಯವು ರಾಷ್ಟ್ರದ ಅಭ್ಯುದಯಕ್ಕೆ ಹೇಗೆ ಮುಖ್ಯವೋ ಹಾಗೆಯೇ ಆರೋಗ್ಯವು ಮುಖ್ಯವೆಂದು ಒತ್ತಿ ಹೇಳಬೇಕಾಗಿಲ್ಲ.

ಇತರ ದೇಶಗಳಲ್ಲಿ ವಿಮಾಪದ್ಧತಿಯು ಜಾರಿಗೆ ಬರುವುದಕ್ಕೆ ಮುಂಚೆಯೇ ಬಡವರು ಅವರಷ್ಟಕ್ಕವರೇ ಸಹಾಯ ಮಾಡಿಕೊಳ್ಳುತ್ತಿದ್ದರು. ಅಂತಹ ರಚನಾತ್ಮಕ ಕಾರ್ಯವಂತು ನಮ್ಮ ದೇಶದಲ್ಲಿ ಎಲ್ಲಿಯೂ ಕಾಣುವುದಿಲ್ಲ. ಏಕೆಂದರೆ ನಾವು ಎಲ್ಲವನನ್ನು ಮುಂದಾಳುಗಳೇ ಮಾಡಲಿ ಎಂದು ಅವರ ತಲೆಯ ಮೇಲೆ ಹಾಕಿ ಕೈಕಟ್ಟಿಕೊಂಡಿರುವದರ ಜೊತೆಗೆ ಇದು ಸರ್ಕಾರದವರ ತಲೆಗೆ ಕಟ್ಟಿದ ಬುತ್ತಿ ಎಂದು ಇರುವ ಉದಾಸೀನತೆಯು ಪರಿಣಾಮ ಕಾರಣ. ಕ್ರಿ. ಶ. ೧೮೦೦ರಲ್ಲಿ ಇಂಗ್ಲೆಂಡಿನಲ್ಲಿ ೧೦೦,೦೦೦ ಸ್ವಯಂಸೇವಾ ಸಮಾಜ ಸಂಸ್ಥೆಗಳು ಸದಸ್ಯರಿಂದ ಹಣವನ್ನು ಶೇಖರಿಸಿ ರೋಗದಲ್ಲಿದ್ದವರಿಗೂ ಮತ್ತು ಇತರ ಸಾಮಾಜಿಕ ತೊಡಕಿನಲ್ಲಿ ಬಿದ್ದವರಿಗೆ ಹಂಚುತ್ತಿದ್ದರು. ಕ್ರಿ. ಶ. ೧೮೧೫ರಲ್ಲಿ ಈ ಸದಸ್ಯರುಗಳ ಸಂಖ್ಯೆಯು ೯೨೫,೦೦೦ಕ್ಕೆ ಏರಿತು. ಕ್ರಿ. ಶ. ೧೮೨೫ರಲ್ಲಿ ಶೇಖರವಾದ ಹಣವು ೧೬,೦೦೦,೦೦೦ ಪೌನುಗಳನ್ನು ಮುಟ್ಟಿತು. ಅಂದರೆ ೨೫ ವರ್ಷಗಳಲ್ಲಿ ಈ ಸಂಸ್ಥೆಗಳು ಎಂತಹ ಅದ್ಭುತ

ಕಾರ್ಯ ಮಾಡಿದನೆಂಬುದು ಅಂಕಿ ಅಂಶಗಳಿಂದ ತಿಳಿದುಬಂದಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಸಮಾಜವೈದ್ಯದ ಚರಿತ್ರಪುಟಗಳಲ್ಲಿ ಇಂಗ್ಲೆಂಡಿನ ಸರ್ ಜಾನ್‌ಸೈಮನ್, ಸೌತ್‌ವುಡ್ ಸ್ಮಿತ್ ಫ್ರಾನ್ಸ್‌ಸಿನ ವಿಲರ್ನಿ (Villerne) ಅಮೇರಿಕೆಯ ಸಂಯುಕ್ತ ಸಂಸ್ಥಾನದ ಜ್ಯೂಯಲ್ (Jewell) ಮತ್ತು ಶಟಾಕ್ (Shattuck) ಇವರುಗಳ ಶ್ರಮವು ಸುವರ್ಣಾಕ್ಷರಗಳಲ್ಲಿ ಬರೆದಿಡಲ್ಪಟ್ಟಿದೆ. ಜರ್ಮನಿಯಲ್ಲಿ ೧೮೪೮ರಲ್ಲಿ ವಿರ್‌ಕೊ (Virchow) ಎಂಬಾತನು ವೈದ್ಯಸಹಾಯವು ಆಡಳಿತದ ಜವಾಬ್ದಾರಿ ಎಂದು ಸಾರಿದನು. ಆದರೆ ಅಂದು ಅವನ ತತ್ವಕ್ಕೆ ಸಾಕಷ್ಟು ಬೆಂಬಲ ದೊರಕಲಿಲ್ಲ. ಅರ್ಧ ಶತಮಾನದ ನಂತರ ಬಿಸ್‌ಮಾರ್ಕ್ (Bismarck)ನು ಸಮಾಜದ ವಿಮಾಪದ್ಧತಿಯನ್ನು ಆಚರಣೆಗೆ ತಂದನು. ಕಾಲು ಶತಮಾನದ ತರುವಾಯ ಇಂಗ್ಲೆಂಡು ಸಹ ವೇಗದಿಂದ ಈ ದಾರಿಯಲ್ಲಿ ಮುಂದುವರಿದು ೧೯೧೧ರಲ್ಲಿ ಬ್ರಿಟನ್‌ನಲ್ಲಿ ನ್ಯಾಶನಲ್ ಹೆಲ್ತ್ ಇನ್‌ಶೂರನ್ಸ್ ಪದ್ಧತಿಯನ್ನು ಜಾರಿಗೆ ತಂದಿತು. ಈ ಕ್ರಮದಿಂದ ಎಲ್ಲರಿಗೂ ಯಾವ ತಾರತಮ್ಯವಿಲ್ಲದೆ ಸಂಪಾದಿಸುವ ಶಕ್ತಿ ಇರಲಿ ಇಲ್ಲದಿರಲಿ, ಉಚಿತ ವೈದ್ಯಕೀಯ ಸಹಾಯವು ದೊರಕುವಂತೆ ಮಾಡಿರುತ್ತದೆ. ರಷ್ಯದಲ್ಲೂ ಕೂಡ ಉಚಿತ ವೈದ್ಯಕೀಯಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿಯು ಸಂಸ್ಥಾನದ ಹೊಣೆಗಾರಿಕೆಯಾಗಿರುತ್ತದೆ.

ಜನರ ಜೀವನಮಟ್ಟಕ್ಕೂ ವೈದ್ಯಕೀಯ ವೆಚ್ಚಕ್ಕೂ ಇಂದು ಅರ್ಥಾರ್ಥ ಸಂಬಂಧವೇ ಇರುವುದಿಲ್ಲ. ವೈದ್ಯವು ಇಂದು ಮಾರುಕಟ್ಟೆಯಲ್ಲಿ ಕೊಳ್ಳುವ ಒಂದು ಸಾಮಾನ್ಯ ವಸ್ತುವಾಗಿರುತ್ತದೆ. ವಿಜ್ಞಾನಿಗಳ ಶೋಧನೆಗಳು ಔಷಧಿ ತಯಾರು ಮಾಡುವ ಕಾರ್ಖಾನೆಯವರ ಕೈವಾಡಕ್ಕೆ ಸಿಕ್ಕಿ ಹೆಚ್ಚು ಹೆಚ್ಚು ಲಾಭಹೊಂದುವ ವ್ಯಾಪಾರೋದ್ಯಮಗಳಾಗಿರುತ್ತವೆ. ನಾಗರೀಕ ದೇಶಗಳಲ್ಲಿ ೧೯ನೆಯ ಶತಮಾನದ ಮಧ್ಯೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಪ್ರಾರಂಭಿಸಲ್ಪಟ್ಟವು. ಆದರೆ ಎಲ್ಲರಿಗೂ ಸಮನಾಗಿ ಹಂಚುವ ಯೋಜನೆಗಳಾವುವೂ ಆಚರಣೆಗೆ ತರಲ್ಪಟ್ಟಿಲ್ಲ. ಈ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ಹೆಚ್ಚಿಗೆ ನಗರವಾಸಿಗಳಿಗೆ ಪ್ರಯೋಜನವಾಗಿದೆಯೇ ಹೊರತು ಹಳ್ಳಿಗರಿಗಂತು ಇಲ್ಲವೇ ಇಲ್ಲ. ಕ್ರಿ. ಶ. ೧೮೮೩ರಲ್ಲಿ ಜರ್ಮನಿಯಲ್ಲಿ ಕಡ್ಡಾಯವಾದ ರೋಗವಿಮೆಯು ಜಾರಿಗೆ ಬಂದಿತು. ಇದು ಒಂದು ಬಗೆಯ ಸಮಾಜ ವೈದ್ಯಪದ್ಧತಿ ಎಂದೇ ಹೇಳಬಹುದು. ಇದಕ್ಕಿಂತ ಮುಂಚೆ ರಷ್ಯವು ಹಳ್ಳಿಯವರ ಉಪಯೋಗಕ್ಕಾಗಿಯೇ ಸಾರ್ವಜನಿಕರ ವೈದ್ಯ ಪದ್ಧತಿಯೊಂದನ್ನು ಪ್ರಾರಂಭಿಸಿತು.

ಇಂದಿನ ಧ್ಯೇಯವು ಎಲ್ಲಾ ದೇಶಗಳಲ್ಲಿಯೂ ವೈದ್ಯವು ವ್ಯಕ್ತಿಯ ಹಕ್ಕಾಗಿರಬೇಕೆಂಬುದೇ ಆಗಿರುತ್ತದೆ. ಸ್ವತಂತ್ರವು ಹೇಗೆ ವ್ಯಕ್ತಿಯ ಹಕ್ಕೋ ಹಾಗೆಯೇ ವೈದ್ಯ ಸಹಾಯ ಪಡೆಯುವುದೂ ವ್ಯಕ್ತಿಯ ಒಂದು ಹಕ್ಕು. ಈ ಸಮಾಜ ವೈದ್ಯ ಪದ್ಧತಿಯು ನಮ್ಮ ದೇಶದಲ್ಲಿ ಬಂದುದೇ ಆದರೆ ಅದು ನಿಜವಾಗಿಯೂ ಬಡವರ ಕಾಮಧೇನುವೆಂದು ಹೇಳಬೇಕು. ಏಕೆಂದರೆ ಭಾರತದ ಹೆಚ್ಚು ಮಂದಿ ತೀರಾ ಬಡವರು. ಅಲ್ಲದೆ ಹೆಚ್ಚಿಗೆ ಹಳ್ಳಿಗಳಲ್ಲಿ ವಾಸಿಸುವಂತಹವರು. ಅವರು ಇರುವ ಮತ್ತು ಬೆಳೆಯುವ ಸನ್ನಿವೇಶದ ಆರೋಗ್ಯವಂತೂ ತೀರ ಹದಕ್ಕೆ ಕೆಟ್ಟಿರುವುದಲ್ಲದೆ ಇನ್ನೂ ಹೆಚ್ಚು ಕೆಡುವ ಸಂಭವವೂ ಇದೆ. ಅದರಿಂದ ಇಂತಹವರಿಗೆ ಮೊದಲು ವೈದ್ಯ ಸೌಲಭ್ಯವನ್ನು ದೊರಕಿಸುವಂತಹ ಯೋಜನೆಯೊಂದನ್ನು ಸಿದ್ಧಗೊಳಿಸಬೇಕಾದುದು ಅತ್ಯವಶ್ಯಕ. ಇದೇನೂ ಹೇಳುವಷ್ಟು ಸುಲಭವಲ್ಲ. ಜನಗಳು ಹಳ್ಳಿಗಳಲ್ಲಿ ಹಲವಾರು ಕಡೆ ಹಂಚಿಹೋಗಿದ್ದಾರೆ. ಇವರೆಲ್ಲರಿಗೂ ಒಪ್ಪುವಂತಹ ವೈದ್ಯರ ಸೌಲಭ್ಯವನ್ನು ತಯಾರಿಸುವುದು ಬಹುಗುರುತರವಾದ ಜವಾಬ್ದಾರಿಯೇನೋ ಹೌದು. ಆದರೂ ರೈತರ ಆರೋಗ್ಯ ರಕ್ಷಣೆಯು ಸರ್ಕಾರದ ಮತ್ತು ಸಮಾಜದ ಮುಖ್ಯ ಕರ್ತವ್ಯಗಳಲ್ಲಿ ಒಂದೆಂಬುದನ್ನು ಯಾರೂ ಮರೆಯುವಂತಿಲ್ಲ. ಇದಕ್ಕಾಗಿ ಅಪಾರವಾದ ಹಣಬೇಕು. ಸರ್ಕಾರವು ಇಷ್ಟು ಹಣವನ್ನು ಒದಗಿಸಲು ಸಾಧ್ಯವಿಲ್ಲವೆಂಬುದನ್ನು ಸಮಾಜ ತಿಳಿಯಬೇಕು. ಹಾಗೆಂದ ಮೇಲೆ ಇನ್ನೂ ಹಣ ಒದಗಿಸುವ ಭಾರವು ಸಮಾಜದಲ್ಲಿರುವ ಶ್ರೀಮಂತರ ಪಾಲಿಗೆ ಬಿದ್ದಿರುತ್ತೆಂದು ಹೇಳಬೇಕಾಗಿಲ್ಲ. ಅದರಿಂದ ಶ್ರೀಮಂತರು ಉದಾರ ಹಸ್ತಗಳಿಂದ ಆರೋಗ್ಯ ರಕ್ಷಣೆಯ ವ್ಯವಸ್ಥೆಗೆ ಮುಂದೆ ಬಂದು ಬಡವರ ಆರೋಗ್ಯವನ್ನು ಕಾಪಾಡಬೇಕು. ಈಗಾಗಲೇ ಸರ್ಕಾರದವರು ದೇಶದ ಹಲವು ಗ್ರಾಮಗಳಲ್ಲಿ ಮಲೇರಿಯಾ ಹಾವಳಿಯನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಯ ಮೂಲಕ ಹತೋಟಿಗೆ ತಂದಿಲ್ಲವೇ? ಇನ್ನು ಕೆಲವು ಕಡೆ ಒಂದು ಗೊತ್ತಾದ ಶುಲ್ಕವನ್ನು ಕೊಡುವುದರಿಂದ D. D. T. ಯ ಅನುಕೂಲವನ್ನು ಮನೆಯವರು ಹೊಂದುವಂತೆ ಮಾಡಿಲ್ಲವೇ? ಹಾಗೆಯೇ ಪ್ರತಿ ಹಳ್ಳಿಗಳಲ್ಲಿಯೂ ಆರೋಗ್ಯ ಕಾಪಾಡುವ ಸಲುವಾಗಿ ಒಂದು ಗೊತ್ತಾದ ಶುಲ್ಕವನ್ನು ನಿಗದಿ ಮಾಡಿ ಸಹಕಾರ ಆರೋಗ್ಯ ಕೇಂದ್ರಗಳನ್ನು ಏರ್ಪಡಿಸುವುದು ಅಗತ್ಯ. ಈ ಸಂಸ್ಥೆಗಳಲ್ಲಿ ಹೆಚ್ಚಿನ ಭಾರವನ್ನು ಸರ್ಕಾರ ಮತ್ತು ಆಯಾ ಗ್ರಾಮದ ಶ್ರೀಮಂತರೇ ವಹಿಸುವಂತಿರಬೇಕು. ಈ ಸಂಸ್ಥೆಗಳ ಯೋಜನೆಗೆ ಹಲವಾರು ಗ್ರಾಮಗಳನ್ನು ಸೇರಿಸಿ ಕೇಂದ್ರಗಳನ್ನಾಗಿ ವಿಂಗಡಿಸಿ ಈ ನಿರ್ಗತಿಕರ ಆರೋಗ್ಯರಕ್ಷಣೆಯ ಏರ್ಪಾಡನ್ನು ಮಾಡಬೇಕು. ಜನಗಳ ವರಮಾನಕ್ಕೆ ಸರಿಯಾದ ತೆರಿಗೆಯನ್ನು (Health Cess) ವಸೂಲುಮಾಡಬಹುದು. ಇದನ್ನು ಸಂಪಾದಿಸುತ್ತಿರುವದರಿಂದಲೇ ತೆಗೆದುಕೊಳ್ಳತಕ್ಕದ್ದು. ಸಂಸ್ಥೆಯ ಆಡಳಿತವು ಸರಕಾರಕ್ಕೆ ಸೇರಿರಬೇಕು. ಸಂಸ್ಥೆಗಳ ಕೆಲಸಗಳನ್ನು ಅದರ ಸದಸ್ಯರುಗಳೇ ನೋಡಿಕೊಳ್ಳತಕ್ಕದ್ದು. ಈ ರೀತಿ ಮಾಡುವುದರಿಂದ ಜನರು ಆರೋಗ್ಯದ ಕಡೆಗೆ ಗಮನಕೊಡುವಂತೆ ಮಾಡುವುದಲ್ಲದೆ ಆರೋಗ್ಯನಿಯಮಗಳನ್ನು ಪಾಲಿಸುವುದರಲ್ಲಿ ಎಚ್ಚರಿಸಿದಂತಾಗುತ್ತದೆ. ಅಂತು ಈ ಸಂಸ್ಥೆಯ ವೆಚ್ಚದಲ್ಲಿ ಹೆಚ್ಚು ಭಾಗವನ್ನು ಸರ್ಕಾರದವರೇ ವಹಿಸಬೇಕಾಗುತ್ತದೆ. ಇದರ ಉಪಯೋಗವು ಜನಕ್ಕೆ ತಿಳಿದಂತೆಲ್ಲಾ ಜನ ಹೆಚ್ಚು ಸಹಕಾರ ನೀಡಿಯಾರು. ಅವರ ಆರೋಗ್ಯವು ಹೆಚ್ಚಿದಂತೆಲ್ಲಾ ಈ ಸಂಸ್ಥೆಯ ಉಪಯುಕ್ತತೆಯು ಕಂಡು ಬಂದೀತು. ಜನರ ಸಹಕಾರವಿಲ್ಲದೆ ಯಾವ ಬಗೆಯ ಆರೋಗ್ಯ ಯೋಜನೆಗಳೂ ಫಲಕಾರಿಯಾಗಲಾರವು.

ಅಶುದ್ಧವಾತಾವರಣವೇ ರೋಗಗಳ ನಿವಾಸಸ್ಥಾನ. ರೋಗವನ್ನು ವಾಸಿಮಾಡಲು ಹೆಚ್ಚು ಹಣವನ್ನು ಪೋಲು ಮಾಡುವುದನ್ನು ತಪ್ಪಿಸಿ ರೋಗಗಳು ತಲೆದೋರದಂತೆ ತಡೆಗಟ್ಟುವ ಯೋಜನೆಗಳಿಗೆ ಹಣವನ್ನು ವೆಚ್ಚಮಾಡುವುದು ಹೆಚ್ಚು ಉಪಯೋಗಕರವೆಂಬುದನ್ನು ಸರಕಾರವು ಮತ್ತು ಸಮಾಜವೂ ತಿಳಿಯಬೇಕು. ತಡೆಗಟ್ಟುವ ಕಾರ್ಯಕ್ರಮಕ್ಕೆ ಹೆಚ್ಚು ಹಣ ಬೇಕು ನಿಜ. ಆದರೆ ಇದು ಕಾಲಕ್ರಮೇಣ ರೋಗವನ್ನು ವಾಸಿಮಾಡಲು ವೆಚ್ಚಮಾಡುವ ಹಣಕ್ಕೆ ಹೋಲಿಸಿದರೆ ಈ ಹಣವು ಹೆಚ್ಚಾಗುವುದಿಲ್ಲ. ಅಲ್ಲದೆ ರೋಗದ ಹೆಸರೇ ಇಲ್ಲದಂತಾಗಿ ಎಲ್ಲರೂ ಆರೋಗ್ಯಕಾಯರಾಗಿರುವುದಕ್ಕೆ ಸಹಾಯಮಾಡಿದಂತಾಗುತ್ತದೆ. ಈ ಉಪಯುಕ್ತ ಕಾರ್ಯಕ್ಕೆ ವೆಚ್ಚಮಾಡಿದ ಹಣವು ಪೋಲೆಂದು ಗಣಿಸಲಾಗುವುದಿಲ್ಲ.

ಆರೋಗ್ಯವಿದ್ಯಾಪ್ರಚಾರವು ಅತಿ ಮುಖ್ಯವಾದುದು. ಈ ಕಾರ್ಯವನ್ನು ಈ ಸಹಕಾರ ಆರೋಗ್ಯ ಸಂಸ್ಥೆಗಳೇ ವಹಿಸಿಕೊಂಡಲ್ಲಿ ಪ್ರಚಾರ ಮಾರ್ಗವು ಸುಲಭವಾಗುತ್ತದೆ. ಈ ಸಂಸ್ಥೆಗಳ ಮೂಲಕ ಆರೋಗ್ಯಪ್ರಚಾರವನ್ನೂ ರೋಗಗಳನ್ನು ತಡಗಟ್ಟುವ ವಿಧಾನಗಳನ್ನೂ ಭಾಷಣ, ಚಿತ್ರಗಳ, ಪ್ರಯೋಗಗಳ, ಪ್ರದರ್ಶನಗಳ, ಚಲನಚಿತ್ರಗಳ ಮೂಲಕ ಮಾಡಿಸಬೇಕು. ಜನಗಳಿಗೆ ರೋಗವನ್ನು ವಾಸಿಮಾಡಿಕೊಳ್ಳುವ ರೀತಿಯು ಹೆಚ್ಚಿನ ವೆಚ್ಚವುಳ್ಳದ್ದೆಂದು ತಿಳಿಸಿ ನಿವಾರಣಾಕ್ರಮಗಳ ಕಡೆಗೆ ಅವರ ಮನಸ್ಸನ್ನು ತಿರುಗಿಸಬೇಕು. ಅಲ್ಲದೆ ಅವರ ಮನೆಗಳನ್ನು ಸುತ್ತುಮುತ್ತಿನ ಪ್ರದೇಶಗಳನ್ನೂ ನಿರ್ಮಲವಾಗಿಡುವ ಕ್ರಮಗಳನ್ನು ಹೇಳಿಕೊಡಬೇಕು. ನಮ್ಮ ಇಂದಿನ ಹೋರಾಟವು ರೋಗಗಳನ್ನು ವಾಸಿಮಾಡಿದರಷ್ಟೇ ಸಾಲದು. ರೋಗಗಳು ತಲೆ ಎತ್ತದಂತೆ ಜನರು ಆರೋಗ್ಯವಾಗಿರುವಂತೆ ಮಾಡುವುದೇ ನಮ್ಮ ಗುರಿಯಾಗಿರಬೇಕು. ಜನರ ಆರೋಗ್ಯ

ರಕ್ಷಣೆಯನ್ನೂ ರೋಗವನ್ನೂ ತಡೆಗಟ್ಟುವ ತಳಹದಿಯ ಮೇಲೆ ಬೆಳೆಸಬೇಕು. ಈ ರೀತಿ ಮಾಡಿದುದೇ ಆದರೆ ರೋಗ ವಾಸಿ ಮಾಡಲು ತಗಲುವ ದುಬಾರಿ ವೆಚ್ಚವನ್ನು ಉಳಿಸಿದಂತಾಗುವುದು. ಈ ಕಾರ್ಯಕ್ರಮವನ್ನು ಸರಿಯಾಗಿಯೂ ಹೆಚ್ಚು ಫಲಪ್ರದವಾಗಿಯೂ ಕಾರ್ಯಗತವಾಗುವಂತಹ ಯೋಜನೆಗಳನ್ನು ಸಿದ್ಧಗೊಳಿಸಬೇಕು. ಶುದ್ಧವಾದ ನೀರು, ಒಳಚರಂಡಿ ಮತ್ತು ಸರಿಯಾದ ಕಕ್ಕಸುಗಳ ವ್ಯವಸ್ಥೆಗಳನ್ನು ಆಧುನಿಕ ರೀತಿಯಲ್ಲಿ ನಿರ್ಮಿಸುವುದರ ಕಡೆಗೆ ಗಮನಕೊಡಬೇಕು. ಹಳ್ಳಿಹಳ್ಳಿಗಳ ಮೂಲೆಮೂಲೆಗೂ ಅಂಚೆಯು ಸೇರುತ್ತಿರುವಂತೆ ಪ್ರಾಥಮಿಕ ಶಾಲೆಗಳನ್ನು ತೆರೆದಿವೆ ಎಂದು ಹೇಳಿಕೊಳ್ಳುವಂತೆ ಹಳ್ಳಿಗರ ಆರೋಗ್ಯವನ್ನು ಕಾಪಾಡಲಾಗದಿದ್ದಲ್ಲಿ ಇಂದು ನಾವು ಸ್ವತಂತ್ರರೆಂದು ಏಕೆ ತಾನೆ ಹೊಗಳಿಕೊಳ್ಳಬೇಕು? ಸರ್ವಸಮಾನತ್ವ ಸರ್ವಜನೇ ಸುಖೀ ಭವಂತು. ಇನ್ನು ಕನಸಾಗಿಯೇ ಉಳಿದಿದ್ದರೆ ನೆನಸಾಗುವುದೆಂದು? ಅಂತಹ ಕನಸನ್ನು ನೆನಸಾಗಿ ಮಾಡುವುದು ಇಂದಿನ ಪ್ರಜಾಸರ್ಕಾರದ ಮತ್ತು ಪ್ರಜೆಗಳ ಗುರುತರವಾದ ಜವಾಬ್ದಾರಿ ಎಂದು ಎಲ್ಲರೂ ತಿಳಿಯಬೇಕು.

ಸಮಾಜಭದ್ರತೆಯ ಹೋರಾಟದಲ್ಲಿ ಸಮಾಜವು ಎದುರಿಸಬೇಕಾಗಿರುವ ಶತ್ರುಗಳು—ಮೌಢ್ಯ, ರೋಗ ಮತ್ತು ಬಡತನ. ಈ ಶತ್ರುಗಳ ಹಾವಳಿಯಂತು ಕೈಗಾರಿಕಾ ಕೇಂದ್ರಗಳಲ್ಲಿ ಅಧಿಕ ಮಟ್ಟದಲ್ಲಿರುತ್ತದೆ. ಅದರಿಂದ ನಮ್ಮ ಇಂದಿನ ಗುರಿಯು ಈ ಮೂರು ಪ್ರಬಲಶತ್ರುಗಳನ್ನು ನಿರ್ಮೂಲ ಮಾಡುವುದೇ ಆಗಿರುತ್ತದೆ. ಜನಗಳ ಮೌಢ್ಯವನ್ನು ಹೋಗಲಾಡಿಸಲು ಹೆಚ್ಚು ವಿದ್ಯಾಪ್ರಚಾರವು ಅತ್ಯವಶ್ಯಕ.

ರೋಗಿಯ ಚಿಕಿತ್ಸೆಯಲ್ಲಿ ಮೊದಲನೆಯದು, ಆತನನ್ನು ಆರ್ಥಿಕಬಂಧನದಿಂದ ಮುಕ್ತನನ್ನಾಗಿ ಮಾಡುವುದು; ಬಹಳ ಮುಖ್ಯವಾದುದು. ಅವನು ರೋಗದಲ್ಲಿರುವಾಗ ಅವನ ಸಂಪಾದನೆಯ ಮತ್ತು ಅವನನ್ನು ನಂಬಿರುವವರ ಯೋಗಕ್ಷೇಮದ ಕಡೆಗೆ ಅವನ ಮನಸ್ಸು ಹರಿಯದಂತೆ ಮಾಡುವುದು ಸಮಾಜದ ಮುಖ್ಯಕರ್ತವ್ಯವಾಗಿರುತ್ತದೆ. ಅವನು ಗುಣಮುಖನಾಗಲು ಇನ್ನೂ ದಿನಗಳು ಬೇಕಾಗಿದ್ದರೂ ಕೂಡ ತನ್ನನ್ನು ನಂಬಿರುವವರ ಮತ್ತು ತನ್ನ ಹೊಟ್ಟೆಯ ಪಾಡಿಗಾಗಿ ರೋಗವು ಪೂರ್ಣವಾಗಿ ವಾಸಿಯಾಗುವುದಕ್ಕೆ ಮೊದಲೇ ಕೆಲಸಕ್ಕೆ ಹೋಗುವನು. ಅವನಿಗೆ ಮೊದಲಿನಂತೆ ಕೆಲಸ ಮಾಡಲು ಇನ್ನೂ ಶಕ್ತಿಯು ಬಂದಿರುವುದಿಲ್ಲ. ಹೊರಗಡೆ ಅವನ ರೋಗ ವಾಸಿಮಾಡಿಕೊಳ್ಳಲು ಮಾಡಿರುವ ಸಾಲದ ಹೊರೆಯೊಂದು ಕಡೆ. ಈ ಕತ್ತರಿಯ ಮಧ್ಯೆ ಸಿಲುಕಿ ತನ್ನ ಸಹಪಾಠಿಗಳಂತೆ ಕೆಲಸಮಾಡಲು ಸಾಗದೆ ಮತ್ತೆ ಅವನ ಬಲವು ಕುಗ್ಗಿ ಪುನಃ ರೋಗಕ್ಕೆ ಬಲಿಯಾಗುವನು. ಈಗ ಅವನ ರೋಗವು ವಾಸಿಯಾಗಲು ಹೆಚ್ಚಿನ ದಿನಗಳು ಬೇಕಾಗುವುದಲ್ಲದೆ ಅವನು ಇನ್ನೂ ಹೆಚ್ಚಿನ ಆರ್ಥಿಕ ದುಸ್ಥಿತಿಗೆ ಸಿಲುಕಿ, ಕೊನೆಗೆ ರೋಗದಿಂದ ಎಚ್ಚೆತ್ತುಕೊಳ್ಳಲಾಗದೆ ಜೀವವನ್ನು ಬಿಡಬೇಕಾಗುವುದು. ಹೀಗಾಗುವಂತಿದ್ದರೆ ಇದು ಸಮಾಜದ ಗುರಿ ಎಂದ ಮೇಲೆ ಅವನಿಗೂ ಸಮಾಜಕ್ಕೂ ಇರುವ ಸಂಬಂಧವಾದರೂ ಎಂತಹುದು? ಈ ಬೀಳುತ್ತಿರುವ ಮತ್ತು ಬಿದ್ದಿರುವ ಮನುಷ್ಯನನ್ನು ಮೇಲೆತ್ತಿ ಅವನನ್ನು ಸಮಾಜಕ್ಕೆ ಉಪಯೋಗವಾಗುವಂತೆ ಮಾಡುವುದು ಸಮಾಜದ ಅವಶ್ಯ ಕರ್ತವ್ಯವಲ್ಲವೇ? ಇಂದಿನ ವೈದ್ಯ ಪ್ರಗತಿಯು ಮಾನವನೊಬ್ಬನ ಉದ್ಧಾರಕ್ಕೆಂದಿಗೂ ಅಲ್ಲವೇ ಅಲ್ಲ. ಅದು ಸಮಾಜದ ಉದ್ಧಾರಕ್ಕೆಂದು ತಿಳಿಯಬೇಕು. ಒಂದು ಸಮಾಜದ ಆರೋಗ್ಯಕ್ಕೂ ಅದರ ರೋಗರಹಿತ ಬೆಳವಣಿಗೆಗೂ ಆ ಸಮಾಜದಲ್ಲಿರುವ ವೈದ್ಯರೇ ಕಾರಣ. ಒಂದು ಸಮಾಜದ ಆರೋಗ್ಯವು ಸರಿಯಾಗಿಲ್ಲದಿದ್ದಲ್ಲಿ ಅದಕ್ಕೆ ಸಂಬಂಧಿಸಿದ ವೈದ್ಯರನ್ನು ಆರೋಪಿಸಬೇಕು. ಅಂದರೆ ಸಮಾಜಕ್ಕೂ ವೈದ್ಯರಿಗೂ ಯಾವ ನಿಕಟ ಸಂಬಂಧವಿದೆ ಎಂಬುದನ್ನು ವೈದ್ಯರು ತಿಳಿಯಬೇಕು ಮತ್ತು ಸಮಾಜವು ಅರಿಯಬೇಕು. ವೈದ್ಯ ಮತ್ತು ರೋಗಿಯ ಇಬ್ಬರ ಸಂಬಂಧಗಳೇ ಒಂದು ಇಡೀ ಸಮಾಜದ ಕಟ್ಟಡಕ್ಕೆ ತಳಹದಿ. ಆದರಿಂದ ಜನರ ಆರೋಗ್ಯವನ್ನು ರೂಪಾಯಿ ಆಣೆ ಪೈಗಳಿಂದ ಕೊಳ್ಳಲಾಗುವುದಿಲ್ಲ. ಇದಕ್ಕೆ ಬೇಕಾಗಿರು

ವುದು: ನಿಸ್ವಾರ್ಥಿಜನಗಳ ಸೇವೆ ಮತ್ತು ಸಹಕಾರ, ವೈದ್ಯರುಗಳ ಲಾಭದಾಶೆ ಇಲ್ಲದ ತ್ಯಾಗಬುದ್ಧಿ. ಇದರಿಂದಲೇ ಒಂದು ಆರೋಗ್ಯ ಸಮಾಜವನ್ನು ನಿರ್ಮಿಸಲು ಸಾಧ್ಯ. ಅದರಿಂದಲೇ ರೋಗಿಯ ರೋಗವನ್ನು ವಾಸಿಮಾಡುವ ಮೊದಲು ಜನರನ್ನು ರೋಗಕ್ಕೆ ಬಲಿಯಾಗದಂತೆ ಮತ್ತು ಆರೋಗ್ಯಕಾಯರಾಗುವಂತೆ ಮಾಡಲು ಯತ್ನಿಸಬೇಕು.

ವೈದ್ಯಕೀಯ ಸೌಲಭ್ಯವನ್ನು ಕೊಳ್ಳಲು ಸಾಮರ್ಥ್ಯವಿರುವವರು ಎಲ್ಲಿದ್ದರೂ ಕೂಡ ಅವರ ಮನೆಬಾಗಿಲಿನಲ್ಲಿಯೇ ಪಡೆಯಬಹುದು. ಅಂತಹ ಶ್ರೀಮಂತರ ಮಾತು ನಮಗೆ ಇಂದು ಬೇಕಿಲ್ಲ. ನಮಗಿಂದು ಜಟಿಲವಾದ ಪ್ರಶ್ನೆ ಎಂದರೆ ಈ ವೈದ್ಯ ಸೌಲಭ್ಯವನ್ನು ಕೊಳ್ಳಲು ಶಕ್ತಿ ಇಲ್ಲದಿರುವ ಸಾವಿರಾರು ಬಡಮಂದಿಯ ಪಾಡು. ಮಧ್ಯಮವರ್ಗದವರಿಗೂ ಕೂಡ ಇಂದು ಸಾಮಾನ್ಯ ವೈದ್ಯ ಸೌಲಭ್ಯವನ್ನು ಕೊಳ್ಳುವ ಸಾಮರ್ಥ್ಯವೂ ಕೂಡ ಇರುವುದಿಲ್ಲ. ಒಂದು ವೇಳೆ ಆ ರೀತಿ ಮಾಡಲು ಯತ್ನಿಸಿದರೆ ಸಾಲಕ್ಕೆ ತುತ್ತಾಗಿ ಅವರ ಆರ್ಥಿಕ ನೀತಿಯು ಬಲು ತೊಂದರೆಗೆ ಸಿಕ್ಕಿ ಪೇಚಾಡಬೇಕಾಗುವುದು. ಇನ್ನು ಕೆಲವರು ಈ ಸಾಹಸಕ್ಕೆ ಕೈಹಾಕದೆ ದೇವರು ಮಾಡಿದಂತಾಗಲಿ ಎಂದು ಬಂದ ಪಾಡನ್ನು ಅನುಭವಿಸಲು ಸಿದ್ಧರಾಗುವರು. ಎಷ್ಟೋ ಮಂದಿ ವಿಷಮ ಶೀತಜ್ವರವನ್ನು ವಾಸಿಮಾಡಿಕೊಳ್ಳಲು ವೈದ್ಯರನ್ನು ಮನೆಗೆ ಕರೆಸಿ ನೂರಾರು ರೂಪಾಯಿಗಳನ್ನು ಕೊಟ್ಟು ಕಡುಬಡವರಾಗಿರುವ ಉದಾಹರಣೆಗಳೆಷ್ಟೋ ಉಂಟು. ಹೀಗಿರುವಲ್ಲಿ ವೈದ್ಯಕೀಯ ಪರಿಣತರ, ಲ್ಯಾಬರೇಟರಿ, ಎಕ್ಸರೆ ಮುಂತಾದ ಸೌಕರ್ಯಗಳನ್ನು ಕೊಳ್ಳುವುದೆಂದರೆ ಈ ಸಾಮಾನ್ಯ ಜನರ ಕೈಗೆ ನಿಲುಕದ ಮಾತು. ಅಲ್ಲದೆ ಒಂದು ಬಗೆಯ ಆತ್ಮಗೌರವವು, ಮತ್ತು ಇತರರಿಗಿಂತ ನಾವೇನು ಕಮ್ಮಿ ಎನ್ನುವ ಮನೋಭಾವವುಳ್ಳವರಂತು ಈ ಬಗೆಯ ಕೆಲಸಕ್ಕೆ ಕೈಹಾಕಿ ಪೇಚಾಟಕ್ಕೆ ಸಿಕ್ಕಿರುವರು. ಮನೆಯಲ್ಲಿರುವ ಹೆಂಗಸರ ನರಳುವಿಕೆಯನ್ನಂತು ಹೇಳುವಂತೆಯೇ ಇಲ್ಲ. ಪಾಪ! ಏನು ಬಂದರೂ ಮಾತಾಡದೆ ಸಹಿಸುವುದು ಅವರ ಪಾಲಿಗೆ ಬಂದದ್ದು. ತಮಗೆ ರೋಗವೆಂದು ಹೇಳಿಕೊಳ್ಳುವುದಕ್ಕೆ ಸಂಕೋಚ ಅಲ್ಲದೆ ರೋಗವೆಂದರೆ ಮನೆಯಲ್ಲಿನ ಹಿರಿಯರು ಏನೆಂದಾರು ಎಂಬ ಭಯ. ಮತ್ತೊಂದು ಕಡೆ ಅತ್ತೆ ಮಾವಂದಿರ ಭಯ. "ಕಲ್ಲಿದ್ದ ಹಾಗಿದ್ದಾಳೆ ರೋಗವಂತೇ ರೋಗ" ಎಂದು ಮೂದಲಿಸುವ ಮಾತುಗಳ ಸುರಿಮಳೆ. ವರಮಾನವು ಕಡಿಮೆ ಇರುವ ಸಂಸಾರದಲ್ಲಿರುವ ಹೆಣ್ಣುಮಕ್ಕಳು ರೋಗವೆಂದು ಹೇಳಿ ಅದನ್ನು ನಿವಾರಿಸಿಕೊಳ್ಳುವುದಾದರೂ ಹೇಗೆ? ರೋಗವೆಂದು ಮನೆಯ ಗಂಡಸಿಗೆ ಹೇಳಿದರೆ ವರಮಾನದ ಬಹುಭಾಗವು ಔಷಧಿಯ ಉಪಚಾರಕ್ಕೆ ಖರ್ಚಾಗುವುದೆಂದು ತಮ್ಮಲ್ಲಿಯೇ ಅನುಭವಿಸಿಕೊಂಡು ನೋವನ್ನು ನುಂಗುತ್ತಿರುವ ಆತ್ಮತ್ಯಾಗಿಗಳು ನಮ್ಮಲ್ಲಿ ಎಷ್ಟು ಮಂದಿ ಇಲ್ಲ! ಅದರಿಂದ ವರಮಾನದ ದೃಷ್ಟಿಯಿಂದ ಸಂಸಾರದಲ್ಲಿ ಹಲವರಂತೂ ರೋಗವೆಂದು ಬಾಯಿಬಿಡುವಂತೆಯೇ ಇಲ್ಲ: "Welfare State" ಎಂದು ಹೊಗಳಿಸಿಕೊಳ್ಳುವ ಯಾವ ಸಂಸ್ಥಾನವೇ ಆಗಲಿ ನರಳುವವರನ್ನು ರಕ್ಷಿಸುವುದು ಅದರ ಪಾಲಿಗೆ ಬಿದ್ದ ಮೊದಲನೆಯ ಗುರುತರವಾದ ಜವಾಬ್ದಾರಿಯೆಂದು ತಿಳಿಯಬೇಕು. ಅದರಿಂದ ಒಂದು ಬಗೆಯ "ಸಮಾಜ ವಿಮಾ" ಪದ್ಧತಿಯು ಜಾರಿಗೆ ಬರುವುದು ಒಳ್ಳೆಯದೆನಿಸುತ್ತದೆ.

ವೈದ್ಯರ ಗುರಿಯು ರೋಗವನ್ನು ಗುಣಪಡಿಸುವುದರ ಮಟ್ಟಿಗೇ ಅಲ್ಲ; ರೋಗವನ್ನು ತಡೆಯುವಿಕೆ ಮತ್ತು ನರಳುವವರನ್ನು ಸರಿಪಡಿಸಿ ಸಮಾಜಕ್ಕೆ ಉಪಯುಕ್ತರನ್ನಾಗಿ ಮಾಡುವ ಜವಾಬ್ದಾರಿಯು ವೈದ್ಯರಿಗೆ ಸೇರಿದುದು. ಇದಕ್ಕೆ ಸಹಕಾರ ನೀಡುವುದು ಸಮಾಜದ ಕರ್ತವ್ಯ. ಇಂದು ಸಮಾಜದ ಆರೋಗ್ಯವನ್ನು ಕಾಪಾಡುವ ಜವಾಬ್ದಾರಿಯು ವೈದ್ಯರ ಮೇಲೆ ಬಿದ್ದಿರುತ್ತದೆ. ಈ ಕಾರ್ಯದಲ್ಲಿ ಜನರು ಸಹಕರಿಸಿ ವೈದಕೀಯ ಸಲಹೆಗಳನ್ನು ಆಚರಣೆಯಲ್ಲಿ ತರಲು ಯತ್ನಿಸಬೇಕು. ಮುಂದುವರಿದ ದೇಶಗಳಲ್ಲಿ ಸಾಂಕ್ರಾಮಿಕ ರೋಗಗಳ ಹೆಸರೇ ಇರುವುದಿಲ್ಲ. ಅದನ್ನು ತಡೆಗಟ್ಟುವುದರಲ್ಲಿ ಬಹುಮಟ್ಟಿಗೆ ಜಯಪ್ರದರಾಗಿದ್ದಾರೆ. ಹಿಂದುಳಿದ ನಮ್ಮ ದೇಶದಲ್ಲಿ ಈ ಜಾಡ್ಯಗಳು ಒಂದು ಜಟಿಲ ಸಮಸ್ಯೆಯಾಗಿಯೇ ಉಳಿದಿವೆ. ಇದಕ್ಕೆ ಕಾರಣವೇನು? ನಮ್ಮ ಸಾಮಾಜಿಕ ಪದ್ಧತಿಗಳು ಆರ್ಥಿಕ ಸ್ಥಿತಿಯು ತಡೆಗಟ್ಟುವ ಕ್ರಮಗಳನ್ನು ಪೂರ್ಣವಾಗಿ ಆಚರಣೆಗೆ ತರಲು ಸಾಧ್ಯವಿಲ್ಲದಂತೆ ಮಾಡಿದೆ. ಈ ರೋಗಗಳನ್ನು ಪೂರ್ಣವಾಗಿ ನಿವಾರಿಸಲು ಸಾಧ್ಯವಿದ್ದರೂ ಕೂಡ ನಮ್ಮ ಮಿತವಾಗಿರುವ ಆರ್ಥಿಕಸ್ಥಿತಿಯು ಮತ್ತು ಬೇಕಾಗುವ ವಸ್ತುಗಳ ಕೊರತೆಯು ಕಾರಣವೆಂದು ಹೇಳಬೇಕಾಗುತ್ತದೆ.

ಸಮಾಜ ಮತ್ತು ವೈದ್ಯ:

ರೋಗಗಳು ಕಣ್ಣಿಗೆ ಕಾಣದ ವಿಷಾಣುಗಳ ಅಸ್ತಿತ್ವಮಾತ್ರದಿಂದಲೇ ಅಲ್ಲ! ನಮ್ಮ ಸಾಮಾಜಿಕ ಸ್ಥಿತಿಗತಿಗಳಿಂದಲೂ ಹುಟ್ಟುತ್ತವೆ. ಅಲ್ಪವರಮಾನವಿರುವ ಸಂಸಾರಗಳಲ್ಲೇ ಕಾಯಿಲೆಗಳು ಹೆಚ್ಚೆಂದು ತಿಳಿದು ಬಂದಿರುತ್ತದೆ. ಅವರಿಗೆ ವೈದ್ಯಕೀಯ ಸೌಲಭ್ಯವು ಅಗತ್ಯವಾಗಿ ಬೇಕಿದ್ದರೂ ಕೂಡ ಅವರಿಗೆ ಸಾಕಷ್ಟು ವೈದ್ಯಸಹಾಯವು ದೊರೆಯುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಕಾರ್ಖಾನೆಗಳಲ್ಲಿ ಆಗುತ್ತಿರುವ ಆಕಸ್ಮಿಕ ಅಪಾಯಗಳು, ಗಾಯಗಳೂ ಕೂಡ ಈ ಅಲ್ಪ ವರಮಾನ ಉಳ್ಳವರಲ್ಲಿಯೇ ಪದೇ ಪದೇ ಆಗುತ್ತಿರುತ್ತವೆ. ಇದರಿಂದ ತಿಳಿದು ಬರುವ ಒಂದು ಮುಖ್ಯ ಅಂಶ, ಮನುಷ್ಯನ ಆರ್ಥಿಕ ಮಟ್ಟಕ್ಕೂ ಅವನ ಆರೋಗ್ಯಕೂ

ಸಿಂಪಿಗೂ ಒಂದಕ್ಕೊಂದಿರುವ ಸಂಬಂಧ. ಆದರಿಂದ ವ್ಯಕ್ತಿಯು ವರಮಾನವೇ ಅವನ ಆರೋಗ್ಯವನ್ನೂ ಸೂಚಿಸುತ್ತದೆ. ಆರೋಗ್ಯವು ಸಂಪತ್ತನ್ನು ಅವಲಂಬಿಸಿರುತ್ತದೆ. ಇದು ಬಹಳ ಹಿಂದಿನಿಂದ ತಿಳಿದು ಬಂದಿರುವ ಮಾತು. ಹಾಗೆಯೇ ಒಂದು ಸಮಾಜದ ಆರೋಗ್ಯವೂ ಕೂಡಾ ಸಮಾಜದ ಸಂಪತ್ತನ್ನೂ ಅವಲಂಬಿಸಿರುತ್ತದೆ. ಹಿಪೊಕ್ರಿಟಸ್‌ನು ಬಹಳ ಹಿಂದೆಯೇ ಕಸುಬಿನ ಕಾಯಿಲೆಗಳಿಂದ ಉಂಟಾಗುವ ಹಾನಿಯನ್ನು ವಿವರಿಸಿದ್ದನು. Lucretiusನು ಚಿನ್ನದ ಗಣಿಯ ಕೆಲಸಗಾರರ ರುದ್ರಗತಿಯನ್ನು ವಿವರಿಸಿದ್ದನು. ಇಂದಾದರೂ ಆರೋಗ್ಯಕ್ಕೂ ವರಮಾನಕ್ಕೂ ಇರುವ ಸಂಬಂಧವು ಇನ್ನೂ ಹೆಚ್ಚಿರುತ್ತದೆಂದು ಹೇಳಬೇಕಾಗಿಲ್ಲ. ಒಂದು ಸಮಾಜದಲ್ಲಿ ತಲೆದೋರುವ ರೋಗವನ್ನು ತಡೆಗಟ್ಟುವುದರಲ್ಲಿ ಒಬ್ಬ ವ್ಯಕ್ತಿಯ ಪಾತ್ರ ಮಾತ್ರವಲ್ಲ; ಅವನು ಬಾಳುತ್ತಿರುವ ಸಮಾಜದ ವ್ಯಕ್ತಿಗಳೆಲ್ಲರಿಗೂ ಸಂಬಂಧಿಸಿರುವ ವಿಷಯವಾಗಿರುತ್ತದೆ.

ರೋಗವನ್ನು ಗುಣಪಡಿಸುವ ಮತ್ತು ನೋಡಿಕೊಳ್ಳುವ ಘಟ್ಟವಂತು ತೃಪ್ತಿಕರವಾಗಿಲ್ಲ. ಹಾಗೆ ನರಳುವ ಪ್ರತಿಯೊಬ್ಬ ರೋಗಿಯನ್ನೂ ತೃಪ್ತಿಕರವಾಗಿ ಗುಣಪಡಿಸಿ ಉಪಯುಕ್ತನನ್ನಾಗಿ ಮಾಡಬೇಕಾಗಿದ್ದರೆ ಅಪಾರ ಹಣವು ಬೇಕು. ಯಾವ ಆಡಳಿತವು ತಾನೇ ಈ ಅಪಾರ ಹಣವನ್ನು ಜನತೆಗೆ ಎಲ್ಲಿಂದ ಒದಗಿಸೀತು? ಆದರಿಂದಲೇ ಆಸ್ಪತ್ರೆಗಳಲ್ಲಿ ರೋಗಿಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲವೆಂಬ ಕೂಗು ಕೇಳುತ್ತಿರುವುದು. ಅಷ್ಟು ರೋಗಿಗಳನ್ನು ಸಮರ್ಪಕವಾಗಿ ನೋಡಿಕೊಳ್ಳಲು ಬೇಕಾಗಿರುವ ಡಾಕ್ಟರುಗಳ ಸಂಖ್ಯೆಯಾದರೂ ಅಂದಾಜು ಮಾಡಲಾಗಿದೆಯೇ? ಎಲ್ಲೆಲ್ಲೂ ಕಣ್ಣೊರಿಸುವ ಕೆಲಸಗಳೇ ಕಂಡುಬರುತ್ತಿವೆ. ಈಗ ತಾನೆ ಮುಂದುವರಿದಿರುವ ಇಂಗ್ಲೆಂಡೂ ಕೂಡ ನ್ಯಾಷನಲ್ ಹೆಲ್ತ್ ಕ್ರಮವನ್ನು ಜಾರಿಗೆ ತಂದು ಅದನ್ನು ತೃಪ್ತಿಕರವಾಗಿ ನಡಿಸಲು ಕಷ್ಟಪಡುತ್ತಿದೆ. ಇನ್ನೂ ಹೆಚ್ಚು ಮುಂದುವರಿದಿರುವ ಅಮೆರಿಕವೂ ಕೂಡ ಈ ಪದ್ಧತಿಯನ್ನು ಆಚರಣೆಗೆ ತರಲು ಹಿಂದುಮುಂದು ನೋಡುತ್ತಿದೆ. ಇನ್ನು ನಮ್ಮ ದೇಶದ ಪಾಡೇನು? ರೋಗಿಯು ಗುಣಮುಖನಾಗಬೇಕಾದರೆ ಹಣವನ್ನು ನೀರಿನಂತೆ ಚೆಲ್ಲಬೇಕು. ನಿಜ. ಮನುಷ್ಯನಿಗೆ ಹಣವಿದ್ದಷ್ಟೂ ರೋಗವು ಬೇಗ ಗುಣಮುಖವಾಗುತ್ತದೆಂಬುದು ನಿರ್ವಿವಾದವಾದ ಮಾತು. ಎಲ್ಲಿ ವೈದ್ಯ ಸೌಕರ್ಯದ ಅಗತ್ಯವಿದೆಯೋ ಅಲ್ಲಿ ವೈದರೇ ಇಲ್ಲ. ಗ್ರಾಮಾಂತರಗಳ ವೈದ್ಯಕೀಯ ಸಹಾಯವು ಇಲ್ಲನೆಂದೇ ಹೇಳಬೇಕು. ಎಷ್ಟೋ ಹಳ್ಳಿಗಳಲ್ಲಿ ವೈದ್ಯರಿಲ್ಲದ ಕಟ್ಟಡಗಳು ಕಾಣುತ್ತಿವೆ. ಈ ಸ್ಥಿತಿ ಏಕೆ? ಏಕೆ ವೈದ್ಯರು ಗ್ರಾಮಜೀವನವನ್ನು ಬಯಸುವುದಿಲ್ಲ? ಅದರ ಗುಟ್ಟೇನು? ಗ್ರಾಮದಲ್ಲಿರುವವರು ಬಹು ಮಂದಿ ತೀರಾ ಬಡವರು. ತಿನ್ನಲು, ಉಡಲು ಸಹ ಗತಿ ಇಲ್ಲದವರಾಗಿದ್ದಾರೆ. ಇನ್ನು ಅಲ್ಲಿ ನೆಲಸುವ ವೈದ್ಯರಿಗೇನು ಕೊಟ್ಟಾರು? ಆದರಿಂದ ಯಾವ ವೈದ್ಯನು ತಾನೇ ಹಳ್ಳಿಗೆ ಹೋಗಲು ಇಷ್ಟಪಡುತ್ತಾನೆ? ಅಲ್ಲದೆ ಕೆಲವು ಹಳ್ಳಿಗಳಿಗಂತು ಸರಿ ಎಂದು ಹೇಳಬಹುದಾದ ದಾರಿಗಳೇ ಇರುವುದಿಲ್ಲ. ಇನ್ನುಳಿದ ಸೌಕರ್ಯಗಳಂತು ಏನೂ ಕೇಳಬೇಡಿ. ತನ್ನ ವಿದ್ಯಾಭ್ಯಾಸವನ್ನು ಪಟ್ಟಣದಲ್ಲಿ ಮುಗಿಸಿದ ವೈದ್ಯನು ನಗರದ ಆಕರ್ಷಣೆಯನ್ನು ತೊರೆದು ಗ್ರಾಮದಲ್ಲಿ ನೆಲಸಬೇಕಾದರೆ ಅವನ ಜೀವನಕ್ಕೆ ಸರಿಯಾದ ಪರಿಹಾರವನ್ನಾದರೂ ಕೊಡಬೇಕು. ನಗರದಲ್ಲಿ ವೃತ್ತಿಯನ್ನು ಪ್ರಾರಂಭಿಸಿದರೆ ಇಂದಲ್ಲ ನಾಳೆಯಾದರೂ ಮೇಲಕ್ಕೇರುವ ಆಶೆಯಾದರೂ ಇರುತ್ತದೆ. ಹಳ್ಳಿಯಲ್ಲಿ ಸಿಕ್ಕಿಕೊಂಡರೆ ಅವನ ಮುಂದಿನ ಅಭ್ಯುದಯದ ಗತಿಯೇನು? ಹಳ್ಳಿಯಲ್ಲಿ ನೆಲೆಸುವ ವೈದ್ಯನಿಗೆ ಸರಿಯಾದ ಪರಿಹಾರವನ್ನು ಕೊಡಲು ಸಮಾಜವಾಗಲೀ ಆಡಳಿತವಾಗಲೀ ಸಿದ್ಧವಿದ್ದಲ್ಲಿ ಹಳ್ಳಿಯಲ್ಲಿ ವೈದ್ಯರ ಕೊರತೆ ನಿವಾರಣೆಯಾಗುತ್ತದೆಂದು ನನ್ನ ನಂಬಿಕೆ. ಇನ್ನೊಂದು ಮುಖ್ಯ ಅಡಚಣೆ ಎಂದರೆ ವೈದ್ಯರುಗಳು ದೇಶದಲ್ಲಿ ಸರಿಯಾಗಿ ಹಂಚಲ್ಪಟ್ಟಿಲ್ಲ. ನಗರಗಳಲ್ಲಿಯೂ ಪಟ್ಟಣಗಳಲ್ಲಿಯೂ ಇವರ ಸಂಖ್ಯೆಯೂ ಹೆಚ್ಚಿ ಎಷ್ಟೋ ಕಡೆ ವೈದ್ಯರುಗಳು ಜೀವನವನ್ನು ಹೊರೆಯುವುದೇ ದುಸ್ತರವಾಗಿರುತ್ತದೆ. ಇಷ್ಟು ಕಷ್ಟವಾದರೂ ಪಟ್ಟಣವಾಸವನ್ನು ಬಿಟ್ಟು ಬೇರೆ ಕಡೆ ಹೋಗಲು ಇಷ್ಟ ಪಡುವುದಿಲ್ಲ. ಉಪಾಧ್ಯಾಯರೂ ವೈದ್ಯರೂ ಮಿಷನರಿಗಳಂತೆ ಕೆಲಸಮಾಡಿ ದೇಶವು ಮುಂದುವರಿಯುವಂತೆ ಮಾಡಬೇಕೆಂಬುದು ಎಲ್ಲರ ಮನವಿಯಾಗಿರುತ್ತದೆ. ಆದರೆ ಯಾವ ಉಪಾಧ್ಯಾಯ, ವೈದ್ಯನೇ ಆಗಲೀ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಕೆಲಸ ಮಾಡಲು ಸಾಧ್ಯವಿಲ್ಲವೆಂಬುದನ್ನು ಜನ ತಿಳಿಯಬೇಕು. ಇದನ್ನು ತಿಳಿದು ಗೌರವಯುತವಾದ ಜೀವನ ನಡೆಸಲು ಸಹಾಯ ಒದಗಿಸಿದರೆ ಯಾರಾದರೂ ಮಿಷನರಿಗಳಂತೆ ಕೆಲಸಮಾಡಲು ಮುಂದೆ ಬಂದಾರು. ಆದರಿಂದ ಜವಾಬ್ದಾರಿ ಹೊತ್ತವರು ಈ ಸಮಸ್ಯೆಗಳನ್ನೂ ನೈಜಿಕ ದೃಷ್ಟಿಯಿಂದಲೂ ವಿಜ್ಞಾನ ದೃಷ್ಟಿಯಿಂದಲೂ ಕಾರ್ಯರೂಪಕ್ಕೆ ತರುವ ಕೋಣದಿಂದಲೂ ವಿಮರ್ಶಿಸಿ ಸರಿಯಾದ ವೇತನವು ದೊರಕುವಂತೆ ಮಾಡಿದ್ದೇ ಆದರೆ ಹಳ್ಳಿಗಳಲ್ಲಿ ನೆಲೆಸಲು ಹೆಚ್ಚು ಹೆಚ್ಚು ಮಂದಿ ವೈದ್ಯರು ;ಮುಂದೆ ಬಂದಾರು. ನಮ್ಮ ಗ್ರಾಮಗಳಲ್ಲಿನ ವೈದ್ಯರ ಅಭಾವವು ನೀಗೀತು. ಆಡಳಿತದವರು ನಿಜವಾಗಿಯೂ ಜನರ ಆರೋಗ್ಯವನ್ನು ಕಾಪಾಡುವ ಕಂಕಣವನ್ನು ತೊಟ್ಟಿದ್ದರೆ ಈ ಸಲಹೆಯ ಕಡೆಗೆ ಗಮನ ಕೊಡುವುದು ಅತ್ಯಗತ್ಯ. ಇದನ್ನು ಕಾರ್ಯರೂಪಕ್ಕೆ ತರಲು ಆಡಳಿತದವರೇ ಆಗಲೀ ಅಥವಾ ಸಮಾಜವೇ ಆಗಲಿ ಇಬ್ಬರೂ ಭಾರವನ್ನು ವಹಿಸಿ ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವೆನಿಸುತ್ತದೆ.

ವೈದ್ಯಶಾಸ್ತ್ರದಲ್ಲಿ ಇತ್ತೀಚೆಗಂತು ಹೆಚ್ಚು ಪರಿಶೋಧನೆ

ಗಳು ನಡೆದು ಹೆಚ್ಚು ಫಲಕಾರಿಯಾದ ದಿವ್ಯ ಔಷಧಿಗಳು ಕಂಡು ಹಿಡಿಯಲ್ಪಟ್ಟಿವೆ. ಅಲ್ಲದೆ ಪ್ರತಿ ಅಂಗಾಂಗಗಳ ರೋಗ ಗಳಲ್ಲಿ ಹೆಚ್ಚು ಅನುಭವ ಮತ್ತು ಪರಿಶ್ರಮ ಪಡೆದ ಪರಿಣತರು ದಿನೇ ದಿನೇ ಹೆಚ್ಚುತ್ತಿದ್ದಾರೆ. ಕಾಯಲೆಗಳ ಹುಟ್ಟನ್ನು ಪೂರ್ಣವಾಗಿ ಪತ್ತೆಹಚ್ಚಿರುತ್ತಾರೆ. ಅಲ್ಲದೆ ನವೀನ ಸಲಕರಣೆ ಗಳ ಸಹಾಯದಿಂದ ರೋಗದ ಸ್ವರೂಪವನ್ನು ನಿರ್ಧರಿಸುವ ಕ್ರಮವು ಹೆಚ್ಚು ಬಳಕೆಯಲ್ಲಿ ಬರುತ್ತಿದೆ. ಹಿಂದೆ ನಾವು ಯಾವುದನ್ನು ಕಣ್ಣುಗಳ ಮತ್ತು ಮುಟ್ಟುವುದರ ಮೂಲಕ ತಿಳಿಯುತ್ತಿದ್ದವೋ ಅದನ್ನು ಇಂದು ಲ್ಯಾಬರೇಟರಿ, ಎಕ್ಸರೇ ಮುಂತಾದ ಸಲಕರಣೆಗಳ ಸಹಾಯದಿಂದ ಬೇಗ ಪತ್ತೆಹಚ್ಚ ಬಹುದಾಗಿದೆ. ಹೃದಯ ರೋಗಗಳಲ್ಲಂತು ಶಸ್ತ್ರ ಚಿಕಿತ್ಸೆಯು ಜಯಪ್ರದವಾಗಿದೆ ಎನ್ನುವ ಮಟ್ಟಕ್ಕೆ ವೈದ್ಯ ವಿಜ್ಞಾನವು ಮುಂದುವರಿದಿದೆ. ಇದೆಲ್ಲಾ ಸರಿ. ಆದರೆ ಆರ್ಥಿಕ ಸ್ಥಿತಿ ಮಾತ್ರ ಬದಲಾಯಿಸಿಲ್ಲ. ಕಳೆದ ಯುದ್ಧ ಮುಗಿದ ಮೇಲಂತು ದಿನೇ ದಿನೇ ಐಶ್ವರ್ಯವಂತರು ಹೆಚ್ಚು ಐಶ್ವರ್ಯವಂತ ರಾಗುತ್ತಲೂ ಬಡವರು ಕಡುತರ ಬಡವರಾಗುತ್ತಲೂ ಇದ್ದಾರೆ. ಅದರಿಂದ ಇಂದಿನ ನವಶೋಧನೆಗಳು ಇನ್ನೂ ಐಶ್ವರ್ಯವಂತರ ಹಿಡಿತದಲ್ಲಿರುತ್ತವೆಯೇ ಹೊರತು ಜನ ಸಾಮಾನ್ಯರ ಮತ್ತು ಹಳ್ಳಿಗಳ ಮೂಲೆ ಮೂಲೆಗಳನ್ನೂ ಮುಟ್ಟಿಯೇ ಇಲ್ಲ. ಹಳ್ಳಿಗರ ಪಾಡನ್ನೂ ಹೇಳುವಂತೆಯೇ ಇಲ್ಲ. ಅವರಿಗೆ ಸರಿಯಾದ ಆಹಾರವೂ ಕೂಡ ದೊರಕು ತ್ತಿಲ್ಲ. ಅವರ ಆಹಾರವನ್ನೂ ಪಟ್ಟಣಗಳು ಸೂರೆ ಹೊಡೆ ಯುತ್ತಿವೆ. ಅವರು ಜೀವನ ಮಾಡುವ ಗುಡಿಸಲುಗಳ ಸ್ಥಿತಿ ಯಂತು ವರ್ಣಿಸುವಂತೆಯೇ ಇಲ್ಲ. ಅವರ ಸುತ್ತು ಮುತ್ತ ಲಿನ ವಾತಾವರಣವು ಬಹಳ ಮಟ್ಟಿನ ಹೀನಸ್ಥಿತಿಯಲ್ಲಿರುತ್ತದೆ. ಆ ವಾತಾವರಣವೇ ಹಳ್ಳಿಗಳ ಅನಾರೋಗ್ಯಕ್ಕೆ ಕಾರಣವಾಗಿ ಹಳ್ಳಿಗರ ಆರೋಗ್ಯವನ್ನೂ ಕೆಡಿಸುತ್ತದೆ. ದೇಹ ಪುಷ್ಟಿ ಯಂತು ಕನಸಿನ ಮಾತಾಗಿದೆ. ಇರುವುದರಲ್ಲಿ ನಗರವಾಸಿ ಗಳ ಮತ್ತು ಪಟ್ಟಣಿಗರ ಸ್ಥಿತಿಯಾದರೂ ವಾಸಿ. ಅವರಿಗಾ ದರೂ ಹೆಸರು ಮಾತ್ರಕ್ಕಾದರೂ ಹಲಕೆಲವು ಆಸ್ಪತ್ರೆಗಳೂ ಚಿಕಿತ್ಸಾ ಕೇಂದ್ರಗಳಾದರೂ ಇವೆ. ಗ್ರಾಮಸ್ತರಿಗಾಗಿ ಏನೂ ಇರುವುದಿಲ್ಲ. ಹೀಗಿರುವಲ್ಲಿ ಆಧುನಿಕ ವೈದ್ಯ ವಿದ್ಯೆಯ ಸೌಲಭ್ಯವಾದರೂ ದೊರಕುವುದೆಂತು? ಸ್ವತಂತ್ರರೆಂದು ನಾವು ಹೊಗಳಿಸಿಕೊಳ್ಳಬೇಕಾದರೆ ಬರೀ ಪಟ್ಟಣಿಗರ ಮತ್ತು ನಗರ ವಾಸಿಗಳನ್ನೂ ತೃಪ್ತಿ ಪಡಿಸಿದರೆ ಸಾಲದು. ನಮ್ಮ ಗಮನವು ಮೂಲೆ ಮೂಲೆಗಳಲ್ಲಿರುವ ಹಿಂದುಳಿದಿರುವ ಹಳ್ಳಿಗಳ ಕಡೆಗೆ ಹರಿಯಬೇಕು. ವೈದ್ಯ ಸಹಾಯದಲ್ಲಿ ದೇಹವನ್ನು ವಾಸಿ ಮಾಡಿದರಷ್ಟೇ ಸಾಲದು, ರೋಗಿಯ ಮನಸ್ಸು ಅವನು ಜೀವಿ ಸುತ್ತಿರುವ ಸನ್ನಿವೇಶದಲ್ಲಿ ಅವನಿಗುಂಟಾಗಿರುವ ತೊಡಕು ಗಳನ್ನು ಅರಿತುಕೊಂಡು ರೋಗಕ್ಕೆ ಚಿಕಿತ್ಸೆ ನಡಿಸಬೇಕು. ರೋಗಿಯ ಮನಸ್ಸು ಅವನು ಸಿಕ್ಕಿಬಿದ್ದಿರುವ ತೊಡಕುಗಳನ್ನು ಅರ್ಥ ಮಾಡಿಕೊಳ್ಳದೇ ಚಿಕಿತ್ಸೆಗೆ ಪ್ರಾರಂಭಿಸಿದರೆ ಏನೂ ಪ್ರಯೋಜನ ದೊರೆಯಲಾರದು: ಇದರಿಂದ ರೋಗವು ಗುಣವಾಗಲು ಹೆಚ್ಚು ಕಾಲವು ಬೇಕಾಗುವುದು. ಮತ್ತು ವಾಸಿಯಾದರೂ ಕೂಡ ಅವನಿಗೆ ಹೆಚ್ಚು ಪ್ರಯೋಜನವಾಗ ಲಾರದು. ಇತ್ತೀಚೆಗೆ ರೋಗಿಯ ಸನ್ನಿವೇಶ ಮತ್ತು ಅವನ ಮನೋಭಾವಗಳಿಗೆ ಹೆಚ್ಚು ಗಮನವನ್ನು ಕೊಡಲಾಗುತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ರೋಗಿಯ ಮನಸ್ಸನ್ನು ಮತ್ತು ಸನ್ನಿವೇಶಗಳನ್ನು ತಿಳಿದುಕೊಳ್ಳಲು Social Welfare Department ಒಂದು ರಚಿತವಾಗಿರುತ್ತದೆ. ರೋಗಿಯ ರೋಗಕ್ಕೆ ಕಾರಣವು ಗಂಡ ಹೆಂಡಿರ ಬಾಂಧವ್ಯ, ಕೆಲಸಕ್ಕೂ ಅವನಿಗಿರುವ ಸಂಬಂಧ, ತಂದೆ ತಾಯಿಗಳಿಗೆ ಮಗುವಿನ ವರ್ತನೆ ಅಥವಾ ಸ್ಕೂಲಿನಲ್ಲಿ ಕಾಣುವ ಮಗುವಿನ ವರ್ತನೆಗೆ ಮನೆಯಲ್ಲಿರುವ ಗೊಂದಲವು ಮುಖ್ಯ ಕಾರಣವೆಂದು ಅನೇಕ ರಿಗೆ ತಿಳಿದಿಲ್ಲ. ಇದೆಲ್ಲವನ್ನೂ ತಿಳಿಯಬೇಕಾದರೆ ವೈದ್ಯನು ರೋಗಿಯೊಂದಿಗೆ ಹೆಚ್ಚು ಕಾಲವನ್ನು ಕಳೆದು ಅವನ ಕೊರ ಗಿನ ಕಾರಣವನ್ನು ಪತ್ತೆ ಹಚ್ಚಿ ವಾತಾವರಣವು ಹಿತವಾಗು ವಂತೆ ಮಾಡಿದ ಹೊರತು ರೋಗವು ಕ್ರೂರ ರೂಪವನ್ನು ಹೊಂದುವುದು.

ದೇಹದಲ್ಲಿ ರೋಗವು ತಲೆದೋರಬೇಕಾದರೆ ಪ್ರೇಮ, ದ್ವೇಷ, ಆಶೆ, ನಿರಾಶೆ, ಭಯ, ಗಾಬರಿ ಒತ್ತಡಗಳ ಗೊಂದಲ ಗಳ ಹಿನ್ನೆಲೆ ಇದ್ದೇ ಇರುತ್ತದೆ. ಬಡಿದುಕೊಳ್ಳುವ ಎದೆ, ಬೆವರುವ ಮೈ, ನಡುಗುವ ಸ್ವರೂಪ, ಇವೆಲ್ಲವೂ ಮಾನಸಿಕ ಅಸ್ಥಿರತೆಯನ್ನು ಸೂಚಿಸುತ್ತವೆ. ಇದರಿಂದ ದೇಹಕ್ಕೂ ಮನಸ್ಸಿಗೂ ನಿಕಟವಾದ ಸಂಬಂಧವಿರುತ್ತದೆಂಬುದು ವ್ಯಕ್ತ ವಾಗುತ್ತದೆ. ಅದರಿಂದ ದೇಹದ ಜೊತೆಗೆ ಮನಸ್ಸಿಗೂ ಚಿಕಿತ್ಸೆ ನಡೆಸಬೇಕು. ಇಲ್ಲದಿದ್ದರೆ ಹೆಚ್ಚು ಪ್ರಯೋಜನ ವಾಗಲಾರದು. ಚಿಕಿತ್ಸೆಮಾಡುವಾಗ ನಾವು ದೇಹವನ್ನು ನೋಡುವುದರ ಜೊತೆಗೆ ಮನುಷ್ಯನನ್ನೂ ಅವನ ಸನ್ನಿವೇಶ ವನ್ನೂ ಮೊದಲು ತಿಳಿಯಬೇಕು. ಇದನ್ನು ಯಶಸ್ವಿಗೊಳಿಸ ಬೇಕಾದರೆ ವೈದ್ಯಕೀಯ ವಿಷಯಗಳು ಜನಸಾಮಾನ್ಯಕ್ಕೆ ತಿಳಿಯುವಂತೆ ಹೆಚ್ಚು ಹೆಚ್ಚು ಪ್ರಚಾರ ನಡಿಸಬೇಕು. ಮತ್ತು ದೇಶಕ್ಕೆ ಸಾಕಾಗುವಷ್ಟು ವೈದ್ಯರ ಸಂಖ್ಯೆಯನ್ನು ತಯಾರಿ ಸುವ ಮತ್ತು ಅವರನ್ನು ಸರಿಯಾಗಿ ದೇಶದಾದ್ಯಂತ ಸಮ. ನಾಗಿ ಹಂಚುವ ಏರ್ಪಾಡನ್ನು ಮಾಡಬೇಕು.

ಇನ್ನೊಂದು ಮುಖ್ಯ ಅಡಚಣೆ—ಜನರಲ್ಲಿ ಆಂಗ್ಲೇಯ ವೈದ್ಯಪದ್ಧತಿಯಲ್ಲಿರುವ ಅನಾಸಕ್ತಿ. ಇದಕ್ಕೆ ಹಳೆಯ ಸಂಪ್ರ ದಾಯ ಪದ್ಧತಿಗಳು ನಮ್ಮ ಸಾಮಾಜಿಕ ಪದ್ಧತಿಗಳು, ಸ್ವಾರ್ಥಿ ಗಳ ಕೈಚಳಕ ಮತ್ತು ಅಜ್ಞಾನ ಇವೆಲ್ಲವೂ ಕಾರಣವಾಗಿರು ತ್ತವೆ. ಅಖಿಳ ಭಾರತ ಶಸ್ತ್ರಚಿಕಿತ್ಸಕರ ಸಮ್ಮೇಳನದ

ಉದ್ಘಾಟನಾ ಭಾಷಣದಲ್ಲಿ ಪಂಡಿತ ಜವಾಹರ್‌ಲಾಲ್ ನೆಹರೂ ರವರು "ನಮ್ಮ ದೇಶಕ್ಕೆ ಸರಿಹೊಂದುವ ಮತ್ತು ಅಗ್ಗವಾದ ವೈದ್ಯಪದ್ಧತಿಯು ಆಯುರ್ವೇದ ಒಂದೇ ಎನ್ನುವ ತಜ್ಞರ ಅಭಿಮತಕ್ಕೆ ಉತ್ತರಕೊಡುತ್ತ, ಆಯುರ್ವೇದ ಪದ್ಧತಿಗಿಂತಲೂ ಇನ್ನೂ ಅಗ್ಗವಾಗಿರುವುದೊಂದಿದೆ, ಅದೇ ಸಾವು; ಅದನ್ನಪ್ಪಿಕೊಂಡು ಮುಗಿಸಬಾರದೇಕೆ" ಎಂದಿಹರು. ಹಾಗೆ ಆಯುರ್ವೇದವು ಹೆಚ್ಚು ಫಲಕಾರಿಯೂ ಅಗ್ಗವೂ ಆದ ಪದ್ಧತಿಯಾಗಿದ್ದಿದ್ದರೆ ಇಂದು ವಿಶ್ವ ಆರೋಗ್ಯ ಸಂಸ್ಥೆಯು ಇಡೀ ಪ್ರಪಂಚದಲ್ಲಿ ಹರಡಲು ಹಿಂದು ಮುಂದು ನೋಡುತ್ತಿರಲಿಲ್ಲವೆಂದು ನಿಸ್ಸಂಶೇಹವಾಗಿ ಹೇಳಬಹುದು. ಆಯುರ್ವೇದದಲ್ಲಿ ಫಲಕಾರಿಗಳಾದ ಔಷಧಿಗಳೇ ಇಲ್ಲವೆಂದು ನಮ್ಮ ಅಭಿಪ್ರಾಯವಲ್ಲ. ವೈಜ್ಞಾನಿಕ ಶೋಧನೆಗಳಿಂದ ದಿವ್ಯ ಔಷಧಿಗಳೆಂದು ಹೊರಬಿದ್ದಿರುವ ಪೆನಿಸಿಲಿನ್, ಸ್ಟ್ರೆಪ್ಟೋಮೈಸಿನ್, ಆರಿಯೋಮೈಸಿನ್ ಇವುಗಳು ಬೂಜು ಜಾತಿಗೆ ಸೇರಿದ ಸಸ್ಯವರ್ಗದಿಂದ ತಯಾರಿಸಿದುವಲ್ಲದೆ ಬೇರೆ ಅಲ್ಲ. ಆಯುರ್ವೇದ ಪದ್ಧತಿಯು ವಿಜ್ಞಾನದ ಶೋಧನೆಗೆ ಸಿಲುಕದೆ ಇಂದು ಹಿಂದುಳಿದಿರುವುದು. ಇನ್ನು ಮುಂದಾದರೂ ಆಯುರ್ವೇದದಲ್ಲಿ ಫಲಕಾರಿ ಎಂದು ಹೇಳಲ್ಪಟ್ಟಿರುವ ಗಿಡಮೂಲಿಕೆಗಳನ್ನು ವಿಜ್ಞಾನದ ಸಹಾಯದಿಂದ ಫಲಾಫಲಗಳನ್ನು ನಿರ್ಧರಿಸಿ ಮುಂದುವರಿಯುವುದು ಮೇಲು. ನಮ್ಮ ದೇಶಕ್ಕೆ ಸರಿಹೊಂದುವ ವೈದ್ಯಪದ್ಧತಿಯನ್ನು ಆರಿಸುವ ಸ್ವಾತಂತ್ರ್ಯವು ನಮ್ಮದೇ ಆಗಿರುತ್ತದೆ. ಕಡ್ಡಾಯದಿಂದ ಆಂಗ್ಲ ವೈದ್ಯಪದ್ಧತಿಯನ್ನು ಹೊರಿಸಬೇಕೆಂಬ ನಿಯಮವೇನೂ ಇಲ್ಲ. ಜನಗಳಿಗೆ ಆಧುನಿಕ ವೈದ್ಯದಲ್ಲಿ ನಂಬಿಕೆ ಹುಟ್ಟಿಸುವಂತೆ ಮಾಡಬೇಕಾದುದು ನಮ್ಮ ಕರ್ತವ್ಯ. ಇದನ್ನು ಮಾಡಿದ ಹೊರತು ನಮ್ಮ ಸಮಾಜದ ಆರೋಗ್ಯವೂ ಆರ್ಥಿಕ ಸಂಪತ್ತೂ ಉತ್ತಮಗೊಳ್ಳಲಾರದು.

ಕೆಲಸಕ್ಕೆ ಸರಿಹೊಂದಿಸುವ ಅಭ್ಯಾಸ (Rehabilitation)

ಕೊನೆಯ ಘಟ್ಟವಾದ, ರೋಗಿಯು ಗುಣವಾದ ಮೇಲೆ ಅವನನ್ನು ಸಮಾಜಕ್ಕೆ ಉಪಯುಕ್ತನನ್ನಾಗಿ ಮಾಡುವ ಭಾರವು ಅತಿ ಗುರುತರವಾದುದು. ರೋಗದಿಂದ ಚೇತರಿಸಿಕೊಂಡ ಮನುಷ್ಯನನ್ನು ಆದಷ್ಟು ಬೇಗ ಅವನ ಕಾಲಿನ ಮೇಲೆ ನಿಲ್ಲುವಂತೆ ಮಾಡುವ ಕಾರ್ಯವು ಸಮಾಜದ ಕರ್ತವ್ಯಗಳಲ್ಲಿ ಅತಿ ಮುಖ್ಯವಾದುದು. ಅವನಿಗೆ ಮೊದಲಿನ ಕೆಲಸವಮಾಡಲು ಸಾಕಷ್ಟು ಶಕ್ತಿ ಇಲ್ಲದಿದ್ದ ಪಕ್ಷದಲ್ಲಿ ಅವನ ಕೈಲಾಗುವಂತಹ ಕಸುಬನ್ನು ಕೊಟ್ಟು ಪ್ರಯೋಜನಕಾರಿಯಾಗುವಂತೆ ಮಾಡುವುದು ಸಮಾಜದ ಕೆಲಸ. ಅಂಗವಿಕಲರ ನಿಸ್ಸಹಾಯಕರನ್ನು ಸಮಾಜಕ್ಕೆ ಯೋಗ್ಯರನ್ನಾಗಿ ಮಾಡುವ ಕೆಲಸದಲ್ಲಿಯೂ ಕೂಡ ಸಮಾಜದ ಮತ್ತು ವೈದ್ಯರ ಪಾತ್ರವು ಇನ್ನೂ ಹೆಚ್ಚಿನದು. ಇದರ ಕಡೆಗೆ ನಮ್ಮ ದೇಶದವರು ಹೆಚ್ಚು ಗಮನಕೊಟ್ಟಿಲ್ಲ. ಈ ಅದೃಷ್ಟಹೀನರನ್ನು ಅವರ ಕೈಯಲ್ಲಾಗುವ ಕೆಲಸವನ್ನು ಮಾಡಲು ಉತ್ತೇಜನವನ್ನು ಕೊಟ್ಟು ಸಮಾಜಕ್ಕೆ ಭಾರವಾಗದ ರೀತಿಯಲ್ಲಿ ಅವರನ್ನು ರಕ್ಷಿಸಿ ಅವರಿಗೆ ಜೀವನವು ಸಾರವುಳ್ಳದ್ದು ಎಂಬ ಅಂಶವನ್ನು ಎತ್ತಿ ತೋರಿಸಬೇಕಾದ ಜವಾಬ್ದಾರಿಯು ಸಮಾಜಕ್ಕೆ ಸೇರಿದ್ದು. ಅವರಿಗೆ ಸರಿಯಾದ ಕಸಬನ್ನು ದೊರಕಿಸಿ, ಜೀವನವನ್ನು ಹೊರೆಯುವಂತೆ ಮಾಡಿ, ಅವರೂ ಸಹ ದೇಶಕ್ಕೆ ಬೇಕಾದವರೆಂದು ತೋರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಈ ಗುಂಪಿಗೆ ಆಕಸ್ಮಿಕ ಅಪಾಯಕ್ಕೆ ಗುರಿಯಾದವರು, ಗಾಯಗೊಂಡವರು, ಅಂಗವಿಕಲರು, ಹೃದಯ ರೋಗವುಳ್ಳವರು, ಕೀಲು ನೋವುಳ್ಳವರು, ಅಂಧರೂ, ಕಿವುಡರೂ ಸೇರಿರುತ್ತಾರೆ.

ಸಮಾಜ ವೈದ್ಯ (Social medicine)

ಒಬ್ಬನು ತೊಡಕಿನಲ್ಲಿ ಸಿಕ್ಕಿದಾಗ ಇನ್ನೊಬ್ಬನು ಸಹಾಯ ಮಾಡುವುದೂ ಸಹಾನುಭೂತಿ ತೋರಿಸುವುದು ಬಹಳ ಹಿಂದಿನಿಂದ ಬಂದಿರುವ ಮಾನವ ಸಂಪ್ರದಾಯ. ಏಕೆಂದರೆ ಮನುಷ್ಯನು ಬರಿ ಪ್ರಾಣಿಮಾತ್ರವಲ್ಲ, ಅವನಿಗೆ ಭಾವನೆಗಳಿವೆ. ಆತನು

ಕೆಲಸವಮಾಡಬೇಕು, ಆಡಬೇಕು, ಪ್ರೀತಿಸಬೇಕು ಮತ್ತು ಪೂಜಿಸಬೇಕು; ಅವನು ಒಂದು ಸಂಸಾರ ಕಟ್ಟಬೇಕು; ಒಂದು ಜನಾಂಗವಾಗಬೇಕು; ಒಂದು ಸಂಸ್ಕೃತಿ ಬೆಳೆಸಬೇಕು, ಅಲ್ಲದೆ ತನ್ನವರೊಂದಿಗೆ ಬದುಕಬೇಕು, ಬಾಳಬೇಕು.

ಸಮಾಜದಲ್ಲಿ ತೋರಬಹುದಾದ ತೊಂದರೆಗಳನ್ನೂ ರೋಗಗಳನ್ನೂ ನಿವಾರಿಸಿ ಸಮಾಜದ ಆರೋಗ್ಯವನ್ನು ಕಾಪಾಡುವುದೇ ಸಮಾಜ ವೈದ್ಯದ ಹೆಗ್ಗುರಿ. ತಡೆಗಟ್ಟಬಹುದಾದ ರೋಗಗಳನ್ನು ತಡೆಯುವುದೂ ಮಾನವನ ಶಕ್ತಿಯನ್ನು ಕಾಪಾಡುವುದೂ ಅವನ ದೈಹಿಕ ಮಾನಸಿಕ ನೈತಿಕ ಮಟ್ಟವನ್ನು ಎತ್ತುವುದೂ ಮುಖ್ಯ ಧ್ಯೆಯಗಳು. ಆರೋಗ್ಯವೂ ಅನಾರೋಗ್ಯವೂ ಎರಡು ಶಕ್ತಿಗಳನ್ನು ಅವಲಂಬಿಸಿರುತ್ತವೆ. ಮೊದಲನೆಯದು ವಂಶವನ್ನು ಅನುಸರಿಸಿರುತ್ತದೆ. ಎರಡನೆಯದು ಸನ್ನಿವೇಶವನ್ನು ಹೊಂದಿಕೊಂಡಿರುತ್ತದೆ. ವಂಶವು ವ್ಯಕ್ತಿಯು ಮುಂದೇನಾಗಬಲ್ಲುದು ಎಂಬುದನ್ನು ನಿರ್ಧರಿಸುತ್ತದೆ. ಸನ್ನಿವೇಶದ ಮತ್ತು ವಂಶದ ಸಂಮಿಶ್ರಣವು ಯಾವ ವ್ಯಕ್ತಿಯಾಗಬಲ್ಲದೆಂಬುದನ್ನು ನಿರ್ಧರಿಸುತ್ತದೆ. ಮಾನವನು ವಂಶಕ್ಕಿಂತಲೂ ಸನ್ನಿವೇಶದ ಮೇಲೆ ಹೆಚ್ಚು ಹತೋಟಿಯುಳ್ಳವನಾಗಿರುತ್ತಾನೆ. ಸನ್ನಿವೇಶದಲ್ಲಿ ಎರಡು ಅಂಶಗಳಿವೆ. ಮೊದಲನೆಯದು ನಿವಾರಿಸಬಹುದಾದ ಬಾಹ್ಯತೊಂದರೆಗಳು. ಎರಡನೆಯದು ಸಂಸ್ಕೃತಿಗೆ ಸಂಬಂಧಿಸಿದುದು. ಬಾಹ್ಯತೊಂದರೆಗಳಲ್ಲಿ ಬಡತನ, ಆಹಾರದ ಕೊರತೆ, ವಸತಿ, ಜನಸಂದಣಿ ಇವೇ ಮುಖ್ಯವಾದುವು. ಇಂದಿನ ಹೋರಾಟವು ಇವುಗಳ ಮೇಲೆ ನಡೆಸಿ ಜಯವನ್ನು ಹೊಂದಬೇಕಾಗಿದೆ. ಇವುಗಳು ಮಾನವನ ಇರುವಿಕೆಗೆ ಹಾನಿಯನ್ನುಂಟುಮಾಡಿ ಬೆಳವಣಿಗೆಯನ್ನು ಮಟುಕುಮಾಡಿ ಆಯುಸ್ಸನ್ನು ಕಡಿಮೆಮಾಡುವುವು. ಸಂಸ್ಕೃತಿಯ ಹಿನ್ನಲೆಯುಳ್ಳ ಗುರಿ, ಧ್ಯೇಯ, ಭಾವ, ಚಾಳಿ, ಕುಶಲತೆ, ಜ್ಞಾನ ಇವುಗಳು ಬಾಳಿನಲ್ಲಿ ಮನುಷ್ಯನನ್ನು ಮಾನವನನ್ನಾಗಿ ಮಾಡುತ್ತವೆ.

ಇಂದಿನ ವೈದ್ಯದ ಗುರಿಯು ಕಸಬಿನ ಕಾಯಿಲೆಗಳು, ದೇಹಪುಷ್ಟಿ, ಸಮಾಜದ ಕುಂದುಕೊರತೆಗಳು, ಆರೋಗ್ಯ ವಿದ್ಯಾ ಪ್ರಚಾರ, ಸಮಾಜಕ್ಕೆ ಸರಿಹೊಂದಿಸುವ ವಿಚಾರ ಇವುಗಳ ಗಡೆಗೆ ಗಮನಕೊಡಬೇಕಾಗಿದೆ. ರೋಗವನ್ನು ವಾಸಿಮಾಡುವ ಸಂಸ್ಥೆಗಿಂತಲೂ ನಮಗಿಂದು ಬೇಕಾಗಿರುವುದು ಆರೋಗ್ಯವನ್ನು ರಕ್ಷಿಸುವ ಸಂಸ್ಥೆ. ದೈಹಿಕ, ಮಾನಸಿಕ ಮತ್ತು ಸಾಮಾಜಿಕ ನೆಮ್ಮದಿಯೇ ಆರೋಗ್ಯ. ಜನಗಳ ಸಹಕಾರ ಮತ್ತು ಆರೋಗ್ಯ ಪ್ರಚಾರಗಳು ಜನರ ಆರೋಗ್ಯದ ಮಟ್ಟವನ್ನು ಹೆಚ್ಚಿಸಲು ಹೆಚ್ಚು ಪ್ರಯೋಜನಕಾರಿಗಳು. ಜನಗಳು ಆರೋಗ್ಯ ರಕ್ಷಣೆಯನ್ನು ತಾವಾಗಿಯೇ ಕೇಳುವಷ್ಟು ವಿದ್ಯಾವಂತರನ್ನಾಗಿ ಮಾಡಬೇಕಾದುದು ನಮ್ಮ ಇಂದಿನ ಕರ್ತವ್ಯ.

ಸಾರ್ವಜನಿಕ ಆರೋಗ್ಯವು ವ್ಯಕ್ತಿಯ ವಾತಾವರಣಕ್ಕೆ ಹೆಚ್ಚು ಗಮನಕೊಡುತ್ತದೆ. ಸಮಾಜ ವೈದ್ಯವು ವಕ್ತಿಯ ಮತ್ತು ಆತನ ಸನ್ನಿವೇಶ ಮತ್ತು ಇವೆರಡರ ಸಂಬಂಧಗಳಿಗೆ ಹೆಚ್ಚುಗಮನಕೊಡುತ್ತದೆ. ವ್ಯಕ್ತಿಯ ವಸತಿ, ಆಹಾರ, ಆರ್ಥಿಕ ಮಾನಸಿಕ, ಕಸುಬು, ಜ್ಞಾನ ಮತ್ತು ಮಿಳಿತವಾಗಿರುವ ಸಮಾಜ ಇವೆಲ್ಲವನ್ನೂ ಸಮಾಜವೈದ್ಯವು ಒಳಗೊಂಡಿರುತ್ತದೆ. ಸಾರ್ವಜನಿಕ ಆರೋಗ್ಯವು ಸಾಂಕ್ರಾಮಿಕ ರೋಗಗಳ ಕಾರಣ ಮತ್ತು ಹರಡುವಿಕೆ ಮತ್ತು ಹತೋಟಿಯನ್ನು ಒಳಗೊಂಡಿದೆ. ಸಮಾಜ ವೈದ್ಯವು ಸಾಮಾನ್ಯವಾಗಿ ಜನತೆಯಲ್ಲಿ ಕಾಣುವ ಮಾನಸಿಕ ಅಸ್ವಸ್ಥತೆ, ಹೊಟ್ಟೆ ಹುಣ್ಣು, ಆಕಸ್ಮಿಕ ಗಾಯಗಳು, ಕ್ಯಾನ್ಸರ್ (Cancer) ಮುಂತಾದವುಗಳನ್ನು ಒಳಗೊಂಡಿರುತ್ತದೆ.

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ನಿರಂಜನ

ಇತ್ತೀಚೆಗೆ ಜರಗಿದ ಕೇರಳ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಸನ್ನಿವೇಶ ಸ್ವಾರಸ್ಯಪೂರ್ಣವಾಗಿತ್ತು. ಆ ಸನ್ನಿವೇಶ ಉತ್ಪನ್ನವಾದ ಬಗೆ ಹೀಗೆ: ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದ ರಾಷ್ಟ್ರದ ಉಪಾಧ್ಯಕ್ಷ ರಾಧಾಕೃಷ್ಣನ್, ರಾಮಾಯಣ ಮಹಾಭಾರತ ಮತ್ತಿತರ ಪ್ರಾಚೀನ ಗ್ರಂಥಗಳ ಹಿರಿಮೆಯನ್ನು ಕೊಂಡಾಡಿದರು. ಆ ಕೃತಿಗಳಲ್ಲಿ ನಿರೂಪಿತವಾಗಿರುವ ಸಂಸ್ಕೃತಿ ಉದಾತ್ತವಾದುದೆಂದೂ ಸದಾ ಅನುಕರಣೀಯವೆಂದೂ ಹೇಳಿದರು. ಆ ಮಾತುಗಳ ಕುರಿತು ಚರ್ಚೆಯಾಯಿತು. ಇನ್ನೊಂದು ಉಪ-ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಕತೆಗಾರ ತವಡಿ ಶಿವಶಂಕರ ಪಿಳ್ಳೆ, "ರಾಮಾಯಣ ಮಹಾಭಾರತಗಳು ಆ ಕಾಲದ ಸಮಾಜ ವ್ಯವಸ್ಥೆಯನ್ನು ಪ್ರತಿಬಿಂಬಿಸಿದುವು. ಆ ಕಾಲದಲ್ಲಿ ಉಚಿತವೂ ಯೋಗ್ಯವೂ ಆಗಿದ್ದ ಸಂಸ್ಕೃತಿ ಸದಾಕಾಲವೂ ಸ್ವೀಕಾರಯೋಗ್ಯವೆಂದು ವಾದಿಸುವುದು ಸರಿಯಲ್ಲ," ಎಂದರು.

ಹೀಗೆ ಹಲವರೊಳಗೆ ಮಾತು ಬೆಳೆಯಿತು.

ಇತಿಹಾಸದ ಅಧ್ಯಯನದಿಂದ, ಜನಜೀವನದ ನಿರೀಕ್ಷಣೆಯಿಂದ, ಭಟ್ಟಿ ಇಳಿಸಬಹುದಾದ ಕೆಲವು ವಿಷಯಗಳಿವೆ.

ಮಾನವನು ಅನಾದಿ ಕಾಲದಿಂದ ಈವರೆಗೆ ಪ್ರಗತಿ ಹೊಂದುತ್ತ ಬಂದಿದ್ದಾನೆ. ಶತಮಾನ-ಶತಮಾನಗಳ ಜ್ಞಾನ ಶೇಖರಣೆಯ ಫಲವಾಗಿ ಇಂದಿನ ನಾಗರಿಕತೆ ರೂಪುಗೊಂಡಿದೆ. ಜ್ಞಾನದ ಪ್ರಗತಿ—ಹೊಸ ಸಂಶೋಧನೆಗಳಾದಂತೆ, ಮನುಷ್ಯ-ಮನುಷ್ಯರೊಳಗಿನ ಸಂಬಂಧದಲ್ಲೂ ಬದಲಾವಣೆಯಾಗುತ್ತ ಬಂದಿದೆ. ಹೊಸ ಶಕ್ತಿಗಳು ತಲೆದೋರಿ ಪ್ರಗತಿಯನ್ನು ಸಾಧಿಸಿವೆ. ಪ್ರಪಂಚದಲ್ಲಿ ಕ್ರಾಂತಿಗಳಾಗಿವೆ. ಸಮಾಜವ್ಯವಸ್ಥೆಗಳು ಬದಲಾಗಿವೆ.

ಇಂಥ ಬದಲಾವಣೆ ಪ್ರಪಂಚದ ಎಲ್ಲಾ ಕಡೆ ಒಂದೇ ಸಾರಿ ಆದುದಿಲ್ಲ. ಒಂದೆಡೆ ಪಾಳೆಯಗಾರ ರಾಜ್ಯವ್ಯವಸ್ಥೆಯು ಮಟ್ಟ ಉಳಿದರೆ, ಇನ್ನೊಂದೆಡೆ ಔದ್ಯೋಗಿಕ ಕ್ರಾಂತಿ ಕಾಲಿಟ್ಟಿತು. ಒಂದೆಡೆ ಮಾನವ ನಿಸರ್ಗಕ್ಕೆ ಅಧೀನನಾಗಿಯೇ ಇದ್ದರೆ, ಇನ್ನೊಂದೆಡೆ ಆತ ನಿಸರ್ಗದ ಮೇಲೆ ಪ್ರಭುತ್ವ ಸ್ಥಾಪಿಸುವುದರಲ್ಲಿ ಬಹುಪಾಲು ಯಶಸ್ವಿಯಾದ. ಹೀಗೆ, ಏಕಪ್ರಕಾರವಾದ ಸಾಮಾಜಿಕ ವ್ಯವಸ್ಥೆ—ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಇರಲಿಲ್ಲವಾದುದರಿಂದ ಎಲ್ಲಾ ಕಡೆ ಏಕಪ್ರಕಾರವಾದ ಸಂಸ್ಕೃತಿಯೂ ಇರಲಿಲ್ಲ.

ಸಂಸ್ಕಾರ ಹೊಂದುತ್ತ ಸಾಗಿರುವ ಒಂದು ಜನಾಂಗದ ಇರುವಿಕೆಯಲ್ಲಿ, ಜೀವನಕ್ರಮದಲ್ಲಿ, ವಿಚಾರಕ್ರಮದಲ್ಲಿ—ಆ ಜನಾಂಗದ ಸಂಸ್ಕೃತಿಯಲ್ಲಿ—ಸ್ಥಿರವಹೌಲ್ಯಗಳೆಂಬುದಿಲ್ಲ. ಸಮಾಜವ್ಯವಸ್ಥೆ ಬದಲಾದಂತೆ, ಜೀವನಕ್ರಮವೂ ವಿಚಾರಕ್ರಮವೂ ಬದಲಾಗುತ್ತವೆ. ಸಂಸ್ಕೃತಿ ಬದಲಾಗುತ್ತದೆ. ಹಳೆಯ ಸಂಸ್ಕೃತಿಯ ಬದಲು ಹೊಸ ಸಂಸ್ಕೃತಿ ತಲೆದೋರುತ್ತದೆ.

ಒಂದು ಸ್ಥಿತಿಯಿಂದ ಇನ್ನೊಂದಕ್ಕೆ ಆಗುವ ಈ ಬದಲಾವಣೆ, ಆಕಸ್ಮಿಕವಾಗಿ ಆಗುವುದಿಲ್ಲ. ಹೊಸ ವ್ಯವಸ್ಥೆಯ ಜನನಕ್ಕೋಸ್ಕರ ಹಳೆಯ ವ್ಯವಸ್ಥೆ ಸಿದ್ಧವಾಗುವಾಗ, ನೋವು—ನರಳಾಟಗಳಾಗುತ್ತವೆ. ಹಳೆಯದರ ಕುಸಿಯುತ್ತಿರುವ ಕೋಟೆಯನ್ನು ಮುರಿದು, ಅದರೊಳಗಿಂದ ಹೊಸತು ಹೊರಬರುತ್ತದೆ.

ಸಂಸ್ಕೃತಿಯ ವಿಷಯದಲ್ಲೂ ಅಷ್ಟೇ. ಸಮಾಜ ವ್ಯವಸ್ಥೆಯು ವಿಭಿನ್ನ ಶಕ್ತಿಗಳನ್ನು ಪ್ರತಿಬಿಂಬಿಸಿ ಸಾಂಸ್ಕೃತಿಕ ಕ್ಷೇತ್ರದಲ್ಲೂ ಘರ್ಷಣೆಯಾಗುತ್ತದೆ. ಇದು ಅನಿವಾರ್ಯವಾದ, ಬದಲು ಅವಶ್ಯವಾದ, ಘರ್ಷಣೆ. ಆ ತಿಕ್ಕಾಟವೇ ಪ್ರಗತಿಗೆ ಹಾದಿಯಾಗುತ್ತದೆ.

ಸಂಸ್ಕೃತಿ ಬದಲಾಗುತ್ತದೆಂಬುದು ನಿಜ.

ಆದರೆ, ಪ್ರತಿಯೊಂದು ಸಮಾಜವ್ಯವಸ್ಥೆಯಲ್ಲಿ ಕಾಣಸಿಗುವ ಸಂಸ್ಕೃತಿಯಲ್ಲೂ ಉತ್ತಮ ಅಂಶಗಳಿವೆ ಎಂಬುದೂ ಅಷ್ಟೇ ನಿಜ.

ಆ ಕಾರಣದಿಂದಲೇ ಹಳೆಯದೆಲ್ಲವನ್ನೂ ತೆಗಳುವುದು ತಪ್ಪು. ಆಧುನಿಕವಾದುದೆಲ್ಲವೂ ಪ್ರಗತಿಶೀಲ, ಹಳೆಯದೆಲ್ಲವೂ ಪ್ರತಿಗಾಮಿ—ಎಂದು ಪ್ರತಿಪಾದಿಸುವುದು ಅಜ್ಞಾನದ ಕುರುಹು. ಮಾನವನ ಜ್ಞಾನದ ಈವರೆಗಿನ ಬೆಳವಣಿಗೆಯಿಂದ ಯಾವ ಅಂಶವನ್ನೂ ನಾವು ಕಣ್ಣು ಮುಚ್ಚಿ ನಿರಾಕರಿಸುವಂತಿಲ್ಲ. ಸಾಮಾಜಿಕ ಉಪಯುಕ್ತತೆಯ ಒರೆಗಲ್ಲಿಗೆ ಪ್ರತಿಯೊಂದನ್ನೂ ತೀಡಿ ನೋಡಬೇಕು. ಈವರೆಗಿನ ಸಾಂಸ್ಕೃತಿಕ ಪರಂಪರೆಯ ಉತ್ತಮಾಂಶಗಳನ್ನೆಲ್ಲ ಆಯ್ದುಕೊಳ್ಳಬೇಕು. ಈ ದಿನದ ಜನಜೀವನಕ್ಕೆ, ಜೀವನದ ಅವಶ್ಯತೆಗಳಿಗೆ, ಅವುಗಳನ್ನು ಅಳ

ಪಡಿಸಿಕೊಳ್ಳಬೇಕು. ಆಗ ಮಾತ್ರ ಹೊಸ ಸಂಸ್ಕೃತಿಯು ಹೊನಲು ಧೀಮಂತವಾಗಿ ಧುಮುಧುಮಿಸುತ್ತದೆ. ಅನವಶ್ಯವಾದುದನ್ನೆಲ್ಲ ಎಡಬಲಕ್ಕೆ ಚೆಲ್ಲಿಕೊಟ್ಟು, ಪ್ರಗತಿಪ್ರವಾಹ ಹರಿಯುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂತು. ಇನ್ನು ಈ ದೇಶದಲ್ಲಿ ಹೊಸ ಸಮಾಜವ್ಯವಸ್ಥೆ ರೂಪುಗೊಳ್ಳುವುದು; ಪ್ರತಿಯೊಂದು ಜನಾಂಗವೂ ಪೂರ್ಣವಾಗಿ ಅರಳಲು ಅವಕಾಶ ಸಿಗುವುದು; ನಮ್ಮದು ಸುಸಂಸ್ಕೃತ ನಾಡಾಗುವುದು, —ಸುಭಿಕ್ಷದ ಬೀಡಾಗುವುದು; ಎಂದೆಲ್ಲಾ ನಮ್ಮ ಜನರು ಆರಂಭದಲ್ಲಿ ಆಸೆ ಕಟ್ಟಿಕೊಂಡಿದ್ದರು. ಆದರೆ ಬೆಳ್ಳಗಿರುವುದೆಲ್ಲಾ ಹಾಲಲ್ಲ— ಎಂಬ ಹಳೆಯ ಗಾದೆಯು ಸತ್ಯತೆಯನ್ನು ಜನತೆ ಮತ್ತೊಮ್ಮೆ ಕಾಣಬೇಕಾಯಿತು.

ಐದು ವರ್ಷಗಳಾದುವು ಸ್ವಾತಂತ್ರ್ಯ ಬಂದು. ಈಗ ಮುಂದಿನ ಐದು ವರ್ಷಗಳ ಯೋಜನೆಯೂ ಒಂದು ಸಿದ್ಧವಾಗಿದೆ. ಮುಂದೆ ೧೯೫೭ರಲ್ಲಿ, ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾಗುವ ಹೊತ್ತಿಗೆ, ನಮ್ಮ ಸ್ಥಿತಿ ಏನಿದ್ದೀತೆಂದು ಸ್ಥೂಲವಾಗಿಯಾದರೂ ಹೇಳುವ ಸ್ಥಿತಿಯಲ್ಲಿ ನಾವಿರುವೆವೆ?

ಹೊಟ್ಟೆ—ಬಟ್ಟೆಯದೇ ಬೃಹತ್ ಪ್ರಶ್ನೆಯಾಗಿರುವ ಈ ದೇಶದಲ್ಲಿ ಸಾಹಿತ್ಯ-ಕಲೆ-ತತ್ವಜ್ಞಾನಗಳ, ಸಂಸ್ಕೃತಿಯ, ಸಮಸ್ಯೆಗಳಿಗೆ ಪರಿಹಾರ ಖಂಡಿತವಾಗಿಯೂ ಈಗ ಸಿಗಲಾರದೆ?

ಕೆಲವು ದೇಶಗಳಲ್ಲಿ ಸಂಸ್ಕೃತಿಗೋಸ್ಕರವೇ ಸಚಿವರಿದ್ದಾರೆ. ಶಿಕ್ಷಣದ- ಸಂಸ್ಕೃತಿಯ ಪ್ರಸಾರಕ್ಕಾಗಿಯೇ ಬಜೆಟಿನ ಮುಖ್ಯಾಂಶವೊಂದು ವ್ಯಯವಾಗುತ್ತದೆ.

ಈ ದಿಶೆಯಲ್ಲಿ ನಮ್ಮ ಸರಕಾರ ಯಾವ ಯತ್ನವನ್ನೂ ಮಾಡಿಲ್ಲವೆನ್ನುವುದು ಸರಿಯಲ್ಲ. ಉದಾಹರಣೆಗೆ: ಮದ್ರಾಸು ಸರಕಾರ ಆಸ್ಥಾನಕವಿಗಳನ್ನು ನೇಮಿಸಲಿಲ್ಲವೆ? ಮೈಸೂರು ಸರಕಾರ ಸಂಸ್ಕೃತಿಪ್ರಸಾರಕ್ಕಾಗಿ ಹದಿನೈದು ಲಕ್ಷ ರೂಪಾಯಿಗಳನ್ನು ಮೀಸಲಿಡಲಿಲ್ಲವೆ? ಭಾರತ ಸರಕಾರ, ಸಕಲ ದೇಶಿಯ ಭಾಷೆಗಳ ಸಾಹಿತ್ಯ ಪರಿಷದದನ್ನು ಸ್ಥಾಪಿಸುವ ಯೋಜನೆಯನ್ನು ಕೈಗೊಂಡಿಲ್ಲವೆ?

ಇತ್ತೀಚೆಗೆ ಸಂಸ್ಕೃತಿಯ ಕ್ಷೇತ್ರದಲ್ಲಿ ಕನ್ನಡಿಗರಿಗೆ ನೇರವಾಗಿ ಸಂಬಂಧಿಸಿ ನಡೆದ ಒಂದು ವಿಷಯವೆಂದರೆ, ಸಂಸ್ಕೃತಿ ಪ್ರಸಾರ ಮಾಡಬೇಕೆಂದು ಮೈಸೂರು ಸರಕಾರ ಕೈಗೊಂಡಿರುವ ನಿರ್ಧಾರ. ಯೋಜನೆಯೇನೋ ಆರಂಭವಾಯಿತು. ಆದರೆ ಸಂಸ್ಕೃತಿಪ್ರಸಾರ ಯಾವ ರೀತಿ ಆಗಬೇಕೆಂಬುದು ಮಂತ್ರಿ ಮಂಡಲಕ್ಕೆ ಸ್ಪಷ್ಟವಾಗಿ ತಿಳಿದಂತೆ ಕಾಣಿಸಲಿಲ್ಲ. ಮದ್ರಾಸು ಪ್ರಧಾನಿ ರಾಜಾಜಿಯವರು ಕಳುಹಿದ ಒಂದು ಸಂದೇಶದಲ್ಲಿ, ''ದೇವರಲ್ಲಿ ನಂಬಿಕೆ ಹುಟ್ಟುವಂತೆ ಪ್ರಸಾರ ಮಾಡಿದರೆ ಜನರ [ನಮ್ಮ] ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ'' ಎಂದರು. ಹೆಚ್ಚು ಕಡಿಮೆ ಅದೇ ರೀತಿಯ ಸ್ವರಗಳು ಬೆಂಗಳೂರಲ್ಲೂ ಹೊರಟುವು. ನೀತಿಯ ಧರ್ಮಬುದ್ಧಿಯ ಪ್ರಸಾರವೇ ಈ ಯೋಜನೆಯ ಉದ್ದೇಶವೆಂದು ಸಾರಲಾಯಿತು. ರಾಮಾಯಣ ಮಹಾ ಭಾರತಗಳು, ಶಿವ ಶರಣರ ವಚನಗಳು, ಹರಿದಾಸರ ಕೀರ್ತನೆಗಳು, ನೀತಿ ಮತ್ತು ಧರ್ಮದ ಪ್ರಸಾರಕ್ಕಾಗಿ ಉಪಯೋಗಿಸಲ್ಪಡಬೇಕು, ಎಂದು ಸೂಚಿಸಲಾಯಿತು. ತಮ್ಮ ಸ್ನೇಹಿತರಾದ ಕೆಲವರು ಸಾಹಿತಿಗಳನ್ನು ಕರೆದು ಪ್ರಧಾನ ಮಂತ್ರಿ ಹನುಮಂತಯ್ಯನವರು ಆಪ್ತಾಲೋಚನೆಯನ್ನೂ ನಡೆಸಿದರು. ''ಸಂಸ್ಕೃತಿಯ ನಿರ್ದೇಶಕರು'' ಎಂಬ ಒಂದು ಹೊಸ ಹುದ್ದೆಯೂ ಸೃಷ್ಟಿಯಾಯಿತು.

ಜನರು ಮಾತ್ರ ನಗುತಿದ್ದಾರೆ. ಈ ಕಾರ್ಯಕ್ರಮವೆಲ್ಲ ಗ್ರಾಮಾಂತರ ಪ್ರದೇಶಗಳಿಗೇ ಮೀಸಲಾಗಿರುವುದಂತೆ. ತನ್ನ ಕೈ ಬಿಟ್ಟ ಹೊಲದ, ತನಗೆ ಒದಗಿದ ಕ್ಷಾಮದ, ಚಿಂತೆಯಲ್ಲೇ ಮುಳುಗಿರುವ ರೈತ, ಕ್ಷಣಕಾಲ ಬೇಕಾದರೆ ಸರಕಾರಿ ಗಮಕಿಗಳ ಹಾಡುಗಾರಿಕೆಗೆ ಕಿವಿಗೊಡಬಲ್ಲ. ಬಿಟ್ಟ ಮನೋರಂಜನೆಯನ್ನು ಪಡೆದು, ಮತ್ತೆ ನಿಟ್ಟುಸಿರಿನ ತನ್ನ ಪುಟ್ಟ ಪ್ರಪಂಚಕ್ಕೆ ಹಿಂತಿರುಗಬಲ್ಲ. ಬರಿ ಹೊಟ್ಟೆಯ ಅವನಿಗೆ ಒಣ ವೇದಾಂತ ಬೇಕಾಗಿಲ್ಲ. ತಾನು ಶಂಕೆ—ಸಂದೇಹಗಳಿಂದ ಕಾಣುವ ಸರಕಾರದ ದೂತರಿಂದ, ನೀತಿ ಧರ್ಮದ ಹಿತೋಪದೇಶ ಮಾಡಿಸಿಕೊಳ್ಳಲು ಆತ ಸಿದ್ಧನಿಲ್ಲ.

ನಗರಗಳಲ್ಲಿ ಜನಸಾಮಾನ್ಯರು, ಈ ಸಂಸ್ಕೃತಿ ಪ್ರಸಾರದ ವಿಷಯವಾಗಿ ಪತ್ರಿಕೆಗಳಲ್ಲಿ ಓದಿಕೇಳಿರುವವರು, ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳೇನು?

ಈ ವರ್ಷದ ಆರಂಭದಲ್ಲಿ ಮೈಸೂರು ಸರಕಾರ ಮತ್ತೊಮ್ಮೆ ಆಹಾರ ಧಾನ್ಯಗಳ ಬೆಲೆ ಹೆಚ್ಚಿಸಿತು. ಅದನ್ನು ವಿರೋಧಿಸಿ ಶ್ರಮಜೀವಿ ಸಂಘಟನೆಗಳು ಹೊರಡಿಸಿದ ಒಂದು ಕರಪತ್ರದ ಆರಂಭದಲ್ಲಿ ಹೀಗಿದೆ:

''ಬಂಧುಗಳೇ! ಗೋಧಿ-ರಾಗಿ-ಜೋಳಗಳ ಬೆಲೆಗಳನ್ನೇರಿಸಿ, ಹನುಮಂತಯ್ಯನವರ ಸರ್ಕಾರ ಹೊಸ ವರ್ಷದ ಉಡುಗೊರೆಯನ್ನು ಜನತೆಗೆ ಕೊಟ್ಟಿದೆ. ಸಾಂಸ್ಕೃತಿಕ ಪ್ರಸಾರವನ್ನೂ ಗೀತಾ ಬೋಧನೆಯ ತೀವ್ರ ಪ್ರಚಾರವನ್ನೂ ಕಳೆದ ತಿಂಗಳಿಂದ ಕೈಗೊಂಡ ಸರ್ಕಾರ, ಇದಕ್ಕಾಗಿ ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಲು ತಯಾರಿರುವ ಸರ್ಕಾರ, ಈಗ ಆಹಾರ ಧಾನ್ಯಗಳ ಬೆಲೆ ಏರಿಸುವುದರಲ್ಲಿ ಪರ್ಯವಸಾನಗೊಂಡಿದೆ.''

ಅಷ್ಟೇ ಅಲ್ಲ, ಅನ್ಯಾಯವಾಗಿ ವೆಚ್ಚವಾಗುತ್ತಿರುವ ಕೋಟಿ ಕೋಟಿ ರೂಪಾಯಿಗಳ ಜತೆಯಲ್ಲಿ 'ಸಂಸ್ಕೃತಿಪ್ರಸಾರ'ಕ್ಕೋಸ್ಕರ ಮೀಸಲಾಗಿರುವ ಹದಿನೈದು ಲಕ್ಷವನ್ನೂ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಜನತೆಗೆ ಕೊಡಲು ಏತಕ್ಕೆ ಉಪಯೋಗಿಸಬಾರದಿತ್ತು?' ಎಂದು ಆ ಕರಪತ್ರ ಕೇಳಿದೆ.

ಉರುಳು ದಾರ - Noose

(ಶ್ರೀ. ಜೆ. ಸಿ. ಕುಮಾರಪ್ಪನವರ ಕ್ಷಮೆ ಬೇಡಿ)

ಲೇಖಕರು: **ಶ್ರೀ। ಬೈಕಾಡಿ ವೆಂಕಟ ಕೃಷ್ಣರಾಯ.**

"ಜಗತ್ತನ್ನೆಲ್ಲ ಕಹಿ ವಾತಾವರಣ ಆವರಿಸಿಕೊಂಡರೂ, ಅಮೇರಿಕನ್ನರು ಭಾರತೀಯರನ್ನು ಪ್ರೀತಿಸುತ್ತಾರೆ, ಮಮತೆಯಿಂದ ನೋಡುತ್ತಾರೆ. ಎರಡೂ ರಾಷ್ಟ್ರಗಳೂ ಶಾಂತಿಯ ಸಾಧನೆಯಲ್ಲಿ ತೊಡಗಿರುವುದರಿಂದ ಇಬ್ಬರ ಧ್ಯೇಯವೂ ಒಂದೇ ಆಗಿದೆ. ಈ ಶಾಂತಿಯು ಕೇವಲ ಮಿಲಿಟರಿ ರಕ್ಷಣೆಯಿಂದ ಸಾಧ್ಯವಿಲ್ಲ. ಪ್ರಪಂಚವು ಬೆಳೆದು ಅಭಿವೃದ್ಧಿಯಾಗಿ ಎಲ್ಲರಿಗೂ ಸಮಾನಾವಕಾಶಗಳು ದೊರಕುವುದರ ಮೇಲೆ ಶಾಂತಿಯು ನಿಂತಿದೆ ಬಡತನ, ನಿರಕ್ಷರತೆ, ರೋಗ ಮತ್ತು ಮಾನವ ದುಃಖಗಳು ಹಿಂಸೆ ಕಹಿ ವಾತಾವರಣವನ್ನುಂಟು ಮಾಡಿ ಮನುಷ್ಯನ ಬೆಲೆಯನ್ನೆ ನಾಶಮಾಡಿಬಿಡುತ್ತಿವೆ.

"ಹೊಸ ರಾಷ್ಟ್ರವಾದ ಭಾರತದ ನಿರ್ಧಾರಶಕ್ತಿಯನ್ನು ನೋಡಿ ನಾವು ಅಮೇರಿಕನ್ನರು ಮೆಚ್ಚಿದ್ದೇವೆ. ಪ್ರಪಂಚದ ಬಹು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಕೆಲಸವನ್ನು ಸ್ವಾಗತಿಸಿದ್ದೇವೆ. ಸ್ವಾತಂತ್ರ್ಯ ಬಂದ ಮೇಲೆ ಕೆಲವೇ ದಿನಗಳಲ್ಲಿ ಭಾರತ ಮಾಡಿದಷ್ಟು ಅಭಿವೃದ್ಧಿ, ತೋರಿಸಿದಷ್ಟು ಶ್ರದ್ಧಾಭಕ್ತಿ ಇನ್ನಾವ ರಾಷ್ಟ್ರವೂ ತೋರಿಸಲಿಲ್ಲ."

....

....

"ಅಮೇರಿಕವು ಸಹಾಯಮಾಡಿದ ಬಗ್ಗೆ ಯಾರಿಂದಲೂ ನಮಗೆ ವಂದನೆಗಳು ಬೇಕಿಲ್ಲ. ಭಾರತವು ತನ್ನ ಅಭಿವೃದ್ಧಿಯಲ್ಲಿ ಜಯಶಾಲಿಯಾದರೆ ಅಮೇರಿಕಕ್ಕೆ ಈ ಸಹಾಯ ಹಿಂತಿರುಗಿ ಕೊಟ್ಟದ್ದಕ್ಕಿಂತ ಹೆಚ್ಚು ಎಂದು ಭಾವಿಸಲಾಗುವುದು."

ಅಮೇರಿಕವು ಭಾರತಕ್ಕೆ ಸಹಾಯಮಾಡಿದ ನಿಜವಾದ ಕಾರಣದ ಬಗ್ಗೆ ಮೇಲಿನ ವಿವರಣೆ ಅಮೇರಿಕದ ಸಂಯುಕ್ತ ಸರಕಾರದ ಸುದ್ದಿ ಶಾಖೆ ಪ್ರಕಟಿಸಿದೆ. ಅಮೇರಿಕವು ಭಾರತಕ್ಕೆ ನೀಡಿದ ಆರ್ಥಿಕ ಸಹಾಯದ ಬಗ್ಗೆ ಅನೇಕರು ನಾನಾ ಅರ್ಥ ಕಲ್ಪಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

೧೯೫೨ರ ಜನವರಿ ೫ನೆಯ ತಾರೀಕು, ಅಮೇರಿಕ ಭಾರತಗಳೊಳಗೆ ಒಂದು ಬಹು ಮುಖ್ಯವಾದ ಒಪ್ಪಂದವಾಯಿತು. ಪರಿಣತರ ಸಲಹೆಯಂತೆ ಇಂಡಿಯ ಸರಕಾರ ಈ ಒಪ್ಪಂದಕ್ಕೆ ಸಹಿಹಾಕಿದ್ದರಿಂದ ಇಂಡಿಯ ಸರಕಾರವೇನೊ ತುಂಬ ತೃಪ್ತಿಯಿಂದಿದೆ. ಬಹಳ ಮಟ್ಟಿಗೆ ವೃತ್ತಪತ್ರಿಕೆಗಳು,

---


ಶ್ರಮಜೀವಿಗಳನ್ನು ಸಂಘಟಿಸುತ್ತಿರುವ ಈ ಮಹನೀಯರು, ಸಂಸ್ಕೃತಿ-ಕಲೆ-ಸಾಹಿತ್ಯಗಳನ್ನು ಕಡೆಗಣಿಸುತ್ತಿರುವರೆಂದು ಹೇಳುವುದು ಸರಿಯಾಗಲಾರದು. ಆದರೆ ಸರ್ಕಾರ ಈಗ ಏರ್ಪಡಿಸಿರುವ ಸಂಸ್ಕೃತಿಯ ಪ್ರಸಾರ ಮಾತ್ರ ಅವರನ್ನು ಕೆರಳಿಸಿದೆ.

ಹೇಗೆ ಸಾಮಾನ್ಯವಾಗಿ ಜನಸಮುದಾಯದಲ್ಲಿ ಕಂಡು ಬರುವ ಅನಾಸಕ್ತಿಗೆ ಕಾರಣವನ್ನು ಹುಡುಕುವುದು ಕಷ್ಟದ ಕೆಲಸವಲ್ಲ. ಹಸಿವಿಗೂ ಸಂಸ್ಕೃತಿಗೂ ಸಂಬಂಧವಿದೆ –ಎಂಬುದು ಇಲ್ಲಿ ಒಡೆದು ತೋರುತ್ತಿದೆ. ಇವೆರಡೂ ಒಂದೇ ಪ್ರಶ್ನೆಯ ಎರಡು ಸ್ವರೂಪಗಳು.

ಸ್ವತಂತ್ರ ದೇಶದಲ್ಲಿ ವಿಮುಕ್ತ ಮಾನವರಾಗಿ ಬಾಳಲು ನಮ್ಮ ಜನರು ಅಪೇಕ್ಷಿಸುತ್ತಾರೆ. ಹಳೆಯ ಸಂಸ್ಕೃತಿಗಳ ಕುಲಿಮೆಯಲ್ಲೇ ಕಾದು ಸ್ವಚ್ಛವಾಗಿ ಬರುವ ಹೊಸ ಸಂಸ್ಕೃತಿಯೊಂದನ್ನು ಆಚರಣೆಗೆ ತರಲು ಅವರು ಆಶಿಸುತ್ತಾರೆ.

ಆದರೆ, ಅದು ಸಾಧ್ಯವಾಗುವುದಕ್ಕೆ ಮುಂಚೆ ಬಗೆಹರಿಯಬೇಕಾದ ಮೂಲಭೂತ ಪ್ರಶ್ನೆಯೊಂದಿದೆ: ಅದು ಹೊಟ್ಟೆಯ ಪ್ರಶ್ನೆ. ಕರುಳಿನ ಹಸಿವು ಇಂಗಿದಾಗ, ಮೆದುಳಿನ ಹಸಿವು ಕೆರಳುತ್ತದೆ. ಆಗ ಮಾತ್ರ, ಅಂಗಾತ ಒರಗಿದ ಮಾನವ ಹೊರಳಿ ಎದ್ದು ಮೈಮುರಿದು ನಿಲ್ಲುತ್ತಾನೆ. ನಮ್ಮ ಸ್ವಾತಂತ್ರ್ಯಕ್ಕೊಂದು ಅರ್ಥ ದೊರೆಯುತ್ತದೆ. ಹೊಸ ಮಾನವ ಸಂಬಂಧಗಳ ವಾತಾವರಣದಲ್ಲಿ ನಮ್ಮ ಜೀವನ ಕ್ರಮ, ವಿಚಾರ ಕ್ರಮ–ನಮ್ಮ ಸಂಸ್ಕೃತಿ–ನೂತನವಾಗಿ ದೃಢವಾಗಿ ಅರಳುತ್ತವೆ.

—೦—



ಅಮೇರಿಕದ ಅಧ್ಯಕ್ಷ ಐಸೆನ್ಹೋವರರು.

ರಾಜಕಾರಣಿಗಳು, ಕೈಗಾರಿಕಾ ಪ್ರಮುಖರು, ಅರ್ಥಶಾಸ್ತ್ರಜ್ಞರು, ಸಂಸ್ಥೆಗಳು, ಈ ಒಪ್ಪಂದಕ್ಕೆ ಬೆಂಬಲ ಕೊಟ್ಟಹಾಗಿಲ್ಲ.

ಅನೇಕ ವೇಳೆ ಸಾರ್ವಜನಿಕರೂ ಇಂತಹ ಸಂಗತಿಗಳನ್ನೂ ಲಕ್ಷ್ಯಕ್ಕೆ ತಂದುಕೊಳ್ಳುವುದಿಲ್ಲ. ನಮಗೆ ಬೇಡದ ಸಂಗತಿ ಎಂಬ ತಾತ್ಸಾರ—ಅಥವಾ ವಿಚಾರಶೀಲರು ಯೋಚಿಸಿ ಮಾಡಿದ ಕೆಲಸ ಎಂದಿಷ್ಟೇ ಔದಾಸೀನ್ಯದ ಮನೋಭಾವ. ಅವರ ಗಮನ ಸೆಳೆದರೂ ಉದ್ದಿಶ್ಯಪಟ್ಟು ಸುಮ್ಮನಿರುತ್ತಾರೆ. ಅರ್ಥಶಾಸ್ತ್ರಜ್ಞರೂ ಲೆಕ್ಕ ಹಾಕುವುದುಂಟು. ಕಾರಣಾಂತರದಿಂದ ಮೌನ ಧರಿಸಿದರೂ ಧರಿಸಿದರೇ. ರಾಜಕಾರಣಿಗಳು ಈ ವಿಚಾರದಲ್ಲಿ ಹೆಚ್ಚು ತಲೆ ಬಿಸಿ ಮಾಡಿಕೊಳ್ಳುವುದಿಲ್ಲ. ಆದರೆ ಅನೇಕ ಭಾರಿ ಇಂತಹ ಘಟನೆಗಳೇ ದೇಶದ ಚರಿತ್ರೆಯನ್ನೇ ಬದಲಾಯಿಸಿ ಬಿಡುತ್ತವೆ. ಸೊಂಪಾಗಿ ಬೆಳೆವ ಪೈರಿನ ಮಧ್ಯೆ ಒಂದು ಕಳೆ ಬೀಜ ಬಿತ್ತಿದಂತೆ, ಬಹುಬೇಗ ಕಳೆ ಫಲವತ್ತಾದ ಭೂಮಿಯನ್ನು ಆಕ್ರಮಿಸಿ ಪೈರು ಕೆಡಿಸುತ್ತದೆ. ರೈತನಿಗೆ ಕೆಟ್ಟ ಮೇಲೆ ತಾನೆ ಬುದ್ಧಿ ಬರಬೇಕು.

ಈ ಡಾಲರ್ ದೇವರನ್ನು (The Almighty Dollar) "ಉರುಲು" (Noose) ಎಂದರು ಶ್ರೀ ಜೆ. ಸಿ. ಕುಮಾರಪ್ಪ. ಗ್ರಾಮೋದ್ಯೋಗ ಪತ್ರಿಕೆಯ ಸಂಪಾದಕರಾದ ಡಾಕ್ಟರ್ ಶ್ರೀ ಕುಮಾರಪ್ಪನವರು ಗಾಂಧಿ ಅರ್ಥ ಶಾಸ್ತ್ರಜ್ಞರು. ಗಾಂಧೀಜಿಯ ಪಟ್ಟಶಿಷ್ಯರಲ್ಲೊಬ್ಬರು. ಅವರ ಮಾತನ್ನೇ ಇಲ್ಲಿ ಹೇಳುತ್ತೇನೆ.

"ಇಂಡಿಯ ಭಾರತಗಳಿಗೆ ನಡೆದ ಒಪ್ಪಂದದಂತೆ ಅಮೇರಿಕ ಇಂಡಿಯದ ಅಭಿವೃದ್ಧಿ ಯೋಜನೆಗಳಿಗಾಗಿ ಐವತ್ತು ಮಿಲಿಯ ಡಾಲರುಗಳನ್ನು ಒದಗಿಸುತ್ತದೆ. ಜಗತ್ತಿನ ಇತರ ಪ್ರದೇಶಗಳ ಮೇಲೆ ಅಮೇರಿಕ ತನ್ನ ಆರ್ಥಿಕ ಸಹಾಯದ ವರ್ಚಸ್ಸು ಬೀರಿ ಸಾಕಷ್ಟು ಅಧಿಕಾರಪ್ರಭಾವವನ್ನು ಪ್ರಕಟಿಸಿದ ಬ್ರಿಟನ್ನು ರಾಜಕೀಯ ಸಾಮ್ರಾಜ್ಯತತ್ವದಲ್ಲಿ ಶ್ರೇಷ್ಠತೆ ಪಡೆದಿದ್ದರೆ, ಅಮೇರಿಕ ಡಾಲರ್ ಸಾಮ್ರಾಜ್ಯತತ್ವದಲ್ಲಿ ನಿಪುಣತೆ ಹೊಂದಿದೆ. ಜಗತ್ತಿನ ಸಮಸ್ಯೆಗಳಲ್ಲಿ ಇವರು ಇಂಡಿಯದ ಬಾಯಿಗೆ ಬೀಗ ಹಾಕುವ ಒಂದು ತಂತ್ರ ಇದು ಅನ್ನಬೇಕು. "ಸಮಾಜ ವಿಕಾಸ"ದ ಹೆಸರಿನಂತಹ ನಾನಾ ತರಹದ ಸರಪಣಿಯ ಬಂಧನಗಳಿಂದ ಬಿಗಿಯಲ್ಪಡದಂತೆ ನಾವು ಎಚ್ಚರವಾಗಿರೋಣ. ಇಷ್ಟರಲ್ಲೇ ತೃಪ್ತಿ ಹೊಂದದೆ ಚೆಸ್ಟರ್ ಬೌಲ್ಸರು ಇನ್ನೂ ಸಾವಿರ ಡಾಲರು ದಾಗ್ದಾನ ಮಾಡಿದ್ದಾರೆ. ಅಮೇರಿಕದ ತಾಂತ್ರಿಕರು ಈಗಾಗಲೇ ದೇಶವನ್ನು ತುಂಬುತಿದ್ದಾರೆ.

ಇವೆಲ್ಲದರಲ್ಲಿ ಗಂಡಾಂತರವಿಲ್ಲದಿಲ್ಲ. ಈ ರೀತಿಯ ನೂಕುನುಗ್ಗಲು, ವ್ಯವಸಾಯ ಅಭಿವೃದ್ಧಿಯ ಹೆಸರಿನಲ್ಲಿ ಟ್ರಾಕ್ಟರ್‌ಗಳ ಮಾರಾಟ ಹೆಚ್ಚಿಸೀತು. ನಮ್ಮ ವ್ಯಯಸಾಯ ಅಭಿವೃದ್ಧಿ ಯಂತ್ರಗಳ ಖನಿಜ ತೈಲಗಳನ್ನೂ ಆದರಿಸಿಕೊಂಡಿರುವುದಾದರೆ, ನಮ್ಮ ದೇಹ, ಆತ್ಮ ಶಕ್ತಿ ಎಲ್ಲವನ್ನೂ ಅಮೇರಿಕನ್ನರ ಕೈಗೆ ಕಟ್ಟಿಕೊಟ್ಟಂತೆಯೇ ಸರಿ. ಅಮೇರಿಕನ್ನರ ಮಾತನ್ನೇನಾದರೂ ನಾವು ಸ್ವಲ್ಪ ಅಲಕ್ಷಿಸಿದರೆ ನಮ್ಮನ್ನು ಅವರು ಸರಿದಾರಿಗೆ ತರುವ ಕ್ರಮವೆಂದರೆ, ನಮಗೆ ಸರಬರಾಜು ಮಾಡುವ ಯಂತ್ರ ಎಣ್ಣೆ ನಿಲ್ಲಿಸಿಬಿಡುವುದು. ನಮ್ಮನ್ನು ತ್ರಿಶಂಕು ಸ್ವರ್ಗದಲ್ಲಿ ತೇಲಿಸಿ ಬಿಡುವುದು. ನಡು ನೀರೊಳ್ ಕೈ ಬಿಟ್ಟಂತೆಯೇ ಸರಿ. ದಾಸೋಹಾ ನೀತಿಯ ಒಂದು ನಿದರ್ಶನ ಇದು. ಕಳೆದ ಯುದ್ಧಕ್ಕೆ ಮುಂಚೆ ಮದ್ರಾಸ್ ಪ್ರಾಂತದ ಕೆಲವು ಜಿಲ್ಲೆಗಳಲ್ಲಿ ವ್ಯವಸಾಯದ ಈ ರೀತಿಯ ಯಾಂತ್ರಿಕೀಕರಣ ನಡೆಯಿತು. ಕೆಲವು ಶ್ರೀಮಂತರು ಪಂಪು ಸೆಟ್ಟುಗಳನ್ನೂ ತರಿಸಿಕೊಂಡರು. ಕೊನೆಗೆ ಯುದ್ಧಕಾಲದಲ್ಲಿ ಸಾಕಷ್ಟು ಎಣ್ಣೆ ಸರಬರಾಜಾಗದೆ ತೊಂದರೆಗೆ ಒಳಗಾಗಿ ಅವರ ಹಣಕಾಸಿನ ನೀತಿ ಹದಗೆಟ್ಟಿತು. ಕೆಲವರಂತೂ ತೀರ ಬಡವರಾದರು."

ಕುಮಾರಪ್ಪ ಮತ್ತೆ ಹೇಳಿದರು:

"ಜಪಾನಿನ ಅನುಭವದಿಂದ ನಾವು ಲಾಭ ಹೊಂದುವ. ಜಪಾನ್ ದೇಶ ಏಕೆ ಶರಣಾಯಿತು? ಅಣುಬಾಂಬಿಗೆ ಹೆದರಿಯೆ? ಖಂಡಿತ ಅಲ್ಲ. ಅವರಲ್ಲಿ ಯುದ್ಧ ಮುಂದುವರಿಸಲು ಸಾಕಷ್ಟು ಕಲ್ಲೆಣ್ಣೆ ಇರಲಿಲ್ಲ. ನಮ್ಮದೂ ಅದೆಯ ಓಟ, ಆದರೂ ಫಲ ನಿಶ್ಚಯ. ಮೊಲದ ಓಟದಿಂದ ಗುರಿ ತಪ್ಪುವುದು ಬೇಡ. ಇಂತಹ ಪರದೇಶಗಳ ಸಹಾಯ ನಮ್ಮ ಕುತ್ತಿಗೆಗೆ ನೇಣಾಗಿ ಪರಿಣಮಿಸಿ ನಮ್ಮನ್ನು ಗಂಡಾಂತರದಲ್ಲಿ ಸಿಕ್ಕಿಸೀತು." ಕುಮಾರಪ್ಪನವರ ಎಚ್ಚರಿಕೆ ಸಾಧುವಾದದ್ದು, ಸಕಾಲದ್ದೂ ಆಗಿದೆ.

ಅಮೇರಿಕೆಗೆ ರಷ್ಯದ ಭಯ. ರಷ್ಯಾ, ಏಷ್ಯಾ ರಾಷ್ಟ್ರಗಳನ್ನು ನುಂಗೀತು ಎಂಬ ಭಯದಿಂದ ಆ ರಾಷ್ಟ್ರಗಳ ರಕ್ಷಣೆಗೆ ಎಂಬಂತೆ ಅಮೇರಿಕ ತನ್ನ ಧನದ ಕೈಯನ್ನು ಮುನ್ನೀಡುತ್ತಿದೆ. ಅಮೇರಿಕದ ಪೌರ್ವಾತ್ಯ ರಾಷ್ಟ್ರಗಳ ನೀತಿ ಇದುವೆ ಆಗಿದೆ. ಈ ನೀತಿಯೇ ಜರ್ಮನಿ ಜಪಾನುಗಳನ್ನು ನೆಲಸಮ ಮಾಡಿದ್ದು. ಚೀಣವೂ ಚಿಯಾಂಗರ ದರ್ಬಾರಿನಲ್ಲಿ ಅಮೇರಿಕದ ಬಲೆಗೆ ಬೀಳುತ್ತಿತ್ತು. ಇನ್ನೇನು, ರೊಟ್ಟಿ ಜಾರಿ ತುಪ್ಪಕ್ಕೆ ಬಿತ್ತು ಅಂದಾಗ ಮಾವುತ್ಸೆಟಂಗ್, (ಚೀಣಾದ ಜನತಾ ಸರಕಾರದ ನಾಯಕ) ಚೀಣಿಯರನ್ನು ಈ ಗಂಡಾಂತರದಿಂದ ತಪ್ಪಿಸಿದ. ಆದ್ದರಿಂದಲೇ ಅಮೇರಿಕ ಚೀಣಿಯರನ್ನು ಕಂಡರೆ ಕೆಂಡ ಕಾರುತ್ತಿದೆ. ವಿಶ್ವ ಸಂಸ್ಥೆಯಲ್ಲಿ ಹೇಳ ಹೆಸರಿಲ್ಲದ ಚಿಯಾಂಗರ ಚೀಣಕ್ಕೆ ಪ್ರಾತಿನಿಧ್ಯವಿದೆ—ನಿಜವಾದ ಚೀಣಿಯರ ಪ್ರಾತಿನಿಧ್ಯವು ಮಾವುತ್ಸೆ ಟಂಗರ ಚೀಣಾ ಜನತಾ ಸರ್ಕಾರಕ್ಕೆ ಮನ್ನಣೆ ಇಲ್ಲ. ನೆಹರು ಈ ಮಾತು ವಿಶ್ವ ಸಂಸ್ಥೆಗೆ ಹೇಳುವ ಎಲ್ಲ ಭಾಷೆಯಲ್ಲಿ ಹೇಳಿದರು. ನೆಹರು ಬಾಯಿಗೂ ಈಗ ಅಮೇರಿಕದ ಬಲವಾದ ಬೀಗ

ಬಿದ್ದಿದೆ. "ನಿಮ್ಮ ಬಚ್ಚಲು ನೀವು ಮೊದಲು ಗೂಡಿಸಿ ಕೊಳ್ಳಿ" ಎಂದು ಅಮೇರಿಕೆಯ ಪತ್ರಿಕೆಗಳು ಇಂಡಿಯಕ್ಕೆ ನುಡಿದ ಕೊಂಕು ನುಡಿ, ಯಾರೂ ಮರೆಯಲಾರರು.

ನೆಹರು ಕಾಂಗ್ರೆಸ್ ಅಧ್ಯಕ್ಷರಾಗುತ್ತಲೇ ಚೀಣಾಕ್ಕೆ ಕಳಿಸಿದ ವೈದ್ಯಕೀಯ ನಿಯೋಗದ ನಾಯಕರಾಗಿದ್ದ ಡಾಕ್ಟರ್ ಅತುಲ್ (Dr. ATUL)ರವರು ಒಮ್ಮೆ ಹೇಳಿದರು "ಜನತಾ ಚೀಣಾ ಜಗತ್ತಿನ ಕಣ್ಣು ತೆರೆದಿದೆ ಅಮೇರಿಕೆ ಏಸ್ಯಾ ರಾಷ್ಟ್ರಗಳ ಮೇಲೆ ತನ್ನ ಪ್ರಭಾವ ಬಹುಮಟ್ಟಿಗೆ ಬೀರುತ್ತಿದೆ. ಇಂಡಿಯ-ಚೀಣಾ- ಈ ಎರಡು ರಾಷ್ಟ್ರಗಳು ಏಷ್ಯಾದ ಹೆಬ್ಬಾಗಲಿನಂತಿವೆ. ಚೀಣಾವೇನಾದರೂ ಅಮೇರಿಕೆಯ ಬಲೆಗೆ ಬಿದ್ದರೆ ಇಂಡಿಯ ಅದರ ಹಿಂದೆಯೇ ಬೀಳಬೇಕಾಗುತ್ತದೆ" ಎಂದರು ಡಾಕ್ಟರ್ ಅತುಲ್.

ಅಮೇರಿಕ ಇಂಡಿಯದ ವಿಚಾರದಲ್ಲಿ ಸ್ವಲ್ಪ ಮೆತ್ತಗೆ ನಡಕೊಳ್ಳಬೇಕೆಂದು ತಿಳಿದಿದೆ. ನೆಹರು ಸರಕಾರದ ವಿದೇಶಾಂಗ ಧೋರಣೆ, ನೆಹರು ಖಡಾಖಂಡಿತವಾಗಿ ಜಾಪಾನ್ ಒಪ್ಪಂದವನ್ನು ವಿರೋಧಿಸಿದ್ದು, ಚೀಣಾದ ಜನತಾ ಸರಕಾರವನ್ನು ಗೌರವಿಸಿದ್ದು, ಇವೆಲ್ಲ ಅಮೇರಿಕದ ಕಣ್ಣನ್ನು ಸಾಕಷ್ಟು ಕೆರಳಿಸಿದೆ. ಸಾಮ್ರಾಜ್ಯಶಾಹಿ ತತ್ವದ ದುರಹಂಕಾರಿ ಚರ್ಚಿಲ್ ತಣ್ಣಗಾದರೂ, ನೆಹರು ತಣ್ಣಗಾಗಲಾರರು ಎಂದು ಅಮೇರಿಕ ತಿಳಿದಿದೆ. ಕಾಂಗ್ರೆಸ್ಸು, ಗಾಂಧಿ, ನೆಹರು ಇವರೆಲ್ಲ ಜನತೆಯ ಏಳ್ಗೆಯು ಗ್ರಾಮಗಳ ಪುನರುಜ್ಜೀವನದಿಂದ ಎಂದಿದ್ದಾರೆ. ಅವರ ಒಲವು ಆ ಕಡೆ ಇದೆ. ಆದ್ದರಿಂದ ಅಮೇರಿಕೆಯ ವಿಶ್ವಾಸ ಇಂದು ಇಂಡಿಯದ ಲಕ್ಷ ಹಳ್ಳಿಗಳ ಬೆಳವಣಿಗೆಯ ಕಡೆ ಇದೆ. ಈ ಉಪಾಯದಿಂದಲಾದರೂ ನೆಹರು, ಅವರ ಕಾಂಗ್ರೆಸನ್ನು ಒಲಿಸಿಕೊಳ್ಳಬಹುದು. ಇಂಡಿಯದಲ್ಲಿ ಕಾಂಗ್ರೆಸ್ಸು ಬಹು ದೊಡ್ಡ ರಾಜಕೀಯ ಪಕ್ಷ-ಅಧಿಕಾರ ಈ ಪಕ್ಷದ ಕೈಯಲ್ಲಿದೆ, ನೆಹರು ದೇಶದ ನಾಯಕರು. ಪಂಡಿತ ಸುಂದರಲಾಲರು, ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ಭಾಷಣ ಒಂದರಲ್ಲಿ ಹೇಳಿದ ಮಾತು ಇಲ್ಲಿ ನೆನಸಿಕೊಳ್ಳಬಹುದು. ಉತ್ತರಪ್ರದೇಶದ ಒಂದು ಸಭೆಯಲ್ಲಿ ಐದು ಸಾವಿರ ಜನ ಸೇರಿದ ಸಭೆಯಲ್ಲಿ ಭಾರತದ ಪಾರ್ಲಿಮೆಂಟಿನ ಸದಸ್ಯರೊಬ್ಬರು (ಸಮಾಜವಾದಿ ಪಕ್ಷದವರು) ಅಮೇರಿಕೆ ಭಾರತದ ಪಾರ್ಲಿಮೆಂಟ್ ಸದಸ್ಯರನ್ನು ಒಲಿಸಿಕೊಳ್ಳಲು ಡಿಲ್ಲಿಯಲ್ಲಿ ಸಹಸ್ರಾರು ರೂಪಾಯಿಗಳನ್ನು ಸುರಿಯುತ್ತಿದೆ ಎಂದರು ಎಂಬ ಅಂಶ ಶ್ರೀ ಸುಂದರಲಾಲರಿಂದ ನಾವು ತಿಳಿದೆವು. ಇದರಿಂದ ಅಮೇರಿಕೆಯ ಈ ಸಹಾಯ ಭಾರತದ ರಾಜಕೀಯರ ಮೇಲೆ ಹೇಗೆ ಪರಿಣಾಮ ಆದೀತು- ಊಹಿಸಿ.

"ನನ್ನನ್ನೂ ಪ್ರೀತಿಸು - ನನ್ನ ನಾಯಿಯನ್ನೂ ಪ್ರೀತಿಸು" ಎಂಬ ಆಂಗ್ಲಗಾದೆಯಂತೆ ನೆಹರುವನ್ನು ಒಲಿಸಿ ಅವರ ಸಮಾಜವಿಕಾಸಯೋಜನೆಗೆ ನೆರವು ನೀಡಬೇಕೆಂಬುದೇ ಅಮೇರಿಕದ ಹವಣಿಕೆ. ಒಮ್ಮೆ ಸಹಾಯ ಪಡೆದೆವೆಂದರೆ ಮತ್ತೆ ಆ ಉಪಕಾರ ನಮ್ಮ ಋಣವಾಗಿ ಉಳಿಯುತ್ತದೆ. ಅಮೇರಿಕಕ್ಕೆ ನಾವು ಕೃತಘ್ನರಾಗಿರಲು ಸಾಧ್ಯವಲ್ಲ. ತೋರಿಕೆಯಲ್ಲಿ ಉರುಲು ದಾರವಿಲ್ಲದಿದ್ದರೂ, ಹಿನ್ನೆಲೆಯಲ್ಲಿ ಇದ್ದೇ ಇದೆ. ತಪ್ಪಿದರೆ? ಅಣುಬಾಂಬುಗಳ ರಾಶಿಯ ವಿಶ್ವರೂಪ ದರ್ಶನ.

ಒಪ್ಪಂದದ ವಿವರಗಳನ್ನೂ ಪರಿಶೀಲಿಸುವ:

ಅಮೇರಿಕದ ಸಹಾಯವು ಎರಡು ರೀತಿಯಲ್ಲಿದೆ. ಮೊದಲನೆಯದು ಮಿಲಿಟರಿ ಸಹಾಯ. ಇದು ಯುರೋಪು ದೇಶಗಳಿಗೆ. ಸೋವಿಯೆಟ್ ದಾಳಿಯ ಹೆದರಿಕೆಯಿಂದ. ಎರಡನೆಯ ವಿಧ— ಭಾರತಕ್ಕೆ ಕೊಟ್ಟದ್ದು. ಹಿಂದುಳಿದ ರಾಷ್ಟ್ರಗಳಿಗೆ ಕೊಡುವ ಸಹಾಯದಲ್ಲಿ ಇದು ಬರುವುದು. ರೋಗ, ಬಡತನ, ನಿರುದ್ಯೋಗ, ಅನಕ್ಷರತೆ, ಮುಂತಾದುವುಗಳನ್ನೂ ಹೋಗಲಾಡಿಸಿ ದೇಶವನ್ನು ಅಭಿವೃದ್ಧಿಗೊಳಿಸುವುದೇ ಈ ಸಹಾಯದ ಉದ್ದೇಶ.

ವ್ಯವಸಾಯಾಭಿವೃದ್ಧಿಗೆ ಅಮೇರಿಕೆಯು ಭಾರತದಲ್ಲಿ ೧೧ ವಿಧವಾದ ಸಹಾಯ ಕೊಟ್ಟದೆ.

೧. ಭಾರತದಲ್ಲಿ ಒಟ್ಟು ೫೫ ಸಮಾಜ ವಿಕಾಸ ಕೇಂದ್ರಗಳನ್ನು ತೆರೆಯಲಾಗಿದೆ. ಒಂದೊಂದು ಕೇಂದ್ರದಲ್ಲಿಯೂ ಎರಡು ಲಕ್ಷ ಜನ ಸಂಖ್ಯೆಯಿರುವ ಇನ್ನೂರು ಹಳ್ಳಿಗಳಿವೆ. ಈ ಪ್ರಯತ್ನದಿಂದ ಒಂದು ಕೋಟಿಗೂ ಹೆಚ್ಚು ಜನ ವ್ಯವಸಾಯ ಅಭಿವೃದ್ಧಿಯನ್ನು ಮಾಡುವ ವಿಧಾನ, ಮಲೇರಿಯಾ ಮತ್ತು ಸಿಡುಬು ರೋಗ ನಿವಾರಣಾಕ್ರಮವನ್ನು ನಿರಕ್ಷರತೆ ಹೋಗಲಾಡಿಸುವ ಕ್ರಮ—ಇತ್ಯಾದಿ ತಿಳಿದುಕೊಳ್ಳುವುದು.

ಭಾರತದಲ್ಲಿ ಇಲ್ಲದಿರುವ ಯಂತ್ರೋಪಕರಣಗಳನ್ನೂ ಅಮೇರಿಕದಿಂದ ತರಿಸಲಾಗುವುದು. ಭಾರತ ಸರ್ಕಾರವು ಇಷ್ಟಪಟ್ಟರೆ ಅಮೇರಿಕದ ವಿದ್ಯಾ, ಆರೋಗ್ಯ ಮತ್ತು ವ್ಯವಸಾಯ ಪರಿಣತರನ್ನು ಒದಗಿಸಿ ಕೊಡುವುದು.

೨. ಅಮೇರಿಕ ಸರಕಾರವು ಖಾಸಗಿ ದಾನಶೂರ ಸಂಸ್ಥೆಯಾದ ಫೋರ್ಡ್ ಸಂಸ್ಥೆಯ ಸಹಾಯದಿಂದ ಸಮಾಜಸೇವಕರನ್ನು ತರಬೇತು ಮಾಡುವ ೨೫ ಕೇಂದ್ರಗಳನ್ನು ತೆರೆಯುವುದು. ಧನಸಹಾಯ- ಫೋರ್ಡ್ ಸಂಸ್ಥೆಯದ್ದು. ಅಮೇರಿಕದ ಟಿ. ಸಿ. ಎ. ಸಂಸ್ಥೆಯೂ ಜವಾಬ್ದಾರಿ ಹೊರುವುದು.

೩. ಅಮೇರಿಕದ ಹೆಚ್ಚು ಸಹಾಯ ನೀರಾವರಿ ಕಾಮಗಾರಿಕೆಗೆ ಹೋಗಿದೆ.

೪. ಅಮೇರಿಕದ ಸಹಾಯದಿಂದ ೩,೦೦೦ ತೂಬು ಬಾವಿಗಳನ್ನು ತೆಗೆಯಲಾಗುವುದು. ಇದರಲ್ಲಿ ಬಹುಭಾಗದ ಬಾವಿಗಳನ್ನು ಉತ್ತರ ಭಾರತದ ಗಂಗಾ ನದಿಯ ದಡದಲ್ಲಿ ತೆರೆಯಲಾಗುವುದು.

೫. ಅಮೇರಿಕದ ಸಹಾಯದಿಂದ ೧೦೪,೦೦೦ ಟನ್ನು ಗೊಬ್ಬರವನ್ನು ತಯಾರಿಸಲಾಗುವುದು. ಸಿಂಧ್ರಿಗೊಬ್ಬರ ಕಾರ್ಖಾನೆಗೂ ಸಹಾಯ ಕೊಡಲ್ಪಟ್ಟಿದೆ.

೬. ಸಣ್ಣ ಸಣ್ಣ ವ್ಯವಸಾಯಕ್ಕೆ ಅನುಕೂಲವಾಗುವ ಯಂತ್ರೋಪಕರಣಗಳನ್ನು ಒದಗಿಸುವಿಕೆ. ಟ್ರಾಕ್ಟರು, ನೇಗಿಲು, ಗುದ್ದಲಿಗಳನ್ನು ತರಿಸುವುದು.

ಹೀಗೆ ಮಿಡಿತೆ ಹುಳಗಳ ಹತೋಟಿ, ಭೂಮಿಯ ಸಾರದ ಅಂದಾಜು, ಮಲೇರಿಯಾ ಹತೋಟಿ, ಅರಣ್ಯ ಸಂಶೋಧನೆ, ಮತ್ತೆ ಬೆಳೆಯುವಿಕೆ, (ವನಮಹೋತ್ಸವದ ಕ್ಷಮೆ ಬೇಡಿ) ಮೀನು ವ್ಯವಸಾಯ, ಇದಕ್ಕೆಲ್ಲ ಸಹಾಯ ಒದಗಿಸಲಾಗುವುದು. ದೊಡ್ಡ ದೊಡ್ಡ ಯಂತ್ರ ಒದಗಿಸಲಾಗುವುದು.

ನವದೆಹಲಿಯ ಕಚೇರಿಯಲ್ಲಿ ಕೆಲಸ ಮಾಡಲು, ಮತ್ತೆ ಕೆಲವು ಅಧಿಕಾರಿಗಳು ಭಾರತಕ್ಕೆ ಬರುವರು. ವಿಶೇಷ ಪರಿಶ್ರಮ ಉಳ್ಳ ಅಮೇರಿಕನ್ನರು ಭಾರತ ಸರ್ಕಾರದ ಅನುಮತಿಯಿಂದ ಬರುವರು. (ಈಗ ೭೫ ಮಂದಿ ಅಮೇರಿಕನ್ನರು ಭಾರತದಲ್ಲಿದ್ದಾರೆ. ಇದು ಸರಕಾರ ಒದಗಿಸಿದ ಲೆಕ್ಕ; ಖಾಸಗಿ ಸಂಖ್ಯೆ ಇಲ್ಲಿಲ್ಲ)

ಒಪ್ಪಂದದ ಅಂಶಗಳನ್ನು ಪರಿಶೀಲಿಸಿದರೆ, ಕೆಲವೆಡೆಯಲ್ಲಾದರೂ ಸಂದೇಹ ತಪ್ಪಿಲ್ಲ.

೧. ಇಷ್ಟೊಂದು ಮಂದಿ ಅಮೇರಿಕ ಪರಿಣತರು ಹಿಂದೆಂದೂ ಬಂದು ನಮ್ಮಲ್ಲಿ ಕೆಲಸ ಮಾಡಿದ್ದಿಲ್ಲ. ಅಧಿಕಾರಿ ವರ್ಗ, ಖಾಸಗಿ ಸಂಸ್ಥೆಗಳು ಯಾವದೂ ಅಮೇರಿಕದ ಅಭಿವೃದ್ಧಿಯ ಕೆಲಸಕಾರ್ಯಗಳ ಮಧ್ಯೆ ಪ್ರವೇಶಿಸುವ ಹಾಗಿಲ್ಲ.

೨. ಈ ಐವತ್ತು ಮಿಲಿಯ ಡಾಲರಿನಲ್ಲಿ ಒಂದು ಸೆಂಟು ಕೂಡ ಅಮೇರಿಕೆಯ ಇಚ್ಛೆಗೆ ವಿರುದ್ಧವಾಗಿ ಖರ್ಚು ಮಾಡಬಾರದು. ಧನಿಗೆ ದಾನ ಪಡೆಯುವವ ಸಂಪೂರ್ಣ ಶರಣು ಹೋದ ಹಾಗೆ.

೩. ಇಂಡಿಯದ ಭಾಗದ ಹಣದ ಮೇಲೂ ಇಂಡಿಯಕ್ಕೆ ಹತೋಟಿ ಇದೆಯೆ? ಸಂದೇಹ.

೪. ಸಾಲದ ಭಾಗ ಹಿಂತೆರಲು ಅಮೇರಿಕದ ಸಂಯುಕ್ತ ಸರಕಾರ ತನ್ನ ಇಚ್ಛಾನುಸಾರ ಕರಾರು ಹಾಕಬಹುದು.

೫. ಅಮೇರಿಕೆಯ ಮಾಲುಗಳಿಗೆ ಇಂಡಿಯ ಸುಲಭವಾದ ಮಾರುಕಟ್ಟೆಯಾಗುವುದು— ಇಂಡಿಯದ ಕಚ್ಚಾ ಮಾಲುಗಳನ್ನು ಅಮೇರಿಕವು ಯಥೇಚ್ಛ ಉಪಯೋಗಿಸಿಕೊಳ್ಳುವುದು. ಇವೆರಡಕ್ಕೂ ಈ ಒಪ್ಪಂದ ತುಂಬ ಸಹಾಯವಾಗಬಹುದು. ಬ್ರಿಟನ್ನಿನ ಪುಕ್ಕಟೆ ಅಫೀಮಿಗೆ ಕೈ ಒಡ್ಡಿದ ಚೀಣಿಯರ ಕಥೆಯಂತಿದೆ.

೬. ನಮ್ಮ ಗ್ರಾಮ ಜೀವನವೂ ತೀರ ಹದಗೆಡುತ್ತದೆ. ಉಳುವ ನೇಗಿಲು, ರಾಸಾಯನಿಕ ಗೊಬ್ಬರ ಇವೂ ಪರದೇಶದಿಂದ ಆಮದಾದರೆ ನಮ್ಮ ನೈಸರ್ಗಿಕ ಸಂಪತ್ತು ಉಪಯೋಗಿಸಿಕೊಳ್ಳಲು ಅವಕಾಶವೆಲ್ಲಿ? ನಮ್ಮ ಕಮ್ಮಾರ, ನಮ್ಮ ಗುಡಿಗಾರ, ನಮ್ಮ ನೈಯ್ಗೆಯವ, ನಮ್ಮ ಗ್ರಾಮಶಿಲ್ಪಿಗಳು ಕಸುಬಿಲ್ಲದೆ ಪಟ್ಟಣ ತುಂಬಿ ಗ್ರಾಮ ಜೀವನ ಈಗಾಗಲೇ ಬರಿದಾಗಿದೆ. ಸಹಸ್ರ ವರ್ಷದ ನಮ್ಮ ರೈತನ ಅನುಭವಕ್ಕೆ ಬೆಲೆಯಿಲ್ಲದೆ ಅವನನ್ನೂ ದಡ್ಡನನ್ನಾಗಿ ಮಾಡದಂತಾದೀತು. ಎಲ್ಲಿಂದಲೋ ಭಾರಿ ಹಣ ತಂದು ನಮ್ಮ ಗ್ರಾಮಕ್ಕೆ ಸುರಿದು ಸಮಾಜ ಅಭಿವೃದ್ಧಿಗೊಳಿಸುತ್ತೇವೆನ್ನುವುದೇ ಶುದ್ಧ ಹುಚ್ಚುತನ.

ಪರಿಣಾಮ ಇಲ್ಲಿಗೆ ನಿಲ್ಲದು. ರಾಜಕೀಯ ಕ್ಷೇತ್ರದಲ್ಲೂ ಪರಿಣಾಮವಾದೀತು. ಜಗತ್ತಿನ ಮಹಾ ಸಮಸ್ಯೆಗಳಲ್ಲಿ ಅಮೇರಿಕೆಗೆ ಪಥ್ಯವಾದದ್ದು ಇಂಡಿಯಕ್ಕೂ ಪಥ್ಯವಾದೀತು. ಅಮೇರಿಕೆಯ ದೃಷ್ಟಿಚಕ್ರದಿಂದ ಇಂಡಿಯ ಅಂತರರಾಷ್ಟ್ರೀಯ ಪ್ರಶ್ನೆ ಪರಿಶೀಲಿಸೀತು. ಅತ್ಯಂತ ಕಠಿನ ಪರಿಸ್ಥಿತಿಯಲ್ಲಿ ಇಂಡಿಯ ಅಮೇರಿಕೆಯ ಕಡೆ ವಾಲಲೇ ಬೇಕಾದೀತು. ಇದೇ ಅಮೇರಿಕೆಯ ದೂರದರ್ಶಿತ್ವ ತಂತ್ರ. ಕಲ್ಲು ಒಂದು, ಹಣ್ಣು ಎರಡು., ವೇಗವಾದ ವೈಜ್ಞಾನಿಕ ಬೆಳವಣಿಗೆಯ ಫಲವಾಗಿ ಯಂತ್ರಗಳ ನಮೂನೆ, ಮಾದರಿ, ದಿನೇ ದಿನೇ ಪರಿವರ್ತನ ಹೊಂದುತ್ತಿದ್ದು, ಹಳತು ಮಾರಲು ಅಮೇರಿಕೆಗೆ ಗಿರಾಕಿಯ ಕೊರತೆ ಇದೆ. ಸೋಮಾರಿಯಾದ ಯಂತ್ರ ಯಜಮಾನನನ್ನೇ ತಿನ್ನುತ್ತದೆ. ಸಹಾಯ–ಒಪ್ಪಂದಗಳ ಹೆಸರಲ್ಲಿ ಈ ಯಂತ್ರಗಳನ್ನೂ ಬಡ ರಾಷ್ಟ್ರಗಳ ಕುತ್ತಿಗೆಗೆ ಕಟ್ಟಬಹುದು.

ಅಮೇರಿಕೆಗೆ ಕಮ್ಯುನಿಷ್ಟರ ಭಯ. ತನ್ನ ಭಯ ಇತರರಿಗೂ ಹುಟ್ಟಿಸುತ್ತಿದೆ. ಸ್ಪೇನ್, ಇಂಡೋಚೀಣಾ, ಚಿಯಾಂಗ್ ಕೈ ಷೇಕ್,–ಕಡೆಗೆ ನಮ್ಮ ಇಂಡಿಯ, ಎಲ್ಲರಿಗೂ ಅಮೇರಿಕೆಯು ಸಹಾಯ ಮಾಡುವುದರ ಅರ್ಥ ಇದುವೆ. ಕಮ್ಯೂನಿಷ್ಟರ ಸದೆ ಬಡಿಯುವುದು. ಆದ್ದರಿಂದಲೇ ಈ ಸಹಾಯ ಒಪ್ಪಂದ — ಸಹಾಯ ಒಪ್ಪಂದವಲ್ಲ—ದಾಸ್ಯ ದಿಗ್ಬಂಧನ ಅನ್ನುವುದು.

ಇದು ಮಾತಿಗೆ ಅಪಾರ್ಥ ಕಲ್ಪಿಸುವ ನೀತಿ-ಸಂಕುಚಿತ ಭಾವ ಅಂದಾರು. ಹಾಗಾದರೆ ಲಾರ್ಡ್ ಆಚಿಸನ್ನರು ಕಳೆದ ಮಾರ್ಚಿ ೧೩ರಂದು ವಾಷಿಂಗ್‌ಟನ್ನಿನಲ್ಲಿ ಅಮೇರಿಕನ್ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಹೇಳಿದ ಮಾತು ಗಮನಿಸುವ:

"ನಮ್ಮಲ್ಲಿಂದ ಇಂಡಿಯಕ್ಕೆ ಹೋದ ಎಲ್ಲ ತಜ್ಞರೂ ಇಂಡಿಯ ನೆಹರು ನಾಯಕತ್ವದಲ್ಲಿ ಇನ್ನು ಐದು ವರ್ಷಗಳೊಳಗಾಗಿ ಆರ್ಥಿಕ ಪ್ರಗತಿ ಸಾಧಿಸದಿದ್ದಲ್ಲಿ ಮುಂದಿನ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ನಾಶವಾಗಿ ಯಾವದೇ ಉಗ್ರವಾದಿ ಪಕ್ಷ ಅಥವಾ ಕಮ್ಯುನಿಷ್ಟರು ಗೆದ್ದು ಆಡಳಿತ ವಹಿಸಿಕೊಂಡಾರು". ಆಚೀಸನ್ನರು ಇಂಡಿಯ ಕಮ್ಯುನಿಷ್ಟರೊಡನೆ



ಅಮೇರಿಕದ ಅಧ್ಯಕ್ಷ ಐಸೆನ್ಹೋವರರು ಅಧಿಕಾರ ಸ್ವೀಕಾರ ಮಾಡುವಂದು ಮೆರವಣಿಗೆ.

ಕರಿ-ಬಿಳಿ ಕಾಳಗ

(ಲೇಖಕರು:
ಶ್ರೀ ಎನ್. ಎಮ್. ಶೆಟ್ಟಿ)

ಕರಿಬಿಳಿಗಳಿಗೆ ಕಾಳಗವಾಯಿತು
ಪೂರ್ವದೊಳೊಂದು ಹೊಸರೂಪು
ಇಂದಪರೂಪ. ಕಾರಣವಿಷ್ಟೆ:
ಕರಿಬಿಳಿ ಸಂಧ್ಯಾಕಾಲದಲಿ
ಅಜ್ಞಾನ ನದೀಕೂಲದಲಿ
ವಿಸ್ತೃತ ಸಿಕತ ದುಕೂಲದಲಿ
ಸುಮ್ಮನೆ ಕುಳಿತು ಹೋಗದೆ ಹೊತ್ತು
ವಾದ ವಿವಾದವ ಮಾಡಿದುವು,
ಮಾತಿಗೆ ಮಾತನು ಹೂಡಿದುವು.

●

ಕರಿಬಿಳಿಗೆಂದಿತು ಕತ್ತಲೆ ಕವಿಯಿತು
ಕಪ್ಪಿನದಾಯಿತು ಪೂರ್ವದಿಶೆ
ಪಡುವಣ ದೇವಿಯು ಬಿಳಿನರೆ ಕೂದಲು
ಅಳಿಯುತಿದೆ ಕೆಳಗಿಳಿಯುತಿದೆ.
ಹಗಲಲಿ ಸೊಕ್ಕಿದ ಬಿಳಿದೊರೆ ಹಕ್ಕಿಯು
ಓಡುತಿದೆ ಒದ್ದಾಡುತಿದೆ
ಹಕ್ಕಿಯೊಳಡಗಲು ಹಾಡುತಿದೆ.

●

ಎನೆ ಬಿಳಿ ರೇಗಿತು ಮೊಳಗೆನೆ ಕೂಗಿತು
ತಳಮಳಗೊಂಡಿತು ಮನದೊಳಗೆ
ಕರಿ ಜರೆದಾಡಿದೆ ಕಣ್ಣೆರದಾಡಿದೆ
ಕರೆದೆಯೊ ಕಾಳಗಕೊಳತೊಳತು
ಕರಿನೀ ಮೇಲೋ ಬಿಳಿ ಮೇಲೋ
ತೋರಿಸಿ ಕೊಡುವೆ ಒಂದೇ ತಡವೆ
ಬೆಳಗಾಗುವದದು ಯಾರಿಂದ
ನಿಜ ಬರಬೇಕೊ ಮುನ್ನವೆ ಕರಕೊ
ನಿನ್ನವರಾದವರನ್ನೆಲ್ಲಾ
ನಾಬರಮಾಡುವೆ ನನ್ನವರನ್ನು
ಹೊಯಿಕಯಿಯಾಗಲಿ ನಮ್ಮೊಳಗೆ.
ಬಿಳುಪಿನ ಮಾತಿಗೆ ಕರಿ ಸೈಗುಟ್ಟಿತು
ಬಿಳುಪೊಡಬಟ್ಟಿತು ಕರಿನುಡಿಗೆ.
ಈತೆರವೆರಡೂ ಕೈ ಕೈ ಹೊಡೆದು
ಹೊರಟುವು ವೈರಿ ವಿಭಂಜನೆಗೆ.

●

ಬಿಳಿ ಮೇಲೇರಿತು ಬೆಟ್ಟವ ಹತ್ತಿತು
ಮನೆಗಿನೆ ಕಟ್ಟಿತು ಕೊಟ್ಟಿತು ಸುಣ್ಣದ
ಬಣ್ಣದ ಬಿಳಿ ಬಿಳಿ ಸಾರಣೆಯ
ಚಿಂತಿಸಿ ವೈರಿ ನಿವಾರಣೆಯ
ಕೆಡಿಸುತ ಗೋಮಯ ಕಾರಣೆಯ
ಕಪ್ಪಿನ ಕರ್ಮೋದ್ಧಾರಣೆಯ
ಸಿಗರೆಟ್ಟಿಳಿಯಿತು ಬಿಳಿ ಲೈಟಾಯಿತು
ಬಿಳಿ ಮೈರಾವಣ ಮಾಯಾ ರಾವಣಿ
ಮೈದೋರಿದರತಿ ಬಿಳಿಯಾಗಿ
ಆವಿನ ಮೋರೆಯು ಹುಲಿಯಾಗಿ
ಹಣತೆಯು ಕಾಣದಿ ಚಿಮಿಣಿಯು ನೆಲಸಿತು
ಸೊಡರಿಗೆ ಪ್ರತಿ ಬಿಳಿ ಲಾಟನ್ನಿಳಿಯಿತು
ಕೈಬೆಳಕಳಸಿತು ಬಿಳಿ ಬೆಟರಿ
ನಂದಾದೀಪವು ನಂದಿತು ನಿಂದಿತು
ಗುಡಿ ದೇಗುಲದಲಿಲೆಕ್ಟ್ರಿಸಿಟಿ
ಹಗಲಲೆ ಪಂಚದೀವಟಿಯು
ಉರಿಸಿ ಏರಿಸಿ ಬಾವಟೆಯು

ಹೋರಾಟ ನಡೆಸುತ್ತಿರುವುದಕ್ಕಾಗಿ ವಂದಿಸುತ್ತೇನೆಂದೂ ಹೇಳಿದರು. ವಾಸ್ತವವಾಗಿ ಇಂಡಿಯ ಕಮ್ಯೂನಿಷ್ಟರೊಡನೆ ಹೋರಾಟ ನಡೆಸುತ್ತಿಲ್ಲ.

ನಮ್ಮ ದೆಹಲಿಯ ಇತಿಹಾಸ ನೆನಸಿಕೊಂಡಾಗಲೆಲ್ಲ ಮೈ ಜುಂ ಅನ್ನುತ್ತದೆ. ಒಬ್ಬ ರಾಜರಲ್ಲ, ಒಂದು ರಾಜ್ಯವಲ್ಲ, ನೂರಾರು ದಾಳಿ, ಸಹಸ್ರಾರು ಆಕ್ರಮಣ. ಥಿಲ್ಲಿಯ ಸಿಂಹಾಸನ ಸಹಸ್ರ ಚಕ್ರವರ್ತಿಗಳ ಪಾಲಾಯಿತು. ಆದರೂ ಇಂಡಿಯ ಬದುಕಿದೆ. ಭಾರತೀಯತನ ಅಳಿಯದೆ ಉಳಿದಿದೆ. ಆಡಳಿತದ ಯಜಮಾನರುಗಳ ಅವಿವೇಕತನ ದೇಶಕ್ಕೆ ಇದುತನಕ ತಂದ ವಿಪತ್ತೇ ಸಾಕು — ಇನ್ನಾದರೂ ನಮ್ಮ ಥಿಲ್ಲಿಯ ನಾಯಕರು—ರಾಷ್ಟ್ರಪಿತರು—ದೇಶದ ಹಣೆಬರಹ ತಿದ್ದುವವರು ಇಂತಹ ಒಪ್ಪಂದದ ಹೆಸರಿನ "ಉರುಲುದಾರ"ಕ್ಕೆ ದೇಶದ ಕತ್ತು ಬಲಿಕೊಡದಿರಲಿ.

ಈ ಲೇಖನಕ್ಕೆ ಆಧಾರ: ಹರಿಜನದ ೧೯೫೨ರ ಸಂಚಿಕೆಗಳಲ್ಲಿ ಆಗಾಗ್ಗೆ ಪ್ರಕಟವಾದ ಶ್ರೀ ಕುಮಾರಪ್ಪ, ಶ್ರೀ ಸುರೇಶ ರಮಾಭಾಯಿ, ಶ್ರೀ ಮಶ್ರುವಾಲಾ ಇವರ ಲೇಖನಗಳು ಮತ್ತು ಅಮೇರಿಕಾ ಸುದ್ದಿಶಾಖೆಯ ಪ್ರಕಟಣೆಗಳು]

ಬಿಳುಪಿನ ಬೆಂಗಡೆ ಬೆಳ್ಗೊಡೆಯು
ಹಿಡಿಸಿದರು ಉಗ್ಘಡಿಸಿದರು
ಬಿರುಸು ಬಾಣವ ಸುಡಿಸಿದರು.
ಕಪ್ಪಿನ ಕಾಡಿಗೆ ಇಬ್ಬನಿ ಇಳಿಸಿ
ಗುಡ್ಡಕೆ ಬೆಟ್ಟಕೆ ಮಂಜನು ಹೊದಿಸಿ
ಕೃತಕದ ಬಿಳಿ ಪರ್ವತಗಳ ಮಾಡಿ
ಕರೆದರು ಬಿಳುಪಿನ ಹೆಸರಿಂದ
ಧವಳಗಿರಿ ಶ್ವೇತಾಚಲವೆಂದೊ
ಬಿಳಿಗಿರಿರಂಗನ ಬೆಟ್ಟಗಳೆಂದೊ
ಕೊಟ್ಟರು ಬೆಟ್ಟಕೆ ಬಿಳಿನಾಮ
ಚತುರೋಪಾಯವ ನಡೆಸಿದರು.

ಬಿಳಿ ಬಳಿಗೈತನ್ನಿರಿ ಕರಿ ಜನರೆ
ಬೆಳ್ನಾಮಂಗಳ ಪಡಕೊಳ್ಳಿ
ಕರಿ ಬೆಲ್ಲವೊ ನಿಮಗೊಳ್ಳೆದು ಯಾವುದು?
ಸಕ್ಕರೆಯಲ್ಲವೆ ಸಿಹಿ ಬಿಳಿಯು
ಕಪ್ಪಿನ ಮೀಸೆಯ ಹೊತ್ತಿರಿ ಯಾಕೆ?
ಕಪ್ಪಿನ ಕೂದಲು ನಿಮಗೇಕೆ?
ಕಪ್ಪನ್ನೆಲ್ಲ ನಿವಾಳಿಸಿಕೊಳ್ಳಿ
ಕೊಳ್ಳಿರಿ ಬಿಳಿದು ಬಿಲ್ಲೆಗಳ (ಬಿರುದುಗಳ)
ತನುಮನಮಾತಿಂದೊಪ್ಪಿರೀ
ತಿರುಪತಿ ನಂಟನು ಮಾಡಿಸುವ
ವೆಂಕಟರಮಣನನೋಡಿಸುವ
ಕಪ್ಪಿಗೆ ಶರಣೂ ಹೋಗದಿರಿ
ತಪ್ಪಿದಿರಾದರೆ ಕಪ್ಪಿಗೆ ವಲಿದರೆ
ಮುಪ್ಪುರ ಕಾಳಗ ತೋರುವೆವು
ತಾಂಡವನರ್ತನವಾಡುವೆವು
ಕೇಳಿರಿ ಮಕ್ಕಳ ಹೆತ್ತವರೆ.

ಹೊಟ್ಟೆಯ ಮಗು ಬಿಳುಪಾಗಿರದಿದ್ದರೆ
ಹುಟ್ಟಿದ ಕೂಡಲೆ ತೋರಿಸದಿದ್ದರೆ
ಶಿಶುಯಜ್ಞವ ಕೈಕೊಳ್ಳುವೆವು
ಕಂಸ ಕ್ರೌರ್ಯವ ತೋರುವೆವು
ಬೆರಳನ್ನೆತ್ತೀ ತೆರ ಬಿಳಿಯಾಣತಿ
ಕೊಟ್ಟಿತು ಕೂಡಲೆ ಕೇಳುತ ಮಾತು
ಕಟ್ಟಿತು ಕೊರಳಲಿ ಬಸುರಿಗಳ
ಹೆದರುತ ಕೋಗಿಲೆ ಹೆರಿಗೆಯ ಮಾಡಿತು
ತಪ್ಪಿಸಿ ಕಾಗೆಯ ಗೂಡಲ್ಲಿ.
ಗುಬ್ಬಳಿಸಿತು ಕಟವಾಯಲಿ ಸಾರಿವ
ಗರ್ಭಸ್ರಾವದ ವೇದನೆಗೆ
ಆಕಟಕಟೆಂದಿತು ಹೇಟೆಯು ಹೆರಿಗೆಗೆ
ಕುಕ್ಕುಟ ಕುಟ ಕುಟ ಕೂಗಿದುದು
ತಲೆ ಕೆಳಗಾಗುತ ನೇತುದು ಬಾವಲಿ
ಸಹಿಸದೆ ಬಿಳಿಯುಪಹತಿಯನ್ನು
ಘೂಕವು ಭೀಕರ ಘೂಕೂಕರಿಸಿತು
ಮೂಗನ್ನರಳಿಸಿ ಬಿಳಿಗಂಜಿ.
ಕನ್ನಡಿ ಹಾವಿಗೆ ಬೇನೆಯು ಬಂದಿತು
ಬೆನ್ನೊಳು ಹಡೆಯಿತು ಭಯದಲ್ಲಿ.

ಬಸುರಿಗಳಂತು ಬಸವಳಿದರು ಬಲು
ಬಾಣಂತಿಯರ ಪರಿಬೇರೆ
ಹೊಕ್ಕುಳ ಹುರಿಯನು ಹರಿಯದಮಕ್ಕಳ
ತಂದರು ಹಿಟ್ಟಿನ ಲೇಪನದಿ
ಸೇಡಿಯ ನೀರಿನ ಸೇಚನದಿ
ನೆತ್ತರ ನೀರನ್ನೀಗದ ಮಕ್ಕಳ
ತೋಳಿನ ತೊಟ್ಟಿಲ ತೊರೆಯದ ಮಕ್ಕಳ
ತುಂಬೇ ಹೂವಿನ ತೊಡವಿನಲಿ
ಮೆಯ್ಯನ್ನಂಟಿದ ಹತ್ತಿಯಲಿ
ಹಾಳೆಯ ಹಾಸನ್ನಗಲದ ಮಕ್ಕಳ
ತಂದರು ಬಿಳಿಯ ದರ್ಶನಕೆ

ಮಕ್ಕಳುಮರಿಗಳು ಮತ್ತೂ ಬಂದುವು
ಬೊಳ್ಳ ನಾಮದ ಎಮ್ಮೆಯ ಮಣಕ
ಬೊಳ್ಳಿ ನಾಮದ ಹಸುವಿನ ಕಂಜಿ
ಬೊಳ್ಳು ಹೆಸರಿನ ನಾಯಿಯ ಕುನ್ನಿ
ಬೊಳ್ಳಿ ಹೆಸರಿನ ಕೋಳಿಯ ಪಿಳ್ಳೆ
ಎಲ್ಲಾ ಬಂದುವು ಬಿಳಿಯರಾಗಿ
ಬಂಧುಗಳನ್ನು ಒಡಗೂಡಿ
ಅಣ್ಣನ ಕೂಡಿ ಕೆಲವೈತಂದುವು
ಬೊಳ್ಳಣ ಬೊಳ್ಳಾಣೆ
ಅಕ್ಕನ ಕೂಡಿ ಬಂದವು ಕೆಲವು
ಬೆಳ್ಳಕೆ ಬೆಳ್ತಕ್ಕೆ
ಅಮ್ಮನ ಸಂಗಡ ಬಂದವು ಕೆಲವು
ಬೆಳಿಯಮ ಬೆಳ್ತಮ್ಮ
ಅಯ್ಯನ ಒಟ್ಟಿಗೆ ಬೊಳಿಯನು ಬಂದ
ಅಜ್ಜನ ಕೈಬಿಟ್ಟು.
ವಟುಗಳು ಮುನಿಗಳ ಮಾಣಿಗಳು
ಬೊಮ್ಮರ ಬೊಳ್ಳಾಳರ ಬಿಳಿಯ
ಬಾಲರು ಬಂದರು ಕೂಟಕ್ಕೆ
ಶಿಶು ಪ್ರದರ್ಶನ ಸಪ್ತಾಹ

ಕಾಯಿತು ಸರ್ವರಿಗುತ್ಸಾಹ
ಕಪ್ಪಿನ ಆಳುಗಳಣುಗರು ಇಲ್ಲ
ಬೆದರುತ ಇದಿರಿಗೆ ಬರಲಿಲ್ಲ.
ಕಮ್ಮ್ರರ ಜೋಗುಳು ಮೋರರ ಜೇರುಲು
ಕಪ್ಪಿನ ಕೊರಗರ ಕುಟ್ಟಿಗಳು
ಹಂದಿಯು ಕುರುಳಿಯು ವೃಕಶಾಬಕವು
ಕಪಿಪೋತಕ ಕರಿಕಲಭಗಳು
ಮಕ್ಕಳ ಕೂಟಕೆ ಒಂದೇ ಒಂದು
ಕಪ್ಪಿನ ಹುಳು ಸಹ ಬರಲಿಲ್ಲ.

●

ಬಿಳಿಯಾಟೋಪಕೆ ಬಗ್ಗಿದರಿಂತು
ನೆಲದೊಳಗಂತು ಯಾರಿಲ್ಲ.
ಜಲದೊಳಗುಂಟೋ ತಿಳುಕೋ ಬೇಕು
ಕಪ್ಪಿನ ಕೈತವ ತಪ್ಪಿಸ ಬೇಕು
ಎಂದಿರದೈದಿದರೊಂದಾಗಿ
ಸಪ್ತ ಸಮುದ್ರದ ತಡಿಗಾಗಿ
ಕಪ್ಪಿನ ಉಪ್ಪಿನ ಕಡಲಿನ ತಡಿಗೆ
ಕಬ್ಬಿನ ನೀರಿನ ಸರ್ಪಿಯು ನಡುಗೆ
ಬಿಳಿ ಮೊಸರನ್ನೋ ಹಾಲನ್ನೋ
ಹಳಸಿದ ಹುಳುಸಿದ ಕಳ್ಳನ್ನೋ
ಎರೆಯುತ ಬಂತು ಬಿಳಿಸೈನ್ಯ
ಮೊರೆಯುತ ಬಂತು ಬಿಳಿಸೈನ್ಯ

●

ಬಿಳಿಜನರೊಂದುಗೂಡಿದ ದಂಡು
ಬರುವುದ ಕಂಡು ತಾ ಭಯಗೊಂಡು
ಬೆಕ್ಕಸ ಹೋದನು ಮಹವಿಷ್ಣು.
ತಕ್ಷಣ ತಲೆಯನು ಬಾಗಿಸಿ ಬಿಳಿಗೆ
ಹರಿ ಶರಣೆಂದನು ಐಗಳಿಗೆ
ವರಿಗೂ ಬೈದರು ಬೈಗಳಿಗೆ
ಲೆಕ್ಕವೆ ಇಲ್ಲ ಕಿವಿ ಕಿವುಡಾಯಿತು
ಶ್ರೀವಿಷ್ಣುವು ಸುಯಿಲೆತ್ತಲೆ ಇಲ್ಲ
ಕಪ್ಪಿನ ಕೃಷ್ಣನು ಅಹುದೇ ನೀನು
ನೀಲ ಶ್ಯಾಮನು ನೀನಹುದೇ
ಮರ್ದನ ಮಾಡಿದೆ ಮಾಡಿದರೇನು?
ಉದ್ಧರಿಸಿದ್ದೇತಕ್ಕೋ ಕಾಳಿಯ
ಬಿಳಿಯ ವಿರೋಧಿಯು ನೀನೆಂದು
ಬಿಳಿ ಕಡೆಯಿಂದ ಭೃಗುವೈತಂದ
ಮೆಟ್ಟಿದ ವಿಷ್ಣುವಿನುರದೆಡೆಗೆ!
ಸಿಟ್ಟಾದನೆ ಹರಿ ಇಲ್ಲವೆ ಇಲ್ಲ
ಹೊಟ್ಟೆಯೊಳಗೆ ಭೃಗುಲಾಂಛನವಾಯಿತು

ಅಷ್ಟಕೆ ಬಿಟ್ಟಿತೆ ಬಿಳಿಪಡೆಯು?
ವಿಷ್ಣುಸಹಸ್ರನಾಮಕೆ ಬದಲು
ಸಾವಿರ ಸಲ ಬಿಳಿ ಹೆಸರನು ಹೇಳು
ದಂಡ ಪ್ರಣಾಮವ ನೀಮಾಡು
ಒಡನೆ ವಿಶಿಷ್ಟವನೊಪ್ಪಿಸಿ ಬಿಳಿಗೆ
ಬಿಳಿಯುಡೆಯಿಂದ ಬಿಳಿಕೊಡೆಹಿಂದೆ
ಬೀಸುತ ಬಾನೀ ಚಾಮರವ
ಹಡಪವ ಹೊರಲಿ ನಿನ್ನವರು

●

ಬಿದ್ದುದೆ ತಡ ಬಿಳಿ ಮಾತನು ಒಪ್ಪಿ
ಮಲಗಿದ ಹಾಸುಗೆ ವಾಸುಗಿಯನ್ನು
ಧರಿಸಿದ ಶಂಖ ಚಕ್ರಗಳನ್ನು
ಗದೆ ಪದುಮಂಗಳ ಮಡದಿಯು ಸಹಿತ
ಬಿಳಿ ಬಿಳಿ ಮಾಡಿದ ಕಣ್ಮುಚ್ಚಿ.
ಕಣ್ಣಿನ ಕಪ್ಪನ್ನಡಗಿಸಲೆಂದು
ಕಣ್ಣನು ಮುಚ್ಚಿದ್ದಿರಬಹುದೆಂದು
ಕಣ್ಣಿಗೆ ಬಡಿದರು ವಿಷ್ಣುವಿನ
ಹೂ ಕಣ್ಣಾಯಿತು ವಿಷ್ಣುವಿಗೆ.

●

ಹಳದಿಯ ಬಾಸರ ಉಟ್ಟನು ಹರಿಯು
ಪೀತಾಂಬರಧರನೆಂದರು ಜನರು
ಬಿಳಿ ಭಯದಿಂದ ಓಡುತ ಬಂದ
ವೈಕುಂಠವನು ಬಿಟ್ಟೇ ಬಂದ
ಬೆಟ್ಟವನೇರಿದ ಬೆಳ್ಳಾಮಂಗಳ
ಕೊಂಡನು ಗೋಬಯ ಹಣೆಗೆಳಕೊಂಡನು
ಮೂಗಿನ ಬಿಳಿಯ ದಾಸರ ದಾಸ
ವೆಂಕಟರಮಣ ಗೋವಿಂದ
ಶಂಖವನೂದಿದ ಬಿಳಿದಾದ

●

ಬಿಳಿಮಯವಾಯಿತು ಬ್ರಹ್ಮಾಂಡ:
ಅಂಜಿ ಅಚ್ಚರಸಿಯರೈವಾತ
ನಿರ್ಜರ ಕೋಟಿ ಪುರಂದರ ಸಹಿತ
ಏನಿದು ಎಲ್ಲವು ಬಿಳಿ ಕತೆಯೋ?
ಕಪ್ಪಿನ ಸುದ್ದಿ ಸುಳಿವೇ ಇಲ್ಲ;
ಹೇಳುವೆ ಕೇಳಿ ಕಪ್ಪಿನ ಪತ್ತೆ
ಕಾಣದೆ ಕಾಡು ಕಾನನವಾಯಿತು
ಕಪ್ಪಿನದಾಯಿತು ಕಾಂತಾರ
ಕೊಕ್ಕಿನ ಬಂದೂಕನು ಹಿಡಕೊಂಡು
ಒಕ್ಕಣ್ಣಿನ ಗುರಿ ನೋಟದಿ ನಿಂದು
ಬೇಟೆಗೆ ಬಿಳಿಯ ಕೊಳ್ಳೆಯ ಕೂಗಿ

ಕಾಡಿನ ಕಾಪಾಗಿ
ಕರೆಯಿತು ಕಾಗೆ ಕರ್ ಕರ್ರೆಂದು
ಕಪ್ಪಿನ ಮಾತಾಗಿ
"ಕಾಕಾ ಕಾಕಾ ಕಾಕಾಳಿ"
ಕಪ್ಪಾರೆಂದು ಕೇಳಿದುವು
ಕಾಗೆಗಳೆಂದವೆ ಹೇಳಿದುವು
ಪ್ರಶ್ನೆಯೊಳುತ್ತರ ಕಾಗೆಗಳಿತ್ತವು
ಆಗದೆ ಅಚ್ಚರಿ ಹೇಳಿದರೆ
ಈಗಿನ ಹಾಗಲ್ಲಾಗಿನ ಕಾಲದ
ಕಾಗೆಗೆ ಸಂಸ್ಕೃತ ಬರುತಿತ್ತು
ಕಪ್ಪಿಗೆ ಸಕ್ಕದ ಗೊತ್ತಿತ್ತು.

●

ಕಪ್ಪದು ಕಾರಭಾರವ ಮಾಡಿತು
ಪಾಪದ ಕಾಲನ ಮೇಲೆಲ್ಲ
ಪಾಪವು ಪಾಪ ಕಪ್ಪೆಂದೊಪ್ಪಿತು
ಕಪ್ಪಿನ ಲೇಪನ ಮಾಡುತ ಮೈಗೆ
ಕಾಲನು ತಾನು ಕಪ್ಪೆಂದ
ಕಪ್ಪಿಗೆ ಯಮನು ನಮೊ ಎಂದ

●

ಅಲ್ಲಿಲ್ಲೆಲ್ಲಾ ಮಾಡುತ ಕಪ್ಪು
ಬೆಳ್ಳಿ ಬೆಟ್ಟಕ್ಕೋಡಿತು ಕಪ್ಪು
ಎಲ್ಲಿ ಗೌರಿ! ಶಂಕರರೆಲ್ಲಿ?
ಕಪ್ಪನ್ನೊಪ್ಪಿಕೊಳ್ಳುವರೇನು?
ಎಂದರೆ ಒಂದರೆಗಳಿಗೆ ಒಳಗೆ
ಕೊರಳಿಗೆ ಕಪ್ಪಿನ ಕುರುಹನು ಮಾಡಿ
ಕಾಲಕಂಧರ ತಾನೆಂದ
ಕಪ್ಪಿನ ಕೊರಳಿನ ಶಿತಕಂಠ

●

ಶಿವೆತಾನಾದಳು ಮಾಕಾಳಿ
ಕಂಠಕೆ ಕರಿಮಣಿ ಕಟ್ಟಿದಳು
ಕಪ್ಪಿನ ಕಾಂಗನ್ನುಟ್ಟಳು ಕಟಿಗೆ
ತೊಟ್ಟಳು ಕರಿಬಳೆ ಕೈಗಳಿಗೆ
ಕಣ್ಣಿನ ಕಾಡಿಗೆ ಕಸ್ತೂರಿ ಬೊಟ್ಟು
ಕಣ್ಣಿನ ಹುಬ್ಬು ಎವೆಗಳು ಒಟ್ಟು
ನಖದುದಿಯಿಂದ ಶಿಖ ಪರಿಯಂತ
ಕರಿಮೈಯಿಯಾದಳು ಸರ್ವಾಂಗ
ವಲಿದಳು ಶಂಕರಿ ಜಗದಂಬೆ
ಬಿಳಿಗೆ ಭಯಂಕರಿ ಏನೆಂಬೆ

●

ಅನಕಾ ಬೆನಕ ಬೆಳ್ನಗೆ ನಕ್ಕ
ಹೇಡಿತನಕ್ಕೆ ಹೆತ್ತವರ
ಅಣಕವಾಡಿದನೆಂದು ಕರಿಪಡೆ
ಹಲ್ಲನು ಮುರಿಯಿತು ಗಣಪತಿಯು
ಡೊಳ್ಳಿಗೆ ಬಡಿದರು ಬೋರಲೆ ಬಿದ್ದ
ಮೂಗನ್ನೆಳೆದರು ಉದ್ದಕ್ಕೆ
ಕರಿಕೈ ಮಾಡಿ ಗದ್ದಕ್ಕೆ
ಮುಸಿಯನು ಬಳಿದರು ಕರ್ಣಕ್ಕೆ
ಕೆನ್ನೆಗೆ ಕಬ್ಬುನದಂಕುಸವೂರಿ
ಕರಿನೆತ್ತರನು ಇಳಿಸಿದರೂ
ಇಲಿ ಮೇಲೇರಿಸಿ ಎಳೆಸಿದರು
ಬೀದಿ ಬೀದಿಯುಲ್ಲಲೆಸಿದರು.

●

ರಂಭಾರೂಟ ಆಯಿತಹೋ ಹೇ
ರಂಬನು ತುಂಬ ಬಸವಳಿದ
ಶಾಂಭವಿ ಶಂಭು ಕುಟುಂಬವೆ ಕೂಡಿಪ
ಲುಂಬಿತು ಕಂಬನಿ ಕಡಲಿನಲಿ
ಕರಿಪಾದಕೆ ಕೈಲಾಸವನೊಪ್ಪಿಸಿ
ದಮ್ಮಯುಗುಡ್ಡೆ ಹಾಕಿದರು
ನಚ್ಚಿನ ಮಗನನು ಕರಿ ಮುಖ ಮಾಡಿ
ಪೊಡಮಡಿಸಿದರು ಉದ್ದಂಡ.

●

'ಜಗತಃ ಪಿತರೌ ವಂದೇ' ಎಂದು
ನಮಿಸಲ್ಪಡುವವರಲ್ಲವೆ ಇಂದು
ಪಾರ್ವತಿ ಪರಮೇಶ್ವರರೇ ಬಂದು
ನಮಿಸಿದರೆಂದರೆ ಕಪ್ಪನ್ನು
ಹೇಳುವದೇನು ಮೀರುವರುಂಟೇ
ಕಾಲದ ಕುಟಿಲದ ಗತಿಯನ್ನು
ಕ್ಷಮಿಸಿತು ಕಪ್ಪು ತಪ್ಪನ್ನು
ಹಿಂದಕ್ಕಿತ್ತು ಲಂಬೋದರನ
ತೆರಳಿತು ಕಪ್ಪು ಅಲ್ಲಿಂದ

●

ಗಗನಕ್ಕೇರಲು ಕಪ್ಪಿಗೆ ಕೈಕೊಡೆ
ಕೈವರ್ತಿಸಿತು ಆಗಸವು
ಕಪ್ಪಿನ ದಂಡನ್ನಿದಿರಿಸಿ ತಿಂಗಳು
ತಿಂಗಳು ಕಾಳಗ ಹೂಡಿದನು
ಕಪ್ಪಿಗೆ ತಿಂಗಳಿಗಾಯಿತು ಭುಜಭುಜ
ಆದರೆ ಯಾರಿಗೂ ಜಯವಿಲ್ಲ
ಕಾದುತ ಕಾದುತ ಕಡೆಗೆ ಕಳೇಬರ
ಕಂದಿತು ಕಾಂತಿ ಕುಂದಿದುದು

●

ಕೊಳಗದಲಿ ಕೈ ಸೋಲಲು ಇಂದು
ಕಾಣುತ ಒಂದು ಮೊಲವೈತಂದು
ಹೇಳಿತು ಕಪ್ಪನು ಕುರಿತಿಂತೆಂದು!—
ಓ! ಓ! ಕಪ್ಪು, ಕತ್ತಲೆಯರಸು
ಚಂದಿರ ನಿನ್ನವ ನೀದಯವಿರಿಸು
ಒಂದೆರಡೇನಲ್ಲಿಪ್ಪತ್ತೇಳು
ಉಡು ಹೆಂಗಳ ಸಿರಿ ಬೊಟ್ಟನ್ನುಳುಹು
ಕೊರಳಿನ ಮಂಗಲ ಸೂತ್ರವ ಹರಿದು
ಕರಿಮಣಿ ಕಂಕಣ ಕೈಯೊಳು ಹಿಡಿದು
ಅಳುವರು ಗಂಡನ ಉಳುಹಿಕೊಡೆಂದು
ಮೂಗುತಿಯನು ಮುತ್ತೈದವನು,
ಕರ್ಣದ ವಾಲೆಯು ಕಳಚುವ ಮೊದಲೆ
ಸೌಂದರ್ಯದ ಸಂಹಾರದ ಮೊದಲೆ
ಉಡುಪತಿ ಹರಣವನುಳುಹಿಕೊಡು

●

ಬಿನ್ನೈಸಲು ಮೊಲವೀತೆರನಾಗಿ
ಕಪ್ಪಿನ ಅಂತಃಕರಣವು ಕರಗಿ
ಬಾ ತಂಗದಿರನೆ ಚಂದಿರನೆ
ಬಾಬಾರೆನ್ನುತ ಬರಸೆಳೆದಪ್ಪಿತು
ಅಪ್ಪಿದ ಭಾಗವು ಕಪ್ಪಾಯ್ತು
ಕಪ್ಪಿಗೆ ಚಂದ್ರಗೆ ಪುದುವಾಯ್ತು
ಬಿಟ್ಟನೆ ಬಿಳಿಯನು ಕಪ್ಪನೆ ಹಿಡಿದನೆ
ಇಲ್ಲ ಇಬ್ಬರ ಮುಂತಿಟ್ಟು
ಹೇಳಿದ ತನ್ನಯ ಒಳಗುಟ್ಟು.
ನೀರಿನ ಗುಳ್ಳೆಯ ದೇಹವಿದು
ಕ್ಷಯಿಸುವ ರಾಜ ಭೋಗವಿದು
ನಚ್ಚೆನು ಮೆಚ್ಚೆನು ನಶ್ವರ ಜೀವನ
ಜಗತಿಗೆ ಧಾರೆಯನೆರೆಯುವೆನೀಕ್ಷಣ
ಸಂತಸವಾಗಲಿ ನಿಮಗೆಂದು
ಮೆಯ್ಯನ್ನಿಬ್ಭಾಗವ ಮಾಡಿ
ಕಪ್ಪನು ಬಿಳುಪನು ಎಡಬಲ ಮಾಡಿ
ನೀಡಿದ ಎರಡೂ ಭಾಗಗಳ
ಕೃಷ್ಣದ—ಶುಕ್ಲದ ಪಕ್ಷಗಳ

●

ಕಂಡವು ಕೊಂಡವೆ ಕಂಡಗಳನ್ನು
ಕೊಂಡವು ಚಿಂತಾಂಬುಧಿಯನ್ನು
ಕಂಡನು ವಿಪರೀತವನು ಮಾ
ರ್ತಾಂಡನು ತಕ್ಷಣಕೈತಂದ
ಕಂಡಗಳೆರಡನು ಜೋಡಿಸಿ ಅಮೃತಕ
ರಂಡದೊಳಿಗಿಸಿದನು
ಚಂದ್ರಗೆ ಜೀವವ ಬರಿಸುತ ಲೋಕವ
ವಿಸ್ಮಯಗೊಳಿಸಿದನು

●

ಅದ್ಭುತವಿದು! ಆಶ್ಚರ್ಯವಿದು
ವಿಧು ಉದ್ಭವ ಇನ ಜಾದುವಿದು
ಎಂದಿತು ನಾಡಿಗೆ ನಾಡೇ ಕೂಡಿತು
ಮಾಡಿತು ಸಂತಸ ಜಯ ಘೋಷ
ಪೂಮಳೆಗರೆದರು ಸುರರಾಗಸದಲಿ
ಬಾರಿಸಿದರು ಸುರದುಂದುಭಿಯ
ಅತಿಥಿಗಳಾದರು ಹರಗಿರಿಜೆಯರು
ಕಪ್ಪಿನ ಕಡೆಯಿಂದೈತಂದು
ಶ್ರೀಹರಿ ಭೃಗುಮುನಿ ಮೊದಲಾದವರು
ಬೀಯಗರಾದರು ಬಿಳಿಕಡೆಗೆ

●

ಕರಿಬಿಳಿಗಳು ತಲೆ ತಗ್ಗಿಸಿ ನಿಂದವು
ತಪ್ಪನು ಮನ್ನಿಸ ಬೇಕೆಂದು
ಸೂರಿಯ ನಾರಾಯಣನೆಂದ
ಎಲ್ಲರು ಮಾತನು ಕೇಳಿದರು.
ಅಳದಿರಿ ನೀವು ಮಾಡದಿರಿಂಥ
ಹುಡುಗಾಟವನು ಎಂದೆಂದು
ಬಿಳಿ ಮೇಲೇನು ಕರಿ ಕೀಳೇನು
ಮೇಲು ಕೀಳದು ಬಣ್ಣದೊಳೇ?
ಅಥವಾ ನಿಮ್ಮ ಶುದ್ಧಾಶುದ್ಧ
ಕರ್ಮಗಳ ವ್ಯತ್ಯಾಸದೊಳೆ?
ತಿಳಿಯದೆ ಮೋಸ ಹೋದಿರಿ ಹಿಂದೆ
ಚಿಂತಿಸಿ ಮುಂದೆ ಫಲವಿಲ್ಲ.
ಆದುದರಿಂದ ನೀವೊಂದಾಗಿ
ಹಸ್ತಲಾಘವ ಮಾಡಿಕೊಳಿ
ಅನುಗುಣವಾಗಿ ನಡೆಯಿರಿ ನೀವು
ಕಾಲಪುರುಷನ ಕಟ್ಟಳೆಗೆ
ನಾನೂ ಕೂಡ ನಾವ್ ನೆರವಾಗಿ
ಪಾಲಿಸುವ ಪ್ರಪಂಚವನು

●

ಬೀಳ್ಕೊಂಡರು ಸಮಸ್ತರು ಶಾಂತಿ ನ
ಮಸ್ತೇ ಹೇಳುತ ಸೂರ್ಯನಿಗೆ
ನೇಸರು ನೇಮವ ಹೊತ್ತೈತಂದುವು
ಕರಿ ಬಿಳಿಗಳು ಸ್ವಸ್ಥಾನಕ್ಕೆ
ಮರಣಕೆ ಶಶಿ ಉತ್ಥಾನಕ್ಕೆ
ತಿಂಗಳು ತಿಂಗಳು ಒಂದುದಿನ

★ ಶಿಕ್ಷಣ ಪ್ರಚಾರ ★

(ಲೇಖಕರು: ಟಿ. ಎಸ್. ಹೆಗ್ಡೆ, ಎಂ. ಎ., ಎಲ್. ಟಿ.)

ಶಿಕ್ಷಣಪ್ರಚಾರವೆಂದು ಹೇಳುವಾಗ ನಮ್ಮ ದೇಶದ ಪ್ರಕೃತ ಪರಿಸ್ಥಿತಿಯನ್ನು ನೋಡಿಕೊಂಡು ಮನುಷ್ಯನಿಗೆ ಅತಿ ಅಗತ್ಯವಿರುವ ಓದು ಬರಹ ಲೆಕ್ಕ, ಸ್ವತಂತ್ರ ಜೀವನಾಧಾರವಾದ ಮತ್ತು ಅನುಕೂಲವಾದ ವೃತ್ತಿಯ ತರಬೇತಿಯನ್ನು ಒಳಗೊಂಡ ಬರೇ ಪ್ರಾಥಮಿಕ ವಿದ್ಯಾಭ್ಯಾಸವಷ್ಟನ್ನೆ ಇಲ್ಲಿ ಒತ್ತಿ ಹೇಳಬೇಕಾಗುತ್ತದೆ. ಪ್ರಪಂಚದ ನಾಗರಿಕ ಜನಾಂಗಗಳಲ್ಲೆಲ್ಲಾ ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿರುವ ನಮ್ಮ ದೇಶವು ನಿಜವಾಗಿ ಉನ್ನತಿಯ ಪಥವನ್ನು ಹಿಡಿಯಬೇಕಾದರೆ ಸಾರ್ವತ್ರಿಕ ಪ್ರಾಥಮಿಕ ವಿದ್ಯಾಭ್ಯಾಸವು ಅತಿ ಅಗತ್ಯವೆಂದು ನಾವೆಲ್ಲ ಬಲ್ಲೆವು. ಪಕ್ಷಪಂಥಗಳ ಗೊಂದಲ ಹೋರಾಟಗಳಲ್ಲಿ ಕಳೆದ ಕಾಲು ಶತಮಾನದಲ್ಲಿ ನುಚ್ಚುನೂರಾದ ಚೈನ ದೇಶವು ಭದ್ರವಾದ ಸರಕಾರ ಒಂದನ್ನು ಕಟ್ಟಿ ಸ್ವಲ್ಪ ಸಮಯದಲ್ಲೇ ಶಿಕ್ಷಣ ವಿಭಾಗದಲ್ಲಿ ಮಾಡಿದ ಪ್ರಗತಿಯನ್ನು ನೋಡಿದರೆ ಆ ಜನಾಂಗದಂತೆಯೇ ಹೆಚ್ಚಿನ ಮಟ್ಟಿಗೆ ಇರುವ ನಾವೂ ನಮ್ಮನ್ನು ಉದ್ಧರಿಸಿಕೊಳ್ಳಬಹುದೆಂದು ಭರವಸೆ ಇಟ್ಟುಕೊಳ್ಳಬಹುದು. ಆದರೆ ನಮ್ಮಲ್ಲಿ— ನಮ್ಮ ಸ್ತ್ರೀಪುರುಷರಲ್ಲಿ ಚೈನೀಯರಂತೆ ನಿಜವಾದ ದೇಶಪ್ರೇಮ, ದೇಶಕ್ಕಾಗಿ ಕಷ್ಟಪಟ್ಟು ದುಡಿಯುವ ಉದಾತ್ತ ಗುಣ ಎಷ್ಟು ಇದೆ ಎಂಬ ಒಂದು ಪ್ರಶ್ನೆಯೂ ಮುಂದಕ್ಕೆ ಬರುವುದು. ನಮ್ಮ ದೇಶಪ್ರೇಮಿಗಳೆಲ್ಲಾ ರಾಜಕಾರಣಪಟುಗಳಾಗಿ ನಮ್ಮನ್ನು ಆಳುವ ಅಧಿಕಾರಿಗಳೋ, ಪ್ರಜಾಪ್ರತಿನಿಧಿಗಳೋ ಆಗಿರಲು ಪ್ರಯತ್ನಿಸುವವರು. ಇಲ್ಲವೆ ಯಾವುದಾದರೂ ಸಾಮಾನ್ಯ ಧ್ಯೇಯಗಳನ್ನು ಮುಂದಿಟ್ಟುಕೊಂಡವರಂತೆ ನಟಿಸಿ ಸಮಾಜದಲ್ಲಿ ಪಕ್ಷತಂಡಗಳನ್ನು ಕಟ್ಟಿಕೊಂಡು ಅವುಗಳ ಮುಂದಾಳಾಗಿ ಅವರನ್ನು ಆರ್ಥಿಕ, ಸಾಮಾಜಿಕ ವಿಚಾರಗಳಲ್ಲಿ ಮೇಲೆತ್ತುವವರೆಂದು ಹೇಳುವವರು. ಆದರೆ ಮೂವತ್ತು ಕೋಟಿಗೂ ಮಿಕ್ಕಿರುವ ಪ್ರಜಾಜನರಲ್ಲಿ ಶೇಕಡ ಬರಿ ಹತ್ತು ಅಥವಾ ಹನ್ನೊಂದು ಜನರು ಮಾತ್ರ ಓದು ಬರಹ ಬಲ್ಲವರೆಂದು ಹೇಳಿಸಿಕೊಳ್ಳುವ ವಿದ್ಯಾವಂತರಿರುವಲ್ಲಿ ಈ ಕೋಟಿಗಟ್ಟಲೆಯ ಅನಕ್ಷರರನ್ನು ಸಾಕ್ಷರರನ್ನಾಗಿ ಮಾಡುವ ಪ್ರಯತ್ನ ಮಾಡಲು ಯಾರೂ ಮುಂದಾಗುವುದಿಲ್ಲ. ಕಾರಣ ಈ ಕಾರ್ಯದಿಂದ ಈಗ ಜನತೆಯಲ್ಲಿ ಗೌರವ, ಸ್ಥಾನ ಅಧಿಕಾರಗಳು ದೊರೆಯುವುದಿಲ್ಲ, ಪ್ರಯೋಜನ (ಆರ್ಥಿಕ] ಎಂತೂ ಇಲ್ಲ; ಮುಂದಾಳುಗಳೆಂದು ಹಿಂಬಾಲಕರು 'ಜೈ ಕಾರ' ಹಾಕಿ ಪ್ರೋತ್ಸಾಹಿಸುವಂತಿಲ್ಲವೆಂದು ನಾವೆಲ್ಲ ಬಲ್ಲೆವು. ಸರಕಾರವು ಕೂಡ ಪ್ರಾಯಪ್ರಬುದ್ಧರಿಗೆ ಮತದಾನದ ಹಕ್ಕು ಕೊಟ್ಟು ಶೇಕಡ ೯೦ಮಂದಿ ತಾವು ಯಾರಿಗೆ ಯಾಕೆ ಮತಗೊಡುತ್ತಿರುವೆವೆಂದು ತಿಳಿಯದಿರುವಲ್ಲಿ ಆದಷ್ಟು ಬೇಗ ಅವರೆಲ್ಲಾ ಸಾಕ್ಷರರಾಗುವಂತೆಯಾದರೂ

ಸೂರ್ಯನ ಚಂದ್ರನ ನೆನಪನು ಮಾಡುತ
ತಪ್ಪದೆ ಪ್ರಾರ್ಥನೆ ಸಲಿಸಿದವು.
ಅಂದಿನ ಪ್ರಾರ್ಥನೆಗಿಂದೂ ಬರುವರು
ಸೂರಿಯ ಚಂದಿರರೊಂದಾಗಿ
ಆದರೆ ಚಂದಿರ ಆದಿನ ಕಾಣನು
ಕಾಣುವದುಂಟೇ ಸತ್ತವರು
ಅಂದಿಗೆ ಎಂಬರಮಾವಾಸ್ಯೆ
ಅಂದು ಕರಿಬಿಳಿಗಳಿಗುಪೋಷ್ಯೆ

●

ಆಟಕ್ಕಾದರೂ ಹಟಮಾರಿತನ
ವನು ಬಿಡ ಬೇಕೀ ಕತೆ ಕೇಳಿ
ಮಾತೊಳು ಕಾಳಗ ಮಾಡಲಿಕಾಗದು
ಚ್ಯುತಿತರಬಾರದು ಸತ್ಯಕ್ಕೆ
ಮಾತಿಗೆ ಮಾತು ಬೆಳೆಸುವುದಲ್ಲ
ಮಾತಿನ ಮಲ್ಲರೆನಿಸಲು ಸಲ್ಲ
ಒಳ್ಳೆಯದಲ್ಲ ಮಾತಾಳಿ
ವರ್ಜಿಸಬೇಕು ಸರ್ವತ್ರ
ಜಾತಿವಿಜಾತಿಯ ಮಾಡದಿರಾರೂ
ವರ್ಣವಿಭಾಗವ ಹೂಡದಿರಿ।
ಬಹುವಿಧ ಬಣ್ಣದ ಎಲ್ಲರ ದೇಹದ
ಆತ್ಮವು ಒಂದೇ ಭಾವಿಸಿರಿ.
ಸೃಷ್ಟಿಯು ಒಂದೇ ದೇವರು ಒಂದೇ
ಹೇಳಿರಿ ವಂದೇ ಮಾತರಂ ॥

(ಹಕ್ಕು- ಲೇಖಕನದು)

ಮಾಡಬೇಕು; ಹಾಗೆ ಮಾಡಿದರೆ ಮಾತ್ರ ನಮ್ಮ ಸರಕಾರವು ನಿಜವಾದ ಪ್ರಜಾಪ್ರಭುತ್ವ ರಾಜ್ಯವಾಗುವುದು ಇಲ್ಲದೆ ಇದ್ದರೆ ಇದು ಹೆಸರಿಗೆ ಮಾತ್ರ 'ಡೆಮೋಕ್ರೇಟಿಕ್' ಆಗಿ ಉಳಿಯುವುದೆಂಬುದನ್ನು ಆದಷ್ಟು ಬೇಗನೆ ತಿಳಿಯುವುದುತ್ತಮ.

ಶಿಕ್ಷಣ ಪ್ರಚಾರವನ್ನು ಪ್ರತ್ಯಕ್ಷ ಹೇಗೆ ಮಾಡಬಹುದೆಂದು ಇಲ್ಲಿ ಕೆಲವು ಸೂಚನೆಗಳನ್ನು ಮಾತ್ರ ಕೊಡಲು ಪ್ರಯತ್ನಿಸುವೆನು—ಶಿಕ್ಷಣ ತಜ್ಞರು ಇದನ್ನು ಸುಧಾರಿಸಿ ಉತ್ತಮ ಮಾರ್ಗವನ್ನು ತೋರಿಸಿಕೊಡಬಹುದು.

ಪ್ರಜಾಪ್ರಭುತ್ವದಲ್ಲಿ ಹೆಸರಾದ ಅಮೇರಿಕದ ಸಂಯುಕ್ತ ರಾಜ್ಯಗಳ ಉದಾಹರಣೆಯನ್ನು ತೆಗೆದುಕೊಂಡರೆ–ಅಲ್ಲಿ ಪ್ರತಿ ಹಳ್ಳಿಗೆ ಒಂದರಂತೆ ಶಾಲೆ ಇದೆ. ಪ್ರಾಥಮಿಕ ವಿದ್ಯಾಭ್ಯಾಸವು ಖಡ್ಡಾಯವಿದ್ದು ಅದರ ಭಾರವು ಪ್ರಾಂತಿಕ ಸರಕಾರದ ಮೇಲಿದೆ. ನಮ್ಮಲ್ಲಿ ಈಗ ಇರುವಂತೆಯೇ ಈ ಶಾಲೆಗಳು ಒಂದು ಕೋಣೆಯ ಓರ್ವ ಅಧ್ಯಾಪಕ ಅಥವಾ ಅಧ್ಯಾಪಕಿಯ ಶಾಲೆ. ಗ್ರಾಮದಲ್ಲ ಶಿಕ್ಷಣ ಸಲಹಾ ಸಮಿತಿ ಇದೆ. ಈ ಸಮಿತಿಯು ತಮ್ಮ ಶಾಲೆಯ ಎಲ್ಲಾ ವಿಚಾರಗಳನ್ನು ನೋಡಿಕೊಳ್ಳುತ್ತದೆ. ಶಾಲಾ ಕಟ್ಟಡ, ಸಾಹಿತ್ಯ ಸಾಮಗ್ರಿ, ಪಾಠೋಪಕರಣ ಇತ್ಯಾದಿಗಳನ್ನು ಅವರೇ ಸ್ವತಹ ಮಾಡಿ, ಇಲ್ಲವೆ ಕೊಂಡುಕೊಂಡು ಒದಗಿಸುತ್ತಾರೆ. ಅಮೇರಿಕದ ಸಾಮಾನ್ಯ ಆರ್ಥಿಕ ಸ್ಥಿತಿಯು ಬಹು ಉತ್ತಮ ಇದೆ. ಅಲ್ಲಿ ಅದು ಸಾಧ್ಯ, ನಮ್ಮಲ್ಲಿ ಅಸಾಧ್ಯವೆಂದರೆ ಇಲ್ಲಿನ ಜೀವನಮಟ್ಟ ಇತ್ಯಾದಿ ನಮ್ಮ ಆರ್ಥಿಕ ಸ್ಥಿತಿಯಂತೆ ಕಡಿಮೆ ಇರುವುದರಿಂದ ಗ್ರಾಮಕ್ಕೊಂದು ಶಾಲೆ, ಅದಕ್ಕೆ ಬೇಕಾದ ಸಲಕರಣೆ ಸುಲಭವಾಗಿ ನಾವೂ ಒದಗಿಸಿಕೊಳ್ಳಬಹುದೆಂದು ಅನುಭವದಿಂದ ಬಲ್ಲೆವು. ಆದರೆ ಇದಕ್ಕೆ ಯೋಗ್ಯ ಮತ್ತು ಧರ್ಮ ಬುದ್ಧಿಯ ಜನರು ಬೇಕು.

ಅಮೇರಿಕದಲ್ಲಿ ಈ ಒಂದು ಕೋಣೆಯ ಶಾಲೆಗಳು ಈಗ ಮಾಯವಾಗುತ್ತಾ ಬರುತ್ತಿದ್ದು ಕೇಂದ್ರಸ್ಥಳಗಳಲ್ಲಿ ಸಂಘಟಿತ ವಿದ್ಯಾ ಸಂಸ್ಥೆಗಳು ಬೃಹದಾಕಾರದಲ್ಲಿ ತಲೆ ಎತ್ತುತ್ತಿವೆ. ಈ ಶಾಲೆಗಳಲ್ಲಿ ತುಂಬಾ ಮಕ್ಕಳು, ಸಾಕಷ್ಟು ಅಧ್ಯಾಪಕ ಅಧ್ಯಾಪಕಿಯರೂ ಇದ್ದು, ಹತ್ತಾರು ಹಳ್ಳಿಯ ಜನರು ಒಟ್ಟುಕೂಡಿ ತಮ್ಮ ಚಿಕ್ಕ ಶಾಲೆಗಳ ಅನುಕೂಲಗಳನ್ನೆಲ್ಲಾ ಒಂದಾಗಿ ಸೇರಿಸಿ ಈ ಕೇಂದ್ರಶಾಲೆಗಳನ್ನು ಸ್ಥಾಪಿಸಿಕೊಳ್ಳುತ್ತಾರೆ. ಸುತ್ತಮುತ್ತಲಿನ ಪ್ರದೇಶದ ಶಾಲಾ ಪ್ರಾಯದ ಬಾಲಕ ಬಾಲಕಿಯರು ಈ ಕೇಂದ್ರ ಸಂಸ್ಥೆಗಳಲ್ಲಿ ಶಿಕ್ಷಣ ಪಡೆಯುತ್ತಿರುವರು. ಗ್ರಾಮಸ್ಥರೇ ವ್ಯವಸ್ಥೆಗೊಳಿಸಿದಂತೆ ಈ ಮಕ್ಕಳನ್ನೆಲ್ಲಾ ಮೋಟಾರು ಬಸ್ಸುಗಳಲ್ಲಿ ಧರ್ಮಾರ್ಥವಾಗಿ ಶಾಲೆಗೆ ತಂದು ಬಿಟ್ಟು ಸಂಜೆಗೆ ಅವರವರ ಮನೆಗೆ ಕೊಂಡೊಯ್ಯುತ್ತಿರುವರು. ೧೯೦೦ನೇ ಇಸವಿಯಲ್ಲಿ ಇಲ್ಲಿ ಶೇಕಡ ೬೧ ಮಂದಿ ಶಾಲೆಗೆ ಹೋಗುತಿದ್ದರು. ೧೯೫೦ರಲ್ಲಿ ಈ ಸಂಖ್ಯೆಯು ೯೮ಕ್ಕೆ ಮುಟ್ಟಿದೆ. ಇದರಿಂದ ತೋರುವುದೆಂದರೆ ಅಮೇರಿಕದಲ್ಲಿ ಶಾಲಾ ಪ್ರಾಯದವರೆಲ್ಲಾ ಶಾಲೆಗೆ ಹೋಗುತ್ತಿರುವುದು ಮತ್ತು ಇಲ್ಲಿನ ಜನರು ಮಕ್ಕಳ ವಿದ್ಯಾಭ್ಯಾಸವು ಅನ್ನಬಟ್ಟೆಯಂತೆ ಅಗತ್ಯವೆಂದು ತಿಳಿದಿರುವುದು.

ನಮ್ಮ ಸಂಸ್ಥಾನದಲ್ಲಿಯೂ ಐದಾರು ವರ್ಷಗಳ ಹಿಂದೆ ಖಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಕೆಲವು ಕೇಂದ್ರಗಳನ್ನು ಆರಿಸಿ ಸರಕಾರವು ಅದನ್ನು ಆರಂಭಿಸಿತು. ಆದರೆ ಸ್ವಾತಂತ್ರ್ಯ ಸಿಕ್ಕಿದಕೂಡಲೇ ಮಹಾತ್ಮಾ ಗಾಂಧಿಯವರು ಸೂಚಿಸಿದ 'ಬುನಾದಿ ಶಿಕ್ಷಣಕ್ರಮ'ವನ್ನು ಪ್ರಚಾರಕ್ಕೆ ತರುವ ಉದ್ದೇಶದಿಂದ ಖಡ್ಡಾಯ ಶಿಕ್ಷಣವನ್ನು ಹಾಗೆಯೇ ಬಿಟ್ಟು ಬುನಾದಿ ಶಿಕ್ಷಣ ಪದ್ಧತಿ ಪ್ರಚಾರಕ್ಕೆ ಆರಂಭಿಸಿರುವರು. ಯಾವ ಶಿಕ್ಷಣ ಪದ್ಧತಿಯಾದರೂ ಸರಿ; ಅದು ಎಲ್ಲರಿಗೂ ಧರ್ಮಾರ್ಥವಾಗಿ ದೊರೆಯಬೇಕು; ಪ್ರಜಾಜನರು ಇದನ್ನು ತಾವಾಗಿ ಸ್ವೀಕರಿಸದೆ ಹೋದರೆ ಅದು ಖಡ್ಡಾಯವಿರಬೇಕು.

ನಮ್ಮಲ್ಲಿ ಈಗ "Community Project" 'ಸಮಾಜ ಸುಧಾರಕ ಯೋಜನೆ'ಯನ್ನು ಕೆಲವು ಕಡೆಗಳಲ್ಲಿ ಕೈಕೊಂಡಿರುವರು. ಇಂತಹ ಕೇಂದ್ರಗಳಲ್ಲಾದರೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಚಾರ ಮಾಡುವ ಕೆಲಸವನ್ನು ಈಗಲೇ ಕೈಕೊಳ್ಳಬೇಕು. ಕೇಂದ್ರ ಸಂಸ್ಥೆಗಳಿಗಾಗಿ ಶಾಲಾ ಕಟ್ಟಡಗಳನ್ನು ಕೇಂದ್ರಸ್ಥಳಗಳಲ್ಲಿ ಗ್ರಾಮಸ್ಥರ ಸಹಾಯದಿಂದ ಕಟ್ಟಿಸಿ ಅವುಗಳಿಗೆ ಬೇಕಾದ ಸಾಹಿತ್ಯ ಸಾಮಗ್ರಿಗಳನ್ನು ಒದಗಿಸಿಕೊಳ್ಳಬೇಕು. ಅಗತ್ಯವಿರುವಲ್ಲಿ ಮೂಲೆ ಸಂದುಗಳಲ್ಲಿ ಒಂದೆರಡು ಚಿಕ್ಕ ವಿದ್ಯಾಸಂಸ್ಥೆಗಳ ಅಗತ್ಯವಿದ್ದರೆ ಅವನ್ನಲ್ಲಿ ಸ್ಥಾಪಿಸಬೇಕು. ಇದಕ್ಕೆ ಗ್ರಾಮಸ್ಥರನ್ನೇ ಮುಂದಿಟ್ಟುಕೊಳ್ಳಬೇಕು. ಪ್ರತಿಸಂಸ್ಥೆಗೊಂದು ಸಲಹಾ ಸಮಿತಿಯನ್ನು ನಿರ್ಮಿಸಿಕೊಂಡು ಅವರಿಗೆ ಕೆಲವು ನಿರ್ದಿಷ್ಟ ಜವಾಬ್ದಾರಿಯನ್ನು ಕೊಡಬಹುದು. ನಮ್ಮಲ್ಲಿ ದೂರದ ಮಕ್ಕಳನ್ನು ಕೇಂದ್ರದ ಶಾಲೆಗೆ ಕರತರಲು ಧರ್ಮಾರ್ಥ ಬಸ್ಸುಗಳು ಸಿಕ್ಕುವುದು ಕಷ್ಟವಿರಬಹುದು. ಅನೇಕ ಕಡೆಗಳಲ್ಲಿ ಸರಿಯಾದ ರಸ್ತೆ ಕೂಡ ಇರಲಿಕ್ಕಿಲ್ಲ. ಆದರೆ ಸಮಾಜ ಸುಧಾರಣ ಕೇಂದ್ರಗಳಲ್ಲಿ ಅಗತ್ಯವಿರುವಲ್ಲೆಲ್ಲಾ ಸ್ಥಳಿಕರೇ ರಸ್ತೆ ತಯಾರಿಸುವುದೂ ಯೋಜನೆಯಲ್ಲಿ ಸೇರಿದ ವಿಷಯವಿರುವುದರಿಂದ ಆದಷ್ಟು ಬೇಗನೇ ರಸ್ತೆಗಳ ಅಭಾವವು ಕಡಿಮೆಯಾಗಬಹುದು. ಇನ್ನು ಮಕ್ಕಳನ್ನು ಕೊಂಡೊಯ್ಯಲು ಸರಕಾರವು ಇಷ್ಟಪಟ್ಟರೆ ಬಸ್ಸು ಕಂಪೆನಿಗಳ ಮಾಲಿಕರನ್ನು ಒತ್ತಾಯಿಸಬಹುದು. ಅವರ ಉತ್ಪತ್ತಿ ವ್ಯವಹಾರ ಕೇಂದ್ರದ ವಿಸ್ತೀರ್ಣ ಅವರಲ್ಲಿರುವ ಬಸ್ಸುಗಳ ಸಂಖ್ಯೆಗೆ ಅನುಸರಿಸಿ ಈ ಕೆಲಸವನ್ನು ಪಾಲು ಹಚ್ಚಿ ಕೊಡಬಹುದೆಂದು ತೋರುತ್ತದೆ.

ಇನ್ನು ಈ ಶಾಲೆಗಳಲ್ಲಿ ಬುನಾದಿ ಪದ್ಧತಿಯಲ್ಲೇ ಶಿಕ್ಷಣ ಕೊಡುವುದು ಉತ್ತಮವೆಂದು ನನಗೆ ತೋರುತ್ತದೆ. ನಮ್ಮ ದೇಶವು ವ್ಯವಸಾಯಕ್ಕೆ ಹೆಸರಾದುದು ನಮ್ಮ ಜನರಲ್ಲಿ ಶೇಕಡ ೮೫ರಿಂದ ೯೦ ಮಂದಿಯಷ್ಟು ಜನರು ಬೇಸಾಯ ಅಥವಾ ಅದಕ್ಕೆ ಸಂಬಂಧಿಸಿದ ವೃತ್ತಿಯನ್ನು ಮಾಡಿ ಜೀವನ ನಡಿಸುತ್ತಿರುವರು. ಆದುದರಿಂದ ಬೇಸಾಯವನ್ನು ಮುಖ್ಯ ವೃತ್ತಿಯಾಗಿ ಇಟ್ಟುಕೊಂಡು ಮಕ್ಕಳಿಗೆ ಇದರಲ್ಲಿ ಶಾಸ್ತ್ರೀಯ ತರಬೇತಿಯನ್ನು ಸಾಮಾನ್ಯ ಶಿಕ್ಷಣದೊಂದಿಗೆ ಕೊಡಬಹುದು. ಆದರೆ ಮಕ್ಕಳ ಅಭಿರುಚಿಯು ಒಂದೇ ಇರುವುದಿಲ್ಲ. ಆದುದರಿಂದ ವೃತ್ತಿಯಲ್ಲೂ ಅನುಕೂಲವನ್ನು ನೋಡಿಕೊಂಡು ವೈವಿಧ್ಯತೆಯನ್ನು ಕಲ್ಪಿಸಿಕೊಳ್ಳಬೇಕು. ಉದಾಹರಣೆಗಾಗಿ ಮೀನುಗಾರಿಕೆಯ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಗೆ ಸಂಬಂಧಿಸಿದ ವೃತ್ತಿ, ತೆಂಗಿನ ಮರ ತುಂಬಾ ಬೆಳೆಯುವ ಪ್ರದೇಶಗಳಲ್ಲಿ ಹುರಿಹಗ್ಗದ ಕೆಲಸ ಇತ್ಯಾದಿಗಳನ್ನು ಪರಿಸ್ಥಿತಿ ನೋಡಿಕೊಂಡು ಮುಖ್ಯ ಕಸಬಾಗಿ ಕಲಿಸಬೇಕು. ಎರಡನೆಯ ಕಸಬು ನೂಲುವುದು ನೇಯುವುದು. ನಮಗೆ ಅನ್ನದಂತೆ ಬಟ್ಟೆಯು ಮುಖ್ಯ ಆದುದರಿಂದ ನೂಲುವುದು ನೇಯುವುದನ್ನು ದಿನಕ್ಕೆ ಒಂದು ತಾಸಾದರೂ ಮಾಡಿಸಿದರೆ ಮಕ್ಕಳ ಸ್ವಾವಲಂಬನ ಜೀವನಕ್ಕೂ ನೈತಿಕ ದೈಹಿಕ ಬೆಳವಣಿಗೆಗೂ ತುಂಬಾ ಸಹಕಾರಿಯಾಗಬಹುದು.

ಇನ್ನೊಂದು ಪ್ರಾಮುಖ್ಯ ವಿಷಯವೆಂದರೆ ಪ್ರಾಯಸ್ತರ ಶಿಕ್ಷಣ ಅಥವಾ 'ಸಮಾಜ ಶಿಕ್ಷಣ'(Social Education) ನಮ್ಮ ದೇಶದಲ್ಲಿ ನೂರಕ್ಕೆ ತೊಂಬತ್ತೈದರಿಂದ ಹೆಚ್ಚು ಮಂದಿ ವಯಸ್ಕರು ನಿರಕ್ಷರರು. ಇವರಿಗೆಲ್ಲಾ ಶಿಕ್ಷಣಕೊಡುವುದು ಅತಿ ಅಗತ್ಯ. ಇವರ ಶಿಕ್ಷಣಕ್ರಮವನ್ನು ಇಲ್ಲಿ ವಿವರಿಸುವುದಿಲ್ಲ. ಆದರೆ ಇವರಿಗೆ ಓದುಬರಹಕ್ಕಿಂತ ಹೆಚ್ಚು ಸಮಾಜ ಶಾಸ್ತ್ರ, ರಾಜನೀತಿ, ಪ್ರಚಲಿತ ವಿಚಾರ, ಪ್ರಪಂಚದ ಪ್ರಾಮುಖ್ಯ ವಿಷಯಗಳು, ಧರ್ಮ, ನೀತಿ ಇತ್ಯಾದಿಗಳನ್ನು ಕಲಿಸುವುದು ಅಗತ್ಯ ಮತ್ತು ಅವರಿಗೆ ಇದರಿಂದ ಓದುಬರಹದ ಶಿಕ್ಷಣದಲ್ಲಿ ಬೇಸರವೂ ಬರಲಿಕ್ಕಿಲ್ಲ. ಅಮೇರಿಕದ ಹಳ್ಳಿ ಶಾಲೆಗಳು ಶಾಲಾ ಸಮಯದ ಮೇಲೆ ಗ್ರಾಮದ ಸಾರ್ವಜನಿಕ ಕೂಟ ಕೂಡುವ ಸ್ಥಳವಾಗಿವೆ. ಹಾಗೆಯೇ ನಮ್ಮ ಗ್ರಾಮಶಾಲೆಗಳೂ ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳಾಗಿರಬೇಕು. ಇಲ್ಲಿ ಪ್ರಾಯಪ್ರಬುದ್ಧರಿಗೆ ಅನುಕೂಲ ಸಮಯದಲ್ಲಿ ಶಿಕ್ಷಣ, ಸಭೆ, ಚರ್ಚಾಕೂಟ ನಡೆಯುವಂತೆ ಗ್ರಾಮದ ಶಿಕ್ಷಣ ಸಮಿತಿಯು ಅನುಕೂಲ ಮಾಡಿಕೊಡಬೇಕು. ವಿದ್ಯಾವಂತ ಸ್ತ್ರೀ ಪುರುಷರ ಸಹಾಯವನ್ನು ತೆಗೆದುಕೊಂಡು ಅವರಿಗೆ ಒಂದೇ ರೀತಿಯಲ್ಲಿ ಶಿಕ್ಷಣವನ್ನು ಒದಗಿಸಬೇಕು—ಅಂದರೆ, ಓದುಬರಹ ಲೆಕ್ಕ ಮತ್ತು ಮೇಲೆ ಹೇಳಿದ ವಿಷಯಗಳನ್ನು ಕಲಿಸಬೇಕು.

ಕಡೆಯದಾಗಿ ಈ ಎಲ್ಲಾ ಶಿಕ್ಷಣ ಪ್ರಚಾರಕಾರ್ಯ ಮಾಡಲು ಶಿಕ್ಷಣ ವಿಚಾರವನ್ನು ಚೆನ್ನಾಗಿ ತಿಳಿದವರೂ ತ್ರಿಕರಣಪೂರ್ವಕವಾಗಿ, ಸಮಾಜದ, ಜನಾಂಗದ, ದೇಶದ ಉನ್ನತಿಗಾಗಿ ದುಡಿಯುವ ಆಶೆ ಉಳ್ಳವರೂ, ಮುಖ್ಯವಾಗಿ ನಮ್ಮ ದೇಶದ ಈ ಅನರಕ್ಷರತೆಯ ವೈಶಾಲ್ಯವನ್ನು ನೋಡಿ, ನಾಚಿ, ಮನಮರುಗಿ ಇದನ್ನು ತೊಡೆದುಹಾಕುವ ಸಂಕಲ್ಪವನ್ನು ಮಾಡಿ ಇದಕ್ಕಾಗಿ ತನ್ನ ವೈಯಕ್ತಿಕ ಸುಖ, ಅನುಕೂಲ ಲಾಭ ಇವೊಂದನ್ನು ಲಕ್ಷಿಸದೆ ಹೋರಾಡುವ ನಿಜವಾದ ದೇಶಭಕ್ತರು ಬೇಕು. ಇವೆಲ್ಲಾ ಶೈಕ್ಷಣಿಕ (ಪರೀಕ್ಷಾರ್ಥ) ಪ್ರಯೋಗಗಳನ್ನು (Community Project area) ಸಮಾಜ ಸುಧಾರಕ ಕೇಂದ್ರದಲ್ಲಿ ಮಾಡುವುದರಿಂದ ಅನೇಕ ಪ್ರಯೋಜನಗಳಿವೆ. ಮೊದಲಾಗಿ ಇದಕ್ಕೆ ಬೇಕಾದ ಅಧಿಕಾರಗಳ ಬೆಂಬಲವು ಅಲ್ಲದೆ, ದೇಶೋದ್ಧಾರಕ ಬುದ್ಧಿಯನ್ನು ಅಲ್ಲಿನ ಜನರಲ್ಲಿ ನೆಲೆಗೊಳಿಸುವ ಕೆಲಸವು ಅಲ್ಲಿ ನಿತ್ಯ ನಡಿಯುತ್ತಿರುತ್ತದೆ. ಅಲ್ಲಿನ ಆರ್ಥಿಕ ಸ್ಥಿತಿಯೂ ಈ ಯೋಜನೆಯಿಂದ ಉತ್ತಮವಾದೀತೆಂಬ ಭರವಸೆ ಇದೆ. ಪ್ರಯೋಗಗಳನ್ನು ಮಿತಗೊಳಿಸಿದ ಕೇಂದ್ರದಲ್ಲಿಯೇ ಕೈಗೊಳ್ಳುವುದರಿಂದ ಅನಾವಶ್ಯಕವಾಗುವ ವೆಚ್ಚ ಕಡಿಮೆಯಾಗುವುದಲ್ಲದೆ ಅನೇಕ ಅಮೂಲ್ಯ ಅನುಭವಗಳೂ ದೊರೆತು ಶಿಕ್ಷಣಪ್ರಚಾರಕ್ಕೆ ಮುಂದೆ ತುಂಬಾ ಸಹಾಯವಾಗಬಹುದು. ಆದುದರಿಂದ ನಮ್ಮ ಪ್ರಾಂತ್ಯದ ಮುಖ್ಯವಾಗಿ ನಮ್ಮ ಜಿಲ್ಲೆಯ ಮಂಗಳೂರು ಮತ್ತು ಕಾರ್ಕಳದಲ್ಲಿ ಕೈಗೊಂಡಿರುವ ಸಮಾಜ ಸಂಘಟನಾ ಯೋಜನೆಯ ಅಧಿಕಾರಿಗಳು ಈ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಶಿಕ್ಷಣಪ್ರಚಾರದಲ್ಲೂ ಕಣ್ಣಿಟ್ಟು ತಮ್ಮ ಕರ್ತವ್ಯವನ್ನು ಮಾಡಿ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಲು ಪ್ರಯತ್ನಿಸುವರೆಂದು ಹಾರಯಿಸಬಹುದೆ?

ಕಾಮುನ ಹುಣ್ಣಿಮೆ ಕಣ್ತೆರೆದಾಗ !

ತುಂಬಿ ದೂರಿನ ತಡಿಯ ಬಯಲಂಚಿನಲಿ ರೈಲ
ಕಂಬಿ ಹರಿದಿದೆ ದಕ್ಷಿಣೋತ್ತರಕೆ; ತಗ್ಗಿನಲಿ
ಊರ ಕೊನೆಗೊಂದೆ ಮನೆ, ಎನ್ನಮನೆ; ರೈಲಹಳಿ
ಆಚೀಚೆ ಅಲ್ಲೊಂದು ಇಲ್ಲೊಂದು ಜಾಲಿಮರ—
ಮುಳ್ಳುಗಂಬಳಿ ಹೊದೆದ ತಳವಾರ ರಂದದಲಿ—
ಮೂನದಿಂ ತಲೆ ಎತ್ತಿ ನಿಂತಿಹವು; ಕೊಂಬೆಯಲಿ
ಕಿಲ ಕಿಲಂ, ಕುಳಿ ಕುಟಿರ್ ಗುಟರೆಂದು ಕಿಬ್ಬಕ್ಕಿ—
ಅಣ್ಣ ತಮ್ಮಂದಿರೋ, ಅಕ್ಕ ತಂಗಿಯರೊ, ಮೇಣ್
ದಂಪತಿಗಳೋ, ಅರಿಯೆ,–ಬೆಳ್ದಿಂಗಳಂ ಕುಡಿದು—
ಕಳ್ಳ ಕುಡಿದಂತೆಯೇ? ತೊದಲುತಿವೆ, ಕದಲುತಿವೆ !
    ಶಿವನ ಪಣೆಗಣ್ ಕಾಮುನಂ ಸುಟ್ಟ ದಿನವಿಂದು,
ನೇಸರಡಗುವ ಮೊದಲೆ ತಿಂಗಳುತ್ತರಿಸಿದಂ,
ತಂಗಾಳಿಯಲೆಯಲೆಗೆ ಬಿಳಿಗದಿರ ತೂರಿದಂ;
ಬಾನೆಲ್ಲ, ಬುವಿಯೆಲ್ಲ ತಿಂಗಳುದಿಸಿದ ಹಗಲ
ಹಾಗೆ ಸುಸ್ಪಷ್ಟ ರೇಖಾಚಿತ್ರವಾಗಿತ್ತು !
ರೈಲ ಕಂಬಿಯ ಕಾಲದಾರಿಯಲಿ ಬೇವಿನಡಿ
ಕುಳಿತಿದ್ದೆ ನಿಶ್ಚಲಂ, ನೀರವಂ; ಮನವೆಲ್ಲ
ಮೊನೆಯಾಗಿ ದೂರ ದೂರಾಂತರದ ಗಗನಮಂ
ಕೊರೆ ಕೊರೆದು, ಹೊಳೆವೊಂದು ತಾರೆಯಲಿ ನಟ್ಟಿತ್ತು!
ಭುಗಿ ಭುಗಿಲ್ ಭುಗಿಲೆಂದು ಕರ್ಬೊಗೆಯ ಕಾರುತ್ತ
ಕೆಂಗಿಡಿಯ ಬೀರುತ್ತ ಚೀರುತ್ತ ಹಾರಿತ್ತು
ಧಾರವಾಡದ ದಿಕ್ಕಿನಿಂದೊಂದು ಬಂಡಿ.
ಊರ ಕಾವಲ ಗಂಟೆ ಒಂದೊಂದೆ ಎಣಿಸುತ್ತ
ಹತ್ತು ಹೊಡೆದಿತ್ತು, ತುಂಬಿದೆನ್ನಯ ಮನೆಯು
ಕೈ ಮಾಡಿ ಕರೆದಿತ್ತು.........!

—ಗಣಪತಿರಾವ್ ಪಾಂಡೇಶ್ವರ್.

ಸಾಹಿತ್ಯದ ದೃಷ್ಟಿ—ಸೃಷ್ಟಿ

(ಒಂದು ವಿವೇಚನೆ)



ಲೇಖಕರು:
ಜಿ. ಆರ್. ಪಾಂಡೇಶ್ವರ್.

(೧) ಸಾಹಿತ್ಯ ದೃಷ್ಟಿ (Literary view) ಮತ್ತು ಶಾಸ್ತ್ರ ದೃಷ್ಟಿ(Scientific view)ಎಂದು ಮಾನವ ವಿಚಾರ ಪ್ರಪಂಚದಲ್ಲಿ ಮುಖ್ಯವಾದ ಎರಡು ದೃಷ್ಟಿಗಳು ಕಂಡುಬರುತ್ತಿವೆ. ಸಾಹಿತ್ಯವೆಂದರೆ, ಹಿತಸಹಿತವಾದದ್ದು; ಶಾಸ್ತ್ರವೆಂದರೆ, ಅಹಿತದಿಂದ ರಕ್ಷಿಸುವುದು. ಹೀಗೆ ಅರ್ಥದ ಮೂಲದಲ್ಲಿ ಎರಡೂ ಪದಗಳು ಒಂದೇ ತಾತ್ಪರ್ಯ ಉಳ್ಳವುಗಳಾಗಿವೆ. ಜನನ-ಮರಣ, ಪಾಪ-ಪುಣ್ಯ, ನಾಮರೂಪಾದಿಗಳಿಲ್ಲದ ಅಖಂಡಬ್ರಹ್ಮಕ್ಕೆ ಶಾಸ್ತ್ರ-ಸಾಹಿತ್ಯವೆಂಬುದಾವುದೂ ಇಲ್ಲ; ಆದ್ದರಿಂದ ಅದಕ್ಕೆ ಹಿತಾಹಿತಗಳ ಮಾತೇ ಅನ್ವಯಿಸುವುದಿಲ್ಲ. ಆದರೆ, ಜನನಮರಣಾದಿ, ನಾಮರೂಪ ವಿವಿಧತೆಗಳ ಪರಿಭ್ರಮಣದಲ್ಲಿರುವ ಮಾನವಪ್ರಪಂಚಕ್ಕೆ ಪಾಪ-ಪುಣ್ಯಗಳೂ, ಹಿತಾಹಿತಗಳೂ ಉಂಟು. ಆದ್ದರಿಂದ, ಇಲ್ಲಿ ಶಾಸ್ತ್ರ-ಸಾಹಿತ್ಯಗಳ ದ್ವಿವಿಧ ದೃಷ್ಟಿಯು ಸರ್ವಸೃಷ್ಟಿಯನ್ನು ಅಳೆಯುತ್ತಿದೆ, ತಳೆಯುತ್ತಿದೆ! ಈ ದೃಷ್ಟಿಯಲ್ಲಿಯೂ, ಸೃಷ್ಟಿಯಲ್ಲಿಯೂ ದಿಕ್ಕಾಲಗಳ ಪರಿಮಿತ ರಸಲೀಲೆಯು ಅಪರಿಹಾರ್ಯವಾದ ಅನುಭವ ಕಥನಗಳಾಗುತ್ತಿವೆ. ಈ ಭೂಗೋಲದ ಸುತ್ತಳತೆ ೨೫ ಸಾವಿರ ಮೈಲು, ಎಂದು ಹೇಳಿದರೆ, ಅದೊಂದು ಶಾಸ್ತ್ರ ದೃಷ್ಟಿಯ ಸೃಷ್ಟಿಯಾಗುವುದು; ಭೂಮಾತೆಯ ಮೇಖಲೆ ೨೫ ಸಾವಿರ ಮೈಲುದ್ದವಾಗಿದೆ — ಎಂದುಬಿಟ್ಟರೆ, ಭೂಮಿಗೆ ತಾಯಿಯ ರೂಪವನ್ನು ಕೊಟ್ಟು, ಉಡುಗೆಯ ಅಲಂಕಾರವನ್ನಿಟ್ಟು ಬಣ್ಣಿಸಿದ ಸಾಹಿತ್ಯ ದೃಷ್ಟಿಯ ಸೃಷ್ಟಿಯಾಗುವುದು. ಈ ಎರಡೂ ದೃಷ್ಟಿಗಳ ಸೃಷ್ಟಿಯು ಸತ್ಯವಾಗಿದೆ. ಭೂಗರ್ಭದಿಂದಲೇ ಬೆಳ್ಳಿ ಬಂಗಾರವೇ ಮೊದಲಾದ ಲೋಹಗಳೂ, ರತ್ನಗಳೂ, ಸಸ್ಯಾದಿಗಳೂ ಉತ್ಪನ್ನವಾಗಿರುವುದರಿಂದ, ಮಾನವನ ಭೌತಿಕ ನಾಮರೂಪ ವಿವಿಧತೆಯ ಸೃಷ್ಟಿ ಪ್ರಗತಿಗಳಿಗೆಲ್ಲ ಭೂಮಿಯೇ ತಾಯಿ. ಹಾಗೆಯೇ, ಭೂಖಂಡದ ಸುತ್ತಳತೆಯನ್ನು ಅಳೆದು ನೋಡಿರುವುದರಿಂದ, ಅದು ೨೫ ಸಾವಿರ ಮೈಲುದ್ದವೆಂಬುದೂ ನಿಜ. ಆದ್ದರಿಂದ, ಶಾಸ್ತ್ರ-ಸಾಹಿತ್ಯಗಳೆಂಬ ಗಂಗಾ ಯಮುನಾ ಪ್ರವಾಹಗಳೆರಡೂ ಒಂದೇ ಹಿಮಾದ್ರಿಯಲ್ಲೇ ಉಗಮಗೊಂಡು, ಒಂದೇ ಸಮುದ್ರದಲ್ಲಿ ಸಂಗಮ ಹೊಂದುವುವು.

(೨) ಈ ಎರಡೂ (ಶಾಸ್ತ್ರ-ಸಾಹಿತ್ಯ) ಪದಗಳು ನಿರ್ದೇಶಿಸುವ ಹಿತವು ವಿಚಾರಣೀಯವಾಗಿದೆ. ಹಿತವೆಂದರೆ, ಸುಖ, ಶುಭ, ಸುಂದರತೆ. ಇದರಲ್ಲಿ ಆಧಿಭೌತಿಕ ಮತ್ತು ಆಧ್ಯಾತ್ಮಿಕ ಎಂಬ ಇಬ್ಬಗೆ ಉಂಟು. ಒಂದು, ದೃಶ್ಯವಾದ ಭೌತವಾಗಿದ್ದರೆ, ಮತ್ತೊಂದು ಅದೃಶ್ಯವಾದ ಆಧ್ಯಾತ್ಮವಾಗಿದೆ. ವ್ಯಷ್ಟಿ ದೃಷ್ಟಿಯಿಂದ ನೋಡಿದಲ್ಲಿ, ಒಂದು **ದೇಹರೂಪ**ವಾಗಿದ್ದರೆ, ಮತ್ತೊಂದು **ಜೀವಭಾವ**ವಾಗಿರುವುದು. ಇವೆರಡೂ ಏಕತ್ರ ಸಮ್ಮಿಲಿತವಾಗಿ, ದೃಶ್ಯಾದೃಶ್ಯಗಳಾದ ದೇಹಾತ್ಮಗಳ ಮತ್ತು ತದಧೀನಗಳಾದ ಪ್ರಪಂಚ-ಪರಮಾರ್ಥಗಳ ಹಿತ (ಸುಖ, ಶುಭ, ಸುಂದರತೆ)ವನ್ನು ಸಾಧಿಸಿ ಕೊಡುವಂತಿರಬೇಕು. ಹಾಗೆ ಇಬ್ಬಗೆಯ ಹಿತವನ್ನು ಪಡೆದಿರುವ ಮಾನವಜೀವಿತವು ಒಂದು ಆದರ್ಶ ಜೀವಿತ. ಆರೋಗ್ಯಭರಿತವಾದ ಸುದೃಢ ದೇಹದಲ್ಲಿ ಆನಂದಪೂರಿತವಾದ ಮನಸ್ಸು—ಸ್ವಚ್ಛವಾದ ಗಾಜಿನ ಕೊಳವೆಯಲ್ಲಿ ವಿದ್ಯುದ್ದೀಪವು ಪ್ರಕಾಶಿಸುವಂತೆ— ಆವಾಸಮಾಡಿಕೊಂಡಿರುವ ಜೀವಿತವೇ ಆದರ್ಶಜೀವನ. ಎಲ್ಲ ಮಾನವರನ್ನೂ ಅಂತಹ ಆದರ್ಶಜೀವನ ಪಡೆವಂತೆ ನಡೆಸಿಕೊಂಡು ಹೋಗಬೇಕೆಂಬುದೇ ಶಾಸ್ತ್ರ-ಸಾಹಿತ್ಯಗಳ ದೃಷ್ಟಿಯಾಗಿದೆ. ಆ ದೃಷ್ಟಿಯು ಕಾಣುವ ಸೃಷ್ಟಿಯು ಕೂಡಾ ಅದೇ ಬಗೆಯ, ಹಿತಕರವಾದ, ಸುಖಾನಂದಪ್ರದವಾದ, ಆದರ್ಶಜೀವನದ ಮಹಾಸೌಂದರ್ಯ.

(೩) ದೃಶ್ಯದೇಹದ ಹಿತವನ್ನೊದಗಿಸಿ ಕೊಡುವ ಸಾಹಿತ್ಯವು ದೃಶ್ಯರೂಪ ವಸ್ತುಗಳಾದ ಆಸ್ತಿಪಾಸ್ತಿ, ಉಡುಗೆ ತೊಡುಗೆ, ಹೆಂಡತಿ ಮಕ್ಕಳು, ಆಹಾರವಿಹಾರಗಳ ಮೊತ್ತವಾಗಿವೆ. ಧನಿಕನೊಬ್ಬನ ವಿಶಾಲವಾದ ಸ್ವಚ್ಛ ಮನೆ,

ಉಂಡುಟ್ಟು ನಲಿವ ಸಂಸಾರ ಧನಕನಕ ವಸ್ತುವಾಹನಗಳ ಸಮುದಾಯವನ್ನು ಕಂಡು "ಇವರಲ್ಲಿ ಸರ್ವಸಾಹಿತ್ಯವೂ ಉಂಟು" ಎನ್ನುತ್ತೇವೆ; ಅಂತಹ ಹಿತಾನುಕೂಲತೆಗಳಿಲ್ಲದ ದರಿದ್ರನ ಮನೆಯನ್ನು ಕಂಡು "ಅಯ್ಯೋ ಈತನಲ್ಲಿ ಯಾವ ಸಾಹಿತ್ಯವೂ ಇಲ್ಲವಲ್ಲಾ!" ಎಂದು ನಿಟ್ಟುಸಿರು ಬಿಡುತ್ತೇವೆ. ದೇಹದ ಹಿತವನ್ನೊದಗಿಸಿ ಕೊಡುವ ದೃಶ್ಯರೂಪ ವಸ್ತುಗಳಲ್ಲಿ ಚಿನ್ನ ಬೆಳ್ಳಿಯ ಆಭರಣಾಲಂಕಾರಗಳೂ, ಭಕ್ಷ್ಯ ಭೋಜ್ಯಗಳ ಷಡ್ರಸಗಳೂ ಇರುವಂತೆ, ಅದೃಶ್ಯವಾದ ಜೀವಭಾವದ ಹಿತವನ್ನೊದಗಿಸಿ ಕೊಡುವ ಅದೃಶ್ಯವಾದ ಶಾಬ್ದಿಕ ಸಾಹಿತ್ಯದಲ್ಲಿ ಶಬ್ದಾರ್ಥಾಲಂಕಾರಗಳೂ, ಶೃಂಗಾರ ವೀರ ಹಾಸ್ಯಾದಿ ನವರಸಗಳೂ ಉಂಟು. ಶಾಸ್ತ್ರವು ಹಿತ ಸಾಧಿಸಿ ಕೊಡುವ ಉದ್ದೇಶದಿಂದ ಶಾಸ್ತ್ರಕರ್ಮಗಳನ್ನುಳ್ಳಂತೆ, ಸಾಹಿತ್ಯವು ಕೂಡಾ ಸಾಹಿತ್ಯ ಗ್ರಂಥಗಳನ್ನುಳ್ಳುದಾಗಿದೆ. ಶಾಸ್ತ್ರದಲ್ಲಿ ಭೌತ, ರಸಾಯನ ಗಣಿತ ಜ್ಯೋತಿಷ್ಯಾದಿ ವಿವಿಧ ವಿಭಾಗಗಳಿರುವಂತೆ ಸಾಹಿತ್ಯದಲ್ಲಿ ಗದ್ಯಪದ್ಯ ವಿಭಾಗಗಳೂ ಅದರಲ್ಲಿ ಮತ್ತೆ, ಪುರಾಣೇತಿಹಾಸ ಕಾವ್ಯ ನಾಟಕವೆಂಬ ಬಗೆಬಗೆಯ ವಿಭಾಗಗಳುಂಟು. ಇವುಗಳಲ್ಲಿ, ಪ್ರತಿಯೊಂದು ವಿಭಾಗದಲ್ಲಿಯೂ ಪ್ರಭೇದಗಳ ಅಂತರ್ವಿಭಾಗಗಳೆಷ್ಟೋ ಉಂಟು. ಇಂದಿನ ದಿನಗಳಲ್ಲಿ, ಇಂದಿನವರ ಸತ್ವಕ್ಕನುಗುಣವಾಗಿ, ಹಾಗೂ ವ್ಯವಹಾರ ಪ್ರಪಂಚದ ಸಂಪರ್ಕ ಮತ್ತು ವಿಸ್ತಾರಕ್ಕುಚಿತವಾಗಿ ಕೆಲಕೆಲವು ಸಾಹಿತ್ಯ ಭಾಗಗಳು ಮಾತ್ರವೇ ವಿಪುಲವಾಗಿ ಬೆಳೆದಿವೆ ಎನ್ನಬಹುದು. ವಿಜ್ಞಾನಾದಿ ಶಾಸ್ತ್ರ ಸೃಷ್ಟಿಯು ವಸ್ತುಗಳನ್ನು ಮಾನವನು ವಿನಾಶಕರವಾದ ಯುದ್ಧಾದಿಗಳಿಗೆ ಪ್ರಯೋಗಿಸುವಂತೆ, ಸಾಹಿತ್ಯ ಸೃಷ್ಟಿಯು ಕತೆ, ಕಾದಂಬರಿ, ಕಾವ್ಯ, ನಾಟಕಗಳನ್ನು ಮಾನವತೆಯ ಐಕ್ಯವನ್ನು ಮುರಿಯುವುದಕ್ಕೂ, ರಾಗದ್ವೇಷಗಳನ್ನು ಹೆಚ್ಚಿಸಲಿಕ್ಕೂ, ವಿಷಯ ಭೋಗಾಭಿಲಾಷೆಯನ್ನು ಹಬ್ಬಿಸಲಿಕ್ಕೂ ಉಪಯೋಗಿಸಿಕೊಳ್ಳಬಹುದಾಗಿದೆ. ಧರ್ಮದ ಹೆಸರಿನಲ್ಲಿ ಹಾಗೂ ಕಲೆಯ ಹೆಸರಿನಲ್ಲಿ ರಚಿತವಾಗುತ್ತಿರುವ ಅನೇಕ ಗ್ರಂಥಗಳು ಸಂಕುಚಿತ ಜಾತಿ—ಧರ್ಮಾಂಧತೆಗಳನ್ನೂ, ಅಶ್ಲೀಲತೆಯನ್ನೂ ಉಂಟುಮಾಡುತ್ತಿರುವುದನ್ನು ಲಕ್ಷಿಸಬೇಕು. ಇಂತಹ ಪ್ರಯೋಜನಗಳು ಶಾಸ್ತ್ರ ಮತ್ತು ಸಾಹಿತ್ಯದ **ಮೂಲಪ್ರಯೋಜನ**ಗಳಿಗೆ ತೀರ ವಿರುದ್ಧವಾದುವೆಂಬಲ್ಲಿ ಸಂದೇಹವಿಲ್ಲ. "ಯಥಾವೇದ ಶಾಸ್ತ್ರ ಪುರಾಣಾದೇ: ಹಿತಪ್ರಾಪ್ತಿಃ, ಅಹಿತಾನ್ನಿವೃತ್ತಿಃ, ಚ ತಥಾ ತತ್ಸಮಾತ್ ಕಾವ್ಯಾದಪಿ, ಇಯಾನ್ ವಿಶೇಷಃ." ಎಂಬುದಾಗಿಯೂ, "ಕಾವ್ಯಾತ್ ಕರ್ತವ್ಯತಾಧೀಃ ಸರಸಾ, ಅನ್ಯತ್ರ ನತಥಾ" ಎಂಬುದಾಗಿಯೂ ಪ್ರತಾಪ ರುದ್ರೀಯದಲ್ಲಿ, ಸಾಹಿತ್ಯಕ್ಕೆ ಶಾಸ್ತ್ರಕ್ಕಿಂತಲೂ ಒಂದು ತೂಕ ಹೆಚ್ಚಿನ ಪ್ರಯೋಜನ ಮಹತಿಯನ್ನು ಕೊಡಲಾಗಿದೆ. ಈ ಕಾರಣದಿಂದಲೇ ಸರ್ವಶಾಬ್ದಿಕ ಸಾಹಿತ್ಯವನ್ನೂ ತ್ರಿಸಮ್ಮಿತಗಳಾಗಿ ವಿಂಗಡಿಸಿದಲ್ಲಿ, ಕಾವ್ಯ ನಾಟಕಾದಿ ಸಾಹಿತ್ಯ ವಿಭಾಗಕ್ಕೆ ಕಾಂತಾ ಸಮ್ಮಿತವೆಂಬ ಹೆಸರಿಟ್ಟು, "ಧರ್ಮಾದಿ ಸಾಧನೋಪಾಯಃ ಸುಕುಮಾರಕ್ರಮೋದಿತಃ ಕಾವ್ಯ ಬಂಧೋಭಿಜಾತಾನಾಂ ಹೃದಯಾಹ್ಲಾದಕಾರಕಃ"—ಧರ್ಮಾರ್ಥಕಾಮಗಳನ್ನು ಸುಕುಮಾರ ಕ್ರಮ" ದಿಂದ ಒದಗಿಸಿ ಕೊಡುವುದೇ ಅದರ ಪ್ರಯೋಜನ ವೈಶಿಷ್ಟ್ಯವೆಂದು ಸಾರಲಾಗಿದೆ.

(೪) ಹೀಗೆ, ಸಾಹಿತ್ಯ ದೃಷ್ಟಿಯೂ ಸೃಷ್ಟಿಯೂ ಎರಡೂ ಹಿತಪ್ರಯೋಜನಕಾರಿಗಳಾಗಿರುವುದರಿಂದಲೇ ಸಾಹಿತ್ಯಿಕರನ್ನು ಸಾಮಾನ್ಯ ಜನಕ್ಕಿಂತ ಹೆಚ್ಚಿನವರೆಂದು ತಿಳಿಯಲಾಗುತ್ತಿದೆ; ಹಾಗೂ, ಅಂತಹ ಸಾಹಿತ್ಯ ಸೃಷ್ಟಿಯು ಜೀವಂತ ಸಂಸ್ಕೃತಿಯ ಲಕ್ಷಣವೆಂದು ಬಗೆಯಲಾಗುತ್ತಿದೆ.

(೫) "Be ye glad or be ye sad
Come and list my simple song;
For poets' dreams though strange it seems,
May help the weary heart along."

ಅಂದರೆ, "ಸುಖವೇ ಆಗಲೀ, ಅಸುಖ (ದುಃಖ)ವೇ ಆಗಲಿ, ನನ್ನೀ ಹಾಡನ್ನಷ್ಟು ಕೇಳಿರಿ; ಕವಿಯ ಕನಸುಗಳು ವಿಚಿತ್ರಗಳಾಗಿ ಕಂಡರೂ ಹೃದಯದ ಆಯಾಸವನ್ನವು ಕಳೆಯಬಲ್ಲುವು." ಎಂದೊಬ್ಬ ಆಂಗ್ಲ ಕವಿ ಅಂದಿರುವ ಮಾತು ಈ ಸಾಹಿತ್ಯದ ದೃಷ್ಟಿ ಮತ್ತು ಸೃಷ್ಟಿಯನ್ನು ಸರಿಯಾಗಿ ಸೂಚಿಸುವಂತಿದೆ. ಇಲ್ಲಿ ನಿರ್ದಿಷ್ಟವಾದ ಸುಖ ಮತ್ತು ದುಃಖವೆಂಬುದು ಒಂದು ಬಗೆಯ ಚಿತ್ತ ವೃತ್ತಿ. ಈ ವೃತ್ತಿಯನ್ನು ಸಾಕ್ಷಾತ್ತಾಗಿ ಅನುಭವಿಸುವುದೇ **ರಸಜ್ಞತೆ**. ಇದರಲ್ಲಿಯೇ ಸಾಹಿತ್ಯದ ನವರಸಗಳೂ ಅಡಗಿವೆ. ಈ ರಸೋತ್ಪಾದನ ಮಾಡುವಂತೆ ಕವಿಬಗೆ ಬಗೆಯ ವಿಚಿತ್ರ ಸೃಷ್ಟಿಗಳನ್ನುಂಟು ಮಾಡುತ್ತಾನೆ. ಅವುಗಳನ್ನು ಆತನು ಕಂಡುಕೊಂಡ ದೃಷ್ಟಿಯೇ ಕವಿದೃಷ್ಟಿ. ಭಾವಾವೇಶದ ಅಂಜನವನ್ನು ಹಚ್ಚಿಕೊಂಡ ಕವಿಯ ಕಣ್ಣು ಕೂತಲ್ಲಿಂದಲೇ ಸರ್ವವಿಶ್ವವನ್ನೂ ಸುತ್ತಾಡಿ ಬರುತ್ತದೆ. ಆದ್ದರಿಂದಲೇ "ರವಿಕಾಣದುದನ್ನು ಕವಿಕಾಂಬ" ಎಂದ ಗಾದೆ ಉಂಟಾಗಿದೆಯಷ್ಟೆ! ಆತನು ಪರೇಂಗಿತಜ್ಞನಾಗಿರುವುದರಿಂದ ಮಾನವಲೋಕದ ಸರ್ವ ಜೀವರುಗಳ ಸರ್ವಭಾವಗಳನ್ನೂ ಅರಿಯಬಲ್ಲನು. ಕಾಮುಕ ಕೀಚಕನನ್ನೂ, ಪರದಾರಾಪಹಾರಿ ರಾವಣನನ್ನೂ ಚಿತ್ರಿಸುವಲ್ಲಿ ಆತನು "**ಪರಕಾಯ ಪ್ರವೇಶ**" ಮಾಡಿದವನಂತೆ. ತಾನೇ ಕೀಚಕನೋ ರಾವಣನೋ ಎಂಬಂತೆ ಅವರ ವೃತ್ತಿವ್ಯವಹಾರಗಳನ್ನು ವಿವರ ವಿವರವಾಗಿ ಬಣ್ಣಿಸ ಬಲ್ಲನು. ಹೀಗೆಯೇ ಕ್ರೌರ್ಯವನ್ನೂ, ಹಾಸ್ಯವನ್ನೂ, ಆತನು ಹೃದಯಂಗಮವಾಗಿ ಚಿತ್ರಿಸಬಲ್ಲನು. ಆದರೂ ಆತನು ತನ್ನ 'ಸ್ಥಾಯಿ'ಯನ್ನು

ಕಳೆದುಕೊಳ್ಳುವುದಿಲ್ಲ. ಆಯಾ ಪಾತ್ರೇಂಗಿತವನ್ನರಿಯುವ ವರೆಗೆ ಆತನು 'ಸ್ಥಾಯಿ'ಯ ಪರಿಸರದಲ್ಲಿ, ವ್ಯಭಿಚಾರಿ'ಸುವನಷ್ಟೆ. ಆತನ ಸ್ಥಾಯಿಯು ಪಂಪನೆಂದಂತೆ "ಪ್ರಸನ್ನ ಗಂಭೀರ ವಚನ ರಚನ ಚತುರತೆ"ಯ ಅನುಪಮ ಕಾವ್ಯ ಪ್ರತಿಭೆಯಾಗಿದೆ. ದುರ್ಭಾವಗಳನ್ನೂ, ದುರ್ವ್ಯಕ್ತಿಗಳನ್ನೂ ಹಾದಿಗೆ ತಂದು, ಹಿತವನ್ನೊದಗಿಸಿಕೊಡುವುದೇ ಕವಿಯ 'ಸಾ—ಹಿತ್ಯ'ವಾಗಿರುವುದರಿಂದ, ಆ ಕಾರ್ಯನಿರ್ವಹಣದಲ್ಲಿ ಆತನು ಸಂದರ್ಭಕ್ಕನುಸಾರವಾಗಿ ಶೃಂಗಾರ, ಕರುಣ, ಶಾಂತ, ರೌದ್ರ, ಹಾಸ್ಯ, ವೀರ, ಅದ್ಭುತ, ಭೀಭತ್ಸವೇ ಮೊದಲಾದ ಒಂಭತ್ತೂ ರಸಗಳೆಂಬ ಸಲಕರಣೆ (Instruments)ಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಸಾಹಿತ್ಯದ ದೃಷ್ಟಿಯೂ, ತಜ್ಜನ್ಯವಾದ ಸೃಷ್ಟಿಯೂ, ಅಹಿತ, ಅಸುಖ ಅಶುಭ, ಅಸುಂದರಗಳ ಆ ಭಾಸಗಳನ್ನೆತ್ತಿ ತೋರಿ, ಅವುಗಳಿಂದ ಸಮಾಜವನ್ನು ಬಿಡುಗಡೆಮಾಡಿ, ಸುಖಾನಂದದ ಸಾಮ್ರಾಜ್ಯಕ್ಕೆ ಒಯ್ಯುವುದೇ ಆಗಿದೆ. ಆದ್ದರಿಂದ, ಈ ಕಾರ್ಯದಲ್ಲಿ ಸಾಹಿತ್ಯದ ದೃಷ್ಟಿ—ಸೃಷ್ಟಿಗಳು ಶಾಸ್ತ್ರದವುಗಳಿಗಿಂತ ಹೆಚ್ಚು ವ್ಯಾಪಕವೂ, ಉಪಯುಕ್ತವೂ ಆಗಿವೆ.

(೬) ಸಾಹಿತ್ಯದ ದೃಷ್ಟಿಯು(ಉದ್ದೇಶ)ಸತ್ಯದ ದೃಷ್ಟಿಯಂತೆ, "ಸರ್ವ ಜೀವಜಾತಗಳಿಗೂ ಲೇಸನೇ ಬಯಸುವ" ತ್ರಿಕಾಲಾಬಾಧಿತವಾದ ದೃಷ್ಟಿ ಎನ್ನಬಹುದು. ಆದ್ದರಿಂದ, ಹಿಂದಿನ ಕಾಲದ ಸಾಹಿತಿಗಳ ದೃಷ್ಟಿಗೂ ಇಂದಿನವರ ದೃಷ್ಟಿಗೂ ಭೇದವಿರುವುದಿಲ್ಲ. ಆದರೆ, ಆ ದೃಷ್ಟಿಯು ಭೇದಿಸಿಕೊಂಡು ಹೋಗುವ ದೇಶಕಾಲ ಪರಿಸ್ಥಿತಿಗಳಲ್ಲಿ ಮಾತ್ರ ಕೆಲವೊಂದು ಭೇದ ಉಂಟಾಗಿದೆ. ನಮ್ಮ ಭಾರತದ ಮಟ್ಟಿಗೆ ಹೇಳುವುದಾದರೆ, ಹಿಂದಿನ ಮಹಾಕವಿಗಳ ಕಾಲದಲ್ಲಿ ಭಾರತದ ಸಮಾಜ ವ್ಯವಸ್ಥೆಯು ವರ್ಣ ಮತ್ತು ಆಶ್ರಮಗಳ ಚೌಕಟ್ಟಿನೊಳಗೇ ಪರಿಮಿತವಾಗಿದ್ದಿತು. ಹಾಗೂ, ಸ್ಮೃತ್ಯುಕ್ತವಾದ ವರ್ಣ ಮತ್ತು ಆಶ್ರಮೋಚಿತವಾದ ಆಹಾರವಿಹಾರಗಳ ಆಚಾರಗಳ ಹಿಡಿತವು ಬಿಗಿಯಾಗಿದ್ದಿತು. ಅದರ ಪರಿಣಾಮವಾಗಿ, ಪಾಪಪುಣ್ಯ ಭೀತಿಯೂ, ಅ-ನ್ಯಾಯ ಮಾರ್ಗಗಳಿಂದ ಸಂಪದಧಿಕಾರಗಳನ್ನು ಗಳಿಸಕೂಡದೆಂಬ ಶುಚಿತ್ವ ವ್ರತವೂ ಸುಸಂಸ್ಕೃತರೆಂಬವರಲ್ಲಿ ನೆಲೆಗೊಂಡಿದ್ದುವು. ಅದರ ಫಲವಾಗಿಯೇ ಎಂಬಂತೆ, ಎಲ್ಲರೂ ದೀರ್ಘಾಯುಷಿಗಳಾಗಿಯೂ, ನಿರ್ಮತ್ಸರಿಗಳಾಗಿಯೂ, ಲೌಕಿಕ ಸುಖಾನಂದ ಸಮೃದ್ಧಿಯುಳ್ಳವರಾಗಿಯೂ ಬಾಳುವಂತಾಗಿದ್ದಿತು. ಈಗಿನ ಯಂತ್ರೋಪಕರಣಗಳ ಅತಿವರ್ತನವು ಇದ್ದಿಲ್ಲವಾದ್ದರಿಂದ, ಭಂಡವಳಶಾಹಿ, ಮಜೂರ ಸಂಘ, ಮುಂತಾದ ಸಾಮಾಜಿಕ ಆರ್ಥಿಕ ಅತಿ ವಿಷಮತೆಗಳೂ, ತಜ್ಜನ್ಯಗಳಾದ ಘರ್ಷಣೆಗಳೂ ಆಗ ಇದ್ದಿಲ್ಲ. ಆದ್ದರಿಂದ ಅಂದಿನ ಸಾಹಿತ್ಯ ಕೃತಿಗಳಲ್ಲಿ ಪ್ರಣಯ ದಾಂಪತ್ಯಗಳಿಗೆ ಸಂಬಂಧಿಸಿದ ಸಾತ್ವಿಕ ಶೃಂಗಾರ, ರಣರಂಗದ ನಾಯಕ-ಪ್ರತಿನಾಯಕರ ಯುದ್ಧಗಳ ವೀರ, ನಾಗಾನಂದದ ಶಾಂತ-ರೌದ್ರ ಇವುಗಳ ಚಿತ್ರಣಗಳೇ ಎದ್ದು ಕಾಣುವಂತಾಗಿದೆ. ಬ್ರಾಹ್ಮಣ-ಕ್ಷತ್ರಿಯ ವಿವಾಹ, ಕ್ಷಾತ್ರತೇಜ-ಬ್ರಾಹ್ಮತೇಜಗಳೊಳಗಣ ಸ್ಪರ್ಧೆ, (ವಸಿಷ್ಠ-ವಿಶ್ವಾಮಿತ್ರ) ಇವುಗಳನ್ನೇ ಕಥಾವಸ್ತುಗಳಾಗಿಟ್ಟುಕೊಂಡದ್ದೂ ಹಲವುಂಟು. ಅವುಗಳನ್ನು ಕೂಡಾ ಸ್ಮೃತ್ಯುಕ್ತ ಧರ್ಮವಿರೋಧಗಳೆಂದು ಚಿತ್ರಿಸಲಾಗಿದ್ದಿತಾದರೂ, ಸಾಮಾಜಿಕರಲ್ಲಿ, (ಅಪವಾದ ರೂಪವಾಗಿ ಸಂಭವಿಸಿದ) ಆ ಘಟನೆಗಳ ಬಗೆಗೆ—ಸಹಾನುಭೂತಿಯುಂಟಾಗುವಂತೆ ನೋಡಿಕೊಳ್ಳಲಾಗಿದ್ದಿತು. ಈಗಿನಂತಹ ಅತಿ ವಿಷಮತೆಯ, ಅತಿ ಭೌತಿಕತೆಯ ವಿಪ್ಲವ ಸ್ಥಿತಿ ಆಗ ಇರುತ್ತಿದ್ದರೆ, ಸರ್ವಲೋಕ ಹಿತೇಚ್ಛುಗಳಾಗಿದ್ದ ಅಂದಿನ ಸಾಹಿತಿಗಳು, ಅವುಗಳನ್ನು ಕಟುವಾಗಿ ಟೀಕಿಸುವ, ಮತ್ತು ವಿಡಂಬಿಸುವ ಬಗೆಬಗೆಯ ಸಾಮಾಜಿಕ ನಾಟಕ ಕಾವ್ಯ ಪ್ರಬಂಧಗಳನ್ನು ರಚಿಸದೇ ಬಿಡುತ್ತಿದ್ದಿಲ್ಲವೆನ್ನಬಹುದು.

(೭) ಶಾಸ್ತ್ರ ದೃಷ್ಟಿಯು ಮಸುಕಾಗಿರುವ ಇಂದಿನ ಕಾಲದಲ್ಲಿ ಸಾಹಿತ್ಯ ದೃಷ್ಟಿಯು **ಶಾಸ್ತ್ರ ದೃಷ್ಟಿಯ ಶಕ್ತಿಯನ್ನೂ ಅಳವಡಿಸಿಕೊಂಡು** ಸೃಷ್ಟಿಮಾಡಬೇಕಾಗಿದೆ—ಒಂದು ಎತ್ತಿನ ಶಕ್ತಿ ಕುಗ್ಗಿದಾಗ ಮತ್ತೊಂದು ಎತ್ತು ಅದರ ಭಾರವನ್ನೂ ಆತುಕೊಂಡು ಗಾಡಿಯನ್ನು ಮುಂದೊಯ್ಯುವಂತೆ. ಆದ್ದರಿಂದ ಇಂದಿನ ಸಾಹಿತ್ಯದೃಷ್ಟಿಯೂ. ಸೃಷ್ಟಿಯೂ ಹೆಚ್ಚಿನ ಹೊಣೆ ಉಳ್ಳುದಾಗಿವೆ. ಇದರಲ್ಲಿ ಇಂದಿನ ಸಮಾಜ ಜೀವನದ ಅತಿವರ್ತನೆಗಳೂ, ಯಂತ್ರೋಪಕರಣ ಪ್ರಗತಿಯ 'ಕಾರಖಾನೆ'ಗಳೂ 'ಗಿರಣಿ'ಗಳೂ ಅವುಗಳೊಳಗಿನ ಮಾನವ 'ವಸ್ತು'ಗಳೂ, ಅವುಗಳ ನೂರಾರು ಸುಖದುಃಖಗಳ, ರಾಗದ್ವೇಷಗಳ ಒಳತೋಟಿಗಳೂ ಅವಶ್ಯವಾಗಿ ಚಿತ್ರಿತವಾಗಬೇಕಾಗಿದೆ. ಅಂತಹ ಚಿತ್ರಣಗಳ 'ಸುಕುಮಾರ ಕ್ರಮ'ದಿಂದ ಅತಿವರ್ತನವನ್ನು ಮಿತಿಗೆ ತಂದು, ಹಿತವನ್ನುಂಟುಮಾಡಿಕೊಡುವುದೇ ಸಾ-ಹಿತ್ಯದ ದೃಷ್ಟಿಯಾಗುವುದು.

(೮) ಸಾ-ಹಿತ್ಯದ ಸೃಷ್ಟಿಯಲ್ಲಿ ಹೇಗೆ ಹೊಸ ಸಮಸ್ಯೆಗಳ ಚಿತ್ರಣವು ರೂಪಿತವಾಗುವುದೋ ಹಾಗೆ, ಶೈಲಿಯಲ್ಲಿಯೂ ಹೊಸತನವು ತಲೆದೋರುವುದು ತೀರ ಅನಿವಾರ್ಯವೇ ಸರಿ. ಪ್ರಪಂಚದ ಎಲ್ಲ ಭಾಷೆಗಳ ಸಾಹಿತ್ಯಗಳಲ್ಲಿಯೂ ಶೈಲಿಯು ಬದಲಾವಣೆ ಆಗುತ್ತ ಬಂದುದನ್ನು ಮರೆಯಲಾಗದು. ಜಗತ್ತಿನ ಭಾಷೆಗಳಲ್ಲೆಲ್ಲಾ ಹೆಚ್ಚು ವ್ಯಾಪಕವಾದುದೂ, ವಿಪುಲ ಸಾಹಿತ್ಯ ಉಳ್ಳುದೂ ಆಗಿರುವ ಆಂಗ್ಲ ಭಾಷೆಯನ್ನೇ ದೃಷ್ಟಾಂತವಾಗಿ ಸಮೀಕ್ಷಿಸಬಹುದು. ೧೬ನೇ ಶತಮಾನದ ಕಾವ್ಯ-ನಾಟಕಗಳ ಶೈಲಿಗೂ, ೧೯ನೆಯ ಹಾಗೂ ೨೦ನೆಯ ಶತಮಾನದವುಗಳಿಗೂ ತುಂಬ ವ್ಯತ್ಯಾಸ ಉಂಟು. ಅದರಲ್ಲಿಯೂ, ಮೊದಲಿನ ಮಹಾಯುದ್ಧಾನಂತರ ಮತ್ತು ಎರಡ

ಮರೆಯಲಾಗದಷ್ಟು ಭೀಷಣ

ನನ್ನ ಶೈಶವದಲ್ಲಿ ನಡೆದ ಆ ಮಹಾದುರಂತವನ್ನು ನಾನು ಈಗಲೂ ಪ್ರಸನ್ನತೆಯಿಂದ ಸ್ಮರಿಸಲಾರೆ.

ಒಮ್ಮೆ, ನಾಲ್ಕು ಶಿಲ್ಲಿಂಗಿನ ಬೆಳ್ಳಿಯ ನಾಣ್ಯವೊಂದಕ್ಕೆ ನಾನು ಒಡೆಯನಾಗಿದ್ದೆ. ಅದನ್ನು ನಾನು, ನನ್ನ ಇಚ್ಛೆಯಂತೆ ಖರ್ಚು ಮಾಡಬಹುದಾಗಿತ್ತು. ಅದೊಂದು ಮಹತ್ವದ ಹೊಣೆಗಾರಿಕೆಯೂ ಆಗಿತ್ತು. ಏಕೆಂದರೆ, ಅಮರವಾದ ಆ ಸಂಪತ್ತಿನಿಂದ ನಾನು ಬಹುಮಟ್ಟಿಗೆ ಯಾವುದೇ ವಸ್ತುವನ್ನು ಕೊಂಡುಕೊಳ್ಳಬಹುದಾಗಿತ್ತು.

ನಾನು 'ಲೊಂಗ್' ಸೇತುವೆಯ ಮಾರ್ಗ ಹಿಡಿದೆ. ನಾನು ಕೊಂಡುಕೊಳ್ಳಬೇಕಾದುದನ್ನು ನಿರ್ಧರಿಸಲು, ಅಲ್ಲಿ ನಾನೊಬ್ಬನೇ ಇರಬೇಕಾಗಿತ್ತು.

ನನ್ನ ಕಿಸೆಯ ಆಳದಲ್ಲಿ ಆ ಅದ್ಭುತ ನಾಣ್ಯವು ಆರಾಮ ಪಡೆಯುತಿತ್ತು. ಅದರೊಂದಿಗೆ ಸಣ್ಣ ಕಲ್ಲುಗಳ ಒಂದು ಸಂಗ್ರಹವೂ ಇತ್ತು.

ನಾನು ಸೇತುವೆಯ ಮೇಲೆ ನಿಂತು ನನ್ನ ಯೋಜನೆಗಳಿಗೆ ವಿರಾಮ ಚಿಹ್ನೆಗಳನ್ನು ಹಾಕಲು, ಆ ಸಣ್ಣ ಕಲ್ಲುಗಳನ್ನು ನೀರಿಗೆ ಎಸೆಯುತಿದ್ದೆ ಮತ್ತು ಅವುಗಳು ಮಾಡಿದ, ವಿಸ್ತರಿಸುತಿದ್ದ ವಲಯಗಳನ್ನು ನೋಡುತಿದ್ದೆ.

ಕೊನೆಗೆ ನಾನು, ಉಳಿದಿರುವ ಒಂದೇ ಸಣ್ಣ ಕಲ್ಲನ್ನು ಎಸೆದೆ; ಮತ್ತು ಅದು ಬಿಸಿಲಿನಲ್ಲಿ ಚುರುಕಾಗಿ ಮುಂದೆ ಹೋಗುತಿದ್ದಾಗ, ಅದು ನನ್ನ ನಾಲ್ಕು ಶಿಲ್ಲಿಂಗ್ ನಾಣ್ಯವೆಂದು ಗುರುತಿಸಿದೆ. ಒಂದು ಸಣ್ಣ ಶಬ್ದದಿಂದ—ಆ ಶಬ್ದವನ್ನು ನಾನು ಈಗಲೂ ಕೇಳಬಲ್ಲೆ,—ನೀರು ಅದನ್ನು ಆವರಿಸಿತು. ಅದು ತಿರುಗುತ್ತಾ ಮುಳುಗುವಾಗ, ಅದರ ಶುಭ್ರ ಹೊಳಪನ್ನು ನಾನು ನೋಡಿದೆ.

ನಾನು ರೋದಿಸಲಿಲ್ಲ. ಆಪತ್ತು ಬಹಳ ದೊಡ್ಡದಾಗಿತ್ತು. ನಾನು ಸ್ವಲ್ಪ ಹೊತ್ತು ಮೂಕನಾಗಿ ನಿಂತುಕೊಂಡೆ. ಆ ಮೇಲೆ ಮನೆಗೆ ಹೋದೆ. ಆ ದುರಂತವನ್ನು ಯಾರೊಡನೆಯೂ ಹೇಳಲಿಲ್ಲ.

ನನ್ನ ಜೀವದ ಮೇಲೆ ನೆಲೆಗೊಂಡ ಅಂಧಕಾರದ ಕ್ಲೇಶವು,—ಅದರಲ್ಲಿ ಒಂದು ತರದ ಗಾಂಭೀರ್ಯವೂ ಇರುವುದೆಂದು ನಾನು ಅನುಭವಿಸುವಷ್ಟು,—ಅಸಾಧಾರಣವಾಗಿತ್ತು. ಅದೊಂದು ಪರಿಹರಿಸಲಾಗದ ದುರದೃಷ್ಟವಾಗಿತ್ತು. ಎಂದಿಗೂ ಮರೆಯಲಾಗದಷ್ಟು ಭೀಷಣವಾಗಿತ್ತು.

ಎಲ್. ಎಸ್. ನಾಯ್ಕ.

(ಜೆಕೊಬ್ ರೀಸ್ ಅವರ"THE OLD TOWN"ದಿಂದ ಆಯ್ದುದು)

ನೆಯ ಮಹಾಯುದ್ಧದ ವರೆಗೆ ಒಂದು ಬಗೆಯ ವಿಲಕ್ಷಣವಾದ ಶೈಲಿಯ ನೂತನತೆ ಉಂಟಾಗಿದೆ. ಈಗಂತೂ, ಅದರಲ್ಲಿ ಮತ್ತಷ್ಟು ಪರಿವರ್ತನವಾಗಿದೆ! ಶೇಕ್ಸಪಿಯರನ ನಾಟಕ ಶೈಲಿ, ಮಿಲ್ಟನನ ಕಾವ್ಯ ಶೈಲಿಗಳನ್ನು ಬರ್ನಾರ್ಡ್ ಶಾನದಕ್ಕೂ ಈಲಿಯಟ್ ಮೊದಲಾದವರದಕ್ಕೂ ಹೋಲಿಸಿ ನೋಡಿದರೆ ಅಜಗಜಾಂತರವು ವ್ಯಕ್ತವಾಗುವುದು. ಹಾಗೆಯೇ, ಭಾರತೀಯ ಸರ್ವ ಸಾಹಿತ್ಯಗಳಲ್ಲಿಯೂ, ಅದರೊಂದಿಗೆ ಕನ್ನಡ ಸಾಹಿತ್ಯದಲ್ಲಿಯೂ, ಶೈಲಿಯಲ್ಲಿ ಬದಲಾವಣೆ ವಿಶೇಷವಾಗಿರುತ್ತದೆನ್ನಬಹುದು. ಪದ್ಯ ಸಾಹಿತ್ಯ ವಿಭಾಗದಲ್ಲಾಗಿರುವ ಶೈಲಿ ಪರಿವರ್ತನವು ತೀರ ಸ್ಪಷ್ಟವಾಗಿದೆ. ಆದರೆ, ಈ ಪರಿವರ್ತನವು ತನ್ನ '**ಪದ್ಯತ್ವ**'ವನ್ನೇ ಕಳೆದುಕೊಂಡಂತಾಗಬಾರದು. ಪದ್ಯ ಮತ್ತು ಗದ್ಯಗಳೊಳಗಿನ ಮುಖ್ಯ ಭೇದವನ್ನು **ಛಂದೋಗಣ**ದಿಂದಲೇ ಗುರುತಿಸುತ್ತೇವೆ. ಗಣವೆಂಬುದು ಪದ್ಯ (ಕವನ) ಮಂದಿರವನ್ನು ಕಟ್ಟುವ ಮೂಲ ಘಟಕಗಳಾದ ಇಟ್ಟಂಗಿ(Bricks)ಗಳಂತಿವೆ. ಮಂದಿರದ ರಚನೆಯಲ್ಲಿ ಆಕೃತಿ ಪರಿವರ್ತನಗಳಾಗಬಹುದೇ ಹೊರತು, ಇಟ್ಟಂಗಿಗಳ ಪರಿವರ್ತನ ಆಗಲಾರದು. ಹಾಗೆ ಮೂಲ ಘಟಕಗಳನ್ನೇ ಪರಿವರ್ತಿಸ ಹೋದಲ್ಲಿ, ಕವನಗಳು, ಹಾಡಲು ಬರಲೇ ಬೇಕೆಂಬ ತಮ್ಮ ಪದ್ಯತ್ವವನ್ನು ಕಳೆದುಕೊಂಡು, ಕೇವಲ **ಓದುಗವನ**ವಾಗಿ, ಭಾವಭರಿತವಾದ ಗದ್ಯಗಳೆನಿಸುವುವು. ಆದ್ದರಿಂದ, ಕಾಲಾನುಗುಣವಾದ ಉಡುಪನ್ನು ತೊಡುವಾಗ, ಆ ಉಡುಪು ಆಭಾಸವಾಗದಂತೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ಸೌಂದರ್ಯಾಭಿರುಚಿಯ ಕಲೋಪಾಸಕನ ಅವಶ್ಯ ಕರ್ತವ್ಯವೆನಿಸುವುದು.

ಗಾಂಧಿಜಿಯವರ ನಿತ್ಯದ ಸೂತ್ರ ಯಜ್ಞ

ವರ್ಧಾದಲ್ಲಿ ಜರಗುತಿದ್ದ ಕೊಂಗ್ರೆಸ್ ಕಾರ್ಯಕಾರಿ ಮಂಡಲಿಯ ಸಭೆಗಳಿಗೆ ಸಾಮಾನ್ಯವಾಗಿ ಬಾಪುವನ್ನು ಆಮಂತ್ರಿಸುತಿದ್ದರು. ಸಾಮಾನ್ಯವಾಗಿ ಈ ಸಭೆಗಳು ಅಪರಾಹ್ನ ಒಂದು ಘಂಟೆಗೆ ಆರಂಭವಾಗುತಿದ್ದುವು. ಮತ್ತು ಕೆಲವು ವೇಳೆ ಹಲವು ತಾಸುಗಳ ವರೆಗೆ ನಡೆಯುತಿದ್ದುವು.

ಒಂದು ದಿನ ಬಾಪೂಜಿ, ರಾತ್ರೆ ಹೊತ್ತಿನ ತನಕ ಮುಂದರಿದ ದೀರ್ಘ ಚರ್ಚೆಗಳ ತರುವಾಯ ಬಲು ಆಯಾಸಗೊಂಡು ಸೇವಾಗ್ರಾಮಕ್ಕೆ ಮರಳಿದುದು ನೆನಪಿರುತ್ತದೆ. ಅಂದು ವರ್ಧಕ್ಕೆ ಹೊರಡುವ ಮುನ್ನ, ವಾಡಿಕೆಯಂತೆ ಬಾಪು ನೂಲಲಾಗಲಿಲ್ಲ; ಮರಳಿದೊಡನೆ ನೂಲುವ ರಾಟೆಗಾಗಿ ತಕ್ಷಣವೇ ಕೇಳಿದರು. ಸೀಮೆಯೆಣ್ಣೆಯ ಮಸಕುದೀಪದ ನಿಮಿತ್ತ ಕಣ್ಣಿಗೆ ಬಾಧೆಯನ್ನು ತಪ್ಪಿಸುವ ಉದ್ದೇಶದಿಂದ ಅಂದಿನ ರಾತ್ರೆ ನೂಲುವುದನ್ನು ಬಿಟ್ಟುಬಿಡಬೇಕಾಗಿ ವಿಜ್ಞಾಪಿಸಿಕೊಂಡೆವು. ಆದರೆ, ಗಾಂಧಿಜಿ ಅದಕ್ಕೊಪ್ಪಲಿಲ್ಲ. "ಅದನ್ನು (ನೂಲುವ ಕೆಲಸವನ್ನು) ಹೇಗೆ ಬಿಡಲಾದೀತು? ನನ್ನ ರಾತ್ರಿ ಊಟವನ್ನು ಬಿಟ್ಟಿಲ್ಲವಷ್ಟೆ?" ಎಂದರು.

—ಹಾಗೆನ್ನುತ್ತ, ಅವರು ತಿರಿಗೊಮ್ಮೆ ರಾಟೆಯನ್ನು ಕೇಳಿಕೊಂಡು, ನೂಲಲಾರಂಭಿಸಿದರು.

ಅವರು ನೂಲುತ್ತಿರುವಾಗ ನಮ್ಮಲ್ಲೊಬ್ಬರು ಅವರಿಗೆ ಚರಖವನ್ನು ಕೊಡುವುದರ ಬಗ್ಗೆ ಏಕೆ ಅಂಜಿಕೊಂಡರೆಂದು ಕಾರಣಗಳನ್ನು ವಿವರಿಸಿದರು: "ನೀವು ಇಷ್ಟೊಂದು ಆಯಾಸಗೊಂಡಿರುವಿರೆಂದು ನಿಮ್ಮ ಮುಖ ಮುದ್ರೆಯಿಂದಲೇ ತಿಳಿದವರಾಗಿ, ನಿಮ್ಮೆದುರಿನಲ್ಲಿ ಚರಖವನ್ನು ಇಡುವರೆ ಧೈರ್ಯವಾಗಲಿಲ್ಲ."

ಬಾಪೂ ಎಂದರು: "ಆಯಾಸ ಇಲ್ಲವೆ ಆಲಸ್ಯದ ನಿಮಿತ್ತವಾಗಿ ಕ್ರಿಯಾಭ್ರಷ್ಟನಾದರೆ, ಇತರರನ್ನು ಅವರವರ ನಿಯಮಿತ ಕಾರ್ಯಗಳನ್ನೂ ಯಾವತ್ತೂ ಸಂದರ್ಭಗಳಲ್ಲಿ ಜರಗಿಸುತ್ತಿರಬೇಕೆಂದು ಹೇಗೆ ಹೇಳಲಿ?."

"ಆಲಸ್ಯತನ ಇಲ್ಲವೆ ಕರ್ತವ್ಯ ಭ್ರಷ್ಟತೆಯ ಪ್ರಶ್ನೆಯೇ ಇದ್ದಿಲ್ಲ. ನೀವು ಬಹಳೇ ಆಯಾಸಗೊಂಡಿದ್ದುದರಿಂದ, ನೀವು ವಿಶ್ರಾಂತಿಪಡೆದರೆ ನಿಮ್ಮ ಆರೋಗ್ಯದೃಷ್ಟಿಯಿಂದ ಹಿತಕರವಾಗುತಿತ್ತು"—ಎಂದೆವು.

"ನಾನು। ಆಯಾಸಗೊಂಡಿರುವೇನೋ ನಿಜ. ಆದರೆ, ಈ ಯಜ್ಞ (ನೂಲುವ ಪ್ರಕ್ರಿಯೆ)ವನ್ನು ಜರಗಿಸದೆ ಮಲಗಿದೆನಾದರೆ, ಇಡೀ ರಾತ್ರೆ ನನ್ನ ಮನಸ್ಸಾಕ್ಷಿಯು ಚುಚ್ಚುತ್ತಲಿದ್ದು, ಸುಖವಾಗಿ ನಿದ್ರಿಸಲಾಗುತಿದ್ದಿಲ್ಲ—"ಎಂದರು ಬಾಪೂ.

ಅಂದಿನಿಂದ, ಕಾರ್ಯಕಾರಿ ಮಂಡಲಿಯ ಸಭೆಗಳಿಗೆ ಹೋಗುವಾಗ ಯಾವಾಗಲೂ ಚರಖವನ್ನು ಕೊಂಡುಹೋಗುತಿದ್ದರು, ಮತ್ತು ಸಮಯ ಸಿಕ್ಕಿದಾಗಲೆಲ್ಲ—ಸಭೆಯು ನಡೆಯುತಿದ್ದಾಗಲೂ ಕೂಡ—ನೂಲುತಿದ್ದರು.

(ಶ್ರೀ। ಕನೂ ಗಾಂಧಿಯವರು ಬರೆದ "ಗಾಂಧಿಯ ನೆನವರಿಕೆ" ಗಳಿಂದ:)

ಅನುವಾದಕ: **ಕೆ. ಶ್ರೀನಿವಾಸ ಪೈ.**

"ಯದ್ಭಾವೋ ತದ್ಭವತಿ"

"ಮನುಷ್ಯನ ಅಂತಃಕರಣದಲ್ಲಿ ಸದ್ಭಾವನೆಯು ಇದ್ದೇ ಇರುತ್ತದೆ. ಅದಕ್ಕೆ ಆಹ್ವಾನ ಕೊಟ್ಟು ಎಚ್ಚರಗೊಳಿಸುವುದು ಸಾಧ್ಯವಿದೆ. ಈ ವಿಷಯದಲ್ಲಿ ವಿಶ್ವಾಸವಿಟ್ಟೇ ನಾನು ಕೆಲಸಮಾಡಿದೆ. ಅದರಂತೆಯೇ ಪರಮಾತ್ಮನ ದರ್ಶನ ನನಗಾಯಿತು. ಮನುಷ್ಯನ ಹೃದಯವು ಅಸೂಯೆ, ಮತ್ಸರ, ಲೋಭ ಮೊದಲಾದ ದುರ್ಗುಣಗಳಿಂದ ತುಂಬಿರುತ್ತದೆಂಬ ಭಾವನೆಯಿಂದ ನಾನು ಹೊರಟಿದ್ದರೆ ಪರಮಾತ್ಮನು ನನಗೆ ಅದರಂತೆಯೇ ದರ್ಶನ ಕೊಡುತಿದ್ದನು. ಪರಮಾತ್ಮನು ಕಲ್ಪವೃಕ್ಷವಾಗಿರುವನು. ನಾವು ಕಲ್ಪನೆ ಮಾಡಿಕೊಂಡಂಥ ರೂಪವನ್ನೆ ಅವನು ಪ್ರಕಟಮಾಡುತ್ತಾನೆ ಎಂಬುದನ್ನು ನಾನು ಇದರ ಮೇಲಿಂದ ಕಲಿತುಕೊಂಡೆ."

ವಿನೋಬಾ.

'ಆಹಾರ-ಶ್ರಮ' ಗಾಂಧೀಜಿ

> "ವಿನೋಬಾಜಿಯವರು ಮಹಾತ್ಮಾ ಗಾಂಧಿಯವರನ್ನು ಕೂಡ ಮರೆಯಿಸುವಂತೆ ಕಾಣಿಸುತ್ತದೆ"
>
> —ಕಿ. ಘ. ಮಶ್ರೂವಾಲಾ.

ಜೀವನ ಮಾಡಿರಲಿಕ್ಕೆ ಮನುಷ್ಯನು ಶ್ರಮಿಸಬೇಕು ಎಂಬ ನಿಯಮವು ಕೌಂಟ್ ಲಿಯೊ ಟೊಲ್ ಸ್ಟೊಯಿಯವರ 'ಆಹಾರ—ಶ್ರಮ' (Bread-labour) ಎಂಬ ಲೇಖನದ ಮೂಲಕ ನನಗೆ ಪ್ರಥಮವಾಗಿ ವೇದ್ಯವಾಯಿತು. ಆದರೆ, ರಸ್ಕಿನ್ನರ "Unto This Last" ಎಂಬ ಗ್ರಂಥವನ್ನು ಓದಿದ ನಂತರ ನಾನು ಈ ಆಹಾರ-ಶ್ರಮಕ್ಕೆ ಮಾನ್ಯಮಾಡುತ್ತ ಬಂದಿದ್ದೆನು. ಮಾನವನು ತನ್ನ ಸ್ವಂತ ಕೈಗಳಿಂದಲೇ ಶ್ರಮಿಸಿ ಆಹಾರವನ್ನು ಒದಗಿಸಿಕೊಳ್ಳಬೇಕೆಂಬ ದಿವ್ಯ ನಿಯಮವನ್ನು ಟಿ. ಎಮ್. ಬೊಂಡಾರೆಫ್ ಎಂಬ ರಷ್ಯದ ಗ್ರಂಥಕರ್ತನೊಬ್ಬನು ಮುಂಚಿತವಾಗಿಯೇ ಒತ್ತಿ ಹೇಳಿದ್ದನು; ಟೊಲ್‌ಸ್ಟೊಯಿಯು ಅದನ್ನು ಪ್ರಕಟಿಸಿದನು ಮತ್ತು ವ್ಯಾಪಕವಾಗಿ ಹಬ್ಬಿಸಿದನು. ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಹೇಳಿರುವಂತೆ, ಯಾವಾತನು ಯಜ್ಞ ಮಾಡದೆ ಉಣ್ಣುತ್ತಾನೋ, ಅವನು ಆಹಾರವನ್ನು ಕದ್ದು ತಿಂದಂತೆ ಎಂಬುದಾಗಿ ಇದೇ ಮಂತ್ರವು ಉಲ್ಲೇಖಿಸಲ್ಪಟ್ಟಿದೆಯೆಂದು ನನ್ನ ಅಭಿಮತ. ಯಜ್ಞವೆಂದರೆ "ಆಹಾರ-ಶ್ರಮ" ಎಂದಿಷ್ಟೆ ಮಾತ್ರ ಇದರ ಅರ್ಥವಾಗಬಲ್ಲುದು.

(ಗಾಂಧಿಜಿಯವರ 'ಸರ್ವೋದಯ"—ಅದರ ಸೂತ್ರಗಳು ಮತ್ತು ಕಾರ್ಯಕ್ರಮ.)

"ಪ್ರಜಾಸೂಯ ಯಜ್ಞ"

"ಮಹಾಭಾರತದಲ್ಲಿ ರಾಜಸೂಯ ಯಾಗದ ವರ್ಣನೆಯಿದೆ. ನಾನು ನಡೆಸಿರುವುದು "ಪ್ರಜಾಸೂಯ ಯಜ್ಞ" ಇದರಲ್ಲಿ ಪ್ರಜೆಗಳ ಅಭಿಷೇಕವಾಗುವುದು. ರಾಜ್ಯದಲ್ಲಿ ಕೂಲಿಕಾರರು, ಒಕ್ಕಲಿಗರು, ಭಂಗೀ ಜನರು ಮೊದಲಾದವರೆಲ್ಲರೂ ತಮ್ಮ ಸಲುವಾಗಿ ಏನೋ ಚಲೋ ಕೆಲಸವಾಗಿದೆ ಎಂದು ತಿಳಿಯುವಂತಾಗುವುದು. ಇಂಥ ಸಮಾಜದ ಹೆಸರೇ 'ಸರ್ವೋದಯ' ಎಂದು. ಇದೇ ಪ್ರೇರಣೆಯಿಂದ ಸಂಚಾರಕ್ಕೆ ಹೊರಟಿದ್ದೇನೆ." (ವಿನೋಬಾ)

("ಸರ್ವೋದಯ" ಕೈಪಿಡಿಯಿಂದ)

ಶಾಂತಿ ! ಕ್ರಾಂತಿ !! ಭ್ರಾಂತಿ !!!

ಕ್ರಾಂತಿ ಮಾಡಬೇಕಾದರೆ ತಲೆಯನ್ನು ಶಾಂತವಾಗಿ ಇರಿಸಿಕೊಳ್ಳಬೇಕಾಗುತ್ತದೆ. ಆದರೆ, ಹೃದಯದಲ್ಲಿ ಬೆಂಕಿ ಧಗಧಗಿಸುತ್ತಿರಬೇಕು. ಹಿಮಾಲಯವು ಹೃದಯದಲ್ಲಿರಬಾರದು, ತಲೆಯಲ್ಲಿರಬೇಕು. ಹೃದಯವು ಅಗ್ನಿಯ ಸ್ಥಾನವು. ಆದರೆ, ಇಂದು ತರುಣರ ಪರಿಸ್ಥಿತಿಯು ಇದಕ್ಕೆ ತೀರ ವಿರುದ್ಧವಾಗಿದೆ. ಅವರ ತಲೆಯಲ್ಲಿ ಬೆಂಕಿ ತುಂಬಿರುತ್ತದೆ. ಆದರೆ, ಹೃದಯದಲ್ಲಿ ಬರೀ ಹಿಮ ತುಂಬಿರುತ್ತದೆ; ಇದರಿಂದ ಕ್ರಾಂತಿಯಾಗಲಾರದು. ತಲೆಯನ್ನು ಶಾಂತವಾಗಿರಿಸಿಕೊಂಡು ಹೃದಯದಲ್ಲಿಯ ಬೆಂಕಿಯ ಸಹಾಯದಿಂದ ಕೆಲಸಕ್ಕೆ ಮುಂದುವರಿಯುವವರು ಬೇಕಾಗಿದ್ದಾರೆ; ಹಸಿವು ಹಾಗೂ ಅಸಂತೋಷಗಳಿಂದ ಕ್ರಾಂತಿಯಾಗುತ್ತದೆನ್ನುವುದು ತಿರುವು ಮುರುವಾದ ತಲೆಯ ತರ್ಕವಾಗಿದೆ. ಅತಿಶಯವಾದ ಕ್ಷುಧೆಯಿಂದ ಜರ್ಝರಿತ ಮತ್ತು ಅತ್ಯಂತ ಕ್ಷೀಣವಾದ ಕ್ರಾಂತಿಯನ್ನೆಂದೂ ಮಾಡಲಾರದು. ಬಂಗಾಲದಲ್ಲಿಯ ಬರಗಾಲದಲ್ಲಿ ಕ್ರಾಂತಿ ಏಕೆ ಆಗಲಿಲ್ಲ? ಹಸಿದು ಕಂಗಾಲಾದ ಮನುಷ್ಯನಲ್ಲಿ ವಿಚಾರ ಮಾಡುವ ಶಕ್ತಿಯೇ ಇರುವುದಿಲ್ಲ. ಅತಿಶಯ ಬಡವರು ಮತ್ತು ಶ್ರೀಮಂತರು—ಈ ಉಭಯತರೂ ಕ್ರಾಂತಿ ಮಾಡಲಾರರು. ಈ ಭೂದಾನ ಯಜ್ಞದಿಂದ ಹೊಟ್ಟೆಗೆ ರೊಟ್ಟಿ, ತಲೆಗೆ ವಿಚಾರ ಮತ್ತು ಹೃದಯಕ್ಕೆ ಪ್ರೇಮ ಇವು ಸಿಕ್ಕಿಯೇ ಸಿಗುವುವು; ಮತ್ತು ಇದರಿಂದಲೇ ಕ್ರಾಂತಿ ಉಂಟಾಗುವುದು."

(ವಿನೋಬಾ)

('ಸರ್ವೋದಯ' ಕೈಪಿಡಿಯಿಂದ ಆಯ್ದುದು)

ರಕ್ತನಿಧಿಗಳ ಆವಶ್ಯಕತೆ

(ಲೇಖಕರು: ಡಾ| ವಿ. ಆರ್. ಭಟ್, ಎಂ. ಬಿ., ಬಿ. ಎಸ್., ಟಿ. ಡಿ. ಡಿ.]

(ನೆತ್ತರನ್ನು ಕೊಡುವ (transfusion) ಕ್ರಮವು ಮದರಾಸು ಸಂಸ್ಥಾನದಲ್ಲಿ ೧೯೪೫ರಿಂದ ನಡೆಯುತ್ತಿರುತ್ತದೆ. ಈಗ ನಮ್ಮ ಸಂಸ್ಥಾನದಲ್ಲಿ ಇಪ್ಪತ್ತೈದಕ್ಕೂ ಮಿಕ್ಕಿ ರಕ್ತನಿಧಿ ಯಾನೆ 'Blood-Banks'ಗಳಿದ್ದು ವರ್ಷಕ್ಕೆ ಸಾವಿರಾರು ಜನರಿಗೆ ರಕ್ತದಾನವಾಗುತ್ತಿದೆ. ಮಂಗಳೂರು ಸರಕಾರೀ ಆಸ್ಪತ್ರೆಯಲ್ಲೂ ಒಂದು 'ರಕ್ತನಿಧಿ' ಇದೆ. ತಮ್ಮ ನೆತ್ತರನ್ನು ಈ ನಿಧಿಗೆ ಕೊಡಲಿಚ್ಛಿಸುವವರು, ಅಲ್ಲಿಗೆ ಹೋಗಿ ದಾನಮಾಡಬಹುದು.)

ಪ್ರಾಣದಾನದ ದೃಷ್ಟಾಂತಗಳು

ಒಬ್ಬ ಯುವಕನು ರಸ್ತೆಯ ಒಂದು ಬದಿಯಿಂದ ಇನ್ನೊಂದಕ್ಕೆ ಹಾದುಹೋಗುವಾಗ ಬಸ್ಸಿನ ಕೆಳಗೆ ಬಿದ್ದು, ಕಾಲು ಮುರಿದು ಮೂರ್ಛೆಹೋದನು. ಅವನನ್ನು ಕೂಡಲೆ ಆಸ್ಪತ್ರೆಗೆ ಸಾಗಿಸಿದರೂ ಮಿತಿಮೀರಿ ರಕ್ತಸ್ರಾವವು ಆದುದರಿಂದ ಎಲ್ಲರೂ ಅವನ ಜೀವದ ಆಶೆಯನ್ನು ತೊರೆದರು. ಆದರೆ, ಆಸ್ಪತ್ರೆಯಲ್ಲಿ ಅವನಿಗೆ ರಕ್ತವನ್ನು ಕೊಡಲಾಯಿತು. ಎರಡೇ ಎರಡು ಬಾಟ್ಲಿ ರಕ್ತಗಳಿಂದ ಯುವಕನು ಚೇತನಗೊಂಡು, ಮುಂದಿನ ಚಿಕಿತ್ಸೆಯನ್ನು ಸಹಿಸುವ ಶಕ್ತಿಯುಳ್ಳವನಾಗಿ ಆ ಚಿಕಿತ್ಸೆಯ ಗುಣದಿಂದ ಕೆಲವೇ ದಿನಗಳಲ್ಲಿ ಆಸ್ಪತ್ರೆಯಿಂದ ಮನೆಗೆ ಮರಳುವ ಸುಸ್ಥಿತಿಗೆ ಬಂದನು.

ಮಹಿಳೆಯೊಬ್ಬಳು ಬಾಣಂತಿಯಾಗಿ, ರಕ್ತಸ್ರಾವವು ಮಿತಿಮೀರಿಯಾಯಿತು. ನಿಶ್ಚೇತನಗೊಂಡ ಈ ಮಹಿಳೆಗೆ ಹಲವು ತರದ ಔಷಧ ಚಿಕಿತ್ಸೆ ನಡೆದರೂ ಅವಳ ಸ್ಥಿತಿಯು ಕೆಡುತ್ತ ಹೋಯಿತು. ಆದರೆ ಅವಳಿಗೆ ಒಂದೇ ಒಂದು ಬಾಟ್ಲಿ ರಕ್ತವನ್ನು ಕೊಡಲು ಅವಳ ಸ್ಥಿತಿಯು ಬಹಳ ಮಟ್ಟಿಗೆ ಸುಧಾರಿಸಿ, ಅವಳ ಪ್ರಾಣವು ಉಳಿಯಿತು.

ಈ ಎರಡು ದೃಷ್ಟಾಂತಗಳಲ್ಲಿ, ಮತ್ತು ದಿನಂಪ್ರತಿ ನಡೆಯುವ ಇಂತಹ ಹಲವು ಇತರ ಸಂದರ್ಭಗಳಲ್ಲಿ ಒಂದು ಅಥವಾ ಎರಡು ಬಾಟ್ಲಿ ರಕ್ತವು ಹಲವರ ಪ್ರಾಣವನ್ನು ಉಳಿಸಿದೆ. ಪ್ರಾಣದಾನವನ್ನೇ ಮಾಡುವ ಇಂತಹ ರಕ್ತವು ಸಿಗುವುದೆಲ್ಲಿ? ಅದು ಔಷಧಿ ಅಂಗಡಿಗಳಲ್ಲಿ ಮಾರಲ್ಪಡುವುದಿಲ್ಲ. ಅವಶ್ಯಬಿದ್ದಾಗ ಅದು ಸಿಕ್ಕುವ ಸ್ಥಳವೇ ರಕ್ತನಿಧಿ (Blood Bank).

ಒಬ್ಬನ ರಕ್ತವನ್ನು ಇನ್ನೊಬ್ಬನಿಗೆ ಕೊಡುವ ಪ್ರಯತ್ನವು ಹಲವು ಶತಮಾನಗಳಿಂದ ಮಾಡಲ್ಪಟ್ಟದೆ. ಹಂದಿ, ಕುರಿ, ಆಡು ಮೊದಲಾದ ಪ್ರಾಣಿಗಳ ರಕ್ತವನ್ನು ಮಾನವನಿಗೆ ಕೊಡುವ ಪ್ರಯತ್ನವು ಮಾಡಲ್ಪಟ್ಟಿದ್ದರೂ, ಅದರ ಫಲವಾಗಿ ಹಾಗೆ ರಕ್ತಪಡಕೊಂಡ ಎಲ್ಲರೂ ಮರಣಹೊಂದಿದುದರಿಂದ, ಆ ಪ್ರಯತ್ನಗಳು ಮುಂದೆ ಬೆಳೆಯಲಿಲ್ಲ. ಆದರೆ ಈ ಶತಮಾನದ ಮೊದಲ ವರ್ಷಗಳಲ್ಲಿ ಒಬ್ಬ ಮನುಷ್ಯನ ರಕ್ತವನ್ನು ಇನ್ನೊಬ್ಬನಿಗೆ ಕೊಡುವ ರೀತಿಯನ್ನು ಕಂಡುಹಿಡಿದರು. ಮೊದಲನೇ ಮಹಾಯುದ್ಧದಲ್ಲಿ ಈ ತೆರದಲ್ಲಿ ರಕ್ತವನ್ನು ಉಪಯೋಗಿಸುತ್ತಿದ್ದರೂ, ಎರಡನೇ ಮಹಾಯುದ್ಧದ ಸಮಯದಲ್ಲಿ ರಕ್ತ ತೆಗೆಯುವ ಮತ್ತು ಕೊಡುವ ರೀತಿಯು ಬಹಳ ಸುಧಾರಣೆ ಹೊಂದಿದುದಲ್ಲದೆ, ಈ ಕೆಲಸದ ಮಹತ್ವವು ಎಲ್ಲರಿಗೂ ಮನವರಿಕೆಯಾದುದರಿಂದ, ಯುದ್ಧಾನಂತರ ಸಾವಿರಾರು ರಕ್ತನಿಧಿಗಳು ಇಡೀ ಪ್ರಪಂಚದಲ್ಲಿ ಸ್ಥಾಪಿಸಲ್ಪಟ್ಟವು. ಮಾತ್ರವಲ್ಲ, ಅವು ಬೆಳೆಯುತ್ತ ಇದ್ದು, ಅವುಗಳ ಕೆಲಸವು ಸುಧಾರಿತ ರೀತಿಯಲ್ಲಿ ಪ್ರಸಾರವಾಗುತ್ತ ಇರುವುದು. ಅವುಗಳ ಈ ದಿವ್ಯ ಕೆಲಸದಿಂದ ಉಳಿಸಿದ ಜೀವಗಳಿಗೆ ಎಣೆಯೇ ಇಲ್ಲವೆಂದರೂ ಹೆಚ್ಚಾಗದು.

ರಕ್ತದಲ್ಲಿ ತಂಡಗಳು

ಬೇರೆ ಬೇರೆ ಮನುಷ್ಯನ ರಕ್ತವು ನಾಲ್ಕು ಬೇರೆ ಬೇರೆ ತಂಡಗಳಲ್ಲಿ ಒಂದಕ್ಕೆ ಸೇರಿದುದಾಗಿದೆ. ಈ ನಾಲ್ಕು ತಂಡಗಳು, A, B, AB ಮತ್ತು O ಎಂಬುದಾಗಿ ಕರೆಯಲ್ಪಡುವುವು. ಒಬ್ಬನು ಯಾವ ಜಾತಿಯವನೂ ವರ್ಣದವನೂ ಆಗಿದ್ದರೂ ಅವನ ರಕ್ತವು ಈ ನಾಲ್ಕು ತಂಡಗಳಲ್ಲಿ ಒಂದಕ್ಕೆ ಸೇರಿದುದಾಗಿದೆ. ಒಬ್ಬನು ರಕ್ತದ ತಂಡವನ್ನು ಕೆಲವೇ ನಿಮಿಷಗಳಲ್ಲಿ ಅತಿ ಸುಲಭವಾಗಿ ಕಂಡುಹಿಡಿಯಬಹುದು. ನಮ್ಮ ದೇಶದಲ್ಲಿ ಸಾಧಾರಣ ಶೇಕಡಾ ೪೦ರಷ್ಟು ಜನರು O ತಂಡಕ್ಕೂ, ೩೫ರಷ್ಟು ಜನರು A ತಂಡಕ್ಕೂ, ೨೦ರಷ್ಟು B ತಂಡಕ್ಕೂ ೫ರಷ್ಟು AB ತಂಡಕ್ಕೂ ಸೇರಿದವರೆಂದು ಕಂಡುಹಿಡಿದಿದ್ದಾರೆ.

O ತಂಡದವನ ರಕ್ತವನ್ನು ಇತರ ಎಲ್ಲ ತಂಡದವರಿಗೂ ಕೊಡಬಹುದು. ಈ ತಂಡದವನನ್ನು ಸಾರ್ವತ್ರಿಕದಾನಿ (Universal Donor) ಎನ್ನುವರು. A ತಂಡದವನ ರಕ್ತವನ್ನು ಅದೇ ತಂಡದವನಿಗೂ, AB ತಂಡದವನಿಗೂ ಕೊಡಬಹುದು. ಹಾಗೆಯೇ, B ತಂಡದವನ ರಕ್ತವನ್ನು ಅದೇ ತಂಡದವನಿಗೂ AB ತಂಡದವನಿಗೂ ಕೊಡಬಹುದು. ಆದರೆ, AB ತಂಡದವನ ರಕ್ತವನ್ನು ಆದೇ ತಂಡದವನಿಗೆ ಮಾತ್ರ ಕೊಡಬಹುದು. ಆದುದರಿಂದ AB ತಂಡದವನನ್ನು ಸಾರ್ವತ್ರಿಕ ಪಾತ್ರಿ (Universal Recipient) ಎನ್ನುವರು.

ಒಂದು ತಂಡದ ರಕ್ತವನ್ನು ಅದಕ್ಕೆ ವಿರೋಧವಾದ ಇನ್ನೊಂದು ತಂಡದವನಿಗೆ ಕೊಟ್ಟರೆ (ಉದಾ: A ತಂಡದವನದನ್ನು B ತಂಡದವನಿಗೆ ಕೊಟ್ಟರೆ) ಆದರಿಂದ ಮರಣ ಉಂಟಾಗುವುದು. ಆದುದರಿಂದ, ರಕ್ತವನ್ನು ಕೊಡುವಾಗ ರಕ್ತ ಪರೀಕ್ಷೆಯನ್ನೂ ಹೋಲುವಿಕೆಯನ್ನೂ ಅತಿ ಜಾಗರೂಕತೆಯಿಂದ ಮಾಡುತ್ತಾರೆ.

ರಕ್ತವನ್ನು ಸಂಗ್ರಹಿಸಿಡುವ ಮತ್ತು ಕೊಡುವ ಕೆಲಸವನ್ನು ಮಾಡುವಾಗ ಹೊರಗಿನ ರೋಗಾಣುಗಳು ಸೇರದಂತೆ ಎಲ್ಲ ಸಲಕರಣಗಳನ್ನು 'ಸ್ಟೆರಿಲೈಸ್' (Sterilise) ಮಾಡುತ್ತಾರೆ. ಮತ್ತು ಸಂಗ್ರಹಿಸಿದ ರಕ್ತದಲ್ಲಿ ಬದಲಾವಣೆಗಳು ಬೇಗ ನಡೆಯದಂತೆ ಅದನ್ನು ಶೈತ್ಯಬಂಧಕ ಯಂತ್ರ (Refrigerator)ದಲ್ಲಿ ಇಡುತ್ತಾರೆ.

ಒಬ್ಬನಿಂದ ರಕ್ತವನ್ನು ತೆಗೆಯುವ ಮೊದಲು ಅವನನ್ನು ಚೆನ್ನಾಗಿ ಪರೀಕ್ಷೆ ಮಾಡಿನೋಡುವರು. ರಕ್ತವನ್ನು ತೆಗೆದರೆ ಅವನಿಗೆ ಹಾನಿಯಾಗುವುದಿಲ್ಲವೆಂದಾದರೆ, ಮತ್ತು ಅವನ ರಕ್ತದಿಂದ ಇತರರಿಗೆ ಹಾನಿಯಾಗುವುದಿಲ್ಲವೆಂದಾದರೆ ಮಾತ್ರ ಅವನ ರಕ್ತವು ತೆಗೆಯಲ್ಪಡುವುದು. ಅವನಿಂದ ತೆಗೆಯಲ್ಪಡುವ ರಕ್ತದ ಅಳತೆಯು ಅವನ ಗಾತ್ರ, ಪ್ರಾಯ ಇತ್ಯಾದಿಗಳ ಮೇಲೆ ಹೊಂದಿರುವುದು. ಹೆಚ್ಚಾಗಿ ಒಮ್ಮೆಗೆ ೩೫೦–೪೦೦ c.c.ಗಿಂತ ಹೆಚ್ಚು ರಕ್ತವನ್ನು ತೆಗೆಯುವುದಿಲ್ಲ; ಮತ್ತು ಮೂರು ತಿಂಗಳಿಗೊಮ್ಮೆಗಿಂತ ಹೆಚ್ಚಾಗಿಯೂ ತೆಗೆಯುವುದಿಲ್ಲ. ಹೆಂಗಸರಿಂದಲೂ ಗಂಡಸರಿಂದಲೂ ರಕ್ತವನ್ನು ತೆಗೆಯಬಹುದು; ೧೮ ರಿಂದ ೬೦ ವರ್ಷ ಪ್ರಾಯದವರಿಂದ ತೆಗೆಯಬಹುದು. ಕೊಡುವವನ ತೂಕವು ೧೦೦ ರಾತ್ಲುಗಳಿಗೆ ಮಿಕ್ಕಿರಬೇಕು.

ರಕ್ತಸಂಗ್ರಹ

ರಕ್ತ ಕೊಡಲು ಬಂದವರನ್ನು ಚೆನ್ನಾಗಿ ಪರೀಕ್ಷಿಸಿ ಅವನ ರಕ್ತದ ತಂಡವನ್ನು ಕಂಡು ಹಿಡಿದ ಮೇಲೆ ಅವನ (Elbow) ಮೊಣಗಂಟಿನ ಹತ್ತಿರದ ಅಶುದ್ಧ ರಕ್ತನಾಳದೊಳಗೆ ದಪ್ಪಗಿನ ಸೂಜಿಯೊಂದನ್ನು ಒಳನುಗ್ಗಿಸುವರು. ಈ ಸೂಜಿಯ ಮತ್ತೊಂದು ಕೊನೆಗೆ ಒಂದು ರಬ್ಬರ್ ಕೊಳವೆಯಿದ್ದು ಆ ಕೊಳವೆಯು ಒಂದು ಬಾಟ್ಲಿಯ ಬಾಯಿಗೆ ಸಿಕ್ಕಿಸಲ್ಪಟ್ಟಿರುತ್ತದೆ. ಆದುದರಿಂದ, ಅಶುದ್ಧ ರಕ್ತನಾಳದಲ್ಲಿ ಸೂಜಿ ಹೊಕ್ಕ ಕೂಡಲೆ, ರಕ್ತವು ಸೂಜಿಯಲ್ಲಿ ಬಂದು, ರಬ್ಬರ್ ಕೊಳವೆಯಿಂದ ಬಾಟ್ಲಿಗೆ ಹರಿಯುವುದು. ಸೂಜಿಯು ಹೊಗುವಾಗ ಒಂದಿಷ್ಟೂ ನೋವಾಗದಂತೆ ಅತಿ ಸಪೂರ ಸೂಜಿಯಿಂದ ಒಂದು ತಟಕು "ನೊವೊಕೈನ್" (Novocaine) ದ್ರಾವಕವನ್ನು ಮೊಣಗಂಟಿನ ಚರ್ಮದಲ್ಲಿ ಕೊಡುವರು. ಇದರಿಂದ ಅಲ್ಲಿಯ ಮಟ್ಟಿನ ನರದ ತುದಿಗಳು ಮೂರ್ಛಿತವಾಗಿ, ಮತ್ತೆ ದಪ್ಪಗಿನ ಸೂಜಿಯು ಹೊಗುವಾಗ ಒಂದಿಷ್ಟೂ ನೋವಾಗದಂತಾಗುವುದು. ಹೀಗಾಗಿ, ರಕ್ತವು ತೆಗೆಯಲ್ಪಡುವಾಗ ರಕ್ತದಾನ ಮಾಡುವವನಿಗೆ ಅದರ ಅರಿವೇ ಉಂಟಾಗುವುದಿಲ್ಲ.

ರಕ್ತವು ಹೊರಬಂದ ಕೂಡಲೆ ಹೆಪ್ಪುಗಟ್ಟುವುದೆಂಬುದು ಸರ್ವಸಾಮಾನ್ಯ ಎಲ್ಲರಿಗೂ ತಿಳಿದ ಸಂಗತಿ. ಆದರೆ, ಸಂಗ್ರಹಿಸಲ್ಪಡುವ ರಕ್ತವು ಹೆಪ್ಪುಗಟ್ಟದಂತೆ, ಬಾಟ್ಲಿಯಲ್ಲಿ ಒಂದು ದ್ರಾವಕವನ್ನು ಸೇರಿಸುತ್ತಾರೆ. ಇದರಿಂದ ರಕ್ತವು ದ್ರವವಾಗಿಯೇ ಉಳಿಯುವುದಲ್ಲದೆ, ರಕ್ತದ ಗುಣಗಳಲ್ಲಿ ಬೇರೆ ಯಾವ ಬದಲಾವಣೆಯೂ ಉಂಟಾಗುವುದಿಲ್ಲ.

ರಕ್ತವನ್ನು ಹೀಗೆ ಸಂಗ್ರಹಿಸಿಯಾದ ಮೇಲೆ, ಬಾಟ್ಲಿಯ ಮೇಲೆ ಅದರ ತಂಡವನ್ನು ಗುರುತಿಸಿ, ಬಾಟ್ಲಿಯನ್ನು ಶೈತ್ಯಬಂಧಕ ಯಂತ್ರವಲ್ಲಿ ಇಡುತ್ತಾರೆ. ಅದನ್ನು ಹಾಗೆ ಸಾಧಾರಣವಾಗಿ ಏಳು ದಿನಗಳಿಗಿಂತ ಹೆಚ್ಚಿಗೆ ಇರಿಸಕೂಡದು; ಮತ್ತೆ ಇಟ್ಟರೆ ಅದು ಹಾಳಾಗಿ, ನಿಷ್ಪ್ರಯೋಜಕವಾಗುವುದು.

ರಕ್ತವನ್ನು ಕೊಡುವುದು (Blood Transicn)

ರಕ್ತವನ್ನು ಕೊಡುವ ಸಮಯದಲ್ಲಿ, ಶೈತ್ಯಬಂಧಕ ಯಂತ್ರದಿಂದ ರಕ್ತದ ಬಾಟ್ಲಿಯನ್ನು ಹೊರತೆಗೆದು ಚೆನ್ನಾಗಿ ಅಲುಗಾಡಿಸಿ, ಅದನ್ನು ಗಾಳಿಸಿ ಇನ್ನೊಂದು ಬಾಟ್ಲಿಗೆ ಹಾಕುವರು. ಈ ಬಾಟ್ಲಿಯನ್ನು ಸ್ವಲ್ಪ ಮಟ್ಟಿನ ಬಿಸಿ ನೀರಿನಲ್ಲಿ ಅದ್ದಿ ಹಿಡಿದು, ರಕ್ತದ ಉಷ್ಣವನ್ನು ದೇಹದ ಉಷ್ಣಕ್ಕೆ ಸರಿಯಾಗುವಂತೆ ಮಾಡುವರು. ಈ ಬಾಟ್ಲಿಯ ಬಾಯಿಗೆ ಒಂದು ಉದ್ದದ ರಬ್ಬರ್ ಕೊಳವೆಯನ್ನು ಸಿಕ್ಕಿಸಿ, ಅದರ ಕೊನೆಗೆ ಒಂದು ಸೂಜಿಯನ್ನು ಸಿಕ್ಕಿಸುವರು. ರಕ್ತವು ಹನಿಹನಿಯಾಗಿ ಹರಿಯುವುದನ್ನು ಸರಿಯಾಗಿ ತಿಳಿಯಲು ರಬ್ಬರ್ ಕೊಳವೆಯ ನಡುವಿನಲ್ಲಿ ಗಾಜಿನ ವಿಶಿಷ್ಟ ಕೊಳವೆಯೊಂದು (Dropper) ಇರುವುದು. ರಕ್ತ ಪಡೆಕೊಳ್ಳುವವನನ್ನು ಅಂಗಾತ ಮಲಗಿಸಿ, ರಕ್ತಕೊಡುವ ಸೂಜಿಯ ತುದಿಯನ್ನು ಅವನ ಮೊಣಗಂಟಿನ ಹತ್ತಿರದ ಒಂದು ಅಶುದ್ಧ ರಕ್ತನಾಳದಲ್ಲಿ ಹೊಗಿಸುವರು. ಆಗ ನೋವಾಗದಂತೆ,

ಮುಂಚೆ ಹೇಳಿದಂತೆ ಒಂದು ತಟಕು 'ನೊವೊಕೈನ್' ದ್ರಾವಕವನ್ನು ಮೊದಲೇ ಕೊಡಲಾಗುವುದು. ರಕ್ತವು ಮೆಲ್ಲಗೆ ಒಳಹೋಗುವಂತೆ ಮಾಡುವರು. ಸೂಜಿಯು ಅತ್ತಿತ್ತ ಅಲ್ಲಾಡದಂತೆ, ಪಟ್ಟಿಗಳನ್ನು ಹಚ್ಚುವರು. ಈ ಕ್ರಮದಿಂದ ರಕ್ತವು ಒಳಗೆ ಹೋಗುವುದು. ಒಂದು ಬಾಟ್ಲಿ ರಕ್ತವು ಮೆಲ್ಲಗೆ ಒಳಗೆ ಹೋಗುವುದಾದರೆ, ೨-೩ ಗಂಟೆಗಳ ಕಾಲವು ಬೇಕಾಗುವುದು. ರಕ್ತವು ಒಳಗೆ ಹೋಗುವಾಗ ಅದನ್ನು ಪಡಕೊಳ್ಳುವವನಿಗೆ ಅದರ ಅರಿವಾಗುವುದಿಲ್ಲ.

ರಕ್ತ ಕೊಡುವ ಅವಶ್ಯಕತೆ

ಅವಘಡಗಳ ತರುವಾಯ ರಕ್ತಹೀನತೆ ಉಂಟಾದವರಿಗೆ ರಕ್ತಕೊಡುವ ಅವಶ್ಯಕತೆ ಬರಬಹುದು. ಸಹಜ ಘಟನೆಗಳಾದ ಪ್ರಸವ, ಗರ್ಭಪಾತಗಳ ತರುವಾಯ ಹೆಚ್ಚಿನ ರಕ್ತಸ್ರಾವವಾದರೆ ಅಂತಹವರಿಗೆ ರಕ್ತಕೊಡುವ ಅಗತ್ಯವು ಇರಬಹುದು. ರಕ್ತಹೀನತೆ, ರಕ್ತದೋಷ, ಅಸ್ವಸ್ಥದಿಂದ ಸುಧಾರಿಸಿ ಬರುವ ಅವಧಿ, ಇತ್ಯಾದಿಗಳಲ್ಲಿ ರಕ್ತವನ್ನು ಕೊಟ್ಟರೆ, ಅಂತಹವರ ಸ್ಥಿತಿಯು ಬೇಗನೆ ಒಳ್ಳೆಯದಾಗಬಹುದು. ಕೆಲವರಲ್ಲಿ 'ಹೀಮೊಫಿಲಿಯಾ' (Haemophilia) ಎಂಬ ರಕ್ತದೋಷದಿಂದ ಒಂದು ಗಾಯವಾದರೆ, ರಕ್ತಸೋರುವುದನ್ನು ತಡೆಯಲು ಕಷ್ಟವಾಗಬಹುದು. ಅಂತಹವರಲ್ಲಿ ಜೀರೆಯುವರ ರಕ್ತ ಕೊಟ್ಟಲ್ಲಿ, ಈ ಸೋರುವಿಕೆಯನ್ನು ನಿಲ್ಲಿಸಬಹುದು. ಶಸ್ತ್ರಚಿಕಿತ್ಸೆಯು ಅವಶ್ಯವಿದ್ದ ಹಲವರಲ್ಲಿ ಅವರ ದೇಹಸ್ಥಿತಿಯು ಒಳ್ಳೆಯದಿರುವುದಿಲ್ಲ. ಆದರಿಂದ ಶಸ್ತ್ರಚಿಕಿತ್ಸೆಯನ್ನು ಆಗ ಮಾಡಲಾಗುವುದಿಲ್ಲ; ಹೀಗಾಗಿ ರೋಗವು ಮಿತಿಮೀರಬಹುದು. ಆದರೆ, ಅಂತಹವರಿಗೆ ಒಂದೆರಡು ಬಾರಿ ರಕ್ತಕೊಟ್ಟರೆ ಅವರ ಸ್ಥಿತಿಯು ಬೇಗನೆ ಸುಧಾರಿಸಿ, ಶಸ್ತ್ರಚಿಕಿತ್ಸೆಯನ್ನು ಕೂಡಲೆ ಕೈಕೊಳ್ಳುವಂತಾಗುವುದು. ಮಾತ್ರವಲ್ಲ, ಬೇರೆ ಹಲವರಲ್ಲಿ ಶಸ್ತ್ರಚಿಕಿತ್ಸೆಯ ತರುವಾಯ ರಕ್ತಕೊಡುವುದರಿಂದ ಅವರು ಬೇಗನೆ ಗುಣಮುಖರಾಗಲು ಸಹಾಯವಾಗುವುದ:. ಕೆಲವೊಮ್ಮೆ ದೇಹದ ಒಳಗಿನಿಂದ ಆಗುವ ರಕ್ತಸ್ರಾವವನ್ನು (ಉದಾ: ಜಠರದಲ್ಲಿ ವ್ರಣವಾಗಿ, ರಕ್ತನಾಳವು ಬಿರಿದು ಆಗುವ ರಕ್ತಸ್ರಾವ) ಸ್ಥಿಮಿತಕ್ಕೆ ತರಲು ರಕ್ತ ಕೊಡಬೇಕಾಗುವುದು. ಆದುದರಿಂದ, ರಕ್ತ ಕೊಡುವುದರಿಂದ ತುಂಬಾ ಪ್ರಯೋಜನವಿದೆ.

ಹಲವೊಮ್ಮೆ ಒಂದೇ ಒಂದು ಬಾಟ್ಲಿ ರಕ್ತವು ಒಂದು ಜೀವವನ್ನು ಉಳಿಸುತ್ತದೆ. ನಮ್ಮ ಆತ್ಮೀಯರಲ್ಲಿ ಇಂತಹ ಸಂದರ್ಭಗಳು ಉಂಟಾದರೆ ಈ ಸ್ಥಿತಿಯು ನಮಗೆ ಸರಿಯಾಗಿ ಮನವರಿಕೆಯಾದೀತು. ಆದರೆ, ಸರಿಯಾಗಿ ಯೋಚಿಸಿ ನೋಡಿದ್ದಲ್ಲಿ ರಕ್ತದ ಅವಶ್ಯಕತೆಯು ಎಲ್ಲರಿಗೂ ಮುಂದಟ್ಟುಗುವುದು.

ತೆಗೆದ ರಕ್ತವನ್ನು ಹೆಚ್ಚು ದಿನಗಳ ತನಕ ಇಡಲು ಆಗುವುದಿಲ್ಲನೆಂಬುದನ್ನು ಮೊದಲೇ ತಿಳಿಸಿದೆ. ಆದರೆ, ರಕ್ತವನ್ನು ತೆಗೆಯದೆ, ಅದು ಇದ್ದಲ್ಲೇ, ಎಂದರೆ ಒಬ್ಬನ ದೇಹದಲ್ಲೇ ಬಿಟ್ಟರೆ, ಅದು ಯಾವಾಗಲೂ ಉಪಯೋಗಕ್ಕೆ ಸಿದ್ಧವಾಗಿರುತ್ತದೆ. ಮಾತ್ರ, ಅಂತಹ ರಕ್ತದಾನಿಗಳು ಸಂದರ್ಭಕ್ಕೆ ಸರಿಯಾಗಿ ಕರೆಯಲ್ಪಟ್ಟರೆ ರಕ್ತ ದಾನ ಮಾಡಲು ಸಿದ್ಧರಾಗಿರಬೇಕು.

ರಕ್ತದಾನದ ಅವಶ್ಯಕತೆ

ರಕ್ತನಿಧಿಗೆ ರಕ್ತದಾನ ಮಾಡಹೋಗುವವರನ್ನು ಸರಿಯಾಗಿ ಪರೀಕ್ಷಿಸುವರೆಂದು ಈ ಮೊದಲೇ ಹೇಳಿದೆ. ರಕ್ತವನ್ನು ತೆಗೆದಾದ ನಂತರ, ಅವರಿಗೆ ತಿಂಡಿ-ಪಾನೀಯಗಳನ್ನು ಕೊಟ್ಟು, ಸ್ವಲ್ಪ ಸಮಯ ವಿಶ್ರಮಿಸಲು ಅವಕಾಶ ಕೊಡುತ್ತಾರೆ. ಅಷ್ಟಲ್ಲದೆ ಒಂದು ರಕ್ತದಾನಕ್ಕೆ ಐದು ರೂಪಾಯಿ ಸಂಭಾವನೆಯನ್ನೂ ಕೊಡುತ್ತಾರೆ. ಈ ಸಂಭಾವನೆಯನ್ನು ರಕ್ತದ ಕ್ರಯವೆಂದೆಣಿಸುವುದು ತಪ್ಪು. ರಕ್ತದ ನಿಜವಾದ ಮೌಲ್ಯವು ಅಷ್ಟಿಷ್ಟಲ್ಲ. ಹಿಂದೆ ಹೇಳಿದಂತೆ ಕೆಲವೊಮ್ಮೆ ಒಂದೇ ಒಂದು ಬಾಟ್ಲಿ ರಕ್ತವು ಜೀವದಾನವನ್ನು ಮಾಡುವ ಸಂದರ್ಭಗಳಿವೆ.

ರಕ್ತದಾನದಿಂದ ಹಾನಿ ಇದೆಯೇ?

ಆರೋಗ್ಯವಂತನಾದ ಸ್ತ್ರೀ ಯಾ ಪುರುಷನು ಸ್ವಲ್ಪ (೩೫೦-೪೦೦ cc; ಒಂದು ಬಾಟ್ಲಿ) ರಕ್ತವನ್ನು ಮೂರು ತಿಂಗಳಿಗೊಮ್ಮೆ ಕೊಡುವುದರಿಂದ ಯಾವ ಹಾನಿಯೂ ಇಲ್ಲ. ಕೊಟ್ಟ ರಕ್ತವು ಕೆಲವೇ ದಿನಗಳಲ್ಲಿ ತಿರಿಗಿ ದೇಹದಲ್ಲಿ ಉಂಟಾಗುತ್ತದೆ. ಹೀಗಾಗಿ ಸುಶಿಕ್ಷಿತರೆಲ್ಲರೂ ರಕ್ತದ ಮೌಲ್ಯವನ್ನು ಅರಿತು, ರಕ್ತದಾನ ಮಾಡಲು ಮುಂಬರಬೇಕು. ಅಲ್ಲದೆ, ಸ್ಥಳೀಯ ಇಲ್ಲವೆ ಹತ್ತಿರದ ರಕ್ತನಿಧಿಗೆ ಹೋಗಿ ರಕ್ತವನ್ನು ಕೊಡುವುದಲ್ಲದೆ, ಅವಶ್ಯ ಬಿದ್ದಾಗ ತಮ್ಮನ್ನು ಕರೆಯುವಂತೆ ಕೇಳಿಕೊಳ್ಳುವುದೂ ಸಹಜ.

ಪಾಶ್ಚಾತ್ಯ ದೇಶಗಳಲ್ಲಿ ಮತ್ತು ಅಮೇರಿಕಾದಲ್ಲಿ ಸಾವಿರಾರು ರಕ್ತನಿಧಿಗಳಿವೆ. ಎಲ್ಲರೂ ಅವುಗಳ ಮಹತ್ವವನ್ನು ಅರಿತಿದ್ದಾರೆ. ಅಲ್ಲಿ ಪ್ರತಿಯೊಬ್ಬ ಸುಶಿಕ್ಷಿತ ನಾಗರಿಕನೂ ರಕ್ತದಾನಮಾಡಲು ಹಿಂಜರಿಯುವುದಿಲ್ಲ. ಆದುದರಿಂದ ಅಲ್ಲಿಯ ರಕ್ತನಿಧಿಗಳು ಹಲವರ ಜೀವವನ್ನುಳಿಸುವ ಮಹತ್ಕಾರ್ಯವನ್ನು ಸಾಧಿಸುತ್ತವೆ.

ಭಾರತ ರಾಷ್ಟ್ರನಿರ್ಮಾತಾ ವಿಶ್ವಾದರ್ಶನೇತಾ
ಪಂಡಿತ ಜವಾಹರಲಾಲ ನೆಹರುಗಳ
ಜನನಕಾಲ ಗ್ರಹ ಸ್ಥಿತಿ

ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ ೧೮೧೧ ವಿರೋಧಿ ಸಂವತ್ಸರದ ತುಲಾ ಮಾಸ ೩೦ ಕಾರ್ತಿಕ ಬಹುಳ ೬ ಸಹಿತ ೭ಯಃ ಗುರುವಾರ ರಾತ್ರಿ ಸಿಂಹ ಲಗ್ನದಲ್ಲಿ ಜನನ. ಕ್ರಿಸ್ತ ದಿನಾಂಕ ೧೪—೧೧—೧೮೮೯.

ಸ್ಪಷ್ಟ ಗ್ರಹರು

ರವಿ	೬	೨೯	೧೫.
ಚಂದ್ರ	೩	೨೩	೨೦.
ಕುಜ	೫	೭	೪೦.
ಬುಧ	೬	೧೩	೨೫.
ಗುರು	೮	೧೬	೩೫.
ಶುಕ್ರ	೬	೮	೨೫.
ಶನಿ	೪	೧೩	೩೫.
ರಾಹು	೨	೧೨	೪೯.
ಹರ್ಷಲ್	೬	೪	೩೫.
ನೆಪ್ಚ್ಯೂನ್	೧	೧೩	೫.

ಯೋಗ: ಶನಿ ಶುಕ್ರ ಬುಧರ ತ್ರಿರೇಕಾದಶ ಸ್ಥಿತಿ. ಶನಿ ಗುರು ತ್ರಿಕೋಣ ಸ್ಥಿತಿ. ಶನಿ ನೆಪ್ಚ್ಯೂನ್ ಕೇಂದ್ರ ಸ್ಥಿತಿ. ಶನಿ ರಾಹು ತ್ರಿರೇಕಾದಶ ಸ್ಥಿತಿ. ಮಂಗಳ ರಾಹು ಕೇಂದ್ರ ಸ್ಥಿತಿ, ಕುಜ ನೆಪ್ಚ್ಯೂನ್ ತ್ರಿಕೋಣ ಸ್ಥಿತಿ. ರವಿ ಚಂದ್ರ ಕೇಂದ್ರ ಸ್ಥಿತಿ. ಮಂಗಳ ಹರ್ಷಲ್ ದ್ವಿದ್ವಾರ್ದಶ ಸ್ಥಿತಿ. ಶುಕ್ರ ಬುಧ ಯುತಿ, ರಾಹು ತ್ರಿಕೋಣ ಸ್ಥಿತಿ. ಗುರು ರಾಹು ಪ್ರತಿ ಯೋಗ ಸ್ಥಿತಿ. ಕುಜ ಗುರು ಕೇಂದ್ರ ಸ್ಥಿತಿ. ಬುಧ ಶುಕ್ರ ನೆಪ್ಚ್ಯೂನ್ ಷಡಷ್ಟಕ ಸ್ಥಿತಿ. ಧನದಲ್ಲಿ ಭಾಗ್ಯಾಧಿಪನ ಸ್ಥಿತಿ. ಲಗ್ನ ಕರ್ಮ ಧನ ಲಾಭಾಧಿಪರ ಯುತಿ ತೃತೀಯದಲ್ಲಿ. ರವಿಯಿಂದ ನೀಚ ಭಂಗ ರಾಜಯೋಗ. ರಾಹು ಕೇತು ಮಧ್ಯೇ ಸಪ್ತಗ್ರಹಾಃ ತೃತೀಯ ಪಂಚಮಾಧಿ ಪರಸ್ಪರಕ್ಷೇತ್ರ ಸ್ಥಿತಿ. ಚಂದ್ರನ ಸ್ವಕ್ಷೇತ್ರ ಸ್ಥಿತಿ. ಶಿಷ್ಟ ಬುಧದಶಾ ವರುಷ ೮, ಮಾಸ ೬, ದಿನ ೦.

		ನೆಪ್ಚ್ಯೂನ್ ೧	ರಾಹು ೧೦
	ಸಾಂಶಕ ಗ್ರಹರು		ಚಂದ್ರ ೧೦
			ಲಗ್ನ ೫ ಶನಿ ೪
ಕೇತು ೪ ಗುರು ೫		ರವಿ ೩ ಶುಕ್ರ ೯ ಬುಧ ೧೧ ಹರ್ಷಲ್ ೮	ಕುಜ ೧೨

ಮಹಾದಶೆಗಳು =	೮	—	೬	—	೦	ಬುಧ.
	೭	—	೦	—	೦	ಕೇತು.
	೨೦	—	೦	—	೦	ಶುಕ್ರ.
	೬	—	೦	—	೦	ರವಿ.
	೧೦	—	೦	—	೦	ಚಂದ್ರ.
	೭	—	೦	—	೦	ಕುಜ.
	೧೮	—	೦	—	೦	ರಾಹು.

ಈಗ ಪಂಡಿತ ನೆಹರುದಳಿಗೆ ರಾಹುದಶೆ ನಡೆಯುತ್ತಿರುವುದು. ನೆಹರುಗಳಿಗೆ ರಾಹುದಶಾ ಗುರುಭುಕ್ತಿಯ ಕಾಲದಲ್ಲಿ ಭಾರತ ರಾಷ್ಟ್ರವು ಸ್ವತಂತ್ರವಾಯಿತು. ಇವರ ಕುಂಡಲಿಯಲ್ಲಿ ರವಿಯು ನೀಚ ರಾಶಿಯಲ್ಲಿದ್ದು ಶನಿ ದೃಷ್ಟನಾಗಿರುವನು. ದಶಮದಲ್ಲಿ ಹರ್ಷಲ್ ಇರುತ್ತಾನೆ. ಲಗ್ನಾಧಿಪನ ಶತ್ರು ಗ್ರಹನು ಶನಿ ಇರುತ್ತಾನೆ. ಇದರಿಂದ ರಾಜಕೀಯದಲ್ಲಿ ತುಂಬಾ ಕಷ್ಟವನ್ನು ಹೊಂದಿದರು. ಶನಿಯು ತ್ರಿಕೋಣದಲ್ಲಿ ಗುರುವು ಇರುವುದರಿಂದ ಲಗ್ನ ಕರ್ಮಾಧಿಪರ ಯುತಿ ತೃತೀಯಾಧಿಪತಿಯೊಡನೆ (ಶುಕ್ರನೊಡನೆ) ಮತ್ತು ಬುಧನೊಡನೆ ಸಂಯೋಗವಾದುದರಿಂದ ಎಲ್ಲಾ ಕಷ್ಟಗಳಿಂದ ನಿವೃತ್ತರಾದರು. ಅದಲ್ಲದೆ

ಕೆಲಸದಲ್ಲಿ ಮುಂದರಿಯುವ ಸಾಹಸ,ಬುದ್ಧಿ ಶಕ್ತಿ,ಕಾರ್ಯಸಿದ್ಧಿ, ಉತ್ಕರ್ಷ, ಜಯಲಾಭ, ಸಾತ್ವಿಕತೆ, ಕಾರ್ಯಪರ ಜಾಗೃತಿಗಳುಂಟಾದುವು. ರಾಹುವಿನ ತ್ರಿಕೋಣ ಕೇಂದ್ರಗಳಲ್ಲಿ ಶುಕ್ರ ಬುಧರು ಮತ್ತು ಗುರುವು ಇರುವುದರಿಂದ ರಾಹುವು ಇಷ್ಟ ಕಾರಕನಾದನು. ರಾಹುವು ಇರುವ ಮನೆಯ ಅಧಿಪತಿ ಬಲಿಷ್ಠನಾಗಿ ಅವನ ತ್ರಿಕೋಣದಲ್ಲಿ ಶುಕ್ರಯುತನಾದ್ದರಿಂದ ರಾಹುವು ಹಿತಕಾರಕನಾದನು. ತೃತೀಯ, ಪಂಚಮ ಭಾಗ್ಯಗಳು ಭಾಗ್ಯ ವಿಷಯದಲ್ಲಿ ಮುಖ್ಯವೆಂದು 'ಪ್ರಭಾತ' ವಾಚಕರು ಭಾಗ್ಯವಿಚಾರ ಫಲ ಚಿಂತನೆಯಲ್ಲಿ ಈ ಮೊದಲೇ ಓದಿರುವಿರಿ. ಈ ಕುಂಡಲಿಯನ್ನು ನೋಡಿದಾಗ ಅದು ಎಷ್ಟು ಸತ್ಯವೆಂಬುದು ವಿಶದವಾಗುವುದು. ಶುಕ್ರ, ಗುರುಗಳು ತಮ್ಮ ಮನೆಯಲ್ಲಿರುತ್ತಾರೆ. ಇವರು ತೃತೀಯ ಪಂಚಮಾಧಿಪರು. ನವಮಾಧಿಪ ಕುಜ. ಈ ಕುಜನು ದ್ವಿತೀಯದಲ್ಲಿ ಭಾಗ್ಯ ಸುಖಾಧಿಪತಿಯಾಗಿರುವುದರಿಂದ ಇವರ ಮಾತುಗಳು ತೀವ್ರ ಮತ್ತು ಸೀದಾ ಸರಳ ನಿಶ್ಚಿತ ನಿರ್ಧಾರದವುಗಳಾಗಿರುತ್ತವೆ. ನುಡಿಯಲ್ಲಿ ಅಳುಕು ಕಲ್ಮಶಗಳಿರುವುದಿಲ್ಲ. ರವಿಗಿಂತ ಶುಕ್ರನು ಬಲಿಯಾದ್ದರಿಂದ ತಂದೆಗಿಂತ ಮಗನು ಹೆಸರುವಾಸಿಯಾದನು. ತಾ. ೨೬—೪—೧೯೫೧ರಿಂದ ತಾ. ೧೪—೧೧—೧೯೫೭ರ ವರೆಗೆ ರಾಹುದಶಾ ಬುಧ ಭುಕ್ತಿ ಇದೆ. ಈ ಬುಧ ಭುಕ್ತಿಯು ನೆಹರುಗಳಿಗೆ ಉತ್ತಮವಾಗಿಯೇ ಇದೆ. ಈ ಬುಧನು ಧನ ಲಾಭಾಧಿಪತಿಯಾಗಿರುತ್ತಾನೆ. ಇದರಿಂದ ಬಂಧುಗಳಿಗೂ ಬಂಧು ರಾಷ್ಟ್ರಕ್ಕೂ ಬಹಳವಾಗಿ ದುಡಿಯುವರು, ಪಾಶ್ಚಾತ್ಯ ರಾಷ್ಟ್ರಗಳು ಭಾರತ ಪ್ರಧಾನರನ್ನು ತಮ್ಮ ಸಹಾಯಕ್ಕಾಗಿ ಕೇಳಿಕೊಳ್ಳುವರು. ಅವರಿಗುಂಟಾಗುವ ಕಷ್ಟಗಳ ನಿವಾರಣೆಗೆ ಮಾರ್ಗದರ್ಶಕರಾಗುವರು. ಅನ್ಯ ರಾಷ್ಟ್ರಗಳ ಮಧ್ಯಸ್ಥ ಪುರುಷನಾಗಿ ಅವರಿಂದ ಗೌರವವನ್ನು ಹೊಂದುವ ಯೋಗವಿದೆ. ವಿದೇಶ ಪ್ರವಾಸವಿರುತ್ತದೆ. ಪ್ರವಾಸದ ಮೂಲಕ ತುಂಬಾ ಯಶಸ್ವಿಗಳಾಗುವರು. ಈ ವರುಷ ಮಿಥುನಕ್ಕೆ ಗುರು ಸೇರುವ ಕಾಲದಲ್ಲಿ ನೆಹರುಗಳ ಕೀರ್ತಿಪ್ರತಿಷ್ಠೆಯು ಅಧಿಕವಾಗುತ್ತದೆ. ಸಪ್ಟಂಬರದಿಂದ ನವಂಬರ ಕೊನೆಯ ವರೆಗಿನ ಕಾಲವು ಅತಿ ಮಹತ್ವದ್ದಾಗಿರುತ್ತದೆ. ರಾಹುವು ಇರುವ ಮನೆಯ ಅಧಿಪನು ಬುಧನಾಗಿರುವುದರಿಂದ ಬುಧನು ಅತಿ ಶಕ್ತಿಯುಳ್ಳವನಾಗಿದ್ದಾನೆ. ಈಗ ಶನಿ ತುಲೆಯಲ್ಲಿರುವನು. ಶನಿಯು ಅಲ್ಲಿರುವನಾದರೂ ರವಿಯ ಏಕಾಂಶ ಸಂಯೋಗವನ್ನು ಹೊಂದುವುದಿಲ್ಲ. ಈ ಕಾರಣದಿಂದ ತುಲಾ ಶನಿಚಾರ ಕಾಲದಲ್ಲಿ ಅನಿಷ್ಟವು ಈಗ ಎರಡು ವರುಷಗಳಲ್ಲಿ ಕಂಡುಬರುವುದಿಲ್ಲ. ಮುಂದೆ ಉಂಟಾಗುವ ಯುತಿಯು ಹೃದಯ ಮತ್ತು ಉದರದೋಷಗಳಿಗೆ ಕಾರಣವಾಗಿರುತ್ತದೆ. ಕುಜನು ಸ್ವಕ್ಷೇತ್ರಗತನಾಗಿ ಮಾರ್ಚಿಯಲ್ಲಿ ಕಂಡುಬರುವನು. ಕುಜನು ಮೇಷದಲ್ಲಿರುವ ಕಾಲ ತುಂಬಾ ಉನ್ನತಿಯ ಕಾರ್ಯಗಳನ್ನು ಭಾರತ ವಿಷಯದಲ್ಲಿ ಸಾಧಿಸಲಿರುವರು. ಭಾರತದ ರಾಜ್ಯಾಂಗ ಘಟನೆಯಲ್ಲಿ ಅತಿ ಮುಖ್ಯವಾದ ನ್ಯಾಯ ಶಾಸನೆ ಮತ್ತು ರಾಷ್ಟ್ರೀಯ ನಿರ್ಮಾಣದ ಸುವ್ಯವಸ್ಥಿತ ಧೋರಣಾ ರೂಪರೇಖೆಗಳನ್ನು ರಚಿಸಲಿರುವರು. ನೆಹರುಗಳು ಕೈಕೊಂಡ ಕೆಲಸಗಳೆಲ್ಲಾ ಯಶಸ್ವಿಗಳಾಗಿಯೇ ಬರುವವು. ಕೇತು ಶುಕ್ರ ಭುಕ್ತಿಗಳು ಉತ್ತಮ; ಮುಂದೆ ಉತ್ತಮಗಳಾಗಿವೆ. ಭಾರತದ ಬಿಕ್ಕಟ್ಟಿನ ನೆಲೆಯನ್ನು ಈ ಬುಧ ಭುಕ್ತಿಯಲ್ಲಿ ಕೊನೆಗೊಳಿಸುವರು. ಕಾಶ್ಮೀರ ಸಮಸ್ಯೆ ಕೇತು ಭುಕ್ತಿಯಲ್ಲೇ ಪೂರ್ಣವಾಗುವುದು. ಅದರ ಬಗೆಹರಿಸುವ ಮಹತ್ವದ ಘಟನೆಗಳು ವೃಷಭ ಗುರುಚಾರದಿಂದುಂಟಾಗುತ್ತವೆ. ದಶಮದಲ್ಲಿ ಗುರುವು ನೆಹರುಗಳಿಗೆ ಬರುತಿದ್ದು ಅವರ ಕೀರ್ತಿಪ್ರಭೆ ಇನ್ನೂ ೧೯೫೭ರಲ್ಲಿ ವಿಶ್ವದಲ್ಲಿ ಅತಿಶಯವಾಗಿ ಬೆಳಗಲಿರುವ ಯೋಗವಿರುತ್ತದೆ. ವೃಷಭದ ಗುರುಚಾರ ನೆಹರುಗಳ ಕೀರ್ತಿಯ ಹಬ್ಬುವಿಕೆ ಅತಿ ಮುಖ್ಯವಾದ ಕಾಲವಾಗಿರುತ್ತದೆ. ಸ್ವಾತಂತ್ರ್ಯದ ಸಿದ್ಧಿಯು ಕಾಲ ತುಲಾ ಗುರುಚಾರ ಕಾಲನಾಗಿದ್ದಿತು. ಇನ್ನು ಅದೇ ಗುರುವು ತುಲೆಯಂತೆ ವೃಷಭದಲ್ಲೂ ರಾಜಕೀಯದಲ್ಲಿ ಓಜೋಪೂರ್ಣವಾದ ಸ್ಥಾನಮಾನಗಳನ್ನು ಸಲ್ಲಿಸಿ ನಮ್ಮ ಭಾರತದ ಪ್ರಿಯ ಜನಕರಾಗುವರು. ಮಹಾತ್ಮಾ ಗಾಂಧೀಜಿ "The nation is safe in his hands" ಎಂದು ನೆಹರುಗಳ ಕುರಿತು ಹೇಳಿದ ಮಾತು ಪೂರ್ಣ ಸತ್ಯಪ್ರಾಯವಾಗಿ ಫಲಿಸುವುದನ್ನು ನಾವು ಕಾಣಲಿರುವೆವು.

ಎಮ್. ಸುಬ್ರಾಯನ್
೨೬—೧—೫೭.



ಒಂದು ಚಾರಿತ್ರಿಕ ಕಥೆ:

ತುರ್ಕಿಯ ಗುಲಾಮ

(ಲೇಖಕರು: ಶ್ರೀ। ಬಿ. ವಿ. ಬಾಳಿಗ, ಮಂಗಳೂರು)

ಘಜನಿಯ ಮುಖಂಡ ಅಬ್ದುಲ್ ಮಲೀಕನಲ್ಲಿ ಸಹನೆ ಎಲ್ಲ ಇಂಗಿಹೋಗಿತ್ತು. ತನ್ನ ವಜೀರನೊಡನೆ ಆತ ಕುಳಿತಿದ್ದ ಕೊಠಡಿಗೆ ಸಮೀಪದಲ್ಲೇ ಸುಲ್ತಾನನ ಅಂತಃಪುರವಿತ್ತು. ಸಂಗೀತದ ಮಧುರಧ್ವನಿ, ನಡುನಡುವೆ ನಗೆಯ ಕೋಲಾಹಲ, ಆ ಕೊಠಡಿಯಿಂದ ಈ ಕೊಠಡಿಗೆ ಸರಿಯಾಗಿ ಕೇಳಿ ಬರುತ್ತಿದ್ದುವು. ಸಹನೆಯು ಕಟ್ಟು ಸಡಿಲಾದ ಅಬ್ದುಲ್ ಮಲೀಕನು ಗಳಿಗೆಗೊಮ್ಮೆ ಅಮೃತಶಿಲೆಯ ನೆಲದ ಮೇಲೆ ಕಾಲು ಮೆಟ್ಟುತ್ತಿದ್ದನು.

ಕೋಮಲಾಂಗಿಯರ ಸ್ವರ; ಹರಿಣಾಕ್ಷಿಯರ ಕಿಲಕಿಲ ನಗು! ಅಬ್ದುಲ್ ಮಲೀಕನ ಕಣ್ಣುಗಳು ಕಿಡಿಗಾರಿದುವು. ಒಮ್ಮೆಲೇ ರೌದ್ರಾವೇಶವು ಅವನ ಮುಖಚರ್ಯೆಯನ್ನೇ ಕೆಡಿಸಿಬಿಟ್ಟಿತು.

"ಬಂದು ಒಂದು ತಾಸು ಸಂದುಹೋಯಿತು. ಇನ್ನೆಷ್ಟು ಕಾಯುವುದು ಸಬಕ್?" ಎಂಬ, ಸಹನೆಕೆಟ್ಟ ಅವನ ನುಡಿಗಳು ಕೇಳಿಸಿದುವು. ಸಬಕ್ ಕಟ್ಟುನಿಟ್ಟಾದ ಮೈಕಟ್ಟಿನ ದಿಂಡಾಳು. ಕೈಯಲ್ಲಿ ಖಡ್ಗವನ್ನು ಆತ ಧರಿಸದಿದ್ದರೂ ಯೋಧನ ಕೆಚ್ಚೆದೆತನ ಅವನಲ್ಲಿ ವ್ಯಕ್ತವಾಗುತ್ತಿತ್ತು. ಹೌದು. ಖಡ್ಗವನ್ನು ಹಿಡಿಯುವ ಹಕ್ಕು ಅವನಿಗಿರಲಿಲ್ಲ. ಬಾಲ್ಯದಲ್ಲೇ ಅವನ ಹೆತ್ತವರು ಅಬ್ದುಲ್ ಮಲೀಕನಿಗೆ ಗುಲಾಮನನ್ನಾಗಿ ಅವನನ್ನು ಮಾರಿದ್ದರು. ಬಾಲ್ಯ ದಾಟಿ ಸಬಕನು ತಾರುಣ್ಯಕ್ಕೆ ಕಾಲಿಡುವಾಗಲೇ ಮಲೀಕನಿಗೆ ಅವನ ಯೋಗ್ಯತೆಯ ಪರಿಚಯವಾಗಿತ್ತು. ಅವನಿಗೆ ಮೇಲಿಂದ ಮೇಲೆ ಭಡತಿಯನ್ನು ಕೊಟ್ಟು ಘಜನಿಯ ಜನಪ್ರೀತ ವಜೀರನ ಸ್ಥಾನಕ್ಕೂ ಏರಿಸುವಷ್ಟು ಮಲೀಕನು ಸಬಕನ ಕುರಿತು ಉದಾರತೆ ಪ್ರದರ್ಶಿಸಿದ್ದನು.

ಗುಲಾಮಗಿರಿಯ ಭಾರ ಮಾತ್ರ ಮತ್ತೂ ಉಳಿದಿತ್ತು. ಬದುಕಿರುವಷ್ಟು ಕಾಲ ಕರವಾರ ಧರಿಸುವ ಇಲ್ಲವೆ ಸ್ವತಂತ್ರವಾಗಿ ಹುಟ್ಟಿದ ಓರ್ವ ಹೆಣ್ಣನ್ನು ಪ್ರೀತಿಸುವ ಹಕ್ಕು ಗುಲಾಮನೆನಿಸಿದವನಿಗೆ ಇರಲಿಲ್ಲ ಆ ಕಾಲದಲ್ಲಿ.

ಅಬ್ದುಲ್ - ಮಲೀಕನು ಕೂತ ಪೀಠದಿಂದ ಎದ್ದು, "ಇನ್ನು ಇದನ್ನು ಸಹಿಸುವುದು ನನ್ನಿಂದ ಸಾಧ್ಯವಿಲ್ಲ ಸಬಕ್. ಬಾ, ನಮ್ಮನ್ನು ಇಷ್ಟು ಹೊತ್ತು ಇಲ್ಲಿ ಕಾಯಿಸುವಂತಹ ಅವಸರದ ಬೇರೆ ಕೆಲಸವಾದರೋ ಬಾದಶಹರಿಗೇನಿತ್ತೆಂಬುದನ್ನು ನೋಡಿಯೇ ತೀರಬೇಕು" ಎನ್ನುತ್ತ ಮಲೀಕನು ಸುಲ್ತಾನರ ಅಂತಃಪುರದ ಕಡೆಗೆ ಮುಂದಾದನು.

ಚಿತ್ರ-ವಿಚಿತ್ರ ಕಸೂತಿ ಕೆಲಸದಿಂದ ಮುಚ್ಚಲ್ಪಟ್ಟ ಪರದೆಗಳು ಅಲ್ಲಲ್ಲಿ ತೂಗುತ್ತಿದ್ದುವು. ಸುಲ್ತಾನನು ಕುಳಿತಿದ್ದ ಕೊಠಡಿ ಇನ್ನಷ್ಟು ಶೋಭಾಯಮಾನವಾಗಿತ್ತು. ಸುಗಂಧ ಪುಷ್ಪಗಳನ್ನು ಇಟ್ಟಿದ್ದ ಪುಷ್ಪಪಾತ್ರೆಗಳು ಅಲ್ಲಲ್ಲಿ ಇರಿಸಲ್ಪಟ್ಟಿದ್ದುವು. ರೇಶ್ಮೆಯ ವಸ್ತ್ರದಿಂದ ಮುಚ್ಚಿದ ಸುಂದರ ತಲೆದಿಂಬುಗಳಿಗೆ ಒರಗಿ ಸುಲ್ತಾನ್ ಇಶಾಕ್ ವಿಲಾಸಮಗ್ನನಾಗಿದ್ದನು. ಗುಲಾಮ ಕನ್ಯೆಯೋರ್ವಳು ದೂರದಲ್ಲಿ ಕುಳಿತು ಪಂಕವನ್ನು ತೂಗುತ್ತಿದ್ದಳು. ಬೇರೆ ದಾಸೀಜನರು ಅಲ್ಲಲ್ಲಿ ನಿಂತುಕೊಂಡಿದ್ದರು.

'ನಿಮಗೆ ನಾನು ಕರೆ ಕಳುಹಿದೆನೆ?' ಅನಿರೀಕ್ಷಿತವಾಗಿ ಒಳಗೆ ಬಂದ ಮಲೀಕನನ್ನು ಉದ್ದೇಶಿಸಿ ಸುಲ್ತಾನನು ಕೇಳಿದನು.

"ಜಹಾಪನಾ! ನನ್ನ ಸ್ವಂತ ಇಚ್ಛೆಯಂತೆ ಬರುವುದಿದ್ದರೆ ನನ್ನ ಕುವರಿಯೊಂದಿಗೆ ನಿಮ್ಮ ವಿವಾಹ ಜರಗುವ ಈ ಸುಖದ ಅರುಣೋದಯ ಕಾಲದಲ್ಲಿ ರಾಜಕೀಯ ಗೊಂದಲದ ಈ ಸುದ್ದಿ ಹೊತ್ತು ಬರಬೇಕಾದ ಪ್ರಮೇಯವಿರಲಿಲ್ಲ. ಆದರೆ, ಘಜನಿಯಿಂದ ಗಂಡಾಂತರದ ಸಮಾಚಾರವಿದೆ" ಎಂದು ಮಲೀಕ ವಿನಮ್ರವಾಗಿ ನುಡಿದ.

ತರುಣ ಸುಲ್ತಾನನು ದೀರ್ಘಶ್ವಾಸವನ್ನೆಳೆದ.

'ಹುಜೂರ್! ಘಜನಿಯ ಪ್ರಜೆಗಳ ಕುರಿತು ಕರುಣೆ ತೋರಿಸಿರೆಂದು ಹಲವು ಬಾರಿ ನಿಮ್ಮೊಡನೆ ಅಂಗಲಾಚಿ ಬೇಡಿಕೊಂಡೆ. ದಾರುಣವಾದ ಕ್ಷಾಮದ ದವಡೆಯಿಂದ ದೇಶವು ಇನ್ನೂ ಚೇತರಿಸಿಕೊಂಡಿಲ್ಲ. ಹೀಗಿರುವಾಗ ಹೆಚ್ಚೆಚ್ಚು ತೆರಿಗೆಯನ್ನು ಅವರು ಎಲ್ಲಿಂದ ತೆರಬೇಕು? ಆ ಕುರಿತು ಜನರಲ್ಲಿ ಅತೃಪ್ತಿಯು ಮೇರೆ ಮೀರಿದ ವಾರ್ತೆ ಮೇಲಿಂದ ಮೇಲೆ ಕೇಳಿ ಬರುತ್ತದೆ. ಇಷ್ಟಾದರೂ ನೀವು ವಿಲಾಸಮಗ್ನರಾಗಿ ವ್ಯರ್ಥ ಕಾಲಹರಣ ಮಾಡುತ್ತಿರುವಿರಲ್ಲ!' ಮಲೀಕನ ದೀನ ವಾಣಿ ಮತ್ತೊಮ್ಮೆ ಕೇಳಿಸಿತು.

ಸಮಯ ಒದಗಿದಾಗಲೇ ಸುಖಪಡಬೇಕು ಮಲೀಕ್! ನಮ್ಮ ವಿಲಾಸ ಇನ್ನೂ ಕೆಲವು ದಿನ ಇದೇ ರೀತಿ ನಡೆಯುವುದಿದೆ" ಸುಲ್ತಾನರು ಬೆಳ್ಳಿಯ ತಟ್ಟೆಯಲ್ಲಿರುವ ಪಾನೀಯವನ್ನು ಮೇಲಕ್ಕೆತ್ತುತ್ತ ಹೇಳಿದರು.

ಅಬ್ದುಲ್ ಮಲೀಕ್ ನಿಂತಲ್ಲಿಂದ ಕದಲಲಿಲ್ಲ. 'ಪ್ರಭೋ, ಶೀಘ್ರಗಮನ ಕೊಡಬೇಕಾದ ವಿಷಯವಾದುದರಿಂದ ನಿಮಗೆ ಅದರ ಕುರಿತು ಮನವರಿಕೆ ಮಾಡುವುದೂ ನನ್ನ ಕರ್ತವ್ಯವಾಗಿದೆ. ನನ್ನಜನರ ಹಿತದ ಪ್ರಶ್ನೆಯನ್ನು ನಾನು ಲಕ್ಷಿಸಲೇಬೇಕಾಗಿದೆ. ಘಜನಿಯ ಮುಖಂಡನ ಬಳಕೆಯಲ್ಲಿ ನನ್ನ ಅಧಿಕಾರವಾಣಿಯನ್ನು ಲಕ್ಷಿಸಲು ಉಪೇಕ್ಷಿಸುವಿರಾದರೆ ನಿಮ್ಮ ಭಾವೀ ಮಾವನ ಬಳಕೆಯಲ್ಲಾದರೂ ಸ್ನೇಹಹಸ್ತದಿಂದ ನನ್ನನ್ನು ಸ್ವೀಕರಿಸಿ, ನನ್ನ ಮನವಿಯನ್ನು ಮಾನ್ಯಮಾಡಿರೆಂದು ಬೇಡಿಕೊಳ್ಳುತ್ತೇನೆ."

ಸುಲ್ತಾನನ ಮುಖದಲ್ಲಿ ಮುಗುಳ್ನಗೆಯೊಂದು ಮೂಡಿತು. "ಒಹೋ–ಎಂದರೆ ಆ ಹುಚ್ಚು ಹುಡುಗಿ ಝೀನತ್! ಹೂಂ, ಅವಳ ವಿಚಾರ ನನಗೆ ಮರೆತೇ ಹೋಗಿತ್ತು" ಎಂದು ಆ ಮುಗುಳ್ನಗೆಯ ಮರೆಯಲ್ಲಿ ಮಾತು ಹೊರಟಿತು ಸುಲ್ತಾನರ ತುಟಿಗಳೆಡೆಯಿಂದ.

ಅಬ್ದುಲ್ ಮಲೀಕನ ಕಣ್ಣುಗಳಲ್ಲಿ ಮಿಂಚಿನ ರೇಖೆಯೊಂದು ಝಗ್ಗೆಂದು ಮೂಡಿತು. ವಜೀರನಾದ ಸಬಕನ ಕಣ್ಣುಗಳಲ್ಲಿಯೂ ರೋಷಾಗ್ನಿಯು ಪ್ರಜ್ವಲಿಸುತ್ತಿತ್ತು.

"ಸುಲ್ತಾನರೆ! ನನ್ನ ಮಗಳನ್ನು ಈ ಅಲ್ಪ ಜನರ ಮುಂದೆ ಹೀನೈಸಿ ಮಾತನಾಡಿದುದರ ಕುರಿತು ಎಚ್ಚರವಿರಲಿ!' ಎನ್ನುತ್ತ ಅಬ್ದುಲ್ ಮಲೀಕನು ಅಲ್ಲಿ ಕೂಡಿದ ದಾಸೀಜನರ ಮತ್ತು ಗುಲಾಮಕನ್ಯೆಯರ ಕಡೆಗೆ ತಾತ್ಸಾರದೃಷ್ಟಿಯಿಂದ ನೋಡಿದನು.

ಮರುಕ್ಷಣದಲ್ಲೇ ಸುಲ್ತಾನನ ಮುಖದ ಮೇಲೆ ಸುಳಿಯುತ್ತಿದ್ದ ಮುಗುಳ್ನಗೆ ಮಾಯವಾಯಿತು.

"ಯಾರೊಡನೆ ಮಾತನಾಡುವಿರೆಂಬ ಎಚ್ಚರವಾದರೂ ನಿಮಗಿದೆಯೇ? ನನ್ನ ಅಂತಃಪುರದಲ್ಲಿ ಮುಂದಾಗಿ ಅಪ್ಪಣೆ ಕೇಳದೆ ಪ್ರವೇಶಿಸಿದುದಲ್ಲದೆ, ಇಷ್ಟು ಹೊತ್ತು ಇಲ್ಲಿ ನಿಂತು ನೀವೂ ನಿಮ್ಮ ಗುಲಾಮನೂ ನನಗೆ ದೊಡ್ಡ ಅವಮಾನ ಮಾಡಿರುವಿರಿ. ನಿಮ್ಮ ಅವಶ್ಯವಿದ್ದರೆ ನಾವು ಕರೆಕಳುಹುವೆವು" ಎಂಬ ಬಿರುನುಡಿಗಳು ಸುಲ್ತಾನರ ಬಾಯಿಂದ ಹೊರಟುವು.

"ಹಾಗೆಯೇ ಆಗಲಿ ಹುಜೂರ್! ಆದರೆ, ನಿಮ್ಮ ಕರೆ ಬರುವಾಗ ಕಾಲಮೀರಿ ಹೋಗದಂತೆ ನೋಡಿಕೊಳ್ಳಿ"ಎನ್ನುತ್ತ, ಮಲೀಕನು ಸಬಕನನ್ನು ಜೊತೆಯಲ್ಲಿ ಕರಕೊಂಡು, ಮುಂದೆ ಒಂದು ಕ್ಷಣವೂ ನಿಲ್ಲದೆ ಅಲ್ಲಿಂದ ಹೊರಬಿದ್ದನು.

ಅಂತಃಪುರದಿಂದ ಅವರು ಅರಮನೆಯ ಉದ್ಯಾನವನ್ನು ಸೇರುವಾಗ ಸಬಕ್ ಒಮ್ಮೆ ತನ್ನ ಮಾಲಿಕನ ಕಡೆಗೆ ದೃಷ್ಟಿ ಹೊರಳಿಸಿದ.

"ಸುಲ್ತಾನನೊಡನೆ ನನ್ನ ವ್ಯವಹಾರ ಇಂದಿಗೆ ಮುಗಿಯಿತು. ನನ್ನ ಕುವರಿ ಯಾವ ಕಾಲಕ್ಕೂ ಅವನನ್ನು ವರಿಸಲಾರಳು. ಮಾತ್ರವಲ್ಲ, ಇಂದಿನಿಂದ ನಾನು ಅವನ ಅಧಿಕಾರವನ್ನೂ ಮಾನ್ಯಮಾಡುವುದಿಲ್ಲ. ನನ್ನ ಸ್ವಂತ ಅಧಿಕಾರದಿಂದ ಇನ್ನು ಮುಂದೆ ಘಜನಿಯನ್ನು ಆಳುವೆನು. ಅವನ ಕ್ರೂರ ದಬ್ಬಾಳಿಕೆಯನ್ನು ನನ್ನ ಜನರು ಮುಂದೆ ಎಂದೂ ಸಹಿಸಲಾರರು" ಎಂಬ ಉದ್ಗಾರವು ಮಲೀಕನ ಬಾಯಿಂದ ತನ್ನಿಂದ ತಾನೇ ಹೊರಟಿತು.

"ಹಾಗಾದರೆ ಅವನ ಸೇನಾವಾಹಿನಿಯು ಘಜನಿಯ ಮೇಲೆ ದಂಡೆತ್ತಿ ಬಾರದಿರುವುದೇ ಒಡೆಯಾ?" ಸಬಕನ ಕುತೂಹಲದ ಪ್ರಶ್ನೆ.

"ಘಜನಿಯನ್ನು ಗೆಲ್ಲುವುದು ಅವನಿಗೆ ಎಂದೂ ಸಾಧ್ಯವಾಗದು. ಸುಭದ್ರ ದುರ್ಗದಂತಿರುವ ಘಜನಿಯನ್ನು ಗೆಲ್ಲುವುದು ಸುಲಭವಲ್ಲವೆಂಬುದನ್ನು ಆತ ಚೆನ್ನಾಗಿ ಬಲ್ಲ. ಆದರೂ ನಾವು ಆದಷ್ಟು ತೀವ್ರ ಅಲ್ಲಿಗೆ ಸೇರಬೇಕು. ಅವನ ಸೇಡು ನಮ್ಮ ಮೇಲೆ ತಿರುಗುವುದರೊಳಗೆ ನಾವು ಅವನ ರಾಜ್ಯದ ಎಲ್ಲೆಯಿಂದ ಕಾಲು ಕೀಳಬೇಕು. ನಾವು ಇಲ್ಲಿಂದ ಹೋದೆವೆಂದು ತಿಳಿದರೆ ಆತ ಕೋಪದಿಂದ ಕಿಡಿಕಿಡಿಯಾಗಬಹುದು. ಹೂಂ, ನಮ್ಮ ಜನರನ್ನು ಬೇಗನೆ ಒಂದೆಡೆ ಸೇರುವಂತೆ ಏರ್ಪಡಿಸು. ನಾನು ಈಗಲೇ ಹೋಗಿ ನನ್ನ ಮಗಳನ್ನು ಎಚ್ಚರಿಸುವೆನು" ಮಲೀಕನು ಆಣತಿ ಕೊಟ್ಟಾಯಿತು.

ಅವರು ಅಲ್ಲಿಂದ ಪಯಣಕ್ಕೆ ತೊಡಗುವುದಕ್ಕೆ ಮುಂಚೆ ಕೇವಲ ಒಂದು ಕ್ಷಣ ಸಬಕನಿಗೆ ಅಬ್ದುಲ್ ಮಲೀಕನ ಕುವರಿ ಝೀನತಳೊಡನೆ ಮಾತನಾಡುವ ಅವಕಾಶ ದೊರೆಯಿತು. ಝೀನತ್ ಘೋಷಾ ಉಡುಪು ಧರಿಸಿ ಮುಖದ ಮೇಲೆ ಬುರಕಿ ಎಳೆದಿದ್ದಳು. ಪರದೆಯ ಎಡೆಯಿಂದ ಅವಳ ದಿವ್ಯ ನಯನಗಳು ನೆಟ್ಟದಿಟ್ಟಿಯಿಂದೊಮ್ಮೆ ಸಬಕನನ್ನುದಿಟ್ಟಿಸಿದುವು.

"ಇಂತಹ ಬಂಧವಿಮೋಚನೆ ಹೇಗೆ ನನಗೆ ಲಭಿಸಿತೆಂಬುದೇ ದೊಡ್ಡ ಆಶ್ಚರ್ಯವಾಗಿದೆ. ಪ್ರಿಯಕರಾ, ಈಗ ಕೂಡಾ ಇದೊಂದು ಕನಸೆಂದೇ ನಾನು ತಿಳಿಯುತ್ತೇನೆ. ಏನು? ಇನ್ನು ಯಾವತ್ಕಾಲವೂ ಸುಲ್ತಾನನೊಡನೆ ಲಗ್ನವಾಗುವ ಅಂಜಿಕೆ ನನಗಿಲ್ಲ. ನಿನ್ನನ್ನು ಅಗಲಿಯೂ ನಾನಿರಲಾರೆ ಸಬಕ್!" ಝೀನತ್ ಘೋಷಾ ಉಡುಪಿನೊಳಗಿಂದಲೇ ಪಿಸುಗುಟ್ಟಿದಳು ಪ್ರೇಮದ ಈ ಸವಿನುಡಿಗಳನ್ನು.

"ಅಲ್ಲಾ ದೊಡ್ಡವನು. ಆದರೇನು? ನಿನ್ನನ್ನು ಪ್ರೀತಿಸುವ ಅಧಿಕಾರ ನನಗಿರುತ್ತಿದ್ದರೆ, ಗುಲಾಮನಾಗಿ ನಾನು

ಹುಟ್ಟಿದುದಲ್ಲವಾದರೆ!" ಇದಿಷ್ಟು ಉತ್ತರ ಕೊಡಲು ಮಾತ್ರ ಸಬಕನಿಗೆ ಅಲ್ಲಿ ಸಮಯಾವಕಾಶ ದೊರಕಿತ್ತು.

ಅವರ ಪರಿವಾರ ಅಲ್ಲಿಂದ ಪರ್ವತ ಪಯಣಕ್ಕೆ ಹೊರಟಿತು. ಖೊರ್ಸಾನ್‌ದಿಂದ ಘಜನಿ ಸೇರುವ ಆ ದಾರಿ ದುರ್ಗಮವಾಗಿತ್ತು. ಹೀಗಾಗಿ ಪಯಣ ಮಂದಗತಿಯಲ್ಲಿ ಸಾಗಬೇಕಾಗಿ ಬಂದಿತ್ತು. ಅವರು ಹೊರಟು ಕೆಲವು ಕ್ಷಣಗಳೂ ದಾಟಿಲ್ಲ. ಎಲ್ಲರಿಗಿಂತ ಮುಂದಾಗಿ ಹೋದ ಸಬಕನು ಅಗಲಕಿರಿದಾದ ಒಂದು ಕಣಿವೆಯ ದಾರಿಯನ್ನು ಮುಟ್ಟಿದ್ದನು. ತಾವು ಏರಿ ಬಂದ ಪರ್ವತದ ತಪ್ಪಲು ಪ್ರದೇಶದಿಂದ ಧೂಳಿನ ಮೋಡಗಳು ಮೇಲಕ್ಕೇಳುವುದು ಅವನಿಗೆ ಕಂಡಿತು.

'ಅವರು ನಮ್ಮನ್ನು ಬೆನ್ನಟ್ಟಿ ಬರುವಂತಿದೆ ಪ್ರಭೋ' ಎಂದು ಮೇಲ್ದನಿಯಲ್ಲಿ ಅವನು ಹೇಳುವುದು ಹಿಂದಿನವರಿಗೆ ಕೇಳಿಸಿತು.

"ಇಷ್ಟು ಬೇಗ ಬಂದು ಬಿಟ್ಟರೇ? ಈಗ ಎಲ್ಲಿರುವರು?" ಅಬ್ದುಲ್ ಮಲೀಕನ ಮರುಧ್ವನಿ ಸಬಕನಿಗೆ ಕೇಳಿಸಿತು.

'ಅದೋ ಅಲ್ಲಿ ನೋಡಿ! ಕೆಲವು ಕ್ಷಣಗಳ ಹಿಂದೆ ನಾವು ದಾಟಿ ಬಂದ ಆ ಗಿಡಗಳ ಸಾಲಿನ ಅಂಚಿಗೆ ಬಂದು ಬಿಟ್ಟಿದೆ ಅವರ ಪಡೆ! ಸದ್ಯಃ ಅವರು ದೂರವಿರುವದಾದರೂ ಶೀಘ್ರವೇ ನಮ್ಮ ಬೆನ್ನು ಹತ್ತಬಹುದು. ನಮ್ಮ ಜೊತೆಯಲ್ಲಿ ಹೆಂಗಳೆಯರಿರುವರಾದ ಕಾರಣ ಶೀಘ್ರಗತಿಯ ಪಯಣಕ್ಕೆ ತಡೆಯಾಗಿದೆ. ಹೂಂ! ಇನ್ನು ಕ್ಷಣ ಹೊತ್ತು ವಿಳಂಬಮಾಡಕೂಡದು. ನಾಗಾಲೋಟದಿಂದ ನಾವು ಇಲ್ಲಿಂದ ಕಾಲು ಕೀಳಬೇಕಾಗಿದೆ."

ಮರುಕ್ಷಣದಲ್ಲಿ ಮಿಂಚಿನ ವೇಗದಲ್ಲಿ ಅವರೆಲ್ಲರ ಕುದುರೆಗಳು ಓಡಿದುವು. ಆದರೆ ಮತ್ತೆ ಕೆಲವು ನಿಮಿಷಗಳಲ್ಲಿ ಬೆನ್ನಟ್ಟಿ ಬರುವವರ ತುರುಗವಾಹಿನಿಯೂ ಸನಿಹದಲ್ಲೇ ಕಾಣಿಸಿಕೊಂಡಿತು. ಕೈಯಲ್ಲಿ ಕೂರಸಿಗಳನ್ನು ಝಳಪಿಸುತ್ತ ಅವರು ಯುದ್ಧಾತುರದಿಂದ ಮುಂದಾಗುತ್ತಿದ್ದರು.

"ಹೆಂಗಳೆಯರ ರಕ್ಷಣೆಯ ಕುರಿತಾದ ಒಂದೇ ಒಂದು ಬೆದರಿಕೆ ನನ್ನನ್ನು ಕಾಡುತ್ತಿದೆ. ಅವರನ್ನು ರಕ್ಷಿಸಲು ಇರುವ ಉಪಾಯವೆಂದರೆ ಒಂದೇ. ಈ ದಾರಿಯನ್ನು ನಾನು ಚೆನ್ನಾಗಿ ಬಲ್ಲೆ. ಕೆಲವೇ ಮಾರು ದೂರದಲ್ಲಿ ಈ ದಾರಿ ಕವಲೊಡೆಯುತ್ತಿದೆ; ಅಗಲಕಿರಿದಾದ ಒಂದು ದಾರಿ ದುರ್ಗಮವಾದ ಪರ್ವತಗಳ ನಡುವೆ ಇರುವ ಒಂದು ಗವಿಯನ್ನು ಸೇರುತ್ತದೆ. ಝೀನತ್ ಮತ್ತು ಇತರ ದಾಸೀ ಜನರನ್ನು ಅಲ್ಲಿಯ ವರೆಗೆ ಮುಟ್ಟಿಸಿದರೆ ಅವರು ಸುರಕ್ಷಿತವಾಗಿ ಉಳಿಯುವರು. ಸಬಕ್, ಈ ಹೊಣೆಗಾರಿಕೆಯನ್ನು ನನ್ನ ನಂಬಿಕೆಗೆ ಪಾತ್ರನಾದ ನಿನಗೇ ಒಪ್ಪಿಸುತ್ತೇನೆ. ನೀನು ಅವರನ್ನು ಅಲ್ಲಿಗೆ ಕರೆದೊಯ್ಯು; ನಿನ್ನ ಜೊತೆಯಲ್ಲಿ ಕೆಲಮಂದಿ ವೀರಾಳುಗಳೂ ಇರಲಿ; ನಿಮಗೆ ಬೇಕಾದ ಆಹಾರ ಸಾಮಗ್ರಿಗಳನ್ನೂ ಕೊಂಡೊಯ್ಯು. ನಾನು ಇತರ ಸೇನಾಪರಿವಾರದೊಡನೆ ಮುಖ್ಯ ದಾರಿಯಾಗಿಯೇ ಮುಂದುವರಿದು ಶತೃಗಳಿಗೆ ನಮ್ಮ ಈ ಯೋಜನೆಯ ಸುಳಿವು ಹತ್ತದಂತೆ ಮಾಡುತ್ತೇನೆ. ಒಂದು ವೇಳೆ ಇಶಾಕನ ಜನರು ನೀವು ಸೇರಿದ ಗುಹೆಯ ಸಮೀಪ ಸೇರುವಷ್ಟು ಸಮರ್ಥರಾದರೆಂದರೆ, ನಿನ್ನ ಜೀವಾರ್ಪಣೆ ಮಾಡಿಯಾದರೂ ಝೀನತಳನ್ನು ರಕ್ಷಿಸುವ ಭಾರ ನಿನ್ನದು" ಎಂಬ ಮಿಂಚಿನಾಣತಿಯನ್ನು ಕೊಟ್ಟು ಅಬ್ದುಲ್ ಮಲೀಕ್ ತನ್ನ ಅಚ್ಚುಮೆಚ್ಚಿನ ಕೆಲಮಂದಿ ಸ್ವಾಮಿಭಕ್ತ ಯೋಧರೊಡನೆ ಶತ್ರುಗಳು ಬರುವ ಮಾರ್ಗವಾಗಿಯೇ ಮುಂದುವರಿದನು. ಸಬಕನು ಸ್ತ್ರೀಪರಿವಾರ ಹಾಗು ತನ್ನ ಜೊತೆಗೆಂದು ಒಡೆಯನು ಬಿಟ್ಟ ಕೆಲಮಂದಿ ಸರದಾರರೊಡನೆ ಆ ಅಗಲಕಿರಿದಾದ ಹಾದಿಯಲ್ಲಿ ಗವಿಯ ಕಡೆಗೆ ನಡೆದನು.

ಸನಿಹದಲ್ಲೇ ಮಲೀಕನು ಹೇಳಿದ ಆ ಸುರಕ್ಷತೆಯ ಗವಿಯು ಕಾಣಸಿಕ್ಕಿತು. ಅವನು ಹೇಳಿದಂತೆ ಅದು ನಾಲ್ಕು ಕಡೆಗಳಿಂದಲೂ ಎತ್ತರವಾದ ಬೆಟ್ಟಗಳಿಂದ ಆವರಿಸಲ್ಪಟ್ಟು ಅತ್ಯಂತ ಸುರಕ್ಷಿತವಾಗಿತ್ತು. ಅವರ ಪರಿವಾರವು ಅಲ್ಲಿಗೆ ಮುಟ್ಟಿ ನಿಮಿಷ ಒಂದಾಗಲಿಲ್ಲ. ಪುನಃ ಕುದುರೆಗಳ ಸಪ್ಪಳ ಕೇಳಿಸಿತು. ಆ ಶಬ್ದ ಬೇಗನೆ ಅಡಗಬಹುದೆಂದು ಅವರೆಲ್ಲಾ ಉಸಿರು ಕಟ್ಟಿ ಆಲಿಸುತ್ತಿದ್ದರು. ಆದರೆ ಶಬ್ದ ಅಡಗಲಿಲ್ಲ. ಬದಲು ಜೋರಾಗಿ ಕೇಳಿಸಿತು.

ಮತ್ತೊಂದು ಕ್ಷಣದಲ್ಲಿ ಅಶ್ವ ಸವಾರರಿಗೆ ಕುದುರೆಗಳನ್ನು ನಿಲ್ಲಿಸುವಂತೆ ಮುಖಂಡನ ಆಣತಿ ಕೇಳಿಸಿತು. ಖಡ್ಗಗಳ ಝಣತ್ಕಾರವೂ ಜೊತೆಯಲ್ಲೇ ಕೇಳಿಸುತ್ತಿತ್ತು.

'ಪ್ರಾಯಶಃ ಕೆಲಮಂದಿ ಯೋಧರನ್ನು ನಮ್ಮ ಅನ್ವೇಷಣೆಗಾಗಿ ಅವರು ಕಳಿಸಿದ್ದಿರಬಹುದು. ಹೂಂ! ಬಯಸಿದುದಕ್ಕಿಂತ ಹೆಚ್ಚಿಗೆ ಅವರು ಇಲ್ಲಿ ಕಾಣುವರು' ಎನ್ನುತ್ತ ಸಬಕನು ತನ್ನ ಜೊತೆಯಲ್ಲಿದ್ದ ಸರದಾರರೊಡನೆ ಗವಿಯ ದ್ವಾರದ ಕಡೆಗೆ ಮುಂದಾದನು. ಮುಂದೆ ಕೆಲವು ನಿಮಿಷಗಳಲ್ಲಿ ಗವಿಯ ಹೊರಗೆ ಇತ್ತಂಡದವರಿಗೆ ಖಡ್ಗದ ಖಾಡಾಖಾಡಿ ಹೋರಾಟವೇ ಆರಂಭವಾಯಿತು.

ಸುಲ್ತಾನರ ಕಡೆಯ ವೀರಾಳುಗಳು ಸಂಖ್ಯೆಯಲ್ಲಿ ಅಧಿಕವಾಗಿದ್ದರೂ ಅಗಲಕಿರಿದಾದ ಪರ್ವತಪ್ರದೇಶವು ಸಬಕನ ಪಾಲಿಗೆ ವರಪ್ರಾಯವಾಯಿತು. ಜೀವದ ಹಂಗುತೊರೆದು ಉಭಯತರು ಒಬ್ಬರಿನ್ನೊಬ್ಬರೊಡನೆ ಕಾದಾಡಿದರು. ಇಶಾಕನ ಕಡೆಯ ವೀರ ಸರದಾರರ ಮುಖಂಡನೇ ಸಬಕನೊಡನೆ ಕೈ ಕೈ ಕಾಳಗ ಕೊಡುತ್ತಿದ್ದನು. ಸಬಕನ ಕೂರಸಿ ಅವನನ್ನು ಗೆದ್ದಿತು. ತುಫಾನಿಗೆ ಬೇರುಸಹಿತ ಮುರಿದು ಬೀಳುವ ದೊಡ್ಡ ವೃಕ್ಷದಂತೆ ಆತ ದೊಪ್ಪನೆ ನಿಶ್ಚೇತನನಾಗಿ ಕೆಳಗುರುಳಿದನು. ಮುಖಂಡನ ದೇಹದಿಂದ ಕೋಡಿಗಟ್ಟಿ

ರಕ್ತಪ್ರವಾಹ ಹರಿಯುವುದನ್ನು ಕಾಣಲಾಗದೆ ಉಳಿದವರು ಕಾಲಿಗೆ ಬುದ್ಧಿ ಹೇಳಿದರು.

"ಸುಲ್ತಾನನಿಗೆ ಅರುಹಲು ಚಂದದ ಕಥೆ ಸಹಿತ ಅವರನ್ನು ಕಳಿಸಿಕೊಟ್ಟೆವು." ಎಂಬ ವಿಜಯನಿನಾದ ಸಬಕನ ಬಾಯಿಂದ ಹೊರಟಾಗ ಅವನ ಕಡೆಯ ಇತರ ವೀರಾಳುಗಳು ಅವನ ಸುತ್ತಲೂ ನೆರೆದರು. ಕ್ಷಣ ಒಂದು ಕಳೆಯಬೇಕಾದರೆ ಸಬಕನೂ ಪ್ರಜ್ಞಾಶೂನ್ಯನಾಗಿ ಈ ಮೊದಲೇ ಮೃತ್ಯುಶಯ್ಯೆಯಲ್ಲಿ ಪವಡಿಸಿದ್ದ ಶತ್ರುಮುಖಂಡನ ಕಳೇಬರ ಮುದ್ದಿಸಿದನು. "ಘಾತವಾಯಿತು! ಶತ್ರುಮುಖಂಡನ ಈಟಿಯು ಆಳವಾದ ಘಾಯವಾಗಿದೆ" ಎಂಬ ಉದ್ಗಾರವು ಇತರ ಸೈನಿಕರ ಬಾಯಿಂದ ಹೊರಟಿತು. ಅವರೆಲ್ಲಾ ಅವನನ್ನು ಹೊತ್ತುಕೊಂಡು ಗವಿಯೊಳಗಿರುವ ಝಿನತಳ ಬಳಿಗೆ ಕರೆದೊಯ್ದರು. ತನ್ನ ಪ್ರಿಯತಮನಿಗಾದ ದುರವಸ್ಥೆಯನ್ನುಕಂಡು ಝೀನತ್ ಎದೆ ಬಿರಿಯುವಂತೆ ಪ್ರಲಾಪಿಸತೊಡಗಿದಳು.

"ಅವರಿಗೆ ಪ್ರಾಣಾಪಾಯವಾಗಿಲ್ಲ ತಾಯಿ! ಅಲ್ಲಾ ದೊಡ್ಡವನು. ಶತ್ರುವಿನ ಈಟಿಯು ಅವರು ತೊಟ್ಟುಕೊಂಡಿದ್ದ ತಾಯಿತಕ್ಕೆ ನಾಟಿದುದರಿಂದ ಅದು ನೇರಾಗಿ ಎದೆಯನ್ನು ಸೇರದಂತಾಯಿತು. ತಾಯಿತವಲ್ಲದಿದ್ದರೆ ಖಂಡಿತವಾಗಿಯೂ ಅವರ ಪ್ರಾಣಹಾನಿಯಾಗುತಿತ್ತು. ಎಂದು ವೀರಾಳುಗಳ ನಾಯಕನು ಸಮಾಧಾನ ಹೇಳಿದಾಗಲೇ ಝೀನತ್ ಒಂದಿಷ್ಟು ಚೇತರಿಸಿ ತಲೆಯನ್ನು ಮೇಲಕ್ಕೆತ್ತಿದಳು. ಹೌದು, ಆ ನಾಯಕನು ಹೇಳಿದಂತೆ ಆಪತು ಪ್ರಾಣ ಹೋಗುವಷ್ಟರಲ್ಲಿಯ ವರೆಗೆ ಮೀರಿರಲಿಲ್ಲ"

ಸಬಕನು ಕೊರಳಿಗೆ ಚೌಕಾಕಾರದ ಒಂದು ತಾಯಿತ ಕಟ್ಟಿದ ದಾರವನ್ನು ಧರಿಸಿದ್ದನು. ಮುಹಮ್ಮದೀಯರಲ್ಲಿ ಕೊರಾನಿನ ಶ್ಲೋಕಗಳನ್ನು ಬರೆದ ತಗಡುಗಳನ್ನೊಳಗೊಂಡ ಅಂತಹ ತಾಯಿತಗಳನ್ನು ಕಟ್ಟುವುದು ವಾಡಿಕೆ. ಆ ತಾಯಿತವೇ ಇಂದು ಸಬಕನ ಪ್ರಾಣ ಉಳಿಸಿತ್ತು. ಈಟಿ ನಾಟಿ ಅದು ಇಬ್ಭಾಗವಾಗಿ ಒಡೆದಿತ್ತು.

ಝೀನತ್ ಮತ್ತೆ ಅರೆಗಳಿಗೆಯೂ ತಡಮಾಡದೆ ಸಬಕನ ಶುಶ್ರೂಷೆಗೆ ತೊಡಗಿದಳು. ಮೊದಲು ಘಾಯವನ್ನು ಚೆನ್ನಾಗಿ ತೊಳೆದು ಆ ಮೇಲೆ ಅದಕ್ಕೆ ಮದ್ದು ಹಚ್ಚಿದಳು. ಆ ರಾತ್ರಿ ಅವನ ಬಳಿಯೇ ಕೂತು ಹಗಲು ಮಾಡಿದಳು. ಮನಸ್ಸಿನಲ್ಲಿ ಸಬಕನ ಕ್ಷೇಮಕ್ಕಾಗಿ ಭಗವಂತನನ್ನು ಪ್ರಾರ್ಥಿಸುತ್ತಿದ್ದಳು. "ಸಬಕನು ಮಡಿದರೆ ನಾನುಳಿಯಲಾರೆ"ಎಂಬ ನಿಟ್ಟುಸಿರೂ ಆಗಾಗ ಹೊರಡುತ್ತಿತ್ತು ರೋಧನದ ನಡುವೆ.

ಎರಡು ದಿನಗಳು ಕಳೆದು ಮೂರನೇ ದಿನ ಬೆಳಿಗ್ಗೆ ಬೆಳ್ಳಿ ಮೂಡುವುದಕ್ಕೆ ಮೊದಲು ಅಬ್ದುಲ್ ಮಲೀಕ್ ಅವನ ಯೋದ್ಧ ಪರಿವಾರದೊಂದಿಗೆ ಅಲ್ಲಿಗೆ ಬಂದು ಮುಟ್ಟಿದನು.

ಅವನು ಎಣಿಸಿದಂತೆ ಎಲ್ಲಾ ವಿಧ್ಯಮಾನಗಳು ಸಾಗಿದ್ದುವು. ಸುರಕ್ಷಿತವಾಗಿ ಘಜನಿಯ ಒಡೆತನವನ್ನು ಸಂಪಾದಿಸಿಯಾಗಿತ್ತು. ಆದರೆ ತನ್ನ ಮಗಳ ಸುರಕ್ಷತೆಯ ಕುರಿತು ಕಾತರತೆಯಿಂದ ಇದೀಗ ಆತ ಘಜನಿಯಿಂದ ಅಲ್ಲಿಗೆ ನೇರಾಗಿ ಧಾವಿಸಿದ್ದನು. ಸಬಕನ ಹಾಸಿಗೆಯ ಬಳಿ ಕೂತು ಅವನನ್ನು ಉಪಚರಿಸುವ ತನ್ನ ಮಗಳನ್ನು ಕಂಡು ಅತ್ಯಾನಂದವಾಯಿತು ಮಲೀಕನಿಗೆ.

'ಝೀನತ್! ನೀನು ಸುರಕ್ಷಿತವಾಗಿರುವೆಯಷ್ಟೆ!' ಆತ ಆತುರದಿಂದ ಕೇಳಿದನು.

'ನಾನು ಸುರಕ್ಷಿತವಾಗಿದ್ದೇನೆ ಅಬ್ಬಾಜಾನ್! ಆದರೆ ನನ್ನನ್ನು ರಕ್ಷಿಸಲು ಮುಂದಾದ ಸಬಕನು ಪ್ರತ್ಯಕ್ಷ ಮೃತ್ಯುವಿನೊಡನೆ ಹೋರಾಡಬೇಕಾಯಿತು. ನೋಡಿ, ಶತ್ರುವಿನ ಈಟಿಯು ಹೇಗೆ ಅವರ ವಕ್ಷಸ್ಥಳದಲ್ಲಿದ್ದ ತಾಯಿತವನ್ನು ಹೊಕ್ಕಿದೆಯೆಂದು! ಆ ತಾಯಿತವಲ್ಲದಿದ್ದರೆ ಅವರನ್ನು ಇಂದು ನೀವು ಜೀವಂತ ಕಾಣುತ್ತಿರಲಿಲ್ಲ!' ಎಂದು ಝೀನತಳು ಸಬಕನ ದುರವಸ್ಥೆಯನ್ನು ವರ್ಣಿಸುವಾಗ ಮಲೀಕನ ಹೃದಯ ಕರಗಿ ನೀರಾಯಿತು.

ಕೆಳಗೆ ಬಗ್ಗಿಕೊಂಡು ಆ ತಾಯಿತವನ್ನು ಮೇಲಕ್ಕೆತ್ತಿ, ಆದಕ್ಕಾದ ಈಟಿಯ ಆಘಾತವನ್ನು ಪರೀಕ್ಷಿಸಿದನು. ಅದನು

★ ಮುಂದೇನು? ★

ಇಂದಿನಂತೆಯೇ ಇಹುದೇ ಮುಂದೆ?
ಇಲ್ಲ ಇಲ್ಲ ಇಲ್ಲ.
ಇಂದಿನಂತೆಯೇ ಇದ್ದುದೆ ಹಿಂದೆ?
ಇಲ್ಲ ಇಲ್ಲ ಇಲ್ಲ.

ನೆನೆ ನೆನೆ; ಯುಗದಾಚೆಯ ಮಾನವನ,
ಎಂತು ಅವನ ಬಾಳು.
ಮನೆ ಕಾಡು, ಬೇಟೆ, ಮೃಗದೊಡ ಕದನ,
ಮೇಲು ಮೃಗದ ಬಾಳು.

ಹಿಂದಿದ್ದುದೆ ಇಂದಿನ ನಾಗರಿಕತೆ,
ವಿಶ್ವದೈಕ್ಯಭಾವ?
ಹಿಂದಿರಲಿಲ್ಲವೆ ಬವರ ಬೇನೆ ವೆತೆ,
ನೂರು ಭೇದಭಾವ?

ಇಂದು ಭೌತವಿಜ್ಞಾನದ ಬಹುಕೃತಿ
ಕೊಲುವ ಸಿಡಿಲು, ಮಿಗಿಲು
ಒಂದು ಮನುಜಕುಲವೆಂಬ ಸುಹೃನ್ಮತಿ–
ವರ್ಷಕೆ ಮಳೆಮುಗಿಲು.

ಹೊಡೆಯಲಿ ಸಿಡಿಲು, ಬೀಳ್ಗೆ ವಿಷವೃಕ್ಷ,
ಕೋಟೆ ಬೇರ ಹಿಂಸೆ;
ಒಡನೆ ಮೊಳೆಯದೇ ಲಕ್ಷೋಪಲಕ್ಷ
ಸಸಿಯಾಗಿ ಅಹಿಂಸೆ.

ನಾಡು ಬೇರೆ ನುಡಿ ಬೇರೆ ಬಣ್ಣ ನಡೆ
ಬೇರೆಯಾದ ಮಾತ್ರ
ಕೂಡಲಾಗದೇ ಹೂವಿನೊಲೊಂದೆಡೆ!—
ಮನುಜಧರ್ಮ ಸೂತ್ರ.

ಅವನು ಇವನ ಹಗೆ, ಇವನು ಅವನ ಹಗೆ-
ಎಲ್ಲ ಭೀತಿಶಂಕೆ;
ಭುವನಭವನದಲಿ ತೊಲಗೆ ಹಗೆಯ ಹೊಗೆ
ಆರಬೇಕು ಬೆಂಕೆ.

ಎಲ್ಲ ಕೂಡಿಯೇ ಬಾಳ್ವುದಗತ್ಯ
ಸ್ನೇಹವೊಂದೆ ಕಟ್ಟು;
ನಿಲ್ಲುವುದಿದು ಕಡೆಗಿದುವೇ ಸತ್ಯ,
ಮುಂದಿನ ಹೊಸ ಹುಟ್ಟು.

ಇಂದಿನಂತೆಯೇ ಇಹುದೇ ಮುಂದೆ!
ಇಲ್ಲ ಇಲ್ಲ ಇಲ್ಲ.
ಇಂದಿನಂತೆಯೇ ಇದ್ದರೆ ಮುಂದೆ
ಸಾವುದೆಲ್ಲ ಎಲ್ಲ.

—ರಾಘವ.

ಪುನಃ ಇದ್ದ ಕಡೆಯಲ್ಲೇ ತೂಗಿಸುವವನಿದ್ದ. ಆದರೆ ಅಷ್ಟರಲ್ಲಿ ಅವನ ಲಕ್ಷ್ಯ ತಾಯಿತದೊಳಗಿರುವ ಬೆಳ್ಳಿಯ ತಗಡಿನ ಕಡೆಗೆ ಹೋಯಿತು. ಅದನ್ನೇ ದಿಟ್ಟಿಸಿ ನೋಡುತ್ತ ಅದರಲ್ಲಿ ಬರೆದ ಅಕ್ಷರಗಳನ್ನು ಓದತೊಡಗಿದನು. ಓದುತ್ತಿರುವಂತೆ ಅವನ ಉತ್ಸುಕತೆ ಹೆಚ್ಚಿತು.

ಕೆಲಹೊತ್ತು ಮೌನ. ಆ ಮೇಲೆ ಒಮ್ಮೆ ತಾಯಿತವನ್ನೂ ಒಮ್ಮೆ ಸಬಕನನ್ನೂ ದಿಟ್ಟಿಸಿ ನೋಡುತ್ತ 'ಏನಿದು ಸಬಕ?' ಎಂದು ಪ್ರಶ್ನಿಸಿದ.

'ಪವಿತ್ರ ಕೊರಾನದಲ್ಲಿಯ ಶ್ಲೋಕಗಳಿರಬೇಕು. ಅಲ್ಲವೆ ಪ್ರಭೋ' ಎಂದು ಕ್ಷೀಣ ಸ್ವರದಿಂದ, ಮಲಗಿದಲ್ಲಿಂದಲೇ ಸಬಕ್ ಉತ್ತರ ಕೊಟ್ಟ.

'ಅಷ್ಟೇ ಅಲ್ಲ! ಅದಕ್ಕಿಂತಲೂ ಹೆಚ್ಚಿಗೆ! ನಿನ್ನ ಜಾತಕ, ನೀನು ಹುಟ್ಟಿದ ದಾಖಲೆ ಇದರ ಮೇಲೆ ಬರೆದಿದೆ ಸಬಕ!.... ಏನು,ಯಾಜ್ದ್ ವಂಶಕ್ಕೆ ಸೇರಿದವನೇ ನೀನು?' ಆಶ್ಚರ್ಯವೂ ಆನಂದವೂ ಸೇರಿಕೊಂಡಿದ್ದುವು ಆ ಪ್ರಶ್ನೆಯಲ್ಲಿ.

'ಅಬ್ಬಾಜಾನ್! ನೀವು ಏನು ಹೇಳುತ್ತಿರುವಿರಿ?' ಝೀನತ್ ನಡುವೆ ಬಾಯಿ ಹಾಕಿದಳು.

'ಹೌದು! ನಾನು ಹೇಳುತ್ತಿರುವುದು ತಾಯಿತದಲ್ಲಿ ಕೊರೆಯಲ್ಪಟ್ಟ ಸತ್ಯ, ಮಗಳೇ! ಸಬಕನು ಹುಟ್ಟುಗುಲಾಮನಲ್ಲ. ಪ್ರಸಿದ್ಧ ಅರಾಬ್ ರಾಜಮನೆತನಕ್ಕೆ ಸೇರಿದ ಕೊನೆಯ ವಂಶಸ್ಥನೊಬ್ಬನ ಕುಲೀನ ಮನೆತನದಲ್ಲಿ ಅವನ ಜನನವಾಯಿತು. ಬಾಲ್ಯದಲ್ಲಿರುವಾಗ ಗುಲಾಮನನ್ನಾಗಿ ಅವನನ್ನು ಮಾರಿದರು. ಕೈಯಲ್ಲಿ ಖಡ್ಗ ಹಿಡಿಯುವ ಅಧಿಕಾರ ಅವನಿಗಿದೆ. ಕುಲೀನ ಮನೆತನದ ಹೆಣ್ಣನ್ನು ವಿವಾಹವಾಗುವ ಹಕ್ಕು ಅವನಿಗಿದೆ.........."

"ಇದೆಯೇ ಅಪ್ಪಾ!" ಝೀನತ್ ಆತುರ ತಡೆಯದಾದಳು.

"ಇದೆ. ಆದರೆ ಹೆಣ್ಣಿನ ತಂದೆ ಒಪ್ಪುವುದಾದರೆ ಮಾತ್ರ" ಎಂದು ತಂದೆ ಹೇಳಿದಾಗ ಝೀನತಳಿಗೆ ಅದೇಕೋ ನಿರಾಶೆಯಾಯಿತು. ಆದರೆ ಆ ನಿರಾಶೆ ಒಂದು ಗಳಿಗೆ ಮಾತ್ರ.

ಇನ್ನೊಂದು ಗಳಿಗೆಯಲ್ಲಿ ಅವಳ ಕೈ ಸಬಕನ ಕೈಯೊಂದಿಗೆ ಕೂಡಿತು. ಅವಳ ಅಬ್ಬಾಜಾನ್ ಅವರಿಬ್ಬರನ್ನೂ ಹರಿಸಿದನು.

[ಆಧಾರದಿಂದ]

ನವೀನ ರೀತಿಯ ಸಚಿತ್ರ ಕಥೆ.

ಸೀನಿನ ಶೀನ (ಚುಟುಕು ಸಂಗ್ರಹ)

(ಬರೆದವರು: ದಾಮೋದರ ಚಾಳಿಗ)

[ಇದು ಮಕ್ಕಳಿಗೆ ಹಾಗೂ ಹಿರಿಯರಿಗಾಗಿ ಬರೆದ, ನವೀನ ರೀತಿಯ ಸರಸ ಸಚಿತ್ರ ಕಥೆ; "ನವನಿಧಿ" ಸಾಹಿತ್ಯಮಾಲೆ ಎಂಬ ಹೆಸರಿನಲ್ಲಿ ಇಂತಹ ೧೦೮ ಕಥಾಪುಸ್ತಕಗಳು ಹೊರಡುವುವು.]

ಗೆಣಸಿನ ಹಳ್ಳಿಯಲ್ಲಿ ಮೆಣಸು ಬೆಳೆಯಿಸುವವನು ಶೀನನೊಬ್ಬನೆ. ಮೆಣಸಿನಿಂದ ಲಾಭ ಬಹಳ. ದುಡ್ಡು ಮಾಡಬೇಕೆಂದೇ ಶೀನ ಆಹಾರದ ಪೈರು ಗೆಣಸನ್ನು ಬಟ್ಟು ಮೆಣಸನ್ನು ಬಹಳ ಶ್ರದ್ಧೆಯಿಂದ ಬೆಳಸುವನು. ಆದುದರಿಂದ ಅವನಿಗೆ ಮೆಣಸಿನ ಶೀನ ಎಂದು ಹೆಸರಾಯಿತು.

ಶೀನ ಒಬ್ಬ ಗುಂಡಾಳು. ನಡು ಪ್ರಾಯ ದಾಟಿದ ಅವನ ತಲೆ ಕೂದಲು ಉದುರಿ ಇದಿರೆಲ್ಲಾ ಬೋಳಾಗಿತ್ತು. ಹಿಂತಲೆಯಲ್ಲಿ ಮಾತ್ರ ಸ್ವಲ್ಪ ಕಪ್ಪು ಕೂದಲು ತೆಪೆ ಇಟ್ಟಂತೆ ಎದ್ದು ಕಾಣಿಸುತಿತ್ತು.



ಬೋಳು ತಲೆಗೆ ಒಂದು ಎಲವಸ್ತ್ರ ಸುತ್ತಿಕೊಳ್ಳುವುದು ಈಗ ಅವನ ವಾಡಿಕೆ. ಅವನ ಮುಖ ಅಗಲ; ಆಚೆ ಈಚೆ ಉಬ್ಬಿದ ಗಲ್ಲಗಳು; ನಡುವೆ ಉದ್ದಗಲದ ಮೂಗು; ಮೂಗಿನ ಸೊಳ್ಳೆಗಳು ಎರಡು ಸಣ್ಣ ಬಿಲಗಳಂತೆ ಕಾಣಿಸುತಿದ್ದುವು. ಅವನ ಡೊಳ್ಳೊಟ್ಟೆ ಅವನ ಅಗಲ ಎದೆ ಹೆಗಲುಗಳ ಅಂದವನ್ನೆಕೆಡಿಸಿಬಿಟ್ಟಿತ್ತು. ಹೆಗಲ ಮೇಲೆ ಬಹಿರಾಸನ್ನು ಹಾಕಿಕೊಂಡು ಗಿಡ್ಡ ಪಂಚೆಯನ್ನು ಜಟ್ಟಿಯಂತೆ ಸುತ್ತಿಕೊಂಡರೆ ಶೀನನ ಅಲಂಕಾರ ಪೂಜೆ ಮುಗಿಯಿತು.

ದುಡ್ಡಿಗೆ ಸೊಕ್ಕಿದ ಮೆಣಸಿನ ಶೀನ ಎಲ್ಲ ಕೆಲಸವನ್ನು ತಾನೇ ಮಾಡುವನು ಮೆಣಸಿನ ಕೆಲಸವಲ್ಲವೇ! ಮೆಣಸಿನ ಗಾಟು ಖಾರಗಳಿಂದಾಗಿ ಅವನಿಗೆ ಒಂದು ಚಟ ಹಿಡಿಯಿತು. ನೆನಸಿದಾಗ, ನೆನಸದಾಗ ಅವನಿಗೆ ಒಂದೇ ಸವನೆ ಮೇಲೆ ಮೇಲೆ ಸೀನುಗಳು ಬರುತ್ತಿದ್ದುವು.

'ಇಕ್ ಶೀ' ಎಂದು ಶೀನ ಮೊದಲು ಮಾಡುವ. 'ಇಚ್ಚಿ ಚ್ಚಿ ಛೀ' ಎಂದು





ಮುಂದರಿಸಿ ಬೇರೆ ಬೇರೆ ಅಪಸ್ವರಗಳನ್ನು ಹೊರಡಿಸಿ '**ಅಚ್ಚೊ ಅಚ್ಚಾ ಅಚ್ಚೆ ಅಚ್ಚಾ ಅಚ್ಚ್ಯಾಚೋ**' ಎಂದು ವೈಲುದ್ದದ ಸೀನನ್ನು ಹಾರಿಸುವನು. ಬಳಿಕ ಅವನಿಗೆ ಸ್ವಲ್ಪ ವಿರಾಮ ಸಿಕ್ಕುವುದೂ ಉಂಟು. ಒಮ್ಮೊಮ್ಮೆ ಈ ಅಲ್ಪವಿರಾಮಕ್ಕೂ ಸೊನ್ನೆ. ಪಟಾಕಿ ಮಾಲೆಗೆ ಬೆಂಕಿ ಕೊಟ್ಟಂತೆ ಸೀನಿನ ಮೇಲೆ ಸೀನುಗಳನ್ನು ಪರ್ಯಾಯ ಪ್ರಕಾರ ಸೀನ ಉಡಾಯಿಸಿ ಬಿಡುವ.

ಹೀಗೆ ಶೀನನ ಸೀನು ಊರಲ್ಲೆಲ್ಲ ಹೆಸರಿಗೆ ಬಂತು. ಎಲ್ಲೆಲ್ಲೂ ಮೆಣಸಿನ ಶೀನ! ಸೀನಿನ ಶೀನ! ಶೀನನ ಸೀನು! ಎಂದೇ ಗುಜುಗುಜು ಮಾತು. ಆ ಮೇಲೆ ಜನರ ಬಹಿರಂಗ ಗೇಲಿ. "ಮೆಣಸಿನ ಶೀನ" ಬಿರುದನ್ನು "ಸೀನಿನ ಶೀನ" ಎಂದೇ ಬದಲಾಯಿಸಿಬಿಟ್ಟರು. ಮುಗಿಯಿತೇ? ತುಂಟ ಹುಡುಗರು ಕವನ ಕಟ್ಟಿದರು. ಶೀನನ ಇದಿರಲ್ಲಿ ಒದರಿದರು. ಪುಟಾಣಿ ಮಕ್ಕಳಿಗೂ ಶೀನ ಎಂದರೆ ಸಡ್ಡೇ ಇಲ್ಲ. ಊರಿಗೇ ಊರೇ ಅವನನ್ನು ಹೀಯಾಳಿಸ ಹತ್ತಿತು. ಒಮ್ಮೊಮ್ಮೆ ಸೀನುವ ಶೀನನ ಹಿಂದೆಯೇ ಬೀದಿಯ ನಾಯಿಗಳು 'ಗೊಳೋ' ಎಂದು ಊಳಿಡುತ್ತ ಓಡಿದ್ದು ಉಂಟು. ಶೀನನಿಗೆ ಬಹಳ ಪಜೀತಿ!

ಸಣ್ಣ ತಲೆಯುಲ್ಲಿ ಹುದುಗಿಕೊಂಡಿದ್ದ ಮೆದುಳನ್ನು ಶೀನ ವೆಚ್ಚಮಾಡಿದ. ಸೀನನ ಚಟವಂತೂ ಮೆಣಸಿನ ಕೆಲಸ ಬಿಟ್ಟವಿನಹಾ ನಿಲ್ಲುವಂತಿಲ್ಲ. ಹಣ ಸುರಿಸುವ ಮೆಣಸನ್ನು ಸುಲಭದಲ್ಲಿ ಅವ ಬಿಟ್ಟಾನೇ?




ಅಸಾಧ್ಯ! ಸಮೀಪದಲ್ಲಿದ್ದ ಬ್ರಹ್ಮರ ಕಟ್ಟೆಗೆ ಹೋಗಿ ತನ್ನ ಸೀನಿಗೆ ಇಂದ್ರಜಾಲ ಬಲ ಬರುವಂತೆ ಹರಕೆ ಹೊತ್ತರೆ ಹೇಳ ಬೇಕೇ ಸೀನಿನ ಮಹಾತ್ಮೆ! ಆ ಬಳಿಕ ಊರ ಬಿಕನಾಶಿಗಳಿಗೆಲ್ಲ ಬುದ್ಧಿ ಕಲಿಸಿ ಬಿಡಬಹುದು; ಎಂದು ಮೊದಲಾಗಿ ಯೋಚಿಸಿದ.

ಅಂದೇ ರಾತ್ರಿ ವಿಧಿ ಪ್ರಕಾರ ಅವನು ಬ್ರಹ್ಮರಕಟ್ಟೆಗೆ ಸಾಗಿದ. ನಿಯಮ ತಂತ್ರಗಳನ್ನೆಲ್ಲಾ ಸಾಧಿಸಿ ಅಪರಾತ್ರೆ ಕಟ್ಟೆಯ ಇದಿರಲ್ಲಿ ಮೊಣಕಾಲೂರಿ, ಕೈ ಮುಗಿದು "ನನ್ನ ಸೀನುಗಳಿಗೆ ಇಂದ್ರಜಾಲದ ಬಲ ಬಂದರೆ....ಬ್ರ ಹ್ಮ ರ ದೇ ವ ರಿ ಗೆ .... ಇಕ್ ಎಂದು ಬಾಯಿ ತೆರೆದು ಹರಕೆ ಹೇಳುವಷ್ಟರಲ್ಲಿ—'ಇಕ್ ಶೀ' ಎಂದು ಶೀನನಿಗೆ ಸೀನು ಬಂದೇ ಬಿಟ್ಟಿತು. ಆ ಮೇಲೆ "ಇಕ್ ಶೀ"ಯಿಂದ ಹಿಡಿದು 'ಅಚ್ಚಾಚ್ಯೊ' ತನಕ ಸೀನುಗಳ ಸರಮಾಲೆ! ನಿಶ್ಶಬ್ದ ರಾತ್ರೆಯಲ್ಲಿ ಸೀನುಗಳ ಅಪಸ್ವರಗಳ ಪ್ರತಿಧ್ವನಿ ಮರುಕಳಿಸಿ ಮೊಳಗಿ ಕೇಳಿಸಿದಾಗ ಶೀನನಿಗೆ ವಿಪರೀತ ಭಯ! ಒಡನೆ ಅಲ್ಲಿಂದ ಹೊರಟು ಮನೆಗೆ ಓಡಿದ. ಅಲ್ಲಿ ಹೇಗೂ ರಾತ್ರಿ ಬೆಳಿಗ್ಗೆ ಮಾಡಿದ.

ಮುಂಜಾವಿಗೆ ಮುಂಚೆಯೇ ಎದ್ದು ಗಂಟುಮೂಟೆ ಕಟ್ಟಿ ತನ್ನ ಒಂಟೆತ್ತಿನ ಗಾಡಿಯಲ್ಲಿ ಹೇರಿ ನೇರೆ ಊರಿಗೆ ತೊಲಗಿ ಹೋಗುವುದೆಂದೇ ಈಗ ಶೀನನ ನಿರ್ಧಾರ. ಹಾಗೆಯೇ ಮಾಡಿ ಬಿಟ್ಟ! ಗಾಡಿ ಕಟ್ಟಿ ಬೆಳಿಗ್ಗೆ ಶೀನ ಹೊರಟೇ ಬಿಟ್ಟನು.

ಮೈಮುರಿದು ಎಲ್ಲರ ಹಿತಕ್ಕಾಗಿ ದುಡಿಯುವ ರೈತಾಪಿ ಜನರಿಂದ ತುಂಬಿದ್ದ ಗೆಣಸಿನ ಹಳ್ಳಿಯಲ್ಲಿ ಎಲ್ಲೆಲ್ಲಿಯೂ ಸುಖ ಸಂತುಷ್ಟಿಯೇ ಈ ಮೆಣಸಿನಶೀನ–ಅಲ್ಲ!–ಈಗ ಅವನು ಸೀನಿನ ಶೀನ ಆಗಿ ಬಿಟ್ಟಿದ್ದಾನಲ್ಲ! ಅವನೊಬ್ಬನನ್ನು ಬಿಟ್ಟರೆ ಎಲ್ಲರಿಗೂ ನೆಮ್ಮದಿ. ಶೀನನಿಗೆ ಮಾತ್ರ ಸುಖ ವಿಲ್ಲ! ಶಾಂತಿ ಇಲ್ಲ! ದುಡ್ಡಿನ ಭ್ರಾಂತಿ, ಅನುದಿನ ಚಿಂತೆ!




ಜನರಲ್ಲಿ ನೆಲಸಿರುವ ಸಂತುಷ್ಟಿ ಅಲ್ಲಿಯ ಮೃಗಪಕ್ಷಿಗಳಿಗೂ ಅಂಟಿಕೊಂಡಿತು. ಅವುಗಳಿಗೆಲ್ಲಕ್ಕೂ ಸಂಪೂರ್ಣ ತೃಪ್ತಿ. ದ್ವೇಷ ಅಸೂಯೆಗಳೆಂದರೆ ಆ ಪ್ರಾಣಿಗಳು ಏನೆಂದು ತಿಳಿಯವು. ಅವು ಒಟ್ಟುಗೂಡಿ ಸೌಹಾರ್ದದಿಂದಲೇ ಇದ್ದುವು. ಆಡು, ಹಸು, ನಾಯಿಗಳ ಕೂಟ ಒಂದು ಬಹಳ ಸ್ನೇಹಮಯವಾಗಿತ್ತು. ದನದ ಕೆಚ್ಚಲಲ್ಲಿ ನಾಲ್ಕು ಮೊಲೆ, ತನ್ನ ಕೆಚ್ಚಲಿಲ್ಲ ಎರಡೇ ಮೊಲೆ ಎಂದು ಆಡಿಗೆ ಅಸೂಯೆ ಇಲ್ಲ. ನಾಯಿಗೆ ಊರಲ್ಲೆಲ್ಲ ಸಲುಗೆ ಎಂದು ಯಾರಿಗೂ ಹೊಟ್ಟೆಕಿಚ್ಚಿಲ್ಲ. ನಾಯಿ ತಾನು ಜನರ ಪ್ರೀತಿಯ ಮುದ್ದೆ ಎಂದು ಇತರ ಪ್ರಾಣಿಗಳನ್ನು ಹೀನೈಸುತ್ತಿರಲಿಲ್ಲ. ಈ ಮೂರು ಅಂದು ಎಳೆಬಿಸಿಲಲ್ಲಿ ಚಕ್ಕಂದವಾಡುತ್ತ ಒಂದು ಹಿತ್ತಲ ಅಂಚಿನಲ್ಲಿ ಡಿಂಗಾಗಿ ನಿಂತುಕೊಂಡಿದ್ದುವು.

ಶೀನನ ಗಾಡಿ ಅದೇ ದಾರಿಯಾಗಿ ಬಂತು. ಅಯ್ಯೊ! ಶೀನನಿಗೆ 'ಇಕ್ ಶೀ' ಸೀನು ಬಂತು. ಸೀನಿನ ಶಬ್ದಕ್ಕೆ ಗಾಡಿ ಎತ್ತು ಮೈ ತೆಗೆಯಿತು. 'ಅಚ್ಚೊ ಅಚ್ಚಾ ಅಚ್ಚೆ ಅಚ್ಚಾ ಅಚ್ಯಚೋ—' ಭಯಂಕರ ಗದ್ದಲ. ಎತ್ತು ಹೌಹಾರಿತು. ಆಕಾಶಕ್ಕೆ ನೆಗೆಯಿತು.

ಅಲ್ಲೋಲ ಕಲ್ಲೋಲ! ಗಾಡಿ ನೇಲಕ್ಕೆ ರಟ್ಟಿತು. ಮುಂದೆ ಇದ್ದ ಶೀನ ಗಾಡಿಯ ಹಿಂದಿನಿಂದ ಹಿಂಗಾಣ ಮುಂಗಾಣ ಹಾಕಿ ಕೆಳಕ್ಕೆ ಉರುಳಿದ. ಗಾಡಿಯಲ್ಲಿದ್ದ ಗಂಟು ಮೂಟೆಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಚದರಿಬಿದ್ದುವು. ಕೆಲವು ಮೂಟೆಗಳು ಕಟ್ಟು ಬಿಚ್ಚಿಹೋಗಿ ಮೆಣಸಿನಕಾಯಿ ನೆಲಕ್ಕೆ ಸುರಿದುಬಿತ್ತು. ತರಕಾರಿಗಳೆಲ್ಲ ಎಲ್ಲೆಲ್ಲೂ ಹಾರಿಹೋದುವು.

ಇದನ್ನು ನೋಡಿದ ಆಡಿಗೆ ಹೆದರಿಕೆ ಆಯಿತು; ಅರಚಲು ಬಾಯಿ ಬಿಟ್ಟಿತು— "ಬೊವ್ವೋ ಬೊಕ್, ಬೊಕ್, ಬೊಕ್ ಬೊವ್ವೋ." ಇದೆಂತಹ ಬೊಬ್ಬೆ? ಆಡು ಭಯಭ್ರಾಂತಿಗಳಿಂದ ಕಾಲ್ತೆಗೆದು ಮೇಲಕ್ಕೆ ಹಾರಿತು.





ದನಕ್ಕೂ ಬಹಳ ಭಯವಾಗಿತ್ತು. ಅದು ನಾಯಿಯ ಸಮೀಪಕ್ಕೆ ಸರಿಯಿತು. ಆಡೂ ಹತ್ತಿರಕ್ಕೆ ಬಂತು. ನಾಯಿ ನೋಡುತ್ತದೆ– ಆಡಿನ ತಲೆಯ ಮೇಲೆ ದನದ ಕೊಂಬುಗಳು! ದನಕ್ಕೆ ಬಂದಿವೆ ಆಡಿನ ಕಿವಿಗಳು. ಆಡಿನ ಮತ್ತು ದನದ ಕೆಚ್ಚಲುಗಳು ಅದಲುಬದಲಾಗಿವೆ. ಈಗ ಆಡೂ ದನವೂ ವಿಕಾರವಾಗಿ ತೋರುತ್ತಿದ್ದುವು. ವಿಕಟರೂಪ ಪಡೆದ ಸಂಗಾತಿಗಳನ್ನು ಪರಿಹಾಸ್ಯ ಮಾಡಲು ನಾಯಿ ಬಾಯಿ ತೆರೆಯಿತು. ಅದರ ಗಂಭೀರ ಸ್ವರ ಇರಲಿಲ್ಲ. ನಾಯಿ ಬಾಯಿ ಅಗಲ ತೆರೆದು ಬೊಬ್ಬಿಟ್ಟಿತು 'ಹಿಂ ಹಿಂ ಹೀಂ' ಎಂದು ಗಂಟಲಿಂದ ಚಿಕ್ಕ ಸದ್ದು ಹೊರಟಿತು. ನಾಯಿಗೆ ದಂಗುಬಡಿದಂತಾಯಿತು. ಒಮ್ಮೆಗೆ ಗಾಬರಿಗೊಂಡರೂ ನಾಯಿಗೆ ಬುದ್ಧಿ ಇಲ್ಲವೇ? ಅಲ್ಲೆ ಒಂದು ಕಡೆಗೆ ಸರಿದು ಸ್ವಸ್ಥ ಕುಳಿತುಕೊಂಡಿತು; ವಸಡಿಗೆ ಕೈಗೊಟ್ಟು ಆಳವಾಗಿ ಆಲೋಚಿಸತೊಡಗಿತು. ಈ ಬಗೆಯ ಗೊಂದಲ, ಯುವ್ವಾತದ್ವಕ್ಕೆ ಕಾರಣ?

ನಾಯಿ ಹೀಗೆ ಕುಳಿತುಕೊಂಡು ವಿಚಾರಮಾಡುವಾಗ ಹೆದರಿದ ದನ ಕೈಚಾಚಿ ನೋಡಿತು. ತಲೆಯ ಮೇಲಿನ ಕೊಂಬುಗಳು ಇರಲಿಲ್ಲ! ಆಡು ನೋಡಿತು! ತಲೆಯ ಮೇಲೆ ದೊಡ್ಡ ಕೊಂಬುಗಳು! ದನ ಕೆದರಿಕೊಂಡು ತನ್ನ ನಾಲ್ಕು ಮೊಲೆಯ ಕೆಚ್ಚಲು ತನಗೇ ಸಿಕ್ಕಬೇಕೆಂದು ಆಡಿನ ಮೇಲೆ ಕೈ ಮಾಡಿತು. ಆಡಿಗೂ ಈಗ ಗರ್ವ! ಅದು ದನದ ತಲೆಗೇ ಎರಡೂ ಕೈ ಹಾಕಿತು. ಅಲ್ಲಿದ್ದ ತನ್ನ ಕಿವಿಗಳನ್ನು ಚಿವುಟಿ ಎಳೆದುಕೊಳ್ಳಲು ಹವಣಿಸಿತು! ಏನು ಹುಚ್ಚಾಟ! ಏನು ರಂಬಾರೂಢಿ!

ಸಂಗಾತಿಗಳ ಜಗಳ ನೋಡಿ ನಾಯಿ ಬಾಲ ಎತ್ತಿ ಬಾಯಿ ತೆರೆದು ಮುಂದಕ್ಕೆ ನೆಗೆಯಿತು. ಹೊಯ್‌ಕೈ ಮಾಡುತ್ತಿರುವ ಅವನ್ನು ತಡೆಯದಿದ್ದರೆ ಅಲ್ಲೆ ಹೆಣ ಬಿದ್ದೀತಲ್ಲವೆ! ನಾಯಿಗೆ ಈಗ ಗೌಜಿ ಮಾಡಿ ಬೊಗಳಲು ಬರುತ್ತದೆಯೇ! ಅದು "ಕುಂಯಿ ಕುಂಯಿ" ಸ್ವರದಿಂದ ಆಡುತ್ತ ಆಡು ದನಗಳೊಡನೆ ಹೊಡೆದಾಡದಂತೆ ಬೇಡಿಕೊಂಡಿತು. ಸ್ವಲ್ಪ ಸಮಯದಲ್ಲಿ ಆಡು ದನಗಳ ಸಿಟ್ಟು ಇಳಿಯಿತು. ಮೂರೂ ಶಾಂತವಾದುವು. ಅವುಗಳ ಮುಖಗಳು ಸುಟ್ಟುಹೋದಂತಿದ್ದುವು.



ಕೊನೆಗೆ ನಾಯಿ ಎಂದಿತು: ಬಂಧುಗಳೆ! ಮರುಗಿ ಫಲವಿಲ್ಲ. ಇದೆಲ್ಲ ಆ ಹೀನ ಶೀನನ ಸೀಸಿನ ಕಾರುಬಾರು. ಇಷ್ಟೆಲ್ಲಾ ಹಾವಳಿ ಮಾಡಿಯೂ ಓಡಿಬಿಟ್ಟಿದ್ದಾನಲ್ಲ ಆ ಕೋಣ! ಒಮ್ಮೆ ಅವನನ್ನು ಹಿಡಿಯೋಣ! ಆ ಮೇಲೆ ಎಲ್ಲ ಕೆಲಸ."






ಆಡು, ನಾಯಿ, ದನ ಶೀನನ ಬೆನ್ನಟ್ಟಿ ಹೊರಟವು. ಶೀನನ ಗಾಡಿ ಎಷ್ಟೊ ಮುಂದೆ ಓಡಿಹೋಗಿರಬೇಕು. ಅವು ಮೂರೂ ಸಟಸಟನೆ ನಡೆದುವು. ಆಗ ದಾರಿಯಲ್ಲಿ ಅವಕ್ಕೆ ಒಂದು ಹೇಂಟೆ ಸಿಕ್ಕಿತು. ಅದರ ಮೈಯ ಗರಿಗಳೆಲ್ಲ ಉದುರಿಬಿದ್ದಿವೆ. ಪಾಪದ ಹೇಂಟೆ ಬಿಕ್ಕಿ ಬಿಕ್ಕಿ ಅಳುತ್ತ ಬಿದ್ದ ಗರಿಗಳನ್ನು ಹೆಕ್ಕುತಿತ್ತು. ಹೆಕ್ಕಿ ಹೆಕ್ಕಿ ಗರಿಗಳನ್ನೆಲ್ಲ ಒಂದು ಬುಟ್ಟಿಯಲ್ಲಿ ತುಂಬಿಸಿತು. ಇದೂ ಸೀನಿನ ಹಾವಳಿ. ನಾಯಿ, ಆಡು, ದನಗಳ ಸಂಗಡ ಹೇಂಟೆ ಬುಟ್ಟಿಯನ್ನು ಕಚ್ಚಿಹಿಡಿದು ಹೊರಟಿತು.

ಛೆ! ಛೆ! ಛೀ! ಹೀಗೂ ಉಂಟೆ! ಅಲ್ಲಿ ಒಂದು ದೊಡ್ಡ ಹುಂಜ! ಅದರ ವಿಕಟ ಸ್ವರೂಪವೇ? ಬಾಲದಲ್ಲಿ ವಿವಿಧ ಬಣ್ಣಗಳಿಂದ ಕಂಗೊಳಿಸಬೇಕಾದ ಕತ್ತಿಯಾಕಾರದ ಗರಿಗಳೆಲ್ಲ ಅದರ ತಲೆಯ ಮೇಲೆ



ಏರಿವೆ. ಬಾಲವೋ? ಮೊಂಡಾಗಿದೆ! ತಲೆಯ ಮೇಲಿನ ಕೆಂಬಣ್ಣದ ಜುಂಜು, ಅದರ ಕೀರ್ತಿ ಕಿರೀಟ, ಶಿಖೆ, ನೆಲಕ್ಕೆ ಉರುಳಿದೆ. ಜುಂಜು ಹುಂಜದ ಹೆಮ್ಮೆಯ ಗಂಟು. ಅದನ್ನು ಹುಂಜ ಬಿಟ್ಟೀತೆ! ಪ್ರಾಣಹೋದರೂ ಬಿಡೆನೆಂದು ಉದುರಿದ ಶಿಖೆಯನ್ನು ಬಾಯಲ್ಲಿ ಎತ್ತಿಕೊಂಡಿದೆ.

ಅಷ್ಟರಲ್ಲಿ ನಾಯಿ, ಆಡು, ದನ ಮತ್ತು ಹುಂಜ ಅಲ್ಲಿ ಬಂದುವು. "ಅಯ್ಯೊ! ಎಲ್ಲರಿಗೂ ಇದೇ ಪ್ರಸಾದವೆ! ಹಾ! ಆ ಹಾಳಾದ ಶೀನ!" ಎಂದು ಅದು ಅವರನ್ನು ಕೂಡಿ ಮುಂದಕ್ಕೆ ಹೊರಟಿತು.



ಮುಂದೆ ಹೋಗುವಾಗ ಅಲ್ಲಿ ಒಂದು ವಿಚಿತ್ರ! ಒಹೊ! ಇವನಾರು! ಶಾಲೆಗೆ ಹೊರಟ ಹುಡುಗ! ಅಯ್ಯಯ್ಯೋ! ಅವನ ಚಲೋದಾದ ಅಂಗಿ ಹರಿದು ಎರಡು ಸೀಳು! ಇದೇನು! ಅವನ ಪುಸ್ತಕದ ಚೀಲ ಮತ್ತು ಕೊಡೆ ಮರದ ಮೇಲೆ ಗೆಲ್ಲಿನಲ್ಲಿ ಸಿಕ್ಕಿಕೊಂಡಿವೆ! ಬೆಪ್ಪನ ಹಾಗೆ ಕಣ್ಣನ್ನು ಒರಸುತ್ತ ಅಳುತ್ತಿದ್ದಾನೆ. ನಾಯಿ, ದನ ಮೊದಲಾದುವುಗಳು ಸಾಲು ಕಟ್ಟಿ ಬರುವುದನ್ನು ಹುಡುಗ ಅರೆಗಣ್ಣಿಕ್ಕಿ ನೋಡಿದ. ಅಕಟ ವಿಕಟ ಸ್ವರೂಪದ ಪ್ರಾಣಿಗಳು ಹತ್ತಿರಕ್ಕೆ ಬರುತ್ತಿವೆ. ದೃಷ್ಟಿ ಶುಭ್ರಮಾಡಿ ಹುಡುಗ ಸರಿಯಾಗಿ ನೋ




ಡಿದ. ಅವನಿಗೆ ಅಂದಾಜು ಆಯಿತು– ಇವೆಲ್ಲವೂ ಶೀನನ ಸೀನಿನ ಹಾವಳಿಗೆ ತುತ್ತಾದುವುಗಳೇ! ನಾಯಿ ಆರಚಿ ಆಡು ಬೊಗಳುವಾಗ ಹುಡುಗನಿಗೆ ಎಲ್ಲಿಲ್ಲದ ನಗು ಬಂತು. ನಗುವಿನೊಂದಿಗೆ ಹುರುಪೂ ಬಂತು. “ಹೊರಡಿ ನೋಡೋಣ! ಆ ಶನಿ ಸೀನಿನ ಶೀನ ಎಲ್ಲಿ ಹೋದ ನೋಡೋಣ! ಆ ಮೇಲೆ ಎಲ್ಲ ಕೆಲಸ” ಎಂದು ಹೊರಟೇ ಬಿಟ್ಟ.

ಮುಂದೆ ಅಂಗಿ ಹರಿದ ಹುಡುಗ! ಹಿಂದೆ ಎರಡು ಹಕ್ಕಿಗಳು! ಮೂರು ಮೃಗಗಳು! ಈ ಪಡೆ ಹುಡುಗನ ಮುಂದಾಳುತ್ವದಲ್ಲಿ ಮುನ್ನಡೆಯಿತು. ಅಲ್ಲೆ ಇದಿರಲ್ಲಿ ಒಬ್ಬ ಹುಡುಗಿ! ಸಣ್ಣ ಹುಡುಗಿ! ಕೋಪದಿಂದ ಚಂಡಿಕೆಯೇ ಆಗಿ ಬಿಟ್ಟಿದ್ದಾಳೆ! ಅಯ್ಯಮ್ಮ! ಅವಳ ಕೆರಳಿದ ಕಣ್ಣುಗಳೇ! ಏನನ್ಯಾಯ! ಅಂದವಾಗಿ ಹೆಣೆದು ಆಚೆ ಈಚೆ ಕಟ್ಟಿದ ಆಕೆಯ ಎರಡೂ ಜಡೆಗಳು ತುಂಡಾಗಿವೆ! ಆಹಾ! ಎಷ್ಟು ಚೆಂದದ ಜಡೆಗಳು! ತುರುಬಿಟ್ಟ ರಿಬ್ಬನ್ ಇನ್ನೆಷ್ಟು ಚಂದ! ಎರಡು ಜಡೆಗಳನ್ನು ಎರಡು ಕೈಗಳಲ್ಲಿ ಬಿಗಿಯಾಗಿ ಹಿಡಿದು ‘ಖದಂ’ ಹಾಕಿ ನಿಂತಿದ್ದಾಳೆ.

ಹುಡುಗನ ಪಟಲಾಂ ಹತ್ತಿರಕ್ಕೆ ಬಂತು. ಹುಡುಗಿ ಕಣ್ಣೀರ ಕೋಡಿ ಹರಿಸುತ್ತಿದ್ದಳು. ಇದಿರಲ್ಲಿ ಬಂದವರನ್ನೆಲ್ಲ ನೋಡಿ ಬೇಗ ಬೇಗನೆ ಕಣ್ಣೊರಸಿಕೊಂಡಳು. ಇದೇನವಸ್ಥೆ! ಎಲ್ಲರಿಗೂ ಆ ಸೀನಿನ ಪ್ರತಾಪ ತಾಟಿವೆ. “ಇದಕ್ಕೇನು ಅರ್ಥ ಉಂಟೋ ಇಲ್ಲವೊ! ಆ ಹಾಳು ಶೀನನಿಗೆ ಕೇಳುವವರಿದ್ದಾರೋ ಇಲ್ಲವೊ ನೋಡೋಣ. ನಾನೂ ನಿಮ್ಮೊಡನೆ ಬರುತ್ತೇನೆ,” ಎಂದು ಅವಳೂ ಹೊರಟು ಬಿಟ್ಟಳು.










ಈ ಪಡೆ ಮುಂದೆ ಸಾಗಿತು. ಅಲ್ಲಿ ಕಬ್ಬಿನ ಹೊಲದ ಸಮೀಪ ಒಂದು ನರಿ ಅವರಿಗೆ ಕಾಣಸಿಕ್ಕಿತು. ಭೇಷ್ ಅದರ ಹಿಂದೆ ಇದ್ದ ಗೊಂಡೆ ಬಾಲ ನೆತ್ತಿಯ ಮೇಲೆ ಕೊಡಿ ಏರಿಸಿದ ಹಾಗೆ ಎತ್ತರಕ್ಕೆ ಕಾಣಿಸುತ್ತಿದೆ. ಇನ್ನು ಆಯಿತು ಅದರ ಪಾಡು! ಅಡಗಿ ನುಗ್ಗಿ ಕಳ್ಳಾಟಿಕೆ ಮಾಡಲು ಇನ್ನೂ ಸಾಧ್ಯವೇ? ನೆತ್ತಿಯ ಮೇಲೆ ನೆಟ್ಟ ಕೊಡಿ ಬಾಲ ಎಷ್ಟು ದೂರಕ್ಕೂ ಎದ್ದು ಕಾಣಿಸುವುದಲ್ಲ! ಅದನ್ನು ತಲೆಯ ಮೇಲೆ ಹೊತ್ತುಕೊಂಡು ನರಿ ಇನ್ನು ದಿನ ಕಳೆಯಲಿಕ್ಕುಂಟೇ? ಚಿಂತಿಸುತ್ತ ಕುಳಿತುಕೊಂಡ ನರಿ ಈ ದೊಡ್ಡ ಚಿತ್ರವಿಚಿತ್ರ ಪಾಳ್ಯವನ್ನು ನೋಡಿತು. "ಚಿಂತಿಲ್ಲ! ನಾನೊಬ್ಬನೇ ಅಲ್ಲ! ಮಿಕ್ಕವರೂ ಇದಾರೆ," ಎಂದು ತನ್ನಷ್ಟಕ್ಕೆ ಸಮಾಧಾನ ಅಂದುಕೊಂಡಿತು. ನರಿ ಎಂದರೆ ತಂತ್ರದ ಬುರಡೆಯಲ್ಲವೇ! ಬಂದವರೆಲ್ಲ ನರಿಯನ್ನು ಕರಕೊಂಡು ಶೀನನನ್ನು ಹುಡುಕುತ್ತ ದಾಡಾದಾಡಿ ಮುಂದೆ ನಡೆದುವು.

ಹೊತ್ತು ಇಳಿಯುವಾಗ ಅವರು ಒಂದು ಮನೆಯನ್ನು ಸಮೀಪಿಸಿದರು. ಪಾಗಾರದ ಹಿಂದಿನಿಂದ ಎಲ್ಲರೂ ಇಣಿಕಿ ನೋಡಿದಾಗ ಮನೆಯ ಕಿಟಕಿಯಲ್ಲಿ ಅವರಿಗೆ






ಶೀನ ಕಾಣಿಸಿಕೊಂಡನು. "ಗಾಡಿಯಲ್ಲಿ ಸರಕು ತುಂಬಿಸಿ ಪುನಃ ಪರ್ಯಟನಕ್ಕೆ ಸಿದ್ಧನಾಗಿದ್ದಂತೆ ತೋರುತ್ತಿದೆ. ಇನ್ನು ಇವನನ್ನು ಬಿಟ್ಟರೆ ಬಚಾವಿಲ್ಲ! ಊರಿಗೇ ಊರೇ ಕವುಚಿ ಬಿದ್ದೀತು! ಈಗಲೆ ಇವನನ್ನು ಹಿಡಿಯಬೇಕೆಂದು ಬಂದವರೆಲ್ಲ ಪಾಗಾರಿನ ಒಳಕ್ಕೆ ನುಗ್ಗಿದರು.

ಗ್ರಹಚಾರ! "ಇಶ್ಶಿ! ಇಶೀಶಿ! ಹಿ-ಶ್ಶೋ" ಎಂದು ಶೀನ ಸೀನಿಯೇ ಬಿಟ್ಟ. ಕೂಡಲೇ ಆಯಿತು ಅನಾಹುತ. ಕ್ಷಣಾರ್ಧದಲ್ಲಿ ಗಾಡಿಗೆ ಕಟ್ಟಿದ ಎತ್ತು ಗಾಳಿಯಲ್ಲಿ ಮೇಲಕ್ಕೆ ಹಾರಿ ಮನೆ ಮಾಡಿನ ಮೇಲೆ ಬಿತ್ತು! ಅಬ್ಬಬ್ಬ! ಹೆದರಿದ ಅದರ ಕಣ್ಣು ಮುಖಗಳೇ! ಕೈ ಕಾಲು ಚಾಚಿ ಕಂಗಾಲಾಗಿ ಬಿದ್ದ ಎತ್ತಿನ ಮೇಲೆ ಮಗುಚಿ ಬಿದ್ದ ಗಾಡಿ! ಅಯ್ಯೋ! ಆ ಎತ್ತಿಗೆ ಎಷ್ಟು ಕಳವಳ! ತಳಮಳ! ಗಾಡಿಯಲ್ಲಿದ್ದ ಸರಕೆಲ್ಲಾ ಚಲ್ಲಾಪಿಲ್ಲಿಯಾಗಿ ಚೆಲ್ಲಿ ಹೋಗಿತ್ತು.

ಶೀನ ಹೆಗಲವಸ್ತ್ರದಿಂದ ಮೂಗನ್ನು ಒರಸುತ್ತ ಮೆಲ್ಲಗೆ ಬಾಗಿಕೊಂಡು ಮನೆಯ ಹೊರಕ್ಕೆ ಬಂದ. ಹುಬ್ಬುಗಂಟಿಕ್ಕಿ ಕಣ್ಣುಗಳನ್ನು ಹೊರಳಿಸಿ ಶೀನ ಅತ್ತಿತ್ತ ನೋಡಿದ. ಇದಿರಲ್ಲಿ ಹುಡುಗ, ಹುಡುಗಿ, ಮೃಗಪಕ್ಷಿಗಳು. ಕಣ್ಣನ್ನು ತೆರೆದು ಶೀನ ಪುನಃ ನೋಡಿದ. ಎಲ್ಲರೂ ಸಾಲಾಗಿ ನಿಂತುಕೊಂಡು ಅಂಜಿಕೆಯಿಂದ ತನ್ನನ್ನೇ ದುರದುರನೆ ನೋಡುತ್ತಿದ್ದಾರೆ. ಅಕಟ ವಿಕಟ ರೂಪುಗಳನ್ನು ನೋಡಿ ಈ ವರೇಗೆ ನಗಾಡದ ಶೀನನಿಗೆ ಎಲ್ಲಿಲ್ಲದ ನಗೆ ಒಮ್ಮೆಗೇ ಬಂದುಬಿಟ್ಟಿತು. ಅವನು ಜಗ್ಗನೆ ನೆಟ್ಟಗೆ ನಿಂತು ಎಲ್ಲರನ್ನೂ ನೋಡಿ ಹಲ್ಲು ಬಿಟ್ಟು ನಕ್ಕ! ನಕ್ಕು ನಲಿದ!

ಬಂದವರಿಗೆಲ್ಲ ಹೀಗೆ ನಗಾಡಿ ಕುಣಿದಾಡುವ ಶೀನನನ್ನು ಕಂಡು ಸಿಟ್ಟು ನೆತ್ತಿಗೆ ಏರಿತು. ಇಷ್ಟೆಲ್ಲ ಹಾವಳಿ ಮಾಡಿಯೂ ನಗಾಡುವ ಈ ಹುಚ್ಚ ಲುಚ್ಚನಿಗೆ ಏನು ಮಾಡಬೇಕು, ಏನು ಮಾಡಬಾರದೆಂದು ಅವರಿಗೆ ತಿಳಿಯಲಿಲ್ಲ.



ಕೊನೆಗೆ ನಗಾಡಿ, ನಗಾಡಿ ಸೋತು ಹೋದ ಶೀನ "ಹುಸ್ಸಪ್ಪ" ಎಂದು ಅಂಗಳದಲ್ಲಿದ್ದ ಕಟ್ಟೆಯ ಮೇಲೆ ಕುಳಿತ. ಸಿಟ್ಟಿಗೆದ್ದ ಪಾಳ್ಯವಿಡೀ ಅವನನ್ನು ಮುತ್ತಿಗೆ ಹಾಕಿತು. ಸಿಡಿಮಿಡಿಗೊಂಡು ಅವರೆಲ್ಲರೂ ಶೀನನಿಗೆ ಕುಕ್ಕಿ ಕುಕ್ಕಿ ಬೈದುವು. ಗಂಟಲು ಬಿರಿಯುವ ತನಕ ಗದರಿಸಿ ಒದರಿದುವು. "ನಿನ್ನಿಂದಲೇ ಆದ ಈ ಎಲ್ಲ ಗೊಂದಲಗಳನ್ನು ಒಡನೆ ಸರಿಪಡಿಸದಿದ್ದರೆ ನಿನ್ನನ್ನು ಈಗಲೇ ಕೊಂದು ಬಿಡುವೆವು" ಎಂದು ಬೆದರಿಸಿಬಿಟ್ಟುವು. ಇದು ದೊಡ್ಡ ಪಜೀತಿಯಾಯಿತಲ್ಲ! ಬಂದವರನ್ನೆಲ್ಲ ಹೇಗಾದರೂ ಮಾಡಿ ಶೀನ ಸಂತೈಸಿದ. ತನ್ನ ಶೀನಿನಿಂದ ಊರಲ್ಲೆಲ್ಲ ಇಷ್ಟು ಹಾವಳಿಯಾದೀತೆಂದು ಅವನು ಕನಸಿನಲ್ಲಿಯೂ ಗ್ರಹಿಸಿರಲಿಲ್ಲ. ಶೀನ ಮುಖವನ್ನು ಮಾರುದ್ದ ಮಾಡಿದ. ಹುಬ್ಬುಗಳನ್ನು ಮೇಲಕ್ಕೇರಿಸಿ ಬಹಳ ಆಳವಾಗಿ ಯೋಚನೆ ಮಾಡತೊಡಗಿದ. ಅವನಿಗೆ ಏನೂ ಉಪಾಯ ಹೊಳೆಯಲಿಲ್ಲ. ತಲೆಗೆ ಎರಡೂ ಕೈಕೊಟ್ಟು ಶೀನ ಯೋಚಿಸಿದ. ಆದದ್ದಾಗಲಿ! ಇನ್ನು ಒಂದೇ ಉಪಾಯ! ಒಳ್ಳೆದಾಗಲಿ, ಕೆಟ್ಟದಾಗಲಿ, ಸೀನುಗಳನ್ನು ಹೊರಡಿಸುವುದೆಂದು ನಿರ್ಧರಿಸಿದ. ಕೊನೆಗೆ ಒಳಗೆ ಹೋಗಿ ಎರಡು ಮಣೆಗಳನ್ನು ಶೀನ ತಂದನು. ಒಂದು ಡಬ್ಬಿ ಮೆಣಸಿನ ಹುಡಿಯನ್ನು ತಂದನು. ತಾನೊಂದು ಮಣೆಯಲ್ಲಿ ಕುಳಿತುಕೊಂಡು ಡಬ್ಬಿಯನ್ನು ಸಣ್ಣ ಹುಡುಗಿಯ ಕೈಗೆ ಕೊಟ್ಟನು. ಆಕೆ ಇನ್ನೊಂದು ಮಣೆಯಲ್ಲಿ ನಿಂತು ಮೆಣಸಿನ ಹುಡಿಯನ್ನು ತನ್ನ ಮೂಗಿನೊಳಕ್ಕೆ ಎರಚುವಂತೆ ಹೇಳಿಕೊಟ್ಟನು. ಹೇಂಟೆಯ ಗರಿಯನ್ನು ಮೆಣಸಿನ ಹುಡಿಯಲ್ಲಿ ಅದ್ದಿ ಹುಡುಗಿ ಶೀನನ ಮೂಗಿಗೆ ಬಹಳವಾಗಿ ಹಾಯಿಸಿದಳು. ಶೀನ ಉದ್ದ ಮೂಗನ್ನು ಒಡ್ಡಿಕೊಟ್ಟನು.

ಸೈ! ಸೈ! ಆಗ ಶೀನನಿಗೆ ಮಹಾ ಮಹಾ ಸೀನುಗಳು ಬಂದೇ ಬಿಟ್ಟವು. ಒಂದರಕ್ಕಿಂತ ಒಂದು ಮಿಗಿಲು! ಒಳ್ಳೆದು ಕೆಟ್ಟದು ಆ ಸೀನುಗಳೆಲ್ಲ ಕೂಡಿಕೊಂಡಿತ್ತು. ಶೀನ ಮುಷ್ಟಿಕಟ್ಟಿ ಕಾಲೆತ್ತಿ ಸೀನಿನ ಮೇಲೆ ಸೀನುಗಳನ್ನು ಹಾರಿಸಿದ.

ಮೊದಲ ಸೀನಿಗೆ ಅಲ್ಲಿ ಭೂಕಂಪವೇ ಆಯಿತು. ಗಾಡಿ, ಎತ್ತು, ದೀಪ, ದಾನಿ, ಮಣೆ, ಗಾಣ ಒಮ್ಮೆಯೇ ಎಲ್ಲವೂ ದಿಕ್ಕಾಪಾಲಾಗಿ ಚೆದರಿ ಹಾರಿದುವು. ಶೀನನ ಸೀನುಗಳಿಂದ ಸುತ್ತಲೂ ಬಿರುಗಾಳಿಯೇ ಎದ್ದಿತು. ಆ ಬಳಿಕ ಅದು ಸುಂಟರ








ಗಾಳಿಯಾಯಿತು. ಸುಂಟರ ಗಾಳಿಯು ಹುಯಿಲು ಎಲ್ಲೆಲ್ಲೂ ಎಲ್ಲರನ್ನು ಆವರಿಸಿತು. ಒಳ್ಳೆಯ ಚಿಹ್ನೆಗಳೇ ಕಾಣಿಸಿಕೊಂಡವು.

ಅಷ್ಟರಲ್ಲಿಯೇ ಶೀನನ ಸೀನುಗಳು ನಿಂತಿದ್ದವು. "ಬದುಕಿದೆ! ಅಪ್ಪ! ಬದುಕಿದೆ" ಎಂದನವ. ಬಿರುಗಾಳಿ ಸುಂಟರಗಾಳಿ ಎಲ್ಲವನ್ನೂ ಎಲ್ಲರನ್ನೂ ಸುಸಜ್ಜಿತಪಡಿಸಿತು. ಅದಲು ಬದಲು ಕಳೆಯಿತು! ಅವ್ಯವಸ್ಥೆ ವ್ಯವಸ್ಥೆಯಾಗಿ ಎಲ್ಲವೂ ಹಿಂದಿನಂತೆ ಏರ್ಪಟ್ಟಿತ್ತು.



ಶೀನ ಮೂಗನ್ನೊರಸುತ್ತ ಮನೆಯ ಒಳಕ್ಕೆ ಹೋದ. ಪುನಃ ಎಲ್ಲಿಯಾದರೂ ಹಾಳು ಸೀನುಗಳು ಬಂದು ಬಿಟ್ಟರೆ–ಎಲ್ಲ ಬಣ್ಣ ಮಸಿ ನುಂಗಿದಂತೆ ಆಗುವುದಲ್ಲವೇ ಎಂಬ ಅಂಜಿಕೆ ಅವನಿಗೆ. ಒಳಕ್ಕೆ ಹೋಗಿ ಅಡಗಿಕೊಂಡು ಮೂಗುಬಾಯಿಗಳನ್ನು ಬಿಗಿಯಾಗಿ ಹಿಡಿದುಕೊಂಡ! ಬಂದವರಿಗೆಲ್ಲ ಈಗ ಹಿಗ್ಗು. ಶೀನನನ್ನು ಬೀಳ್ಕೊಂಡು ಬೇಗ ಹೋಗಬೇಕೆಂದು ಅವರಿಗೂ ತವಕ. ಅವು ಒಳ ಹೊಕ್ಕು ಬಾಗಿಲ ಮರೆಯಲ್ಲಿ ಶ್ವಾಸಬಿಗಿದು ನಿಂತ ಶೀನನನ್ನು ಅವಸರ ಅವಸರವಾಗಿ ನೋಡಿ, ಉಪಕಾರ ಹೇಳಿ ಒಡನೆ ಹೊರಕ್ಕೆ ತೆರಳಿದುವು. ಕೂಡಲೇ ಹಿತ್ತಲ ಪಾಗಾರು ದಾಟಿ ಎಲ್ಲರೂ ದೌಡಾದೌಡಿ ಓಡಿದ್ದೆ ಓಡಿದ್ದು. ಆಗ ಎಲ್ಲರ ಹರುಷಕ್ಕೆ ಪಾರವೇ ಇರಲಿಲ್ಲ.



ಆರ್ಯ ಸಂಸ್ಕೃತಿ

(ಲೇಖಕ: ಶ್ರೀ। ಕೊ. ಶ. ಕಾರಂತ, ಬಿ.ಎ., ಬಿ.ಎಲ್., ಮಂಗಳೂರು—3)

ಆರ್ಯ ಸಂಸ್ಕೃತಿ ಎಂದರೆ ಆರ್ಯರ ಸಂಸ್ಕೃತಿ. ಈ ಎರಡು ಸಂಸ್ಕೃತ ಪದಗಳ ಅರ್ಥವಾಗದೆ ಆರ್ಯ ಸಂಸ್ಕೃತಿ ಏನೆಂದು ತಿಳಿಯುವಂತಿಲ್ಲ.

ಸಮ್ಯಕ್ ಕೃತಿ ಸಂಸ್ಕಾರ. ಸಮ್ಯಕ್ ಸಂಸ್ಕಾರವೇ ಸಂಸ್ಕೃತಿ. ಭೂಷಣ, ಅಲಂಕಾರ ಎಂಬರ್ಥವುಳ್ಳ ಸಮ್ ಉಪಸರ್ಗದೊಡನೆ ಕೃಧಾತು ಸೇರಿ ಸಂಸ್ಕಾರ ಪದವು ನಿಷ್ಪನ್ನವಾಗಿದೆ. ಭೂಷಣಭೂತ ಸಂಸ್ಕಾರವೇ ಸಂಸ್ಕೃತಿ. ಆರ್ಯ ಪದವು ಅರ್ ಎಂಬ ಧಾತುವಿನಿಂದ ಸಿದ್ಧ. ಅರ್ ಎಂದರೆ ಶ್ರೇಷ್ಠತೆ, ಉಚ್ಚತೆ ಎಂಬಿತ್ಯಾದಿ ಅರ್ಥಗಳಿವೆ. ಆರ್ಯನೆಂದರೆ ಶ್ರೇಷ್ಠನು. ಆರ್ಯನು ತನ್ನ ಉನ್ನತಿಗಾಗಿ, ಅಗ್ರಗತಿಗಾಗಿ ಅಥವಾ ಉರ್ಧ್ವಾರೋಹಣಕ್ಕಾಗಿ ಕರ್ಮವನ್ನು ಮಾಡುತ್ತಿದ್ದಾನೆ. ತನ್ನ ಪರಿಪೂರ್ಣತೆಗಾಗಿ ಆರ್ಯನು ಮಾಡುವ ಎಲ್ಲಾ ಆಚಾರ, ವಿಚಾರಕರ್ಮ ಇವುಗಳ ಪರಂಪರೆಗಳೇ ಆರ್ಯನ ಸಂಸ್ಕೃತಿ. ವೇದವೇ ಆರ್ಯ ಸಂಸ್ಕೃತಿಗೆ ಆದಿ ಸ್ರೋತವು. ಆರ್ಯ ಸಂಸ್ಕೃತಿಯ ಅವಲೋಕನವೇ ಈ ಲೇಖನದ ಧ್ಯೇಯವು.

ಆರ್ಯ ಸಂಸ್ಕೃತಿಯು ಜೀವನದ ಎಲ್ಲಾ ಮುಖವನ್ನು ಉಜ್ವಲಗೊಳಿಸುತ್ತದೆ. ವ್ಯಷ್ಟಿ, ಸಮಷ್ಟಿ, ಸಮಾಜ, ಮತ್ತು ದೇಶ ಇವುಗಳ ಉನ್ನತಿಯೇ ಆರ್ಯ ಸಂಸ್ಕೃತಿಯ ಧ್ಯೇಯವು. ಅದು ಬಾಹ್ಯಜೀವನದ ಉತ್ಕರ್ಷೆಯಿಂದ ತೃಪ್ತಿಯಾಗಿ ಇರುವುದಿಲ್ಲ. ಭೌತಿಕಸಂಪತ್ತು ಮತ್ತು ಅಭ್ಯುದಯವನ್ನು ಜೀವನದ ಸರ್ವಸ್ವವಾಗಿ ಆರ್ಯ ಸಂಸ್ಕೃತಿಯು ಇಟ್ಟುಕೊಂಡಿರುವುದಿಲ್ಲ. ಆತ್ಮೀಯ ಪರಿಪೂರ್ಣತೆಯೇ ಆರ್ಯ ಸಂಸ್ಕೃತಿಯ ಗಾಂಭೀರ್ಯ ದೃಷ್ಟಿಯು. ಆದಕಾರಣ ಆರ್ಯ ಸಂಸ್ಕೃತಿಯು ಆತ್ಮಾರ್ಥಿ ಎಂದು ಉಪನಿಷತ್ತು ಉದ್ಘೋಷಿಸುತ್ತಿದೆ.

ಪಾಶ್ಚಾತ್ಯ ಸಂಸ್ಕೃತಿಯು ವಿಲಾಸಮಯ ಜೀವನದ ಕಡೆಗೆ ಲಕ್ಷ್ಯವನ್ನಿಟ್ಟಿದೆ. ಪಾಶ್ಚಾತ್ಯ ಸಂಸ್ಕೃತಿಯು ಬಾಹ್ಯದ ಅಭ್ಯುದಯ, ಭೌತಿಕ ಸುಖಲಾಲಸೆ ಮೊದಲಾದ ಬಾಹ್ಯ ವಿಲಾಸದಲ್ಲಿ ನಿರತವಾಗಿದೆ. ಜೀವನದ ಆಂತರಿಕ ಪಕ್ಷದ ಕಡೆಗೆ ಪಾಶ್ಚಾತ್ಯ ಸಂಸ್ಕೃತಿಯು ಲಕ್ಷ್ಯವಿರುವುದಿಲ್ಲ. ಆರ್ಯ ಸಂಸ್ಕೃತಿಯು ಆಂತರಿಕ ದೃಷ್ಟಿಯಲ್ಲಿ ದೃಢವಾಗಿ ನೆಲಸಿದೆ. ಮಾನವನ ಸಾಮಾಜಿಕ, ಮತ್ತು ಸಾಂಸಾರಿಕ ಅಭ್ಯುದಯಕ್ಕೆ ಬೇಕಾದ ಆವಶ್ಯಕತೆಗಳನ್ನು ಒದಗಿಸುತ್ತ, ಆಂತರಿಕ ಪರಮ ಸುಖಪ್ರಾಪ್ತಿಗಾಗಿ ಸರ್ವಾಂತರ್ಯಾಮಿ ಪರಮಾತ್ಮನ ಪ್ರಸಾದವನ್ನು ಪ್ರಾಪ್ತಿಮಾಡುವುದೇ ಆರ್ಯ ಸಂಸ್ಕೃತಿಯ ಹಿರಿಮೆ.

ಭಾರತೀಯ ಸಂಸ್ಕೃತಿಯಲ್ಲಿ ಮಾನವನ ಪರಮ ಧ್ಯೇಯವು ಆತ್ಮಸಾಕ್ಷಾತ್ಕಾರ. ಇದು ಮಾನವಜೀವನದ ಉತ್ಕರ್ಷದ ಪರಕಾಷ್ಟತೆಯು. ಆರ್ಯ ಸಂಸ್ಕೃತಿಯಲ್ಲಿ ಸರ್ವೋಪರಿ ಮುಖ್ಯವಿಚಾರವೆಂದರೆ ಧರ್ಮ ಮತ್ತು ಈಶ್ವರ. ಈಶ್ವರನು ಧ್ಯೇಯ; ಧರ್ಮವು ಅದರ ಸಾಧನೆಯು. ಆರ್ಯ ಸಂಸ್ಕೃತಿಗೆ ಆದಿಸ್ರೋತವು ಋಕ್, ಯಜು, ಸಾಮ ಮತ್ತು ಅಥರ್ವ ಎಂಬೀ ನಾಲ್ಕು ವೇದಗಳು. ಈ ನಾಲ್ಕು ವೇದಗಳಲ್ಲಿ ಏಕೇಶ್ವರೀಯ ಉಪಾಸನೆಯು ಪ್ರತಿಪಾದಿಸಲ್ಪಟ್ಟಿದೆ. ಈ ಸರ್ವವ್ಯಾಪಿ, ಸಚ್ಚಿದಾನಂದ ಸ್ವರೂಪಿ, ಅಖಂಡ, ಅಜ, ಅನಂತ, ನಿರ್ವಿಕಾರ, ಅನಾದಿ, ಸರ್ವೇಶ್ವರ, ಸರ್ವವ್ಯಾಪಕ, ಸರ್ವಾಂತರ್ಯಾಮಿ ಸೃಷ್ಟಿಕರ್ತನ ಉಪಾಸನೆಯನ್ನು ವೇದವು ಬೋಧಿಸುತ್ತದೆ.

ಇಂದ್ರಂ ಮಿತ್ರಂ ವರುಣಮಗ್ನಿ ಮಾಹುರಥೋದಿವ್ಯ ಸ
ಸುಪರ್ಣೋಗರುತ್ಮಾನ್ ।
ಏಕಂ ಸದ್ವಿಪ್ರಾ ಬಹುಧಾವದಂತ್ಯಗ್ನಿಂ ಯಮಂ
ಮಾತರಿಶ್ವಾನಮಾಹುಃ ॥
ಋ. 3-22-6

ಈಶ್ವರನನ್ನು ಇಂದ್ರ, ಮಿತ್ರ, ವರುಣ, ಅಗ್ನಿ ಎಂದು ಕರೆಯುತ್ತಾರೆ. ಒಳ್ಳೆ ರೆಕ್ಕೆಗಳುಳ್ಳ ಪವಿತ್ರ ಗರುತ್ಮಾನ ಎಂದು ವರ್ಣಿಸುತ್ತಾರೆ. ಒಂದೇ ಒಂದಾಗಿರುವ ದೇವರನ್ನು ಅಗ್ನಿ, ಯಮ, ಮಾತರಿಶ್ವಾ ಎಂದು ಸದ್ವಿಪ್ರರು ಸಂಬೋಧಿಸುತ್ತಾರೆ. ಈ ಪ್ರಕಾರ ಪ್ರತಿಪಾದ್ಯ ಏಕೇಶ್ವರ ಉಪಾಸನೆಯು ಆರ್ಯ ಸಂಸ್ಕೃತಿಯ ಪ್ರಥಮ ಸ್ತಂಭವು.

ಓಂಕಾರ ಎಂಬುದೇ ಈಶ್ವರನ ವಾಚಕ. ಓಂಕಾರದ ವ್ಯಾಖ್ಯಾನಗಳೇ ವೇದಗಳು. ಆದಕಾರಣವೇ ತಸ್ಯೋಪನಿಷದೋಮಿತಿ ಎಂದಿದೆ. ಪರಮಾತ್ಮನ ಉಪನಿಷತ್ತೇ ಓಂ ಎಂಬರ್ಥ. ಜಗತ್ತೆಂಬುದೇ ಅಹಃ ಕಾರವು ತಸ್ಯೋಪನಿಷದ ಹುತಿ: ಜೀವ ಅಥವಾ ಜೀವಾತ್ಮನೆಂಬುದೇ ಅಹಂಕಾರವು.

ಅಹಂಕರೋತಿ ಅಹಂಕರವು. ತಸ್ಯೋಪನಿಷದಹಮಿತಿ. ಈಶ್ವರ ಜಗತ್ತು ಮತ್ತು ಜೀವ ಇವು ಪ್ರಧಾನ ಸತ್ಯತ್ರಯಿಗಳು. ಇವುಗಳ ಸಮನ್ವಯ ದೃಷ್ಟಿಯು ಆರ್ಯ ಸಂಸ್ಕೃತಿಯ ದ್ವಿತೀಯ ಆಧಾರ ಸ್ತಂಭವು.

ಸರ್ವವ್ಯಾಪಿಯಾದ ಪರಮಾತ್ಮನು ಎಲ್ಲರ ಹೃದ್ದೇಶದಲ್ಲಿಯೂ ನೆಲಸಿರುವನು. ಆದಕಾರಣ ನಮ್ಮ ಹೃದಯಕಮಲದಲ್ಲಿಯೇ ಈ ಸರ್ವವ್ಯಾಪಿ ಸಚ್ಚಿದಾನಂದ ಸ್ವರೂಪಿ ಈಶ್ವರನನ್ನು ಉಪಾಸಿಸಬೇಕೆಂಬುದೇ ಆರ್ಯ ಸಂಸ್ಕೃತಿಯ ಪ್ರಧಾನ ಬೋಧೆಯಾಗಿದೆ.

ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ
ಮಾಯಯಾ ॥

ತಮೇವ ಶರಣಂ ಗಚ್ಛ ಸರ್ವ ಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ
ಶಾಶ್ವತಮ್ ॥

ಗೀತಾ 18 — 61,62

ಹೇ ಅರ್ಜುನನೆ! ಈಶ್ವರನು ಎಲ್ಲಾ ಭೂತಗಳ ಹೃದ್ದೇಶದಲ್ಲಿ ನೆಲಸಿ ಯಂತ್ರಾರೂಢವಾಗಿರುವ ಸರ್ವ ಭೂತಗಳನ್ನು ತನ್ನ ಮಾಯಾ ಶಕ್ತಿಯಿಂದ ತಿರುಗಿಸುತ್ತಿರುವನು. ನಿನ್ನ ಸರ್ವಭಾವ ಜೀವನದಲ್ಲಿ ಈಶ್ವರನ ಶರಣ ಹೋದರೆ ಮಾತ್ರ ಆ ಈಶ್ವರಪ್ರಸಾದದಿಂದ ಶಾಶ್ವತವಾದ ಶಾಂತಿಸ್ಥಾನವನ್ನು ನೀನು ಹೊಂದು ಈ ಪ್ರಕಾರ ಭವಸಾಗರದಿಂದ ವಿಮುಕ್ತನಾಗಲು ತನ್ನ ಹೃದಯದಲ್ಲಿಯೇ ಈಶ್ವರನನ್ನು ಉಪಾಸನೆ ಮಾಡುವ ಆ ಬೋಧೆಯೇ ಆರ್ಯ ಸಂಸ್ಕೃತಿಯ ತೃತೀಯ ಸ್ತಂಭವು.

ಮನುಷ್ಯನ ಜೀವನವು ಚತುರ್ಮುಖವಾಗಿದೆ. ನಾನು ಎಂಬ ಮಮಕಾರವು ಶರೀರ, ಮನಸ್ಸು, ಬುದ್ಧಿ ಮತ್ತು ಜೀವಾತ್ಮ ಇವುಗಳ ಸಮಷ್ಟಿ ಸ್ವರೂಪವು. ಶರೀರವೂ ನಾನು, ಮನಸ್ಸು ನಾನು, ಬುದ್ಧಿಯೂ ನಾನೇ ಮತ್ತು ಜೀವಾತ್ಮನೂ ನಾನು ಎಂದು ಸದಾ ಗರ್ಜಿಸುತ್ತಿರುವುದರಿಂದ ಈ ಸಮಷ್ಟಿ ಶಕ್ತಿಸ್ವರೂಪವನ್ನು ಅಹಂಕಾರ ಎಂದು ಹೇಳುತ್ತಾರೆ. ಕಾರಣ ಅಹಂಕರೋತಿ ಅಹಂಕಾರ.

ಜೀವನವು ಸುಖಮಯವಾಗಿರಬೇಕಾದರೆ ಶರೀರವು ನಿರೋಗಿಯಾಗಿರಬೇಕು. ಆದಕಾರಣವೇ ಆರ್ಯ ಸಂಸ್ಕೃತಿಯು ಶರೀರಮಾದ್ಯಂ ಖಲು ಧರ್ಮಸಾಧನಂ ಎಂದಿದೆ: ಶರೀರದ ಪೋಷಣೆ, ಮತ್ತು ರಕ್ಷಣೆಗಾಗಿ ಅರ್ಥೋಪಾರ್ಜನೆಯು. ಅರ್ಥಪ್ರಾಪ್ತಿಯ ಸಾಧನೆಯನ್ನು ಅರ್ಥಪುರುಷಾರ್ಥವೆಂದು ಆರ್ಯ ಸಂಸ್ಕೃತಿಯು ಸಂಬೋಧಿಸುತ್ತದೆ.

ಮನಸ್ಸು ಸರ್ವ ಇಂದ್ರಿಯುಗಳ ನಾಯಕನು. ಮನಸ್ಸು ಕಾಮದ ವಾಸನೆಯ ಕಡೆಗೆ ಧಾವಿಸುತ್ತದೆ. ಸಾಂಸಾರಿಕ ಜೀವನವು ಕಾಮಮಯವು; ಕಾಮಮಯ ಸಾಂಸಾರಿಕ ಜೀವನವನ್ನು ಹಿತಮಿತವಾಗಿ ಅನುಭವಿಸುವುದೇ ಕಾಮಪುರುಷಾರ್ಥ ಸಾಧನಪಥವು.

ಅನಂತರ ಬರುವುದೇ ಬುದ್ಧಿಯು. ಇಂದ್ರಿಯಾತೀತವಾಗಿ ಬುದ್ಧಿಗ್ರಾಹ್ಯ ಸುಖವು ಅತ್ಯಂತ ಶ್ರೇಷ್ಠವಾಗಿರುವುದು. ಬೌದ್ಧಿಕಸುಖಪ್ರಾಪ್ತಿಯು ವೇದಪ್ರೋಕ್ತ ಕರ್ಮಗಳನ್ನು ಆಚರಿಸುವುದರಿಂದ ಮಾತ್ರ ಲಭ್ಯವು. ಇದನ್ನು ಧರ್ಮ ನಾಮಕ ಪುರುಷಾರ್ಥ ಎಂದು ಕರೆಯುತ್ತಾರೆ. ಬುದ್ಧಿಯಾನಂತರ ಬರುವುದೇ ಜೀವಾತ್ಮ. ಆತ್ಮೀಯ—ಪರಿಪೂರ್ಣತೆಯಿಂದ ದೊರೆಯುವ ಈಶ್ವರ ಸಾಕ್ಷಾತ್ಕಾರವು ಮೋಕ್ಷಪ್ರಾಪ್ತಿ ಎಂದು ಆರ್ಯ ಸಂಸ್ಕೃತಿಯು ನಿರೂಪಿತವಾಗಿದೆ. ಈ ಪ್ರಕಾರವಾದ ಅರ್ಥ, ಕಾಮ, ಧರ್ಮ ಮತ್ತು ಮೋಕ್ಷ ಎಂಬ ಪುರುಷಾರ್ಥ ಚತುಷ್ಟಯಗಳು ಆರ್ಯ ಸಂಸ್ಕೃತಿಯಲ್ಲಿ ಪ್ರತಿಸಾಧ್ಯವಾದ ಜೀವನಸೂತ್ರಗಳು.

ಮಾನವ ಸಮಾಜದಲ್ಲಿ ಯಂತ್ರಗಳಲ್ಲಿ ಸಿದ್ಧವಾಗುವ ಪದಾರ್ಥಗಳಂತೆ ಒಂದೇ ರೀತಿಯ ಆಕಾರ ಮತ್ತು ಗುಣ ಸ್ವಭಾವದ ಮಾನವರು ಕಾಣಬರುವುದಿಲ್ಲ. ಎಲ್ಲರೂ ಒಂದೇ ಯೋಗ್ಯತೆಯ ಮಟ್ಟದವರಿಲ್ಲ. ಉತ್ತರೋತ್ತರ ಕಾರ್ಯಕ್ಷೇತ್ರಗಳು ಅಗತ್ಯವು. ಆದಕಾರಣ ಸ್ವಭಾವಗುಣ, ಅಧಿಕಾರ ಮೊದಲಾದ ಯೋಗ್ಯತೆಯ ನೀತಿಯಂತೆ ಮಾನವ ಸಮಾಜವನ್ನು ನಾಲ್ಕು ವಿಧದವರನ್ನಾಗಿ ವಿಭಾಗಿಸಿರುವರು. ಸ್ವಾಧ್ಯಾಯ ಶೀಲ ಮತ್ತು ಜ್ಞಾನಾರ್ಜನೆ ಶಕ್ತಿ ಸಂಪತ್ತು ಉಳ್ಳವರ ವರ್ಗ ಒಂದು, ಕ್ಷಾತ್ರ ಶಕ್ತಿ ಮತ್ತು ಕಾರ್ಯದಕ್ಷತೆಯುಳ್ಳವರ ವಿಭಾಗ, ಆರ್ಥಿಕ ಸಂಪತ್ತನ್ನು ಗಳಿಸುವ ಮತ್ತು ಆಹಾರ ಮೊದಲಾದ ಸಾಮಗ್ರಿಗಳ ಉತ್ಪಾದಕ ಶಕ್ತಿಯುಳ್ಳವರು, ಮತ್ತು ಕಲಾವಿದರು, ಸೇವಾನಿಷ್ಠರು, ಶ್ರಮಜೀವಿಗಳು. ಹೀಗೆ ನಾಲ್ಕು ಸ್ವಭಾವ ಮತ್ತು ಗುಣಕರ್ಮ ವಿಭಾಗಿತರು. ಇವರನ್ನು ಕ್ರಮಶಃ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂದು ಕರೆದಿರುತ್ತಾರೆ. ಈ ವರ್ಗಚತುಷ್ಟಯವೇ ವರ್ಣಚತುಷ್ಟಯ.

ಜೀವನ ವೈದಿಕ ಕರ್ಮದ್ವಾರ ಆತ್ಮೀಯ ಪರಿಪೂರ್ಣತೆಗಾಗಿ ಉತ್ತರೋತ್ತರ ನಾಲ್ಕು ಕಾರ್ಯಕ್ಷೇತ್ರಗಳು ನಿಯಮಿತವಾಗಿವೆ. ಜೀವೇಮ ಶರದ ಶತಂ ಎಂಬ ವೇದ ವಚನವಂತೆ ಮಾನವನ ಆಯುಃಪ್ರಮಾಣವು ನೂರು ವರ್ಷ. ಈ ಶತಾಯುಸ್ಸನ್ನು ನಾಲ್ಕು ಸಲ ವಿಭಾಗ ಮಾಡಿದ, ಮೊದಲಿನ ೨೫ ವರ್ಷ ಕಾಲವನ್ನು ಬ್ರಹ್ಮಚರ್ಯಾಶ್ರಮ, ಎರಡನೆಯ ೨೫ ವರ್ಷಕಾಲ ಗೃಹಸ್ಥಾಶ್ರಮ, ಮೂರನೆ ೨೫ ವರ್ಷಕಾಲವನ್ನು ವಾನಪ್ರಸ್ಥಾಶ್ರಮ ಮತ್ತು ಕೊನೆಯ ೨೫ ವರ್ಷಕಾಲವನ್ನು ಸಂನ್ಯಾಸಾಶ್ರಮ ಎಂದು ನಿಯಮಿಸಿ ವಿವಿಧ ಕರ್ತವ್ಯ ಕರ್ಮಗಳನ್ನು ಹೇಳಲ್ಪಟ್ಟಿವೆ.

"ಕೈಹಿಡಿದವಳೂ ಕೈಬಿಡುವಳೇ?"

(ಶ್ರೀ। "ರಸಿಕರಂಜನ", ಮಂಗಳೂರು.)

ನನ್ನ ಬೆಳಗ್ಗಿನ ಫಲಾಹಾರ ಸಾಗುತ್ತಲಿತ್ತು. ಯಾವುದೋ ವಿಷಯವನ್ನು ಮನಸ್ಸಿನಲ್ಲೇ ಮೆಲುಕಾಡುತ್ತ ಅನ್ಯಮನಸ್ಕನಾಗಿದ್ದೆ. ಆವರೂ ಅಂದಿನ ತುಪ್ಪದೋಸೆಗಳು ಕಾವಲಿಯಿಂದ ನನ್ನ ಪ್ಲೇಟಿಗೆ ಬಿದ್ದಂತೆಯೆ ನಿಮಿಷಾರ್ಧದಲ್ಲಿ ಮಾಯವಾಗುತ್ತಲಿದ್ದುವು; ಕಾಫಿಯೂ ಕ್ರಮಕ್ರಮವಾಗಿ ಗಿಂಡಿಯ ತಳ ಸೇರುತ್ತಲೇ ಇತ್ತು.

"ನಾನು ಒಂದು ಮಾತು ಹೇಳುತ್ತೇನೆ, ಕೇಳುವಿರಾ, ಅಂದ್ರೆ?" ತನ್ನ ಮೌನದ ಕೋಟೆಯನ್ನು ಅಕಸ್ಮಾತ್ತಾಗಿ ಭೇದಿಸಿ ನೀರೆ ನನ್ನನ್ನು ಕಲ್ಪನಾಲೋಕದಿಂದ ಇಹಪ್ರಪಂಚಕ್ಕೆ ತಂದುಬಿಟ್ಟಳು.

ಕ್ಷಣಾರ್ಧದಲ್ಲಿ ನನಗೆ ಅಂದಿನ ದೋಸೆಗಳು ದಿವ್ಯವಾಗಿದ್ದುದೂ, ಕಾಫಿಯು ಅನ್ಯಾಕೃತ ಲ್ಯವಾಗಿದ್ದುದೂ ಮಿಂಚಿ ಹೋಯಿತು. ಅದರ ಹಿಂದೆಯೆ, ಇದಕ್ಕೆ ಏನೋ ಕಾರಣವಿದ್ದೇ ತೀರಬೇಕು, ಇದು ಆಕಸ್ಮಿಕವಲ್ಲ!—ಎಂಬ ಶಂಕೆಯೂ ಹೊಳೆದುಬಿಟ್ಟಿತು.

ಇದು ಯಾವುದಕ್ಕೆ ಪೀಠಿಕೆ?-ನೀರೆಗೆ ನನ್ನಿಂದ ಏನೋ ಆಗಬೇಕಾಗಿದೆ!

"ಸಿಲ್ಕ್ ಸಾರಿ ಬೇಕಾಗಿದೆಯೆ?" ನಾನು ದಿಗಿಲಿನಿಂದ ಕೇಳಿದೆ.

"ಅದು ಬೇಕಾಗಿದ್ದರೂ ನೀವು ತಂದುಕೊಡುವುದು ಅಷ್ಟರಲ್ಲೇ ಇದೆಯಲ್ಲ! ಅಲ್ಲದೆ ನಾನು ಅದಕ್ಕಾಗಿ ನಿಮ್ಮನ್ನು ಎಂದೆಂದೂ ಕಾಡುವುದಿಲ್ಲ ಎಂದಿಲ್ಲವೇ?" ನೀರೆಯ ಮರುಪ್ರಶ್ನೆ.

"ಮುತ್ತಿನ ಸರದ ನೆನಪಾಗಿದೆಯೆ?" ನಾನು ಅಂಜುತ್ತ ಅಂಜುತ್ತ ಕೇಳಿದೆ.

"ನೀವು ಸರಸರ ಎಂದು ಕೊಡುವ ಮುತ್ತಿನ ಸರದಲ್ಲಿ ಒಂದೇ ಬದಲಾವಣೆ ನನ್ನ ಅದೃಷ್ಟದಲ್ಲಿ ಇರಬೇಕಲ್ಲ!" ನೀರೆ ಹಂಗಿಸಿ ನುಡಿದಳು.

"ಒಳ್ಳೆಯ ವ್ಯಾಪಾರ! ಬದಲಾವಣೆಗಾಗಿ ನಿನ್ನನ್ನು ಬಾಚಿಕೊಂಡು ಕುಣಿಯಲೇ?" ನಾನು ವ್ಯಂಗ್ಯವಾಗಿಯೆ ಕೇಳಿದೆ.

"ಅವಕಾಶ್ವಿದ್ದರೂ ಪಾಠ ಹೇಳಿಕೊಡಲು ನಿಮಗೂ, ಹೇಳಿಸಿಕೊಳ್ಳಲು ನನಗೂ ಅವಕಾಶ ಇದ್ದರೆ ತಾನೇ!" ನೀರೆಯ ಕೊಂಕು ನುಡಿ.

"ಹಾಗಾದರೆ ನಾನು ಒಂದು ಹತ್ತು ದಿನಕ್ಕೆ ರಜೆಗೆ ಬರೆದುಹಾಕುತ್ತೇನೆ. ನಿನಗೂ ಬಿಡುವಾಗುವಂತೆ ನಿನ್ನ ಕೆಲಸವನ್ನೆಲ್ಲ ಜಾನಿಗೇ ಒಪ್ಪಿಸಿಬಿಡ!" ನಾನು ಔದಾರ್ಯ ಬಿಚ್ಚಿದೆ.

"ಸೈ! ಅದೊಂದು ಮಾತ್ರ ಬಾಕಿ: ಜಾನಿಯ ಕೈಯ ನಳಪಾಕ ತಿಂದು ನಾವೆಲ್ಲರೂ ಆಸ್ಪತ್ರೆ ನೋಡುವಂತಾಗಲೆಂದೇ? ಆದರೆ ನಾನು ನಿಮಗೆ ಹೇಳಬೇಕೆಂದಿದ್ದುದೂ ನೀವೆಂದುದೇ. ನೀವು ಈ ಹೊತ್ತಿನಿಂದಲೇ ಒಂದು ಹತ್ತು, ಅಲ್ಲದಿದ್ದರೆ ಒಂದು ಏಳು ದಿನವಾದರೂ ರಜೆ ಪಡೆದುಕೊಂಡು ಮನೆಯಲ್ಲೇ ಹಾಯಾಗಿ ಇದ್ದುಬಿಡೀ, ಅಂದ್ರೆ!" ನೀರೆ ಅಂಗಲಾಚಿದಳು.

ಆರ್ಯ ಸಂಸ್ಕೃತಿಯು ವರ್ಣಚತುಷ್ಟಯ, ಆಶ್ರಮಚತುಷ್ಟಯ ಮತ್ತು ಪುರುಷಾರ್ಥಚತುಷ್ಟಯ ಎಂಬ ಸಂಸ್ಕೃತಿಯ ಸೂತ್ರಗಳ ಮೇಲೆ ನೆಲಸಿದೆ. ಈ ತ್ರಿವಿಧ ಚತುಷ್ಟಯಬದ್ಧ ಜೀವನವಿಧಾನವೇ ಆರ್ಯ ಸಂಸ್ಕೃತಿಯ ಚತುರ್ಥಸ್ತಂಭವು. ಆರ್ಯ ಸಂಸ್ಕೃತಿಗೆ ಆದಿಸ್ರೋತವು ವೇದಗಳೆಂದು ಹಿಂದೆ ಹೇಳಿದೆ. ಈ ವೇದಗಳಲ್ಲಿ ನಿಬೋಧಿತವಾದ ಜೀವನವಿಧಾನ ಮತ್ತು ಆತ್ಮೀಯ ಪರಿಪೂರ್ಣತೆಗೆ ಮಾಡಬೇಕಾದ ಕರ್ತವ್ಯಕರ್ಮಗಳನ್ನು ವೈದಿಕಧರ್ಮ ಎಂದು ಕರೆಯುತ್ತಾರೆ. ಧರತಿ ಧಾರಯತಿ ಲೋಕಂ ಧರ್ಮ. ಧರ್ಮವು ಅವಲಂಬಿಸಿದವರನ್ನು ರಕ್ಷಿಸುತ್ತದೆ ಮತ್ತು ಲೋಕವನ್ನು ಧಾರಣೆ—ಪೋಷಣೆ ಮಾಡುತ್ತದೆ. ಆದುದರಿಂದ ಧರ್ಮವು ರಕ್ಷತಿ ರಕ್ಷಿತಃ ಧರ್ಮವನ್ನು ಆಶ್ರಯಿಸಿ ತಮ್ಮ ಕರ್ತವ್ಯಕರ್ಮಗಳನ್ನು ಮಾಡುವವರನ್ನು ಧರ್ಮವು ರಕ್ಷಿಸುತ್ತದೆ ಮತ್ತು ಧಾರಣೆ ಮಾಡುತ್ತದೆ. ಸೃಷ್ಟಿಯ ಆದಿಯಿಂದ ಎಲ್ಲಾ ಕಾಲದಲ್ಲಿಯೂ ಶಾಶ್ವತವಾಗಿ ನೆಲಸಿರುವ ಧರ್ಮವಾದ ಕಾರಣ ವೈದಿಕ ಧರ್ಮವನ್ನು ಸನಾತನ ಧರ್ಮ ಎಂದೂ ಕರೆಯುತ್ತಾರೆ. ಆದಕಾರಣವೇ ಏಷ ಧರ್ಮ ಸನಾತನ ಎಂದು ಮನುವು ಧರ್ಮವನ್ನು ನಿರೂಪಿಸಿರುವನು. ಇದುವೇ ಆರ್ಯ ಸಂಸ್ಕೃತಿಯ ವೈಶಿಷ್ಟ್ಯ.

"ಯಾಕೆ, ಮಹಾರಾಯತಿ? ನಿನಗೆ ನಿಜವಾಗಿಯೂ ಗಣಿತ ಕಲಿಯುವ ಆಸೆಯಾಗಿದೆಯೆ?" ನಾನು ನಂಬಲಾರದೆ ಕೇಳಿದೆ.

"ಯಾರೆಂದರು—ಹಾಗೆಂದು? ನನ್ನ ನಿತ್ಯದ ಗಣಿತ ಸಾಕಾಗಿಲ್ಲ ಎಂದೇ?" ನೀರೆಯ ಸವಾಲು.

"ಮತ್ತೆ ಯಾಕೆ ರಜೆ ನನಗೆ, ನೀರಾ?" ನನ್ನ ಮರು ಸವಾಲು.

"ಅಲ್ಲ, ಅಂದ್ರೆ! ಈ ಒಂದು ವಾರ ನೀವು ಮನೆಯಲ್ಲೇ ಇದ್ದುಕೊಳ್ಳಿ! ನಿಜವಾಗಿ,....ನನ್ನಾಣೆ!'' ನೀರೆಯ ಒತ್ತಾಯ.

"ಆಗ ಹೀಗೆಯೆ, ದೋಸೆ, ಚಪಾತಿ, ರೊಟ್ಟಿ, ಹಲ್ವ, ಲಾಡು, ಪೇಢೆ.......ಎಲ್ಲ ಮಾಡಿ ತಿನ್ನಿಸುವಿಯಾ?''

"ಅದೇನು ಮಹಾ!"

"ದಿನಾಲೂ ಪಾಯಸದೂಟ, ಆ ಭಕ್ಷ್ಯ, ಈ ಭೋಜ್ಯ ಮಾಡಿ ಬಡಿಸುವಿಯಾ?"

"ಅದೇತರ ಕಷ್ಟದ್ದು?"

"ಮಾತ್ರವಲ್ಲ, ಎಣ್ಣೆ ಹಚ್ಚಿ ಮಿಾಯಿಸಿ, ಕಾಲೊತ್ತಿ, ಗಾಳಿ ಬೀಸಿ ಮಲಗಿಸಿ ರಂಬಿಸುವಿಯಾ?"

"ಅದಕ್ಕೇನು, ಆನೆ ಅಂಬಾರಿ, ಛತ್ರ ಚಾಮರ ತರಬೇಕೇ?"

"ನೀರಾ!" ನನ್ನ ಕಿವಿಗಳನ್ನು ನಂಬಲಾರದೆ ಎದ್ದು ನೀರೆಯ ಬಳಿ ಸಾರುತ್ತ ಎಂದೆನು.

"ಏನು?" ನೀರೆ ಟುಕುಟುಕು ನೋಡುತ್ತ ಕೇಳಿದಳು.

"ನೀರಾ!" ನೀರೆಯ ಕೈ ಹಿಡಿದು ಅವಳ ಕಣ್ಣುಗಳನ್ನೇ ದಿಟ್ಟಿಸುತ್ತ, ಎತ್ತಿದ ಸ್ವರದಲ್ಲಿ ಎಂದೆನು.

"ಏನೂ, ಅಂದ್ರೆ!" ಕಣ್ಣುಗಳಲ್ಲಿ ಕುತೂಹಲ ಪ್ರದರ್ಶಿಸುತ್ತ ಪ್ರಶ್ನೆಮಾಡಿದಳು.

"ನೀರಾ!" ನೀರೆಯ ಕಣ್ಣುಗಳನ್ನು ತೀಕ್ಷ್ಣವಾಗಿ ನೋಡುತ್ತ, ದೊಡ್ಡ ಸ್ವರದಲ್ಲಿ ಕಿರಚಿದೆನು.

"ಇದೇನೂ, ಅಂದ್ರೆ, ಹೀಗೆ ವಿಚಿತ್ರವಾಗಿ ಆಡುತ್ತೀರಿ?" ನೀರೆ ಮರ್ಮಾಹತಳಾಗಿ, ಗಾಬರಿಯಿಂದ ಮುಖ ವಿವರ್ಣವಾಗುತ್ತಿರಲು ಕೇಳಿದಳು.

"ನೀನು ದಂಗುಬಡಿಸಿದೆ, ನೀರಾ!" ನೀರೆಯ ಮುಖವನ್ನೇ ಎವೆ ಮುಚ್ಚದೆ ನೋಡುತ್ತ ಎಂದೆ.

"ಯಾಕೇ, ಅಂದ್ರೆ, ಹೀಗೆ ಹುಚ್ಚರಂತೆ ನೋಡುತ್ತೀರಿ?" ನೀರೆ ಮುಖದಲ್ಲಿ ಚಿಂತಾಮುದ್ರೆ ತಾಳುತ್ತ ಅಜಪ್ಪಾಗಿ ಕೇಳಿದಳು.

"ನೀನು ಹುಚ್ಚುಹಿಡಿಸಿದೆ, ನೀರಾ!" ಮೇಲುಸಿರು ಬಿಡುತ್ತ ಎಂದೆ.

"ಹೇಗೇ, ಅಂದ್ರೆ, ನಾನು ಹುಚ್ಚುಹಿಡಿಸಿದೆ?" ನೀರೆ ಕಾತರಳಾಗಿ ಆರ್ತಸ್ವರದಲ್ಲಿ ಕೇಳಿದಳು.

"ನಿ–ನಿ–ನಿನಗೆ ಕೊ–ಕೊ–ಕೊಪ್ಪರಿಗೆ ಸಿ–ಸಿ–ಸಿಕ್ಕಿದೆಯೊ, ನೀರಾ?" ಉದ್ವೇಗದ ಭರದಿಂದ ಬಿಕ್ಕಳಿಸುತ್ತ ಕೇಳಿದೆ.

"ಛೆ! ಎಲ್ಲಿಯ ಕೊಪ್ಪರಿಗೆ? ಹೀಗೆಲ್ಲ ಬಡಬಡಿಸಬೇಡಿ, ಅಂದ್ರೆ!–ನನಗೆ ಹೆದರಿಕೆ ಆಗುತ್ತದೆ!" ನೀರೆಯ ದೀನವಾಣಿ.

"ತಿಳಿಯಿತು!–ನಿನಗೆ ಸೋಡ್ತಿಯಲ್ಲಿ ಮೊದಲನೆ ಇನಾಮು ಬಂದಿರುವುದು!"

"ಛೀ! ಯಾವ ಸೋಡ್ತಿ? ಅದೂ ನಾನು ಟಿಕೇಟು ಕೊಂಡುಕೊಂಡಿದ್ದರಲ್ಲವೆ?"

"ಹಾಗಾದರೆ, ನೀನು ಜಡ್ಡಿನಲ್ಲಿ ಹಣ ಗೆದ್ದಿರುವಿ!"

"ಥೂ! ನಾನು ಬಿಡ್ಡಿಗೆ ಹಣ ಹಾಕುವಷ್ಟು ದಡ್ಡಿಯಾಗಿದ್ದರೆ ತಾನೆ?"

"ಮತ್ತೆ? ಕೊಮನ್‌ಸೆನ್ಸ್ ಚಕ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಹೊಂದಿರುವಿಯಾ?"

"ಬರೇ ಕೊಮನ್ ನೊನ್‌-ಸೆನ್ಸ್! ಆ ಸ್ಪರ್ಧೆಯು ನಿಜಕ್ಕೂ ಅಂತಹದೇ ಎಂದು ನಮ್ಮಿಬ್ಬರಿಗೂ ಅನುಭವವಾಗಿದೆಯಲ್ಲ!"

"ಸರಿ! ನಿನ್ನ ಅಪ್ಪನ ಕಡೆಯಿಂದ ಯಾರಾದರೂ ನಿನಗೆ ಆಸ್ತಿ ಬಿಟ್ಟಿರುವರೆಂದು ಕಾಣುತ್ತದೆ!"

"ಹೋಗಲೀ, ಅಂದ್ರೆ! ಇಷ್ಟೆಲ್ಲ ಚೌಕಸಿ ಮಾಡುವಿರೇಕೆ?—ನನಗೆ ಚೇಷ್ಟೆಮಾಡಲೆಂದೇ?"

"ಚೇಷ್ಟೆ ಯಾಕೆ, ನೀರಾ? ನೀನೆಂದಂತೆ ಮಾಡಬೇಕಾದರೆ ನಿಜಕ್ಕೂ ನಿನಗೆ ಇದಾವುದಾದರೂ ದಾರಿಯಿಂದ ಶ್ರೀಮಂತಿಕೆ ಬಂದಿದ್ದಿರಬೇಕು? ಇಲ್ಲವಾದರೆ ಹೇಗಾದೀತು?"

"ಆಗದೆ ಏನು! ಒಂದು ಏಳು ದಿನ ನಿಮ್ಮನ್ನು ಆ ಸುಖದಲ್ಲಿ ಇರಿಸಲಿಕ್ಕೆ ಆಗದಿದ್ದರೆ ನಾನು ಇಷ್ಟು ದಿನ ನಿಮ್ಮ ಗೃಹಿಣಿಯಾಗಿದ್ದುದಕ್ಕೆ ಸಾರ್ಥಕವಾದರೂ ಏನು, ಹೇಳಿ?" ನೀರೆಯ ಗಂಭೀರವಾಣಿ.

"ಇದು ಶಪಥವೇ?" ನೀರೆಯನ್ನು ಬರಸೆಳೆದು ಕೇಳಿದೆ.

"ಅಲ್ಲದೆ ಏನು?" ನಾಚಿ ನನ್ನನ್ನು ಅತ್ತದೂಡುತ್ತ ಎಂದಳು ನೀರೆ.

"ಹಾಗಾದರೆ, ಇಗೋ, ಈಗಲೆ ರಜೆಚೀಟನ್ನು ಬರೆದು ಕಳುಹಿಸುತ್ತೇನೆ. ಪ್ರೆಸ್ಸಿನ ಹುಡುಗ ಹೇಗೂ ಪ್ರೂಫಿಗಾಗಿ ಈಗ ಬಂದೇಬರುವನು," ಎನ್ನುತ್ತ ನನ್ನ ಕೋಣೆಯ ಕಡೆಗೆ ತಿರುಗಿದೆ.

"ಉಸ್ಸಪ್ಪ! ಇನ್ನು ನನಗೆ ನಿಶ್ಚಿಂತಳಾಗಿ ಉಸಿರೆಳೆಯಬಹುದು!" ಎಂದು ನೀರೆ ತನ್ನಷ್ಟಕ್ಕೆ ಎಂದುದು ನನ್ನ ಕಿವಿಯ ಮೇಲಿಂದ ಹಾದುಹೋಯಿತು. ಅದಕ್ಕೆ ಹೆಚ್ಚಿನ ಗಮನ ಕೊಡದೆ ನಾನು ಅಲ್ಲಿಂದ ಕಾಲು ಕಿತ್ತೆನು.

೨

'ವರ್ಚಸ್ವೀ' ಪತ್ರಿಕೆಯ ಕಾರ್ಯಾಲಯದಿಂದ ನನಗೆ ರಜೆ ಸುಲಭವಾಗಿ ಸೇಂಕ್ಷನ್ ಆಯಿತು. ಆದರೆ ನನ್ನ

ಕೆಲಸ ಮಾತ್ರ ನಾನು ಇದ್ದಲ್ಲಿಯೆ ಬಂದು ರಾಶಿ ಬಿದ್ದಿತು. ನಮ್ಮ ಸಂಪಾದಕ ಮಹಾಶಯರು ದಿನಕ್ಕೆ ನಾಲ್ಕಾರು ಸಲ ಇಂಗ್ಲಿಷ್, ಹಿಂದಿ, ಮರಾಠಿ ದೈನಿಕ, ಮಾಸಿಕಾದಿ ಪತ್ರಿಕೆಗಳನ್ನು ಕಳುಹಿಸಿಕೊಡುತ್ತಿದ್ದರು. ಅವುಗಳಲ್ಲಿ ಅಲ್ಲಿ ಒಂದು ವಾರ್ತೆ, ಇಲ್ಲಿ ಒಂದು ಲೇಖನ ಗುರುತುಮಾಡಲ್ಪಟ್ಟು, 'ಇದ್ದೊಂದನ್ನು ಭಾಷಾಂತರ ಮಾಡಿ ಕೂಡಲೇ ಕಳುಹಿಸಿ,' 'ಇದರ ಸಾರಾಂಶ ಮಾತ್ರ ಸಾಕು,' ಎಂಬ ಒರ್ಡರೋ, ವಿನಂತಿಯೋ ಒಟ್ಟಿಗೇ ಬರುತ್ತಿತ್ತು. ಪ್ರೂಫುಗಳು ಹೇಗೂ ಇಪ್ಪತ್ತನಾಲ್ಕು ಘಂಟೆ ತಿದ್ದಿದರೂ ತೀರದಷ್ಟು ಬಂದು ಬೀಳುತ್ತಿದ್ದುವು. ಹೀಗೆ ಮನೆಯಲ್ಲಿಯೆ ನನ್ನ ಉಪಸಂಪಾದಕ ವೃತ್ತಿ ಮುಂದುವರಿಯಿತು.

"ರಜೆಯಿಲ್ಲದಾಗ ದಿನಕ್ಕೆ ಹನ್ನೆರಡು ಘಂಟೆ ದುಡಿಯುತ್ತಿದ್ದಿರಾದರೆ ರಜೆಯೆಂದು ಈಗ ಇಪ್ಪತ್ತನಾಲ್ಕು ಘಂಟೆಯೂ ಕೆಲಸವೇನು?" ನೀರೆಯ ಟೀಕೆ.

"ಸಂಪಾದನೆಗೆ ಧಕ್ಕೆ ಬರಬಾರದಲ್ಲ, ನೀರಾ?" ನನ್ನ ಸಮಾಧಾನೋಕ್ತಿ.

"ಇದು ಒಳ್ಳೆಯ ರಜೆ!"

"ರಜೆಯಲ್ಲ, ಸಶ್ರಮ ಸಜೆ!"

"ನೀವು ಯಾವಾಗಲೂ ಹೀಗೆಯೆ ಮನೆಯಲ್ಲಿಯೆ ಇದ್ದು ಯಾಕೆ ಬರೆದುಕೊಡಬಾರದೂ, ಅಂದ್ರೆ?"

"ಇಪ್ಪತ್ತನಾಲ್ಕು ಘಂಟೆಯೂ ನಿನಗೆ ನನ್ನ ಹಿಂಸೆ ತಪ್ಪಲಿ ಎಂದು ಬಯಸುವಿಯಾ?"

"ಹಾಗಲ್ಲಾ, ಅಂದ್ರೆ!-ನಿಮ್ಮದು ಯಾವಾಗಲೂ ಉಲ್ಟಾ ಮಾತು!"

"ಅಂದ್ರೆ, ಇಪ್ಪತ್ತನಾಲ್ಕು ಘಂಟೆಯೂ ನನಗೆ ನಿನ್ನ ಹಿಂಸೆ ತಪ್ಪದಿರಲಿ ಎಂಬುದು ನಿನ್ನ ಹಾರೈಕೆಯೆ?"

"ಯಾಕೇ, ಅಂದ್ರೆ, ಹಾಗೆನ್ನುತ್ತೀರಿ! ನಿಮಗೆ ನಾನು ಹಿಂಸೆ ಕೊಟ್ಟದ್ದಾದರೂ ಯಾವಾಗ, ಅಂದ್ರೆ?"

"ಇಲ್ಲ, ನೀರಾ! ನಾನೇ ನಿನ್ನನ್ನು ಕಾಡುತ್ತಿರುವುದೆಂಬುದು ಖಾತ್ರಿ! ಅದಕ್ಕೇ ನಾನು ಹಾಗೆ ಎಂದದ್ದು. ನಿನಗೆ ನನ್ನ ಕಾಟ ಸಹನೆಯಾಗುವುದೆಂದಾದರೆ ನಾನು ಇನ್ನು ಮುಂದೆ ನೀನೆಂದಂತೆ ಇಲ್ಲಿದ್ದೇ ಉಪಸಂಪಾದನ ಕಾರ್ಯ ಮಾಡುವುದರ ಕುರಿತು ಯೋಚಿಸುತ್ತೇನೆ. ಓಮಾರ್ ಖಯ್ಯಾಮನು ಏನೋ ಎಂದಿದ್ದನಂತೆ. ಹಾಗೆಯೆ ನನಗೂ ಎನಿಸುತ್ತಿದೆ:

"ಈ ಕೋಣೆಯೆ ಶಾಶ್ವತ ನನಗಿರಲಿ! —
ಇರುತಿರೆ, ನೀರಾ, ನೀನೆನ್ನಯ ಬಳಿ!—
        ತರತರ ತಿಂಡಿ,
        ಕಾಫಿಯ ಗಿಂಡಿ,
ಮೇಜ್ ಬರೆಯಲು ಕಾಗದದಾ ಸುರುಳಿ!
ದೂರದಿ ಕೂತಿರೆ ನಮ್ಮಯ ಟೋಪಿ
ಹತ್ತಿರ ಪ್ರೂಫ್ಸೀ, ಕ್ಲೀನ್ ಪ್ರೇವಿ;
        ತರತರ ತಿಂಡಿ,
        ತುಂಬಿದ ಗಿಂಡಿ,
ಭರದಲಿ ತೀರಿಪೆ, ನೀರಾಸ್ವಾದು!
ತೊಡೆಯಲಿ ಮಂಡಿಸೆ ಗಣಿಯನ ಮೂರ್ತಿ,
ಸಿಗರೆಟ್ಟಿನ ಹೊಗೆ ಕೊಡುತಿರೆ ಸ್ಫೂರ್ತಿ,
        ತರತರ ತಿಂಡಿ,
        ಕಾಫಿಯ ಗಿಂಡಿ
ಹರಡಲಿ ನಾಲ್ದೆಸೆ ನೀರೆಯ ಕೀರ್ತಿ!"

"ಸಾಕಾಯಿತು, ನಿಮ್ಮ ತಮಾಷೆ! ಯಾವ ವಿಷಯ ಮಾತಾಡುವಾಗಲೂ ನೀವು ಸುತ್ತಿಸುತ್ತಿ ಹಿಡಿಯುವುದು ನನ್ನನ್ನೇ!"

"ಅಲ್ಲವೇ, ಮತ್ತೆ! ಅದರಿಂದಲಾದರೂ ನಿನ್ನ ಮೇಲಿನ ನನ್ನ ಪ್ರೀತಿಯ ಆಳ ಎಷ್ಟೆಂದು ಅಳೆಯಲಾರೆಯಾ, ನೀರೆ!" ಕೈಯೊಳಗಿನ ಲೇಖನಿಯನ್ನು ಬದಿಗಿರಿಸಿ ನೀರೆಯ ಕೈಯನ್ನು ಹಿಡಿಯುತ್ತ ಎಂದೆ.

"ಬಿಡಿ, ಬಿಡೀ, ಅಂದ್ರೆ!-ನನ್ನ ಕೆಲಸದ ಹೊರೆ ಬಿದ್ದಿದೆ ಅಲ್ಲಿಯೆ!" ಕೈ ಸರಕ್ಕನೆ ಕೊಸರಿಕೊಂಡು ನೀರೆ ಒಂದೇ ಉಸುರಿಗೆ ಹೊರಗೆ ಕಾಲಿಟಳು.

"ಎಂದಂತೆ, ಈ ದಿನ ಏನು ಮಿಠಾಯಿ ಮಾಡಲೀ, ಅಂದ್ರೆ?" ಬಾಗಿಲ ಬಳಿಯಿಂದಲೆ ತಿರುಗಿ ನೀರೆ ಕೇಳಿದಳು, ಜೇನು ಸುರಿಯುವಂತಹ ಮಧುರ ವಾಣಿಯಿಂದ.

"ನಿನಗೆ ಇಷ್ಟವಾದುದು!" ಉದಾಸೀನತೆಯಿಂದ ಎಂದೆ ನಾನು.

"ಇಲ್ಲ, ನಾನು ಮಾಡುವುದು ನಿಮಗೆ ಇಷ್ಟವಾದುದೇ. ಎಂತಹ ಲಾಡು ಮಾಡಲಿ, ಹೇಳಿ, ಅಂದ್ರೆ!" ಹೆಜ್ಜೆ ಮುಂದಿಡುತ್ತ ಅಂಗಲಾಚಿದಳು ನೀರೆ.

"ನಿನ್ನೆಯಿಂದ ಎಂತೂ 'ಮೋಹನ'ವಾಯಿತು; ಇನ್ನು ಈಹೊತ್ತು 'ಮುತ್ತಿನ ಚೂರು' ಇರಲಿ, ಆಗದೇ?" ಎಂದು ನಾನು ಮರಳಿ ನೀರೆಯ ಕೈಹಿಡಿದುಕೊಂಡೆ.

"ಛಿ! ಇನ್ನೂ ನಿಮಗೆ ಹುಡುಗಾಟವೇ!" ಎಂದು, ಗಲ್ಲ ನಸು ಕೆಂಪು ತಳೆದು, ನೀರೆ ಅಡಿಗೆಮನೆಗೆ ಜಾರಿದಳು.

ಸಂಜೆಯ ಫಲಾಹಾರಕ್ಕೆ ಘಮಘಮಿಸುವ ಉಪ್ಪಿಟ್ಟು, ಬಾಳೆಕಾಯಿ ಬಾಳಕ ಇತ್ಯಾದಿಗಳ ಕೂಟದಲ್ಲಿ ಪ್ರತ್ಯಕ್ಷ ಮುತ್ತಿನ ಚೂರು ಲಾಡು ಅಧ್ಯಕ್ಷಪೀಠವನ್ನು ಅಲಂಕರಿಸಿ ಕೂತಿತ್ತು,— ನೋಟಕರ ಬಾಯಿ ನೀರೂರಿಸುತ್ತ!

೩

ಆ ದಿನ ಬೆಳಗ್ಗೆ ನೋಡಿದರೆ ನನ್ನ ಕೋಣೆಯಲ್ಲಿ ರಾಶಿ ರಾಶಿಯಾಗಿದ್ದ ಪತ್ರಿಕೆ, ಪ್ರೂಫು ಒಂದೂ ಕಾಣೆ!

“ನೀರಾ, ಇದೇನು ಹೀಗೆ? ನಿನ್ನೆ ರಾತ್ರಿ ಇಲ್ಲಿ ಕಳ್ಳರು ಹೊಕ್ಕಿದ್ದರೇ!”

“ಒಬ್ಬರ ಮನಸ್ಸನ್ನು ಇನ್ನೊಬ್ಬರು ಅಪಹರಿಸಿದ ಇಬ್ಬರು ಕಳ್ಳರನ್ನು ಬಿಟ್ಟರೆ ಇನ್ನಾವ ಕಳ್ಳರೂ ಇಲ್ಲಿ ಪ್ರವೇಶಿಸಿದುದನ್ನು ನಾ ಕಾಣೆ!”

“ಅಃ, ಕಳ್ಳೀ! ಇದೇನು ವ್ಯಾಪಾರಕ್ಕೆ ತೊಡಗಿರುವೆ? ಇಲ್ಲಿದ್ದ ಎಲ್ಲವನ್ನೂ ಫೇರಿಯವನಿಗೆ ಕೊಟ್ಟೆಲ್ಲವಷ್ಟೆ?”

“ನಿಮ್ಮ ಖರ್ಚನ್ನು ನೋಡಿಕೊಳ್ಳಲು ನನಗೆ ಅದೊಂದೇ ಮಾರ್ಗವೆಂದು ಎಣಿಸಿದಿರಾ? ಗಾಬರಿಯಾಗಬೇಡಿ, ಅಂದ್ರೆ! ಅವೆಲ್ಲ ಜೋಪಾನವಾಗಿವೆ. ಅದರ ತಪಾಸಣೆ ಈಗ ಬೇಡ. ಈ ಹೊತ್ತು ನೀರು ಕಾಯಿಸುತ್ತೇನೆ. ನೀವು ಕಾಫಿಯಾದ ಬಳಿಕ ಸರಿಯಾಗಿ ಒಂಭತ್ತು ಘಂಟೆಗೆ ಎಣ್ಣೆ ತಾಗಿಸಿಕೊಳ್ಳಲು ತಯಾರಾಗಬೇಕು!” ನೀರೆಯ ಸುಗ್ರೀವಾಜ್ಞೆಯಾಯಿತು.

ಫಲಾಹಾರದ ಕಾರ್ಯಕ್ರಮವು ಕ್ರಮದಂತೆ ಎಂಟು ಘಂಟೆಗೇ ನಡೆಯಿತು. ತಿಂಡಿಗಳ ವೈವಿಧ್ಯ, ನಾವೀನ್ಯ, ರುಚಿ,ಶುಚಿ ಎಲ್ಲವೂ ನನ್ನನ್ನು ಮರುಳಾಗಿಸಿತು. ನಾನು ನೀರೆಯನ್ನು ಬಳಿಯಲ್ಲಿಯೆ ಕುಳ್ಳಿರಿಸಿಕೊಂಡೆನು; ನಡುವೆ ನಮ್ಮ ಯುವರಾಜ, ಗಣು. ಫಲಾಹಾರ ಎಂದಿನಂತೆ ಒಳ್ಳೆಯ ಸಂಭ್ರಮದಿಂದ ಸಾಗಿತು.

ಒಂಭತ್ತು ಘಂಟೆಗೆ ನೀರೆ ನನಗೆ ತೈಲಲೇಪನವನ್ನು ಒಳ್ಳೆಯ ಹುಮ್ಮಸ್ಸಿನಿಂದ ಮಾಡಿದಳು. ಅರ್ಧ ಘಂಟೆಯ ಅಂಗಮರ್ದನದ ಬಳಿಕ ನೀರೆ ನನ್ನನ್ನು ಬಿಸಿನೀರಿನ ಒಲೆಯ ಮುಂದೆ, ಸೊಪ್ಪುಸದೆಯ ರಾಶಿಯ ಬದಿಯಲ್ಲಿ ಮಂಡನ ಮಾಡಿಸಿದಳು. ರಾಶಿ ಮುಗಿದಂತೆ ಹಿತ್ತಿಲಿಂದ ಗುಡಿಸಿ ತರಲು ಒರ್ಡರನ್ನೂ ಕೊಟ್ಟೇ ನೀರೆ ಅಡಿಗೆಮನೆಗೆ ಅಡಿಯಿಟ್ಟಳು.

ಅಂತೂ ಹನ್ನೆರಡು ಘಂಟೆಗೆ ಮೊದಲುಮಾಡಿದ ನನ್ನ ಸ್ನಾನವನ್ನು ನೀರೆ ಒಂದು ಘಂಟೆಗೆ ಕೊನೆಗಾಣಿಸಿದಳು. ನೀರಿನ ಉಷ್ಣ ಅತಿಯಾಗಿದೆಯೆಂದರೂ ತೋರಿಕೆಗೆ ಮಾತ್ರ ಅನಕ್ಕೆ ತಣ್ಣೀರು ಕೂಡಿಸಿದುದರ ಫಲವಾಗಿ, ಅದು ತಪಲೆಯ ಹಿಂದೆ ತಪಲೆಯಂತೆ ನನ್ನ ಮೇಲೆ ಬೀಳುತ್ತಿರುವಾಗ, ಬಿಸಿ ತಡೆಯಲಾರದೆ ಎಷ್ಟೋ ಸಲ ನಾನು ಎದ್ದು ಓಡಿಹೋಗುವುದರಲ್ಲಿದ್ದೆ. ಆದರೆ ನೀರೆ ತಿರುಗಿತಿರುಗಿ ನನ್ನನ್ನು ಪುಸಲಾಯಿಸಿ ಕುಳ್ಳಿರಿಸಿ, ಸಾಬೂನು ಹಾಕಿ ತಿಕ್ಕಿ ತಿಕ್ಕಿ, ಅದೇ ನೀರಿನಿಂದ ಮೀಯಿಸುತ್ತ ಹೋದಳು. ಪರಿಣಾಮವಾಗಿ ಕೊನೆಗೆ, ನನ್ನ ಮೈಚರ್ಮವು ಅವಳ ಪ್ರಯತ್ನಕ್ಕೆ ಮೆಚ್ಚಿ ಬಿಳಿಯದಾಗದಿದ್ದರೂ, ನನ್ನ ತಲೆ, ಬೆನ್ನುಗಳ ಚರ್ಮಗಳು ನೀರು ಬಿಸಿಯೋ, ತಣ್ಣಗೋ ಎಂಬುದನ್ನು ಕೂಡ ಸೂಚಿಸಲಾರದಷ್ಟಕ್ಕೆ ಸುಟ್ಟು ಬರಟಾಗಿ ಹೋದುವು! ಎಲ್ಲ ಮುಗಿದು ನೀರೆ ನನ್ನನ್ನು ಮೈ ಒರಸಿ, ಉಡಿಸಿ, ತಲೆ ಬಿಗಿದು, ಹೊದೆಯಿಸಿ ಒಳಗೆ ಒಯ್ಯುವಾಗ ಕೈಯೆತ್ತಿದರೆ ಕೈ, ಕಾಲೆತ್ತಿದರೆ ಕಾಲ — ಟಿದ ಬೊಂಬೆಯಂತೆ ಕೈಗೆ ಬರುವ ಹಾಗೆ ಆಗಿತ್ತು. ನೀರೆಯ ಆಧಾರದಿಂದ ಒಳಗೆ ಹೋಗಿ ಹಾಸಿಗೆಯಲ್ಲಿ ಬಿದ್ದ ನನಗೆ ಇಹದ ಪ್ರಜ್ಞೆ ತಿಳಿದುದು ಬರೀ ಮೂರು ಘಂಟೆಗೆ! ಆಗ ನೀರೆ ನನ್ನ ಹೊದಿಕೆಯನ್ನು ಸರಿಸಿ ಮೈಬೆವರನ್ನು ಒರಸಿ ಗಾಳಿ ಬೀಸುತ್ತಿದ್ದಳು.

ಅಂದಿನ ಮಧ್ಯಾಹ್ನದ ಊಟವಾದರೂ, ಹಿಂದಿನ ನಾಲ್ಕೈದು ದಿನಗಳಂತೆ, ‘ಭಲ್ ಭಲಾ!’ ಎನ್ನುವಂತೆಯೆ ಆಗಿತ್ತು: ಮೂರು ನಾಲ್ಕು ಬಗೆಯ ಪಲ್ಯ ಮೇಲೋಗರಗಳು, ಕಿಚಡಿ-ನೋಸೆಗಳು — ಇನ್ನೂ ಏನೇನೊ-- ಎಲ್ಲವೂ ಕೊನೆಗೆ ಬಡಿಸಿದ ಹಾಲುಕೀರಿನ ಅಡಿಗೆ ಬಿದ್ದು ಮರೆವಿನ ಗುಹೆಗೆ ಸರಾಗವಾಗಿ ಇಳಿದುಬಿಟ್ಟತು. ಊಟವಾದ ಮೇಲೆ ನೀರೆ ನನ್ನನ್ನು ಮರಳಿ ಹಾಸಿಗೆಗೆ ಕರೆದೊಯ್ದು ಬಾಣಂತಿಯಂತೆ ಮಲಗಿಸಿದಳು. ಅವಳು ಗಾಳಿ ಬೀಸುತ್ತಿದ್ದಂತೆಯೆ ನನಗೆ ಅಖಂಡವಾದ ಜೋಂಪು ಹಿಡಿದುದು ಗೊತ್ತಾಗಲೇ ಇಲ್ಲ.

ಎಚ್ಚರವಾದಾಗ ಕೋಣೆ ತುಂಬ ಕತ್ತಲಾಗಿತ್ತು. ನನಗೆ ಸಮಯದ ಅಂದಾಜೇ ತಿಳಿಯಲಿಲ್ಲ. ನಾನು ಎಲ್ಲಿದ್ದೇನೆ, ಏನು ಕತೆ? —ಎಂಬುದು ಒಂದೊಂದೇ ನೆನಪಾದಾಗ, “ಅಃ! ಮೂರುವರೆ ಘಂಟೆಯಿಂದ ಪವಡಿಸಿದ್ದ ನಾನು ಕತ್ತಲಾದರೂ ನಿದ್ರೆಯಲ್ಲಿಯೆ ಇರುವೆನೇ?” ಎಂದು ತೋರಿ, ಅದರಿಂದ ನನಗೆ ಹೇಗೋ ಎನಿಸಿತು.

“ನೀರಾ!” ಎಂದು ನಾನು ಮಲಗಿದಲ್ಲಿಂದಲೇ ಒಂದೆರಡು ಬಾರಿ ಕರೆದೆ; ಆದರೆ ಜವಾಬೇ ಬರಲಿಲ್ಲ.

ನಾನು ಮೆಲ್ಲನೆ ಎದ್ದು ಬಾಗಿಲಿನ ಸಂದಿನಿಂದ ಹೊರಲಿನ ದೀಪದ ಬೆಳಕು ಬರುತ್ತಿರುವುದನ್ನು ಗುರುತಿಸಿ ಆ ಕಡೆಗೇ ತಡವರಿಸುತ್ತ ಮುಂದುವರಿದೆನು.

ಎರಡು ಹೆಜ್ಜೆ ಕಳೆದು ಮೂರನೇ ಹೆಜ್ಜೆ ಇಡುತ್ತಲೇ, ‘ಧಡ್ ಭಡಾಲ್!’ ಎಂದು ದೊಡ್ಡ ಸದ್ದಾಯಿತು; ಅದರೊಂದಿಗೆ ನನ್ನ ಎಡ ಕಾಲಿಗೂ ತುಂಬಾ ಪೆಟ್ಟಾಗಿ ನೋವಿನಿಂದ ತಲೆ ತಿರುಗಿದಂತಾಯಿತು. “ಅಯ್ಯಪ್ಪ!” ಎನ್ನುತ್ತ ನಾನು ಆ ಕಾಲನ್ನು ಕೈಯಿಂದ ಒತ್ತಿ ನೋವು ನಿಲ್ಲಿಸಲು ಆಸ್ಥೆ ಮಾಡುತ್ತ ಅಲ್ಲಿಯೆ ಕೂತೆನು.

ಅಷ್ಟರಲ್ಲಿಯೆ, “ಏನು ಮಾಡಿದಿರೀ, ಅಂದ್ರೆ!” ಎನ್ನುತ್ತ ನೀರೆ ನನ್ನ ಹಿಂದುಗಡೆಯಿಂದ ಹೊರಲಿನ ಬಾಗಿಲು ತೆರೆಯುತ್ತ ಒಳಕ್ಕೆ ಧಾವಿಸಿ ಬಂದಳು.

ತೆರೆದ ಬಾಗಿಲಿನಿಂದ ಬಿದ್ದ ಹಗಲ ಬೆಳಕಿನಲ್ಲಿ ನಾನು ಪೆಚ್ಚಾಗಿ ಹಿಂದೆ ಮುಂದೆ ನೋಡುತ್ತಲೂ, “ಉಸ್! ಉಸ್!” ಎಂದು ಕಳವಳಿಸುತ್ತ ನೋವಿನ ಕಾಲನ್ನು ಅದುಮುತ್ತಲೂ ಕೂತೆನು: ನಾನು ಬಾಗಿಲೆಂದು ಎಣಿಸಿದ್ದು ನಿಜಕ್ಕೂ ಕಿಟಕಿ

ಯಾಗಿತ್ತು! ಅದರ ಕದಗಳ ಎಡೆಯಿಂದ ಕಾಣಿಸುತ್ತಿದ್ದುದು ಹೊರಗಿನ ಬೆಳಕಾಗಿತ್ತು! ಹಾಸಿಗೆಯನ್ನು ನಿತ್ಯದ ವಿರುದ್ಧ ದಿಕ್ಕಿನಲ್ಲಿ ತಲೆಮಾಡಿ ಬಿಡಿಸಿದ್ದುದರಿಂದ ನಾನು ಆ ಕಿಟಕಿಯನ್ನೇ ಬಾಗಿಲೆಂದು ಭ್ರಮಿಸಿದ್ದೆ! ಸಮಯ ಇನ್ನೂ ಐದು ಘಂಟೆಯಷ್ಟೆ ಆಗಿತ್ತು!

ನಾನು ಎಡವಿ ಬಿದ್ದುದು ನಮ್ಮ ಗಣಾವಿನ ತ್ರಿಚಕ್ರ ರಥಕ್ಕೆ. ಅದು ಅಲ್ಲಿಯೆ ಅಸ್ತವ್ಯಸ್ತವಾಗಿ ಬಿದ್ದಿತ್ತು.

"ಅಯ್ ಯೊ ಕರ್ಮವೇ!" ನೀರೆ ರಾಗ ಎಳೆದಳು. "ತ್ಸತ್ಸತ್ಸತ್ಸ! ಎಲ್ಲಿಯಾದರೂ ತಾಗಿರುವುದೇ?" ಎನ್ನುತ್ತ ನೀರೆ ಕಿಟಕಿಯ ಕದವನ್ನು ತೆರೆದಳು.

ನಾನು ನನ್ನ ಕಾಲಿನ ಕಡೆಗೆ ನೋಡಿದೆ. ನೋವಿದ್ದರೂ ರಕ್ತ ಕಾಣಿಸಲಿಲ್ಲ.

"ಪುಣ್ಯಕ್ಕೆ ರಕ್ತ ಬಂದಿಲ್ಲ!" ನಾನು ಸಮಾಧಾನ ತಾಳಿದೆ.

"ಬಚಾವ್! ನಾನು ಇದನ್ನು ತಪ್ಪಿಸಲು ಇಷ್ಟು ಕಷ್ಟಪಟ್ಟಿದ್ದರೂ ಕೊನೆಗೆ ನಿಜಕ್ಕೂ ನಡೆದೇ ಹೋಯಿತಲ್ಲ!" ನೀರೆ ಮರುಗಿದಳು.

"ಅದೇನು, ನೀರಾ? ನಡೆದೇ ಹೋಯಿತು?" ನಾನು ಬೆಚ್ಚಿಬಿದ್ದು ಕೇಳಿದೆ.

"ನಿಮಗೆ ಈ ವಾರದ 'ಭವಿಷ್ಯ'ದಲ್ಲಿ 'ವಾಹನ ಭಯ' ಎಂದಿತ್ತು. ಅದನ್ನು ತಪ್ಪಿಸಲೆಂದೇ ಅಂದಿನಿಂದ ನಿಮ್ಮ ವಿಷಯದಲ್ಲಿ ಇಷ್ಟು ಮೆಹನತ್ತು ತೆಗೆದುಕೊಂಡಿದ್ದೆ. ಆದರೂ ನಾನು ಗಣೂವಿನ ಟ್ರಾಯ್ಸಿಕಲ್ ವಾಹನದಿಂದ ನಿಮಗೆ ಹಾನಿಯಾದೀತೆಂದು ಕನಸಿನಲ್ಲಿಯೂ ಎಣಿಸದಾದೆನಲ್ಲ!" ನೀರೆ ಪಶ್ಚಾತ್ತಾಪದಿಂದ ಬೆಂದಳು.

"ಯಾವ 'ವಾರದ ಭವಿಷ್ಯ', ನೀರಾ?" ನಾನು ಚಕಿತನಾಗಿ ಕೇಳಿದೆನು.

"'ವರ್ಚಸ್ವೀ' ಪತ್ರಿಕೆಯ 'ಜ್ಯೋತಿರ್ಭೂಷಣ'ರ ಈ ವಾರದ 'ಭವಿಷ್ಯ'. ಅದರಲ್ಲಿನ ನಿಮ್ಮ ರಾಶಿಯ ಫಲವು ನನ್ನನ್ನು ಯೋಚನೆಗೆ ಈಡುಮಾಡಿತ್ತು!" ನೀರೆ ವ್ಯಕ್ತಪಡಿಸಿದಳು.

"ನೋಡುವ, ತಾ, ಅದನ್ನು!" ಎಂದೆ, ಕುತೂಹಲದಿಂದ.

ನೀರೆ ಸಟಪಟನೆ ಹೋಗಿ ಆ ವಾರದ 'ವರ್ಚಸ್ವೀ' ಪತ್ರಿಕೆಯನ್ನು ತಂದಳು.

"ಇಗೋ, '**ತುಲಾರಾಶಿ**': ಈ ವಾರದಲ್ಲಿ ನಿಮ್ಮ ಕೆಲಸಗಳೆಲ್ಲ ಅರ್ಥವ್ಯರ್ಥ. ಗೃಹಿಣಿಯೊಡನೆ ಮನಸ್ತಾಪವಾಗುವಂತಹ ಪರಿಸ್ಥಿತಿಗೆ ಒಳಗಾಗುವಿರಿ. ಸ್ಥಾನ ಬದಲಾವಣೆಯ ಯೋಗವಿದೆ. ಸ್ತ್ರೀ ಸುಖ ಹೇರಳ. ಆಪ್ತೇಷ್ಟರಲ್ಲಿ ಮಾನಹಾನಿ. **ವಾಹನಭಯ**. ಪತನವಾಗದಂತೆ ಜಾಗರೂಕರಾಗಿರಿ. ಈ ವಾರದಲ್ಲಿ ಆದಾಯಕ್ಕಿಂತಲೂ ವ್ಯಯ ಅಧಿಕ....'" ನೀರೆ ಓದಿ ಹೇಳಿದಳು.

"ಹಹ್ಹ! ಹಹ್ಹ! ಹಹ್ಹಹ್ಹ!" ನಾನು ನಗುವನ್ನು ತಡೆಹಿಡಿಯದಾದೆ.

"ಯಾಕೇ, ಅಂದ್ರೆ? ಏನಾಯಿತು, ಹಾಗೆ ನಗಲಿಕ್ಕೆ?" ನೀರೆ ಅಪ್ರತಿಭಳಾಗಿ ಕೇಳಿದಳು.

"ಹಹ್ಹ! ಹಹ್ಹಹ್ಹ!" ಅಲ್ಲ; ನೀರಾ! ಎಲ್ಲಿಯಾದರೂ ಉಂಟೇ, ನೀನೂ ಈ ಸುಳ್ಳಿನ ಕಂತೆ ಭವಿಷ್ಯವನ್ನು ನಂಬುವುದು?—ನಂಬಿ, ಸ್ವಲ್ಪವೂ ವಿವೇಕವಿಲ್ಲದವಳಂತೆ ಏನೇನೆಲ್ಲ ರಂಭಾಟ ಮಾಡುವುದು?" ನಾನು ಕುಚೋದ್ಯ ಮಾಡಿದೆ.

"ಏನು, 'ಸುಳ್ಳಿನ ಕಂತೆ?' ನಿಮ್ಮದೇ ಪತ್ರಿಕೆಯಲ್ಲಿ ಬಂದುದನ್ನೂ ನಂಬಬಾರದೆನ್ನುವಿರಾ?" ನೀರೆ ಆಶ್ಚರ್ಯದಿಂದ ಕೇಳಿದಳು.

"ನಮ್ಮದೇ ಪತ್ರಿಕೆಯಲ್ಲಿ ಮಾತ್ರವಲ್ಲ, ಜ್ಯೋತಿಷ್ಯದ ಗಂಧವನ್ನೇ ಅರಿಯದಿರುವ ನನ್ನದೇ ಲೇಖನಿಯಿಂದಲೂ ಅದು ಹರಿಯುತ್ತಿದೆ, ನೀರಾ! ಪ್ರತಿ ವಾರವೂ, ಜನರನ್ನು ಮರುಳುಗೊಳಿಸುವುದಕ್ಕಾಗಿ ನಿರರ್ಗಳವಾಗಿ ಹರಿಯುತ್ತಿದೆ!—'ಜ್ಯೋತಿರ್ಭೂಷಣ'ನೆಂಬ ಕಾವ್ಯನಾಮದ ಆಶ್ರಯದಿಂದ! ಇನ್ನೂ ನಿನಗೆ ಅವರಲ್ಲಿ ವಿಶ್ವಾಸವೇ?" ನಾನು ಸತ್ಯವನ್ನು ಬಯಲುಮಾಡಿದೆ.

"ಹಾಗೆಯೆ? ನಮಸ್ಕಾರ 'ಜ್ಯೋತಿರ್ಭೂಷಣ'ರೆ! ಇಗೋ, ಈಗಲೇ ಕೇಳಿ, ನಿಮ್ಮ 'ಜ್ಯೋತಿರ್ಭೂಷಣೆ'ಯ ಭವಿಷ್ಯವಾಣಿ: ನಾಳೆಯಿಂದ ನೀವು ಮರಳಿ ಕೆಲಸಕ್ಕೆ ಹಾಜರಾಗುವಿರಿ! ತಿಳಿಯಿತೇ?" ನೀರೆ ಕೆಂಪಡರಿದ ಕಣ್ಣುಗಳಿಂದ ಕಿಡಿ ಹಾರಿಸುತ್ತ ನನ್ನ ಮುಂದಿನಿಂದ ನಿಷ್ಕ್ರಮಣ ಮಾಡಿದಳು.

"ನೀರಾ! **ನೀರಾ! ನೀರಾ!** ಅಷ್ಟು ನಿರ್ದಯಳಾಗುವಿಯಾ? ನನ್ನ ಮೇಲೆ ನಿನ್ನ ಪ್ರೀತಿ ಇಷ್ಟೇ ಏನು?" ಆಶಾಭಂಗದಿಂದ ಜಂಘಾಬಲ ಉಡುಗಿ ನಾನು ಧೊಪ್ಪನೆ ಹಾಸಿಗೆಯ ಮೇಲೆ ಬಿದ್ದೆನು. ಅಂತೂ, ನನ್ನ ಭವಿಷ್ಯವು ನನ್ನ ಮೇಲೆಯೆ ತಿರುಗಿ ಬಿತ್ತು!—ಇನ್ನು ನನ್ನ **ಕೈ ಹಿಡಿದವಳೂ ಕೈ ಬಿಡುವಳೇ?**

ವರ್ಷಭವಿಷ್ಯ

ತಾ. 1—2—1953ರಿಂದ .... ತಾ. 31—1—1954ರ ವರೆಗೆ.

(ಶ್ರೀ। ಎಮ್. ಸುಬ್ರಾಯನ್, ವಿದ್ವಾನ್, ಸಾಹಿತ್ಯ ಮತ್ತು ಜ್ಯೋತಿಷ್ಯ ಶಿರೋಮಣಿ.)

ಮೇಷ:—

(ಚು, ಚೆ, ಚೊ, ಲಾ, ಲಿ, ಲು, ಲೆ, ಲೊ, ಅ)

ಸುಖ-ದುಃಖವೆಂಬೀ ದ್ವಂದ್ವಗಳನ್ನು ಮಾನವನು ಜೀವನದಲ್ಲಿ ಅನುಭವಿಸತಕ್ಕವನಾದರೂ, ನಿಮ್ಮ ಜೀವನದಲ್ಲಿ ಇವೆರಡಕ್ಕೂ ಸ್ಥಾನ ಕಡಮೆ. ನೀವು ಸತ್ಯ-ನ್ಯಾಯ-ಧರ್ಮ-ಕೀರ್ತಿಗಳನ್ನು ಅಪೇಕ್ಷಿಸುವವರಿದ್ದು, ಉಂಟಾದ ಸುಖದುಃಖಗಳನ್ನು ಲಕ್ಷಿಸುವ ಮನವುಳ್ಳವರಾಗುವುದಿಲ್ಲ. ಆದರ್ಶ-ಜೀವನದ ಮಾರ್ಗದಲ್ಲಿ ನಡೆಯುವವರಾಗುತ್ತೀರಿ. ಈ ವರ್ತನೆಯನ್ನೇ ನಿಮ್ಮ ಕರ್ಮಪತಿ ಶನಿಯು ಉಚ್ಚದಲ್ಲಿದ್ದು ಮಾಡಿಸುತ್ತಿರುವನು. ಮಿತ್ರರಿಗಾಗಿ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಕುಟುಂಬಭಾರವು ಅತಿಯಾಗಿದ್ದು ಅವುಗಳನ್ನು ಕರ್ತವ್ಯಮಾರ್ಗದ ಅನುಸರಣೆಯಿಂದ ಬಿಡುವವರಾಗುವುದಿಲ್ಲ. ದೇಹವು ಉಷ್ಣ-ಪಿತ್ತವಿಕಾರಗಳಿಂದ ಎಡೆಎಡೆ ಕೂಡಿರುತ್ತದೆ. ನಿಮ್ಮ ಭಾಗ್ಯಪತಿಯು ಮೂರು ರಾಶಿಯನ್ನು ಈ ವರ್ಷದಲ್ಲಿ ಹೊಗುವನಾದ ಕಾರಣ ಆರ್ಥಿಕಸಂಪತ್ತಿನ ವಿಷಯದಲ್ಲಿ ಪ್ರಗತಿಯೇ ಉಂಟಾಗುತ್ತಿರುವುದು. ಅತಿಚಾರ ವಕ್ರಕಾಲಗಳಲ್ಲಿ ಆಕಸ್ಮಿಕ ಘಟನೆಯಿಂದ ಕೂಡಿದವರಾಗುವಿರಿ. ಹೊಸ ಕೆಲಸಗಳನ್ನು ಮಾಡಲಿರುವಿರಿ. ಯಶಸ್ಸು ಹೆಚ್ಚಲಿದೆ. ಪುಣ್ಯಕೆಲಸ, ಶುಭಕೆಲಸಗಳನ್ನು ಮಾಡಲಿರುವಿರಿ. ಪ್ರಯಾಣಗಳುಂಟಾಗಲಿರುತ್ತವೆ. ಪ್ರಯಾಣ ಕಾಲದಲ್ಲಿ ಹೊಸಮಿತ್ರರ ಕೂಡುವಿಕೆಯು ಸಂಭವಿಸಿ, ನಿಮ್ಮ ಮನೋರಥಗಳು ಈಡೇರಲಿರುತ್ತವೆ. ಕುಟುಂಬಾಭಿವೃದ್ಧಿಯುಂಟಾಗಲಿರುತ್ತದೆ. ನಿಮ್ಮ ರಾಶಿಯಲ್ಲಿ ಸಂಚಾರಗೊಳ್ಳಲಿರುವ ಕುಜನು ವ್ರಣವಿಕಾರ, ದಾಂಪತ್ಯದಲ್ಲಿ ತೊಡಕು, ಮಾನಸಿಕ ತ್ರಾಸಗಳನ್ನುಂಟುಮಾಡಲಿರುವನು. ನೌಕರರು ಕೆಲಸದಲ್ಲಿ ಪ್ರಗತಿಯನ್ನೇ ಹೊಂದುವರು. ಲೇಖಕ-ಲೇಖಕಿಯರು ಈ ವರುಷದ ಅಂತ್ಯಭಾಗದಲ್ಲ ತುಂಬಾ ಯಶಸ್ಸನ್ನು ಹೊಂದಲಿರುತ್ತಾರೆ. ಉಪಾಧ್ಯಾಯವೃತ್ತಿಯವರಿಗೆ ಉನ್ನತಿಗಿರುವ ಸಂಘಟನೆಯುಂಟಾಗಲಿರುತ್ತದೆ.

ವ್ಯಾಪಾರಿಗಳೇ, ನೀವು ಆದಿಭಾಗದಲ್ಲಿ ಕ್ಲೇಶವನ್ನು ಅನುಭವಿಸುವಿರಾದರೂ ವರ್ಷದ ಅಂತ್ಯಭಾಗದಲ್ಲಿ ಕಷ್ಟನಿವೃತ್ತಿಯ ಮಾರ್ಗವನ್ನು ಹೊಂದಲಿರುವಿರಿ. ಕೆಲಸಗಾರರಿಂದ ಕಷ್ಟಗಳುಂಟಾಗದಂತೆ ಜಾಗರೂಕರಾಗಿರಬೇಕು. ಸ್ತ್ರೀಯರು ಗೃಹೋಪಕರಣಗಳನ್ನು ಅಧಿಕರಿಸಲಿರುವರು. ಒಡವೆ, ಧನಸಂಪತ್ತುಗಳನ್ನು ಸಂಗ್ರಹಿಸಲಿರುವ ಅವಕಾಶವು ಸಿದ್ಧಿಸುತ್ತದೆ. ಮಕ್ಕಳ ಆರೋಗ್ಯ ವಿಷಯದಲ್ಲಿ ಕರ್ಕಸಿಂಹರ ವಿಚಾರಕಾಲದಲ್ಲಿ ಕಷ್ಟವನ್ನು ಅನುಭವಿಸುವಂತಿರುವುದರಿಂದ ಮುಂಜಾಗ್ರತೆಯಿಂದ ಕೂಡಿದವರಾಗಬೇಕು. ವೈದ್ಯಕೀಯ ವೃತ್ತಿಯವರು ತುಂಬಾ ಪ್ರಗತಿಯಿಂದ ಕೂಡಿದವರಾಗುತ್ತಾರೆ. ಕೋರ್ಟ್ ಕಾರ್ಯಗಳಲ್ಲಿ ಜಯಲಾಭವಿರುತ್ತದೆ. ಹಿಂದುಳಿದ ಕೆಲಸಗಳೆಲ್ಲಾ ಕಾರ್ಯರೂಪಕ್ಕೆ ಬರಲಿರುವ ಯೋಗವು-ದ್ವಿತೀಯದ ಗುರುವಿನಲ್ಲಿದೆ.

ವೃಷಭ:—

(ಇ, ಉ, ಎ, ಓ, ವ, ವಿ, ವು, ವೆ, ವೊ)

ಈ ವರ್ಷದಲ್ಲಿ ನಿಮಗುಂಟಾಗುವ ಅನುಭವ ಹಿರಿದು. ಈ ಅನುಭವದ ಮೂಲಕ ನೀವು ನಿಮ್ಮ ಜೀವನದಲ್ಲಿ ಹೊಸಕಳೆಯನ್ನು ಹೊಂದುವಿರಿ. ಕೆಲಸಗಳಲ್ಲಿ ಜಾಗರೂಕತೆಯುಳ್ಳವರಾಗುವಿರಿ. ಪ್ರವಾಸಕಾಲದಲ್ಲಿ ಹೊಸ ಗೆಳೆಯರ ಸಂಪರ್ಕವನ್ನು ಹೊಂದಿ, ಇಷ್ಟಸಿದ್ಧಿಗಿರುವ ಮಾರ್ಗವನ್ನು ಹೊಂದುವಿರಿ. ವಾಸಸ್ಥಾನದ ಬದಲಾವಣೆಯು ನಿಮ್ಮ ಅಷ್ಟಮಪತಿ ಗುರುವಿನ ಮೂಲಕ ಸಂಭವಿಸುತ್ತಿರುವುದು. ದೇಹಾರೋಗ್ಯ ವಿಷಯದಲ್ಲಿ ಅಂತ್ಯಭಾಗವು ಚೆನ್ನಾಗಿರುವುದಿಲ್ಲ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರು

ತ್ರವೆ. ವಾತವಿಕಾರ, ಉದರ ಸಂಬಂಧ ದೋಷಗಳ ಅನುಭವವು ರೋಹಿಣಿ ಮೃಗಶಿರಾ ನಕ್ಷತ್ರದವರಿಗೆ ಉಂಟಾಗಲಿರುತ್ತದೆ. ಮಕ್ಕಳ ಆರೋಗ್ಯ ವಿಷಯದಲ್ಲಿ ತುಂಬಾ ಕ್ಲೇಶವನ್ನು ಹೊಂದುವ ಸಂಭವವು ಆಗೋಸ್ಟ್-ಸಪ್ಟಂಬರಗಳಲ್ಲಿರುತ್ತದೆ.

ಲೇಖಕ-ಲೇಖಕಿಯರು ವರ್ಷದ ಆದಿಭಾಗದ ಕೆಲಸದಿಂದ ಉತ್ತಮ ಪ್ರಗತಿಗಿರುವ ಯಶಸ್ಸನ್ನು ಗಳಿಸುವವರಾಗುವರು. ಸಾಂಪತ್ತಿಕ ವಿಷಯದಲ್ಲಿ ಶಾಂತಿಯು ಕಡಿಮೆಯಾಗುವುದಾದರೂ, ಕಷ್ಟ ಪರಿಸ್ಥಿತಿಯನ್ನು ಹೊಂದುವುದಿಲ್ಲ. ನೌಕರಿಯಲ್ಲಿ ಭಿನ್ನತೆಗಿರುವ ಸಂಪರ್ಕವು ಕಂಡುಬರುತ್ತದೆ. ಹಿರಿಯರ ಆರೋಗ್ಯಸುಖಗಳಿಗೆ ತೊಡಕಿರುತ್ತದೆ. ಗೃಹಭೂಸಂಪತ್ತುಗಳಿಗಾಗಿ ಜಮೀನುದಾರರು ಧನವನ್ನು ವ್ಯಯಿಸಲಿರುವರು. ವಿಮಾವ್ಯವಸಾಯದವರು ಉತ್ತಮ ಪ್ರಗತಿಗಿರುವ ಸಂಪರ್ಕವನ್ನು ಜುಲಾಯಿಯ ನಂತರ ಹೊಂದಲಿರುತ್ತಾರೆ. ವಿದ್ಯಾರ್ಥಿಗಳು ತಮ್ಮ ಆಶೆಯನ್ನು ಪೂರ್ಣವಾಗಿ ಪಡೆಯಲು ಶಕ್ತಿಯುಳ್ಳವರಾಗುವುದಿಲ್ಲ. ತರುಣ ತರುಣಿಯರು ದಾಂಪತ್ಯ ಜೀವನವನ್ನು ಹೊಂದಲಿರುವ ಸಂಘಟನೆಯನ್ನು ಹೊಂದುತ್ತಾರೆ. ಮಂಗಲ ಕಾರ್ಯಗಳ ಸಮಾರಂಭಕಾಲದಲ್ಲಿ ಒಡಕು--ವಿಘ್ನ--ವಿಡ್ಡೂರಗಳು ಸಂಭವಿಸಲಿರುತ್ತವೆ.

ಮಹಿಳೆಯರೇ, ನಿಮಗೆ ನಿಮ್ಮ ದಾಂಪತ್ಯಜೀವನದಲ್ಲಿ ಈ ವರುಷವು ಹೊಸ ಬಗೆಯ ಸಂಘಟನೆಯನ್ನು ಕೊಡುವುದು. ಕುಟುಂಬಾಭಿವೃದ್ಧಿಯನ್ನು ಹೊಂದಲಿರುವಿರಿ. ಸಂತಾನ—ಸುಖಾನುಭವವು ಕೃತ್ತಿಕಾ-ರೋಹಿಣಿ ನಕ್ಷದವರಿಗೆ ಹೆಚ್ಚಲಿರುವ ಸಂಪರ್ಕವಿದೆ.

ಮಿಥುನ:—

((ಕ, ಕಿ, ಕು, ಕೆ, ಕೊ, ಚ, ಛು, ಹ, ಘ, ಙ)

ಆದಾಯಕ್ಕಿಂತ ವ್ಯಯವು ವರ್ಷಾರಂಭದಲ್ಲಿ ತೋರುತಿದ್ದು ಅಶಾಂತಿಯನ್ನು ಹೊಂದುತ್ತಿರುವಿರಿ. ಕಿರಿಯರ ಮೂಲಕ ಹಿರಿಯರು ಜೀವನದಲ್ಲಿ ಕಷ್ಟಾನುಭವವನ್ನು ಹೊಂದಬೇಕಾಗುತ್ತಿರುವುದು. ಸಾಮುದಾಯಿಕದಲ್ಲಿ ನಿಮ್ಮ ಪ್ರತಿಷ್ಠೆಯು ಅಧಿಕವಾಗಿರುತ್ತದೆ. ದ್ವಾದಶದ ಗುರುವು ಶುಭ ಕೆಲಸಗಳಿಗಾಗಿ ಧನವ್ಯಯವನ್ನು ಮಾಡಿಸಲಿರುವನು. ಪಂಚಮದ ಶನಿಯು ನಿಮ್ಮನ್ನು ವರ್ಷದ ಮಧ್ಯಭಾಗದ ನಂತರ ಪ್ರಗತಿಗೆ ಕೊಂಡೊಯ್ಯಲಿರುತ್ತಾನೆ. ದಾಂಪತ್ಯಜೀವನದಲ್ಲಿ ಅಶಾಂತಿಯು ಪದೇಪದೇ ರೋಗಗಳ ಮೂಲಕ ತೋರುತ್ತಿರುವುದಾದರೂ ಕಷ್ಟ ಅನಿಷ್ಟ ಪರಿಣಾಮಗಳುಂಟಾಗಲಾರವು. ಮಕ್ಕಳು ಬಿದ್ದು ಗಾಯಗೊಳ್ಳುವ ಸಂಭವವಿರುತ್ತದೆ. ಪ್ರಯಾಣವನ್ನು ಮಾಡಲಿರುವಿರಿ. ನೌಕರರು ತಮ್ಮ ವೃತ್ತಿಯಲ್ಲಿ ಅಸಮಾಧಾನವನ್ನು ಹೊಂದಿ ಅನ್ಯಸ್ಥಾನವನ್ನು ಆಶ್ರಯಿಸಲಿರುವ ವಿಚಾರದಿಂದ ಕೂಡಿದವರಾಗುವರು. ಮೃಗಶಿರಾ-ಪುನರ್ವಸು ನಕ್ಷತ್ರಗಳವರು ಕುಟುಂಬದಲ್ಲಿ ಜುಗುಪ್ಸೆಯನ್ನು ತಾಳಲಿರುವರು. ಕನ್ನಿಕೆಯರಿಗೆ ಈ ವರ್ಷದಲ್ಲಿ ಜನ್ಮದ ಗುರುಚಾರ ಕಾಲ ಜೀವನದ ಬದಲಾವಣೆಗಿರುವ ಸಂಘಟನೆಯು ಕಂಡುಬರುವುದು. ಪತ್ರವ್ಯವಹಾರಗಳು ಬಹಳವಾಗಿರುತ್ತವೆ. ಅಧಿಕಾರಿ ವರ್ಗದವರು ಸ್ಥಾನಾಂತರವನ್ನು ಹೊಂದುವರು. ವಕ್ರಗತನಾಗಿ ಕನ್ಯೆಗೆ ಶನಿಯು ಬರುವ ಕಾಲದಲ್ಲಿ ಮಹತ್ತರ ಘಟನೆಯು ಕೌಟುಂಬಿಕ ವಿಷಯದಲ್ಲಿ ಕಂಡುಬರಲಿದೆ. ಆರ್ಥಿಕಸುಧಾರಣೆಗಿರುವ ಮಾರ್ಗವು ಚತುರ್ಥದ ಶನಿಯಿಂದ ಉಂಟಾಗುತ್ತಿರುವುದು. ವ್ಯಾಪಾರ-ವಹಿವಾಟುಗಳವರಿಗೆ ತಾವು ಎಣಿಸಿದಂತೆ ಮುಂದರಿಯಲಾಗುವುದಿಲ್ಲ. ಬೇಂಕ್, ವಿಮೆಯೇ ಮೊದಲಾದ ಸಾಂಪತ್ತಿಕವ್ಯವಹಾರ ಸಂಸ್ಥೆಯವರು ಜೀವನದಲ್ಲಿ ಹೊಸ ಬೆಳಕನ್ನು ಹೊಂದುವರು. ಉದ್ಯೋಗಶಾಲಿಯಾದವರು ಆದಿ-ಅಂತ್ಯ ಭಾಗಗಳಲ್ಲಿ ಪ್ರಗತಿಯನ್ನು ಹೊಂದುತ್ತಾರೆ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ವಿಚಾರವುಳ್ಳವರಾಗುವಿರಿ. ಜನ್ಮದ ಗುರುವು ಸ್ತ್ರೀಯರಿಗೆ ಸಂತಾನಸುಖಭಾಗ್ಯವನ್ನು ಹೆಚ್ಚಿಸಲಿರುವನು. ಸುಮಂಗಲೆಯರು ಪುಣ್ಯಧರ್ಮಕರ್ಮಗಳ ಬಗ್ಗೆ ಆತುರವುಳ್ಳವರಾಗಿಯೂ ಶ್ರದ್ಧೆಗೊಳ್ಳುವವರಾಗಿಯೂ ಕಂಡುಬರುವರು. ವ್ಯಾಪಾರಿಗಳಿಗೆ ಕೋರ್ಟನ್ನು ಹೊಂದಲಿರುವ ಸಂಪರ್ಕವು ಕಾಣಬರುತ್ತಿರುವುದು. ಲೆಕ್ಕಪತ್ರವ್ಯವಹಾರಗಳ ಕುರಿತು ಜಾಗರೂಕತೆಯಿಂದ ಕೂಡಿದವರಾಗಬೇಕು. ವೈದ್ಯಕೀಯ ವಕೀಲ-ವೃತ್ತಿಯವರು ಅಭಿವೃದ್ಧಿಯುಳ್ಳವರಾಗುತ್ತಾರೆ.

ಕರ್ಕಾಟಕ:—

(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ)

ನಿಮ್ಮ ಮನಸ್ಸೇ ನಿಮಗೆ ವಿರೋಧವಾಗುತಿದ್ದು ಅಶಾಂತಿಯುಳ್ಳವರಾಗುವಿರಿ. ಹತ್ತಾರು ವಿಚಾರಗಳಿಂದ ಕೂಡಿದವರಾಗಿದ್ದು ಯಾವ ಕೆಲಸವನ್ನೂ ಪೂರ್ಣಗೊಳಿಸಲು ಶಕ್ತರಾಗುವುದಿಲ್ಲ. ನಾಲ್ಕರಲ್ಲಿರುವ ಶನಿಯು ಗೃಹಜೀವನದಲ್ಲಿ ಬದಲಾವಣೆಗಿರುವ ಸಂಪರ್ಕವನ್ನು ಕೊಡುತ್ತಿರುವನು. ಕರ್ಮದ ರವಿಯು ನಿಮಗೆ ದೊಡ್ಡ ಬದಲಾವಣೆಯನ್ನು ಕೊಡುತ್ತಿರುವನು. ಸಾಂಪತ್ತಿಕಪ್ರಗತಿಯು ಅವನಿಂದುಂಟಾಗಲಿರುತ್ತದೆ. ದೂರ ಪ್ರಯಾಣಗಳನ್ನು ಮಾಡಲಿರುವಿರಿ. ವಾಹನಗೃಹವಸ್ತ್ರೋಪಕರಣಗಳನ್ನು ಅಧಿಕರಿಸಲಿರುವಿರಿ. ಉಡಿಗೆತೊಡಿಗೆ, ವೇಷಭೂಷೆಗಳ ಕಡೆಗೆ ಮಹಿಳೆಯರ ಮನಸ್ಸು ಹರಿದಿದ್ದು, ಅದರ ಬಗ್ಗೆ ಧನವ್ಯಯ ಬಹಳವಾಗಲಿವೆ. ತರುಣ-ತರುಣಿಯರು ದಾಂಪತ್ಯಸಂಬಂಧಕ್ಕಿರುವ ಸಂಪರ್ಕವನ್ನು ಹೊಂದು

ವೆರು. “ಶುಭಸ್ಯ ಶೀಘ್ರಂ” ಎಂಬ ಮಾತನ್ನು ಬಲ್ಲ ನೀವು ಯಾವ ವ್ಯವಹಾರವನ್ನೂ ಶೀಘ್ರವಾಗಿ ನಡೆಸುವುದರಿಂದ ಯಶಸ್ವಿಗಳಾಗುವಿರಿ. ನೌಕರಿಯಲ್ಲಿ ಪ್ರಗತಿಯನ್ನು ಏಕಾದಶದ ಗುರುವು ಉಂಟುಮಾಡಲಿರುತ್ತಾನೆ. ವಿದ್ಯಾರ್ಥಿಗಳು ಪ್ರಗತಿಯನ್ನು ಹೊಂದಲಿರುವರು. ಪ್ರಯಾಣಗಳಿರುತ್ತವೆ.

ಲೇಖಕರು ತಮ್ಮ ಲೇಖನಗಳಿಂದ ಒಳ್ಳೆಯ ಹೆಸರನ್ನೇ ಪಡೆಯಲಿರುವ ಯತ್ನಯುಕ್ತರಾಗುವರಾದರೂ ತಮ್ಮ ಕರ್ಮದಲ್ಲಿ ಸಾಕಷ್ಟು ಫಲವನ್ನು ಹೊಂದಲಾಗುವುದಿಲ್ಲ. ರಾಜಕೀಯ ಸಂಬಂಧವಾದ ವಿಷಯಗಳಿಗೆ ಕೈಯನ್ನು ನೀಡಲಿರುವ ಅಭಿಲಾಷೆಯುಂಟಾಗಲಿರುತ್ತದೆ. ವರ್ಷದಲ್ಲಿ ಎರಡು-ಮೂರು ಬಾರಿ ಆರೋಗ್ಯ ಕೆಡುವ ಸಂಭವವಿದೆ. ಜಾಗರೂಕತೆ ಬೇಕು. ವಾಯು ವಿಕಾರ, ಉದರ-ಶ್ವಾಸ ವಿಕಾರ, ಮೂತ್ರ ದೋಷಗಳು ಹಿರಿಯರಲ್ಲಿ ಕಂಡುಬರುತ್ತವೆ. ಹಿರಿಯರ ಸುಖಕ್ಕೆ ದೋಷವಿರುವುದು. ಬಂಧು ಜನರ ಕಲಹಗಳುಂಟಾಗದಂತೆ ಜಾಗರೂಕತೆಯುಳ್ಳವರಾಗಬೇಕು. ನಾಲ್ಕನೆ ಮನೆಯ ಶನಿ ಮತ್ತು ದ್ವಾದಶದ ಗುರುಗಳು ತರುಣಿಯರಿಗೆ ದಾಂಪತ್ಯಕ್ಕಿರುವ ಸಂಪರ್ಕವನ್ನು ಕೊಡುವರು.

ಮಹಿಳೆಯರೇ, ನೀವು ನಿಮ್ಮ ಗೃಹಜೀವನದಲ್ಲಿ ತುಂಬ ಬೇನೆ-ಬೇಸರಗಳನ್ನು ಅನುಭವಿಸುವಿರಾದರೂ ವರ್ಷಾಂತ್ಯವು ಇಷ್ಟ ಮನೋರಥವನ್ನು ಪೂರ್ತಿಗೊಳಿಸುವುದು. ಉದ್ಯೋಗ ಸಂಸ್ಥೆಯವರು ಸಾಕಷ್ಟು ಆರ್ಥಿಕ ಸಂಪತ್ತನ್ನು ವರ್ಷದ ಅಂತ್ಯಭಾಗದಲ್ಲೇ ಗಳಿಸಲು ಶಕ್ತಿಯುಳ್ಳವರಾಗುವರು. ವಾಹನಭಯವಿದೆ.

ಸಿಂಹ:—

(ಟ, ಟ, ಟು, ಟೆ, ಮ, ಮಿ, ಮು, ಮೆ, ಮೊ)

ಸಾಮುದಾಯಿಕದ ಕಡೆಗೆ ನಿಮ್ಮ ಗಮನ ಅಧಿಕ. ಇದರಿಂದ ನಿಮ್ಮ ವೃತ್ತಿಯೆಲ್ಲ ಜನತೆಯ ಹಿತಕ್ಕಿರುವವುಗಳಾಗಿಯೇ ಸಂಭವಿಸುತಿದ್ದು ಕುಟುಂಬದ ಕಡೆಗೆ ಗಮನವನ್ನು ಸಾಕಷ್ಟಿರಿಸಲಾಗುವುದಿಲ್ಲ. ಮಿತ್ರರು ಶತ್ರುಗಳೆಲ್ಲ ನಿಮ್ಮ ಹಿಂದೆ ಮುಂದೆ ಸಂಚರಿಸುತ್ತಿರುವವರಾದರೂ ಅವರ ಪತ್ತೆಯ ಕಡೆಗೆ ನಿಮ್ಮ ಗಮನವಿರದೆ ಕರ್ಮಸಾಧನೆಯಲ್ಲೇ ಮಗ್ನರಾಗುವಿರಿ. ಇದರಿಂದ ಕೆಲವೊಮ್ಮೆ ಅನರ್ಥಪ್ರಸಂಗಗಳಿಗೆ ಗುರಿಯಾಗುವಿರಿ. ಹೀಗಿದ್ದರೂ ಕರ್ಮದ ಗುರುವಿನ ಮೂಲಕ ನಿಮ್ಮ ಮಾನಮರ್ಯಾದೆಗಳಿಗೇನೂ ತೊಡಕಾಗದೆ ಪ್ರತಿಷ್ಠೆಯ ಕೆಲಸಗಳೇ ನೆರವೇರಲಿರುವುವು. ಯಶಸ್ಸನ್ನು ಬಹಳವಾಗಿ ಹೊಂದಲಿರುವಿರಿ. ಧಾರ್ಮಿಕ ಕೆಲಸಗಳನ್ನು ಮಾಡಲಿರುವಿರಿ. ಗೃಹವಾತಾವರಣವು ಶಾಂತಿಯಿಂದ ಕೂಡಿರುವುದಿಲ್ಲ. ಪತನಭಯ, ವ್ರಣವಿಕಾರಗಳುಂಟಾಗಲಿರುವ ಸಂಭವವಿರುತ್ತದೆ. ಗುಪ್ತಶತ್ರುಗಳು ಅಧಿಕವಾಗಿರುತ್ತಾರೆ.

“ದೂರದ ಬೆಟ್ಟ ನುಣ್ಣಗೆ” ಎಂಬ ನಾಣ್ಣುಡಿಯ ತಿರುಳನ್ನು ಅರಿತ ನೀವು ಸಾಮೂಹ್ಯ ಸಂಪರ್ಕದ ವಿಚಾರವನ್ನೇ ಸಾಧಿಸುವ ಮಂದಿ, ನಿಮ್ಮ ವಾತಾವರಣವು ವಿಶೇಷತಃ ಬದಲಾವಣೆಗೊಳ್ಳಲಿರುತ್ತದೆ. ಕರ್ಮದ ಗುರುವು ಸಂತಾನವನ್ನು ಹೆಚ್ಚಿಸಲಿರುವ ಶಕ್ತಿಯುಳ್ಳವನಾಗಿರುತ್ತಾನೆ. ಮಕ್ಕಳ ಆರೋಗ್ಯಕ್ಕೆ ಆದಿಭಾಗದಲ್ಲಿ ಧನವ್ಯಯವು ಬಹಳವಾಗಿರುತ್ತದೆ.

ವಿದ್ಯಾವಂತರು ಉತ್ತಮವರ್ಚಸ್ಸನ್ನು ಅನ್ಯರಲ್ಲಿ ಬೀರಲಿರುವ ಶಕ್ತಿಯುಳ್ಳವರಾಗುವರು. ಜೂನ್, ಜುಲಾಯಿ ತಿಂಗಳುಗಳು ಮಾನಸಿಕಅಶಾಂತಿಯುಳ್ಳವುಗಳಾಗಿರುತ್ತವೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಮುನ್ನಡೆಯನ್ನು ಹೊಂದಲಿರುವರು. ಪತ್ರವ್ಯವಹಾರ ಬಹಳವಾಗಿರುತ್ತದೆ. ವ್ಯಾಪಾರಿಗಳಿಗೆ ತೃತೀಯದ ಶನಿಯ ಮೂಲಕ ಏಜನ್ಸಿ ವೃತ್ತಿಯ ಲಾಭವು ಸಂಭವಿಸುವುದು. ಮಹಾಜನರ ದರ್ಶನ, ಪುಣ್ಯಕಾರ್ಯ, ಪುಣ್ಯಸ್ಥಳಗಳ ದರ್ಶನವನ್ನು ವೃದ್ಧರು ನೆರವೇರಿಸಲಿರುವರು. ಕೌಟುಂಬಿಕ ವ್ಯಯ ಬಹಳವಾಗಿ ಕಂಡುಬರಲಿರುವುದು.

ಲೇಖಕರು ಏಕಾದಶದ ಗುರುಚಾರ ಕಾಲದಲ್ಲಿ ಒಳ್ಳೆಯ ಪ್ರತಿಷ್ಠೆಗಿರುವ ರಚನೆಯನ್ನು ಮಾಡಿ ಉತ್ಕರ್ಷದ ನೆಲೆಗೆ ಬರುವರು. ವಾಸಸ್ಥಾನದ ಬದಲಾವಣೆಗಿರುವ ಸಂಘಟನೆಯುಂಟಾಗುತ್ತದೆ. ಅಧಿಕಾರೀವರ್ಗದವರು ತಮ್ಮ ಹುದ್ದೆಯಲ್ಲಿ ಉತ್ತಮಯಶಸ್ಸನ್ನು ಸಾಧಿಸಿ, ಮುಂದಕ್ಕೆ ಉನ್ನತಿಗಿರುವ ಕರ್ಮವನ್ನು ಸಾಧಿಸುವರು. ಹುಬ್ಬಾ ಉತ್ತರಾ ನಕ್ಷತ್ರದವರು ಕುಟುಂಬದವರ ಮೂಲಕ ಶಾಂತಿಯುಳ್ಳವರಾಗುವುದಿಲ್ಲ. ಹಿರಿಯರಿಗೆ ಅನಿಷ್ಟ ಪರಿಣಾಮವಿರುತ್ತದೆ.

ಮಹಿಳೆಯರೇ, ನಿಮ್ಮ ದಾಂಪತ್ಯವು ಆದರ್ಶವಾಗಿ ಬಾಳಲಿರುವ ಯತ್ನಸಂಪರ್ಕವು ನಿಮ್ಮಲ್ಲಿರುವುದರಿಂದ ನಿಮ್ಮ ಮನೋರಥಗಳೆಲ್ಲಾ ಪರಿಪೂರ್ಣಗಳಾಗಲಿರುತ್ತವೆ. ತರುಣರು ಹೊಸ ಕೆಲಸವನ್ನು ಜೂನಿನ ನಂತರ ಹೊಂದಿ ವೃದ್ಧಿಯನ್ನು ಹೊಂದುವರು. ಪ್ರಯಾಣಗಳಿರುತ್ತವೆ. ವೈದ್ಯಕೀಯವೃತ್ತಿಯವರು ಒಳ್ಳೆಯ ಪ್ರಗತಿಯನ್ನು ಎಲ್ಲ ಬಗೆಯಿಂದಲೂ ಹೊಂದುವರು. ನೌಕರರು ಹೊಸಸ್ಥಾನವನ್ನು ಹೊಂದುತ್ತಾರೆ. ರಿಕಾರ್ಡ್ ವ್ಯವಹಾರ ಬಹಳವಿರುತ್ತದೆ.

ಕನ್ಯಾ:—

(ಟೊ, ಪ, ಷಿ, ಪು, ಪೆ, ಪೊ, ಬ, ಬೂ, ಣ, ಠ)

ಏಳೂವರೆ ಶನಿಯ ಬಾಧೆಯೊಂದೆಡೆಯಿದ್ದು ನಿಮ್ಮ ಮನಸ್ಸು ಕೊರಗುತ್ತಲಿರುವುದು. ಆದರೆ ಜನ್ಮದ ಶನಿಗಿಂತ ದ್ವಿತೀಯದ ಶನಿಯು ಸಂಪತ್ತಿನ ವಿಷಯದಲ್ಲಿ ಫೆಬ್ರವರಿಯ ನಂತರ ಸುಧಾರಣೆಯನ್ನು ಮಾಡಲಿರುವನು. ಕುಟುಂಬಕ್ಕಾಗಿ ಧನವ್ಯಯವು ಬಹಳವಾಗಿರುತ್ತದೆ. ದ್ವಿತೀಯದ

ಶನಿಯು ತರುಣ-ತರುಣಿಯರಿಗೆ ಉನ್ನತಿಯನ್ನು ದಾಂಪತ್ಯದ ಮೂಲಕ ಉಂಟುಮಾಡಲಿರುವನು. ಹೊಸ ಕೆಲಸಗಳಿಗೆ ಕೈಯನ್ನು ಹಾಕಲಿರುವ ಅಭಿಲಾಷೆಯುಂಟಾಗಿ, ಅವಶ್ಯಕರುವ ಕಾರ್ಯವು ವಿಶೇಷ ವಿಚಾರಾನಂತರ ಸಿದ್ಧಿಸುವುದು. ಸಂತಾನ ಸುಖವನ್ನು ಉತ್ತರಾ ನಕ್ಷತ್ರದವರು ಭಾಗ್ಯದ ಗುರುವಿನ ಮೂಲಕ ಹೊಂದಲಿರುವರು. ನವಮದ ಗುರುವಿನ ಕಾಲ ಹಲವಾರು ಪುಣ್ಯಕೆಲಸ, ತೀರ್ಥಕ್ಷೇತ್ರದರ್ಶನ, ಶುಭಕರ್ಮಗಳು ಸಂಭವಿಸಲಿರುತ್ತವೆ. ಚಿತ್ರಾನಕ್ಷತ್ರದವರು ದಾಂಪತ್ಯ ಸುಖಸಂತಾನಭಾಗ್ಯ, ನವೀನ ಕರ್ಮಬಂಧುಜನವಿಯೋಗಗಳನ್ನು ಹೊಂದಲಿರುವ ಸಂಸರ್ಕವಿದೆ. ಅಷ್ಟಮದ ಕುಜ ರವಿಚಾರ ಕಾಲಗಳಲ್ಲಿ ಆಕಸ್ಮಿಕ ಘಟನೆ, ವ್ಯಯ, ದೇಹಸುಖಾಭಾವ, ವಾಹನಗಳ ಅನಘಾತ, ವ್ರಣವಿಕಾರಗಳು ಸಂಭವಿಸುವಂತಿರುವುದರಿಂದ ಜಾಗರೂಕತೆಯಿಂದ ಕೂಡಿದವರಾಗಬೇಕು. ಡಾಕ್ಟರರು ಫೆಬ್ರುವರಿಯ ನಂತರ ಒಕ್ಟೋಬರದ ವರೆಗೆ ಎಡೆ ಎಡೆ ಆಕಸ್ಮಿಕರೀತಿಯಿಂದ ದ್ರವ್ಯಸಂಗ್ರಹವನ್ನು ತಮ್ಮ ವೃತ್ತಿಯಲ್ಲಿ ಮಾಡಲಿರುವರು. ವಿಮಾವ್ಯವಸಾಯಿಗಳಿಗೆ ಈ ವರುಷ ಅತಿ ಪ್ರಗತಿಯಿರುತ್ತದೆ.

ಲೇಖಕರು ಒಳ್ಳೆಯ ಬರಹವನ್ನೇ ಬರೆದು ಸಮಾಜದ ಜನತೆಯ ಪ್ರೀತಿಪಾತ್ರರಾಗಿ ಉತ್ಕರ್ಷವನ್ನೂ ಪ್ರತಿಷ್ಠೆಯನ್ನೂ ಹೊಂದಲಿರುತ್ತಾರೆ. ರಾಜಕೀಯ ವ್ಯವಹಾರದಲ್ಲಿ ಭಾಗವನ್ನು ವಹಿಸಲಿರುವ ಸಂಪರ್ಕವು ಉತ್ತರಾ ಮತ್ತು ಹಸ್ತಾ ನಕ್ಷತ್ರದವರಿಗಿರುತ್ತದೆ. ಮಹಿಳೆಯರೇ, ನೀವು ನಿಮ್ಮ ಕರ್ಮ ವ್ಯವಹಾರಗಳಲ್ಲಿ ಒಳ್ಳೆಯ ಜಾಣತನವನ್ನು ವಹಿಸಿ ನಡೆಯುವುದರಿಂದ ಶುಭ ಇಷ್ಟಾರ್ಥಸಂಪತ್ತುಗಳು ಆಕಸ್ಮಿಕವಾಗಿ ಉಂಟಾಗಲಿರುತ್ತವೆ. ಪ್ರಯಾಣಗತರು ನಿವೃತ್ತರಾಗಲಿದ್ದಾರೆ. ನೌಕರರು ಕರ್ಮದ ಗುರುಚಾರ ಕಾಲದಲ್ಲಿ ಉತ್ತಮ ಪ್ರತಿಷ್ಠೆಯನ್ನು ಹೊಂದಲಿರುವ ಕೆಲಸವನ್ನು ಮಾಡಲಿರುವರು. ಮಿತ್ರರ ಸಂಖ್ಯೆ ಹೆಚ್ಚಲಿರುತ್ತದ. ಅಧಿಕಾರೀವರ್ಗದ ಪ್ರೀತಿ ಸ್ನೇಹ ಪಾತ್ರರಾಗಿ ಉನ್ನತಿಯನ್ನು ಹೊಂದಲಿರುವಿರಿ. ಸಹೋದರರಿಂದ ಅಶಾಂತಿಯುಂಟಾಗಲಿರುವ ಸಂಭವವಿದೆ. ದೇಹಾರೋಗ್ಯದ ಕುರಿತು ಅಗೋಸ್ಟ್ ಸಪ್ಟಂಬರಗಳಲ್ಲಿ ಎಚ್ಚರಿಕೆಯುಳ್ಳವರಾಗಬೇಕು. ವಿದ್ಯಾರ್ಥಿಗಳಿಗೆ ವರ್ಷಾಂತ್ಯವು ಉತ್ತಮವಾಗಿರುತ್ತದೆ. ಚಿತ್ರಗಾರರು ಉತ್ತಮ ಕೀರ್ತಿಯನ್ನು ಸಂಪಾದಿಸುವರು.

ತುಲಾ:—

(ರ, ರಿ, ರು, ರೆ, ರೊ, ತ, ತಿ, ತು, ತೆ)

ನಿಮ್ಮ ಅಂತಃಕರಣ ಉದಾರವಾಗಿದ್ದುದು ಮಾತ್ರವಲ್ಲ, ವಿಶಾಲವಾಗಿಯೂ ಇರುತ್ತದೆ. ಅದರಲ್ಲಿ ಕೊಳೆ ಬೇನೆ ಬೇಸರಿಕೆಗಳನ್ನು ಹಚ್ಚಿಕೊಳ್ಳದೆ ನಡೆವ ಕೆಲಸವನ್ನು ನೀವು ಸದಾ ಜಾಗರೂಕತೆಯಿಂದ ನಿರ್ವಹಿಸುತ್ತಿರಬೇಕು. ಇದರಿಂದ ಎಲ್ಲೆಡೆಯಲ್ಲೂ ಸ್ಥಾನಮಾನ, ಉತ್ಕರ್ಷಗತಿಗಳುಂಟಾಗುತ್ತವೆ. ಈ ವರ್ಷದಲ್ಲಿ ನಿಮ್ಮ ವರ್ಚಸ್ಸು ಬುದ್ಧಿಕರ್ಮಗಳ ಜಾಣತನದಿಂದ ಅಧಿಕವಾಗಲಿರುವುದು. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ. ಕುಟುಂಬೀಯರ ವಿರೋಧವು ಆದಿಭಾಗದಲ್ಲಿರುತ್ತದೆ. ಉದ್ಯೋಗ-ಸಂಸ್ಥೆಯ ಮಾಲಿಕರು ನವೀನ ರೀತಿಯಿಂದ ತಮ್ಮ ಉತ್ಕರ್ಷವನ್ನು ಸಾಧಿಸಲಿರುತ್ತಾರೆ. ತುಂಬಾ ಪ್ರಯಾಣಗಳಿರುತ್ತವೆ. ಗೃಹಭೂಸಂಪತ್ತುಗಳ ಕುರಿತು ಧನವನ್ನು ವ್ಯಯಿಸಲಿರುವ ಸಂಪರ್ಕವಿದೆ. ಭೂಸಂಪತ್ತಿನ ವೃದ್ಧಿಯಾಗಲಿರುತ್ತದೆ. ಕೆಲಸಗಾರರು ತಮ್ಮ ಕೆಲಸವಲ್ಲಿ ಅನಾಸಕ್ತಿಯನ್ನೂ ಅಶ್ರದ್ಧೆಯನ್ನೂ ತೋರಿ ತಮ್ಮ ಅಧಿಕಾರಪ್ರೀತಿ-ವಿಶ್ವಾಸಗಳನ್ನು ಕಳಕೊಳ್ಳಲಿರುವರು. ವ್ಯಾಪಾರಿಗಳಲ್ಲಿ ಮದ್ದು, ವಿದೇಶೀವಸ್ತುಗಳ ಏಜನ್ಸಿಯವರು ತುಂಬಾ ಪ್ರಗತಿಯನ್ನು ಹೊಂದಲಿರುವರು. ದೇಹಾರೋಗ್ಯವು ಉಷ್ಣವಾಯುವಿಕಾರಗಳ ಮೂಲಕ ಪದೇ ಪದೇ ಕಷ್ಟಕ್ಕೊಳಗಾಗುತ್ತಿರುವುದು. ಸ್ವಾತಿ ನಕ್ಷತ್ರದವರಿಗೆ ಅಷ್ಟಮದ ಗುರುವಿನಿಂದ ತುಂಬಾ ಪ್ರಯೋಜನವಿದೆ. ಗುಪ್ತ ಹಾಗೂ ಆಕಸ್ಮಿಕ ರೀತಿಯ ಘಟನೆಗಳು ಇವನಿಂದುಂಟಾಗಲಿರುತ್ತವೆ. ಮಕ್ಕಳ

ಆರೋಗ್ಯ ವಿಷಯದಲ್ಲಿ ಜಾಗರೂಕತೆಯುಳ್ಳವರಾಗಬೇಕು. ವ್ಯಾಪಾರಿಗಳೇ! ನೀವು ನಿಮ್ಮ ಮಾಲುಗಳನ್ನು ಕೂಡಲೇ ವಿಕ್ರಯಗೊಳಿಸುವುದರಿಂದ ಪ್ರಗತಿಯೇ ಕಾಣಲಿದೆ.

ತರುಣ-ತರುಣಿಯರಿಗೆ ವಕ್ರಶನಿಚಾರದ ಮೂಲಕ ದಾಂಪತ್ಯಜೀವನಕ್ಕಿರುವ ಸಂಘಟನೆಯುಂಟಾಗಿ ಮುಂದೆ ದಾಂಪತ್ಯಯೋಗ ಸಿದ್ಧಿಸಲಿರುವುದು. ಕಿವಿ ಹೊಟ್ಟೆಗಳ ನೋವು ವಿಶಾಖಾನಕ್ಷತ್ರದವರಿಗೆ ನವಮಕ್ಕೆ ಗುರು ಹೋಗುವ ಮುಂಚೆಯೇ ತೋರಿಬರುತ್ತದೆ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ವಿಚಾರವು ಕಂಡುಬರುತ್ತದೆ. ಅಷ್ಟಮದ ಗುರುವು ಸ್ತ್ರೀಯರಿಗೆ ಸಂತಾನಕ್ಕಿರುವ ಚಿಹ್ನೆಯನ್ನು ಕೊಡಲಿರುತ್ತಾನೆ. ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯಲ್ಲಿ ಸಾಕಷ್ಟು ಅಂಕವನ್ನು ಹೊಂದುತ್ತಾರೆ. ಮುಂದಿನ ವಿದ್ಯಾಭ್ಯಾಸಕ್ಕಿರುವ ಕಟ್ಟುಪಾಡುಗಳು ಕಂಡುಬರುವವು. ವಿಮಾ ವ್ಯವಸಾಯಿಗಳಿಗೆ ವರ್ಷದ ಮಧ್ಯಭಾಗದನಂತರ ಉತ್ಕರ್ಷವು ಕಂಡುಬರಲಿರುತ್ತದೆ. ರಿಕಾರ್ಡು ವ್ಯವಹಾರಗಳಲ್ಲಿ ಜಯಲಾಭವೇ ಕಂಡುಬರಲಿರುತ್ತದೆ. ಮಹಿಳೆಯರು ಗೃಹೋಪಕರಣಗಳನ್ನು ಹೆಚ್ಚಿಸಲಿರುತ್ತಾರೆ. ಉಡುಗೆತೊಡುಗೆಗಳನ್ನು ಬಹಳವಾಗಿ ಮೆಚ್ಚಿ, ಅದಕ್ಕಾಗಿ ವ್ಯಯಿಸುವರು. ಅಷ್ಟಮದ ಕುಜಚಾರ ಕಾಲದಲ್ಲಿ ಗೃಹಜೀವನದವರಿಗೆ ತುಂಬಾ ಕಷ್ಟಪರಂಪರೆಗಳ ಮೂಲಕ ಅಶಾಂತಿ, ಅಸಮಾಧಾನ, ಬೇನೆ ಬೇಸರಿಕೆಗಳು ತೋರಿಬರಲಿರುತ್ತವೆ ನೌಕರರಿಗೆ ವರ್ಷಾಂತ್ಯ ಶುಭಕರ.

ವೃಶ್ಚಿಕ:—

(ತೊ, ನ, ನಿ, ನು, ನೆ, ನೊ, ಯಾ, ಯಿ, ಯು)

ಎಲ್ಲದಕ್ಕೂ ಇತಿಮಿತಿಗಳಿರಬೇಕು. ಈ ವರ್ತನೆಯಿಂದಲೇ ಜೀವನದ ಪ್ರಗತಿ. ಇದನ್ನು ನೀವು ಬಲ್ಲವರಿದ್ದರೂ ಕರ್ತವ್ಯದಲ್ಲಿ ಕೆಲವೊಮ್ಮೆ ತಪ್ಪುವುದರಿಂದ ನಿಮ್ಮ ಕರ್ಮದಲ್ಲಿ ತೊಡಕು— ಅಶಾಂತಿಗಳುಂಟಾಗುತ್ತವೆ. ಕುಟುಂಬೀಯರ ಮತ್ತು ಬಂಧುಜನರ ಮನೋವೇದನೆಯನ್ನು ಅನುಭವಿಸಲಿರುವ ಪರಿಸ್ಥಿತಿ ಇದರಿಂದಲೇ ನಿಮಗುಂಟಾಗಲಿರುವ ಅವಕಾಶವಿರುವುದರಿಂದ, ಕರ್ತವ್ಯದಲ್ಲಿ ಸದಾ ಜಾಗರೂಕರಾಗಿರಿ. ಹಿರಿಯರ ದೇಹಾರೋಗ್ಯವು ಚೆನ್ನಾಗಿರುವುದಿಲ್ಲ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ಅವಕಾಶವು ಅಷ್ಟಮದ ಗುರುಚಾರದಿಂದುಂಟಾಗುತ್ತದೆ. ಈ ವರ್ಷದ ಆದಿಭಾಗವು ನಿಮಗೆ ಸಾಂಪತ್ತಿಕ ವಿಷಯದಲ್ಲಿ ಚೆನ್ನಾಗಿರುತ್ತದೆ. ಇಚ್ಛಿಸಿದ ಕೆಲಸಗಳೆಲ್ಲ ಸಫಲವಾಗಲಿರುವ ಸಂಪರ್ಕ ಜುಲಾಯಿವರೆಗಿರುತ್ತದೆ ಮಹಾಜನರ ಭೇಟಿಯನ್ನು ಹೊಂದಲಿರುವಿರಿ. ವಾಗ್ವಾದಗಳುಂಟಾಗಲಿರುವ ಸಂಭವವಿರುತ್ತದೆ. ವಿದ್ಯಾರ್ಥಿಗಳಿಗೆ ಆಲಸ್ಯ, ಅಶ್ರದ್ಧೆಗಳು ಹೆಚ್ಚಿರುತ್ತಿದ್ದು ತಮ್ಮ ಕೆಲಸದಲ್ಲಿ ಪೂರ್ಣ ಯಶಸ್ಸನ್ನು ಹೊಂದಲಾಗುವುದಿಲ್ಲ ಶತ್ರುಗಳ ಬಾಧೆಯನ್ನು ಆಕಸ್ಮಿಕವಾಗಿ ಹೊಂದಲಿರುವಿರಿ. ವಿಶಾಖಾ ನಕ್ಷತ್ರದವರು ಜೀವನದಲ್ಲಿ ತುಂಬಾ ಸ್ಥಿತ್ಯಂತರವನ್ನು ಹೊಂದಲಿರುತ್ತಾರೆ. ದೇಹಾರೋಗ್ಯ ವಿಷಯದಲ್ಲಿ ತುಂಬಾ ಜಾಗರೂಕತೆಯುಳ್ಳವರಾಗಬೇಕು. ಚತುಷ್ಪಾದ ಪ್ರಾಣಿಗಳ ನಷ್ಟ; ಆರ್ಥಿಕದ ದುಃಸ್ಥಿತಿ, ಬೇನೆ ಬೇಸರಿಕೆಗಳು ವರ್ಷಾಂತ್ಯದಲ್ಲಿ ತೋರಿಬರುವ ಸಂಭವವಿದೆ. ವಾಹನಗಳಿಗಾಗಿ ಧನವ್ಯಯವಿರುತ್ತದೆ. ಹನ್ನೆರಡರಲ್ಲಿರುವ ಶನಿಯು ದಾಂಪತ್ಯಜೀವನಕ್ಕಿರುವ ಸಂಪರ್ಕವನ್ನು ತರುಣತರುಣಿಯರಿಗುಂಟುಮಾಡುತ್ತಾನೆ ವೈದ್ಯಕೀಯವೃತ್ತಿಯವರು ಹೊಸ ಶೋಧನೆಗಳನ್ನು ನಡೆಸಲಿರುವ ಸಂಪರ್ಕವಿದ್ದು ಅದರಿಂದ ಪ್ರಗತಿಯನ್ನು ಸಾಧಿಸುವರು. ಮದ್ದಿನ ವ್ಯಾಪಾರಿಗಳಿಗೆ ಮೇ, ಜೂನ್, ಜುಲಾಯಿ ತಿಂಗಳುಗಳು ಚೆನ್ನಾಗಿರುತ್ತವೆ. ಆರ್ಥಿಕ ಸಂಸ್ಥೆಯ ಕೆಲಸಗಾರರು ಒಳ್ಳೆಯ ಪರಿಶ್ರಮವನ್ನು ಹೊಂದಿ ತುಂಬಾ ಯಶಸ್ಸಿಗೆ ಪಾತ್ರರಾಗುವರು. ಆಕಸ್ಮಿಕ ವೃದ್ಧಿಯೋಗವು ಅಷ್ಟಮದ ಗುರುವಿನಿಂದ ಹಲವರಿಗುಂಟಾಗಲಿರುತ್ತದೆ.

ಲೇಖಕರು ವರ್ಷದ ಆದಿಭಾಗಕ್ಕಿಂತ ಅಂತ್ಯಭಾಗದಲ್ಲಿ ಹೆಚ್ಚು ಪರಿಶ್ರಮಗೊಳ್ಳುವರು ಜಮೀನುದಾರರು ಭೂಸಂಪತ್ತಿನ ಅಭಿವೃದ್ಧಿಯನ್ನು ಹೊಂದುತ್ತಾರೆ ಗೃಹ ಭೂಸಂಪತ್ತುಗಳನ್ನು ಮತ್ತಷ್ಟು ಹೆಚ್ಚಿಸಲಿರುತ್ತಾರೆ. ಅನುರಾಧಾ ನಕ್ಷತ್ರದವರು ಆಕಸ್ಮಿಕ ಘಟನೆಗಳಿಂದ ಕೂಡಿದವರಾಗುವರು. ಸಪ್ತಮದ ಗುರುವು ಮಹಿಳೆಯರಿಗೆ ಸಂತಾನಸುಖಾಭಿವೃದ್ಧಿ ಕೊಡಲು ಶಕ್ತನಾಗಿಯೇ ಕಂಡುಬರುವನು. ಸೇನಾಖಾತೆಯು ಮತ್ತು ಯಾಂತ್ರಿಕಸಂಸ್ಥೆಯ ನೌಕರರು ತುಂಬಾ ಪ್ರಗತಿಯನ್ನು ಹೊಂದಲಿರುತ್ತಾರೆ ಪ್ರಯಾಣ, ಪುಣ್ಯಕಾರ್ಯಗಳು ವರ್ಷಾಂತ್ಯದಲ್ಲಿ ಆಗಲಿರುತ್ತವೆ

ಧನು:—

(ಯೆ, ಯೋ, ಭ, ಭಿ, ಭೂ, ಧಾ, ಫಾ, ಢಾ, ಭೇ)

ಎಲ್ಲಾ ಬಗೆಯಿಂದಲೂ ನಿಮ್ಮ ಜೀವನರಂಗದಲ್ಲಿ ಅದೊಂದು ಬಗೆಯ ಕಾರ್ಮೋಡವು ಕವಿದಿದ್ದರೂ ಅದು ಬಗೆಹರಿದು ಮುಂದೆ ಜೀವನದ ಶುಭ್ರಜ್ಯೋತಿಯನ್ನು ಹೊಂದಲಿರುವ ಸಂಪರ್ಕವು ಈ ವರ್ಷದಲ್ಲಿರುತ್ತದೆ. ಬಂಧುಗಳ, ಕುಟುಂಬೀಯರ, ವಿಯೋಗವನ್ನ ಹೊಂದಲಿರುವಿರಿ. ನಿಮ್ಮ ಮನಸ್ಸೇ ನಿಮಗೆ ವಿರೋಧವಾಗಿ ಅನೇಕ ವೇಳೆ ತಪ್ಪು ದಾರಿಯನ್ನು ಹಿಡಿಯುಲಿರುವ ಸಂಭವವುಂಟಾಗುತ್ತದೆ. ರಿಕಾರ್ಡು ಸಂಬಂಧ ವ್ಯವಹಾರಗಳು ಬಹಳವಾಗಿ ನಡೆಯುಲಿರುವವು. ದೇಹಾರೋಗ್ಯ ವಿಷಯದಲ್ಲಿ ಧನವ್ಯಯವಿರುತ್ತದೆ. ಸಹೋದರರಿಂದ ಸುಖಲಾಭವನ್ನೂ ಸಹಾಯವನ್ನೂ

ಪಡೆಯಲಿರುವಿರಿ. ಉದರ-ಪಿತ್ಥ-ವಾತಸಂಬಂಧ ರೋಗಗಳುಂಟಾಗದಂತೆ ಜಾಗರೂಕರಾಗಿರಬೇಕು. ಆಕಸ್ಮಿಕ ಘಟನೆಗಳು ಈ ವರ್ಷದಲ್ಲಿ ನಿಮಗೆ ಹಲವಾರು. ಕೆಲಸದಲ್ಲಿ ಪ್ರಗತಿಯನ್ನು ಹೊಂದಲಿರುವಿರಿ. ಮಕ್ಕಳ ಆರೋಗ್ಯ ಸುಖಕ್ಕಾಗಿ ಕುಟುಂಬಿಯರಿಗೆ ಧನವ್ಯಯವಿರುತ್ತದೆ. ವಿದ್ಯಾರ್ಥಿಗಳು ಪ್ರಗತಿಯಿಂದ ಕೂಡಿದವರಾಗಲಿರುತ್ತಾರೆ. ವ್ಯಾಪಾರಿಗಳಿಗೆ ಪ್ರಗತಿಯು ಯತ್ನದ ಮೂಲಕ ಹೆಚ್ಚುತ್ತದೆ. ಲಲಿತಕಲೆ, ಸಂಶೋಧನಾತ್ಮಕ ವಿಚಾರಗಳ ಕೆಲಸಗಾರರು ಬಹಳವಾಗಿ ಜನತೆಯ ಪ್ರಶಂಸೆಗೆ ಪಾತ್ರರಾಗುವರು. ವಕೀಲವೃತ್ತಿಯವರು ಒಳ್ಳೆಯ ಯಶಸ್ಸನ್ನು ಹೊಂದಲಿರುವರು. ವ್ಯಾಪಾರಿಗಳಿಗೆ ವರ್ಷಾಂತ್ಯವು ಪ್ರಗತಿಕರ. ವಿಮಾವ್ಯವಸಾಯಿಗಳೂ ಏಜನ್ಸಿ ವೃತ್ತಿಯವರೂ ಒಳ್ಳೆಯ ಪ್ರಗತಿಯನ್ನು ಹೊಂದುವರು.

ಏಕಾದಶದ ಶನಿಗೆ ಕುಜನು ನೋಡುವ ಕಾಲದಲ್ಲಿ ಮಕ್ಕಳ ಮತ್ತು ಸಹೋದರರ ಆರೋಗ್ಯದ ನೆಲೆಯು ಸುಖ ಶಾಂತಿದಾಯಕವಾಗುವುದಿಲ್ಲ. ಹಿರಿಯರ ಅಗಲುವಿಕೆಯನ್ನು ಹೊಂದಲಿರುವಿರಿ ಸೇನಾ ಖಾತೆಯವರು ಒಳ್ಳೆಯ ಪ್ರಗತಿಯನ್ನು ಹೊಂದುತ್ತಾರೆ. ಯಾಂತ್ರಿಕ-ಉದ್ಯೋಗ ವ್ಯವಸಾಯಿಗಳಿಗೆ ತುಂಬ ಪರಿಶ್ರಮವನ್ನು ಹೊಂದಬೇಕಾಗುವುದಾದರೂ ಧನ ವಿಷಯದಲ್ಲಿ ಉತ್ತಮ ಪ್ರಗತಿಯು ಈ ವರ್ಷದಲ್ಲಿದೆ ಉದ್ಯೋಗಶಾಲೆಯವರೂ ಕಾರ್ಖಾನೆಯ ಮಾಲಿಕರೂ ವರ್ಷದ ಆದಿಭಾಗದಲ್ಲಿ ಕಷ್ಟವನ್ನು ಅನುಭವಿಸುವವರಾದರೂ ಕೊನೆಗೆ ಸುಖಾನುಭವವನ್ನು ಹೊಂದಲಿರುವರು.

ಸಪ್ತಮದ ಗುರುವು ಗೃಹಭೂಸಂಪತ್ತುಗಳಿಗಾಗಿ ಧನವ್ಯಯವನ್ನು ಮಾಡಿಸಲಿರುವನು. ನೌಕರರು ಸ್ಥಾನಾಂತರವನ್ನು ಹೊಂದಲಿರುವರು. ತರುಣರು ಹೊಸ ಕೆಲಸಗಳನ್ನು ಹೊಂದಲು ಶ್ರಮಿಸುವುದರಿಂದ ಕೂಡಲೇ ಫಲವನ್ನು ಹೊಂದಲಿರುತ್ತಾರೆ. ನವೀನ ಉದ್ಯೋಗ- ವ್ಯವಸಾಯಾತ್ಮಕ ಸಂಸ್ಥೆಯು ನಿರ್ಮಾಣಕ್ಕಿರುವ ಯೋಜನೆಯನ್ನು ಹಲವರು ಮಾಡಿ ಸಫಲರಾಗಲಿರುತ್ತಾರೆ. ಪ್ರಯಾಣಗಳು ಬಹಳವಾಗಿ ನಡೆಯಲಿರುತ್ತವೆ. ಲೇಖಕ-ಲೇಖಕಿಯರು ಒಳ್ಳೆಯ ಲೇಖನಗಳನ್ನು ಬರೆದು ಮುಂದಕ್ಕೆ ಜನಾದರಣೆಯನ್ನು ಪಡೆಯುವರು. ತರುಣರಿಗೆ ವಿವಾಹಕ್ಕಿರುವ ಘಟನೆ ಕರ್ಮಕ್ಕೆ ತೆರಳಲಿರುವ ಶನಿಯಿಂದ ವಕ್ರಗತಿ ಮೂಲಕ ಸಿದ್ಧಿಸಲಿರುತ್ತದೆ.

ಮಕರ:—

(ಭೊ, ಜ, ಜಿ, ಜು, ಜೆ, ಜೊ, ಖ, ಖಿ, ಖೆ, ಖೊ, ಗ, ಗಿ)

ನಿಮ್ಮ ರಾಶ್ಯಾಧಿಪನು ಉಚ್ಚದಲ್ಲಿರುವುದರಿಂದ ಜನತೆಯ ಮುಂದೆ ನಿಮಗಿರುವ ಸ್ಥಾನಮಾನಗಳು ಮಹತ್ತರಗಳಾಗಿಯೇ ಕಾಣಬರುವುವು. ಶತ್ರುಗಳೊಡನೆ ಸೆಣಸಾಡಲಿರುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ಉದರಸಂಬಂಧವಾದ ವ್ಯಾಧಿ ದೋಷಗಳು ತಲೆದೋರದಂತೆ ಜಾಗರೂಕರಾಗಿರಬೇಕು. ಕುಟುಂಬದಲ್ಲಿ ಶುಭ ಕೆಲಸಗಳು ನಡೆಯಲಿರುತ್ತವೆ. ದೂರಗತ ಬಂಧುಜನರ ದರ್ಶನ ಲಾಭವನ್ನು ಹೊಂದಲಿರುವಿರಿ. ಹಿರಿಯರ ಆರೋಗ್ಯದ ನೆಲೆಯು ಚೆನ್ನಾಗಿರಲಾರದು. ವ್ಯಾಪಾರಿಗಳು ಅಭಿವೃದ್ಧಿಯನ್ನು ಈ ವರ್ಷದ ಆದಿಅಂತ್ಯಗಳಲ್ಲಿ ಹೊಂದಲಿರುತ್ತಾರೆ. ಮಹಾಜನರ ಭೇಟಿಯುಂಟಾಗಲಿರುವ ಸಂಭವವಿರುತ್ತದೆ. ವಾಗ್ವಾದಗಳುಂಟಾಗದಂತೆ ಜಾಗರೂಕರಾಗಿರಬೇಕು. ವಿದ್ಯಾರ್ಥಿ ಜೀವನದವರು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ಕೋರ್ಟು ಕಾರ್ಯಗಳು ಮುಂದರಿಯಲಿರುವವು. ಬಂಧುಗಳ ವಿಯೋಗವನ್ನು ಹೊಂದಲಿರುವ ಅವಕಾಶವು ಈ ವರ್ಷದ ಮಧ್ಯಭಾಗದಲ್ಲಿ ಉಂಟಾಗಲಿರುತ್ತದೆ. ಡಾಕ್ಟರರು ತುಂಬಾ ಧನವನ್ನು ಸಂಪಾದಿಸಲಿರುವ ಯೋಗದಿಂದ ಕೂಡಿದವರಾಗುತ್ತಾರೆ. ನಾಲ್ಕನೆ ಮನೆಯ ಕುಜನು ಕುಟುಂಬದಲ್ಲಿ ಒಡಕನ್ನುಂಟು ಮಾಡಲು ಶಕ್ತನಾಗಿರುತ್ತಾನೆ. ಸಿಂಹದ ರವಿಚಾರ ಕಾಲದಲ್ಲಿ ಕಷ್ಟನಷ್ಟಗಳು ಬಹಳವಾಗಿ ಉಂಟಾಗಲಿರುತ್ತವೆ. ವಾಸಸ್ಥಾನದ ಬದಲಾವಣೆಯನ್ನು ಮಾಡಲು ಆಸಕ್ತಿಯುಳ್ಳವರಾಗುವಿರಿ. ಸಂತಾನಾಭಿವೃದ್ಧಿಯನ್ನು ಹೊಂದಲಿರುವ ಯೋಗ ಪಂಚಮದ

ಗುರುಚಾರ ಕಾಲದಲ್ಲಿ ಧನಿಷ್ಠಾ ನಕ್ಷತ್ರದವರಿಗಿರುತ್ತದೆ. ಸ್ತ್ರೀಯರೇ, ನಿಮ್ಮ ಗೃಹಜೀವನದಲ್ಲಿ ಈ ವರ್ಷವು ವಿಶೇಷ ಮಹತ ದಿಂದ ಕೂಡಿದುದಾಗಿ ಕಾಣುತ್ತಿರುವುದು. ಮಂಗಳ ಸಮಾರಂಭಗಳು ಬಹಳವಾಗಿ ನಡೆಯುಲಿರುತ್ತವೆ. ತರುಣ-ತರುಣಿಯರಿಗೆ ದಶಮದ ಶನಿಯು ವಿವಾಹಜೀವನಕ್ಕಿರುವ ಸಂಘಟನೆಯನ್ನುಂಟುಮಾಡುತ್ತಾನೆ. ವಕೀಲವೃತ್ತಿಯವರಿಗೆ ಸಪ್ಟಂಬರದ ನಂತರದ ಸಮಯ ಮಹತ್ವದ್ದಾಗಿ ಕಂಡುಬರುತ್ತದೆ. ಪತನಭಯವು ಸಂಭವಿಸದಂತೆ ಜಾಗರೂಕರಾಗಿರಬೇಕು. ರೋಗಿಗಳು ದೊಡ್ಡ ಚಿಕಿತ್ಸೆಯನ್ನು ಹೊಂದಿ, ಗುಣಮುಖರಾಗುತ್ತಾರೆ.

ಲೇಖಕರೇ, ನೀವು ಹೊಸ ಯೋಜನೆಯ ಕರ್ತವ್ಯ ಕಲಾಪಗಳಲ್ಲಿ ಆದಿಭಾಗದಲ್ಲಿ ಮಗ್ನರಾಗಿದ್ದು ಮುಂದೆ ತುಂಬ ಯಶಸ್ವಿಗಳಾಗಿ ಬಾಳಲಿರುವಿರಿ. ರಿಕಾರ್ಡು ಲೆಕ್ಕಪತ್ರಗಳನ್ನು ಜಾಗರೂಕರಾಗಿರಿಸದೆ ಕಷ್ಟಗಳನ್ನು ಅನುಭವಿಸುವ ಪರಿಸ್ಥಿತಿ ದೊಡ್ಡ ದೊಡ್ಡ ವಹಿವಾಟುದಾರರಿಗಿರುವುದು. ನೌಕರರು ಸ್ಥಾನಾಂತರಕ್ಕಾಗಿ ಯತ್ನಯುಕ್ತರಾಗುತ್ತಾರೆ. ಸೇನಾಖಾತೆಯವರು ಬಹಳ ಪ್ರಗತಿಯನ್ನು ಸಾಧಿಸಲಿರುತ್ತಾರೆ. ಯಾಂತ್ರಿಕ ವ್ಯವಸಾಯಗಾರರು ಒಳ್ಳೆಯ ಪ್ರಗತಿಯುಳ್ಳವರಾಗುವರು.

ಕುಂಭ:—

(ಗು, ಗೆ, ಗೊ, ಸ, ಸಿ, ಸು, ಸೆ, ಸೊ)

“ಕಾಲೋ ಜಗದ್ಭಕ್ಷಕಃ” ಎಂಬ ಮಾತನ್ನು ನೀವು ಕೇಳಿರಬಹುದು. ಕಾಲ (ಸಮಯ, ಯಮ) ಜಗತ್ತನ್ನು ನುಂಗುವುದು; ಎಂಬ ಅರಿವು ನಿಮಗುಂಟಾದರೆ ಮಾತ್ರ ಉದ್ಯಮವನ್ನು ಹಿಂದಕ್ಕಿಡದೆ ಸಾಧಿಸಲು ಹವಣಿಸುವನು. ಈ ಹವಣಿಕೆಯ ಕರ್ತವ್ಯದಿಂದಲೇ ಜಗತ್ತಿನಲ್ಲಿ ಮನುಷ್ಯನು ಉತ್ತಮ ಖ್ಯಾತಿಪುರುಷನಾಗಲು ಅರ್ಹನಾಗುತ್ತಿರುವನು. ಕುಟುಂಬಿಯರ ಅಗಲುವಿಕೆಯಿಂದ ಕೂಡಿದವರಾಗಿರುವಿರಿ. ಹಿರಿಯರ ಸುಖಕ್ಕೆ ಚತುರ್ಥದ ಗುರುವೇ ತೊಡಕನ್ನು ಕೊಡುತ್ತಾನೆ. ಗೃಹಿಣಿಯ ಆರೋಗ್ಯಕ್ಕಾಗಿ ಬಹಳವಾಗಿ ಧನವ್ಯಯವನ್ನು ಮಾಡಲಿರುವಿರಿ. ಶತಭಿಷಾನಕ್ಷತ್ರದವರು ಜೀವನದಲ್ಲಿ ನವೀನತೆಗಿರುವ ಸಂಘಟನೆಯಿಂದ ಕೂಡಿ ಮುಂದೆ ಸುಖಸಂಪತ್ತಿನ ಅನುಭವವನ್ನು ಹೊಂದಲಿರುವರು.

ವ್ಯಾಪಾರಿಗಳೇ, ನೀವು ಹಿಂದುಮುಂದು ವಿಚಾರಿಸದೆ ಮಾಡುತ್ತಿರುವ ಕೆಲಸಗಳೇ ನಿಮ್ಮನ್ನು ಕೆಳಕ್ಕೆ ಇಳಿಸುತ್ತವೆ. ಅತ್ಯಾಶೆಯಿಂದ ಕೀಳುನೆಲೆಯನ್ನು ಹೊಂದಲಿರುವ ಸಂಭವವು ಕಂಡುಬರುತ್ತದೆ. ಯಾವ ವಸ್ತುಗಳನ್ನೂ ಹಿಂದುಳಿಸದೆ ವಹಿವಾಟನ್ನು ನಡೆಸುವುದರಿಂದ ನಿಮಗೆ ಪ್ರಗತಿಯಿರುತ್ತದೆ. ಕಿರಿಯರ ಆರೋಗ್ಯಸ್ಥಿತಿಯು ಈ ವರುಷದ ಮಧ್ಯಭಾಗದಲ್ಲಿ ಉತ್ತಮವಾಗಿರುವುದಿಲ್ಲ. ಕರ್ಕ ಸಿಂಹ ಮಾಸಗಳು ತುಂಬ ಜಾಗರೂಕತೆಯನ್ನು ವಹಿಸತಕ್ಕ ತಿಂಗಳುಗಳಾಗಿರುತ್ತವೆ. ವಾತವಿಕಾರ, ಪಿತ್ಥವಿಕಾರ, ಪತನಭಯಗಳು ವೃದ್ಧರಿಗೆ ಅಧಿಕವಾಗಿರುತ್ತವೆ.

ಪೂರ್ವಾಭಾದ್ರಾ ನಕ್ಷತ್ರದವರು ಹೊಸಕೆಲಸಗಳನ್ನು ಸಾಧಿಸಲಿರುವ ಯತ್ನದಿಂದ ಕೂಡಿದವರಾಗಿ ಕಂಡುಬರುವರು. ಆದರಿಂದ ಪ್ರಗತಿಯು ವರ್ಷಾಂತ್ಯದಲ್ಲಿ ಸಂಭವಿಸಲಿರುತ್ತದೆ. ಲೇಖಕರು ಹೊಸಗ್ರಂಥಗಳನ್ನು ತಯಾರಿಸುವರು. ಈ ತಯಾರಿಕೆಯು ವರ್ಷದ ಮಧ್ಯಭಾಗದಲ್ಲಿ ನಡೆಯುಲಿರುವುದು. ಗೃಹಸಂಪತ್ತನ್ನು ಮಹಿಳೆಯರು ಅಧಿಕರಿಸಲಿರುತ್ತಾರೆ. ಪುಣ್ಯಕಾರ್ಯ ಪುಣ್ಯಕ್ಷೇತ್ರಗಳ ಸಂದರ್ಶನವೇ ಮೊದಲಾದ ಉತ್ತಮ ಕರ್ಮಗಳ ಕಡೆಗೆ ವಿಶೇಷ ಗಮನವು ಸ್ತ್ರೀಯರಿಗಿರುತ್ತದೆ. ಏಜಂಟರ ಕೆಲಸದವರಿಗೆ ಉತ್ತಮ ಪ್ರಗತಿಯು ಕಂಡುಬರಲಿದೆ. ಮುದ್ರಣಾಲಯಗಾರರು ತುಂಬಾ ಕೆಲಸಗಳಿಂದ ಕೂಡಿದವರಾಗಿ ಕಾಣುವರು. ಉದ್ಯೋಗಶಾಲೆಯ ಮಾಲಿಕರು ವಸ್ತುಗಳ ಕ್ರಯ-ವಿಕ್ರಯಗಳಲ್ಲಿ ಸ್ಪರ್ಧೆಯನ್ನು ನಡೆಯಿಸಲಿರುವ ಉತ್ಸಾಹಯುಕ್ತರಾಗುವರು. ಬೇಂಕಿನ ಕೆಲಸಗಾರರು ರಿಕಾರ್ಡು ಪತ್ರಗಳ ಕಡೆಗೆ ಅತಿಯಾದ ಗಮನ ಕೊಡಬೇಕಿದೆ. ತಮ್ಮ ಕೆಲಸಗಾರರ ಮೂಲಕ ಕಷ್ಟಪರಿಸ್ಥಿತಿಯುಂಟಾಗುವ ಸಂಭವವು ಈ ವರ್ಷದಲ್ಲಿ ಕಂಡುಬರಲಿರುವುದು.

ಮೀನ:—

(ದಿ, ದು, ದೆ, ದೊ, ಚ, ಚಿ, ಥ, ಝ, ಭ)

ಈ ವರುಷವು ನಿಮ್ಮ ಜೀವನದಲ್ಲಿ ಹೊಸ ಬಗೆಯ ಪರಿಸ್ಥಿತಿ ವಾತಾವರಣಗಳನ್ನು ತಂದುಕೊಡುವ ಕಾಲ. ಅಧಿಕಾರ ಕೆಲಸಗಳಲ್ಲಿ ತುಂಬಾ ಸ್ಥಿತ್ಯಂತರಗಳು ಗುರುಶನಿಗಳ ಸಮಸಪ್ತಕದಿಂದ ಉಂಟಾಗಿ ಜೀವನದಲ್ಲಿ ಅತಿಶಯವಾದ ಭಿನ್ನತೆಗೆ ಕಾರಣವಾಗುವಿರಿ. ರಿಕಾರ್ಡು ಲೆಕ್ಕಪತ್ರಗಳ ವ್ಯವಹಾರಗಳು ಬಹಳವಾಗಿರುತ್ತವೆ. ಹೊಸ ಉದ್ಯಮವನ್ನು ಸಾಧಿಸಲಿರುವ ಯೋಜನಾಕಾರ್ಯವು ವರ್ಷದ ಮಧ್ಯಭಾಗದಲ್ಲಿರುತ್ತದೆ. ಆರ್ಥಿಕಸಂಸ್ಥೆಯ ವಹಿವಾಟಿನವರು ತುಂಬಾ ಕಷ್ಟವನ್ನು ಆದಿಭಾಗದಲ್ಲಿ ಹೊಂದುತ್ತಿರುವರಾದರೂ, ಮಧ್ಯಭಾಗಾನಂತರ ಪ್ರಗತಿಯ ಸಂಪರ್ಕವನ್ನು ಹೊಂದುತ್ತಾರೆ. ಯಶಸ್ಸಿನ ಕೆಲಸವನ್ನು ತರುಣರು ಸಾಧಿಸಲಿರುವರು. ಅಧಿಕಾರಿಗಳಿಗೆ ತಮ್ಮ ಕೆಲಸದಲ್ಲಿ ಅಶ್ರದ್ಧೆಯು ಕಂಡುಬರಲಿದೆ. ನೌಕರರಿಗೆ ತಮ್ಮ ಅಧಿಕಾರೀವರ್ಗದಲ್ಲಿ ವಿರೋಧವನ್ನು ಹೊಂದಲಿರುವ ಸಂಪರ್ಕವಿರುವುದರಿಂದ ಕೆಲಸದ ವಿಷಯದಲ್ಲಿ ಅತಿಜಾಗರೂಕತೆ ಅತ್ಯಗತ್ಯ. ಉಪಾಧ್ಯಾಯ ವೃತ್ತಿಯವರಿಗೆ ಈ ವರುಷ ಆರೋಗ್ಯದೃಷ್ಟಿಯ ಮೂಲಕ ಕೆಡುಕಿನ ನೆಲೆಯೊದಗಲು ಅವಕಾಶವಿದೆ. -ಗೃಹಜೀವನದಲ್ಲಿ ಅಷ್ಟಮದ ಶನಿಯು ತುಂಬಾ

ತೊಡಕನ್ನು ಕೊಡಲಿರುತ್ತಾನೆ. ತರುಣ ತರುಣಿಯರಿಗೆ ವಿವಾಹಜೀವನದ ಸಂಘಟನೆಯಾಗುತ್ತದೆ. ರೇವತಿ ನಕ್ಷತ್ರದವರು ತುಂಬ ಪ್ರಗತಿಯಿಂದ ಕೂಡಿದವರಾಗುತ್ತಾರೆ. ಗೃಹ ಜೀವನದಲ್ಲಿ ಮಾತ್ರ ಅಶಾಂತಿಯಿರುತ್ತದೆ. ಹಿರಿಯರ ಆರೋಗ್ಯವು ಹಾಳಾಗುವಂತಿದೆ. ವಾಸಸ್ಥಾನದ ಬದಲಾವಣೆಯನ್ನು ಮಾಡಲಿರುವ ಯೋಗವು ನಾಲ್ಕನೆ ಮನೆಯ ಗುರುಚಾರದಿಂದುಂಟಾಗುತ್ತದೆ. ಮಕ್ಕಳ ಆರೋಗ್ಯವು ಚೆನ್ನಾಗಿ ಇರುವುದಿಲ್ಲ. ಸುಮಂಗಲೆಯರು ತಮ್ಮ ಪತಿಗಳ ಹಿತದೃಷ್ಟಿಯನ್ನೇ ಅತಿಯಾಗಿ ಕಾಣುತ್ತಿದ್ದು, ಜೀವನದಲ್ಲಿ ಒಳ್ಳೆಯ ವಿಚಾರದಿಂದ ಕೂಡಿದವರಾಗಿ ಅನ್ಯರಿಗೆ ಕಂಡುಬರುವರು. ಕೋರ್ಟು ಕೆಲಸಗಳಲ್ಲಿ ಜಯಲಾಭವು ಮಿಥುನಗುರುಚಾರದಿಂದುಂಟಾಗುವುದು. ಗೃಹ, ಭೂಸಂಪತ್ತಿಗಾಗಿ ಈ ವರ್ಷ ಭೂಮಾಲಿಕರಿಗೆ ಧನವ್ಯಯವು ಬಹಳವಿರುತ್ತದೆ. ಕುಟುಂಬಾಭಿವೃದ್ಧಿಯನ್ನು ಹೊಂದಲಿರುವಿರಿ. ಉಷ್ಣವ್ರಣ, ವಾತವಿಕಾರಗಳು ಮಧ್ಯವಯಸ್ಸು ಮೀರಿದವರಿಗೆ ಉಂಟಾಗಲಿರುತ್ತದೆ. ಉದರಸಂಬಂಧ ದೋಷಗಳೂ ಎಡೆ ಎಡೆ ತೋರಿಬರಲಿವೆ. ಲೇಖಕರಿಗೆ ವರ್ಷಾಂತ್ಯವು ಹಿತಕರ. ಪತ್ರಿಕಾ ಕರ್ತರು ಒಳ್ಳೆಯ ಯಶಸ್ಸನ್ನು ಸಂಪಾದಿಸಲಿರುವರು. ರಾಜಕೀಯದಲ್ಲಿ ಒಳ್ಳೆಯ ಅಭಿರುಚಿ ರೇವತಿನಕ್ಷತ್ರದವರಿಗಿರುತ್ತದೆ. ಕಲಾಗಾರರು ಖ್ಯಾತಿಯನ್ನು ಸಂಪಾದಿಸುವರು. ವ್ಯಾಪಾರಿಗಳಿಗೆ ಈ ವರ್ಷದ ಮಧ್ಯಭಾಗದಿಂದ ಪ್ರಗತಿಯು ಕಂಡುಬರಲಿರುವುದು.

ವಿವಿಧ ವಿಚಾರ

ಈ ವರ್ಷದಲ್ಲಿ ಗುರುವು ಮೂರು ರಾಶಿಗಳನ್ನು ಹೊಗುತ್ತಿರುವನು. ಶನಿಯೂ ಎರಡು ರಾಶಿಗಳ ಸಂಚಾರವನ್ನು ಹಿಂದು ಮುಂದಾಗಿ ಮಾಡುತ್ತಿರುವನು. ಇದರಿಂದ ಧಾನ್ಯಗಳ ಬೆಳೆಯು ಕೆಲವೆಡೆ ಹಾಳಾಗುವುದು. ಕೆಲವೆಡೆ ಚೆನ್ನಾಗುವುದು. ಭಾರತದಲ್ಲಿ ಅಲ್ಲಲ್ಲಿ ಆಹಾರವಸ್ತುಗಳ ಕೊರತೆ, ಜಲಕ್ಷಾಮಭಯ, ಕಂಡುಬರಲಿದೆ. ಭಾರತದ ರಾಜಕೀಯದಲ್ಲಿ ತುಂಬಾ ಕ್ರಾಂತಿಯು ಏಳಲಿದೆ. ಈ ಕ್ರಾಂತಿಯ ಮೂಲಕ ಜನತೆ ತುಂಬಾ ಕಷ್ಟನಷ್ಟವನ್ನು ಅನುಭವಿಸಲಿರುವ ಸಂಭವವಿದೆ. ಬೇರೆ ಬೇರೆ ಪ್ರಾಂತಗಳ ವಿಚಾರದಲ್ಲಿ ಮನಸ್ಸು ಹಲವರಿಗೆ ಹುಟ್ಟಿ, ಅದರಿಂದ ಒಂದು ತರಹದ ಬಿಕ್ಕಟ್ಟು, ಅಶಾಂತಿ, ಜನರಲ್ಲಿ ಉಂಟಾಗಲಿರುತ್ತದೆ. ಮೇಷದ ಕುಜನು ಶನಿಗೆ ಸಮಸಪ್ತಕ ಯೋಗಗೊಂಡು ತೈಲಧಾನ್ಯವಸ್ತು, ಆಹಾರವಸ್ತುಗಳ ಬೆಲೆಯಲ್ಲಿ ತುಂಬಾ ಬದಲಾವಣೆಯುಂಟಾಗಲಿರುತ್ತದೆ. ಬೆಲೆಯ ಏರುವಿಕೆ ಅಕಾಲದಲ್ಲಿ ಉಂಟಾಗಲಿರುತ್ತದೆ. ಬಟ್ಟೆಗೆ ಕ್ರಯ ಕಡಮೆಯಾಗುತ್ತದೆ. ಉಣ್ಣೆ, ಚರ್ಮದ ವಸ್ತುಗಳಿಗೆ ಬೆಲೆ ಏರುವವು. ಕಾಗದ, ಲೇಖನವಸ್ತುಗಳ ಬೆಲೆ ಕೆಳಕ್ಕೆ ಬರುವುದು. ಹಲವಾರು ಉದ್ಯೋಗಸಂಸ್ಥೆಗಳು ಸರಕಾರ ನಿಯಮೋಲ್ಲಂಘನೆಯನ್ನು ಮಾಡಿ ಕಷ್ಟಕ್ಕೊಳಗಾಗಲಿರುತ್ತವೆ. ಗುರುಕುಜಯುತಿಯ ಕಾಲ ಲೋಕದಲ್ಲಿ ಅವಘಡಗಳು ಹೆಚ್ಚುತ್ತವೆ. ಮಹಾಪುರುಷರಿಗೆ ವಿಪತ್ಪರಂಪರೆಗಳು ಬಂದೊದಗುತ್ತವೆ. ವಿದೇಶಗಳ ನೆಲೆಗಿಂತ ಭಾರತದ ನೆಲೆ ಉಚ್ಚವಾಗುತ್ತದೆ. ಭಾರತದ ಮುಂದಾಳುಗಳಿಗೆ ವಿದೇಶದಲ್ಲಿ ತುಂಬಾ ಪೂಜಾಪುರಸ್ಕಾರಗಳು ನಡೆಯಲಿರುವವು. ಭಾರತದ ವಿದ್ಯಾಂಗದಲ್ಲಿ ನವ ಯೋಜನೆಯು ಸಂಭವಿಸಲಿರುತ್ತದೆ. ರಾಷ್ಟ್ರದ ಪುರೋಗತಿಗಿರುವ ವ್ಯವಸಾಯಗಳು ಅಧಿಕ ಭರದಿಂದ ನಡೆಯಲಿರುವವು. ಅಗ್ನಿ-ಜಲಭಯಗಳು ಅಲ್ಲಲ್ಲಿ ಉಂಟಾಗಲಿರುತ್ತವೆ. ವಾಹನಗಳ ಅವಘಡಗಳು ಬಹಳವಾಗಿ ನಡೆಯಲಿವೆ. ತೈಲವಸ್ತುಗಳಿಗೆ ಅಧಿಕ ಬೆಲೆಯುಂಟಾಗುತ್ತದೆ. ಕಾಶ್ಮೀರ ವಿಷಯದಲ್ಲಿ ಭಾರತ ಸರಕಾರವು ಯೋಗ್ಯ ಯೋಜನೆಯನ್ನು ಮಾಡುತ್ತದೆ. ಅದರ ಮೂಲಕ ಅಲ್ಲಿನ ಪ್ರಜೆಗಳು ಭಾರತವನ್ನು ಮೆಚ್ಚಿ ಭಾರತ ಸರಕಾರದ ಅನುಯಾಯಿಗಳಾಗಲಿರುವ ಧೋರಣೆಯು ಕಂಡುಬರುವುದು. ಭಾರತವು ರಾಜ್ಯಾಂಗಧೋರಣೆಯಲ್ಲಿ ಪ್ರಥಮಸ್ಥಾನವನ್ನು ಹೊಂದಲಿರುತ್ತದೆ. ವಿದೇಶದ ಪಕ್ಷಗಾರರು ತಮ್ಮ ಕರ್ತವ್ಯದಿಂದಲೇ ಜನರ ಅನಾದರಕ್ಕೆ ಈಡಾಗಲಿರುವರು.

ನಾರಣಪ್ಪನ ಶೈಲಿ

(ಲೇಖಕಿಯರು: ಶ್ರೀಮತಿ ಎಸ್. ರತ್ನಮ್ಮ, ಎಂ. ಎ., ನಂಜನಗೂಡು)

೧. ರೂಪಕ ಸಾಮ್ರಾಜ್ಯ

"ಕಿವಿ ಕಣ್ಣಾಗುತಿದೆ, ಕಣ್ ಕಿವಿಯಾಗುತಿದೆ." ಕು.ವೆಂ.ಪು.

ಕುಮಾರವ್ಯಾಸನ ದರ್ಶನ ಮಹಾಬೀಜವು ದ್ರೌಪದೀ ಸ್ವಯಂವರ ಸಂದರ್ಭದಲ್ಲಿ ಮೊಳಕೆಯಿಟ್ಟು, ಶಿಶುಪಾಲ ವಧೆಯ ಸಂದರ್ಭದಲ್ಲಿ ಚಿಗುರಿ, ವಸ್ತ್ರಾಪಹರಣ ಸಂದರ್ಭದಲ್ಲಿ ದಿಕ್ಕು ದಿಕ್ಕಿಗೆ ಕೊಂಬೆಗಳನ್ನು ಚಾಚಿ, ಯುದ್ಧ ಪಂಚಕವಲ್ಲಿ ಹೂಗಳನ್ನು ಸೂಸಿ, ಅಭಿಮನ್ಯು, ಸುಪ್ರತೀಕ, ದುಶ್ಶಾಸನ ವಧೆ ಸಂದರ್ಭಗಳಲ್ಲಿ ಫಲಬಿಟ್ಟು, ಕರ್ಣನ ಸೇನಾಧಿಪತ್ಯದಲ್ಲಿ ಮಹಾಮಹೀರುಹವಾಗಿ ವ್ಯೋಮಸ್ಪರ್ಶಿಯಾಗಿ, ಸರ್ಪಬಾಣ ಪ್ರಯೋಗದಲ್ಲಿ ಚಾನ್ನತ್ತಿಯನ್ನಡರಿ ಆ ಮಹಾ ಭವ್ಯತೆಯ ಮಧ್ಯದಲ್ಲಿ ಸಮಸ್ತ ವೈಭವಗಳಿಂದ ತುಂಬಿದ ಪೂರ್ಣಿಮಾ ಚಂದ್ರರಾಜಿತ ಗಗನ ಸೌಂದರ್ಯವನ್ನು ಸೂಸುತ್ತ ತಕ್ಷಣ ವಿಧಿವಶದಿಂದ ಬೀಸಿದ ಬಿರುಗಾಳಿಯಲ್ಲಿ ಕರ್ಣನ ತಲೆ ಕಡಿದು ನೆಲಕ್ಕೆ ಬಿದ್ದ ತಕ್ಷಣ ದರ್ಶನ ಹಿಮಾಚಲ ಪರ್ವತವೂ ಸಾಮಾನ್ಯ ಶೈಲಿಯ ಸಮುದ್ರದಲ್ಲಿ ಮುಳುಗುತ್ತದೆ. ಮಹಾ ಮಹಾರುಹವೂ ಬೇರ್ಗಡಿದುಕೊಂಡು ಧರಣಿಗುರುಳುತ್ತದೆ ಆದರೂ ನೀರಿನಲ್ಲಿ ಮುಳುಗುವ ಪರ್ವತದ ನಿಧಾನ ಅದೃಶ್ಯತೆಯಂತೆ, ಬೆಳಗಿನ ಜಾವದಲ್ಲಿ ಬುಡ ಕಡಿದುರುಳಿದ ಹೂತ ಅರಳೀಮರ ಸೂರ್ಯನ ದಗೆಗೆ ನಿಧಾನವಾಗಿ ಬಾಡಿ ಸಾಯಂಕಾಲದವರೆಗೂ ತನ್ನ ಹಸಿರು ಬಣ್ಣವನ್ನುಳಿಸಿಕೊಂಡು ಸಂಜೆಯ ತಂಗಾಳಿಯಲ್ಲಿ ಮತ್ತೊಮ್ಮೆ ಪಲ್ಲೈಸಿ ಪೂರ್ಣವಾಗಿ ಬಾಡುವಂತೆ, ಕುಮಾರವ್ಯಾಸವಾಣಿಯು ಎಷ್ಟು ಕುಗ್ಗಿದರೂ ಗದಾಪರ್ವದ ವರೆಗೆ ಹರಿದು ಅಂತ್ಯದಲ್ಲಿ ವೈಭವಪೂರ್ಣ ಶಾಂತ ಸರೋವರವನ್ನು ಸೃಷ್ಟಿಸಿ ಅದೃಶ್ಯವಾಗುತ್ತ ಲೀನವಾಗುತ್ತದೆ. ಜಗದ್ಮಹಾಕವಿ ವ್ಯಾಸ, ನಾರಣಪ್ಪನನ್ನು ಮಗನೆಂದೊಲಿದು ಮರಿವಿತ್ತು ಮೂಲಗ್ರಂಥವನ್ನು ಕೈಗಿತ್ತು ಆಶೀರ್ವದಿಸಿದ್ದಾನೆ. ಆ ಮಹಾಕವಿ ನೀಡಿದ ಸಮಸ್ತ ಫಲಗಳನ್ನು ಕುಮಾರವ್ಯಾಸ ಆಸ್ವಾದಿಸಿ ತನ್ನ ಕಾವ್ಯ ತೋಟದಲ್ಲಿ ಬೆಳೆದ ರಸದ ಹಣ್ಣುಗಳೊಂದಿಗೆ ಬೆರಸಿ ಸಹೃದಯರಿಗೆ "ಭಾರತ ಕಥಾ ಮಂಜರಿ"ಯನ್ನು ನೀಡಿದ್ದಾನೆ. ವೀರನಾರಾಯಣನ ಪ್ರತಿಭಾಪ್ರದರ್ಶನದ ಪ್ರಣಾಳಿಕೆಯಾದ ಕುಮಾರವ್ಯಾಸನ ಸಹಜ ಸ್ವಭಾವೋಕ್ತಿ ಸಹೃದಯನ ದೃಷ್ಟಿಯಲ್ಲಿ ಅಲಂಕಾರೋಕ್ತಿಯಾಗಿ. ಕುಮಾರವ್ಯಾಸನ ನಡಗೆಯ ಮುಖ್ಯ ಲಕ್ಷಣವೆಂದರೆ, ಪರಂಪರೆಯಾಗಿ ಮುನ್ನುಗ್ಗಿ ಉಕ್ಕಿ ಹರಿಯುವ ಅಪೃಥಕ್ ಯತ್ನದಿಂದ ಸಾಧಿತವಾದ ರೂಪಕ ಹನಿಗಳ ನಿರಂತರ ಮಳೆ. ನಾರಣಪ್ಪನ ಅಂತರ್ಯ ಸೌಂದರ್ಯಾನುಭವದರ್ಶನವನ್ನು ಸಾಲಂಕೃತವಾಗಿ ಈ ರೂಪಕಗಳು ಪ್ರತಿಮಿಸುತ್ತವೆ.

ಶೌನಕಾದಿ ಮಹಾಮುನಿಗಳು ಮಾಡಿದ "ಸೋಮಪಾನಾದಿ ಪುಣ್ಯ ತರುಗಳಿಗೆ, ಈ ಮಹಾಭಾರತ ಕಥಾಮೃತ ರಾಮಣಾಯಕ ಫಲವಲಾ."

ಆ ಭಾರತ ಕಥಾ ಸಂದರ್ಭವನ್ನು ವಿವರಿಸಲು ಪರಂಪರ ರೂಪಕಗಳ ಮಂಜರಿಗಳು:

ಉದಾ:

ಭೂಲತೆಯ ಸುರಚಾಪ ಮರುಕೇ ।
ಶಾಲಿಗಳ ಕಾರ್ಮುಗಿಲ ಪಾಂಗದ ।
ಸಾಲ ಕುಡಿ ಮಿಂಚುಗಳ ನೂಪುರ
ರವದಿ ಮುಳಗುಗಳ ॥

ಆ ಲತಾಂಗಿಯ ಗಮನವೇ ಮಳೆ ।
ಗಾಲದಂತಿರೆ ಧಾತ್ರ ರಾಷ್ಟ್ರಕು ।
ಲಾಳಿ ನಿಲುವುದೆ ಪವನಜನ
ಸಂಪ್ರತಿಯ ಸೇರುವೆಗೆ ॥

ಉದಾ:

"ಸಮಿಧೆಗಳು ಸಾಮ್ರಾಜ್ಯರಯ್ಯನ
ರಮಣಿಯಾಹುತಿ......ಯಮಸೂನು"
(ಆದಿ ಪರ್ವ)

"ಹೊತ್ತಿತವೆ ಹೇರಾಳ ತಮದಲಿ
......ಶಿಶುಪಾಲವೀರನ ವಚನಮಯ ಖಡುಗ" ॥
(ಸಭಾಪರ್ವ)

"ರೋಷವೆರಡೆಲೆಯಾಯ್ತು......
......ರೂಪು ಸುಮನೋಹರ ಭಯಂ
ಕರವಾಯ್ತು ಸುರಪತಿಯ"
(ಅರಣ್ಯ ಪರ್ವ)

"ತರುಳ ಹೂಗೊಂಚಲಿನ......ಅಭಿ
ಮನ್ಯುವಿನ ಖಡ್ಗ ಚೈತ್ರದಲಿ."
(ದ್ರೋಣ ಪರ್ವ)

ಭಾವೋನ್ನತಿಯನ್ನು ಪ್ರದರ್ಶಿಸಲು ಕುಮಾರವ್ಯಾಸನ ವಾಣಿ ಕರ್ಣಾರ್ಜುನರ ಕಾಳಗವನ್ನು ನೋಡಲು ಜಗತ್ತು ಇಬ್ಬಗೆಯಾಗಿ ಪ್ರೇಕ್ಷಕವೃಂದವಾಯಿತೆಂಬ ಸಂದರ್ಭಚಿತ್ರನಿರೂಪಣೆಯಲ್ಲಿ, ಅಂಗಡಿ ಪ್ರತಿ ಅಚ್ಚುಮಾಡಿರುವ ಬಾಹ್ಯ ನ್ಯಾಸವನ್ನು ಗಮನಿಸಿ ಷಟ್ಪದಿಯ ಅಳತೆ ಚೌಕಟ್ಟುಗಳನ್ನು ಮರೆತಾಗ ಮಹೋಪಮಾ ಛಾಯೆ ಸುಳಿಯುತ್ತದೆ. ಅದೊಂದು ರೂಪಕ ಸಾಮ್ರಾಜ್ಯದ ರಾಜಧಾನಿ. ಕೆಲವೊಮ್ಮೆ ಷಟ್ಪದಿಯ ಆರು ಸಾಲುಗಳಿಗೇ ಪರಂಪರ ರೂಪಕ ಜಾಲವು ಮುಗಿಯದೆ ಮುಂದಿನ ಪದ್ಯಗಳಿಗೂ ಹರಿಯುತ್ತದೆ. ಉದಾ: ಸುಪ್ರತೀಕ ಗಜದ ಯುದ್ಧ ನೈಪುಣ್ಯತೆ.

ಪ್ರಕೃತಿ ವ್ಯಾಪಾರಗಳ ಹಿಂದೆ ಮಾನುಷ್ಯ ವ್ಯಾಪಾರವನ್ನು ಧ್ವನಿಸುವ, ಮನುಷ್ಯ ಭಾವ ಪ್ರಕಾಶಕ್ಕೆ ಪ್ರಕೃತಿಯನ್ನು ತಾಳಿ ಹೊಂದಿಸುವ ಚಾಕಚಕ್ಯತೆ. ಉದಾ: "ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ." "ತರಣಿ ತೆಗೆದನು ತಾವರೆಯ ಬಾಗಿಲಿನ ಬೀಯಗವ"—"ಪಡುವಣ ಶೈಲ ವಿಪುಲಸ್ತಂಭ ದೀಪಿಕೆಯಂತೆ ರವಿ ಮೆರೆದ (ಭೀಷ್ಮಾವಸಾನ ಕಾಲದಲ್ಲಿ). ಪೂರ್ವ ಶೈಲದ ತರಣಿಯಂತಿರೆ ಕರ್ಣ ನೆಸೆದನು ಕ್ಷಾತ್ರ ತೇಜದಲಿ." ಜರಾಸಂಧನ ಪರಾಕ್ರಮ "ಉರು ಪರಾಕ್ರಮ ತೇಜ ಪಡುವಣ ತರಣಿಯಾದುದು."

ಶಿಶುಪಾಲ ವಧಾ ಸಂದರ್ಭವೊಂದು ರೂಪಕ ರತ್ನಗಳ ಗಣಿ. "ಯಜ್ಞದಧಿಪತಿ........ಎಂದನಾ ಭೀಷ್ಮ". "ಇನ್ನು ನೀನು ಸುಲೋಚನಾಂಧಕ"—"ತುಡುಕಿದನು ಚಕ್ರವನು ತ್ರೈಮೂರ್ತಿ ತ್ರೈಲೋಕ ತ್ರಯಾತ್ಮಕ ಚಕ್ರವನು."

"ಅಂತರ್ಭಾವವಹ್ನಿಯನೇಕೆ ಬೆದಕುವಿರಿ?" ಅವಮಾನಿತ ದುರ್ಯೋಧನ ಶಕುನಿಯೆದುರಿಗೆ ತನ್ನ ಬಳಕೋಟೆಯನ್ನು ತೋಡಿಕೊಳ್ಳುವ ಧಾಟಿ. "ಮಗಡಿಮಡ್ಡಿಯ ಹರುಷಸಿರಿ ಹೊಕ್ಕಳು ಮುಖಾಂಬುಜವ."

ಉದ್ಯೋಗ ಪರ್ವದಲ್ಲಿ "ಆಸುರದ ಸಹಾಯವು ಕತ್ತಲೆಯ ಬೀಡು ಗೂಬೆಗಳಿಗದಪಹಾಸವೇ ದಿಟ." ಆ ಸಂದರ್ಭದಲ್ಲಿ ಬಲನ ಮಾತನ್ನು ಸಾತ್ಯಕಿಯು ತಿರುಗಿಸಿ ಹೊಡೆದಿರುವ ಪೆಟ್ಟಿನ ರಭಸ ಹೇಗಿದೆ ನೋಡಿ: "ಅರಿನೃಪರ ನೆತ್ತಿಯಲಿ ಸಬಳವ ಕೋದು" ವೀರ ಪುಂಗವನ ರಣರಸಿಕತೆಗೆ ತಡೆಯುಂಟೆ? ಇಂತಹ ವೀರರ ಚದುರಂಗದಾಟದಿಂದಲೇ ರಣಕ್ಕೆ ಶುಚಿತ್ವ ಬಂದಿರುವುದು.

ಶ್ರೀಕೃಷ್ಣ ಬಂದನೆಂದರೆ ಕಾವ್ಯವಿಸ್ತಾರಭಯವನ್ನು ಕೂಡ ಮರೆತು ಹಾಡುವನು. ಶ್ರೀಕೃಷ್ಣನೇ ಸರ್ವಲೋಕ ರಕ್ಷಕ. ಇನ್ನು ಅವನ ನಿವಾಸ ದ್ವಾರ "ಪಾತಕದ ಹೆಡತಲೆಯ ದಡಿ, ಮುಕುತಿಯಲ್ಲಿಯೆ ಕರತಳಾಮಳಕ." ಅವನ ಸಾಗರ ವರ್ಣನೆಯಾದರೂ ಅವನೊಬ್ಬನಿಗೆ ಅಜ್ಯೋತ್ತಿದ ಮೊಸಲು: "ಉಬ್ಬು ಗವಳದ ಕೊಂಡವೋಲ್ ಮೆರೆದ.

ಅರ್ಜುನನನ್ನು ಕಂಡಾಗ ಕೃಷ್ಣನ "ನಗೆಯ ಮೊಸೆ ಮಿನುಗಿತಂತೆ." ಕೃಷ್ಣನನ್ನು ಯಾರಾದರೂ ನಿಂದಿಸಿದರೆ, ಅವನನ್ನು ಕಮ್ಮಿಯೆಂದು ಭಾವಿಸಿದರೆ ಅಖಂಡ ಷಟ್ಪದಿಯನ್ನೆಳೆದು ಅಮೋಘವಾದ ರೂಪಕ ಮಾಲೆಯಿಂದ ಪ್ರತಿಕಕ್ಷಿಯನ್ನು ಮೂಗನನ್ನಾಗಿಸುವ ಗಾರುಡಿಗ ನಮ್ಮ ಕವಿ.

"ಧರಣೀ ನಾರಿ ಯಾರೊಡನೊಕ್ಕತನವಿದ್ದಾರ ಮೆಚ್ಚಿದಳು? ಧರಣಿ ನಿನ್ನಯ ರಾಣಿವಾಸವು. ಬಂಧುಗಳ ದರ್ಶನ ಫಲವಲಾ ಸಂಸಾರತರುವಿಂಗೆ. ಪಾದ ತೇಜೋವರ್ಧೆಯ ಮಾಡಿ" ಸಂದರ್ಭಕ್ಕುಚಿತವಾದ ಪರ್ಯಾಯೋಕ್ತಿಯನ್ನು ತಂದಿದ್ದಾನೆ.

"ಕದಡಿತಾಯಾಸ್ಥಾನ ಕಲ್ಪಾಂತದ ಮಹಾಸಿಡಿಲಂತೆ. ಹಾಲಾಹಲ ಸುಧಾರಸವುಕ್ಕಿ ಹರಿದಾಯ್ತು ಸಿಡಿಲಾಟೋಪನಯವಾಯ್ತು, ಕೃತಿ ರಸಾಯನ" ಭೀಮ ಸಂಧಿಗೆ ಕೊರಳು ಬಾಗಿಸಿದಾಗ ನಡೆದ ವಿಪ್ಲವವಿದು!

ಕುಮಾರವ್ಯಾಸ ಯೋಗಿ. ಸ್ತ್ರೀಯನ್ನು ಆದಿಶಕ್ತಿಯೆಂದು ಭಾವಿಸಿ ಅವಳಲ್ಲಿ ಮಾತೃತ್ವವನ್ನು ಮಾತ್ರ ಕಂಡ ಆಜನ್ಮ ಬ್ರಹ್ಮಚಾರಿ. ಪಂಪರನ್ನರ ಓಲಗದ ಗಣಿಕೆಯ ದೇಹವರ್ಣನೆಗೂ, ಕುಮಾರವ್ಯಾಸ ಯೋಗಿಯ ಭಾವವರ್ಣನೆಗೂ ಎಲ್ಲಿಯ ಹೋಲಿಕೆ? ತರುಣಿಯರು ಪರಿಮಳದ ಜಂಗಮ ಭರಣಿಯರು. ದ್ರೌಪದಿಯ ಚೆಲುವಿನ ಅರಣ್ಯದಲ್ಲಿ ಸಖಿಯರ ದೃಷ್ಟಿ ದಾರಿ ತಪ್ಪಿದುವಂತೆ.

ವರಕವಿ ಕುಮಾರವ್ಯಾಸನ ಶೈಲಿಯೆಂದರೆ ರೂಪಕ ಸಂಪನ್ನತೆ, ಅರಿತು ಅರಸಿದರೆ ಮಹೋಪಮೆಯ ಮಹಾವೈಶಾಲ್ಯದಿಂದ ತುಂಬಿ ತುಳುಕುವ ಭಾವಸಂಪನ್ನತೆ.

೨. ರಾಜಷಟ್ಪದಿ


ಮೂರು ನಾಲ್ಕು ಮಾತ್ರಾಗಣಗಳಿಂದ ನಿರ್ವಹಿಸಲ್ಪಡುವ ಭಾಮಿನೀ ಷಟ್ಪದಿಯಲ್ಲಿ ಮಹಾ ಛಂದಸ್ಸಿನ ವಿನ್ಯಾಸವನ್ನು ಸಾಧಿಸಿದ ಮಹಾಕವಿ ನಾರಣಪ್ಪ. ನುಡಿತಾಯಿ ಪದವಿಟ್ಟಳಿಪದಗ್ಗಳಿಕೆಗೆ ವಶಳಾಗಿ ನಾದಲೋಲ ಕುಮಾರ ವ್ಯಾಸ ನುಡಿದಂತೆ ಮಿಡಿಯುತ್ತಾಳೆ. ನಾರಣಪ್ಪನ ಪದ್ಯಗಳನ್ನೇನೋ ಮೂರು ನಾಲ್ಕು ಮಾತ್ರೆಗಳ ಅಳತೆಕೋಲಿನಿಂದ ಅಳೆದು ಶುದ್ಧಗಣಿತದಿಂದ ಲೆಕ್ಕಿಸಬಹುದು. ಇನ್ನುಳಿದ ಕವಿಗಳಿಂದ ಭಾಮಿನೀ ಷಟ್ಪದಿಯಲ್ಲಿ ರಚಿತವಾದ ಪದ್ಯಗಳಿಗೂ ಕುಮಾರವ್ಯಾಸನ ಪದ್ಯಗಳಿಗೂ ಈ ಲೆಕ್ಕಿಗರ ದೃಷ್ಟಿಯಲ್ಲಿ ಹೆಚ್ಚು ಅಂತರವಿಲ್ಲ. ಆದರೆ ಆಂತರ್ಯ ಭಾವಧ್ವನಿಯನ್ನು ಮಿಡಿಯುವ ನಾದಲೋಲತೆ ತರಂಗವಿನ್ಯಾಸಗಳಿಂದ, ಪ್ರಾಸ ನಿರ್ವಹಣೆಯ ಕುಶಲತೆಯಿಂದ ಅಂಶಾತ್ಮಕವಾಗಿ ಪದಗಳನ್ನು ಮಿಡಿಯುವ ಪಾಂಡಿತ್ಯದಿಂದ ಒಟ್ಟಿನಲ್ಲಿ ವೀರ ನಾರಾಯಣನ ಕೃಪಾ ಪ್ರತಿಭಾಪೂರ್ಣನಾಗಿ ಕುಮಾರ

ವ್ಯಾಸ ಬರೆದ ಪದ್ಯಗಳ ಭಾವ ಗುಂಪನ ಸಹೃದಯಹೃದಯ ನಿವೇದಿತವಾದುದು. ಕುಮಾರವ್ಯಾಸನ ದೃಷ್ಟಿಯಲ್ಲಿ ಭಾಮಿನೀ ಷಟ್ಪದಿಯ ಓಟ ಮೂರು ನಾಲ್ಕು ಮಾತ್ರೆಗಳ ನಡಿಗೆಯಿಂದಿಲ್ಲ ಏಳು ಮಾತ್ರೆಯ ಒಟ್ಟು ಓಟ. ಹಾಗೂ ಭಾವ ಉದಾತ್ತವಾದಂತೆಲ್ಲ ಏಳು ಹದಿನಾಲ್ಕು ಇಪ್ಪತ್ತಮೂರು ಮಾತ್ರೆಗಳ ಅಖಂಡನಾದಗುಂಪನದ ಬಾನಬಂಡಿಯ ಚಲನೆ. ಮೂರು ನಾಲ್ಕರ ಗಣವಿನ್ಯಾಸವನ್ನು ಏಳು ಮಾತ್ರೆಗಳ ಒಟ್ಟು ಗಣವೆಂದು ಭಾವಿಸಿ ಅನೇಕ ವೈವಿಧ್ಯಗಳನ್ನು ಸಾಧಿಸುತ್ತಾನೆ. ನಾರಣಪ್ಪನದು ಸ್ವಾಭಾವಿಕವಾಗಿ ಸರಳ ಶೈಲಿ. ಆದರೆ ವಿಭೂತಿಮತ್ತಾದ ಅಂತರ್ಯಶಕ್ತಿಯನ್ನಭಿವ್ಯಕ್ತಗೊಳಿಸುವ ಭಾಮಿನೀ ರೀತಿಯಲ್ಲಿ, ಸ್ವಛಂದಯತಿ ನಿರ್ವಹಣೆಯಲ್ಲಿ ಅರ್ಥವತ್ತಾಗಿ ಸಾಧಿಸಿದ ಪ್ರಾಸ ವೈವಿಧ್ಯತೆಯಿಂದ ಸರಳತೆಯ ಹಿಂದೆಯೂ ಸರ್ವತ್ರ ಮಹತ್ತು ಗೋಚರಿಸುತ್ತದೆ. ಕುಮಾರವ್ಯಾಸನ ಮಹಾಶಕ್ತಿಗನುಗುಣವಾಗಿ ಮಹಾಶೈಲಿ—ಅದಕ್ಕೆ ತಕ್ಕಂತೆ ಮಹಾ ಛಂದಸ್ಸಿನ ಓಟವನ್ನು ಕೈಗೊಂಡಿದೆ.

೧. ಶ್ರೀ ವ | ನಿ ತೆ ಯ ರ | ಸ ನೆ ಪ | ವ ಲ ರಾ
೨. ಜೀ ವ ಪೀ ಠ ನ ಪಿ ತ ನೆ ಜ ಗ ಕ ತಿ
೩. ಪಾ ವ ನ ನೆ ಸ ನ ಕಾ ದಿ ಸ ಜ್ಜ ನ ನಿ ಕ ರ
ದಾತಾರ ||
೪. ರಾ ವ ಣಾ ಸು ರ ಮ ಥ ನ ಶ್ರ ವ ಣ ಸು
೫. ಧಾ ವಿ ನೂ ತ ನ ಕ ಥ ನ ಕಾ ರ ಣ
೬. ಕಾ ವು ದಾ ನ ತ ಜ ನ ವ ಗ ದು ಗಿ ನ
ವೀ ರ ನಾ ರ ಯ ಣ ||

ಮೊದಲನೆ ಪಾದವನ್ನು ಅಂಶಾತ್ಮಕವಾಗಿ ಪದಗಳ ಅಖಂಡತೆಯನ್ನು ಗಮನಿಸಿ ಶುದ್ಧತಾರ್ಕಿಕವಿಧಾನದಲ್ಲಿ ಒಡೆಯಬಹುದು. ಕುಮಾರವ್ಯಾಸನ ದೃಷ್ಟಿಯನ್ನು ಗಮನಿಸಿದಲ್ಲಿ, ಎರಡು, ಮೂರು, ನಾಲ್ಕು, ಎರಡು ಮಾತ್ರೆಗಳಾಗಿ ವಿಂಗಡಿಸಿದ್ದಾನಲ್ಲವೇ? ಎರಡನೇ ಸಾಲಿನಲ್ಲೇನೋ ಮೂರು ನಾಲ್ಕು ಮಾತ್ರೆಗಳ ಲೆಕ್ಕಾಚಾರದ ನಡಿಗೆ. ಆದರೆ ಮೊದಲ ಮೂರು ಮಾತ್ರೆಯ ಗಣ ಆದಿಗುರು ಮತ್ತು ಒಂದು ಲಘುವಿನಿಂದ ನಿರ್ವಹಿಸಲ್ಪಟ್ಟಿದ್ದರೆ ದ್ವಿತೀಯಾರ್ಧದ ಮೊದಲಮೂರು ಮಾತ್ರೆಯ ಗಣ ಸರ್ವಲಘುಗಳ ಗಣ. ಆದಿ ಅರ್ಧದ ನಾಲ್ಕು ಮಾತ್ರೆ ಗಣ ಆದಿಗುರು ಮತ್ತು ಮುಂದೆ ಎರಡು ಲಘುಗಳಿಂದ ಆಗಿದ್ದಲ್ಲಿ ದ್ವಿತೀಯಾರ್ಧದಲ್ಲಿ ಸರ್ವಲಘುಗಳ ಗಣ. ಈ ವಿನ್ಯಾಸದಿಂದಲೇ ವೈಚಿತ್ರ್ಯವನ್ನು ತಂದು ಕವಿ ಸರಳಶೈಲಿಯಲ್ಲಿ ಮಹಧ್ವನಿಯನ್ನು ಮಿಡಿಯುತ್ತಾನೆ. ಮೂರನೇ ಸಾಲಿನಲ್ಲ ಐದು ಮಾತ್ರೆಗಣ ಗಣಗಳ ಓಟ. ಆದರೂ ಒಮ್ಮೆ ಉಪಯೋಗಿಸಿದ ಗಣವನ್ನು ಪುನರಾವರ್ತನೆಗೊಳಿಸಿಲ್ಲ. ನಾಲ್ಕನೆಯ ಸಾಲಿನಲ್ಲಿ ಏಳು ಮಾತ್ರೆಯ ಅಖಂಡ ಗಣ. —UU—UUU. ಗುರು ಲಘುಗುರು ಲಘುಗಳಿಂದ ನಿರ್ವಹಿತವಾದ ಈ ಗಣಗಳ ನಾದ ಗಾಂಭೀರ್ಯವನ್ನು ಮಾತ್ರ ಗಮನಿಸಿ ಕೇಳುತಿದ್ದಂತೆಯೇ ಮನಸ್ಸು ಮಹಾಕಾವ್ಯವನ್ನೋದುವಾಗಿನ ರಸಾನುಭವವನ್ನು ಪಡೆಯುವುದು. ಮ ಥ ನ— ಅಂತ್ಯಯತಿಯಿಲ್ಲದಿದ್ದಲ್ಲಿ ಶುದ್ಧಗಣಿತದ ಅಳತೆಯ ಪ್ರಕಾರ ಮ ಥ ನ ಶ್ರ ವ ಣ ಎಂದು ಗುರುವಾಗಿ ಉಚ್ಚರಿಸಬೇಕಾಗಿತ್ತು. ಆದರೆ ನಾರಣಪ್ಪ ರಸಗಣಿತಜ್ಞ; ಭಾಷಾವಿಜ್ಞಾನಿ. ಪದಗಳ ಪರಸ್ಪರ ಮೈತ್ರಿ ವೈಷಮ್ಯಗಳನ್ನು ಗಮನಿಸಿ ಮಥನ ಎಂದು ಪೂರ್ಣಯತಿಯನ್ನು ಸ್ಥಾಪಿಸಿ ಶ್ರವಣಸು....... ಎಂದು ಹೊಸ ಭಾವವನ್ನು ಹೊರ ಚೆಲ್ಲುವ ಹೊಸ ಗಣವನ್ನಾಗಿ ಆರಂಭಿಸಿದ್ದಾನೆ. ಸ್ವರದ ಹಿಂದಿನ ವ್ಯಂಜನಗಳೆರಡಾದರೂ, ಅವುಗಳು ಒಂದು ಗುರುವಿನ ನಾದವನ್ನು ಹೊರಸೂಸಲಾರವು. ಅದಕ್ಕಾಗಿ ಶ್ರ ವ ಣ ಸು— ಲಘುವೆಂದೇ ಎಣಿಸಲ್ಪಟ್ಟಿದೆ. ಐದು ಮತ್ತು ಆರನೇ ಸಾಲುಗಳಲ್ಲಿ ಏಳು ಮಾತ್ರೆಯ ಗಣಗಳ ಓಟ

ಮಂಗಳ ಶ್ಲೋಕವೊಂದು ಪದ್ಯದಲ್ಲಿಯೇ ಅದೆಷ್ಟು ವೈವಿಧ್ಯ! ಭಾಷೆಯ ಮೇಲಿನ ಒಡೆತನ! ಅಪ್ರಯಾಸದಿಂದ ತಾನಾಗಿ ಮೂಡಿ ಮುಳುಗುವ ವಿವಿಧ ಅನುಪ್ರಾಸಗಳ ವೈಚಿತ್ರ್ಯ! ಸ್ವಚ್ಛಂದ ಯತಿಯ ಅರ್ಥವತ್ತಾದ ನಿಲುಗಡೆಗಳು! ಒಟ್ಟಿನಲ್ಲಿ ಕುಮಾರವ್ಯಾಸನ ಶೈಲಿಗೆ ಇದೊಂದು ಸಾಮಾನ್ಯ ನಿದರ್ಶನ.



ನರಾಹುತಿ ಪಡೆಯುವ ಭಯಂಕರ ಮೊಸಳೆಗಳು

ಹಿಂದೂದೇಶದಲ್ಲಿನ ಮೊಸಳೆಗಳು ಆಫ್ರಿಕದ ಮೊಸಳೆಗಳಿಗಿಂತ ಎಷ್ಟೋ ದೊಡ್ಡದಿವೆ. ಈ ಚಿತ್ರದಲ್ಲಿ ತೋರಿಸಿರುವ ಮೊಸಳೆಯು ಗಂಗಾ ನದಿಯಲ್ಲಿ ಕೊಲ್ಲಲ್ಪಟ್ಟಿತು. ಕೊಲ್ಲುವ ಮೊದಲು ಈ ಮೊಸಳೆ, ಇಬ್ಬರು ಬಾಲಕರನ್ನು ನುಂಗಿತ್ತು. ಹದಿನಾರು ಅಡಿಗಳಿಗಿಂತ ಉದ್ದವಿತ್ತು. ಆಫ್ರಿಕದಲ್ಲಿ ವರ್ಷಕ್ಕೆ ನೂರಾರು ಜನರು ಮೊಸಳೆಗಳ ಬಾಯಿಗೆ ತುತ್ತಾಗುತ್ತಾರೆ.

'ಮೊಸಳೆ ಬಂತೋ ಮೊಸಳೆ' ಎಂಬ 'ಮಡಿವಾಳನೂ ಮೊಸಳೆಯೂ' ಕಥೆಗೆ ಸಂಬಂಧಪಟ್ಟ ಮಾತು ನಮ್ಮಲ್ಲಿ ಎಲ್ಲರೂ ಬಲ್ಲರು. ನೆಲ, ಜಲ ಹೀಗೆ ಎರಡೂ ಕಡೆಗಳಲ್ಲಿ ಒಮ್ಮೆಲೇ ಜೀವಿಸುವ ಪ್ರಾಣಿಗಳಲ್ಲಿ ಮೊಸಳೆಯು ಒಂದು. ನೆಲದಲ್ಲಿ ಇರುವಾಗ ಇದ್ದುದಕ್ಕಿಂತ ನೀರಿನಲಿ ಮೊಸಳೆಗೆ ಬಲ ಹೆಚ್ಚು. ನೀರಿನೊಳಗಿದ್ದರೆ ಒಂದು ಬಲಿಷ್ಠ ಆನೆಯನ್ನೂ ಅದು ಸೋಲಿಸಬಲ್ಲುದು ಎಂಬ 'ಗಜೇಂದ್ರ ಮೋಕ್ಷದ' ಕಥೆ ಪುರಾಣ ಪ್ರಸಿದ್ಧವಾಗಿದೆ.

ಅತಿ ಉಷ್ಣದ ಆಫ್ರಿಕದಲ್ಲಿ ವರ್ಷಂಪ್ರತಿ ನೂರಾರು ಮಂದಿ ಮೂಲನಿವಾಸಿಗಳು ಮೊಸಳೆಗಳಿಗೆ ಆಹುತಿಯಾಗುತ್ತಿದ್ದಾರೆ. ಬಾಲವನ್ನು ಮಡಚಿ ದಡದಲ್ಲಿ ನಿಂತವನ ಕಾಲಿಗೆ ಮೊಸಳೆ ಸುರುಳಿಹಾಕಿತೆಂದರೆ, ಮತ್ತೊಂದು ಗಳಿಗೆಯಲ್ಲಿ ಆತ ನೀರಿನಲ್ಲಿ ಮೊಸಳೆಗಳ ದವಡೆಗಳ ನಡುವೆ ಇರುವನೆಂದೇ ಲೆಕ್ಕ. ಆಫ್ರಿಕದಲ್ಲಿ ಬೇರೆ ಬೇರೆ ನದಿಗಳು ಹರಿಯುತ್ತಿರುವಷ್ಟು ಕಾಲ ಈ ದುರಂತ ಇದ್ದೇ ಇರುವುದು. ನೀರುಕುದುರೆಯಂತೆ ಮೊಸಳೆಗಳ ವಂಶ ಬೇಗನೆ ಅಳಿದುಹೋಗುವುದೆಂದಿಲ್ಲ. ಪ್ರತಿಯೊಂದು ಮೊಸಳೆ ಒಂದು ಶತಮಾನಕ್ಕಿಂತ ಹೆಚ್ಚು ಬದುಕುತ್ತದೆ. ಅದರ ಹಸಿವೆಯೂ ಭಯಂಕರ.

ಆಫ್ರಿಕದ ನದಿಗಳ ಮೇಲೆ ಸೇತುವೆಗಳನ್ನು ಕಟ್ಟುವಾಗ ಎದುರಿಸಬೇಕಾಗುವ ನಾಲ್ಕು ಅಪಾಯಗಳೆಂದರೆ, "ಸಿಂಹಗಳು, ನೆರೆ, ಜ್ವರ ಮತ್ತು ಮೊಸಳೆಗಳು."

ಆಫ್ರಿಕದ ಮೂಲನಿವಾಸಿಗಳು ನೂರುಗಟ್ಟಲೆಯಲ್ಲಿ ಮೊಸಳೆಗಳ ಬಾಯಿಗೆ ಆಹುತಿಯಾಗುತ್ತಿದ್ದರೂ, ಆಫ್ರಿಕನರಿಗೆ ಮೊಸಳೆಗಳ ಕುರಿತು ವಿಶೇಷ ಅಂಜಿಕೆ ಇರುವುದಿಲ್ಲ. ಹಿಂದಿನ ದಿನ ಮೊಸಳೆಯ ಬಾಯಿಗೆ ಒಬ್ಬನು ಆಹುತಿಯಾದ ಸ್ಥಳದಲ್ಲಿಯೇ ಮರುದಿನ ಮತ್ತೊಬ್ಬನು ಮೀಯುವುದನ್ನು ಕಾಣಬಹುದು. ಅಂಜಿಕೆ, ಅಳುಕು ಇವೊಂದನ್ನೂ ಪ್ರದರ್ಶಿಸದೆ ನಿಶ್ಚಿಂತನಾಗಿ ಆನಂದದಿಂದ ಆತನು ಸ್ನಾನಮಾಡಿಕೊಂಡಿರುತ್ತಾನೆ.

ಕೆಲವು ಮಂದಿ ಮೂಲನಿವಾಸಿಗಳು ಮೊಸಳೆಗಳ ಮರಿಗಳನ್ನು ಬೆಕ್ಕಿನ ಮರಿಗಳಂತೆ ಮಮತೆಯಿಂದ ಸಾಕುವುದಿದೆ. ಒಂದು ಸೇತುವೆಯ ಮೇಲೆ ನೀರಿನ ದೊಡ್ಡ ಪಾತ್ರೆಯಲ್ಲಿ ಅವುಗಳನ್ನು ಹಾಕಿ, ಮೇಲ್ಗಡೆ ಬಾಳೆಗೊನೆ ತೂಗಾಡಿಸಿ, ಬಾಳೆಹಣ್ಣುಗಳನ್ನು ಅವುಗಳಿಗೆ ತಿನ್ನಲು ಕೊಡುವುದಿದೆ.

ನದಿಯ ರಾಕ್ಷಸರು

ಲಿಂಪೋಪೋ ಎಂಬಲ್ಲಿ ೧೫॥ ಅಡಿ ಉದ್ದದ ಮೊಸಳೆಗಳು ಇವೆ. ಪೂರ್ವ ಆಫ್ರಿಕದ ಕೆಲವು ಕಟ್ಟುಕಥೆಗಳಲ್ಲಿ ೪೦ ಫೀಟ್ ಉದ್ದದ ಮೊಸಳೆಗಳ ಕುರಿತು ಉಲ್ಲೇಖವಿದೆ. ಆದರೆ ಬ್ರಿಟಿಷ್ ವಸ್ತುಸಂಗ್ರಹಾಲಯದಲ್ಲಿ ಇರುವ ಮಾದರಿ ಮೊಸಳೆಯೊಂದು ೨೦ ಅಡಿ ಉದ್ದವಿರುವುದು. ಹಿಂದೂದೇಶದ ಮೊಸಳೆಗಳು ಇನ್ನಷ್ಟು ಉದ್ದ ಇವೆ. ಮಡಗಾಸ್ಕರ್ ನದಿಗಳಲ್ಲಿ ರಾಕ್ಷಸಾಕಾರದ ಮೊಸಳೆಗಳೂ ಇರಬಹುದೆನ್ನಲಾಗಿದೆ.

ಆಫ್ರಿಕದಲ್ಲಿ ಬಿಸಿಲ್ಗುದುರೆ ಯಾನೆ ಮರೀಚಿಕೆಯ ಸನ್ನಿವೇಶಗಳು ಹಲವು ಇರುವುದರಿಂದ ದೃಷ್ಟಿಗೆ ದೊಡ್ಡದಾಗಿ ತೋರುವ ಮೊಸಳೆ ನಿಜವಾಗಿ ಚಿಕ್ಕದಿರಬಹುದು. ಬಿಸಿಲ್ಗುದುರೆಯು ಒಂದು ಚಿಕ್ಕ ಹುಳವನ್ನು ದೊಡ್ಡ ಕೋಣದಷ್ಟು ಗಾತ್ರವಾಗಿ ತೋರಿಸುತ್ತದೆ. ಒಳ್ಳೆಯ ಅನುಭವಿ ಶಿಕಾರಿಗಳೊಡನೆ ಕೇಳಿದಾಗ ಆಫ್ರಿಕದ ನದಿಗಳಲ್ಲಿ ಹೆಚ್ಚೆಂದರೆ ೧೭ ಫೀಟ್ ಉದ್ದದ ವರೆಗೆ ಮೊಸಳೆಗಳು ಇರಬಹುದು, ಅದಕ್ಕಿಂತ ಉದ್ದ ಇರುವುದು ಅಸಂಭವ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೊಸಳೆಗಳನ್ನು ಹಿಡಿಯುವುದು

ಚತುರೋಪಾಯದಿಂದ ಮೊಸಳೆಗಳನ್ನು ಹಿಡಿಯುವುದರಲ್ಲಿ ಝೂಲು ಜನರು ಹೆಸರು ಹೋದವರು. ಅಗಲಕಿರಿದಾದ ನದಿಗಳ ಮೇಲೆ ಅವರು ಮರಗಳನ್ನು ರಾಶಿಹಾಕುವರು. ಮೊಸಳೆಗೆ ಹಾದುಹೋಗುವಷ್ಟು ಬಿರುಕು ನಡುವೆ ಬಿಡುವರು. ಈ ಬಿರುಕಿನ ಸಂದಿನಲ್ಲಿ ಒಂದು ಚರ್ಮದ ಇಲ್ಲವೆ ಸರಿಗೆಯ ಕೊಂಡಿಯನ್ನು ಇಡುವರು. ಒಮ್ಮೆ ಮೊಸಳೆಯು ಬಿರುಕಿನಲ್ಲಿ ನುಸುಳಿತೆಂದರೆ ಕೊಂಡಿಯನ್ನು ಬಲವಾಗಿ ಬಿಗಿದು, ಕೂಡಲೇ ಬರ್ಚಿ ಪ್ರಯೋಗಮಾಡುವರು.

ಮೊಸಳೆಯ ಚರ್ಮವು ವ್ಯಾಪಾರೀ ಸಾಮಗ್ರಿಗಳಲ್ಲಿ ಒಂದಾಗಿದೆ. ಮೊಸಳೆಯ ಕೊಬ್ಬನ್ನು ಝೂಲೂ ಜನರು ಔಷಧಿಗಳಿಗೆ ಉಪಯೋಗಿಸುತ್ತಾರೆ. ಕೆಲಮಂದಿ ಮೂಲನಿವಾಸಿಗಳು ಮೊಸಳೆಯ ಮಾಂಸವನ್ನು ಬೇಯಿಸಿ ತಿನ್ನುತ್ತಾರೆ. ಆದರೆ ಹಲವು ಮಂದಿ ಅದನ್ನು ಮುಟ್ಟುವುದೂ ಇಲ್ಲ. ಸಾಯುವವರ ಭೂತಗಳು ಮೊಸಳೆಯ ದೇಹ ಸೇರುವವೆಂಬ ನಂಬಿಕೆಯೇ ಇದಕ್ಕೆ ಕಾರಣವಾಗಿದೆ.

ಮೊಸಳೆಯ ಕುರಿತು ಒಂದು ಕಥೆ

ಲಿವಿಂಗ್‌ಸ್ಟನ್ ಎಂಬಲ್ಲಿ ನಡೆದ ನೈಜಕಥೆಯಿದು. ವಿಕ್ಟೋರಿಯಾ ಜಲಪಾತ ಸೇತುವೆಯ ಮೇಲೆ ದೊಡ್ಡದೊಂದು ಮೊಸಳೆ ಹೊರಳಾಡುತ್ತಿತ್ತು. ಬೆಳಗ್ಗೆ ಅದನ್ನು ಅಲ್ಲಿ ಕಂಡ ಇಬ್ಬರು ಮೋಟರ್ ಸೈಕಲ್ ಸವಾರರು, ಹಿಂದೆ ಹೋಗಿ ಹಗ್ಗ ತಂದರು. ಹಗ್ಗದಿಂದ ಗಟ್ಟಿಯಾಗಿ ಅದನ್ನು ಬಿಗಿದು ಒಂದು ಕಾರಿನೊಳಗೆ ಹಾಕಿದರು. ಅದು ಅಲ್ಲಿಯೂ, ಕಟ್ಟಿದ ಹಗ್ಗಗಳನ್ನು ತುಂಡುಮಾಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಬಳಿಯಲ್ಲೇ ಇರುವ ಒಂದು ಹೊಟೇಲಿಗೆ, ಸಂದರ್ಶಕರ ವಿನೋದಕ್ಕಾಗಿ ಅದನ್ನು ತಂದರು.

ಶಾರ್ಕ್ ಹಿಡಿಯುವವರು, ಅದರ ಹೊಟ್ಟೆಯನ್ನು ಮೊದಲು ಸೀಳಿ, ಒಳಗೆ ಏನಾದರೂ ನಿಧಿ ಇದೆಯೋ ಎಂದು ಪರೀಕ್ಷಿಸುವ ಹಾಗೆ ಮೊಸಳೆ ಹಿಡಿಯುವವರೂ ಅದರ ಹೊಟ್ಟೆ ಸೀಳಿ ಒಳಗೆ ಪರೀಕ್ಷಿಸುವುದಿದೆ

ಕೋಮಟಿ ನದಿಯಲ್ಲಿ, ಟ್ರಾನ್ಸ್‌ವಾಲದ ಶಿಕಾರಿಯೊಬ್ಬನು ಗುಂಡಿಟ್ಟು ಕೊಂದ ಒಂದು ಮೊಸಳೆಯ ಹೊಟ್ಟೆಯಲ್ಲಿ ೨೫ ಚಿನ್ನದ ಸಾ[illegible] [illegible] ಸಿಕ್ಕಿದ್ದುವು. ಈ ಪೈಕಿ ಕೆಲವು ನಾಣ್ಯಗಳು ಚೆನ್ನಾಗಿ ಸವೆದುಹೋಗಿದ್ದುವು. ಇತರ ಕೆಲವು ನಾಣ್ಯಗಳ ಮೇಲೆ ವಿಕ್ಟೋರಿಯಾ ರಾಣಿ, ಎಡ್ವರ್ಡ್ ಮತ್ತು ಅಧ್ಯಕ್ಷ ಕ್ರೂಗರ್‌ನ ಚಿತ್ರ ಸ್ಪಷ್ಟವಾಗಿ ತೋರುತ್ತಿದ್ದುವು. [illegible] ಪಿನ್ನೂ ಒಂದಿತ್ತು. ಈ ಕುರಿತು ತುಂಬಾ ಪತ್ತೇದಾರಿ ಶೋಧ ನಡೆಸಿಯಾಯಿತು

ಚಿನ್ನದ ಗನಿಯಲ್ಲಿ ಕೆಲಸ ತೀರಿಸಿ, ಸಂಬಳ ಹಿಡಕೊಂಡು ಮನೆಗೆ ಹಿಂತಿರುಗುವ ಯಾವನೋ ಆಫ್ರಿಕನನು ಆ ಮೊಸಳೆಯ ಬಾಯಿಗೆ ಆಹುತಿಯಾದದ್ದಿರಬೇಕೆಂದು ಕೊನೆಗೆ ಊಹಿಸಲಾಯಿತು.

೩೦೦ ವರ್ಷ ಪ್ರಾಯದ ಮೊಸಳೆ

ಆಫ್ರಿಕದಲ್ಲಿ ಅತ್ಯಂತ ಪ್ರಸಿದ್ಧ ನೆಗಳು ಉಗಾಂಡಾದ ಲೇಕ್ ವಿಕ್ಟೋರಿಯಾ ಪ್ರಾಂತ್ಯದಲ್ಲಿರುವ 'ಲುಟೆಂಬೆ' ಎಂಬುದು. ಆಫ್ರಿಕದಲ್ಲಿ ಬಿಳಿಯರು ಕಾಲಿಡುವ ಮೊದಲು, ಮರಣಶಿಕ್ಷೆಗೆ ಗುರಿಯಾದವರನ್ನು 'ಲುಟೆಂಬೆ' ಬಾಯಿಗೆ ಕೊಡುವ ಪದ್ಧತಿಯಿತ್ತು. ಈ ಮೊಸಳೆಗೆ ಪ್ರಾಯ ೩೦೦ ವರ್ಷ ದಾಟಿದೆ. ಈಗ ಅದಕ್ಕೆ ಮೀನುಗಳನ್ನು ತಿನ್ನಲು ಕೊಟ್ಟು ಪೋಷಿಸುತ್ತಾರೆ. 'ಲುಟೆಂಬೆ' ಎಂದು ಮೆಲ್ಲಗೆ ಕರೆದೊಡನೆ ಅದು ನೀರಿನಿಂದ ತಲೆ ಮೇಲಕ್ಕೆತ್ತುತ್ತದೆ.

ಗುಂಡಿನೇಟಿಗೆ ಮೊಸಳೆಯು ಒಮ್ಮೆಲೇ ಸಾಯುವುದಿಲ್ಲ. ದೇಹದ ಕೆಲವು ಮರ್ಮದ ಸ್ಥಳಗಳಲ್ಲಿ ಗುರಿಯಿಟ್ಟು ಹೊಡೆದರೆ ಮಾತ್ರ ಅದನ್ನು ಕೊಲ್ಲಬಹುದಾಗಿದೆ. ಕೆಲವು ಭಾಗಗಳಲ್ಲಿ ಗೋಲಿಯನ್ನು ಎದುರಿಸುವಷ್ಟು ಅದರ ಚಿಪ್ಪು ಗಟ್ಟಿಯಾಗಿದೆ.

ಆಸ್ಟ್ರೇಲಿಯಾದಲ್ಲಿ ಶಾರ್ಪೆಂಟೇರಿಯಾ ಕೊಲ್ಲಿಗೆ ಹರಿಯುವ ಸದಿಯಲ್ಲಿ ಮೊಸಳೆಗಳು ಬಹುಸಂಖ್ಯೆಯಲ್ಲಿ ವಾಸಿಸಿಕೊಂಡಿವೆ. ಆ ಉಷ್ಣಪ್ರದೇಶಕ್ಕೆ ಹೊಸತಾಗಿ ಬಂದ ಬಿಳಿ ಮನುಷ್ಯನೊಬ್ಬನು ನದಿಯಲ್ಲಿ ಈಜಲು ಬಯಸಿ, ತನ್ನ ಸೇವಕನಾದ ಕಪ್ಪು ಹುಡುಗನೊಡನೆ "ಇಲ್ಲಿ ಶಾರ್ಕ್‌ಗಳು ಇವೆಯೇ?" ಎಂದು ಕೇಳಿದನು.

"ಇಲ್ಲ ಧನಿಗಳೇ" ಎಂದು ಆತನು ತಲೆಯಲ್ಲಾಡಿಸುವಾಗ ಬಿಳಿಮನುಷ್ಯನಿಗೆ ಅವನ ಮೇಲೆ ಪೂರ್ಣ ವಿಶ್ವಾಸವಾಯಿತು.

ಅವನು ಪೋಷಾಕು ಕಳಚಿ ನೀರಿಗಿಳಿದು ಈಜಾಡಲಿಕ್ಕೆ ತೊಡಗಿದನು. "ಇಲ್ಲಿ ಶಾರ್ಕ್‌ಗಳು ಏಕಿಲ್ಲ?" ಎಂದು ಈಜಾಡುತ್ತ ಸೇವಕನನ್ನು ಪ್ರಶ್ನಿಸಿದನು.

"ಮೊಸಳೆಗಳು ಎಲ್ಲಾ ಶಾರ್ಕ್‌ಗಳನ್ನು ತಿಂದುಬಿಡುತ್ತವೆ" ಎಂದು ಸೇವಕನ ಉತ್ತರ ಬಂತು. ಬಿಳಿ ಮನುಷ್ಯನಿಗೆ ಜೀವ ಹಾರಿ ಹೋದಂತಾಯಿತು. ಅತಿ ವೇಗದಲ್ಲಿ ದಡವನ್ನೇರಿ ಬಿಟ್ಟನು.

ಶಾರ್ಕ್‌ಗಳನ್ನು ಮೊಸಳೆ ಹಿಡಿದು ತಿನ್ನುತ್ತದೆ ಎಂದು ಕೇಳಿ ಆಶ್ಚರ್ಯಪಡಬೇಕಾಗಿಲ್ಲ. ಮೊಸಳೆಯು ಒಂದು ಕಬ್ಬಿಣದ ಪಾತ್ರೆಯನ್ನು ದವಡೆಗಳ ನಡುವೆ ಇಟ್ಟು ಜಜ್ಜಬಲ್ಲುದು; ಕಬ್ಬಿಣದ ಸಲಾಕೆಯನ್ನು ಬಗ್ಗಿಸಬಲ್ಲುದು.

ಮೊಸಳೆಯನ್ನು ದೇವರೆಂದು ಕೆಲಮಂದಿ ಆಫ್ರಿಕನರು



ಚೀನದ ಸುವಿಖ್ಯಾತ ಸ್ತ್ರೀಪಾತ್ರಧಾರಿ ಚೆಂಗ್ ಫಾನ್‌ಚು

ಚೀನದಲ್ಲಿ ಬಹುವರ್ಷಗಳಿಂದ ಸ್ತ್ರೀ ಪಾತ್ರದಲ್ಲಿ ಅಪ್ರತಿಮನೆಂದು ವಿಖ್ಯಾತನಾಗಿದ್ದ ಮೆಯಿಲಾನ್ ಫಾನನು ನಿವೃತ್ತಿಹೊಂದಿರಲು, ಚೆಂಗ್‌ಫಾನನು ಅವನ ಸ್ಥಾನವನ್ನಾಕ್ರಮಿಸಿರುವನು. ಸ್ವರೂಪದರ್ಶಕ ನಾಯಿಕೆಯರನ್ನು ಸೃಷ್ಟಿಸಿ ಈತನು ಬಹು ಜನ ರಸಿಕರ ಮೆಚ್ಚುಗೆಗೆ ಪಾತ್ರನಾಗಿರುವನು.



ಚೆಂಗ್ ಫಾನ್‌ಚು,—ಒಂದು ಸ್ತ್ರೀಪಾತ್ರದಲ್ಲಿ (ನಡುವೆ)

ಮನೋಹರ, ಸುಕೋಮಲ ಸ್ವಭಾವದ ಮಹಿಳೆಯರನ್ನು ರಂಗಭೂಮಿಯಲ್ಲಿ ತೋರುವ ಚೆಂಗ್ ಫಾನನು, ಒಮ್ಮೊಮ್ಮೆ ಕುಪಥದಲ್ಲಿ ನಡೆದ ಚೆಲುವೆಯ ಪಾತ್ರ ಧರಿಸುವುದೂ ಇದೆ. ಇಲ್ಲಿ, ತನ್ನ ಪಾಪಗಳಿಗಾಗಿ ಸರ್ಪಸ್ತ್ರೀಯಾಗಿ ಪರಿವರ್ತಿತಳಾಗಿದ್ದ ಓರ್ವ ಯುವತಿಯು ಪ್ರಾಯಶ್ಚಿತ್ತವಾಗಿ, ಮರಳಿ ಸ್ತ್ರೀರೂಪ ಪಡೆದು, ತನ್ನ ಪತಿಯನ್ನು ಸೇರುವುದನ್ನು ಚೆಂಗ್‌ಫಾನನು ತೋರುತಿದ್ದಾನೆ.

ಜಗದ್ವಿಖ್ಯಾತ ಸ್ತ್ರೀಪಾತ್ರಧಾರಿ ಚೆಂಗ್ ಫೆನ್-ಚಿಯು

ಪುರುಷರು ಸ್ತ್ರೀಪಾತ್ರ ಧರಿಸಿದರೆ, ನಾಟಕದ ಸೊಬಗು ಕೆಡುವುದು. ಆದರೆ, ಇತ್ತೀಚಿಗಿನ ವರೆಗೆ, ರಂಗಭೂಮಿಯೆಂಬುದು ಸ್ತ್ರೀಯರಿಗೆ ಮಾತ್ರವಲ್ಲ, ಪುರುಷರಿಗೂ ನಿಷಿದ್ಧವೆಂದು ಹೇಳಲ್ಪಡುತಿತ್ತು. 'ಉಚ್ಚ' ಕುಲದವರೆನಿಸುವವರು ರಂಗಭೂಮಿಯ ಮೇಲೆ ಹೋಗುತ್ತಿರಲಿಲ್ಲ. ನಾಟಕಗಳನ್ನು ಮಾತ್ರ ನೋಡುತಿದ್ದರು. ಆಗ ಸ್ತ್ರೀಯರು ರಂಗಭೂಮಿಗೆ ಹೋಗುವುದೆಂದರೆ, ಕುಲ ಕೆಟ್ಟಂತೆಯೇ ಎಂಬ ಭಾವನೆಯಿತ್ತು. ಆದಕಾರಣ, ಪುರುಷರೇ ಹೆಚ್ಚಾಗಿ ಸ್ತ್ರೀಪಾತ್ರ ಧರಿಸುತಿದ್ದರು. ಹಾಗೆ ಸ್ತ್ರೀಪಾತ್ರ ಧರಿಸುವವರಲ್ಲಿ ಈಗಲೂ ಅನೇಕರು, ಸ್ತ್ರೀಯರಿಗೇ ಭ್ರಮೆಯುಂಟಾಗುವಷ್ಟು ಚಲೋದಾಗಿ ಅವುಗಳನ್ನು ನಿರ್ವಹಿಸುತ್ತಿರುವ ದೃಷ್ಟಾಂತಗಳಿವೆ.
ಚೀನದ ವಿಖ್ಯಾದ ನಟ ಚೆಂಗ್‌ಫೆನನು ಅಂತಹ ಅದ್ಭುತ ನಟರಲ್ಲೊಬ್ಬನು.

ಚೀನದ ರಂಗಭೂಮಿಯ ಕುರಿತು ಭಾರತವು ಹೆಚ್ಚೇನೂ ತಿಳಿದಿಲ್ಲ. ಸಾವಿರಾರು ವರ್ಷಗಳಿಂದ ಚೀನ-ಭಾರತ ಸಂಬಂಧವು, ಭೌಗೋಲಿಕ ಸಾಮಿಪ್ಯದಿಂದಲೂ, ಸಾಂಸ್ಕೃತಿಕ ಬಂಧನಗಳಿಂದಲೂ ಅಕ್ಕ-ತಂಗಿಯರಂತಿದ್ದರೂ, ಕಳೆದ ಕೆಲವು ಶತಮಾನಗಳಿಂದ ಚೀನೀ ಭಾಷೆಯೂ, ಚೀನೀಯರ ರೀತಿ ನೀತಿಗಳೂ, ಅವರ ಜೀವನವೂ ಕೋಟ್ಯಾನುಕೋಟಿ ಭಾರತೀಯರಿಗೆ ಅರ್ಥವಾಗದ ಒಗಟಾಗಿ ನಿಂತಿವೆ. ಇಂಗ್ಲಿಷರ ಆಳ್ವಿಕೆಯ ನಂತರ, ನಾವು ಇಂಗ್ಲೆಂಡಿನ ಮತ್ತು ಇಂಗ್ಲಿಷ್ ಭಾಷೆಯ ಇತರ ನಾಡುಗಳ ವಿಷಯವಾಗಿ ಚೆನ್ನಾಗಿ ಅರಿತುಕೊಂಡಿದ್ದೇವೆ. ಚೀನವು ನಮಗೆ, ಅರಿವಿನ ಮಟ್ಟಿಗೆ ಒಂದು ಪ್ರತ್ಯೇಕ ಗೋಲವೋ ಎಂಬಷ್ಟು ದೂರಕ್ಕೆ ಸರಿದಿದೆ. ಈ ಲೇಖನದಲ್ಲಿ ಚೀನದ ಪ್ರಖ್ಯಾತ ಕಲಾಕಾರನೊಬ್ಬನ ವಿಷಯವನ್ನು ಕೊಟ್ಟಿರುವೆವು. ರಂಗಭೂಮಿಯ ಪ್ರಗತಿಯಲ್ಲಿ ಚೀನವು ಹಿಂದಿಲ್ಲ. ಅಸಾಧಾರಣರೆನಿಸುವ ಕೆಲವು ನಟರನ್ನೂ ಜಗತ್ತಿಗೊದಗಿಸಿದೆ.

ಈ ಶತಮಾನದಲ್ಲಿ ಬೆಳಗಿ ಕಂತಿಹೋದ (ನಿವೃತ್ತನಾದ) ಪ್ರಖ್ಯಾತ ಚೀನಿ ನಟ ಮೆಯಿ ಲಾನ್ ಫಾನನ ನಂತರ, ಚೆಂಗ್ ಫೆನ್‌ಚಿಯು ಎಂಬವನು, ಕಲಾ ಲೋಕದ ಲಕ್ಷ್ಯವನ್ನು ಸೆಳೆದಿರುವನು. ಈ ಅದ್ಭುತ ನಟನು ಇಂದು, ಚೀನದ ನಟರಲ್ಲಿ ಅಗ್ರೇಸರನೆನಿಸುತ್ತಾನೆ. ಸುಂದರವಾದ ಮುಖ ಮಾತ್ರವಲ್ಲ, ಅಭಿನಯ ನೈಪುಣ್ಯವು ಪರಿಪೂರ್ಣವಾಗುಳ್ಳ ಈ ಕಲಾವಿದನು, ಸ್ತ್ರೀಪಾತ್ರ ಧರಿಸುವುದರಲ್ಲಿ ವೈಶಿಷ್ಟ್ಯ ಪಡೆದಿರುವನು.

ಚೆಂಗ್ ಫೆನನು ಬರೇ ನಟನಲ್ಲ; ಸ್ವರೂಪದರ್ಶಕ ನಾಯಕಿಯರನ್ನು ಸೃಷ್ಟಿಸುವ ಕಲಾವಿದನು. ಅವನು ರಂಗಭೂಮಿಗೆ ಬರುವಾಗ, ವಿಪತ್ತಿಗೊಳಗಾದ ಅಥವಾ ಮಾನಸಿಕ ದುಃಖಕ್ಕೊಳಗಾದ ಕನ್ನಿಕೆಯರನ್ನು ಪ್ರತಿಬಿಂಬಿಸುತ್ತಾನೆ. ಪ್ರೇಮಭಂಗ ಹೊಂದಿ ಬಳಲಿದ ಲಲನೆಯರನ್ನು ಈ ನಟನು ಅಭಿನಯಿಸಿ ಪ್ರದರ್ಶಿಸುವಾಗ, ಪ್ರೇಕ್ಷಕನು, "ಈಕೆ ಪುರುಷಾಂತರಗೊಂಡ ಸ್ತ್ರೀ—ಇದು ನಾಟಕ" ಎಂಬುದನ್ನು ಮರೆತು ಬಿಡುತ್ತಾನೆ.

ಜರತಾರಿಯ, ವಿವಿಧ ಕಸೂತಿಯ ಉಡುಪುಗಳನ್ನು ಧರಿಸಿ, ತನ್ನ ತಲೆಯನ್ನು ಹೊಳಪಿನ ವಸ್ತ್ರದಿಂದ (ಸೆರಗಿನಿಂದ) ಮುಚ್ಚಿ, ಅರೆನಿದ್ರೆ ಅಥವಾ ಆಲಸ್ಯದಲ್ಲಿರುವಂತೆ ತೋರುವ ತನ್ನ ಮನೋಹರ — ಮುಗ್ಧಕರ ನಯನಗಳಿಂದ ದಣಿವನ್ನೋ ಪ್ರೇಮವನ್ನೋ ಅಮೃತದಂತೆ ಸುರಿಸುತ್ತ ತೇಲಿ ಬರುವ ಈ ಚೆಲುವಿನ ನಟನು ಇಂದು ಚೀನದ ಕಲಾಪ್ರಿಯರ ಕಣ್ಮಣಿಯಾಗಿರುವನು. ಇಂಥ ಪಾತ್ರಗಳನ್ನು ಮೊದಲು ಮೇಯಿ ಲಾನ್-ಫಾನನು ನಿರ್ವಹಿಸುತಿದ್ದನು. ಆಗ, ಮೇಯಿ ಲಾನನ ನಂತರ ಅವನನ್ನು ಪ್ರತಿನಿಧಿಸುವ ನಟನು ದೊರೆವುದು ದುರ್ಲಭವೋ ಎನಿಸಿತ್ತು. ಚೆಂಗ್ ಫೆನನು ಆ ಕೊರತೆಯನ್ನು ತಕ್ಕಷ್ಟು ಸಮರ್ಥವಾಗಿ ತುಂಬಿ ಬಿಟ್ಟಿರುವನು. (ಮೆಯಿ ಲಾನನ ದೇಹ ಪ್ರಕೃತಿಯು ತೆಳ್ಳಗಿದ್ದು, ಅವನು ಸ್ತ್ರೀ ಪಾತ್ರ ಧರಿಸಿದರೆ, ಈತನು ಪುರುಷನೆಂದು ಹೇಳಲು ಅಸಾಧ್ಯವಾಗುತಿತ್ತಂತೆ.)

ಪೆಕಿಂಗ್ ನಗರದ ರಂಗಭೂಮಿಯಲ್ಲಿ ಚೆಂಗ್‌ಫೆನನು, ಬಹುದೊಡ್ಡ ಆಕರ್ಷಣವಾಗಿರುವನು.

ಚೆಂಗ್ ಫೆನನ ಹಿರಿಯರು ಕಲಾರಂಗದಲ್ಲಿದ್ದವರಲ್ಲ. ಮಂಚೂ ಚಕ್ರವರ್ತಿಗಳ ಕೈ ಕೆಳಗೆ ದೊಡ್ಡ ಅಧಿಕಾರದಲ್ಲಿದ್ದವರು. ರಂಗಭೂಮಿಗೆ ಹೋಗುವವರು ಉತ್ತಮ ಕುಲದವರಲ್ಲ ಎಂಬೊಂದು ಭಾವನೆಯು ಚೀನದಲ್ಲೂ ಇದೆ. ಚೆಂಗ್ ಫೆನನು ರಂಗಭೂಮಿಗೆ ಹೋದುದಕ್ಕೆ ಅವನ ಕುಟುಂಬದವರಿಗೆ ಸಮಾಧಾನವಿಲ್ಲ. ಆದರೆ, ಅದಾವುದನ್ನೂ ಗಣಿಸದೆ ಈ ನಟನು, ತನ

ಲಾಸೇವೆಯಿಂದ ಲಕ್ಷ ಲಕ್ಷ ಹೃದಯಗಳನ್ನು ತಣಿಸುತಿರುವನು. ಈಗ, ಕಾಲವು ಬದಲಾಗಿದೆ. ರಂಗ ಭೂಮಿಯ ವಿಷಯಕವಾಗಿರುವ ದುರಭಿಪ್ರಾಯವು ದೂರವಾಗುತ್ತಿದೆ. ಸುಶಿಕ್ಷಿತರು ಅಭಿನಯ ಮೊದಲಾದುವುಗಳಲ್ಲಿ ಸುಧಾರಣೆಗಾಗಿ ಸೇವೆ ಸಲಿಸುತಿದ್ದಾರೆ.

ಚೆಂಗ್ ಫೆನನು ನಟನಾಗಿರುವಂತೇ, ಪೆಕಿಂಗ್ ನಗರದಲ್ಲಿ ನಟರನ್ನು ತಯಾರಿಸುವ ಒಬ್ಬ ಶಿಕ್ಷಕನೂ ದಿಗ್ದರ್ಶಕನೂ ಆಗಿರುವನು. ಚೆಂಗ್‌ಫೆನನ ಈ ಶಾಲೆಯು ಪೆಕಿಂಗ್‌ದಲ್ಲಿ, ಹಲವು ತರುಣರನ್ನು ಉತ್ಕೃಷ್ಟ ಕಲಾವಿದರಾಗಲು ತರಬೇತಿಕೊಡುತ್ತಿದೆ. ಇವನ ಶಾಲೆಯ ನಟರಲ್ಲಿ ಹಲವರು ಓದು ಬರಹ ತಿಳಿದಿಲ್ಲ. ಆದರೂ, ಚೆಂಗ್ ಫೆನನು ಅವರನ್ನು ಅತ್ಯುತ್ತಮವಾಗಿ ತರಬೇತಿಗೊಳಿಸುತ್ತಾನೆ.

ಚೆಂಗ್‌ಫೆನನು, ಸಂದರ್ಭಾನುಸಾರ ತನ್ನ ಆಂತರಿಕ ಭಾವನೆಗಳನ್ನು ಪ್ರದರ್ಶಿಸುವ ಸ್ವರವನ್ನುಳ್ಳವನಾಗಿರುವನು. ತನ್ನ ರೂಪ, ಆಕರ್ಷಕ ಉಡುಪುಗಳು, ಮತ್ತು ಅಭಿನಯದೊಂದಿಗೆ ಅವನು ಈ ಸ್ವರವನ್ನು ಅತ್ಯಂತ ಪರಿಣಾಮಕಾರಿಯಾಗಿ ತೋರುವನು.

ನಾಟಕ ಕಥೆಯ ಒಂದು ಉದಾಹರಣೆ ಹೀಗಿದೆ: ಚೆಂಗ್ ಫೆನನು, ಒಬ್ಬ ವಿದ್ಯಾರ್ಥಿಯ ಪತ್ನಿಯಾಗಿ ಬರುತ್ತಾನೆ. ಆ ವಿದ್ಯಾರ್ಥಿಯು ಪರೀಕ್ಷೆಗಾಗಿ ರಾಜಧಾನಿಗೆ ಹೊರಡುವನು. ಮನೆಯ ಹಳೇ ಸೇವಕಿಯೊಬ್ಬಳು ಬಹಳ ದುಷ್ಟೆ ಇರುವಳು.. ಅವಳಿಗೊಬ್ಬ ದುಷ್ಟ ಪುತ್ರನೂ ಇದ್ದಾನೆ. ಪರೀಕ್ಷೆಗಾಗಿ ಪ್ರಯಾಣ ಮಾಡುವ ವಿದ್ಯಾರ್ಥಿಯನ್ನು ಮುಗಿಸಿಬಿಟ್ಟು, ತನ್ನ ಮಗನಿಗೆ ಈ ವಿಧವೆಯನ್ನು ಲಗ್ನಮಾಡಿಕೊಡುವುದಾಗಿ ಆ ದುಷ್ಟೆ ಹಂಚಿಕೆ ಹೂಡುತ್ತಾಳೆ. ವಿದ್ಯಾರ್ಥಿಯು ನಡೆಯುತ್ತಿರುವಾಗ ಒಂದು ನದಿಯಲ್ಲಿ ತಳ್ಳಲ್ಪಡುತ್ತಾನೆ. ದುಷ್ಟೆ ಸೇವಕಿಯು, ವಿದ್ಯಾರ್ಥಿಯು ಮರಣಹೊಂದಿದನಾಗಿ ತರುಣಿ ಗೃಹಿಣಿಗೆ ಹೇಳುವಳು. ಚೆಂಗ್ ಫೆನನು, ವಿಶೇಷವೆನಿಸುವ ಕೈಗಳ ಚಲನ ಅಥವಾ ರೋದನ ತೋರಿಸುವುದಿಲ್ಲ. ನಿಜವಾಗಿ ದುಃಖವು ತುಂಬಿ ಬಂದ ಪ್ರೇಮಳ ಸ್ವಭಾವದ ಜಾಣೆ ಯುವತಿಯಂತೆ ಒಂದು ಆಸನದ ಮೇಲೆ ಬಿದ್ದು, ಕಂಠ ತುಂಬಿ ಬಂದು ದುಃಖಕ್ಕೆ ತೊಡಗುತ್ತಾನೆ. ಆ ಸ್ವರವೇ ಪ್ರೇಕ್ಷಕರ ಹೃದಯದಲ್ಲಿ ಸಹಾನುಭೂತಿಯನ್ನೆಬ್ಬಿಸಿ, ಅವರನ್ನೂ ದುಃಖಿತರನ್ನಾಗಿ ಮಾಡುತ್ತದೆ. ವಿದ್ಯಾರ್ಥಿಯ ತಾಯಿಯ ದುಃಖ ಪ್ರದರ್ಶನವು ತೀರ ಭಿನ್ನ ರೀತಿಯದು. ಆಕೆ ದೊಡ್ಡ ಸ್ವರವೆತ್ತಿ, ಬಿದ್ದುಕೊಂಡು, ಮರ್ಮಭೇದಕ ಮಾತುಗಳನ್ನಾಡುತ್ತಾಳೆ.

ಕಥೆ ಮುಂದುವರಿಯುತ್ತದೆ. ಸೇವಕಿಯ ದುಷ್ಟ

ಪುತ್ರನು, ಅತ್ತೆಯನ್ನು ವಿಷಪ್ರಾಶನದಿಂದ ಕೊಲ್ಲಲು ಯತ್ನಿಸುತ್ತಾನೆ. ವಿಷವನ್ನು ಅನ್ನಕ್ಕೆ ಹಾಕಿ ಬಡಿಸುತ್ತಾರೆ. ಆದರೆ, ಅವಳು ಅನ್ನದ ವಿಚಿತ್ರ ರುಚಿಯಿಂದ – ಅದನ್ನು ಉಣ್ಣಲು ತಿರಸ್ಕರಿಸುತ್ತಾಳೆ. ದುಷ್ಟನ ತಾಯಿಗೆ, ತನ್ನ ಮಗನು ಅನ್ನದಲ್ಲಿ ವಿಷ ಹಾಕಿದುದು ತಿಳಿದಿರಲಿಲ್ಲ. ಮನೆ ಯಜಮಾನಿಯು ಬಿಟ್ಟ ಅನ್ನವನ್ನು ಅವಳು ಸಂತೋಷದಿಂದ ತಿನ್ನುತ್ತಾಳೆ; ಸಾಯುತ್ತಾಳೆ. ಈ ದೃಶ್ಯದಲ್ಲಿ ಚೆಂಗ್ ಫೆನನು, ನಾಯಕಿಯಾಗಿ, ತನ್ನ ಅತ್ತೆಗೆ ಸಮಾಧಾನ ಮಾಡುವ ರೀತಿಯು ಅತ್ಯಂತ ಮನೋಹರವಾಗಿದೆ.

ಸೇವಕಿಯ ಮಗನು, ತನ್ನ ತಾಯಿ ಸತ್ತುದನ್ನು ಕಂಡು ರೋದಿಸುತ್ತಾನೆ. ಈ ದುರಂತದ ಮೇಲೂ ತನ್ನ ದುಷ್ಟ ಹಂಚಿಕೆ ಬಿಡದೆ, ಮನೆಯಜಮಾನಿಯೇ (ಅತ್ತೆಯೇ) ತನ್ನ ತಾಯಿಯನ್ನು ಕೊಂದಳೆಂದು ಆಪಾದನೆ ಹೊರಿಸಿ, ಅವಳನ್ನು ಮುಗಿಸಿಬಿಟ್ಟರೆ ವಿದ್ಯಾರ್ಥಿಯ ಹೆಂಡತಿಯನ್ನು ತಾನು ನಿರಾಂತಕವಾಗಿ ಲಗ್ನವಾಗಬಹುದೆಂದು ಎಣಿಸುತ್ತಾನೆ.

ಅತ್ತೆಯನ್ನು ಸರಕಾರದ ದೂತರು ಒಯ್ಯುತ್ತಾರೆ. ಅವಳು ತಪ್ಪನ್ನೊಪ್ಪುವಂತೆ ಚಿತ್ರಹಿಂಸೆ ಕೊಡುತ್ತಾರೆ. ಹಿಂಸೆ ತಾಳಲಾರದೆ ಆ ಮಾತೆಯು ತಾನು ವಿಷ ಹಾಕಿ ಸೇವಕಿಯನ್ನು ಕೊಂದುದು ನಿಜವೆಂದು ಸುಳ್ಳುಸುಳ್ಳಾಗಿ ಒಪ್ಪುತ್ತಾಳೆ. ಅಷ್ಟರಲ್ಲಿ ಸೊಸೆಯು (ಚೆಂಗ್ ಫೆನ್) ನ್ಯಾಯಾಸ್ಥಾನಕ್ಕೆ ಬಂದು, ತನ್ನ ಅತ್ತೆಯು ನಿರಪರಾಧಿಯೆಂದೂ, ನಿಜಕ್ಕೂ ಕೊಂದವಳು ತಾನೆಂದೂ ಹೇಳುತ್ತಾಳೆ. ಸೊಸೆಯನ್ನು ಬಂಧಿಸುತ್ತಾರೆ. ಆ ದುಷ್ಟ ಯುವಕನ ಹಂಚಿಕೆಯು ವ್ಯರ್ಥವಾಗುತ್ತದೆ.

ಸೆರೆಮನೆಯಲ್ಲಿ, ಆ ತರುಣ ವಿಧವೆ, ಕೈಗಳು ಬಿಗಿಯಲ್ಪಟ್ಟು, ಕರಿಯ ಉಡುಪುಗಳಲ್ಲಿ, ದುಃಖಿನಿಯಾಗಿರುತ್ತಾಳೆ. ಪ್ರೇಕ್ಷಕನು ಆ ದೃಶ್ಯಗಳನ್ನು ಕಂಡು ಮಮ್ಮಲ ಮರುಗುತ್ತಾನೆ. ಬಂಧನದಲ್ಲಿ ಕಾವಲು ಮಾಡುವ ಹೆಂಗುಸು, ಈ ಚೆಲುವೆ ಕೊಲೆಗಾರ್ತಿಯ ಮೇಲೆ ಯಾವಾಗಲೂ ಮುನಿಸಿನಿಂದಿರುವಳು. ಚೆಲುವೆ ವಿಧವೆಯು ಅವಳೊಡನೆ ತಾನು ನಿಜಕ್ಕೂ ಕೊಲೆಮಾಡಿದವಳಲ್ಲವೆಂದು ವಿವರಿಸಿದ ನಂತರ ಆ ಕಾವಲುಗಾರಳು ದಯಗೊಂಡು, ಅತ್ತೆಗೆ ಕಾರಾಗೃಹಕ್ಕೆ ಬರಗೊಡುತ್ತಾಳೆ, ತಿಂಡಿ ತಿನಸುಗಳನ್ನು ತರಲೂ ಬಿಡುತ್ತಾಳೆ.

ಇತ್ತ ಅನೇಕರು ಈ ಪ್ರಕರಣದಿಂದ ವಿಸ್ಮಿತರಾಗಿ, ತರುಣ ವಿಧವೆಯ ಅಪರಾಧದ ವಿಷಯ ಸಂಶಯಗೊಂಡು, ನ್ಯಾಯಾಸ್ಥಾನದ ತೀರ್ಪು ಸರಿಯಲ್ಲವೆಂದೂ, ಪುನಃ ವಿಚಾರಣೆ ನಡೆಯಲೇ ಬೇಕೆಂದೂ ಚಳವಳ ಹೂಡುತ್ತಾರೆ. ನ್ಯಾಯವು ಸ್ಥಾಪನೆಯಾಗುವ ಮೊದಲೇ, ತರುಣ ವಿಧವೆಗೆ ಮರಣದಂಡನೆ ವಿಧಿಸಲ್ಪಟ್ಟು, ಆಕೆಯನ್ನು ವಧಾ ಸ್ಥಾನಕ್ಕೊಯ್ಯುತ್ತಾರೆ. ಕೆಂಬಣ್ಣದ ಉಡುಪುಗಳಲ್ಲಿ, ಆ ವಿಧವೆಯು ಕರಾಳದೂತರಿಂದ, ಖಡ್ಗಕಾವಲಿನಲ್ಲಿ ಈ ನಿರಪರಾಧಿ ಚೆಲುವೆಯು ಭಯಭೀತಳಾಗಿ ನಡೆಯುತ್ತಾಳೆ. ಈ ದೃಶ್ಯಗಳಲ್ಲಿ ಚೆಂಗ್‌ಫೆನನ ಅಭಿನಯವು ಅತ್ಯುತ್ತಮವಾಗಿಯೇ ಇದೆ. ಭಯಗೊಂಡು ನಡೆವ ರೀತಿ, ನಿರಪರಾಧಿ ಬಾಲಿಕೆಯ ಮುಖದ ಮೇಲಿನ—ಚಕಿತಗೊಂಡ ಆ ಭಾವ—ಅದು, ಪ್ರೇಕ್ಷಕನಲ್ಲಿ ಆಕೆಗಾಗಿ ಕಳವಳವನ್ನುಂಟುಮಾಡುವುದು.

ಅತ್ತೆಯು, ತನ್ನ ಸೊಸೆಗಾಗಿ ದುಃಖಗೊಂಡು, ಅವಳನ್ನು ರಕ್ಷಿಸಲು ಯತ್ನಿಸುವಳು. ಆದರೆ, ಅವಳನ್ನು ದೂರಕ್ಕೆ ದೂಡುತ್ತಾರೆ. ನಿರಪರಾಧಿ ಯುವತಿಯ ಅಂತ್ಯ ಸಮೀಪಿಸುತ್ತಿದೆ. ಎಲ್ಲವೂ ಮುಗಿಯಿತೆಂದು ಭಾವಿಸುತ್ತಿರುವಷ್ಟರಲ್ಲೆ, ಅಶ್ವಾರೋಹಿದೂತನೊಬ್ಬನು ಓಡಿ ಬಂದು, ವಧೆಯನ್ನು ನಿಲ್ಲಿಸುತ್ತಾನೆ.

ಖಟ್ಲೆಯು ತಿರಿಗಿ ವಿಚಾರಿಸಲ್ಪಡುತ್ತದೆ. ಯುವತಿಯು ತನ್ನ ಅತ್ತೆಯನ್ನು ರಕ್ಷಿಸಲು ತಾನೇ ತನ್ನನ್ನೊಪ್ಪಿಸಿಕೊಂಡಳೆಂದು ತಿಳಿಯುತ್ತದೆ. ಅವಳ ಬಿಡುಗಡೆಗೆ ಆಜ್ಞೆಯಾಗುವುದು. ದುಷ್ಟ ಯುವಕನು ಭೀತನಾಗಿ, ನ್ಯಾಯಾಧೀಶರ ಪದತಲದಲ್ಲಿ ಹೊರಳಾಡುತ್ತಾನೆ. ಆದರೆ, ಅವನಿಗೆ ಶಿಕ್ಷೆ ಕಾದೇ ಇದೆ.

ಯುವತಿಯ ವಿದ್ಯಾರ್ಥಿ ಪತಿಯು ರಾಜಧಾನಿಯಲ್ಲಿ ಪರೀಕ್ಷೆ ಮುಗಿದು, ತೇರ್ಗಡೆ ಹೊಂದಿ ಮರಳುತ್ತಾನೆ. ಅವನು ನದಿಯಿಂದ ಪಾರಾಗಿ ಹೋಗಿ, ಸಕಾಲದಲ್ಲಿ ರಾಜಧಾನಿಯನ್ನು ತಲಪಿ, ತನ್ನ ಉದ್ದಿಷ್ಟ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದನು.

ಈ ಅದ್ಭುತ, ಜಗದ್ವಿಖ್ಯಾತ ಸ್ತ್ರೀಪಾತ್ರಧಾರಿ ಚೆಂಗ್‌ಫೆನ್‌ಚಿಯು, ಪೆಕಿಂಗ್ ನಗರದ ಒಂದು ಪ್ರಶಾಂತ ರಸ್ತೆಯಲ್ಲಿ ವಾಸವಾಗಿರುವನು. ಅವನ ನಿವಾಸ ಭವನದಲ್ಲಿ ಪ್ರೇಕ್ಷಕನಿಗೆ ಮೊದಲಾಗಿ ದೃಗ್ಗೋಚರವಾಗುವುದೆಂದರೆ ಕೆಲವು ಒಳ್ಳೇ ಪಾರಿವಾಳಗಳು. ಚೆಂಗ್‌ಫೆನನಿಗೆ ಪಾರಿವಾಳಗಳನ್ನು ಕಂಡರೆ ಬಲು ಪ್ರೀತಿ.

ಅವನ ಮನೆಯಲ್ಲಿರುವ ಪ್ರತಿಯೊಂದು ವಸ್ತುವೂ ಸೌಮ್ಯತೆಯನ್ನು ಸೂಚಿಸುತ್ತದೆ. ಕುರ್ಚಿಗಳನ್ನು ಹಸುರು ಬಣ್ಣದ ವಸ್ತ್ರಗಳಿಂದ ಆಚ್ಛಾದಿಸಿರುವನು. ಕಿಟಕಿಗಳಿಗೆ ಬಿಳಿಯ ರೇಶ್ಮೆಯ ಝೂಲರಿಗಳಿವೆ.

ಚೆಂಗ್‌ಫೆನನು ರಂಗಭೂಮಿಯ ಮೇಲೆ ಹೇಗೋ ಹಾಗೆಯೇ ಅವನ ಮನೆಯಲ್ಲೂ ಕೇಂದ್ರ ಆಕರ್ಷಣವಾಗಿರುವನು.

ಚೆಂಗ್‌ಫೆನನು ಹದಿಮೂರನೇ ವರ್ಷ ಪ್ರಾಯದಲ್ಲೇ ರಂಗಭೂಮಿಯ ಕಲೆಯನ್ನಭ್ಯಸಿಸತೊಡಗಿದನು. ಚೀನದ ಪ್ರಖ್ಯಾತ ನಾಟಕಗಳಲ್ಲಿ ಮುಖ್ಯ ಸ್ತ್ರೀಪಾತ್ರ ವಹಿಸಲು, ಅನೇಕರ ಕೈಕೆಳಗೆ ತರಬೇತಿ ಪಡೆದಿದ್ದಾನೆ. ಚೀನದ ಸುವಿ

ಖ್ಯಾತ ನಟ ಮೆಯಿ ಲಾನ್ ಫಾನನೂ ಚೆಂಗ್‌ಫೆನನ ಗುರು. ಹದಿನೈದನೇ ವಯಸ್ಸಿನಲ್ಲಿ ಚೆಂಗ್‌ಫೆನನು ಸ್ವಿಝರ್ಲೆಂಡಿಗೆ ತೆರಳಿ, ಅಲ್ಲಿ ಶಾಲಾ ಶಿಕ್ಷಣವನ್ನೂ 'ವಾಯ್ಲಿನ'ನ್ನೂ (ಪಿಟೀಲು) ಕಲಿತನು. ಆ ಮೇಲೂ ಆಗಾಗ್ಗೆ ಯುರೋಪಿನ ದೇಶಗಳಿಗೆ ಹೋಗಿ, ರಂಗಭೂಮಿಯ ಪ್ರಗತಿಯನ್ನು ಅವಲೋಕಿಸಿದ್ದಾನೆ.

ಪೆಕಿಂಗ್ ನಗರದಲ್ಲಿ ಚೆಂಗ್‌ಫೆನನು ದಿಗ್ದರ್ಶಕನಾಗಿರುವ ಕಲಾಶಾಲೆಯಿದೆ. ಅದರಲ್ಲಿ ಇನ್ನೂರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ರಂಗಭೂಮಿಯ ಕುರಿತು ಅಭ್ಯಾಸ ಮಾಡುತಿದ್ದಾರೆ.

ಚೆಂಗ್‌ಫೆನನು ಹೆಚ್ಚಾಗಿ ಹಳೇ ನಾಟಕಗಳಲ್ಲೆ ಅಭಿನಯಿಸುತ್ತಾನೆ ಎಂಬುದು ಗಮನೀಯ. ಹೊಸ ನಾಟಕಗಳು ಕೆಲಕಾಲ ಮಾತ್ರ ಆದರಿಸಲ್ಪಟ್ಟು, ಮತ್ತೆ ಜನರಿಗೆ ಮರೆತು ಹೋಗುವುವು. ಹೊಸತನ್ನು ರಂಗಭೂಮಿಗೆ ತರುವಾಗ ಚೀನೀ ನಟರು ಬಲು ಜಾಗರೂಕತೆ ವಹಿಸುತ್ತಾರೆ. ಆ ಹೊಸತು ಹೆಚ್ಚು ಜನರನ್ನಾಕರ್ಷಿಸುವುದಿಲ್ಲ. ಹಳೇ ನಾಟಕಗಳು ಅಚ್ಚುಕಟ್ಟಾಗಿದ್ದು, ಜನರಿಂದ ಬಹಳವಾಗಿ ಮೆಚ್ಚಲ್ಪಡುತ್ತವೆ.

ಚೆಂಗ್‌ಫೆನನು, ಪುರಾತನ ಕಾಲದ ಟಾಂಗ್ ರಾಜಕುಲದ ಕಾಲದಿಂದ ಪ್ರಚಾರದಲ್ಲಿರುವ ಒಂದು ಕಥೆಯನ್ನು ಧರಿಸಿ ನಾಟಕ ಬರೆದಿರುವನು. ಓರ್ವ ಕನ್ನಿಕೆಯು ಒಂದು ಕವಿತೆ ರಚಿಸುತ್ತಾಳೆ–ಒಮ್ಮೆ ಆ ಕವಿತೆ ಬರೆದ ಪತ್ರವು ಕೆಳಗೆ ಬಿದ್ದಾಗ ಒಂದು ಪಕ್ಷಿಯು ಅದನ್ನು ಕಚ್ಚಿ ಓಡುತ್ತ ಇನ್ನೊಂದು ಕಡೆಯಲ್ಲಿ ಕೆಳಗೆ ಹಾಕುತ್ತದೆ– ಒಬ್ಬ ಯುವಕನಿಗೆ ಅದು ದೊರೆತು—ಪ್ರಣಯ ಬೆಳೆದು,—ಇಬ್ಬರು ಪ್ರಣಯಿಗಳೂ ಒಂದಾಗುತ್ತಾರೆ--ಎಂಬುದೇ ಆ ನಾಟಕದ ಸಾರಾಂಶ.

ಈ ಒಂದು ಅಂಶವು ಗಮನೀಯವಿದೆ. ಚೆಂಗ್‌ಫೆನನು, ತಾನು ಸ್ತ್ರೀ ಪಾತ್ರಧರಿಸಿ ಸ್ತ್ರೀಯಂತೆ ಅಭಿನಯಿಸುತಿದ್ದರೂ ನೈಜಜೀವನದಲ್ಲಿ ಗಂಡುಸಿನಂತೇ ದೊರಗು ಇರುವೆನು ಎಂದು ಹೇಳುವನಾದರೂ, ಮನೆಯಲ್ಲಾಗಲಿ ಕೂಟಗಳಲ್ಲಾಗಲಿ, ಆ ಗಂಡುಸಿನ ದೇಹಾಕೃತಿಯೊಳಗೆ ಸ್ತ್ರೀಯತ್ವವೇ ತುಂಬಿರುವಂತೆ ಒಬ್ಬನಿಗೆ ಭಾಸವಾಗುತ್ತದೆ. ಸ್ತ್ರೀಯ ಹೃದಯವನ್ನು–ತಿಳಿವನ್ನು—ಆಜನ್ಮಾರಭ್ಯ ಹೊಂದಿಕೊಂಡಿರುವುದರಿಂದಲೇ, ಲಲನೆಯ ಸರ್ವ ಲಾಲಿತ್ಯವು ಅವನ ನಾಡಿ ನಾಡಿಗಳಲ್ಲಿ ತುಂಬಿರುವುದರಿಂದಲೇ ಅವನು ಅಷ್ಟೊಂದು ಮನೋಹರವಾಗಿ ಅಭಿನಯಿಸಬಲ್ಲವನಾಗಿರುತ್ತಾನೆ. ಟೀಕಾಕಾರರು ಅವನ ಅಭಿನಯವನ್ನು ಕಂಡು, 'ಸ್ತ್ರೀಯ ಮಾನಸಿಕತೆ—ಸ್ತ್ರೀಯ ಕೋಮಲತೆ -ಸ್ತ್ರೀಯನ್ನು ಬಲ್ಲ ಹೃದಯ ಮತ್ತು ಶಿರ-ಇವು ಇಲ್ಲದಿದ್ದರೆ ಇಷ್ಟು ಪರಿಪೂರ್ಣತೆಯಿಂದ ಸ್ತ್ರೀಯನ್ನು ರಂಗಭೂಮಿಯ ಮೇಲೆ ಪ್ರತಿನಿಧೀಕರಿಸಲಾಗುತಿದ್ದಿಲ್ಲ'–ಎಂದಿರುವರು. ಪುರುಷರಿಗೆ ಹೆಚ್ಚಾಗಿ ಸ್ತ್ರೀಪಾತ್ರ ಒಪ್ಪುವುದಿಲ್ಲ. ತೋರಿಕೆಗೆ ಸ್ತ್ರೀಯಂತೆ ಕಂಡರೂ, ನಡಿಗೆ—ಸ್ವರ—ಹಾವಭಾವಗಳಲ್ಲಿ ತಪ್ಪುತ್ತಾರೆ ಮತ್ತು ಸ್ತ್ರೀಗೇ ವಿಶಿಷ್ಟವಾಗಿರುವ ಕೆಲವೊಂದು ಸೂಕ್ಷ್ಮ ಭಾವಗಳನ್ನಂತೂ ತೋರಲು ಕೇವಲ ಅಸಮರ್ಥರಾಗಿರುತ್ತಾರೆ. ಅದೆಲ್ಲವನ್ನೂ ಓರ್ವ ಕಲಾಭಿಜ್ಞೆ ಸ್ತ್ರೀಯಷ್ಟೆ ಪರಿಪೂರ್ಣತೆಯಿಂದ ಪ್ರದರ್ಶಿಸಿ, ಚೀನದ ನಟರಲ್ಲಿ ಪ್ರಥಮ-ಪ್ರಥಮ ಶ್ರೇಣಿಗೆ ಬಂದಿರುವ ಚೆಂಗ್‌ಫೆನನು ಪುರುಷರೂಪದಲ್ಲಿ ಸ್ತ್ರೀಯಾಗಿರುವನು ಅಥವಾ ಸ್ತ್ರೀಯನ್ನು ಸ್ತ್ರೀಯರು ಬಲ್ಲಷ್ಟೆ ಸರಿಯಾಗಿ ಬಲ್ಲನು ಎನಬೇಕು. ಅವನ ನೈಜ ಜೀವನದಲ್ಲೂ ಅವನಲ್ಲಿ ಸ್ತ್ರೀ ಸಹಜ ಕೋಮಲತೆ ತುಂಬಿಯೇ ಇದೆ.

K.V.S.

“ತಣ್ಣನೆಯ ಆಘಾತ”

ಮತ್ತು

ಇತರ ಎರಡು ಇಂಗ್ಲಿಷ್ ಸಣ್ಣ ಕಥೆಗಳು

ಸಣ್ಣ ಕತೆಯ ಮಾದರಿಯನ್ನು ತೋರಿಸಲು, ಇಲ್ಲಿ ಮೂರು ಇಂಗ್ಲಿಷ್ ಸಣ್ಣ ಕತೆಗಳನ್ನು ಆರಿಸಿಕೊಟ್ಟಿರುವೆವು. ಈ ಮೂರು ಕಿರುಗತೆಗಳು ಮೂರು ವರ್ಗಗಳ ಕಥಾಸಂವಿಧಾನಗಳನ್ನೊಳಗೊಂಡಿವೆ. ಚುರುಕಾಗಿವೆ.

ಮನೆಯಲ್ಲಿ ಪ್ರತಿಯೊಂದೂ ಪ್ರಶಾಂತವಾಗಿತ್ತು. ಮನೆಯ ಆಳುಗಳು ಪಿಸುಗುಟ್ಟಿ ಮಾತಾಡುತ್ತಿದ್ದರು. ಇತರರು ನಮ್ಮನ್ನು ನಿಧಾನವಾಗಿ ತೋಟದ ಕಡೆಗೆ ಹೋಗಲು ಮತ್ತು ಅಲ್ಲಿ ಸದ್ದು ಮಾಡದೆ ಇರಲು ಹೇಳಿದರು.

ಅಂದು ಸಾಯಂಕಾಲ ‘ಪಪ್ಪ’ನು ನಮ್ಮ ಬಳಿಗೆ ಬಂದನು. ಅವನು ಅಳುತ್ತಿದ್ದನೆಂದು ನಾನು ತಿಳಿದುಕೊಂಡೆನು.

ನಾನು ಪಿಸುಗುಟ್ಟಿದೆನು: “ನನ್ನ ‘ಮಮ್ಮಿ’ಯು ವಿಶೇಷ ಅಸ್ವಸ್ಥಳಾಗಿರುವಳೇ?’ ಭೀಕರವೇನೋ ಒಂದು ಸಂಭವಿಸಿರಬೇಕೆಂದು ನಾನು ಭಾವಿಸಿದೆನು.

“ನನ್ನ ಮಗೂ, ನಿನ್ನ ದುರದೃಷ್ಟಶಾಲಿಯಾದ ‘ಮಮ್ಮಿ’ಯು ಇನ್ನು ಮುಂದೆ ನರಳುವುದಿಲ್ಲ; ಅವಳು ದೇವರ ಬಳಿಯಲ್ಲಿ ನೆಮ್ಮದಿಯಿಂದ ಇದ್ದಾಳೆ. ನೀನು ಅವಳನ್ನು ಬೀಳ್ಕೊಡಬೇಕೆಂದು ನಾನು ಆಶಿಸುತ್ತೇನೆ; ಯಾಕಂದರೆ ನೀನು ಅವಳನ್ನು ಪುನಃ ಎಂದೂ ಕಾಣಲಾರೆ. ಅವಳು ನಿನ್ನನ್ನು ಎಷ್ಟೊಂದು ಪ್ರೀತಿಸುತ್ತಿದ್ದಳು! ಮತ್ತು ಅವಳಿಗೆ (ಪ್ರೀತಿ, ಗೌರವ ತೋರಿಸುವುದಕ್ಕಾಗಿ ತುಟಿ ಮುಟ್ಟಿಸಿ ಕೊಡುವ) ಮುತ್ತು ಕೊಡುವವರಲ್ಲಿ ನೀನೇ ಕೊನೆಯವಳಾಗಿರಬೇಕು.”

ನಾನು ಮರಣವನ್ನು ಶಿಶು ಕೋಣೆಯಲ್ಲಿ ಒಂದು ಪಂಜರದೊಳಗಿದ್ದ ನನ್ನ ಚಿಕ್ಕ ಪಕ್ಷಿಗಳಲ್ಲೊಂದಕ್ಕೆ ಬಂದ ಹಾಗೆ ಮಾತ್ರ, ತಿಳಿದಿದ್ದೆನು. ನಾನು ಬಹಳ ಭಯಪಟ್ಟೆನು; ಆದರೆ, ವಿಧೇಯಳಾಗಿ, ‘ಪಪ್ಪ’ನ ಕೈಹಿಡಿದುಕೊಂಡು ಹೋದೆನು.

ಕೋಣೆ ಎಲ್ಲಾ ಕಪ್ಪಾಗಿತ್ತು. ಹಾಸಿಗೆಯ ಬಳಿಯಲ್ಲಿ ಒಂದು ಮೇಜಿನ ಮೇಲೆ, ಬೆಳ್ಳಿಯ ದೊಡ್ಡದೊಂದು ಕ್ರೂಜೆ ಮತ್ತು ಉರಿಯುವ ಮೇಣದ ಬತ್ತಿಗಳುಳ್ಳ ಕವಲು ದೀಪಸ್ತಂಭದಿಂದ, ಒಂದು ಆರಾಧನಾ ಮಂದಿರವು ರಚಿಸಲ್ಪಟ್ಟಿತ್ತು.

‘ಮಮ್ಮಿ’ಯು ಮಲಗಿದ್ದಳು ಅವಳು ತನ್ನ ತೋಳುಗಳನ್ನು ಪೂರ್ಣ ಚಾಚಿದ್ದಳು. ಅವಳ ಕೈಗಳು, ಗೋಡೆಯ ಮೇಲೆ ಯಾವಾಗಲೂ ತೂಗಾಡುತ್ತಿದ್ದ ರಜತ-ಕ್ರೈಸ್ತ-ಪ್ರತಿಮೆಯ ಕಪ್ಪು ಶಿಲುಬೆಯನ್ನು ಅಪ್ಪಿ ಹಿಡಿದುಕೊಂಡಿದ್ದುವು. ಅವಳ ಭುಜಗಳ ಮೇಲೆ ಹರಡಿ ಬಿದ್ದ, ಒಂದು ಬಿಳಿಯ ಗುಂಡು ರಂಧ್ರಗಳ ಮುಖಾವರಣವು ಅವಳ ಕೂದಲನ್ನು ಆವರಿಸಿತ್ತು. ಅವಳ ಮನೋಹರವಾದ (ಮುಖದ) ಪಾರ್ಶ್ವ ದೃಶ್ಯವು, ಕೃಷ್ಣವರ್ಣದಂಶದ ಎದುರು, ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಅವಳ ಕಣ್ಣುಗಳು ಮುಚ್ಚಿಕೊಂಡಿದ್ದುವು ಮತ್ತು ಅವಳು ಶಾಂತತೆಯಿಂದ ಪ್ರಸನ್ನಳಾಗಿದ್ದಳು.

ನಾನು ಅವಳ ಬಳಿಯಲ್ಲಿ, ಮತ್ತೆ ಭಯಪಡದೆ, ನಿಂತುಕೊಂಡೆನು. ಆದರೆ, ನಾನು ‘ಮಮ್ಮಿ’ಯನ್ನು ಮುತ್ತಿಡುವಂತೆ ‘ಪಪ್ಪ’ನು ನನ್ನನ್ನು ಎತ್ತಿ ಹಿಡಿದು ಕೊಂಡಾಗ, ಮತ್ತು ನನ್ನ ತುಟಿಗಳು ಅವಳ ಹಣೆಯನ್ನು ಸ್ಪರ್ಶಿಸಿದಾಗ, ಒಂದು ದೊಡ್ಡ ಆಘಾತವು ನನ್ನನ್ನು ಭೇದಿಸಿಕೊಂಡು ಹೋಯಿತು.

ಹಾಯ್, ನನ್ನ ಮುದ್ದಿನ ‘ಮಮ್ಮಿ’! ಅವಳು ಎಷ್ಟು ತಣ್ಣಗಾಗಿದ್ದಳು!

ಈಗಲೂ, ಬಹು ವರುಷಗಳ ನಂತರ, ನಾನು ಆ ಮುತ್ತಿನ ತಣ್ಣನೆಯನ್ನು ಅನುಭವಿಸುತ್ತೇನೆ.

[ಎನ್ನೆ ಡೌಗ್ಲಾಸ್ ಸೆಡ್ಜ್ವಿಕ್ ಅವರ ‘ಎಂಭತ್ತು ವರುಷಗಳ ಹಿಂದೆ ಬ್ರಿಟ್ಯಾನಿಯಲ್ಲಿ ಒಂದು ಬಾಲ್ಯಾವಸ್ಥೆ’ಯಿಂದ ಆಯ್ದುದು.]

೨. ಡಾಕ್ಟರರಿಗೇಕೆ ತಡವಾಯಿತು?

ರಾತ್ರಿ ಒಂಭತ್ತು ಗಂಟೆಯ ಸ್ವಲ್ಪ ಮೊದಲು ಟೆಲಿಫೋನಿನ ಗಂಟೆ ಬಾರಿಸಿತು. "ಗ್ಲೆನ್ಸ್ ಫೋಲ್ಸಿನಿಂದ ಡಾಕ್ಟರ್ ವೇನ್‌ಆಯ್ಕರಿಗೆ ಕರೆ ಇದೆ" ಎಂದು ನಿರ್ವಾಹಕಳು ಹೇಳಿದಳು.

"ಮಾತನಾಡುತ್ತಿದ್ದೇನೆ."

ವಾಡಿಕೆಯಂತೆ, ಮಾತು ಪ್ರಾರಂಭಿಸಲು ಸೂಚನೆಯಾದ ಬಳಿಕ, "ನಾನು, ಡಾಕ್ಟರ್ ಹೆಯ್ಡನ್, ಗ್ಲೆನ್ಸ್ ಫೋಲ್ಸ್ ಆಸ್ಪತ್ರೆಯಿಂದ ಮಾತನಾಡುತ್ತಿದ್ದೇನೆ. ಒಬ್ಬ ಹುಡುಗನು ಈಗಾಗಲೇ ಇಲ್ಲಿ ತರಲ್ಪಟ್ಟಿದ್ದಾನೆ. ಅವನ ಮಿದುಳಿಗೆ ಗುಂಡು ನಾಟಿದೆ. ರಕ್ತಸ್ರಾವ ವಿಶೇಷವಿದೆ ಮತ್ತು ನಾಡಿಯು ಬಹಳ ದುರ್ಬಲವಾಗಿದೆ."

"ನಾನು ಗ್ಲೆನ್ಸ್ ಫೋಲ್ಸ್‌ನಿಂದ ೬೦ ಮೈಲು ದೂರದಲ್ಲಿದ್ದೇನೆ" ಎಂದು ಡಾ| ವೇನ್ ಆಯ್ಕ್ ಹೇಳಿ, "ನೀನು ಡಾ| ಮರ್ಸರನನ್ನು ವಿಚಾರಿಸಲಿಲ್ಲವೇ?" ಎಂದು ಕೇಳಿದನು.

"ಅವನು ಪಟ್ಟಣದ ಹೊರಗೆ ಹೋಗಿರುತ್ತಾನೆ. ನಿನ್ನನ್ನು ಕರೆಯುವ ಕಾರಣವೆಂದರೆ, ಆ ಹುಡುಗನು ನಿನ್ನ ನಗರದವನು, ಇಲ್ಲಿರುವ ಅವನ ಸಂಬಂಧಿಕರೊಡನೆ ವಾರಾಂತ್ಯವನ್ನು (week end) ಕಳೆಯಲು ಬಂದಿದ್ದನು. ಒಂದು "22"ರ ಪಿಸ್ತೂಲಿನಿಂದ ಆಡುತಿದ್ದಾಗ ತನಗೇನೇ ಗುಂಡು ಹೊಡೆದುಕೊಂಡನು," ಎಂದು ಡಾ| ಹೆಯ್ಡನ್ ಹೇಳಿದನು.

"ಆ ಹುಡುಗನು ಅಲ್ಬಾನಿಯವನೆಂದು ನೀನು ಹೇಳಿದೆಯಷ್ಟೆ. ಅವನ ಹೆಸರೇನು?" ಡಾ| ವೇನ್ ಆಯ್ಕ್ ಕೇಳಿದನು.

"ಆರ್ಥರ್ ಕನ್ನಿಂಗ್ಹೆಮ್."

"ಅವನು ಯಾರೆಂದು ನನಗೆ ತಿಳಿಯುವುದಿಲ್ಲ. ಆದರೆ, ನಾನು ಅಲ್ಲಿಗೆ ಸಾಧ್ಯವಿದ್ದಷ್ಟು ತೀವ್ರವಾಗಿ ತಲ್ಪುತ್ತೇನೆ. ಮಂಜು ಬಹಳವಾಗಿ ಬೀಳುತ್ತದೆ. ಆದರೂ ಮಧ್ಯರಾತ್ರಿಯೊಳಗೆ ಅಲ್ಲಿಗೆ ತಲ್ಪಬಹುದಾಗಿ ಭಾವಿಸುತ್ತೇನೆ."

"ಹುಡುಗನ ಹೆತ್ತವರು ಬಡವರು, ಮತ್ತು ಪ್ರತಿಫಲ ವೇನೂ ಸಿಕ್ಕುವಂತಿಲ್ಲವೆಂದು ನಾನು ನಿನಗೆ ಸ್ಪಷ್ಟಪಡಿಸಬೇಕಾಗಿದೆ."

"ಸರಿ; ಆಗಬಹುದು," ಎಂದು ಡಾ| ವೇನ್ ಆಯ್ಕ್ ಹೇಳಿದನು.

o o o o

ಕೆಲವು ನಿಮಿಷಗಳ ನಂತರ ಅಲ್ಬಾನಿಯ ಹೊರವಲಯದಲ್ಲಿ ಒಂದು ಕೆಂಪು ದೀಪದಿಂದಾಗಿ ಡಾ| ಆಯ್ಕನ "ಕಾರು" ನಿಂತಿತು. ಕಂದು ತೊಗಲಿನ ಜೆಕೆಟನ್ನು ಧರಿಸಿಕೊಂಡ ಒಬ್ಬ ಮನುಷ್ಯನು ಬಾಗಿಲನ್ನು ತೆರೆದು ಒಳಹತ್ತಿ, "ಸೀದಾ ಮುಂದೆ ಓಡಿಸು; ಗಲಾಟೆ ಮಾಡುವುದು ಒಳಿತಲ್ಲ,–ನನ್ನೊಡನೆ ಬಂದೂಕು ಇದೆ" ಎಂದು ಹೇಳಿದನು.

"ನಾನೊಬ್ಬ ಡಾಕ್ಟರನಾಗಿದ್ದೇನೆ. ಇದೊಂದು ವಿಶೇಷ ಜರೂರಿನ ಕೆಲಸ," ಎಂದು ಡಾ| ಆಯ್ಕ್ ಹೇಳಿದನು.

"ಮಾತಿನ ಕಡೆಯು ಲಕ್ಷ್ಯ ಬಿಟ್ಟುಬಿಡು. ಮುಂದೆ ಓಡಿಸು," ಎಂದು ಜೆಕೇಟಿನಲ್ಲಿದ್ದ ಮನುಷ್ಯನು ಹೇಳಿದನು.

ನಗರದಿಂದ ಒಂದು ಮೈಲು ದೂರದಲ್ಲಿ ಅವನು ಡಾಕ್ಟರನಿಗೆ, "ಕಾರ"ನ್ನು ನಿಲ್ಲಿಸಿ ಹೊರಹೋಗಲು, ಅಧಿಕಾರ-ಧ್ವನಿಯಲ್ಲಿ ಹೇಳಿದನು.

o o o o

ಡಾ| ವೇನ್ ಆಯ್ಕನಿಗೆ ಟೆಲಿಫೋನು ಇರುವ ಒಂದು ಸ್ಥಳವನ್ನು ಹುಡುಕಿ, ಒಂದು ಸಾರಿಗೆ ಕಂಪೆನಿಯನ್ನು, ಒಂದು "ಟೇಕ್ಸಿ" ಕಳುಹಿಸುವಂತೆ ಒಡಂಬಡಿಸಲು ಅರ್ಧ ಗಂಟೆ ತಾಗಿತು. ರೈಲ್ವೇ ನಿಲ್ದಾಣದಲ್ಲಿ ಬಂದು ನೋಡಲಾಗಿ, ಗ್ಲೆನ್ಸ್ ಫೋಲ್ಸ್‌ಗೆ ಹೋಗುವ ಬಂಡಿಯು ಹದಿನೆರಡೂ ಕಾಲು ಗಂಟೆ ವರೆಗೆ ಇರುವುದಿಲ್ಲವೆಂದು ತಿಳಿದುಕೊಂಡನು.

o o o o

ಸರ್ಜನನು ಆಸ್ಪತ್ರೆ ಸೇರುವಾಗ ಗಂಟೆ ೨ಕ್ಕೂ ಮೀರಿ ಹೋಗಿತ್ತು. ಡಾ|ಹೆಯ್ಡನನು ಅವನಿಗಾಗಿ ಕಾದುಕೊಂಡಿದ್ದನು.

"ನಾನು ನನ್ನಿಂದ ಸಾಧ್ಯವಿದ್ದಷ್ಟು ಪ್ರಯತ್ನ ಮಾಡಿದೆ; ಆದರೆ ನನ್ನ "ಕಾರು........" ಎಂದು ಡಾ| ವೇನ್ ಆಯ್ಕನು ಹೇಳುತ್ತಿರುವಷ್ಟರಲ್ಲೇ, ಡಾ| ಹೆಯ್ಡನನು ಹೇಳಿದನು: "ನಿನ್ನ ಪ್ರಯತ್ನವು ನಿನ್ನ ದಯಾಪರತೆಯನ್ನು ತೋರಿಸುತ್ತದೆ. ಹುಡುಗನು ಈಗ್ಗೆ ಒಂದು ಗಂಟೆಯ ಮೊದಲು ಮೃತಪಟ್ಟನು.

ಡಾಕ್ಟರರಿಬ್ಬರೂ ಕಾಯುವ ಕೋಣೆಯನ್ನು ದಾಟಿ ಹೋಗುತ್ತಿದ್ದಾಗ, ಡಾ| ವೇನ್ ಆಯ್ಕನು ಫಕ್ಕನೆ ನಿಂತನು. ಒಂದು ಬೆಂಚಿನ ಮೇಲೆ ತನ್ನ ತಲೆಯನ್ನು ತನ್ನ ಕೈಗಳಲ್ಲಿ ಹಿಡಕೊಂಡು, ಆ ಕಂದು ತೊಗಲಿನ ಜೆಕೆಟಿನ ಮನುಷ್ಯನು ಕುಳಿತಿದ್ದನು.

ಡಾ| ಹೆಯ್ಡನನು ಪರಿಚಯ ಮಾಡಿಕೊಡುವುದಕ್ಕಾಗಿ ಹೇಳಿದನು: "ಮಿಸ್ಟರ್ ಕನ್ನಿಂಗ್ಹೆಮ್, ನಿನ್ನ ಎದುರಿಗಿರುವವನು ಡಾಕ್ಟರ್ ವೇನ್ ಆಯ್ಕ್. ಅವನು ಅಲ್ಬಾನಿಯಿಂದ ಇಷ್ಟು ದೂರ, ನಿನ್ನ ಮಗನನ್ನು ಉಳಿಸಲು ಪ್ರಯತ್ನಿಸುವುದಕ್ಕಾಗಿ ಬಂದಿದ್ದನು!"

[Billy Rose ಇವರ "Pitching Horseshoes"ದಿಂದ ಆಯ್ದುದು.]

೩. ಪ್ರತಿಧ್ವನಿಯ ನಿಯಮ

ನಾನು ಸಣ್ಣ ಹುಡುಗನಾಗಿದ್ದಾಗ ಒಂದು ದಿನ ಶಾಲೆಯಲ್ಲಿ ಒಂದು ಜಗಳದಲ್ಲಿ ಸಿಲುಕಿಕೊಂಡೆ. ನನ್ನ ದೇಹವೂ ಮನಸ್ಸೂ ಬೆಂದುಕೊಂಡಿದ್ದುದು ಈಗಲೂ ಸ್ಪಷ್ಟವಾಗಿ ನೆನಪಿದೆ.

ನನ್ನ ಎದುರಾಳಿಯು ಭೇಟಿಯಾಗುವ ಮುಂದಿನ ಸಂದರ್ಭದಲ್ಲಿ ನಾನು ಮಾಡಲುದ್ಯುಕ್ತನಾದುದರ ಬೆದರಿಕೆಗಳನ್ನು, ನಾನು ಮನೆ ಸೇರಿದ ಮೇಲೂ ಗುಣುಗುಟ್ಟುತ್ತಿದ್ದೆ. ಶಾಲೆಯ ಕೆಲವು ಹಿರಿಯ ಹುಡುಗರು, "ಅಗೌರತೆಯು ಗಂಡು ಸತ್ವದ ಗುರುತು," ಎಂದು ಭಾವಿಸುತ್ತಿದ್ದರು. ಅಂಥವರಿಂದಲೇ ನನ್ನ ಶಬ್ದ ಸಂಪತ್ತಿಯನ್ನು, ಅಂಶಮಾತ್ರವಾದರೂ, ನಾನು ಗಳಿಸಿದ್ದಿರಬೇಕು.

ನನ್ನ ತಾಯಿಯು ವಿಶೇಷ ಗಮನವೇನೂ ಕೊಡುವಂತೆ ತೋರಿಸಿಕೊಳ್ಳದೆ, ಅವಳ ಸ್ವಾಭಾವಿಕ, ಪ್ರಶಾಂತ ರೀತಿಯಲ್ಲಿ ತನ್ನ ಕೆಲಸಗಳನ್ನು ಮಾಡುತ್ತಲೇ ಇದ್ದಳು. ಆದರೆ, ಮರುದಿವಸ ಹಳ್ಳಿಗಾಡಿನಲ್ಲಿ ನಮ್ಮ ಮನೆಯವರ ಬಯಲೂಟ (Picnic)ದ ಸಮಯದಲ್ಲಿ ಅವಳು ನನ್ನನ್ನು ಪಕ್ಕಕ್ಕೆ ಕರೆದಾಗ, ನನಗೆ ಆಶ್ಚರ್ಯವಾಯಿತು. ಅವಳು ಹೇಳಿದಳು: "ಲೂವಿಸ್, ಒಂದು ಕ್ಷಣ ಇತ್ತ ಬಾ. ನಿನಗೆ ಏನೋ ಒಂದು ತೋರಿಸಬೇಕೆಂದಿದ್ದೇನೆ."

ಕೆನಡಾದ ನ್ಯೂ ಬರ್ನ್‌ಸ್ವಿಕ್ ಬಳಿಯ ಆ ಹಳ್ಳಿ ಪ್ರದೇಶವು, ಸುತ್ತಲೂ ಒರಟೊರಟಾದ ಉನ್ನತ ಬೆಟ್ಟಗಳಿರುವ ಒಂದು ರಮಣೀಯ ಕಣಿವೆಯಲ್ಲಿದ್ದು, ಪ್ರತಿಧ್ವನಿಗೆ ಅನ್ವರ್ಥನವಾಗಿತ್ತು. ನನ್ನ ತಾಯಿಯು ನನ್ನನ್ನು ಆ "ಬೆಟ್ಟದ ಗೋಡೆ"ಗೆ ಎದುರಿರುವ ಒಂದು ಸ್ಥಳಕ್ಕೆ ಕರೆದೊಯ್ದಳು.

"ಲೂವಿಸ್, ನಿನ್ನೆ ನೀನು ಹೇಳಿದುದನ್ನು ನಾನು ಕೇಳಿರುವಂತೆ, ಈಗ ಹೇಳು."

ನಾನು ಪೇಚಿನಲ್ಲಿ ಸಿಲುಕಿದೆ. "ನನಗೆ ನೆನಪಿಲ್ಲ" ಎಂದು ಹೇಳಿದೆ

ನನ್ನ ತಾಯಿಯು ವಿವಾದಾಂಶವನ್ನು ಹೋಲಿಸಿ ಮಾತನಾಡುವವಳಲ್ಲ. ಅವಳು ಹೇಳಿದಳು: "ನನಗೆ ನೆನಪಿದೆ, 'ಹಾಳಾಗಿ ಹೋಗು,' ಎಂದು ನೀನು ಹೇಳಿದ್ದಿ.

ನಾನು ಒಪ್ಪಿಕೊಂಡೆ: "ಹೌದು; ಈಗ ನೆನಪಾಯಿತು."

ಅವಳು ಆಜ್ಞಾಪಿಸಿದಳು: "ಈಗ ಅದನ್ನು ಹೇಳು."

ನಾನು ಅದನ್ನು ಅದಷ್ಟು ಸೌಮ್ಯದಿಂದ ಅನುಕರಿಸಿದೆ. ಆ ಶಬ್ದಗಳು ಪ್ರತಿಧ್ವನಿಯಾಗಿ, ಬೆಚ್ಚು ಬೀಳಿಸುವ ಧ್ವನಿಯು ತುಂಬುವಿನಲ್ಲಿ ಮರಳಿ ಉರುಳಿದುವು.

"ಗಟ್ಟಿಯಾಗಿ, ಮಗೂ,–ಅದನ್ನು ಇನ್ನೂ ಗಟ್ಟಿಯಾಗಿ ಹೇಳು! ನೀನು ಹೇಳುವುದನ್ನು ನಿನ್ನಿಂದ ಕೂಡಿದಷ್ಟು ಗಟ್ಟಿಯಾಗಿ ಹೇಳಲು,— ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಕೂಗಲು,— ನೀನು ಸಿದ್ಧವಾಗಿರಬೇಕು!"

ಹಾಗೆ ಮಾಡುವುದು ನನಗೆ ಬೇಕಾಗಿರಲಿಲ್ಲ. ಆದರೆ, ನನ್ನ ತಾಯಿಗೆ ಅವಿಧೇಯನಾಗಿರುವುದು ನನ್ನ ಮನಸ್ಸಿಗೆ ಬರಲಿಲ್ಲ. ಆದುದರಿಂದ ಆ ಬೆಟ್ಟಗಳನ್ನೆದುರಿಸಿ, "ನೀನು ಹಾಳಾಗಿ ಹೋಗು," ಎಂದು ನನ್ನ ಶ್ವಾಸ ಕೋಶದ ಬಲವನ್ನೆಲ್ಲ ಹಾಕಿ ಕೂಗಿದೆ.

ಆ ಕೂಗು ಸಿಡಿಲಿನಂತೆ ಮರಳಿ ಬಂತು. ಒಂದು ಆಕಾಶವಾಣಿಯಂತೆ ಅದು ನನ್ನನ್ನು ದೂಷಿಸಿತು.

"ಈಗ ನೋಡು," ನನ್ನ ತಾಯಿಯು ಹೇಳಿದಳು, "ಜೀವನವು ಇದೇ ರೀತಿ ಇರುವುದು. ನಾವು ಅದಕ್ಕೆ ಹೇಳುವುದನ್ನೇ ಅದು ನಮಗೆ ಯಾವಾಗಲೂ ಹಿಂದಿರುಗಿಸುತ್ತದೆ. ಅದಕ್ಕೆ ಮತ್ತು—ನಿನ್ನ ಸಹಚರ ಮನುಷ್ಯನಿಗೆ,–'ನೀನು ಹಾಳಾಗಿ ಹೋಗು,' ಎಂದು ಕೂಗಿದರೆ, ಜೀವನ, ಮತ್ತು ನಿನ್ನ ಸಹಚರ ಮನುಷ್ಯ, ಅದನ್ನೇ ಮರಳಿ ನಿನಗೆ ಕೂಗುವರು. ನೀನು ಜೀವನಕ್ಕೆ, ಮನುಷ್ಯ ಸ್ವಭಾವಕ್ಕೆ,—'ನೀನು ಧನ್ಯನಾಗು,' ಎಂದು ಹೇಳಿದರೆ, ಆಗ ನಿನ್ನ ಜೀವನವು ಅದೇ 'ನೀನು ಧನ್ಯನಾಗು' ಎಂಬ ಶಬ್ದಗಳ ಪ್ರತಿಧ್ವನಿಯಾಗುವುದು........"

"ಲೂವಿಸ್, ನೀನು ಯಾರ ಸೇವೆ ಮಾಡಬೇಕೆಂದಿರುವಿಯೋ ಅವನನ್ನು ನೀನು ಆಯ್ದುಕೊಳ್ಳು. ನಿನಗೆ ಆರಿಸುವ ಅಧಿಕಾರ, ಶಕ್ತಿ ಇದೆ. ನೀನು ಜೀವಿಸಿರುವಷ್ಟು ಕಾಲ ನಿನಗೆ ಆ ಆಯ್ಕೆ ಇದೆ. ಪ್ರತಿ ದಿನದಲ್ಲಿ, ಬಹುಮಟ್ಟಿಗೆ ಪ್ರತಿ ಗಂಟೆಯಲ್ಲಿ ಯಾವುದೊಂದು ರೀತಿಯಲ್ಲಿ ಒಂದು ಆಯ್ಕೆಯು ನಿನಗೆ ಒಪ್ಪಿಸಲ್ಪಡುವುದು."

ಆ ಸಮಯದಲ್ಲಿ, ವಿಸ್ಮಯಗೊಳಿಸುವ ಆ ದೃಷ್ಟಾಂತದಿಂದ ನನ್ನ ಮನಸ್ಸಿನ ಮೇಲೆ ನಿಸ್ಸಂದೇಹವಾಗಿ ಹೆಚ್ಚಿನ ಪರಿಣಾಮವುಂಟಾಗಿದ್ದರೂ, ನನ್ನ ತಾಯಿಯು ನನಗೊಂದು ಬೆಳಕನ್ನು ತೋರಿಸಿಕೊಟ್ಟಿದ್ದಳು,—ದಿಟವಾದ ಸ್ಫೂರ್ತಿಕೊಡುವ ತತ್ವವನ್ನು ತೋರಿಸಿಕೊಟ್ಟಿದ್ದಳು,–ಎಂದು ನಿಜರೂಪದಲ್ಲಿ ನಾನು ಗ್ರಹಿಸಿದ್ದೆನೆಂದು ಎಣಿಸುವುದಿಲ್ಲ. ಪ್ರತಿ ಮಾನವ ಜೀವಿಯಂತೆ, ನಾನು ಕೆಲವೊಮ್ಮೆ ಜೀವನದಲ್ಲಿ ಮುಚ್ಚುಮರೆ ಮಾಡಿ ಆ ಪ್ರತಿಧ್ವನಿಯ ನಿಯಮವನ್ನು ಮೀರಿದು ಹಾಕಲು ಪ್ರಯತ್ನ ಪಟ್ಟಿರುತ್ತೇನೆ. ಆದರೆ, ನಾನು ಎಂದಿಗೂ,— ಒಮ್ಮೆಯೂ, ಜಯಶೀಲನಾಗಲಿಲ್ಲ

[ಲೂವಿಸ್ ಬಿ. ಮೇಯರ್, (ಮೆಟ್ರೊ ಗೋಲ್ಡ್ವಿನ ಮೇಯರ್ಸ್ ಖ್ಯಾತಿ) ಅವರ ಲೇಖನದಿಂದ ಆಯ್ದುದು.]

ಬಾಲಕರ ಹೊಸ ಶಾಲಾ ಕಟ್ಟಡಗಳು

ಸ್ಥಳ ಸೌಕರ್ಯ—ಆಸನಗಳ ಸೌಕರ್ಯ—ಚೆನ್ನಾಗಿ ಬೆಳಕು ಹರಿವ ಕಿಟಿಕಿಗಳು—ನಿರ್ಮಲವಾದ ನೆಲ-ಬಣ್ಣ ಬಳಿದ ಗೋಡೆಗಳು

★



ಅಮೇರಿಕದ ಒಂದು ಎಲಿಮೆಂಟರಿ ಶಾಲಾ ಕಟ್ಟಡದ ಭಾಗ. ಹವೆ ಅನುಕೂಲವಿದ್ದಾಗ ಒಮ್ಮೊಮ್ಮೆ ಶಾಲೆಯು ಹೊರಗೇ ಪಾಠಗಳನ್ನು ನಡೆಸುವರು. ಈ ಚಿತ್ರದಲ್ಲಿ, ಶಾಲಾ ಬಾಲಕರು, ಚಿಕ್ಕ ಸಸಿಗಳನ್ನು ನೆಡುವುದನ್ನು ಕಾಣಬಹುದು.

ಭಾರತದಲ್ಲಿ ಅಲ್ಲಲ್ಲಿ, ಶಿಕ್ಷಣ ಸಪ್ತಾಹಗಳು ಜರಗಿಸಲ್ಪಡುತ್ತವೆ. ಅಂತಹ ಸಪ್ತಾಹಗಳಲ್ಲಿ, ಉಪನ್ಯಾಸ, ಪ್ರದರ್ಶನ, ವಿವಿಧ ವಿನೋದಾವಳಿಗಳ ಕಾರ್ಯಕ್ರಮಗಳಿರುವುವು. ಉಪನ್ಯಾಸಗಳಲ್ಲಿ, ಶಿಕ್ಷಣಕ್ಕೆ ಸಂಬಂಧಿಸಿದ ಹಲವು ವಿಷಯಗಳು ಚರ್ಚಿಸಲ್ಪಡುವುವು. ಇಂತಹ ಶಿಕ್ಷಣವಾದಗಳು ಅನೇಕ ವರ್ಷಗಳಿಂದ ಜರಗುತ್ತಿದ್ದರೂ, ಆ ವಾರಗಳ ದೆಸೆಯಿಂದ ಅಲ್ಲಲ್ಲಿಯ ಸಾವಿರಾರು ವಿದ್ಯಾರ್ಥಿಗಳು ಮಾತ್ರ ಎಷ್ಟು ಪ್ರಯೋಜನ ಹೊಂದುತ್ತಿರುವರೆಂಬ ಸ್ಪಷ್ಟ ದಾಖಲೆಗಳಿಲ್ಲ.

ಬಾಲಕರ ಸಪ್ತಾಹವೆಂಬುದು ಮಾತ್ರ ಭಾರತಕ್ಕೆ ಹೊಸದು. ಕೆಲಕಾಲದ ಹಿಂದೆ ಮುಂಬಯಿಯಲ್ಲಿ, ಇಂತಹ ಒಂದು

ಚೆನ್ನಾಗಿ ಬೆಳಕು ಹರಿವ ಕಿಟಿಕಿಗಳ ಕೊಠಡಿಯಲ್ಲಿ ಪಾಠ ನಡೆಯುತ್ತಿದೆ. ಮಾಡಿನ ಮಧ್ಯದಿಂದಲೂ ಬೆಳಕು ಬೀಳುವುದು. ಈ ಚಿತ್ರದ ಬಲದಲ್ಲಿ, ಅಧ್ಯಾಪಕಿಯು ಬಾಲಕರ ಚಿತ್ರಗಳನ್ನು ಪರೀಕ್ಷಿಸುತಿದ್ದಾಳೆ.



ಇದು, ಶಾಲಾ ಕೊಠಡಿಯ ಇನ್ನೊಂದು ಪಾರ್ಶ್ವ. ಬೆಳಕಿನ ದೊಡ್ಡ ಕಿಟಕಿಗಳು, ಇನ್ನೊಂದು ಕಡೆಯಲ್ಲಿವೆ. ವಿದ್ಯಾರ್ಥಿಗಳ 'ಡೆಸ್ಕ್' ಗಳ ಸೌಕರ್ಯವನ್ನು ಇಲ್ಲಿ ಕಾಣಬಹುದು. ಕರಿಹಲಗೆಯ ಉದ್ದಳತೆಗಳನ್ನೂ ಗಮನಿಸಿರಿ.



ಸಪ್ತಾಹವು ಜರಗಿಸಲ್ಪಟ್ಟಿತು. ಪ್ರಧಾನಾಮಾತ್ಯ ಪಂಡಿತ ನೆಹರುಗಳವರು ಈ ಸಪ್ತಾಹದ ಉದ್ಘಾಟನೆ ನಡೆಸಿದರು. ಈ ಸಪ್ತಾಹದಲ್ಲಾದರೆ ಎಲ್ಲ ಲಕ್ಷ್ಯವೂ ಬಾಲಕರ ಮೇಲೇ ಇತ್ತು ಮತ್ತು ಭೂಲೋಕದ ಬೇರೆ ಬೇರೆ ಕಡೆಗಳಲ್ಲಿ ಬಾಲಕರು ಹೇಗೆ ಜೀವಿಸುವರು, ಏನು ಮಾಡುತ್ತಿರುವರು ಎಂಬುದು ವಿಶದಮಾಡಲ್ಪಟ್ಟಿತು.

ಅಮೇರಿಕದಲ್ಲಿ ಇಂತಹ ದಿನಾಚರಣೆಯು ಪ್ರತಿ ವರ್ಷ, ಅಕ್ಟೋಬರ ತಿಂಗಳ ಮೂರನೇ ರವಿವಾರದಂದು ಜರಗುವುದು. ಆ ದಿನದಲ್ಲಿ ಅಮೇರಿಕದ ದೇವಾಲಯಗಳು ಕೂಡ, ಬಾಲಕರ ಆವಶ್ಯಕತೆಗಳ ಕಡೆಗೆ ಮಹಾಜನರ ಹಾಗು ಸರಕಾರದ ಲಕ್ಷ್ಯವನ್ನು ಸೆಳೆಯುವುವು; ಆ ಆವಶ್ಯಕತೆಗಳನ್ನು ಹೇಗೆ ಪೂರೈಸಿಕೊಳ್ಳಬಹುದೆಂಬ ಸೂಚನೆಗಳನ್ನೂ ಕೊಡುವುವು. ಸಾಮಾಜಿಕ ಸಂಸ್ಥೆಗಳೂ ಕೂಡ ಇಂತಹ ದಿನಾಚರಣೆಯಂದು ಚಟುವಟಿಕೆ ತೋರುವುವು.

ಬಾಲಕರ ಆವಶ್ಯಕತೆಗಳೇನು? ಬಾಲಕರ ಆರೋಗ್ಯದ ವಿಷಯವಾಗಿ ಹೆಚ್ಚಿನ ಜಾಗರೂಕತೆ ಮತ್ತು ಅವರಿಗೆ ಚಿಕಿತ್ಸಾ ಸೌಲಭ್ಯಗಳು; ಆಧುನಿಕ ರೀತಿಯ ಶಾಲಾ ಕಟ್ಟಡಗಳು; ಉತ್ತಮ ತರದಲ್ಲಿ ಶಿಕ್ಷಣಕೊಡುವ, ನೈತಿಕಾಚರಣೆಯಲ್ಲಿ ಪರಿಶುದ್ಧರಾಗಿರುವ ಚಾಣಾಕ್ಷ ಉಪಾಧ್ಯಾಯರು; ಬಾಲಕರ ಮನೋಸ್ವಾಸ್ಥ್ಯ ಮತ್ತು ಮಾನಸಿಕ ಆರೋಗ್ಯದ ಸ್ವಚ್ಛತೆಯ ವ್ಯವಸ್ಥೆ; ಉತ್ತಮ ವಿಹಾರಸ್ಥಳಗಳು; ಅಂತರ್-ಸಾಂಸ್ಕೃತಿಕ ಶಿಕ್ಷಣ; ಬಾಲಕರು ಗುಂಪುಗಳಾಗಿ ಕೆಲಸಮಾಡುವಂತೆ, ಜೀವಿಸುವಂತೆ ಕಲಿಸುವುದು ಮತ್ತು ಇತರರೊಡನೆ ಸ್ನೇಹಮಯ ಸಂಬಂಧವಿಟ್ಟುಕೊಳ್ಳುವಂತೆ ಕಲಿಸುವುದು.

ಎಲ್ಲದಕ್ಕಿಂತಲೂ ಮುಖ್ಯವಾದುದು ಬುನಾದಿಶಿಕ್ಷಣ. ಅಮೇರಿಕದಲ್ಲಿ ಇಂತಹ ಶಿಕ್ಷಣ ಕೊಡಲು ಯತ್ನಗಳು ನಡೆದೇ ಇವೆ. ಈ ಶಿಕ್ಷಣ ಕೊಡುವಾಗ, ತಕ್ಕ ಶಾಲಾ ಕಟ್ಟಡಗಳನ್ನೊದಗಿಸುವುದೂ ಆದ್ಯ ಕರ್ತವ್ಯವಾಗಿದೆ.

ಅಮೇರಿಕದಲ್ಲೀಗ, ಹೊಸ ತರದ ಎಲಿಮೆಂಟರಿ ಶಾಲಾ ಕಟ್ಟಡಗಳ ರಚನೆಯಾಗುತ್ತಿದೆ. ಇಂತಹ ಶಾಲಾ ಕಟ್ಟಡಗಳಿಗೆ, ನೆಲದಿಂದ ಮೇಲ್ಕಟ್ಟಿನ ವರೆಗೆ, ಅತಿ ಎತ್ತರದ ಕಿಟಕಿಗಳಿವೆ ಗಾಜಿನ ಹರಳುಗಳನ್ನಿರಿಸಿ, ಮಳೆಗಾಲ-ಚಳಿಗಾಲಗಳಲ್ಲೂ ಕೊಠಡಿಯೊಳಗೆ ಚೆನ್ನಾಗಿ ಬೆಳಕು ಬೀಳುವಂತೆ ಮಾಡಿರುವರು. ಡಿಯರ್‌ಫೀಲ್ಡ್ ಎಂಬಲ್ಲಿ ಕಟ್ಟಿಸಿರುವ ಇಂತಹ ಒಂದು 'ಬಾಲವನ'ದಲ್ಲಿ, ಆರು ತರಗತಿಗಳಿವೆ; ಎಂಟು ಶಾಲಾ ಕೊಠಡಿಗಳಿವೆ; ಎಲ್ಲ ಮಕ್ಕಳು ಆಟದ ಸಮಯದಲ್ಲಿ ಉಪಯೋಗಿಸುವ ಒಂದು ಕೊಠಡಿ ಮತ್ತು ಉಪಾಹಾರಗೃಹವಿದೆ; ಒಂದು ಆಫೀಸು, ಒಂದು ಅಧ್ಯಾಪಕರ ಕೊಠಡಿ, ಒಂದು ದಾದಿಗಳ ಕೊಠಡಿ-ಇಷ್ಟು ಇವೆ. ಮಕ್ಕಳ ಐದನೇ ವರ್ಷದಿಂದ ಹನ್ನೊಂದನೇ ವರ್ಷದ ವರೆಗೆ ಅಲ್ಲಿ ತರಬೇತಿ ಕೊಡುವರು.

ಶಾಲಾ ಕೊಠಡಿಗಳು ವಿಶಾಲವಾಗಿವೆ, ಚೌಕಾಕಾರವಾಗಿವೆ. ಮಕ್ಕಳ ಸೌಕರ್ಯಕ್ಕೆ ತಕ್ಕುದಾಗಿ ಆಸನಗಳಿವೆ. ನೆಲದಿಂದ ಮಾಡಿನ ವರೆಗಿನ ಕಿಟಕಿಗಳಲ್ಲದೆ, ಮಾಡಿನ ಮಧ್ಯೆ ಹವೆಯಾಡಲು ತೆರೆದ ಕಿಟಕಿಗಳಿವೆ. ಇಟ್ಟಂಗಿ ಮತ್ತು ಕೊಂಕ್ರೀಟಿನಿಂದ ಈ ಕಟ್ಟಡವನ್ನು ಕಟ್ಟಿಸಿ, ಒಳಗಡೆ ನಯನಮನೋಹರವಾದ ಬಣ್ಣಗಳನ್ನು ಬಳೆದಿರುವರು.

ಮಕ್ಕಳು, ತಮ್ಮ ಮಧ್ಯಾಹ್ನದ ಊಟಗಳನ್ನು ಹೊತ್ತು ತರುವರು. ಉಪಾಹಾರಗೃಹದಿಂದ ಹಾಲು ಮತ್ತು ಐಸ್‌ಕ್ರೀಮನ್ನು ಅಲ್ಲಿ ಬಡಿಸುತ್ತಾರೆ.

ಇಂತಹ ಶಾಲಾ ಕಟ್ಟಡಗಳನ್ನು ಭಾರತದಲ್ಲೂ ಕಟ್ಟಿಸಲು ಸಾಧ್ಯವಿದೆ. ಇನ್ನು ರಚಿಸಲ್ಪಡುವ ಹೊಸ ಕಟ್ಟಡಗಳೆಲ್ಲ ಇದೇ ತೆರನಾಗಿರುವಂತೆ, ಸಂಬಂಧಪಟ್ಟವರು ನಿರ್ಧರಿಸಬೇಕಾಗಿದೆ.



ಗಾಂಧೀಜಿಯವರು ಹೇಗೆ ಮಹಾತ್ಮರಾದರು?

(ಲೇಖಕರು: **ಡಿ. ಪುಟ್ಟಸ್ವಾಮಿ**, ಸಂಪಾದಕ, "ವಿವೇಕಾಭ್ಯುದಯ" ಮಂಗಳೂರು.)

ಭಾರತವರ್ಷದ ಮಹಾನ್ ರತ್ನಗಳಲ್ಲಿ ಮಹಾತ್ಮಾ ಮೋಹನದಾಸ ಕರಮಚಂದ ಗಾಂಧೀಜಿಯವರೊಬ್ಬರು. ಅವರು ಭಾರತರಾಷ್ಟ್ರದ "ಬಾಪು"ಗಳಾಗಿದ್ದರು. ಅವರು ಭಾರತಮಾತೆಯ ಕಾಲುಗಳಿಗೆ ತೊಡಿಸಿದ ದಾಸ್ಯಶೃಂಖಲೆಗಳನ್ನು ಮುರಿದುದು ಮಾತ್ರವಲ್ಲ, ಭಾರತೀಯರಲ್ಲಿ ಆತ್ಮವಿಶ್ವಾಸವನ್ನೂ ಜಾಗೃತಗೊಳಿಸಿದರು. ಭಾರತೀಯರ ಹೃದಯ ಮಂದಿರಗಳಲ್ಲಿ ತೀರ್ಥಂಕರ ಮಹಾವೀರ ಮತ್ತು ಮಹಾತ್ಮಾ ಬುದ್ಧರ ಅಹಿಂಸೆ ಮತ್ತು ಸತ್ಯಸದೃಶ ಪಾವನ ಸಿದ್ಧಾಂತಗಳ ಪುಣ್ಯ ಪ್ರತಿಷ್ಠೆ ಮಾಡಿದರು. ಆ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಕ್ರಿಯಾತ್ಮಕ ರೂಪ ಕೊಟ್ಟು ಮೂರ್ತಿಮತ್ತವನ್ನಾಗಿ ಮಾಡಿದರು. ಅವರ ಅಹಿಂಸಾಮಾರ್ಗದ ಮಹತ್ವಕ್ಕೆ ವಿದೇಶಿಯರೂ ತಲೆದೂಗಿ ಅವರ ಆದರ್ಶದಲ್ಲಿ ತಮ್ಮ ಸ್ವಂತ ಹಿತದ ಸತ್ಯವನ್ನು ಕಂಡುಕೊಂಡರು.

ಗಾಂಧೀಜಿಯವರು ಜನಿಸಿರುವಾಗಲೇ ಮಹಾತ್ಮರಾಗಿ ಹುಟ್ಟಿದುದಲ್ಲ. ಸಾಕಷ್ಟು ಖ್ಯಾತಿಪಡೆದ ನಂತರವೂ ತನ್ನನು ತಾನು ಮಹಾತ್ಮನೆಂದು ಅವರು ತಿಳಿದುಕೊಂಡಿರಲಿಲ್ಲ. ಆದರೆ ಅವರ ಗುಣಗಳು ಮತ್ತು ಕರ್ಮಗಳು ಎಷ್ಟರ ಮಟ್ಟಿಗೆ ವಿಕಸಿತ ಮತ್ತು ಸಾರ್ವಭೌಮಿಕವಾಗಿದ್ದುವೆಂದರೆ, ಅವರಲ್ಲಿ ಜನತೆ ಮಹಾತ್ಮನ ಸಾಕ್ಷಾತ್ಕಾರವನ್ನು ಕಂಡಿತು. ದೈನಿಕ ಜೀವನದ ಪ್ರತಿಯೊಂದು ಕಾರ್ಯವನ್ನು ಧರ್ಮದಿಂದ ಅನುರಂಜಿತವನ್ನಾಗಿಟ್ಟುಕೊಂಡಿದ್ದರು. "ಧರ್ಮವೇ ಜೀವನ, ಜೀವನವೇ ಧರ್ಮ" ಎಂಬ ಉಚ್ಚ ತತ್ತ್ವವನ್ನು ಅವರು ಪ್ರತಿಪಾದಿಸಿದ್ದರು. ಧರ್ಮವನ್ನು ಮರೆತು ಯಾರೂ ಉನ್ನತಿಯನ್ನು ಹೊಂದಲಾರರು, ಜೀವನದ ಮೌಲಿಕ ಸಿದ್ಧಾಂತಗಳಿಗೂ ಧರ್ಮವು ಆಧಾರವಾಗಿದೆ ಎಂಬುದನ್ನು ಅವರು ಒಂದು ಕ್ಷಣವೂ ಮರೆತುದಿಲ್ಲ.

ಜನ್ಮತಃ ಮಹಾತ್ಮರಾಗಿರದಿದ್ದರೂ ಜೀವನದಲ್ಲಿನ ಎಂತಹ ಕಠಿಣಪ್ರಸಂಗಗಳಲ್ಲಿಯೂ, ಸಂಕಟಕಾಲದಲ್ಲಿಯೂ



ಸತ್ಯವನ್ನು ಬಿಡದಂತಹ ಉಚ್ಚಶ್ರೇಣಿಯ ವಿವೇಕವನ್ನು ಪೂರ್ವಜನ್ಮದ ಸುಕೃತಫಲವಾಗಿ ಹುಟ್ಟಿನಲ್ಲಿಯೇ ಪಡೆಕೊಂಡು ಬಂದಿದ್ದರು. ಅವರ ಸೌಭಾಗ್ಯಾತಿಶಯದಿಂದಲೋ ಎಂಬಂತೆ, ವಿವೇಕದ ಪ್ರತಿಮೂರ್ತಿಯಂತಿದ್ದ ಪುತ್ಥಳಿಬಾಯಿಯ ಉದರದಲ್ಲೇ ಜನಿಸಿ, ಅವರ ಲಾಲನೆಪಾಲನೆಯಲ್ಲೇ ಬಳೆಯುವ ಸುಕೃತ ಗಾಂಧೀಜಿಯವರಿಗೆ ಲಭಿಸಿತು. ಪುತ್ಥಳಿ ಬಾಯಿಯಿಂದ ಹೊಂದಿದ ಆ ಸಂಸ್ಕಾರಬಲದಿಂದಲೇ ಲೋಕದಲ್ಲೆಲ್ಲಾ "ಮಹಾತ್ಮಾ" ಖ್ಯಾತಿಯನ್ನು ಅವರು ಪಡೆದರೆಂದರೂ ಅತಿಶಯೋಕ್ತಿಯಾಗಲಾರದು.

ಪುತ್ಥಳಿಬಾಯಿಯ ಗುರು ಶ್ರೀ ಬೇಚರಸ್ವಾಮಿಯು ಓರ್ವ ಜೈನಸಾಧುಗಳಾಗಿದ್ದರು. ಅವರಿಂದ ಧರ್ಮದ ವೈಜ್ಞಾನಿಕ ಸ್ವರೂಪವನ್ನು ಪುತ್ಥಳಿಬಾಯಿ ತಿಳಿದುಕೊಂಡಿದ್ದರು. ಗಾಂಧೀಜಿಯವರು ಕೂಡಾ ಅವರ ಪ್ರಭಾವದಿಂದ ವಂಚಿತರಾಗಲಿಲ್ಲ. ತನ್ನ "ಆತ್ಮಕಥೆ"ಯಲ್ಲಿ ಗಾಂಧೀಜಿಯವರೇ ಸ್ವತಹ ಬರೆದಿದ್ದಾರೆ: "ನನಗೆ ವಿಲಾಯಿತಿಗೆ ಹೋಗುವ ಪ್ರಸಂಗ ಬಂದಾಗ ನನ್ನ ಮಾತೆಯು ಈ ರೀತಿ ಹೇಳಿ

ದರು—"ನನಗೆ ನಿನ್ನ ಮೇಲೆ ವಿಶ್ವಾಸವಿದೆ ಕಂದಾ! ಆದರೆ ದೂರ ವಿದೇಶದಲ್ಲಿ ಹೇಗೆ ನಡೆಯಬೇಕು?—ಈ ಕಡೆ ಏನು ಹೇಳುವುದೆಂದು ನನ್ನ ಮಂದಮತಿಗೆ ಹೊಳೆಯುವುದಿಲ್ಲ. ನಾನು ಬೇಚರಜೀ ಸ್ವಾಮಿಯವರೊಡನೆ ಕೇಳುತ್ತೇನೆ."

"ಬೇಚರ ಸ್ವಾಮಿಜಿಯವರು ಬನಿಯರಾಗಿದ್ದು ಆ ಮೇಲೆ ಜೈನಸಾಧುಗಳಾಗಿದ್ದರು. ಅವರು ನನ್ನ ತಾಯಿಯ ಸಲಹಕಾರರೂ ಆಗಿದ್ದರು. ಅವರು ನನಗೆ ತುಂಬಾ ಸಹಾಯ ಮಾಡಿದ್ದಾರೆ. ಅವರು ಹೇಳಿದರು—"ನಾನು ಅವನಿಂದ ಮೂರು ಮೂರು ವಿಷಯಗಳ ಕುರಿತು ಪ್ರತಿಜ್ಞೆ ಪಡೆಯುತ್ತೇನೆ. ಅನಂತರ ಅವನನ್ನು ಕಳುಹಿಸಿ ಕೊಡಲು ಯಾವುದೇ ಅಡ್ಡಿ ಇರುವುದಿಲ್ಲ." ತದನುಸಾರ ಮಾಂಸ, ಮದಿರೆ ಮತ್ತು ಸ್ತ್ರೀ—ಈ ಮೂರು ವಿಷಯಗಳಿಂದ ದೂರವಿರುವೆನೆಂದು ನಾನು ಪ್ರತಿಜ್ಞೆ ಕೈಕೊಂಡೆ."

ಗಾಂಧೀಜಿಯವರು ಈ ಪ್ರತಿಜ್ಞೆಗಳ ಪಾಲನೆಯನ್ನು ಆಜನ್ಮ ಮಾಡಿದರು. ಆ ಕಾರಣದಿಂದಲೇ ಅವರ ಮಹತ್ವ ಜಗದ್ವ್ಯಾಪಿಯಾಯಿತು. ಗಾಂಧೀಜಿಯವರ ಅಹಿಂಸಾ ಜೀವನದ ನಿರ್ಮಾಣ ನಿಸ್ಸಂದೇಹವಾಗಿಯೂ ಭಗವಾನ್ ಮಹಾವೀರೋಪದಿಷ್ಟ ಅಹಿಂಸಾದಿ ಅಣುವ್ರತಗಳ ಆಧಾರದ ಮೇಲೆ ಆಯಿತು.



ಶತಾವಧಾನಿ ಶ್ರೀಮತ್ ರಾಜಚಂದಜೀಯವರು

(ಇವರು ತಮ್ಮ ೧೯ನೇ ವಯಸ್ಸಿನಲ್ಲಿ ಬೊಂಬಾಯಿ ನಗರದಲ್ಲಿ ಡಾ। ಪೀಟರ್‌ಸನ್ನರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿದಾಗ, ಸ್ಮರಣಶಕ್ತಿಯಿಂದ ೧೦೦ ಪ್ರಯೋಗಗಳನ್ನು ಪ್ರದರ್ಶಿಸಿದರು. ವಿವಿಧ ಭಾಷೆಗಳಲ್ಲಿ ಶಬ್ದಗಳ ಪುನರುಚ್ಚರಣೆ, ಕವನಗಳನ್ನು ರಚಿಸಿ, ಹಾಡಿತೋರಿಸಿದರು.)

ವಿಲಾಯಿತಿಯಿಂದ ಮರಳಿದ ನಂತರ ಅವರಿಗೆ ಜೈನಕವಿ ಶತಾವಧಾನಿ ರಾಯಚಂದ್ರಜೀಯವರ ಸಂಪರ್ಕವಾಯಿತು ಮತ್ತು ಆ ಮಹಿಮರ ಸತ್ಸಂಗದ ಲಾಭವನ್ನು ಗಾಂಧೀಜಿಯವರು ಪಡೆಯದಿರಲಿಲ್ಲ. ಗಾಂಧೀಜಿಯವರೇ ಸ್ವತಹ ಬರೆದಿದ್ದಾರೆ: "ಅನೇಕ ಮಂದಿ ಧರ್ಮಾಚಾರ್ಯರ ಸಂಪರ್ಕವು ನನಗಾಗಿದೆ. ಪ್ರತಿಯೊಂದು ಧರ್ಮದ ಆಚಾರ್ಯರನ್ನು ಭೇಟಿಯಾಗುವ ಪ್ರಯತ್ನವನ್ನೂ ನಾನು ಮಾಡಿರುತ್ತೇನೆ. ಆದರೆ ರಾಯಚಂದಭಾಯಿಯ ಸಮಾಗಮದಿಂದ ನನ್ನ ಮನಸ್ಸಿನ ಮೇಲೆ ಉಂಟಾದ ಚಿರಸ್ಮರಣೀಯ ಅನುಭವ ಬೇರಾವ ಧರ್ಮಗುರುಗಳ ಸಾನಿಧ್ಯದಿಂದಲೂ ಉಂಟಾದದಿಲ್ಲ.......ರಾಯಚಂದಭಾಯಿಯು ತನ್ನ ಸಜೀವ ಸಂಸರ್ಗದಿಂದ, ಟಾಲ್‌ಸ್ಟಾಯಿಯು "ದೇವತ್ವವು ನಿಮ ಹೃದಯದಲ್ಲಿದೆ" ಎಂಬ ಪುಸ್ತಕದಿಂದ ಮತ್ತು ರಸ್ಕಿನನು "ಅಂಟು ದಿಸ್ ಲಾಸ್ಟ್— ಸರ್ವೋದಯ" ಎಂಬ ಪುಸ್ತಕದಿಂದ ಚಕಿತಗೊಳಿಸಿದ್ದಕ್ಕಿಂತಲೂ ಅತಿಶಯವಾಗಿ ನನ್ನನ್ನೂ ಚಕಿತನನ್ನಾಗಿ ಮಾಡಿರುತ್ತಾರೆ.

ಶ್ರೀಮತ್ ರಾಜಚಂದ್ರಜೀಯವರ ವಿಷಯದಲ್ಲಿ ಮಹಾತ್ಮಾಗಾಂಧಿಯವರು ಇನ್ನೂ ಹೇಳಿದುದೇನೆಂದರೆ ನಾವೆಲ್ಲರೂ ಪ್ರಾಪಂಚಿಕ ಸಂಸಾರಿಗಳಾಗಿದ್ದರೆ ಶ್ರೀ ರಾಜಚಂದ್ರರು ಸಂಸಾರಬಾಹಿರರಾಗಿದ್ದರು. ನಾವು ಅಸ್ತಿತ್ವಕ್ಕಾಗಿ ಅನೇಕ ಪರಿಸ್ಥಿತಿಗಳಲ್ಲಿ ಚಡಪಡಿಸುತ್ತಿದ್ದರೆ, ಶ್ರೀಯವರು ಕೇವಲ ಇಹಜೀವನದ ಮೋಕ್ಷಗಾಮಿಗಳಾಗಿದ್ದರು. ನಾವು ಮೋಕ್ಷದಿಂದ ದೂರವಾಗಿದ್ದರೆ, ಶ್ರೀಯವರು ಬಿರುಗಾಳಿಯೋಪಾದಿ ಮೋಕ್ಷದ ಕಡೆಗೆ ಸೆಳೆಯಲ್ಪಡುತ್ತಿದ್ದರು. ಅವರ ಲೇಖನಗಳಲ್ಲೆಲ್ಲಾ ಜೀವನದ ಸ್ವಾನುಭವಗಳು ಒಡೆದು ಹೊರಹೊಮ್ಮುತ್ತಿದ್ದುವು. ಹಿಂದೂಧರ್ಮೀಯನಾಗಲೀ ಅಥವಾ ಇನ್ನಿತರ ಧರ್ಮೀಣ ವ್ಯಕ್ತಿಯಾಗಲೀ ರಾಜಚಂದ್ರರ ಲೇಖನಗಳನ್ನೋದುವುದರಿಂದ ಸಂಸಾರದ ಕಷ್ಟಕ್ಲೇಶಗಳನ್ನು ತೊಲಗಿಸಿ, ಕರ್ತವ್ಯನಿಷ್ಠನಾಗಲು ಅವನನ್ನು ಈ ಲೇಖನಗಳು ಪ್ರೇರೇಪಿಸುತಿದ್ದುವು."

ಜೈನಗುರುಗಳ ಮತ್ತು ಕವಿಗಳ ಸತ್ಸಂಗ ಮತ್ತು

ಅಮೇರಿಕದ ರಂಗಭೂಮಿಕಲೆಗಳ ಕೇಂದ್ರ

ಕಳೆದ ಒಂಭತ್ತು ವರ್ಷಗಳಿಂದ, ಅಮೇರಿಕದ ಮಹಾ ನಗರದ ನ್ಯೂಯೊರ್ಕ್‌ದಲ್ಲಿ, ಜನರ ಸಾಂಸ್ಕೃತಿಕ ಜೀವನದ ಒಂದು ಅಂಗವಾಗಿ ಹೊಸ ತರದ ವಿನೋದಾವಳಿಗಳ ಚಟುವಟಿಕೆಗಳು ನಡೆದಿವೆ. ಲಾಭವಿಲ್ಲದೆ ನಡೆಸಲ್ಪಡುವ, ಸರಕಾರದ ದ್ರವ್ಯ ಸಹಾಯವಿಲ್ಲದೆ ಪ್ರಗತಿಹೊಂದುತ್ತಿರುವ ಸಂಗೀತ ಮತ್ತು ನಾಟಕಗಳ "ಸಿಟಿ ಸೆಂಟರ್" ಸಂಸ್ಥೆ ಇಂದು, ಅಲ್ಲಿಯ ಜನಜೀವನದಲ್ಲಿ ಹೊಸ ಅಧ್ಯಾಯವನ್ನು ತೆರೆದಿದೆ.

ಈ ಕಲಾಕೇಂದ್ರದಲ್ಲಿ ರಂಗಭೂಮಿಗೆ ಸಂಬಂಧಪಟ್ಟ ಎಲ್ಲ ಕಲೆಗಳಿಗೆ ಸ್ಥಾನವಿದೆ. ಅತ್ಯುಚ್ಚ ಶ್ರೇಣಿಯ ಅಭಿನಯ-ನೃತ್ಯ-ಸಂಗೀತ-ಇವುಗಳನ್ನು ಸರ್ವ ಸುಲಭ ದರದಲ್ಲಿ ಜನತೆಗೊದಗಿಸುವುದೇ ಈ ಕಲಾಕೇಂದ್ರದ ಉದ್ದೇಶವಾಗಿರುತ್ತದೆ.

ನಗರದ ಈ ಕಲಾ ಕೇಂದ್ರವು, ವರ್ಷದಲ್ಲಿ ಒಂಭತ್ತು ತಿಂಗಳ ಕಾಲವಾದರೂ ತೆರೆದಿರುತ್ತದೆ. ಈ ಸಂಸ್ಥೆಗೆ ಸಂಬಂಧಪಟ್ಟ ನಾಲ್ಕು ಕಂಪೆನಿಗಳು, ತಮ್ಮ ಕಾರ್ಯಕ್ರಮವನ್ನು, ಅವಶ್ಯವಿದ್ದಂತೆ ಬದಲಾಯಿಸಿ, ನಿರ್ಧರಿಸುವುವು. ಶರತ್ಕಾಲದಲ್ಲಿ ಎಂಟು ವಾರಗಳ ತನಕ ಸಂಗೀತ ನಾಟಕಗಳಿರುವುವು; ಆ ಮೇಲೆ ಎರಡು ವಾರ, ಆಧುನಿಕ ನೃತ್ಯ ಪ್ರದರ್ಶನಗಳು; ಚಳಿಗಾಲದಲ್ಲಿ ಸಂಗೀತ ಹಾಗು ಕಥಾ ಮಿಶ್ರಿತ ನೃತ್ಯಗಳು; ಆ ಮೇಲೆ ಪುನಃ ನಾಟಕಗಳು.

ಈ ಕಲಾಕೇಂದ್ರದ ಎಲ್ಲ ಕಾರ್ಯಕ್ರಮಗಳಿಗೆ ಪ್ರವೇಶ ದರಗಳು ಇತರ ಕಂಪೆನಿಗಳವರಿಗಿಂತ ಮೂರನೇ ಒಂದಂಶ ಕಡಿಮೆಯಿರುತ್ತವೆ. ನಾಟಕಗೃಹದಲ್ಲಿ ಸುಮಾರು 3010 ಜನರಿಗೆ ಸ್ಥಳಾನುಕೂಲತೆಯಿದೆ. ಸಾಮಾನ್ಯ ನಾಟಕ ಗೃಹಗಳಲ್ಲಿ ಒಂದು ಅಥವಾ ಒಂದೂವರೆ ಸಾವಿರಕ್ಕಿಂತ ಹೆಚ್ಚು ಜನರು ಕುಳಿತುಕೊಳ್ಳಲಾಗುವುದಿಲ್ಲ. ಈ ಅಧಿಕ ಸ್ಥಳದಿಂದ ದೊರೆತ ಹಣದ ಉಪಯೋಗವು ಪ್ರೇಕ್ಷಕರಿಗೇ ದೊರೆವಂತೆ ದರಗಳು ಕಡಿಮೆಯಿರುವುವು.

ನಟೀ-ನಟರಾದರೂ ಅತ್ಯಲ್ಪ ವೇತನಪಡೆದು ಇಲ್ಲಿ ಸೇವೆಯೊಪ್ಪಿಸುತ್ತಾರೆ. ಹಾಗೆಯೇ ದೃಶ್ಯಾವಳಿಗಳನ್ನು ತಯಾರಿಸುವವರೂ, ಬಡಗಿಗಳೂ, ಪೋಷಾಕುಗಳನ್ನು ತಯಾರಿಸುವವರೂ, ಸಂಗೀತ ನಿರ್ದೇಶಕರೂ, ಎಲ್ಲರೂ ತಮ್ಮ ಪ್ರತಿಫಲದಲ್ಲಿ ರಿಯಾಯಿತಿ ತೋರುವರು. ನಟರು, ಇತರ ಕಡೆಗ


ಆದರ್ಶ ಜೀವನಗಳ ಪ್ರಭಾವ ಗಾಂಧೀಜಿಯವರ ಜೀವನದ ಮೇಲೆ ತುಂಬಾ ಆಗಿತ್ತೆಂಬುದು ನಿರ್ವಿವಾದ. ಜೈನಧರ್ಮದ ಸಹಾಯದಿಂದ ಸತ್ಯದ ದರ್ಶನ ಪಡೆಯುವುದರ ಕಡೆ ಗಾಂಧೀಜಿ ಸಾಫಲ್ಯ ಹೊಂದಿದರು. ಜೈನ ತತ್ತ್ವಜ್ಞಾನದ ಜ್ಯೋತಿಯ ಸಹಾಯದಿಂದ ಗಾಂಧೀಜಿಯವರು ಎಲ್ಲಾ ಮತಮತಾಂತರಗಳ ತಮೋಮಯ ಭಾವನೆಗಳನ್ನು ಹೋಗಲಾಡಿಸಿ, ಜಗತ್ತಿನಲ್ಲಿ ಸಮನ್ವಯದೃಷ್ಟಿ ಪ್ರಧಾನವಾಗುವಂತೆ ಮಾಡಿದರು. ಪರಸ್ಪರ ಸಹಯೋಗ, ಸಹಿಷ್ಣುಭಾವ ಮತ್ತು ಸತ್ಯನಿಷ್ಠೆಗಳಿಂದಲೇ ಮಾನವನು ತನ್ನ ಹಾಗೂ ಲೋಕದ ಕಲ್ಯಾಣವನ್ನುಂಟುಮಾಡಲು ಶಕ್ತನಾಗುತ್ತಾನೆ ಎಂಬ ವಿಶಾಲ ತತ್ತ್ವವನ್ನು ಜಗತ್ತಿಗೆ ಸಾರಿದರು.

ಇಚ್ಛಾ ನಿರೋಧದಲ್ಲೇ ಸುಖವಿದೆಯೆಂಬುದನ್ನರಿತು ಗಾಂಧೀಜಿಯವರು ತಮ್ಮ ಜೀವನದಲ್ಲಿ ಇಚ್ಛೆಗಳನ್ನು ಸಂಪೂರ್ಣ ಜಯಿಸಿದ್ದರು. ತನ್ನೊಂದಿಗೆ ಬರೀ ನಾಲ್ಕು ಕಾಸುಗಳನ್ನು ಸಹ ಇಟ್ಟುಕೊಳ್ಳುತ್ತಿರಲಿಲ್ಲ. ಆದರೆ ಇಂದು ಬಾಯಲ್ಲಿ "ಜೈ" ಎನ್ನುತ್ತ ಭಾರತೀಯರು ಹುಚ್ಚರಂತೆ ಹಣದ ಬೆನ್ನು ಹತ್ತುತ್ತಿರುವ ದೃಶ್ಯ ಕಣ್ಣು ಕುಕ್ಕಿಸುತ್ತಿದೆ. ಹಣಕ್ಕಾಗಿ ದೇಶ ಮತ್ತು ಧರ್ಮಗಳ ಕಡೆಗೆ ಕಣ್ಮುಚ್ಚಿ ಕುಳಿತುಕೊಳ್ಳುವುದಕ್ಕೂ ಅವರು ಹೇಸುವುದಿಲ್ಲ. ಸುಖ ಮತ್ತು ಮಹತ್ವಿಕೆಯನ್ನು ಹೊಂದುವ ಸಾಧನ ಇದಲ್ಲ. ಸತ್ಯವಾದ ಸುಖವು ಮಹಾತ್ಮಾಜಿಯವರು ಹೇಳಿರುವ ಆದರ್ಶ ಪಥವನ್ನು ಅನುಸರಿಸಿದರೆ ಮಾತ್ರ ದೊರಕಬಲ್ಲುದು.

ನೀವೂ ಜೀವಿಸಿಕೊಂಡಿರಬೇಕು, ಏಕಕಾಲದಲ್ಲಿ ಇತರರಿಗೂ ಜೀವಿಸಲು ಅಸ್ಪದಮಾಡಿಕೊಡಬೇಕು; ಎಲ್ಲರನ್ನೂ ಪ್ರೇಮದಿಂದ ಕಾಣಬೇಕು; ಎಲ್ಲರನ್ನೂ ನಮ್ಮಂತೆಯೇ ಎಣಿಸಬೇಕು. ಈ ಸಿದ್ಧಾಂತಗಳನ್ನು ಅನುಸರಿಸಿ ಜೀವನಪಥವನ್ನು ಮುಂದುವರಿದುದರಿಂದಲೇ ಗಾಂಧೀಜಿ ಮಹಾತ್ಮರಾದರು. ಈ ಸಿದ್ಧಾಂತಗಳನ್ನೇ ಅನುಷ್ಠಾನಕ್ಕೆ ತರಲು ಪ್ರತಿಯೊಬ್ಬನೂ ಯತ್ನಿಸಬೇಕು.



ಅಮೇರಿಕದ ನ್ಯೂಯೊರ್ಕ್ ಸಿಟಿ 'ಸೆಂಟರ್ ಒಫ್ ಥಿಯೇಟರ್ ಆರ್ಟ್ಸ್'ದಲ್ಲಿ ಜೊರ್ಜ್ ಬರ್ನಾರ್ಡ್ ಷಾವಿನ ''ಡೆವಿಲ್ಸ್ ಡಿಸಾಯ್ಪಲ್'' ನಾಟಕದಲ್ಲಿ ವಿಕ್ಟರ್ ಜೊರಿ ಮತ್ತು ಮಾರ್ಶಾ ಹಂಟ್ ಎಂಬೀ ಇಬ್ಬರು ಹೆಸರುವಾಸಿ ನಟರು ಒಂದು ದೃಶ್ಯದಲ್ಲಿ.



'ಸೆಂಟರ್ ಒಫ್ ಥಿಯೇಟರ್ ಆರ್ಟ್ಸ್'ದಲ್ಲಿ "ಫೇಬ್‌ಲ್ಸ್ ಒಫ್ ಅವರ್ ಟಾಯಿಮ್ಸ್" ಎಂಬ ಕಥಾನಕವನ್ನು ಅನುಸರಿಸಿ ಪ್ರದರ್ಶಿಸಲ್ಪಡುವ ನೃತ್ಯದಲ್ಲಿನ ಒಂದು ದೃಶ್ಯ.



ಅಮೇರಿಕದ 'ಸೆಂಟರ್ ಒಫ್ ಥಿಯೇಟರ್ ಆರ್ಟ್ಸ್'ದಲ್ಲಿ ವಿಲಿಯಮ್
ಡಾಲರ್ ಎಂಬ ಅಮೇರಿಕನ್ ನಟನ. "ದಿ ಡುಯಲ್" ಎಂಬ ನೃತ್ಯದಲ್ಲಿ.



"ದಿ ಲವ್ ಫೊರ್ ತ್ರೀ ಒರೆಂಜಸ್" ಎಂಬ ನೃತ್ಯ ನಾಟಕದಲ್ಲಿ
(ರಷ್ಯದ ಸೆರ್ಜ್ ಪ್ರೊಕೊಫಿಯೆಫ್‌ರವರ ಕೃತಿ) ಒಂದು ದೃಶ್ಯ.



ಚಾರ್ಲ್ಸ್ ವೀಡ್ಮನ್. ಅಮೇರಿಕದ ಅಧುನಿಕ ನೃತ್ಯದ ಮೊದಲಿಗರಲ್ಲಿ ಒಬ್ಬನು. ಕೆಳಗಡೆ: ಡಬ್ಲ್ಯು. ಎಚ್. ಒಡನ್ ಎಂಬ ಆಂಗ್ಲ ಕವಿಯ ಒಂದು ಕವಿತೆಯನ್ನಾಧರಿಸಿ ರಚಿಸಿದ ಒಂದು ಸಂಗೀತ ಕಥಾನಕದಲ್ಲಿ ಒಂದು ದೃಶ್ಯ.





ಮೆಕ್ಸಿಕೋದ ಜೋಸ್ ಲಾಯ್ಮನ್. ಪುರುಷ ನರ್ತಕರಲ್ಲಿ ಇವನು ಬಲು ಹೆಸರುವಾಸಿ. ಅಮೇರಿಕದ 'ಸೆಂಟರ್ ಒಫ್ ಥಿಯೇಟರ್ ಆರ್ಟ್ಸ್'ದಲ್ಲಿ ಒಬ್ಬ ಪ್ರಾಮುಖ್ಯ ನರ್ತಕ. ಇಲ್ಲಿ ಮೆಕ್ಸಿಕೋ ಮೂಲವಾಸಿಗಳ ಒಂದು ಕಥಾನಕದ ನರ್ತನದ ಭಂಗಿಯನ್ನು ಪ್ರದರ್ಶಿಸುತ್ತಾನೆ.



ಜೋಸ್ ಲಾಯ್ಮನನು, ಮತ್ತೊಂದು ಕಥಾವಸ್ತುವನ್ನು ನರ್ತನದಲ್ಲಿ ತೋರುತ್ತಿರುವಾಗಲಿನ ಒಂದು ದೃಶ್ಯ. ಲಾಯ್ಮನನು ಅಮೇರಿಕದ ಆನೇಕ ಕೊಲೇಜುಗಳಲ್ಲಿ ನೃತ್ಯಪಾಠ ಕೊಟ್ಟಿರುತ್ತಾನೆ. ಆಧುನಿಕ ನರ್ತಕ.

ಳಲ್ಲಿ ಪಡೆವುದಕ್ಕಿಂತ, ಅರ್ಧದಷ್ಟು ವೇತನವನ್ನು ಇಲ್ಲಿ ಪಡೆವರು. ಅನೇಕ ದಿಗ್ದರ್ಶಕರೂ ಇವರ ಮೇಲ್ವಿಚಾರಕರೂ ತಮ್ಮ ಸೇವೆಯನ್ನು ಧರ್ಮಾರ್ಥ ಒಪ್ಪಿಸುವುದೂ ಇದೆ. ಈ ರೀತಿಯಲ್ಲಾದ ಉಳಿತಾಯದ ಉಪಯೋಗವನ್ನು ಪ್ರೇಕ್ಷಕರೇ ಕಡಿಮೆ ದರಗಳ ರೂಪದಲ್ಲಿ ಹೊಂದುವರು.

ಈ ಉದ್ಯಮದಲ್ಲಿ ನಾಲ್ಕು ಕಂಪೆನಿಗಳು ಒಟ್ಟಿಗೆ ಸೇರಿವೆ. ಅವರ ಲಾಭ—ನಷ್ಟಗಳ ಲೆಕ್ಕಗಳನ್ನು ಒಂದೇ ಲೆಕ್ಕದಲ್ಲಿ ಕೂಡಿಸಿಕೊಳ್ಳುತ್ತಾರೆ; ಯಾವ ಒಂದು ಕಂಪೆನಿಯೂ ನಷ್ಟವನ್ನು ಅಥವಾ ಲಾಭವನ್ನು ಪ್ರತ್ಯೇಕವಾಗಿ ಹೊರುವುದಿಲ್ಲ. ಒಂದು ಕಂಪೆನಿಯ ಒಂದು ದೇಖಾವೆಯು ಅಥವಾ ಕೆಲವು ದೇಖಾವೆಗಳು ಹೆಚ್ಚು ಜನರನ್ನಾಕರ್ಷಿಸಿರದಿದ್ದರೆ, ಇನ್ನೊಂದರ ಅಥವಾ ಉಳಿದ ಮೂರರ ಲಾಭದಲ್ಲಿ ಆ ಒಂದು ಕಂಪೆನಿಯ ನಷ್ಟವು, ತುಂಬಲ್ಪಡುತ್ತದೆ.

ನ್ಯೂಯೊರ್ಕ್ ನಗರದಲ್ಲಿ ಉಪಯೋಗದಲ್ಲಿಲ್ಲದ ಒಂದು ದೊಡ್ಡ ಕಟ್ಟಡವನ್ನು ಕಂಡು ಕೆಲವು ರಸಿಕ ನಾಗರಿಕರು, ಈ ಕಲಾಕೇಂದ್ರದ ಕಲ್ಪನೆ ಮಾಡಿದರು. ಅಷ್ಟು ದೊಡ್ಡ ಸಭಾಗೃಹವನ್ನು ಅಧಿಕಾಧಿಕ ಮಂದಿಗೆ ನಾಟ್ಯ-ಸಂಗೀತ-ಅಭಿನಯಗಳನ್ನು ಕೊಡುವ ಸಲುವಾಗಿ ಬಾಡಿಗೆಗೆ ಪಡೆದರು.

೧೯೪೩ರಲ್ಲಿ, ಕಲಾಪೋಷಕರೂ, ಶಿಕ್ಷಣ ತಜ್ಞರೂ, ಇತರ ಕೆಲವು ಗೃಹಸ್ಥರೂ ಒಂದು ಸಂಘವನ್ನು ಸ್ಥಾಪಿಸಿಕೊಂಡು, ಆ ಕಟ್ಟಡವನ್ನು ಗೇಣಿಗೆ ಪಡೆದರು; ಮತ್ತು ನಿಧಿಯನ್ನು ಕೂಡಿಸಿ, ನಾಟಕಗಳನ್ನು ಪ್ರದರ್ಶಿಸಲು ತೊಡಗಿದರು. ನ್ಯೂಯೊರ್ಕ್ ನಗರದ 'ಬ್ರೊಡ್ವೆ' ಪ್ರದೇಶದಲ್ಲಿ ನಾಟಕವೃತ್ತಿಯವರು ಪ್ರದರ್ಶಿಸುತ್ತಿರುವ ಪ್ರಖ್ಯಾತ ನಾಟಕಗಳನ್ನು ಈ ಕಲಾಕೇಂದ್ರದಲ್ಲೂ ಪ್ರದರ್ಶಿಸುವ ವ್ಯವಸ್ಥೆ ಮಾಡಿದರು. ಹೆಚ್ಚಾಗಿ ಅಲ್ಲಿಯ ನಟರನ್ನೆ ಇಲ್ಲಿಗೂ ಕರೆಸಿ ಅವರಿಂದಲೇ ನಾಟಕಗಳನ್ನು ಪ್ರದರ್ಶಿಸಿದರು. ಈ ವ್ಯವಸ್ಥೆಯೇ ಈಗಲೂ ನಡೆದು ಬಂದಿದೆ. ಜನರಿಂದ ಪ್ರೋತ್ಸಾಹ ದೊರೆಯಲು,-ಕಲಾಕೇಂದ್ರದವರು ಹೊಸ ಪ್ರಯೋಗಗಳಿಗೂ ತೊಡಗಿದರು.

೧೯೪೪ರಲ್ಲಿ, ಕಲಾಕೇಂದ್ರದವರು "ನ್ಯೂಯೊರ್ಕ್ ಸಿಟಿ ಒಪೆರಾ ಕಂಪೆನಿ"ಯೊಂದನ್ನು ಸ್ಥಾಪಿಸಿದರು. ೧೯೪೪ರಲ್ಲಿ ಒಂದು ನಾಟಕ ಮಂಡಲಿ ಮತ್ತು ನೃತ್ಯ-ಸಂಗೀತಗಳ ಕಂಪೆನಿಯನ್ನು ತೆರೆದರು. ೧೯೪೮ರಲ್ಲಿ ಆಧುನಿಕ ನೃತ್ಯಗಳನ್ನು ಪ್ರದರ್ಶಿಸುವರೆ ಪ್ರತ್ಯೇಕ ಮಂಡಲಿಯ ಸ್ಥಾಪನೆಯಾಯಿತು.

ಕಲಾಕೇಂದ್ರವು, ಇತರ ದೇಶಗಳಿಂದಲೂ ಕಲಾವಿದರನ್ನು ಆಹ್ವಾನಿಸಿ, ಪ್ರದರ್ಶನಗಳನ್ನೇರ್ಪಡಿಸುತ್ತಿದೆ. ೧೯೪೯ರಲ್ಲಿ ಆಸ್ಟ್ರಿಯದಿಂದ ಮೆರಿಯಾ ರೈನಿಂಗ್ ಎಂಬ ಪ್ರಸಿದ್ಧ ನಟಿಯನ್ನು, ಝೆಕೊಸ್ಲೊವೆಕಿಯಾದಿಂದ ಇವಾ ಲಿಕೊವಾಳನ್ನೂ, ಆಸ್ಟ್ರೇಲಿಯದಿಂದ ಜೋನ್ ಹೆಮ್ಮಂಡಳನ್ನೂ, ಫಿಲಿಪ್ಪಾಯಿನ್ಸ್‌ದಿಂದ ಕೊಂಚಿಟಾ ಗೆಸ್ಪನಳನ್ನೂ, ಫಿನ್ಲೆಂಡಿನಿಂದ ಜೊರ್ಜ್ ಜೊಂಜೆಯಾನ್ಸನನ್ನೂ ಕರೆಸಿದ್ದಾರೆ.

ಸಾಹಿತ್ಯದಲ್ಲಿ ಪ್ರಸಿದ್ಧವಾದ "ಕಾರ್ಮೆನ್" ಮತ್ತು "ಏಯಿಡಾ" ನಾಟಕೆಗಳು ಪ್ರದರ್ಶಿಸಲ್ಪಟ್ಟವೆ.

ರಷ್ಯದ ಸೆರ್ಜ್ ಪ್ರೊಕೊಫೀಫನ "ಲವ್ ಫೊರ್ ತ್ರೀ ಒರೇಂಜಸ್" ನೃತ್ಯ ಸಂಗೀತಾಭಿನಯವು ನ್ಯೂಯೊರ್ಕಿನಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಪ್ರದರ್ಶಿಸಲ್ಪಟ್ಟಿರಲಿಲ್ಲ. ಅದನ್ನು ಕಲಾಕೇಂದ್ರದವರು ಪುನರುಜ್ಜೀವಿಸಿದರು. ಮೂರು ಕಿತ್ತಳೆಗಳ ಮೇಲೆ ಪ್ರೇಮ ತಾಳಿದ ರಾಜಕುಮಾರನೊಬ್ಬನ ಕಥೆಯನ್ನು ವರ್ಣಿಸುವ ಆ ನೃತ್ಯ—ಸಂಗೀತ ದರ್ಶಕವು, ನ್ಯೂಯೊರ್ಕಿನ ರಸಿಕರನ್ನು ರೋಮಹರ್ಷಗೊಳಿಸುವಂತೆ ತೋರಿಸಲ್ಪಟ್ಟಿದೆ.

ಇಟೇಲಿಯ ವಿಖ್ಯಾತ ಸಂಗೀತ ರಚಯಿತ ಪುಶ್ಶಿನಿಯ ಪುಣ್ಯ ತಿಥಿಯ ರಜತೋತ್ಸವ ವರುಷದ ಸ್ಮಾರಕವಾಗಿ ೧೯೫೦ರಲ್ಲಿ ಕಲಾಕೇಂದ್ರವು, ಅವನ "ಟೊಸ್ಕಾ"—"ಲಾ ಬೊಹೆಮೆ" ಮತ್ತು "ಮೆದಮ್ ಬಟರ್‌ಫ್ಲಾಯ್"-ಈ ಮೂರು ಸಂಗೀತ-ನೃತ್ಯ ನಾಟಕೆಗಳನ್ನು ಪ್ರದರ್ಶಿಸಿದೆ.

ನಾಟಕ ಪ್ರದರ್ಶನಗಳಲ್ಲಿ, ಶೇಕ್ಸ್‌ಪಿಯರನ ನಾಟಕಗಳನ್ನು ಪ್ರದರ್ಶಿಸುವಾಗ ಕಲಾಕೇಂದ್ರವು, ಆ ನಾಟಕಗಳಲ್ಲಿ ಅಭಿನಯಿಸಿ ಕೀರ್ತಿವೆತ್ತ ನಟರನ್ನು ಕರೆಸಿ, ಅವರ ನೆರವು ಪಡೆದಿದೆ. ಇಂಗ್ಲಿಷ್ ಕವಿ ಒಲಿವರ್ ಗೋಲ್ಡ್‌ಸ್ಮಿತ್ತನ "ಶೀ ಸ್ಟೂಪ್ಸ್ ಟು ಕೊಂಕ್ವರ್" ಬರ್ನಾರ್ಡ್ ಷಾವಿನ "ಡೆವಿಲ್ಸ್ ಡಿಸಾಯ್ಪಲ್" ನಾಟಕಗಳು ಪ್ರದರ್ಶಿಸಲ್ಪಟ್ಟವೆ. ಬೇಸಿಲ್ ರಾತ್ ಬೋನ್‌ನಂಥ ವಿಖ್ಯಾತ ನಟರು ಈ ಕಲಾಕೇಂದ್ರಕ್ಕೆ ಬಂದು ಸೇವೆ ಸಲಿಸಿದ್ದಾರೆ.

ನೃತ್ಯ ಪ್ರದರ್ಶನಗಳಲ್ಲಿ ಸುಮಾರು ೨೦ರಿಂದ ೪೦ರಷ್ಟು ಜನರು ಒಮ್ಮೊಮ್ಮೆ ಸೇರಿರುತ್ತಾರೆ.

ನಾಟಕ, ನೃತ್ಯಕಥೆಗಳನ್ನು ಪ್ರದರ್ಶಿಸುವಾಗ, ದೃಶ್ಯಾವಳಿಗಳಿಗೆ ತಕ್ಕಷ್ಟು ಹಣವು ವ್ಯಯಿಸಲ್ಪಡುತ್ತಿದೆ. ಅವಶ್ಯವಿರುವ ದೃಶ್ಯಾವಳಿಗಳನ್ನು ತಯಾರಿಸಲು ಬಡಗಿಗಳು ಯಾವಾಗಲೂ ಸಿದ್ಧವಿರುವಂತೆ ನೇಮಿಸಲ್ಪಟ್ಟಿರುವರು.

ವರುಷದಲ್ಲಿ ಒಂಭತ್ತು ತಿಂಗಳ ಕಾಲ ನ್ಯೂಯೊರ್ಕಿನ ಕಲಾಕೇಂದ್ರ ರಂಗಭೂಮಿಯಲ್ಲಿ ಪ್ರದರ್ಶನ ಕೊಟ್ಟು, ಮತ್ತೆ ಒಂದೆರಡು ತಿಂಗಳುಗಳ ಕಾಲ ಬೇರೆ ಬೇರೆ ಇಂಗ್ಲಿಷ್ ನಗರಗಳಿಗೆ ಪ್ರದರ್ಶನಾರ್ಥ ಹೋಗುವುದುಂಟು.

ನಮ್ಮ ದೇಶದ ನಗರಗಳಲ್ಲೂ ಇಂಥ ಕಲಾಕೇಂದ್ರಗಳ ಆವಶ್ಯಕತೆ ಇದೆ. ಪ್ರತಿ ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಇಂಥ ಕೇಂದ್ರಗಳ ಸ್ಥಾಪನೆಯಾದರೆ, ಆಯಾ ಜಿಲ್ಲೆಯ ಕಲಾವಿದರನ್ನು ಮಾತ್ರವಲ್ಲ ಬೇರೆ ಬೇರೆ ಜಿಲ್ಲೆಗಳಿಂದಲೂ ಸಂಸ್ಥಾನಗಳಿಂ

ನಂದಳಿಕೆ ಲಕ್ಷ್ಮೀನಾರಣಪ್ಪಯ್ಯ

—ಅವರ ಕುರಿತೆರಡು ಮಾತು

(ಲೇಖಕರು: ಎಚ್. ಭೀಮರಾವ್)

ನಂದಳಿಕೆ ಲಕ್ಷ್ಮೀನಾರಣಪ್ಪಯ್ಯನವರನ್ನು ನಾನು ಮೊದಲ ಬಾರಿ ಉಡ್ಪಿಯಲ್ಲಿ ಕಂಡದ್ದು—ಅವರು ಕುಂದಾಪುರದಲ್ಲಿ 'ಬೋರ್ಡ್ ಸರ್ವೀಸ್' ಬಿಟ್ಟು ಉಡ್ಪಿ ಮಿಶನ್ ಹ್ಯಾಸ್ಕೂಲಿನ ಕನ್ನಡ ಪಂಡಿತರಾಗಿ ಬಂದಾಗ; ಸುಮಾರು ಅರ್ಧ ಶತಮಾನದ ಹಿಂದೆ; ನಾನು ನಾಲ್ಕನೆ ತರಗತಿಯಲ್ಲಿ ಓದುತ್ತಿದ್ದಾಗ. ಅವರು ಉಡ್ಪಿ ರೋಮನ್ ಕೆಥೊಲಿಕ್ ಇಗರ್ಜಿಯ ಎದುರಿಗಿರುವ ಕಂಪೌಂಡಿನ ಒಂದು ಮನೆಯನ್ನು ಬಾಡಿಗೆಗೆ ಪಡೆದು, ನಮ್ಮ ಸ್ವಂತ ಮನೆಯ ನೆರೆಯಲ್ಲಿ ಇರುತ್ತಿದ್ದರು. ಈಗ ಆ ವಠಾರದಲ್ಲಿ ಆ ಮನೆಯ ಯಾವ ಕುರುಹೂ ಇಲ್ಲ; ಅಲ್ಲಿರುವುದೀಗ ಕೆಥೊಲಿಕ್ ಮುದ್ರಾಲಯ ಮತ್ತು ಅದಕ್ಕೆ ಒತ್ತಾಗಿ ಕೆಲ ಅಂಗಡಿಗಳ ಹೊಸ ಕಟ್ಟಡ.

ನಂದಳಿಕೆಯವರು ಹಿಂದೊಮ್ಮೆ ಉಡ್ಪಿ ಬೋರ್ಡ್ ಶಾಲೆಯಲ್ಲಿ 'ಕುಸ್ತಿ ಮಾಸ್ತರ'ರಾಗಿದ್ದಾಗಲೇ ನಮ್ಮ ಅಣ್ಣನಿಗೆ ಅವರ ಪರಿಚಯ; ಅದೀಗ ಗೆಳೆತನವಾಗಿ ಬೆಳೆಯಿತು; ಅದರ ಪರಿಣಾಮವಾಗಿ ಅವರು ದಿನಾಲೂ ಎರಡು ಹೊತ್ತೂ—ಬೆಳಗ್ಗೆ ಸಂಜೆ—ನಮ್ಮಲ್ಲಿಗೆ ಬಂದು ಹೋಗುವುದಿತ್ತು: ಹಬ್ಬ ಹುಣ್ಣಿಮೆ ಮೊದಲಾದ ವಿಶೇಷಗಟ್ಟಲೆಯ ದಿನಗಳಲ್ಲಿ ನಂದಳಿಕೆಯವರಿಗೆ ಊಟ ನಮ್ಮಲ್ಲಿ. ಎಷ್ಟು ಹೊತ್ತಿಗಾದರೂ ಸರಿ–ನಂದಳಿಕೆಯವರು ನಮ್ಮಲ್ಲಿಗೆ ಬಂದು ಉಂಡು ಹೋಗಲೇ ಬೇಕು—ಹಾಗೆ ನಮ್ಮ ತಾಯ ಒತ್ತಾಯ; ಅವರ ಮೇಲಿನ ನಮ್ಮೆಲ್ಲರ ಅಭಿಮಾನ, ಅಂತಃಕರಣವೆಂದರೂ ಅಷ್ಟು ಮಟ್ಟಿಗೆ. ಅವರನ್ನು ಕರೆದುಕೊಂಡೇ ಬರುವ ಊಳಿಗದ ಹುಡುಗ ನಾನು; ಭಕ್ಷ್ಯಭೋಜ್ಯಗಳೇನು! ಎಂದು ವಿನೋದವಾಡುತ್ತ ಬರುವವರು ಅವರು. ನಮ್ಮ ಅವರ ಅನ್ಯೋನ್ಯ ಹಾಗಿತ್ತು.

ನಂದಳಿಕೆಯವರು ನಮ್ಮ ಅಣ್ಣನಲ್ಲಿ ಅಧಿಕವಾದ ಸ್ನೇಹ ವಿರಿಸಿಕೊಳ್ಳಲು ಇನ್ನೊಂದು ಬಲವಾದ ಕಾರಣವೂ ಇತ್ತು. ನಮ್ಮ ಅಣ್ಣ ಪಿಟೀಲು ಚೆನ್ನಾಗಿ ನುಡಿಸಬಲ್ಲವರು; ನಂದಳಿಕೆಯವರಿಗೂ ಪಿಟೀಲು ಕಲಿಯಬೇಕೆಂದು ಬಹಳ ಆಸೆ. ಅವರೊಡನೆ ಪಿಟೀಲು ಇಲ್ಲ; ನಮ್ಮ ಅಣ್ಣನೊಡನೆ ಇತ್ತು. ಹಾಗೆ ದಿನಾಲೂ ಸಂಜೆ ನಮ್ಮಲ್ಲಿ ಭಜನೆಯ ಹಾಡುಗಳನ್ನು ಹಾಡುತಿದ್ದಾಗ ನಂದಳಿಕೆಯವರು ಅವನ್ನು ಪಿಟೀಲಿನಲ್ಲಿ ನುಡಿಸಲು ಅಭ್ಯಾಸ ಮಾಡುತ್ತಿದ್ದರು; ಸ್ವಲ್ಪ ಕಾಲದಲ್ಲೇ ಅವರ ಕೈ ತಿದ್ದಿಕೆಯಾಯಿತು. ಅವರು ನಮ್ಮ ಅಣ್ಣನಿಂದ ತಿಳಿದುಕೊಂಡದ್ದು ಕಡಿಮೆ; ಸ್ವಬುದ್ಧಿಶಕ್ತಿಯಿಂದಲೇ ಸಂಪಾದಿಸಿದ್ದು ಹೆಚ್ಚು. ಯಕ್ಷಗಾನದ ಮಟ್ಟು ನಂದಳಿಕೆಯವರಿಗೆ ಮೊದಲೇ ಮಂದಟ್ಟಾಗಿದ್ದ ಕಾರಣ ಗಂಧರ್ವ ಗಾಯನದ ಕರ್ಣಾಟಕ ಪದ್ಧತಿಯಂತೆ, ಆ ರಾಗಭೇದ ತಾಳಭೇದಗಳ ಮರ್ಮವನ್ನು ಗ್ರಹಿಸುವುದೇನೂ ಅವರಿಗೆ ಕಷ್ಟವಾಗಲಿಲ್ಲ.

ನಂದಳಿಕೆಯವರಿಗೆ ದಶಾವತಾರ ಆಟದ ಹುಚ್ಚು ಹೆಚ್ಚು; ನಮ್ಮ ಅಣ್ಣನಿಗೂ ಅದರಲ್ಲಿ ತುಂಬ ಆಸಕ್ತಿ. ಊರಿನಲ್ಲಿ ಒಂದೆರಡು ಮೈಲುಗಳೊಳಗೆ ಎಲ್ಲಿ ಆಟವಾದರೂ ಅವರಿಬ್ಬರೂ. ಅವರೊಡನೆ ನಾನೂ ಆ ಆಟದ ಸ್ಥಳಕ್ಕೆ ಹೋಗಿ ಸ್ವಲ್ಪ ಹೊತ್ತು ನೋಡಿ ಬರುವುದು ವಾಡಿಕೆ. ನಂದಳಿಕೆಯವರು ತಾವೇ ಎರಡು ಪ್ರಸಂಗಗಳನ್ನು ಬರೆದವರು; ಆದರೆ ಅವರು ಯಾರಲ್ಲಿಯಾದರೂ ಶಿಷ್ಯವೃತ್ತಿ ಮಾಡಿ ಆ ಯಕ್ಷಗಾನ ಕಲಿತರೆಂಬುದಕ್ಕೆ ಆಧಾರವಿಲ್ಲ. ಅಲ್ಲಲ್ಲಿ ಆಗುತ್ತಿದ್ದ ಆಟಗಳಿಗೆ ಆಗಾಗ ಹೋಗಿ ಭಾಗವತರು ಹಾಡುತ್ತಿದ್ದ ಪದಪದ್ಯಗಳನ್ನವರು ಲಕ್ಷ್ಯಕೊಟ್ಟು ಆಲೈಸಿ ಆಗಲೇ ಅಲ್ಲೇ ಆ ರಾಗತಾಳಗಳ

ದಲೂ ಕಲಾಕಾರರನ್ನು ಕರೆಸಿ, ಪ್ರದರ್ಶನಗಳನ್ನು ಕೊಡಬಹುದಾಗಿದೆ. ನಮ್ಮ ಕಲಾಭಿಮಾನಿಗಳು ಇಂತಹ ಒಂದು ಕಲಾ ಸಂಸ್ಥೆಯ ಸ್ಥಾಪನೆಗೆ ಯತ್ನಪಟ್ಟು, ಕಡಿಮೆ ದರಗಳಲ್ಲಿ ಜನತೆಗೆ ಅತ್ಯುತ್ತಮ ಕಲಾ-ಉತ್ಸವ ದೊರೆವಂತಾಗಲಿ.

ಭಯಂಕರ ಮೊಸಳೆಗಳು

[178ನೇ ಪುಟದಿಂದ]

ಪೂಜಿಸುತ್ತಾರೆ. ಕ್ಷಾಮಬಂದ ಕಾಲದಲ್ಲಿ ಜಂಬೇಸಿ ಮತ್ತು ಪಶ್ಚಿಮ ಆಫ್ರಿಕದ ಟ್ರೈಬಲ್ ಜನರು ಮೊಸಳೆಗಳನ್ನು ತೃಪ್ತಿಪಡಿಸಲು ಆಹುತಿಗಳನ್ನು ಕೊಡುವುಧಿತ್ತು. ನೈಲ್ ಪ್ರಾಂತ್ಯದಲ್ಲಿ ಮೊಸಳೆಯ ಆರಾಧನೆಯು ಈಗಲೂ ಬಳಕೆಯಲ್ಲಿದೆ. ಲಿವಿಂಗ್ಸಟನ್ನನ ಕಾಲದಲ್ಲಿ ಕೂಡಾ, ಮೊಸಳೆಯನ್ನು ತಮ್ಮ ಕುಟುಂಬದಲ್ಲಿ ಯಾರಾದರೊಬ್ಬರು ಕೊಂದರೆ ರೊಡೆಸಿಯನರು ಅವನನ್ನು ಮರಣದಂಡನೆಗೊಳಪಡಿಸುತಿದ್ದರು.

ಶಾಸ್ತ್ರವನ್ನು ತಮ್ಮ ಗ್ರಹಣಶಕ್ತಿಯಿಂದ ಹೀರಿ ಹಾಗೆ ಉಪಯೋಗಿಸಿಕೊಂಡರೆಂಬುದು ನಿರ್ವಿವಾದ.

ನಂದಳಿಕೆಯವರು ಉಡುಪಿಯಲ್ಲಿ ಮುಖ್ಯವಾಗಿ ಹೋಗಿ ಬರುತ್ತಿದ್ದ ಮನೆಗಳೆರಡೇ—ಒಂದು ನಮ್ಮದು; ಇನ್ನೊಂದು ಒಬ್ಬ ವಕೀಲರದು. ವಕೀಲರಲ್ಲಿಗೆ ಅವರು ಹೋಗಿ ಬರುತ್ತಿದ್ದುದು ವ್ಯಾಜ್ಯಸಾಜ್ಯಗಳ ಸಂಬಂಧವಾಗಿ ಏನೂ ಅಲ್ಲ. ಅವರಿಗಾಗಲೀ ಅವರ ಹಿರಿಯರಿಗಾಗಲೀ—ಆಸ್ತಿ ಮನೆ ಬದುಕು ಹಣಕಾಸು ಯಾವುದೂ ಇರಲಿಲ್ಲ. ದುಡಿದರೆ ಉಂಟು—ದುಡಿಯದಿದ್ದರೆ ಉಪವಾಸವೆನ್ನುವಷ್ಟು ಬಡತನದ ಸ್ಥಿತಿ ಕೊನೆತನಕವೂ ಅವರದು. ಆದ್ದರಿಂದ ಆ ವಕೀಲರಲ್ಲಿನ ಅವರ ಸಂದರ್ಶನದ ಕಾರಣ ತೀರ ಬೇರೆಯಾಗಿತ್ತು. ಆಗ ದಿವಂಗತ ಬಿ. ವೆಂಕಟಾಚಾರ್ಯರು ಬಂಗಾಳಿ ಸಾಹಿತ್ಯದಲ್ಲಿನ ಬಂಕಿಂಚಂದ್ರರ ನಾವೆಲ್ಲುಗಳನ್ನು ಕನ್ನಡಿಸಿ ಪ್ರಕಟಿಸತೊಡಗಿದ್ದರು; ಅವನ್ನು ಈ ವಕೀಲರು ತರಿಸುತ್ತಿದ್ದರು. ನಂದಳಿಕೆಯವರು ಆ ಗ್ರಂಥಗಳನ್ನು ವಕೀಲರಿಂದ ಎರವಾಗಿ ಪಡೆಯಲೂ ಓದಿದ ಬಳಿಕ ಹಿಂದಿರುಗಿಸಲೂ ಅಲ್ಲಿಗೆ ಹೋಗಿ ಬರುತ್ತಿದ್ದರು.

ನಂದಳಿಕೆಯವರಲ್ಲಿಗೆ ಆಗಾಗ ಬಂದು ಹೋಗುತಿದ್ದವರು, ನಾನು ಕಂಡಂತೆ, ಒಬ್ಬರೇ—ಐರೋಡಿ ಶಿವರಾಮಯ್ಯ ಅವರ ಊರಾದ ಐರೋಡಿಯಿಂದ ಉಡುಪಿಗೆ ಅವರು ಸುಮಾರು ೧೩ ಮೈಲು ಕಾಲ್ನಡಿಗೆಯಿಂದಲೇ ಬರುತಿದ್ದರು, ಇರುತಿದ್ದರು; ಹಾಗೇ ಮರಳುತ್ತಿದ್ದರು. ಶಿವರಾಮಯ್ಯ ನಂದಳಿಕೆಯವರಿಗೆ ಅಚ್ಚುಮೆಚ್ಚಿನ ಸಾಹಿತ್ಯದ ಒಡನಾಡಿ; ಅವರಿಬ್ಬರಲ್ಲಿಯೂ ಆಪ್ತವಳಿಗೆ ಅಷ್ಟು ಮಟ್ಟಿಗೆ ಬೆಳೆದು ಬರಲು ಶಿವರಾಮಯ್ಯನಲ್ಲಿದ್ದ ಭಾಷಾ ಪಾಂಡಿತ್ಯವೇ ಕಾರಣ. ಸಾಹಿತ್ಯ ವಿಚಾರಗಳ ಕುರಿತು ನಂದಳಿಕೆಯವರ ಕೃತಿ ರಚನೆಯ ಕುರಿತು ತಮ್ಮೊಳಗೆ ಎಷ್ಟೋ ಬಗೆಯ ಮಾತುಕಥೆಗಳು ನಡೆದುದುಂಟೆಂದು ಶಿವರಾಮಯ್ಯನವರೇ, ಕೆಲ ವರ್ಷಗಳಿಗೆ ಮೊದಲು ನನ್ನೊಡನೆ ಪ್ರಸ್ತಾವಿಸಿದ್ದುಂಟು. ಕುಂದಾಪುರ ಬೋರ್ಡ್ ಹ್ಯಾಸ್ಕೂಲಿನ ಕನ್ನಡ ಪಂಡಿತರಾಗಿ ಹಲ ಕಾಲವಿದ್ದುದೂ ಅಲ್ಲದೆ, ಹಲವಾರು ಉಪಯುಕ್ತ ಗ್ರಂಥಗಳನ್ನು ಬರೆದೂ ಪ್ರಸಿದ್ಧರಾದ ಶಿವರಾಮಯ್ಯನಂಥ ಕನ್ನಡದ ವಿದ್ವಾಂಸರನ್ನು ನಂದಳಿಕೆಯವರಾಗಲೇ ಕಟ್ಟಿಕೊಂಡುದೇನೂ ಆಶ್ಚರ್ಯವಲ್ಲ.

ನಂದಳಿಕೆಯವರ ಕುಟುಂಬದ ಹಿರಿಯರಲ್ಲಿ ಕಿರಿಯರಲ್ಲಿ ಕನ್ನಡ ಸಾಹಿತ್ಯದ ಪಾಂಡಿತ್ಯವಿರಲಿ,—ಅಭಿರುಚಿ ಕೂಡ ಇದ್ದವರಿರಲಿಲ್ಲ. ಅವರ ತಂದೆ ತಮ್ಮಯ್ಯ ನಂದಳಿಕೆ ಬಿಟ್ಟ ಮೇಲೆ ಇದ್ದುದು ಒಂಟಿ ಜೀ ಯಾಗಿ, ಕಷ್ಟಜೀವಿಯಾಗಿ ಇರ್ವತ್ತೂರಿನಲ್ಲಿ—ಉಡುಪಿಯಿಂದ ಸುಮಾರು ೧೪ ಮೈಲು ದೂರದಲ್ಲಿ; ಅವರ ತಮ್ಮ ಶಿವರಾಮಯ್ಯ ಬೆಳೆದು ಬಾಳಿದುದು ಉಡುಪಿಯಿಂದ ೨೦ ಮೈಲು ದೂರದ ಹೆಬ್ರಿಯಲ್ಲಿ, ಬಡ ಶಾಲಾ ಮಾಸ್ತರರಾಗಿ; ಹೆಂಡತಿ ಕಮಲಾಬಾಯಿ ಬೆಂಕೇಪುರ(ಈಗ ಭದ್ರಾವತಿ)ದಾಕೆ; ಬರುವಾಗ್ಗೇನೂ ತವುರಿನಿಂದ ತಾರದಾಕೆ; ಅಲ್ಲದೆ ಆಕೆಗೆ ಓದುಬರಹವೂ ಅಷ್ಟಕ್ಕಷ್ಟೇ. ಮಗ ರಾಧಾಕೃಷ್ಣ ಯಾನೆ ಬಾಬು,—ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡವ; ಚಿಕ್ಕಪ್ಪ ಶಿವರಾಮಯ್ಯನ ಪೋಷಣೆಯಲ್ಲೇ ಬೆಳೆದವ; ದೊಡ್ಡವನಾದಾಗ ತನ್ನ ಜೀವನೋಪಾಯವನ್ನಷ್ಟೇ ಹೇಗೋ ಹಾಗೆ ನೋಡಿಕೊಂಡವ. ಇಂಥದೊಂದು ಕುಟುಂಬದಲ್ಲಿ ಈ ಮಹಾಕವಿ ಹೇಗೆ ತಪ್ಪಿ ಹುಟ್ಟಿದ, ಕವಿ ಕಾರ್ಯದ ತಪಸ್ಸಾಧನೆ ಹೇಗೆ ಮಾಡಿದ ಎಂಬುದೇ ಒಂದು ಮಹಾ ಸಮಸ್ಯೆ.

ನಂದಳಿಕೆಯವರಿಗೆ ಅವರ ಸಾಹಿತ್ಯ ವ್ಯಾಸಂಗಕ್ಕೆ ನೆರವಾದ ಗುರುಗಳು ಇಬ್ಬರು. ಇವರಲ್ಲಿ ಉಡುಪಿ ಕುಂದಾಪುರ ಬೋರ್ಡ್ ಶಾಲೆಗಳಲ್ಲಿ ಉಪಾಧ್ಯಾಯರೂ ನಂದಳಿಕೆಯವರ ಸಹೋದ್ಯೋಗಿಗಳೂ ಆದ ಮುಳಲಿ ಸುಬ್ಬರಾಯರು ಒಬ್ಬರು. ಇವರಿಗೆ ಕನ್ನಡದಲ್ಲಿ ವಿಶೇಷವಾದ ಪಾಂಡಿತ್ಯವಿದ್ದಂತೆ ತೋರಲಿಲ್ಲ. ಕನ್ನಡದಲ್ಲಿ ಇವರೇನೂ ಕೃತಿಕವನಗಳನ್ನು ರಚಿಸಿ ಪ್ರಕಟಿಸಿದಂತೆ ತಿಳಿದುಬಂದಿಲ್ಲ. ನಂದಳಿಕೆಯವರಲ್ಲದಿದ್ದರೆ ಮುಳಲಿಯವರ ಹೆಸರು ಕನ್ನಡ ನಾಡಿನ ಕಿವಿಗೆ ಬೀಳುತ್ತಿತ್ತೇ? ಎಂಬುದೂ ಸಂದೇಹ. ಅದು ಹೇಗೆ ಇದ್ದರೂ ಮುಳಲಿಯವರ ಉಪದೇಶ ಪ್ರೋತ್ಸಾಹ ಮೊದಮೊದಲು ನಂದಳಿಕೆಯವರಿಗೆ ಮುಂಬೆಳಕಿನಂತೆ ಉಪಕಾರ ಮಾಡಿರಬಹುದಾದರೂ, ಮತ್ಸ್ಯಾವತಾರದಂತೆ ದಿನೇ ದಿನೇ ಅದ್ಭುತಾಕಾರವಾಗಿ ಬೆಳೆಯುತ್ತ ಬಂದ ನಂದಳಿಕೆಯವರ ಅಗಾಧ ಜ್ಞಾನದ ಕಣ್ಣುಗಳಿಗೆ ಇನ್ನು ಮುಳಲಿಯವರು ಸಾಲದೆಂದು ತೋರಿದ್ದರೂ ಅತಿಶಯವಲ್ಲ.

ಆದ್ದರಿಂದಲೇ ನಂದಳಿಕೆಯವರು ಬವಲಾಡಿ ವೆಂಕಟರಮಣ ಹೆಬ್ಬಾರರೆಂಬವರಲ್ಲಿ ತಮಗೆ ತಕ್ಕವರಾದ ಎರಡನೆಯ ಗುರುಗಳನ್ನು ಕಂಡುಕೊಂಡರು; ಹೆಬ್ಬಾರರು ಒಳ್ಳೆಯ ಕವಿಗಳು; ಸಂಸ್ಕೃತ ಕನ್ನಡಗಳೆರಡರ ತಿರುಳನ್ನೂ ಚೆನ್ನಾಗಿ ತಿಳಿದವರು; ಅವರೇ ನಂದಳಿಕೆಯವರ "ಶ್ರೀರಾಮ ಪಟ್ಟಾಭಿಷೇಕ"ವನ್ನು ತಿದ್ದಿ ಕೊಟ್ಟವರು; 'ರಾಮಾಶ್ವಮೇಧ'ವನ್ನು ಬರೆಯುವಂತೆ ಬೆನ್ನು ತಟ್ಟಿ ಮುನ್ನಡೆಸಿದವರು ಎಂದು ಅವರಿಬ್ಬರ ಪರಸ್ಪರ ಬಾಂಧವ್ಯದ ಕುರಿತು ಬಲ್ಲವರು ಆಡುತ್ತಿದ್ದಾರೆ.

ಬುದ್ಧಿ ತಿಳಿದು ಕನ್ನಡ ಜ್ಞಾನಸಂಪತ್ತು ಸಂಗ್ರಹವಾಗುತ್ತಿದ್ದ ಹಾಗೆ, ತನ್ನ ಮೂವತ್ತೊಂದನೆ ವರ್ಷ ಪ್ರಾಯದೊಳಗೇ ನಂದಳಿಕೆಯವರು ಐದು ಗ್ರಂಥಗಳನ್ನು ಬರೆದು ಪೂರೈಸಿದರು. ಅವುಗಳಲ್ಲಿ "ರತ್ನಾವತಿ ಕಲ್ಯಾಣ" "ಕುಮಾರ ವಿಜಯ" ಎಂಬ ಎರಡು ಯಕ್ಷಗಾನ ಪ್ರಸಂಗಗಳು; ಶ್ರೀರಾಮನಲ್ಲೇ ರಾಮಾಯಣದಲ್ಲೇ ಅಧಿಕ ಆಸಕ್ತಿ ಎಂಬಂತೆ—'ಅದ್ಭುತ ರಾಮಾಯಣ' 'ಶ್ರೀರಾಮ ಪಟ್ಟಾಭಿಷೇಕ' 'ರಾಮಾಶ್ವಮೇಧ' ಎಂಬ ಇತರ ಮೂರು ಗ್ರಂಥಗಳು. ಪ್ರಸಂಗಗಳು ಅವರ ಹೆಸರಲ್ಲಿ ಉಡುಪಿಯ ಹಿಂದೂ ಮುದ್ರಾಕ್ಷರ ಶಾಲೆ

ಯಲ್ಲಿ ಅಚ್ಚಾದುವು; ಇತರ ಗ್ರಂಥ ಮುದ್ರಣವಾದುದು ಹೊರಗಡೆ; ಹೆಸರು ಅವರದಲ್ಲ. ಇವುಗಳಲ್ಲಿ "ರಾಮಾಶ್ವಮೇಧ"ಕ್ಕೆ ಸಾಹಿತ್ಯ ಪ್ರಪಂಚದಲ್ಲಿ ಎಂಥ ಶ್ರೇಷ್ಠ ಸ್ಥಾನಮಾನ ಪುರಸ್ಕಾರ ಸಂದಿದೆ, ಸಲ್ಲುತ್ತಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಪ್ರಸಂಗಗಳಲ್ಲಿ ತಮ್ಮ ಹೆಸರು ಪ್ರಕಟಿಸಿ 'ರಾಮಾಶ್ವಮೇಧ' 'ಶ್ರೀರಾಮ ಪಟ್ಟಾಭಿಷೇಕ' ಮೊದಲಾದ ಇತರ ಗ್ರಂಥಗಳ ಕರ್ತೃಗಳು ತಾನಲ್ಲ, ಬೇರೆಯವರೆಂದೇ ನಂದಳಿಕೆಯವರೇಕೆ ನಂಬಿಸಿದರು? ಆ ಕಣ್ಣುಮುಚ್ಚಾಲೆ ಆಟವಾಡಿದರು? ಎಂಬುದಕ್ಕೆ ಕಾರಣವಿಲ್ಲದೆ ಇಲ್ಲ. ಅವನ್ನು ಅಚ್ಚು ಹಾಕಿಸುವಷ್ಟು ಧನಬಲ ತನ್ನಲ್ಲಿಲ್ಲ; ಆ ಸಹಾಯ ಮಾಡುವ ದಾತೃಗಳನ್ನೂ ಕಾಣಲಿಲ್ಲ; ಮೈಸೂರಲ್ಲಿ 'ಕಾವ್ಯಕಲಾನಿಧಿ' ಎಂಬ ಮಾಸಪತ್ರಿಕೆಯೊಂದು ಶ್ರೀ| ರಾಮಾನುಜಯ್ಯಂಗಾರರ ನೇತೃತ್ವದಲ್ಲಿ ಆಗ ನಡೆದುಬರುತ್ತಿತ್ತು. ಅದು 'ಪುರಾತನ ಗ್ರಂಥ'ಗಳನ್ನು ಮಾತ್ರ ಪ್ರಕಟಿಸುವಂಥದು. ಹಳೆಗನ್ನಡದ್ದಾದರೂ ತನ್ನಿಂದ ರಚಿತವಾದ ಹೊಸ ಕಾವ್ಯ, ಗ್ರಂಥವೆಂದಾದರೆ ಅವು 'ಕಾವ್ಯ ಕಲಾನಿಧಿ'ಯಲ್ಲಿಯೂ ಪ್ರಕಟವಾಗುವ ಸಂಭವವಿಲ್ಲ, ಹಾಗೆ ತನ್ನ ಕಷ್ಟಾರ್ಜಿತವೆಲ್ಲ ಮಣ್ಣುಪಾಲು ಎಂದು ಬೇರೆ ಉಪಾಯ ತೋರದೆ 'ಪುರಾತನ ಲೇಖಕರ ಗ್ರಂಥ'ವೆಂದೇ ಅವಕ್ಕೆ ಆ ವೇಷ ಕಟ್ಟಿ ಅವನ್ನು ಅತ್ತ ಕಳುಹಿಸಿದರು; ಮೈಸೂರಿಂದ ಟಪ್ಪಾಲಲ್ಲಿ ಆಗಾಗ ಬರುತ್ತಿದ್ದ 'ರಾಮಾಶ್ವಮೇಧ'ದ 'ಪ್ರೂಫು'ಗಳನ್ನು ಅವರು ತಿದ್ದುವುದನ್ನು ನಾನು ಕಂಡಿದ್ದೇನೆ;' 'ರಾಮಾಶ್ವಮೇಧ'ದ ಹಸ್ತಪ್ರತಿ–ಕಪ್ಪು ಶಾಯಲ್ಲಿ ನಂದಳಿಕೆಯವರು ಬರೆದು ಅನಂತರ ಕೆಂಪು ಶಾಯಿಯಲ್ಲಿ ಅವರೇ ತಿದ್ದಿದ್ದು–ನಮ್ಮ ಸಾಹಿತ್ಯ ಮಿತ್ರರೊಬ್ಬರ ವಶವಿದ್ದುದನ್ನು 'ಸೂಕ್ತಿ'ಸಂಪಾದಕ ಶ್ರೀ| ಎನ್. ರಾಜಗೋಪಾಲಕೃಷ್ಣರಾಯರೂ ಸ್ವತಃ ನೋಡಿದ್ದಾರೆ.

ನಂದಳಿಕೆಯವರು ಪತ್ರಿಕೆಗಳಿಗೆ ಎರಡು ಲೇಖ ಬರೆದುದುಂಟು. ಆಗ ಕರ್ಣಾಟಕದಲ್ಲೆಲ್ಲ ಪ್ರಸಿದ್ಧಿಗೊಂಡಿದ್ದ ಮಂಗಳೂರಿನ ಶ್ರೀ| ಜೋಳಾರ ವಿಠ್ಠಲರಾಯರ ಮಾಲಕತ್ವ ಮತ್ತು ಬೆನಗಲ್ ರಾಮರಾಯರ ಸಂಪಾದಕತ್ವಕ್ಕೆ ಒಳಪಟ್ಟ "ಸುವಾಸಿನಿ" ಮಾಸಪತ್ರಿಕೆಗೆ "ಜೋಗುಳ" ಶಬ್ದಾರ್ಥ ವಿವರಣೆಯ ಒಂದು ಲೇಖ ಅವರು ಕಳುಹಿದುದು ಅದರಲ್ಲಿ ಪ್ರಕಟವಾಗಿತ್ತು. ಆದರೆ ಅದೇ ಪತ್ರಿಕೆಗೆ ಅವರು ಅನಂತರ ಕಳುಹಿದ "ಗೋದಾವರಿ" ಎಂಬ ಸಣ್ಣ ಕತೆಯ ಹಸ್ತಪ್ರತಿ ಎಲ್ಲಿಯೋ ಗೈರುವಿಲೆಯಾಗಿ ಹೋದುದು–ನಂದಳಿಕೆಯವರ ಈ ಹೊಸ ರೂಪದ ಕೃತಿಯ ಮಾದರಿ ಏನೆಂಬುದೇ ತಿಳಿಯದಂತಾದುದು—ನಿಜವಾಗಿಯೂ ನಾಡಿನ ದುರ್ದೈವ.

ನಂದಳಿಕೆಯವರು 'ತತ್ಸಮ ತದ್ಭವ'ಗಳದೊಂದು ನಿಘಂಟಿನ ಹಸ್ತಪ್ರತಿಯಾಗಿ–ವಿದ್ಯಾರ್ಥಿಗಳ ಉತ್ತರ ಪತ್ರದ ಖಾಲಿ ಇರುವ ಆ ಹಿಂದಿನ ಮೈಯಲ್ಲಿ–ಬರೆಯುತಿದ್ದುದನ್ನು ನಾನು ನೋಡಿದ್ದೇನೆ. ಅವರು ಬರೆದು ಪೂರೈಸಿದ ಪೂರೈಸದ ಇತರ ಗ್ರಂಥಗಳ ಹಸ್ತಪ್ರತಿಗಳು ಯಾವುವಿದ್ದುವೋ ತಿಳಿಯದು. ಅವರ ತಮ್ಮ ಶಿವರಾಮಯ್ಯನೊಡನೆ ವಿಚಾರಿಸಿದಾಗ–ತಮ್ಮ ವಶ ಬಂದ ಅಣ್ಣನ ಪುಸ್ತಕದ ಪೆಠಾರಿಗಳನ್ನು ಝಡ್ತಿಮಾಡಿ ಕೆಲವನ್ನು ಕುಂದಾಪುರದ ಕೆ. ಸುಂದರರಾಯರೆಂಬ ಶಾಲೋಪಾಧ್ಯಾಯರು ಕೊಂಡುಹೋಗಿರುವುದಾಗಿ ನನಗೆ ತಿಳಿಸಿದರು. ಅದೊಂದೂ ಬೆಳಕಿಗೆ ಬರಲಿಲ್ಲ.

ನಂದಳಿಕೆಯವರ ಗ್ರಂಥಗಳಲ್ಲಿ 'ರಾಮಾಶ್ವಮೇಧ'ಕ್ಕಿರುವ ಅಖಂಡ ಕೀರ್ತಿ ಕರ್ಣಾಟಕದ ಇನ್ನಾವ ಗ್ರಂಥಕ್ಕೂ ಇಲ್ಲ. ಆ ಹೊಸ ರೀತಿಯ ಗ್ರಂಥ ರಚನೆ ಅಷ್ಟು ಅಪೂರ್ವ ಕಲಾಕುಶಲತೆಯದು; ಅದರ ಜೀವಜೀವಾಳವೆಂದರೆ ಮುದ್ರಣ

ಮನೋರಮೆಯರ ಜೀವಕಳೆ ತುಂಬಿದ ಸರಸ ಸರಳ ಸಂಭಾಷಣೆ; ಅದರ ಮಧುಮಧುರ ರಸಸೌಂದರ್ಯ. ನಂದಳಿಕೆಯವರು ತಮ್ಮ ದಾಂಪತ್ಯದ ಸುಖಾನುಭವದಿಂದ ಇದನ್ನು ಚಿತ್ರಿಸಿದುದಲ್ಲ; ಅಂಥ ರಸಿಕತನ ಇನ್ನಾರಲ್ಲಿ ಬಂತು? ಅದವರ ಸ್ವಯಂಪ್ರೇರಣೆಯ ಆ ಕವಿಯ ಪ್ರತಿಭಾನ್ವಿತ ರಮ್ಯಸೃಷ್ಟಿ; ನಂದಳಿಕೆಯವರು ಕವಿಯ ಬಾಳಿನ ಕುಂಚವನ್ನು ನಾನಾ ಬಣ್ಣಗಳಲ್ಲಿ ಜನಮೆಚ್ಚುವಂತೆ ಬಳಸಿಕೊಂಡಿದ್ದಾರೆ. ಅವನ ನೈಜ ಜೀವನದ ಚಿತ್ರ ಇಲ್ಲಿ ಕಣ್ಣಿಗೆ ಹೊಡೆಯುವಂತೆ ಪ್ರತಿಬಿಂಬಿಸಿದೆ. ಹಳೆಗನ್ನಡದ ನಾಡದೇವಿಯ ಗುಡಿಗೆ ಹೊಸ ಮಿರುಗಿನ ಚಿನ್ನದ ಕಲಶವಿಟ್ಟವರು ನಂದಳಿಕೆಯವರು. ಒಟ್ಟು ಕನ್ನಡದ ನುಡಿವೆಣ್ಣು ನಲ್ಮೆಯಿಂದ ನಲಿದೊಲಿದು ಈ ಮಹಾಕವಿಯ ಬ್ರಹ್ಮಾಂಡರೂಪದ ಬಾಯಿಂದ ನುಡಿಸಿದ ಅಮೃತ ಕಲಶಧಾರೆಯೇ 'ರಾಮಾಶ್ವಮೇಧ'; ಅದೇ ಆತನ ಆತ್ಮಬಿಂಬದ ದರ್ಪಣ!

ನಂದಳಿಕೆಯವರ "ರಾಮಾಶ್ವಮೇಧ"ದ ಕುರಿತು ಮಂಗಳೂರಿನ 'ಸುವಾಸಿನಿ'ಯಲ್ಲಿ ಎಂ. ಎನ್. ಶ್ರೀನಿವಾಸರಾಯರೂ, ಕಾರವಾರಿನ 'ವಿನೋದಿನಿ'ಯಲ್ಲಿ ಆರ್. ಶ್ರೀನಿವಾಸರಾಯರೂ ಉಡುಪಿಯ 'ಶ್ರೀಕೃಷ್ಣಸೂಕ್ತಿ'ಯಲ್ಲಿ ಶ್ರೀ। ಎಚ್. ಚೆನ್ನಕೇಶವ ಅಯ್ಯಂಗಾರರೂ ಲೇಖಗಳನ್ನು ಬರೆದಿದ್ದಾರೆ. ಕವಿಯ ಹಲವು ವಿಚಾರಗಳ ಕುರಿತಾದ ಐರೋಡಿ ಶಿವರಾಮಯ್ಯನ ಲೇಖ 'ಸುವಾಸಿನಿ'ಯಲ್ಲಿ ಪ್ರಕಟವಾಗಿದೆ.

ನಂದಳಿಕೆಯವರು ಆತ್ಮಶಾಂತಿಯ ಶಾಂತಮೂರ್ತಿ; ಸುಸ್ವಭಾವಿ; ಸಜ್ಜನರು; ಸತ್ಯವಂತರು; ಮಾತು ಕಡಿಮೆ; ಅವರದು ಸದಾ ಗಂಭೀರವಾದ ನಡೆನುಡಿ. ಅವರ ದೇಹ ಬಲಿಷ್ಠ; ಮೈಬಣ್ಣ ಎಣ್ಣೆಗಪ್ಪು; ವಿಶಾಲವಾದ ಹಣೆ; ಪ್ರಕಾಶಮಾನವಾದ ಕಣ್ಣು. ಈಗಲೂ ಅವರ ಭವ್ಯಮೂರ್ತಿ ನನ್ನ ಕಣ್ಣಿಗೆ ಕಟ್ಟಿದೆ. ಅವರ ಧ್ವನಿ ನನ್ನ ಕಿವಿಗೆ ಕೇಳಿಸುತ್ತದೆ. ಸುತ್ತುಮುತ್ತಲಿನ ಸಾವು ನೋವುಗಳನ್ನು ಬೇನೆ ಬೇಸರಿಕೆಗಳನ್ನು ತನ್ನ ಜ್ಞಾನದೃಷ್ಟಿಯಿಂದ ಆಳೆಯಬಲ್ಲ ತಿಳಿಯಬಲ್ಲ ಸಾಹಿತ್ಯಯೋಗಿ–ನಂದಳಿಕೆಯವರು. ಈ ಜಿಲ್ಲೆಯಲ್ಲಿ ಕನ್ನಡಕ್ಕೆ ಅರಸುಪಟ್ಟ ಕಟ್ಟಿದವರು ಅವರೇ.

ನಂದಳಿಕೆಯವರು ಕೊನೆತನಕ ನಮ್ಮ ಜನಕ್ಕೆ 'ಮಿಶನ್ ಶಾಲೆಯ ಕನ್ನಡ ಪಂಡಿತ'ರಾಗಿಯೆ ಇದ್ದರು. ಆಗಿನ ನಮ್ಮ ಕನ್ನಡವೆಂದರೆ ಶಾಲೆಗಳ ಮಟ್ಟಿಗೆ; ಕೋರ್ಟು ಕಚೇರಿಗಳ ಮಟ್ಟಿಗೆ; ದಶಾವತಾರದ ಆಟದ ಮಟ್ಟಿಗೆ. ಇವನ ಕೃತಿರತ್ನಗಳನ್ನು ಕಂಡವರು ಕಡಿಮೆ; ಓದಿದವರು ಮತ್ತೂ ಕಡಿಮೆ; ಓದಿದವರಲ್ಲಿ ಅದನ್ನು ಜೀರ್ಣಿಸಿಕೊಂಡು ಅವುಗಳ ರಸಮಾಧುರ್ಯವನ್ನು ಹೀರಿದವರು ಇನ್ನೂ ಕಡಿಮೆ. ಓದಿದವರಾದರೂ ಆಗ ಅವು ನಂದಳಿಕೆಯವರದೆಂದು ಓದಲಿಲ್ಲ- ಪುರಾತನ ಕವಿ ಗ್ರಂಥಗಳೆಂದು ಓದಿದರು. ಈ ಹೊತ್ತು ಆ ಕೃತಿಗಳ ಮಾಟಗಾರ, ಆ ಉನ್ನತ ವಿಶಾಲಹೃದಯದ ತ್ಯಾಗವ್ರತದ ಶಿಲ್ಪಿ ಯಾರೆಂದು ನಮಗೆ ತಿಳಿದಿದೆ.

ಆದರೆ ತಿಳಿದೂ ಏನು ಫಲ? ಬೆಂಗಳೂರಿನ ಶ್ರೀ। ಮಾಸ್ತಿಯವರಂಥ ಭಾಷಾಭಿಮಾನಿಗಳೆಲ್ಲ ಈ ಮಹಾಕವಿಯ ಅದ್ವಿತೀಯ ಅಗಾಧ ವರ್ಚಸ್ಸಿಗೆ ಬೆರಗಾಗಿ ಅವನ ಸ್ಮಾರಕದ ಗ್ರಂಥವೊಂದನ್ನು ಪ್ರಕಟಿಸುವ ಔದಾರ್ಯ ತೋರಿ ಜತೆಗೆ ಇನ್ನೂ ಕವಿಸನ್ಮಾನಾರ್ಥವಾದ ಇತರ ಕೆಲ ಕಾರ್ಯಭಾಗಗಳನ್ನೂ ಕೈಕೊಂಡುದುದೇನೋ ಸರಿ. ಆದರೆ ಕವಿಯ ಹುಟ್ಟೂರಲ್ಲಿ ಅವನಿಗಾಗಿ ನಾವು ಮಾಡಿದುದೇನು? ಏನೂ ಇಲ್ಲ. ಮಾತುಮಾತಿಗೆ ಪಾಶ್ಚಾತ್ಯ ದೇಶಗಳ ನಿದರ್ಶನಗಳನ್ನು ಮುಂದೊಡ್ಡುವವರು ಆ ಬಡಿವಾರ ಮಾಡುವವರು ಆ ರಾಷ್ಟ್ರಗಳಲ್ಲಿ ಕವಿಸನ್ಮಾನ ಹೇಗಾಗುತ್ತಿದೆ ಎಂಬುದನ್ನೂ ಅರಿತಿದ್ದೂ ಸ್ವದೇಶದ ಕವಿವರ್ಯನ ವಿಷಯದಲ್ಲಿ ಅಸಾಧ್ಯವಾದ ಅನಾದರವನ್ನೇ ತೋರುತ್ತಿದ್ದಾರೆ! ಈ ಮಹಾಕವಿಯ ದಿನಾಚರಣೆ ನಮ್ಮಲ್ಲಿ ಕೆಲವು ಕಡೆ ಆಗಾಗ ಹೆಸರಿನ ಪೂರ್ತಿಯಾಗಿ ಹರಿಕೆ ಸಲ್ಲಿಸುವಂತೆ ಕ್ಷೀಣಸ್ವರದಿಂದ ನಡೆದುದುಂಟು; ಅಷ್ಟೇ, ಹೆಚ್ಚಿಲ್ಲ ನಾವು ಇದುವರೆಗೆ ಮಾಡಿದ್ದು. ಇದು ನಮಗೆ ನಮ್ಮ ನಾಗರಿಕತನಕ್ಕೆ ನಮ್ಮ ಶಿಷ್ಟಸಭ್ಯಾಚಾರಕ್ಕೆ ಭೂಷಣವೆ? ಇಷ್ಟು ಮಂದಿ ಕನ್ನಡದ ವಿದ್ವಾಂಸರು ವಿದ್ಯಾರ್ಥಿಗಳು ಇಷ್ಟು ಕನ್ನಡ ಗ್ರಂಥ ಪತ್ರಿಕೆಗಳು ತುಂಬಿರುವ ಈ ಜಿಲ್ಲೆ ಇನ್ನಾದರೂ ಎಚ್ಚೆತ್ತು ಶತಮಾನಗಳಿಂದ ನಾಡು ಕಂಡರಿಯದ ಒಬ್ಬ ಮಹಾಕವಿಗಾಗಿ ನಮ್ಮವನೇ ಆದ ಶೆಲ್ಲಿಯಂಥ ಕವಿಶ್ರೇಷ್ಠನಿಗಾಗಿ ಯೋಗ್ಯ ಸ್ಮಾರಕವನ್ನು ರಚಿಸದಿರುವುದಾದರೆ ಆ ಮಹಾಕವಿಯ ದಿನಾಚರಣೆಯನ್ನು ಎಲ್ಲ ಕಡೆಗಳಲ್ಲಿಯೂ ಉತ್ಸಾಹದಿಂದ ಆಚರಿಸದಿದ್ದರೆ ಅದು ಶುದ್ಧ ನಗೆಗೇಡಲ್ಲದಿದ್ದರೆ— ಅಸಂಗತವೆಂದಾದರೂ ಎನಿಸದೆ? ನಮ್ಮದೊಂದು ಈ ದೊಡ್ಡ ಕೊರತೆಯು ಕರ್ಣಾಟಕದಲ್ಲೇ ರಾಕ್ಷಸಾಕಾರವಾಗಿ ಎದ್ದು ತೋರದೆ?

ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

'ಸಿಂಡಿಕೇಟ್' ಎಂಬ ಪ್ರೇಮದ ಸಲುಗೆಯಿಂದ ಜನತೆಯು ಸಂಬೋಧಿಸುವ ಈ ಬೇಂಕಿಂಗ್ ಸಂಸ್ಥೆಯು, ತನ್ನ ದೇಶಸೇವೆಯ ಜೀವನದಲ್ಲಿ ಈಗ ತಾನೆ ಇಪ್ಪತ್ತೆಂಟನೇ ವರುಷದಲ್ಲಿ ಪದಾರ್ಪಣಮಾಡಿದೆ. ಉಡುಪಿಯಲ್ಲಿ ಚಿಕ್ಕದೊಂದು ಸಂಸ್ಥೆಯಾಗಿ ಜನಿಸಿ, ಒಂದೇ ಆಫೀಸಿನ ಮೂಲಕ ತನ್ನ ಸೇವಾಪಥವನ್ನು ರಚಿಸುವ ಆರಂಭಮಾಡಿದ ಈ ಬೇಂಕು, ನಿಧಾನವಾಗಿ ಆದರೆ ದೃಢವಾಗಿ ಹಜ್ಜೆಯಿಡುತ್ತ, ಇಂದು ಐದುಕೋಟಿಯ ವಹಿವಾಟನ್ನು ನಡೆಸುವಷ್ಟು ಮತ್ತು ದಕ್ಷಿಣ ಭಾರತದಲ್ಲೆಲ್ಲ ಎಂಭತ್ತೈದು ಶಾಖೆಗಳನ್ನು ಹರಡುವಷ್ಟು ಬಲಿಷ್ಠವಾಗಿ ಬಳೆದಿರುತ್ತದೆ.

ಪ್ರತಿಯೊಂದು ಸಂಸ್ಥೆಯ ಬೆಳೆವಣಿಗೆಯು ಆ ಸಂಸ್ಥೆಯು ಜನತೆಗೊಪ್ಪಿಸುವ ಸೇವೆಯ ಮೇಲೆ ಹೊಂದಿಕೊಂಡಿರುತ್ತದೆ. ಆ ಸೇವೆಯು ಜನತೆಗೊದಗುವ ವಿಚಕ್ಷಣತೆಯಾಗಲಿ ಮೊತ್ತವಾಗಲಿ—ಆ ಸಂಸ್ಥೆಯ ನೇತೃಗಳ ಮೇಲೇ ಅವಲಂಬಿಸಿದೆ. ಸಂಸ್ಥೆಯು, ವ್ಯವಹರಿಸುವಾಗ, ಕಠಿನ ನಿಬಂಧನೆಗಳಿರಬಹುದು,—ಇರಲೇ ಬೇಕು. ಆದರೆ, ಮಾನವೀಯತೆಯೂ ಬೆರೆತು, ಸೇವೆಯೂ ಜತೆಗೂಡಿದರೆ, ಸಂಸ್ಥೆಯ ಉಪಯೋಗಿತೆಯನ್ನು ಜನರು ಗುರುತಿಸುವರು, ಗೌರವಿಸುವರು. ಸಂಸ್ಥೆಯು ಮನುಷ್ಯರಿಂದಲೇ ರಚಿಸಲ್ಪಡುತ್ತದೆ; ಮತ್ತು ಆ ಸಂಸ್ಥೆಯೊಂದಿಗೇ ಅದನ್ನು ನಡೆಸುವ ಮನುಷ್ಯನ ಯೋಗ್ಯತೆಯೂ ಗುರುತಿಸಲ್ಪಡುತ್ತದೆ.

'ಸಿಂಡಿಕೇಟ್' ಸಂಸ್ಥೆಯ ಚರಿತ್ರವು—ಅದರ ಅದ್ಭುತ ಪ್ರಗತಿಯು—ಆ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರರಾಗಿರುವ ಶ್ರೀ| ಟಿ. ಎಮ್. ಎ. ಪೈಗಳವರ ಜೀವನದಲ್ಲಿ ಉದಹರಿಸಲ್ಪಟ್ಟಿರುವ—ಅವರ ಪ್ರಾಮಾಣಿಕ ಸೇವೆಯ ಧೋರಣೆಯಿಂದ ಸ್ಪಷ್ಟವಾಗಿದೆ. ಡಾ| ಪೈಯವರು ಉದ್ಯಮ, ಶಿಕ್ಷಣವಿಭಾಗಗಳಲ್ಲಿ, ನಾಡಿಗೆ ಸಲ್ಲಿಸಿದ ಸೇವೆಯು ಸರ್ವಶ್ರುತವಿದೆ. ಡಾ| ಪೈಯವರ ಸೇವಾಸಕ್ತಿಗೆ ತಕ್ಕಂತೆ ಅವರಲ್ಲಿ ಕರ್ತೃತ್ವಶಕ್ತಿಯೂ, ಮಾನವ ಸ್ವಭಾವವನ್ನರಿವ ವಿಶಿಷ್ಟ ಜ್ಞಾನವೂ, ಸಮಸ್ಯೆಗಳನ್ನೆದುರಿಸುವಲ್ಲಿ ಮೌಲಿಕ ಹಾಗು ಪ್ರಯೋಗಸಾಧ್ಯ ವಿಧಾನಗಳೂ ಇರುತ್ತವೆ. ಬೇಂಕಿನಲ್ಲಿ, ಅವರು ಆರಂಭಿಸಿದ 'ಪಿಗ್ಮಿ' ಠೇವಣಿಯ ಯೋಜನೆಯು ಡಾ! ಪೈಯವರ ಸ್ವತಂತ್ರ ವಿಚಾರಶಕ್ತಿ—ಮೌಲಿಕತೆಗಳ ನಿದರ್ಶನವಾಗಿರುತ್ತದೆ. ಸಾಮಾನ್ಯ ಮಜೂರನೊಬ್ಬನು ಕೂಡ, ಬೇಂಕಿಗೆ ಹೋಗುವ ಅವಶ್ಯಕತೆಯಿಲ್ಲದೆ, ದಿನಕ್ಕೆ ಎರಡಾಣೆಯೋ ನಾಲ್ಕಾಣೆಯೋ ಠೇವಣಿಯಾಗಿ ಪೃಥಕ್ಕರಿಸಿಟ್ಟರೆ, ಅವನ ಮನೆಬಾಗಿಲಿಗೆ ಬಂದು ಬೇಂಕಿನವರು ಆ ಹಣವನ್ನು ಅವನ ಬಗ್ಗೆ ಠೇವಣಿಯಾಗಿ ಒಯ್ದು, ಏಳು ವರ್ಷಗಳ ನಂತರ ಮರುಬಡ್ಡಿ ಸಹಿತ ಒಂದೇ ದೊಡ್ಡ ಮೊತ್ತವಾಗಿ ಮರುಪಾವತಿ ಮಾಡುವ, ಠೇವಣಿದಾರನಿಗೆ ಆಪದ್ಧನದಂತೆ ಏಕಗಂಟಿನಲ್ಲಿ ದೊಡ್ಡ ಮೊತ್ತವು ದೊರೆವ ಆ ಯೋಜನೆಯು ಸಾವಿರಾರು ಜನರಿಗೆ ಪ್ರಯೋಜನಕಾರಿಯಾಗಿ ಪರಿಣಮಿಸಿದೆ.


ತಮ್ಮ ಕಾರ್ಯದಲ್ಲಿ ಡಾ| ಟಿ. ಎಮ್. ಎ. ಪೈಗಳವರಿಗೆ, ಬೇಂಕಿನ ಜನರಲ್ ಮೆನೇಜರರಾದ ಶ್ರೀ| ಟಿ. ಎ. ಪೈಗಳವರು ಬಹು ಮೌಲ್ಯದ ಸಹಾಯಕರಾಗಿಯೇ ಇರುವರು. ಶ್ರೀ| ಟಿ. ಎ. ಪೈಯವರು ತಮ್ಮ ಸ್ನೇಹಮಯ ಸ್ವಭಾವದಿಂದ ಬಹುಜನರ ಆದರಕ್ಕೆ ಪಾತ್ರರಾಗಿರುವರು.

ಎಳೆಪ್ರಾಯದಿಂದಲೇ ಸಾರ್ವಜನಿಕ ಸೇವಾಕಾಂಕ್ಷಿಗಳಾಗಿ, ಸ್ವಭಾವಸಿದ್ಧವಾದ ಮೃದುತ್ವ—ಸರಳತೆ—ಸ್ನೇಹಮಯ ಚರ್ಯೆಗಳಿಂದ ಇವರು ಮುನ್ನಡೆಯುತ್ತ, ಇಂದು ಜಿಲ್ಲೆಯ ಒಬ್ಬ ಪ್ರತಿನಿಧಿಯಾಗಿ, ಎಸೆಂಬ್ಲಿಯ ಸದಸ್ಯರಾಗಿರುವರು. ಕಾರ್ಯೋತ್ಸಾಹದಂತೆ ಚೈತನ್ಯವೂ ಇದ್ದು, ಉಜ್ವಲ ಭವಿಷ್ಯವುಳ್ಳ ಯುವಕರಾಗಿರುವರು. ಇಷ್ಟು ಸಣ್ಣ ಪ್ರಾಯದಲ್ಲಿ ಅಷ್ಟೊಂದು ಜನಾದರತೆ ಪಡೆದವರು ತೀರ ವಿರಲ. ಇತ್ತೀಚೆಗಿನ ಕೆಲವರ್ಷಗಳಲ್ಲಿ ಸಿಂಡಿಕೇಟ್ ಸಂಸ್ಥೆಯು ಶೀಘ್ರಗತಿಯಲ್ಲಿ ಮುಂದಡಿಯಿಡುವಂತಾಗಲು ಶ್ರೀ ಟಿ. ಎ. ಪೈಯವರು ಅದರ ನೇತೃಗಳಾಗಿ ಬಂದುದು ಬಹುಮಟ್ಟಿಗೆ ಕಾರಣವಾಗಿದೆ.


ಅತಿ ಕಷ್ಟಮಯ ಕಾಲದಲ್ಲೂ ಬೇಂಕು ಕ್ರಮವಾಗಿ ಪ್ರಗತಿಹೊಂದುತ್ತ ನಡೆದಿದೆ. ಧಾರಣೆವಾಸಿಗಳು ಬಿದ್ದು, ಪರಿಸ್ಥಿತಿಯು ಅನಿಶ್ಚಿತವಾಗುತ್ತ ನಡೆದಾಗ, ಕಳೆದ ವರ್ಷ ಹೊರಗೆ ಸಾಲವಾಗಿ ಹಣಕೊಡುವ ಧೋರಣೆಯಲ್ಲಿ ಅತೀವ ಜಾಗರೂಕತೆ ವಹಿಸಬೇಕಾಯಿತು; ಈ ಕಾರಣದಿಂದ, ಸಿಂಡಿಕೇಟಿನ ವರ್ಷಾವಧಿಯ ಮುನಾಫೆಯೂ ಕಿಂಚಿನ್ಮಾತ್ರವಾಗಿ ಕಡಿಮೆಯಾಯಿತು. ಸಿಂಡಿಕೇಟು ಯಾವಾಗಲೂ 'ಭದ್ರತೆ ಮೊದಲು' ಎಂಬ ಧೋರಣೆಯಿಂದ ಮುನ್ನಡೆದಿದೆ; ಆ ಧೋರಣೆಯನ್ನು ಪಾಲಿಸಿ ಬಂದುದಕ್ಕೆ ನಾವು ಸಿಂಡಿಕೇಟಿನ ಆಡಳಿತದವರನ್ನು ಅಭಿನಂದಿಸುತ್ತೇವೆ.

ತಾ. ೩೧—೧೨—೫೩ನೇ ವರ್ಷಕ್ಕೆ ಅಂತ್ಯವಾಗುವ ವರದಿಯಂತೆ, ಸಿಂಡಿಕೇಟಿನ ತೆತ್ತುಬಂದ ಮೂಲಧನ ರೂ. ೨೫,೧೦,೫೨೬. ಕ್ಷೇಮನಿಧಿ—ಹನ್ನೆರಡು ಲಕ್ಷ ರೂಪಾಯಿಗಳು; ಒಟ್ಟು ಠೇವಣಿಗಳು ನಾಲ್ಕು ಕೋಟಿಗೂ ಮಿಕ್ಕಿವೆ.

ಸಿಂಡಿಕೇಟು, ಸೇವೆಯಲ್ಲಿ ಹಿರಿಯ ಬೇಂಕಿಂಗ್ ಸಂಸ್ಥೆಗಳ ಶ್ರೇಣಿಯಲ್ಲಿದೆ. ಖಾತೆಯು ದೊಡ್ಡದಿರಲಿ ಸಣ್ಣದಿರಲಿ—ಎರಡಕ್ಕೂ ಸಮಾನ ಮಾನ್ಯತೆಯಿದೆ. ಗಿರಾಕಿಗಳಿಗೊಪ್ಪಿಸುವ ಸೇವೆಯು ವಿಚಕ್ಷಣವಿದ್ದಂತೆ, ಕ್ಲಪ್ತ, ಶೀಘ್ರ ಹಾಗು ಸಂತೋಷದಾಯಕವಾದುದು. ಸಿಂಡಿಕೇಟು ತನ್ನ ಗಿರಾಕಿಗಳೊಂದಿಗೇ ಬೆಳೆದ ಅಭಿವೃದ್ಧಿಹೊಂದಿದ ಸಂಸ್ಥೆಯಾಗಿದೆ. ದಕ್ಷಿಣ ಭಾರತದ ಕೇಂದ್ರಗಳಲ್ಲೆಲ್ಲ ಶಾಖೆಗಳನ್ನು ಹರಡಿ ಅದು ಉತ್ತಮೋತ್ತಮ ಸೇವೆಯೊಪ್ಪಿಸಲು ಸಾಧ್ಯವಾಗಿದೆ. ಅದರ ಯಾವತ್ತೂ ವ್ಯವಹಾರಗಳು ಆಧುನಿಕ ಮಾದರಿಯಲ್ಲಿವೆ. ಈ ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸುವೆವು.



REGD. No. 3247.



Printed at the Prabhat Printers, Limited, Mangalore,
and Edited & Published at Prabhat Office, Car Street, Mangalore by K. V. Sh...